" ಓ ಪೈಗಂಬರರೇ !
ನೀವು ಜನರೊಡನೆ ಹೇಳಿಬಿಡಿರಿ
ನೀವು ನಿಜವಾಗಿಯೂ
ಅಲ್ಲಾಹನನ್ನು ಪ್ರೀತಿಸುತ್ತೀರೆದಾದರೆ,
ನನ್ನ ಅನುಕರಣೆ ಮಾಡಿರಿ.
ಅಲ್ಲಾಹ್ ನಿಮ್ಮನ್ನು ಪ್ರೀತಿಸುವನು
ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು.
ಅವನು ಮಹಾ ಕ್ಷಮಾಶೀಲನೂ
ಕರುಣಾಮಯಿಯೂ ಆಗಿರುತ್ತಾನೆ. "
(ಪವಿತ್ರ ಕುರ್‌ಆನ್, 3:31)

# ಮುಹಮ್ಮದ್

## ಸರ್ವ ಜನರ ಪ್ರವಾದಿ

‘ ಅವರ ಮೇಲೆ ಶಾಂತಿ ಇರಲಿ ’

ಸೈಯದ್ ಹಾಮಿದ್ ಮೊಹ್ಸಿನ್

ಅನುವಾದ
ಆಸಿಫ್ ಅಲಿ ಇಂಜಿನಿಯರ್

ಸಲಾಮ್ ಸೆಂಟರ್

ಬೆಂಗಳೂರು

MUHAMMAD: Sarva Janara Prawadi (Kannada)
*FOLLOW ME*, God Will Love You (English)

e-book: 12 lakh People have read this book online on
www.muhammadforall.in from Jan-2013 to June - 2014.

Printed Editions:
1st Edition in Kannada, 10,000 - Jan - 2012
2nd Edition in Kannada 5,000 - July - 2014

1st Edition: 40,000, Jan – 2012 – English & Hindi
2nd Edition: 10,000, July – 2012 - English
3rd Edition: 10,000, Jan – 2013 - English
4th Edition: 5,000, Jan – 2015- English

© Syed Hamid Mohsin
Salaam Centre, Bangalore

Price: Rs. 300/-

Published by:
Salaam Centre
# 65, S.R.K. Garden,
Jayanagar, Bangalore - 560 041
+91 99451 77477 / + 91 99451 88488
salaamcentrebangalore@gmail.com - www.salaamcentre.in

Branch:
'Quran for All'
#5, Rich Homes,
Richmond Road, Bangalore – 560 025
Mob: +91 99011 29956 / 080 - 22117887
E-Mail: followmebook@gmail.com

# ಅನುಕ್ರಮಣಿಕೆ


| | | |
|---|---|---|
| | ಶಿಷ್ಟಾಚಾರಗಳು | |
| | ಹೃದಯದ ಅಂತರಾಳದಿಂದ | |
| | ಮುನ್ನುಡಿ | |
| 1. | ಕಅಬ | 1 |
| 2. | ಪ್ರವಾದಿತ್ವದ ಸಂಕೇತಗಳು | 9 |
| ★ | ಪ್ರಥಮ ದಿವ್ಯವಾಣಿ | 22 |
| 3. | ದಿವ್ಯ ಸಂದೇಶ | 25 |
| 4. | ದೌರ್ಜನ್ಯ ಮತ್ತು ಹಿಂಸೆ | 31 |
| 5. | ಕ್ರಾಂತಿ ಬೌದ್ಧಿಕವಾಗಿ ಮತ್ತು ಸಾಮಾಜಿಕವಾಗಿ | 41 |
| 6. | ಇಥಿಯೋಪಿಯಾಕ್ಕೆ ವಲಸೆ | 47 |
| ★ | ಹಂಝು | 52 |
| 7. | ಬಹಿಷ್ಕಾರ | 59 |
| 8. | ಹಿಜ್ರತ್ | 71 |
| 9. | ಮದೀನಾದಲ್ಲಿ ಸ್ವಾಗತ | 75 |
| ★ | ಮಸೀದಿ | 76 |
| ★ | ನಮಾಝಿನ ಕರೆ | 82 |
| ★ | ಮದೀನಾ – ಸುಕ್ಷೇಮ ರಾಷ್ಟ್ರ | 84 |
| ★ | ಜಿಹಾದ್ ಪ್ರತಿರೋಧ | 86 |
| ★ | ಶ್ರೇಷ್ಠ ಜಿಹಾದ್ | 91 |
| 10. | ಬದ್ರ್ | 93 |

| | | |
|---|---|---|
| ✯ | ಇಹ್ಸಾನ್ | 103 |
| 11. | ನಮ್ರತೆ, ವಾತ್ಸಲ್ಯ ಮತ್ತು ಕರುಣೆ | 105 |
| 12. | ಉಹದ್ ಯುದ್ಧ | 113 |
| ✯ | ವಿನಯತೆ | 121 |
| 13. | ಕಂದಕ, ವಿದ್ರೋಹ ಮತ್ತು ಜಾಣ್ಮೆ | 129 |
| ✯ | ಮುಸ್ಲಿಮರ ಔದಾರ್ಯ | 142 |
| ✯ | ವಾಕ್ ಸ್ವಾತಂತ್ರ್ಯ | 145 |
| ✯ | ಮಾನವ ಸೇವೆ | 148 |
| ✯ | ಉಪಕಾರ ಸ್ಮರಣೆ | 153 |
| 14. | ಹುದೈಬಿಯಾ | 155 |
| ✯ | ಇಸ್ಲಾಮಿನ ಕಡೆಗೆ ಪ್ರವಾಹೋಪಾದಿಯಲ್ಲಿ | 173 |
| ✯ | ಹುದೈಬಿಯಾದ ಪಾಠ | 174 |
| ✯ | ಇಸ್ಲಾಮೀ ಸಂದೇಶ ಪ್ರಚಾರ | 175 |
| ✯ | ಪ್ರವಾದಿರ ಕಾಲದಲ್ಲಿ ಭಾರತದ ಮೇಲೆ ಇಸ್ಲಾಮಿನ ಪ್ರಭಾವ | 177 |
| 15. | ಪ್ರವಾದಿ ಮುಹಮ್ಮದ್ ಮುಸ್ಲಿಮೇತರರೊಂದಿಗೆ | 179 |
| ✯ | ಮಕ್ಕಾದ ಮುಸ್ಲಿಮೇತರರೊಂದಿಗಿನ ಸಂಬಂಧ | 179 |
| ✯ | ಮದೀನಾದ ಮುಸ್ಲಿಮೇತರರೊಂದಿಗೆ ಸಂಬಂಧಗಳು | 187 |
| ✯ | ಮುಸ್ಲಿಮ್ ಸೇನೆಗೆ ಮುಸ್ಲಿಮೇತರರ ನೆರವು | 190 |
| ✯ | ಸದ್ವರ್ತನೆ ಮತ್ತು ಸಹನೆ | 191 |
| ✯ | ಧರ್ಮದಲ್ಲಿ ಒತ್ತಾಯವಿಲ್ಲ | 192 |
| ✯ | ಪರಧರ್ಮ ಸಹಿಷ್ಣುತೆ | 194 |
| ✯ | ಘೋರ ಪಾಪ | 195 |
| ✯ | ಕುರ್ಆನ್ ಮತ್ತು ಪರಧರ್ಮ ಸಹಿಷ್ಣುತೆ | 197 |
| 16. | ಖೈಬರ್ | 201 |
| 17. | ಉಮ್ರಾಃ ನಿರ್ವಹಣೆ | 205 |
| 18. | ಮಹಾನ್ ವಿಜಯ | 215 |

| | | |
|---|---|---|
| ☆ | ಸಮರ್ಥ ನಾಯಕತ್ವ | 224 |
| ☆ | ಓ ಅಲ್ಲಾಹ್! ನಾನು ನಿರ್ದೋಷಿಯಾಗಿದ್ದೇನೆ. | 226 |
| ☆ | ಅತ್ಯುತ್ತಮ ಸುಧಾರಕ | 227 |
| ☆ | ದುರಾಸೆ | 230 |
| ☆ | ಭ್ರಷ್ಟಾಚಾರ | 231 |
| ☆ | ಭಯೋತ್ಪಾದನೆ | 232 |
| 19. | ಹುನೈನ್ ಯುದ್ಧ | 233 |
| ☆ | ಪ್ರಳಯ | 238 |
| ☆ | ಪ್ರವಾದಿ ಮುಹಮ್ಮದ್‌ರ ಬೋಧನೆ | 243 |
| 20. | ಪ್ರವಾದಿ ಮುಹಮ್ಮದ್‌ರ ಮದೀನಾ ಪ್ರೇಮ | 247 |
| ☆ | ಮದೀನಾ ಮಾದರಿ ನಗರ | 248 |
| ☆ | ನ್ಯಾಯದ ವ್ಯವಸ್ಥೆ | 262 |
| ☆ | ಕಾನೂನಿನ ಎದುರು ಎಲ್ಲರೂ ಸಮಾನರು | 265 |
| ☆ | ಆಟ ವಿನೋದಗಳು | 266 |
| ☆ | ಮಾನವ ಹಕ್ಕುಗಳು | 274 |
| ☆ | ಕುರ್‌ಆನ್ ಮತ್ತು ಮಾನವ ಘನತೆ | 276 |
| ☆ | ಮಾನವ ಕುಲ ಸಮಾನತೆ | 280 |
| ☆ | ಯುವಕರಿಗೆ ಪ್ರೋತ್ಸಾಹ | 282 |
| ☆ | ಇಸ್ಲಾಮಿ ಯುದ್ಧದ ನೀತಿಶಾಸ್ತ್ರಗಳು | 284 |
| ☆ | ಜಿಹಾದ್‌ನ ವಿಧಗಳು | 285 |
| 21. | ಇಸ್ಲಾಮಿ ಯುದ್ಧದ ಕಲ್ಪನೆ | 291 |
| ☆ | 20ನೆಯ ಶತಮಾನ ಅತ್ಯಂತ ಹಿಂಸಾತ್ಮಕ ಶತಮಾನ | 295 |
| ☆ | ತುಲನೆ | 297 |
| 22. | ಪ್ರವಾದಿರ ಮುಹಮ್ಮದ್‌ರ ವಿವಾಹಗಳು | 301 |
| ☆ | ವಿಧವೆ ಮತ್ತು ವಿಚ್ಛೇದಿತ ಮಹಿಳೆಯರ ಪುನರ್ ವಿವಾಹ | 310 |
| ☆ | ವಿವಾಹದಲ್ಲಿ ಮಹಿಳೆಯ ಸಮ್ಮತಿ | 313 |

| | | |
|---|---|---|
| 23. | ಪ್ರವಾದಿ ಮುಹಮ್ಮದ್‌ರ ಬಹುವಿವಾಹಗಳು | 315 |
| ✯ | ಮುಹಮ್ಮದ್‌ರ ಬಹು ವಿವಾಹಗಳಿಗೆ ಕಾರಣಗಳು | 327 |
| ✯ | ಪುತ್ರನ ನಿಧನ | 335 |
| ✯ | ಸೂರ್ಯಗ್ರಹಣ | 337 |
| 24. | ವಿದಾಯ ಹಜ್ಜ್ | 339 |
| 25. | ಅಂತಿಮ ಯಾತ್ರೆ | 345 |
| 26. | ಪ್ರವಾದಿ ಅತ್ಯುತ್ತಮ ಮಾದರಿ | 353 |
| ✯ | ಪ್ರವಾದಿರ ಬಗ್ಗೆ ಮಹಾನ್ ವ್ಯಕ್ತಿಗಳ ಅನಿಸಿಕೆಗಳು | 359 |
| ✯ | ಗ್ರಂಥಸೂಚಿ | 362 |

# ಹೃದಯದ ಅಂತರಾಳದಿಂದ......

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಜೀವನ ಚರಿತ್ರೆಯ ಘಟನಾವಳಿಗಳನ್ನು ಕ್ರೋಢೀಕರಿಸಿ ಒಂದು ಗ್ರಂಥವನ್ನು ರಚಿಸುವ ಅನುಗ್ರಹ ದಯಪಾಲಿಸಿದುದಕ್ಕಾಗಿ ಕರುಣಾಮಯಿಯಾದ ಅಲ್ಲಾಹನಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವು ಮುಸ್ಲಿಮರು ಹಾಗೂ ಮುಸ್ಲಿಮೇತರರಿಗಾಗಿ ರಚಿಸಲ್ಪಟ್ಟಿದೆ. ಈ ಗ್ರಂಥವನ್ನು ನವಕಾಲೀನ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಲಾಗಿದೆ. ಗ್ರಂಥದ ಬೇಡಿಕೆಯು ಕೇವಲ ಅದರ ಅಧ್ಯಯನವಾಗಿರದೇ, ಅದರ ಅಧ್ಯಯನ ಮಾಡಿ, ಅದರಿಂದ ಅತ್ಯಮೂಲ್ಯ ಮಾರ್ಗದರ್ಶನ ಪಡೆಯುವುದಾಗಿದೆ.

ಈ ಗ್ರಂಥವನ್ನು ಬರೆಯುವ ಉದ್ದೇಶ ಪ್ರವಾದಿ ಮುಹಮ್ಮದ್‌ರ ಜೀವನ ಚರಿತ್ರೆಯ ಬಗ್ಗೆ ಮತ್ತೊಂದು ಪುಸ್ತಕವನ್ನು ಪ್ರಕಟಿಸುವುದಲ್ಲ. ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ ನಡೆದ 'ಕುರ್‌ಆನ್ ಎಲ್ಲರಿಗಾಗಿ' ಅಭಿಯಾನದ ವೇಳೆ ಪ್ರವಾದಿ ಮುಹಮ್ಮದ್‌ರ ಜೀವನ ಚರಿತ್ರೆಯ ಬಗ್ಗೆ ಜನ ಸಾಮಾನ್ಯರೂ ಅರಿಯುವಂತೆ ಸರಳ ಭಾಷೆಯಲ್ಲಿ ಗ್ರಂಥ ರಚಿಸುವ ಉತ್ಕಟ ಅಭಿಲಾಷೆ ನನ್ನಲ್ಲಿ ಉಂಟಾಯಿತು.

ಈ ಮೊದಲು 2008ರಲ್ಲಿ 'ಕುರ್‌ಆನ್ ಎಲ್ಲರಿಗಾಗಿ' ಯೋಜನೆಯನ್ನು ನಾನು ಸಿದ್ಧಪಡಿಸಿದ್ದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಾನು ಚಡಪಡಿಸುತ್ತಿದೆ. ಈ ಸಮಯದಲ್ಲಿ ನನ್ನ ಪತ್ನಿ ಶಬಾನ ಮತ್ತು ನನ್ನ ಮಗಳು ಸುಫಿಯಾ ನನ್ನ ಬೆಂಗಾವಲಿಗೆ ನಿಂತು ನನ್ನನ್ನು ಹುರಿದುಂಬಿಸಿದರು. ಅಲ್ಲಾಹ್ ಇವರೀರ್ವರನ್ನು ಅನುಗ್ರಹಿಸಲಿ. ಈ ಯೋಜನೆಯನ್ನು ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲಿಕ್ಕಾಗಿ ಮಾಡಲಾಗಿತ್ತು.

ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸುವುದಕ್ಕಿಂತ ಮಹತ್ವವಾದ ಕಾರ್ಯ ಜಗತ್ತಿನಲ್ಲಿ ಮತ್ತೊಂದು ಇಲ್ಲ. ಭಾರತ ದೇಶವು ಸೌಹಾರ್ದಕ್ಕೆ ಹೆಸರುವಾಸಿಯಾಗಿದೆ. ಕುರ್‌ಆನಿನ ಸಂದೇಶವನ್ನು ಗೌರವಾನ್ವಿತ ನ್ಯಾಯಧೀಶರು, ವಕೀಲರು, ಪೋಲಿಸ್ ಅಧಿಕಾರಿಗಳು, ತಜ್ಞರು, ವಿದ್ಯಾರ್ಥಿಗಳ ಮುಂದೆ ಇಟ್ಟಾಗ, ಇವರುಗಳು ತೋರಿದ ಗೌರವಾದರಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅಲ್ಲಾಹನು ಪರಲೋಕದಲ್ಲಿ ತನ್ನ ಅನುಗ್ರಹವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಈ ಘನ ಕಾರ್ಯದಲ್ಲಿ ಇಸ್ಲಾಮಿ ವಿದ್ವಾಂಸರು ವಿಶೇಷವಾಗಿ ಮರ್‌ಹೂಮ್ ಮೌಲಾನಾ ರಿಯಾಝುರ್ ರೆಹ್ಮಾನ್ ರಷಾದಿ ಖತೀಬ್ ಮತ್ತು ಇಮಾಮ್ ಬೆಂಗಳೂರು

ಜಾಮಿಯಾ ಮಸೀದಿ, ನನ್ನನ್ನು ಪ್ರೋತ್ಸಾಹಿಸಿದ್ದರು. ಅಲ್ಲಾಹ್ ಅವರನ್ನು ಅನುಗ್ರಹಿಸಲಿ!

ಗ್ರಂಥದ ಮೂಲ ಇಂಗ್ಲಿಷ್ ಹಸ್ತಪ್ರತಿಯನ್ನು ಪ್ರಖ್ಯಾತ ವಿದ್ವಾಂಸರಾದ ಡಾ॥ ಬಿ. ಶೇಕ್‌ಅಲಿ ಮಂಗಳೂರು ಮತ್ತು ಗೋವಾ ವಿಶ್ವವಿದ್ಯಾಲಯಗಳ ಮಾಜಿ ಉಪಕುಲಪತಿಗಳು, ಡಾ। ಮುಹಮ್ಮದ್ ರಫತ್ ಜಾಮಿಯಾ ಮಿಲ್ಲಿಯಾ ವಿಶ್ವವಿದ್ಯಾಲಯ ದೆಹಲಿ, ಶ್ರೀಮತಿ ನಿಗಾರ್ ಅತಾವುಲ್ಲಾ ಪತ್ರಕರ್ತೆರವರು ಪರಿಶೀಲಿಸಿ, ಪರಿಷ್ಕರಿಸಿದ್ದಾರೆ. ಅಲ್ಲಾಹ್ ಇವರುಗಳು ನೀಡಿದ ಸಹಕಾರಕ್ಕಾಗಿ ಪ್ರತಿಫಲ ನೀಡಲಿ.

ಈ ಗ್ರಂಥವನ್ನು ರಚಿಸುವಾಗ ಶ್ರಮಿಸಿದ ಮುಹಮ್ಮದ್ ನುಮಾನ್ ಖಾನ್ ರವರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಕಾರ್ಯದಲ್ಲಿ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಜನಾಬ್ ತನ್ವೀರ್ ಅಹ್ಮದ್‌ರವರು ಗ್ರಂಥದ ರಚನೆಯಲ್ಲಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ್ದು ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸುಂದರವಾಗಿ ಅತಿ ಕಡಿಮೆ ಸಮಯದಲ್ಲಿ ಡಿ.ಟಿ.ಪಿ. ಮಾಡಿಕೊಟ್ಟಿರುವ ಶ್ರೀಮತಿ ನಿರ್ಮಲ ಬಿ. ಕುರ್ಬೆಟ್‌ರವರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ಗ್ರಂಥದ ರಚನೆಯಲ್ಲಿ ಅನೇಕ ಪುಸ್ತಕಗಳ, ಗ್ರಂಥಗಳ ವಿಷಯಗಳನ್ನು ಆಯ್ದುಕೊಳ್ಳಲಾಗಿದ್ದು, ಈ ಗ್ರಂಥಗಳ ಲೇಖಕರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥದ ಕೊನೆಯಲ್ಲಿ ಈ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ. ಈ ಗ್ರಂಥದ ಉದ್ದೇಶವು ಪ್ರವಾದಿ ಮುಹಮ್ಮದ್‌ರ ಜೀವನ ಚರಿತ್ರೆಯನ್ನು ಜನರಿಗೆ ಪರಿಚಯಿಸಲಿಕ್ಕಾಗಿ ಇದ್ದು, ಈ ಗ್ರಂಥದ ಪ್ರಕಟಣೆಯಿಂದ ಯಾವುದೇ ಲಾಭವನ್ನು ಗಳಿಸುವ ಇಂಗಿತವಿರುವುದಿಲ್ಲ.

ನಾನು ನನ್ನ ತಾಯಿ, ಸಹೋದರ, ಸಹೋದರಿಯರು, ಕುಟುಂಬದ ಎಲ್ಲಾ ಸದಸ್ಯರಿಗೂ ಚಿರಋಣಿಯಾಗಿದ್ದೇನೆ. 1970 ರಲ್ಲಿ ನನ್ನ ತಂದೆಯವರ ಹುತಾತ್ಮತೆ ನಂತರ ನನ್ನ ತಾಯಿಯವರು ನನ್ನ ಪಾಲನೆ ಪೋಷಣೆಯಲ್ಲಿ ಬಹಳಷ್ಟು ತ್ಯಾಗ ಬಲಿದಾನಗಳನ್ನು ನೀಡಿ ಇಂತಹ ಒಂದು ಮಹತ್ಕಾರ್ಯವನ್ನು ಕೈಗೊಳ್ಳಲು ಪ್ರೇರೇಪಿಸಿದ್ದಾರೆ. ಇಸ್ಲಾಮಿನ ಸಂದೇಶವನ್ನು ಜನರಿಗೆ ತಲುಪಿಸುವ ಉತ್ಕಟ ಅಭಿಲಾಷೆಯನ್ನು ಅವರು ಹೊಂದಿದ್ದಾರೆ. ಅವರ ಸಂತೃಪ್ತಿಯೇ ನನ್ನ ಜೀವನದ ಸಂಪತ್ತಾಗಿದೆ. ಈ ಬೃಹತ್ ಗ್ರಂಥವನ್ನು ರಚಿಸಿ ಜನರಿಗೆ ತಲುಪಿಸುವಂತೆ ಅನುಗ್ರಹಿಸಿದ ಕರುಣಾಮಯಿ ಅಲ್ಲಾಹನಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಲ್ಲಾಹ್ ನನ್ನ ಪರಿಶ್ರಮವನ್ನು ಸ್ವೀಕರಿಸಲಿ.

**12-12-2012** **ಸೈಯದ್ ಹಾಮಿದ್ ಮೊಹ್ಸಿನ್**

# ಮುನ್ನುಡಿ

ಪ್ರವಾದಿತ್ವವು ಕುರ್‌ಆನಿನ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ. ಪ್ರವಾದಿಗಳ ಮೂಲಕ ಸೃಷ್ಟಿಕರ್ತನು, ಜನರನ್ನು ಕೆಡಕುಗಳು, ಪಾಪಕರ್ಮಗಳಿಂದ ರಕ್ಷಿಸುತ್ತಾನೆ ಮತ್ತು ಒಳಿತು, ನ್ಯಾಯೋಚಿತ ಕಾರ್ಯಗಳನ್ನು ಮಾಡಲು ಪ್ರೇರೇಪಿಸುತ್ತಾನೆ. ಪ್ರಗತಿ ಪಥದಲ್ಲಿ ಸಾಗಲು ಮತ್ತು ಅತ್ಯುನ್ನತ ಸ್ಥಾನವನ್ನು ಅಲಂಕರಿಸಲು ಮನುಷ್ಯರಿಗೆ ಸಾಮರ್ಥ್ಯವಿದ್ದು, ಪ್ರವಾದಿಗಳು ಜನರಿಗೆ ಇದರ ಶುಭವಾರ್ತೆಯನ್ನು ನೀಡುತ್ತಾರೆ. ಅದೇ ರೀತಿ ಜನರು ಕೆಡುಕಿನ ಹಾದಿಯಲ್ಲಿ ಸಾಗಿದರೆ ನೈತಿಕತೆಯ ಅಧೋಃಗತಿಯನ್ನು ತಲುಪುವರಿದ್ದು, ಪ್ರವಾದಿಗಳು ಈ ಬಗ್ಗೆ ಜನರನ್ನು ಎಚ್ಚರಿಸುತ್ತಾರೆ. ಜನರನ್ನು ಒಳಿತಿನ ಮತ್ತು ನೈತಿಕ ಪಥದಲ್ಲಿ ಮಾರ್ಗದರ್ಶನ ನೀಡುವುದು ಉನ್ನತ ಸ್ಥಾನವನ್ನು ತಲುಪಲು ಜನರಿಗೆ ಪ್ರೇರಣೆ ನೀಡುವುದು, ಸೃಷ್ಟಿಕರ್ತನ ಸಂಪ್ರೀತಿಯನ್ನು ಪಡೆಯಲು ಜನರನ್ನು ಉತ್ತೇಜಿಸುವುದು, ಪ್ರವಾದಿಗಳ ಕಾರ್ಯವಾಗಿದೆ. ಪ್ರವಾದಿಗಳ ಮೂಲಕ ಸೃಷ್ಟಿಕರ್ತನು ತನ್ನ ಸಂದೇಶವನ್ನು ಜನರಿಗೆ ತಲುಪಿಸುತ್ತಾನೆ. ಪ್ರವಾದಿಗಳ ರವಾನಿಕೆ ಮಾನವ ಜನಾಂಗದ ಬಗ್ಗೆ ಸೃಷ್ಟಿಕರ್ತನಿಗಿರುವ ಅಪಾರ ಪ್ರೀತಿ ಮತ್ತು ಅನುಗ್ರಹದ ದ್ಯೋತಕವಾಗಿದೆ.

ಕುರ್‌ಆನ್, ಪ್ರವಾದಿಗಳನ್ನು ಜಗತ್ತಿನ ಎಲ್ಲಾ ಪ್ರದೇಶಗಳಿಗೂ, ಎಲ್ಲಾ ಕಾಲಗಳಲ್ಲಿಯೂ ರವಾನಿಸಲಾಗಿದೆ ಎಂದು ತಿಳಿಸುತ್ತದೆ.

"ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು ಮತ್ತು ಅಲ್ಲಾಹನ ಆರಾಧನೆ ಮಾಡಿರಿ ಮತ್ತು ತಾಗೂತ್‌ನ ಆರಾಧನೆಯಿಂದ ದೂರವಿರಿ' ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು.

ಪ್ರವಾದಿಗಳ ನಡುವೆ ತಾರತಮ್ಯ ಮಾಡಬಾರದು ಎಂದು ಕುರ್‌ಆನ್ ಆದೇಶಿಸುತ್ತದೆ.

"ನಾವು ಅಲ್ಲಾಹನ ಸಂದೇಶ ವಾಹಕರ ನಡುವೆ ಯಾವತ್ತೂ ತಾರತಮ್ಯವನ್ನಿರಿಸುವುದಿಲ್ಲ"

ಆದರೆ ಇದೇ ಸಂದರ್ಭದಲ್ಲಿ, ಕೆಲ ಪ್ರವಾದಿಗಳಿಗೆ ಕೆಲ ಪ್ರವಾದಿಗಳ ಮೇಲೆ ಶ್ರೇಷ್ಠತೆ ನೀಡಲಾಗಿದೆ ಎಂದೂ ಕುರ್‌ಆನ್ ತಿಳಿಸುತ್ತದೆ.

> "ನಾವು ಅವರಲ್ಲಿ ಒಬ್ಬರಿಂದೊಬ್ಬರಿಗೆ ಉನ್ನತೋನ್ನತ ಸ್ಥಾನಗಳನ್ನು ನೀಡಿದ್ದೇವೆ"(ಪವಿತ್ರ ಕುರ್‌ಆನ್ 2:253)

ಎಲ್ಲಾ ಪ್ರವಾದಿಗಳ ಮೇಲೂ, ಅವರು ತಂದಿದ್ದ ಎಲ್ಲಾ ದಿವ್ಯಗ್ರಂಥಗಳ ಮೇಲೂ ವಿಶ್ವಾಸವನ್ನಿರಿಸಬೇಕೆಂದು ಕುರ್‌ಆನ್ ಹೇಳುತ್ತದೆ. ಪ್ರವಾದಿಗಳು ಸೃಷ್ಟಿಕರ್ತನ ಕೇವಲ ಸಂದೇಶ ವಾಹಕರಷ್ಟೇ ಆಗಿರಲಿಲ್ಲ. ಪ್ರವಾದಿಗಳು ದಿವ್ಯ ಸಂದೇಶದ ಅತ್ಯುತ್ತಮ ಮಾದರಿಗಳಾಗಿದ್ದರು. ಪ್ರವಾದಿಗಳೂ ನಮ್ಮಂತೆಯೇ ಮನುಷ್ಯರಾಗಿದ್ದರು.

"ಅವರ ರಸೂಲರು ಅವರೊಡನೆ ಹೇಳಿದರು, 'ನಿಜಕ್ಕೂ ನಾವು ನಿಮ್ಮಂತಹ ಮನುಷ್ಯರೇ ವಿನಹ ಇನ್ನೇನೂ ಅಲ್ಲ' (ಪವಿತ್ರ ಕುರ್‌ಆನ್ 14:11)

"ನೋಡಿರಿ, ನಿಮ್ಮ ಬಳಿಗೆ ಓರ್ವ ಸಂದೇಶವಾಹಕರು ಬಂದಿರುತ್ತಾರೆ. ಅವರು ನಿಮ್ಮವರಿಂದಲೇ ಆಗಿರುತ್ತಾರೆ. ನೀವು ನಷ್ಟ ಹೊಂದುವುದು ಅವರಿಗೆ ಅಸಹನೀಯವಾಗಿದೆ. ಅವರು ನಿಮ್ಮ ಯಶಸ್ಸಿಗೆ ಹಂಬಲಿಸುವವರಾಗಿದ್ದಾರೆ. ಅವರು ಸತ್ಯವಿಶ್ವಾಸಿಗಳಿಗೆ ವತ್ಸಲರೂ, ಕರುಣಾಳುವೂ ಆಗಿರುತ್ತಾರೆ" (ಪವಿತ್ರ ಕುರ್‌ಆನ್ 9:128–129)

"ವಾಸ್ತವದಲ್ಲಿ ಅಲ್ಲಾಹ್ ಸತ್ಯವಿಶ್ವಾಸಿಗಳ ನಡುವೆ ಅವರೊಳಗಿಂದಲೇ ಅವರಿಗೆ ಅಲ್ಲಾಹನ ಆಯತ್‌ಗಳನ್ನು ಓದಿ ಹೇಳುವ, ಅವರ ಜೀವನವನ್ನು ಸಂಸ್ಕರಿಸುವ ಮತ್ತು ಅವರಿಗೆ ಗ್ರಂಥ ಮತ್ತು ವಿವೇಕದ ಶಿಕ್ಷಣ ನೀಡುವ ಓರ್ವ ಸಂದೇಶ ವಾಹಕನನ್ನು ನಿಯೋಜಿಸಿ ಅವರ ಮೇಲೆ ಬಹುದೊಡ್ಡ ಉಪಕಾರ ಮಾಡಿದ್ದಾನೆ. (ಪವಿತ್ರ ಕುರ್‌ಆನ್ 3:164)

ಪ್ರವಾದಿಗಳು ಜನರ ಮಾರ್ಗದರ್ಶಕರೂ, ನಾಯಕರೂ ಆಗಿದ್ದರು. ಸೃಷ್ಟಿಕರ್ತನ ಸಂದೇಶವನ್ನು ಯಾವುದೇ ಅಳುಕಿಲ್ಲದೇ, ನಿರ್ಭಿಢತೆಯಿಂದ ಅತ್ಯಂತ ಸಹನೆಯಿಂದ ಜನರಿಗೆ ತಲುಪಿಸುತ್ತಿದ್ದರು.

ಏಕೈಕ ದೇವನ ಆರಾಧನೆ ಎಲ್ಲಾ ಪ್ರವಾದಿಗಳ ಬೋಧನೆಯ ತಿರುಳಾಗಿತ್ತು. ಇದರೊಂದಿಗೆ, ಸೃಷ್ಟಿಕರ್ತನ ಆದೇಶಗಳನ್ನೂ, ಮಾನವರ ಬಗ್ಗೆ ಸೃಷ್ಟಿಕರ್ತನಿಗಿರುವ ಪ್ರೇಮವನ್ನು ಜನರಿಗೆ ಅವರು ತಿಳಿ ಹೇಳುತ್ತಿದ್ದರು. ಕೇವಲ ಸೃಷ್ಟಿಕರ್ತನ ಮೇಲೆ ಭರವಸೆಯನ್ನಿಡಬೇಕೆಂದು ಪ್ರವಾದಿಗಳು ಬೋಧಿಸುತ್ತಿದ್ದರು.

ಈ ಜಗತ್ತಿಗೆ ಕಳುಹಿಸಲ್ಪಟ್ಟ ಪ್ರಥಮ ಪ್ರವಾದಿ ಆದಮ್(ಅವರ ಮೇಲೆ ಶಾಂತಿ ಇರಲಿ) ಆಗಿದ್ದರು. ಅವರ ನಂತರ ಸಹಸ್ರಾರು ಪ್ರವಾದಿಗಳು ಕಳುಹಿಸಲ್ಪಟ್ಟರು. ಮುಹಮ್ಮದ್ ಅಂತಿಮ ಪ್ರವಾದಿಯಾಗಿರುವರು.

ಕುರ್‌ಆನ್ 23 ಪ್ರವಾದಿಗಳನ್ನು ಹೆಸರಿಸಿದೆ. ಈ ಪ್ರವಾದಿಗಳು ಬೈಬಲ್‌ನಲ್ಲಿಯೂ ಪ್ರಸ್ತಾಪಿತರಾಗಿದ್ದಾರೆ.

| ಕುರ್‌ಆನ್‌ನಲ್ಲಿ ಪ್ರಸ್ತಾಪಿತ ಹೆಸರು | | ಕುರ್‌ಆನಿನ ಉಲ್ಲೇಖ |
|---|---|---|
| * ಇದ್ರೀಸ್ | ____ | 19:56–57, 21:85–86 |
| * ನೂಹ್ | ____ | 6:84 |
| * ಹೂದ್ | ____ | 11:50–60 |
| * ಸಾಲಿಹ್ | ____ | 11:61–6 |
| * ಇಬ್ರಾಹೀಮ್ | ____ | 6:83, 11:69–76 |
| * ಇಸ್ಮಾಈಲ್ | ____ | 6:84, 19:54–55 |
| * ಇಸ್ಹಾಕ್ | ____ | 11:70–74 |
| * ಲೂತ್ | ____ | 7:80–84 |
| * ಯಾಕೂಬ್ | ____ | 11:71 |
| * ಯೂಸುಫ್ | ____ | 6:84 ಮತ್ತು ಅಧ್ಯಾಯ 12 |
| * ಶುಅಯ್‌ಬ್ | ____ | 7:85, 11:84 |
| * ಅಯ್ಯೂಬ್ | ____ | 6:84 |
| * ಮೂಸ | ____ | 6:84, 20;9–99 |
| * ಹಾರೂನ್ | ____ | 6:84, 20:90 |
| * ದುಲ್‌ಕಿಫ್ಲ್ | ____ | 21:85–6, 38:48 |
| * ದಾವೂದ್ | ____ | 6:84 |
| * ಸುಲೈಮಾನ್ | ____ | 6:84 |
| * ಇಲ್ಯಾಸ್ | ____ | 6:85 |
| * ಅಲ್‌ಯಸ | ____ | 6:86 |
| * ಯೂನುಸ್ | ____ | 6:86 |
| * ಝುಕರಿಯ್ಯಾ | ____ | 6:85 |
| * ಯಹ್ಯಾ | ____ | 6:85 |
| * ಈಸಾ | ____ | 3:45–8,43:57–9,19:88–98, 5:116–17, 19:16–36, 5:46–47, 5:72–5,43:63–5 |

ಎಲ್ಲಾ ಪ್ರವಾದಿಗಳು (ಅವರ ಮೇಲೆ ಶಾಂತಿ ಇರಲಿ) ಒಂದೇ ಸಮುದಾಯವಾಗಿದ್ದರು.

ಎಲ್ಲಾ ಪ್ರವಾದಿಗಳು, ಏಕ ದೇವತ್ವದ ಸಂದೇಶವನ್ನು ಮತ್ತು ನ್ಯಾಯ, ನೈತಿಕ ಮೌಲ್ಯಗಳನ್ನು ಪ್ರತಿಪಾದಿಸಿದ್ದರು. (ಕುರ್‌ಆನ್ 42:13)

ನಮ್ಮನ್ನು ಅಲ್ಲಾಹನು ಸೃಷ್ಟಿಸಿದ್ದು, ಅಂತಿಮವಾಗಿ ಅಲ್ಲಾಹನ ಬಳಿಗೆ ನಮಗೆಲ್ಲರಿಗೂ ಮರಳಲಿಕ್ಕಿದೆ ಎಂದು ಕುರ್‌ಆನ್ ತಿಳಿಸುತ್ತದೆ.

"ನಿಶ್ಚಯವಾಗಿಯೂ ನಾವು ಅಲ್ಲಾಹನವರು ಮತ್ತು ಅಲ್ಲಾಹನೆಡೆಗೇ ನಮಗೆ ಮರಳಿಕ್ಕಿದೆ"

ಅಲ್ಲಾಹ್ ಚಿರಂತರನಾಗಿದ್ದಾನೆ. ಆತನು ಆದಿಯಿಂದಲೂ ಇರುವನು. ಆತನು ಏಕೈಕನಾಗಿರುವನು. ಆತನಿಗೆ ಸರಿ ಸಮಾನರು ಯಾರೂ ಇಲ್ಲ. ಏಕದೇವತ್ವದ ವಿವರಣೆ ಇದುವೇ ಆಗಿದೆ.

ಪ್ರವಾದಿ ಮುಹಮ್ಮದ್‌ರನ್ನು ಅಂತಿಮ ಪ್ರವಾದಿಯಾಗಿ ಆರಿಸುವ ಮೂಲಕ ಮತ್ತು ಕುರ್‌ಆನ್‌ನನ್ನು ಅಂತಿಮ ದಿವ್ಯವಾಣಿಯನ್ನಾಗಿಸುವ ಮೂಲಕ ಅಲ್ಲಾಹ್ ತನ್ನ ಮತ್ತು ತನ್ನ ದಾಸರ ನಡುವೆ ಶಾಶ್ವತವಾದ ಸಂವಹನದ ಮಾಧ್ಯಮವನ್ನು ಮತ್ತು ಮಾರ್ಗದರ್ಶನದ ಏರ್ಪಾಡನ್ನು ಮಾಡಿರುವನು.

ದಿವ್ಯವಾಣಿಯ ಅವತೀರ್ಣವೆಂದರೇನು? ಪವಿತ್ರ ಕುರ್‌ಆನಿನ 42ನೇ ಅಧ್ಯಾಯದ 51–52 ಆಯತ್ ಈ ಪ್ರಶ್ನೆಯನ್ನು ಉತ್ತರಿಸುತ್ತದೆ.

> "ಯಾವ ದಾಸನೂ ಅಲ್ಲಾಹನು ಅವನ ಜೊತೆ ಮುಖಾಮುಖಿ ಮಾತನಾಡುವಷ್ಟು ಸ್ಥಾನಮಾನವುಳ್ಳವನಲ್ಲ. ಅವನ ಮಾತು ವಹ್ಯ್ (ಸೂಚನೆಯ) ರೂಪದಲ್ಲಿರುತ್ತದೆ ಅಥವಾ ತೆರೆಮರೆಯಿಂದಾಗಿರುತ್ತದೆ ಅಥವಾ ಅವನು ಯಾರಾದರೂ ದೂತ (ದೇವಚರ)ನನ್ನು ಕಳುಹಿಸುತ್ತಾನೆ ಮತ್ತು ಆ ದೂತನು ಅವನ ಆದೇಶದಂತೆ ಅವನು ಬಯಸಿದ್ದನ್ನು 'ವಹ್ಯ್' ಮಾಡುತ್ತಾನೆ.ಅವನು ಮಹೋನ್ನತನೂ, ಮಹಾಯುಕ್ತಿವಂತನೂ ಆಗಿರುತ್ತಾನೆ". (ಪವಿತ್ರ ಕುರ್‌ಆನ್ 42:51–52)

ಮೇಲಿನ ಕುರ್‌ಆನ್ ಆಯತ್‌ನಿಂದ ವ್ಯಕ್ತವಾಗುವುದೇನೆಂದರೆ, ಅಲ್ಲಾಹ್ ನೇರವಾಗಿ ಪ್ರವಾದಿಯೊಂದಿಗೆ ಮಾತಾಡುವುದಿಲ್ಲ. ದೇವಚರರಾದ ಜಿಬ್ರೀಲ್ (ಅವರ ಮೇಲೆ ಶಾಂತಿ ಇರಲಿ) ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸುತ್ತಾರೆ.

ಪ್ರವಾದಿ ಮುಹಮ್ಮದ್‌ರ ಮೇಲೆ ಅಲ್ಲಾಹನ ಅಂತಿಮ ದಿವ್ಯಗ್ರಂಥ "ಪವಿತ್ರ ಕುರ್‌ಆನ್" ಅವತೀರ್ಣಗೊಂಡಿತ್ತು. ಕುರ್‌ಆನ್ ಮುಹಮ್ಮದ್‌ರ ಉನ್ನತ ಸ್ಥಾನಮಾನವನ್ನು ಅನೇಕ ಆಯತ್‌ಗಳಲ್ಲಿ ಬಣ್ಣಿಸಿದೆ. ಮುಹಮ್ಮದ್ ಅಲ್ಲಾಹನ

ಪ್ರವಾದಿಯಾಗಿದ್ದರು, ಸಂದೇಶವಾಹಕರಾಗಿದ್ದರು, ಮಾನವ ಕುಲಕ್ಕೆ ಉತ್ಕೃಷ್ಟ ಮಾದರಿಯಾಗಿದ್ದರು ಮತ್ತು ಮಾರ್ಗದರ್ಶಕರಾಗಿದ್ದರು. ಅಲ್ಲಾಹನ ವತಿಯಿಂದ ಅವತೀರ್ಣಗೊಂಡ ದಿವ್ಯವಾಣಿಯ ಬೆಳಕಿನಲ್ಲಿ ಜಗತ್ತನ್ನು ಸಂಪೂರ್ಣವಾಗಿ ಮಾರ್ಪಡಿಸಿದರು. ಮುಹಮ್ಮದ್‌ರನ್ನು ಅಲ್ಲಾಹನು ಆಯ್ಕೆ ಮಾಡಿದ್ದನು. ಅವರ ಮೇಲೆ ದಿವ್ಯಗ್ರಂಥವನ್ನು ಅವತೀರ್ಣಗೊಳಿಸಿದ್ದನು. ಅರಬಿಯರು ಸಂಪೂರ್ಣವಾಗಿ ಅವರ ಮೇಲೆ ವಿಶ್ವಾಸವಿರಿಸಿದ್ದರು. ಈ ಕಾರಣಗಳಿಂದ ಮುಹಮ್ಮದ್ ಮಾನವ ಲೋಕಕ್ಕೇ ಮಾದರಿ ಮತ್ತು ಮಾರ್ಗದರ್ಶಕರಾಗಿರುವರು. 14 ಶತಮಾನಗಳ ಹಿಂಸೆ ಮುಸ್ಲಿಮರ ಮನ, ಮಸ್ತಿಷ್ಕಗಳಲ್ಲಿ ಮುಹಮ್ಮದ್ ನೆಲೆಸಿರುವಂತೆ, ಇಂದೂ ಮುಸ್ಲಿಮರ ಮನ, ಮಸ್ತಿಷ್ಕಗಳಲ್ಲಿ ನೆಲೆಸಿರುವರು.

ಸೃಷ್ಟಿಕರ್ತ ಮತ್ತು ಜನರ ನಡುವೆ ಮಧ್ಯವರ್ತಿಯ ರೂಪದಲ್ಲಿ ಮುಹಮ್ಮದ್‌ರನ್ನು ಮುಸ್ಕಿಮರು ಪರಿಗಣಿಸುವುದಿಲ್ಲ. ಇಸ್ಲಾಮ್ ಧರ್ಮದಲ್ಲಿ ಪ್ರತಿಯೋರ್ವ ವ್ಯಕ್ತಿ ನೇರವಾಗಿ ಅಲ್ಲಾಹನನ್ನು ಅಭಿಸಂಭೋಧಿಸ ಬಹುದಾಗಿದೆ. ಮುಹಮ್ಮದ್ ಅನೇಕ ಸಂದರ್ಭಗಳಲ್ಲಿ ಮುಸ್ಕಿಮ್ ಸಮುದಾಯದ ಪರವಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು. ಆದಾಗ್ಯೂ ಪ್ರತಿಯೋರ್ವ ವ್ಯಕ್ತಿ ನೇರವಾಗಿ ಅಲ್ಲಾಹನಿಗೆ ಪ್ರಾರ್ಥಿಸಬೇಕೆಂದು ಅವರು ನುಡಿಯುತ್ತಿದ್ದರು. ಅಲ್ಲಾಹನ ಅಸ್ತಿತ್ವವನ್ನು ಮುಹಮ್ಮದ್ ನೆನಪಿಸುತ್ತಾರೆ ಅಲ್ಲಾಹನ ಆದೇಶಗಳ ವಿವರಣೆಯನ್ನು ನೀಡುತ್ತಿದ್ದರು. ಅಲ್ಲಾಹನ ಆದೇಶಗಳ ನೈಜ ಅರ್ಥವನ್ನು ಜನರಿಗೆ ವಿವರಿಸುತ್ತಿದ್ದರು.

ಮುಹಮ್ಮದ್‌ರಿಗೆ ಅವರ ಪ್ರವಾದಿತ್ವದ ಪುರಾವೆಯಾಗಿ ಪವಾಡಗಳನ್ನು ಮಾಡಿ ತೋರಿಸುವಂತೆ ಜನರು ಬೇಡಿಕೆಯನ್ನಿಟ್ಟಾಗ ಪವಿತ್ರ ಕುರ್‌ಆನ್, ಈ ರೀತಿ ಉತ್ತರಿಸುವಂತೆ ಅವರಿಗೆ ಸೂಚಿಸಿತು.

> "ಓ ಪೈಗಂಬರರೇ, ಹೇಳಿರಿ 'ನಾನು ನಿಮ್ಮಂತೆಯೇ ಇರುವ ಓರ್ವ ಮನುಷ್ಯ. ನಿಮ್ಮ ದೇವನು ಏಕಮಾತ್ರ ದೇವನೆಂದು ನನ್ನ ಕಡೆಗೆ ದಿವ್ಯ ವಾಣಿ ಮಾಡಲಾಗುತ್ತಿದೆ" (ಪವಿತ್ರ ಕುರ್‌ಆನ್ 18:110)

ಕುರ್‌ಆನಿನ ಈ ಆಯತ್‌ಗಳು ವಿಶ್ವದಲ್ಲಿ ಮುಹಮ್ಮದ್‌ರ ಶ್ರೇಷ್ಠ ಸ್ಥಾನಮಾನವನ್ನು ಶಾಶ್ವತವಾಗಿ ಸಾರುತ್ತವೆ.

"ಮುಹಮ್ಮದ್, ಸಕಲ ಜನರ ಪ್ರವಾದಿ" ಗ್ರಂಥವು ಮುಹಮ್ಮದ್ ಹೇಗೆ ಅರಬರಲ್ಲಿ ಕ್ರಾಂತಿಗಾರಿ ಬದಲಾವಣೆಗಳನ್ನು, ಅರೇಬಿಯಾ ಪ್ರದೇಶದಲ್ಲಿ ಶಾಂತಿ ಮತ್ತು ಸುಭೀಕ್ಷೆ ತರುವಲ್ಲಿ ಯಶಸ್ವಿಯಾದರು ಎಂಬುದನ್ನು ಜನರಿಗೆ ಪರಿಚಯಿಸಲು

ಮಾಡಿರುವ ಒಂದು ವಿನಮ್ರ ಪ್ರಯತ್ನವಾಗಿದೆ.

ಗ್ರಂಥದ ಉದ್ದಕ್ಕೂ, ಮುಹಮ್ಮದ್‌ರ ವ್ಯಕ್ತಿತ್ವವನ್ನು ಪರಿಚಯಿಸುವ ಸನ್ನಿವೇಶಗಳನ್ನು, ದೃಷ್ಟಿಕೋನಗಳನ್ನು ನಡೆದ ಘಟನಾವಳಿಗಳಿಂದ ವಿವರಿಸಲಾಗಿದೆ. ಆಯಿಷಾರಿಗೆ, "ಮುಹಮ್ಮದ್‌ರ ನಡವಳಿಕೆ ಹೇಗಿತ್ತು"? ಎಂದು ಪ್ರಶ್ನಿಸಿದಾಗ, ಆಯಿಷಾ "ನೀವು ಕುರ್‌ಆನ್‌ಅನ್ನು ಓದಿಲ್ಲವೇ?" ಎಂದು ಉತ್ತರಿಸಿದ್ದರು. ಮುಹಮ್ಮದ್‌ರ ಜೀವನದ ವಿಶ್ಲೇಷಣೆ ನಡೆಸಿ, ಅದರಿಂದ ಮಾನವ ಲೋಕಕ್ಕೆ ಅನರ್ಘ್ಯ ಮುತ್ತು ರತ್ನಗಳನ್ನು ಹೆಕ್ಕಿ ತೆಗೆಯುವ ಕಾರ್ಯವನ್ನು ಈ ಗ್ರಂಥದ ರಚನೆಯಿಂದ ಮಾಡಲಾಗಿದೆ.

ಪ್ರವಾದಿ ಮುಹಮ್ಮದ್‌ರ ಜೀವನದ ವಿವಧ ಘಟನಾವಳಿಗಳಿಂದ ಮತ್ತೊಂದು ಪಾಠವನ್ನು ನಾವು ಕಲಿಯಬಹುದು. ಏಳನೇಯ ಶತಮಾನದಲ್ಲಿ, ಅರೇಬಿಯಾದ ಅಂದಿನ ವಿಶಿಷ್ಟ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಮುಹಮ್ಮದ್ ಸಂದರ್ಭಾನುಸಾರ ನಿರ್ದಿಷ್ಟ ನಿಲುವುಗಳನ್ನು ತಳೆದಿದ್ದರು.

ಅಂದಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಮುಹಮ್ಮದ್ ತಳೆದ ನಿಲುವಿನ ಅಧ್ಯಯನ ನಡೆಸುವ ಮೂಲಕ ಧರ್ಮದೊಂದಿಗೆ ಮಾನವೀಯತೆಯ, ಸಹೋದರತೆಯ, ಪ್ರೀತಿ, ಹಗೆತನ, ಸಾಮಾಜಿಕ ಜೀವನ, ನ್ಯಾಯ, ಕಾನೂನು ಮತ್ತು ಯುದ್ಧಕ್ಕೆ ಇರುವ ಸಂಬಂಧವನ್ನು ತಿಳಿದುಕೊಳ್ಳಬಹುದು. ನಾವು ಪ್ರವಾದಿ ಮುಹಮ್ಮದ್‌ರ ಬೋಧನೆಗಳನ್ನು ಸಮಕಾಲೀನ ಅಗತ್ಯತೆಗಳ ಹಿನ್ನೆಲೆಯಲ್ಲಿ ಅರಿಯಬಯಸುತ್ತೇವೆ. ಸಮಕಾಲೀನ ಸಮಸ್ಯೆಗಳನ್ನು ಮುಹಮ್ಮದ್‌ರ ಜೀವನದಿಂದ ಯಾವ ರೀತಿ ಪರಿಹರಿಸಿಕೊಳ್ಳಬಹುದು ಎಂಬ ಪ್ರಯತ್ನವನ್ನು ಈ ಗ್ರಂಥದಲ್ಲಿ ಮಾಡಲಾಗಿದೆ.

ಪ್ರವಾದಿ ಮುಹಮ್ಮದ್‌ರ ಜೀವನದ ಘಟನಾವಳಿಗಳಿಂದ ಸ್ಫೂರ್ತಿಪಡೆದು, ಮುಸ್ಲಿಮರು ಮತ್ತು ಮುಸ್ಲಿಮೇತರ ಓದುಗರು ಪ್ರವಾದಿರನ್ನು ಅನುಸರಿಸಬೇಕೆಂದು ವಿನಂತಿಸಲಾಗಿದೆ. ನಮ್ಮ ಕಾಲಕ್ಕೆ ಮತ್ತು ನಮ್ಮ ಜೀವನಕ್ಕೆ ಅವಶ್ಯಕವೆನಿಸುವ ಬೋಧನೆಗಳನ್ನು ಆಯ್ಕೆ ಮಾಡಲು ಮುಹಮ್ಮದ್‌ರ ಜೀವನದ ಕೆಲ ಘಟನೆಗಳ ಬಗ್ಗೆ ವಿಶೇಷ ಗಮನ ಹರಿಸುವುದು ಅಗತ್ಯವೆನಿಸುತ್ತದೆ.

ಈ ಗ್ರಂಥದ ಪ್ರತಿಯೊಂದು ಅಧ್ಯಾಯದಲ್ಲಿ (ಬೇಕೆಂದೇ ಗ್ರಂಥದ ಅಧ್ಯಾಯಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ) ಆಧ್ಯಾತ್ಮಿಕ, ತಾತ್ವಿಕ, ಸಾಮಾಜಿಕ, ನ್ಯಾಯಾಂಗ, ರಾಜಕೀಯ ಅಥವಾ ಸಾಂಸ್ಕೃತಿಕ ವಿಷಯಗಳು ಪ್ರವಾದಿ ಮುಹಮ್ಮದ್‌ರ ಜೀವನ ಹಾಗೂ ಕುರ್‌ಆನಿನ ನಡುವೆ ನಿರಂತರವಾಗಿ ಚಲಿಸುತ್ತಿರುವುದನ್ನು ಗಮನಿಸಬಹುದು.

ಈ ಗ್ರಂಥದ ಮುಖ್ಯ ಉದ್ದೇಶವು ಪ್ರವಾದಿರ ಬಗ್ಗೆ ತಿಳಿದುಕೊಳ್ಳುವುದಾಗಿದೆ. ಪ್ರವಾದಿರ ಬಗ್ಗೆ ಅರಿಯಲು ಅವರ ಬಗ್ಗೆ ಪ್ರೀತಿ, ವಿಶ್ವಾಸ, ಅನುಕಂಪ, ಆಕರ್ಷಣೆ

ಅತ್ಯಗತ್ಯವಾಗಿದೆ. ಓರ್ವ ವ್ಯಕ್ತಿ ಮುಹಮ್ಮದ್‌ರ ಬಗ್ಗೆ ವಿಶ್ವಾಸವಿಡಲಿ ಅಥವಾ ವಿಡದಿರಲಿ, ಮುಹಮ್ಮದ್‌ರ ಬಗ್ಗೆ ತಿಳಿಯಲು, ಅವರ ಸಿದ್ಧಾಂತದಲ್ಲಿ, ಅವರ ಹೋರಾಟದಲ್ಲಿ, ಅವರ ಧ್ಯೇಯೋದ್ದೇಶಗಳಲ್ಲಿ ಮುಳುಗಿ, ಅವುಗಳನ್ನು ತಿಳಿಯಲು ಖಂಡಿತ ಸಾಧ್ಯವಿದೆ. ಮುಹಮ್ಮದ್‌ರ ಜೀವನದ ವಿವಿಧ ಘಟನಾವಳಿಗಳ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರವನ್ನು, ಮಾರ್ಗದರ್ಶನವನ್ನು ಪಡೆಯುವುದು ನಮ್ಮ ಗುರಿಯಾಗಿದೆ.

ಪ್ರವಾದಿರ ಜೀವನದ ಅಧ್ಯಯನವನ್ನು ಮಾಡುವಾಗ, ಅವರ ಜೀವನದ ನುಡಿಗಳು, ಅವರು ತಳೆದಿದ್ದ ನಿಲುವುಗಳು, ಅವರ ಮೌನ, ಅವರ ಕಾರ್ಯಗಳ ಬಗ್ಗೆ ವಿಮರ್ಶಿಸಬೇಕು.

ಈ ಗ್ರಂಥವು ಮುಸ್ಲಿಮರು ಮತ್ತು ಮುಸ್ಲಿಮೇತರರಿಗಾಗಿ ರಚಿಸಲ್ಪಟ್ಟಿದೆ. ವಿವಿಧ ಘಟನಾವಳಿಗಳು, ಅವುಗಳ ಬಗ್ಗೆ ವಿಮರ್ಶೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು. 1.70 ಬಿಲಿಯ ಮುಸ್ಲಿಮರ ಭಾವನೆಗಳನ್ನು, ನಂಬಿಕೆಗಳನ್ನು ಸುಲಭವಾಗಿ ಅರಿತುಕೊಳ್ಳಬಹುದು. ಹೀಗೆ ಈ ಗ್ರಂಥವು ಇಸ್ಲಾಮ್ ಧರ್ಮವನ್ನು ಅರಿಯಲು ಒಂದು ಸೋಪಾನವಾಗಿದೆ.

ಪ್ರವಾದಿ ಮುಹಮ್ಮದ್‌ರ ಅನುಯಾಯಿಗಳು ಮುಹಮ್ಮದ್‌ರನ್ನು ಗಾಢವಾಗಿ ಪ್ರೀತಿಸುತ್ತಿದ್ದರು. ಮುಹಮ್ಮದ್‌ರ ಸಾನಿಧ್ಯದಿಂದ ಆಧ್ಯಾತ್ಮಿಕ ಶಕ್ತಿಯನ್ನು ಪಡೆಯುತ್ತಿದ್ದರು.

ಮುಹಮ್ಮದ್ ತಮ್ಮ ಅನುಯಾಯಿಗಳನ್ನು ಅಲ್ಲಾಹನನ್ನು ಪ್ರೀತಿಸಲು ಬೋಧಿಸಿದರು. ಇದಕ್ಕೆ ಪ್ರತಿಯಾಗಿ ಕುರ್‌ಆನ್ ಈ ರೀತಿ ತಿಳಿಸಿತು.

> ಓ ಪೈಗಂಬರರೇ, ನೀವು ಜನರೊಡನೆ ಹೀಗೆ ಹೇಳಿ ಬಿಡಿರಿ,–
> 'ನೀವು ನಿಜವಾಗಿಯೂ ಅಲ್ಲಾಹನನ್ನು ಪ್ರೀತಿಸುತ್ತೀರೆಂದಾದರೆ
> ನನ್ನ ಅನುಸರಣೆ ಮಾಡಿರಿ. ಅಲ್ಲಾಹ್ ನಿಮ್ಮನ್ನು ಪ್ರೀತಿಸುವನು
> ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು'.
> (ಪವಿತ್ರ ಕುರ್‌ಆನ್ 3:31)

ಅಲ್ಲಾಹನೊಂದಿಗಿನ ಪ್ರೀತಿಯಿಂದಾಗಿ ಮುಸ್ಲಿಮರು ಮುಹಮ್ಮದ್‌ರ ಪ್ರತಿಯೊಂದು ನಡೆ, ನುಡಿಯನ್ನು ಅನುಸರಿಸಲು ಪ್ರಯತ್ನಿಸುತ್ತಾರೆ. ಮುಸ್ಲಿಮರ ಈ ಕ್ರಿಯೆಯಲ್ಲಿ ಮುಹಮ್ಮದ್‌ರ ಬಗ್ಗೆ ಅವರಿಗಿರುವ ಅಗಾಧ ಪ್ರೇಮವು ಪ್ರಕಟವಾಗುತ್ತದೆ.

> ಪ್ರವಾದಿಯರೊಂದಿಗಿನ ಪ್ರೀತಿ ಮುಸ್ಲಿಮರ ಮನ, ಮಸ್ತಿಷ್ಕಗಳಲ್ಲಿ
> ಶಾಶ್ವತವಾಗಿ ನೆಲೆಸಿದೆ. ಮುಸ್ಲಿಮರು ತಮ್ಮ ದಿನನಿತ್ಯದ
> ಪ್ರತಿಯೊಂದು ಕಾರ್ಯದಲ್ಲಿ ಪ್ರವಾದಿರನ್ನು ಅನುಸರಿಸಲು

> ಪ್ರಯತ್ನಿಸುತ್ತಾರೆ. ಪ್ರವಾದಿರಿಗೆ ಸದಾ **'ಸಲಾತ್'** (ಸ್ವಸ್ತಿ ವಚನ) ಹೇಳುತ್ತಾರೆ. **"**ಸತ್ಯ ವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಲಿರಿ**"** (ಪವಿತ್ರ ಕುರ್‌ಆನ್ 33:56)

ಮೇಲಿನ ಕುರ್‌ಆನಿನ ಆಯತ್‌ನ ಆಶಯವನ್ನು ಪೂರೈಸುವ ನಿಟ್ಟಿನಲ್ಲಿ ಈ ಗ್ರಂಥವನ್ನು ರಚಿಸಲಾಗಿದೆ. ಮುಹಮ್ಮದ್‌ರ ಜೀವನವು ಆಧ್ಯಾತ್ಮಿಕತೆಗೆ ಕರೆ ನೀಡುತ್ತದೆ. ಮುಹಮ್ಮದ್‌ರ ಜೀವನದ ವಿವಿದ ಘಟನೆಗಳ, ಸಂಕಷ್ಟಗಳ, ಪರೀಕ್ಷೆಗಳ ಮೂಲಕ ಓದುಗರಿಗೆ ಪ್ರಸ್ತುತ ಕಾಲದಲ್ಲಿ ಎದುರಿಸುತ್ತಿರುವ ಸವಾಲುಗಳಿಗೆ, ಸಮಸ್ಯೆಗಳಿಗೆ ಸಮರ್ಥ ಉತ್ತರ, ಪರಿಹಾರ ದೊರಕುತ್ತದೆ. ಪ್ರವಾದಿ ಮುಹಮ್ಮದ್‌ರನ್ನು ಪ್ರೀತಿಸದವನಿಗೆ ಅಲ್ಲಾಹನ ಪ್ರೀತಿ ದೊರಕದು. ಅಲ್ಲಾಹನ ಮಾರ್ಗದರ್ಶನವೂ ದೊರಕದು.

ಈ ಗ್ರಂಥವು ಸುಧೀರ್ಘ ಪರಿಶ್ರಮ, ಗಾಢ ಅಧ್ಯಯನದ ಫಲವಾಗಿದೆ. ಅಲ್ಲಾಹ್‌ನನ್ನ ಪರಿಶ್ರಮವನ್ನು ಸ್ವೀಕರಿಸಲಿ ಎಂದು ನಾನು ಅಲ್ಲಾಹನಲ್ಲಿ ಬೇಡಿಕೊಳ್ಳುತ್ತೇನೆ. ನನ್ನ ಸರ್ವಸ್ವವನ್ನು ಅಲ್ಲಾಹನಿಗೆ ಸಮರ್ಪಿಸಲು, ಅಲ್ಲಾಹ್ ನನಗೆ ಅನುಗ್ರಹಿಸಲಿ. ಅಲ್ಲಾಹ್ ನನ್ನಿಂದ ಸಂಭವಿಸಿರುವ ಪ್ರಮಾದಗಳನ್ನು, ತಪ್ಪುಗಳನ್ನು ಕ್ಷಮಿಸಲಿ. ಆತನ ಅನುಗ್ರಹವನ್ನು ದಯಪಾಲಿಸಲಿ.

> **"**ನಾನು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಿದ್ದೇನೆ ಮತ್ತು ಪ್ರತಿಯೊಂದು ವಿಷಯದಲ್ಲೂ ಅವನ ಕಡೆಗೇ ಮರಳುತ್ತೇನೆ**"** (ಪವಿತ್ರ ಕುರ್‌ಆನ್ 2:185)

ಬೆಂಗಳೂರು **ಸೈಯದ್ ಹಾಮಿದ್ ಮೊಹ್ಸಿನ್**

12-12-2012

Map of Arabian Peninsula as at the time of
Prophet Muhammad (s), 570 - 632 C.E.,



# I

# ಕಅಬ

## ಅಲ್ಲಾಹನ ಭವನ

ಇಸ್ಲಾಮಿ ನಂಬಿಕೆಗಳ ಪ್ರಕಾರ ಅಲ್ಲಾಹನ ಭವನವನ್ನು (ಕಅಬ) ಪ್ರವಾದಿ ಇಬ್ರಾಹೀಮ್('ಅವರ ಮೇಲೆ ಶಾಂತಿ ಇರಲಿ') ಮತ್ತು ಅವರ ಪುತ್ರ ಪ್ರವಾದಿ ಇಸ್ಮಾಈಲ್('ಅವರ ಮೇಲೆ ಶಾಂತಿ ಇರಲಿ') ಭೂಮಿ, ಆಕಾಶಗಳ ಒಡೆಯನೂ, ಸಕಲ ವಸ್ತುಗಳ ಸೃಷ್ಟಿಕರ್ತನೂ ಆಗಿರುವ ಏಕೈಕ ಆರಾಧ್ಯನಾಗಿರುವ ಅಲ್ಲಾಹನ ಆರಾಧನೆಗಾಗಿ ನಿರ್ಮಿಸಿದರು. ಶತಮಾನಗಳು ಕಳೆದಂತೆ ಮಕ್ಕಾ ಪಟ್ಟಣವು ಯಾತ್ರಾಸ್ಥಳವಾಗಿ, ವ್ಯಾಪಾರ ಕೇಂದ್ರವಾಗಿ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಟ್ಟಿತು. ಕಾಲಕಳೆದಂತೆ ಜನರು ಏಕೈಕ ಸೃಷ್ಟಿಕರ್ತನ ಆರಾಧನೆಯನ್ನು ತೊರೆದು ಅನೇಕಾರು ಸ್ಥಾನೀಯ ವಿಗ್ರಹಗಳ, ಬುಡಕಟ್ಟುಗಳಿಗೆ ಸಂಬಂಧಿಸಿದ ವಿಗ್ರಹಗಳ ಆರಾಧನೆಯಲ್ಲಿ ತೊಡಗಿದರು. ಇತಿಹಾಸದ ಪ್ರಕಾರ, ಕುರ್‌ಆನ್ ಅವತೀರ್ಣದ ಸಂದರ್ಭದಲ್ಲಿ ಕಅಬ ಭವನದಲ್ಲಿ 360ಕ್ಕೂ ಹೆಚ್ಚಿನ ವಿಗ್ರಹಗಳು, ಚಿತ್ರಗಳು ಮತ್ತು ಮೂರ್ತಿಗಳು ಕಅಬ ಭವನದಲ್ಲಿ ಇದ್ದವು.

ಆ ಕಾಲದಲ್ಲಿ ಕೆಲ ಜನರು ಮಾತ್ರ ಏಕೈಕ ಆರಾಧ್ಯನ ಆರಾಧನೆಯಲ್ಲಿ ಧೃಡವಾಗಿ ನಿಂತಿದ್ದರು. ಇವರು ಇಬ್ರಾಹೀಮ್‌ರ ಸಂಪ್ರದಾಯಕ್ಕೆ ಸೇರಿದವರಾಗಿದ್ದು, ಇವರನ್ನು **'ಹುನಫಾ'** ಎಂದು ಕರೆಯಲಾಗುತ್ತಿತು. ಪವಿತ್ರ ಕುರ್‌ಆನ್ ಇಬ್ರಾಹೀಮ್ ಮತ್ತು ಅವರ ಆರಾಧನಾ ಕ್ರಮವನ್ನು ಪರಿಶುದ್ಧ (ಹನೀಫ್) ವೆಂದು ಬಣ್ಣಿಸಿದೆ.

> ಅಲ್ಲಾಹನು ತನ್ನ ಮಿತ್ರನಾಗಿಸಿಕೊಂಡ ಆ ಇಬ್‌ರಾಹೀಮರ ಸಂಪ್ರದಾಯವನ್ನು ಅನುಸರಿಸುವವನಿಗಿಂತ ಉತ್ತಮವಾದ ಜೀವನ ಪದ್ಧತಿ ಇನ್ನಾರದ್ದಾಗಿರಲು ಸಾಧ್ಯ? (ಪವಿತ್ರ ಕುರ್‌ಆನ್ 4:125)

## ಜನನ

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಕ್ರಿ.ಶ. 571 ಏಪ್ರಿಲ್ 20ರಂದು ಸೋಮವಾರ ಮಕ್ಕಾದ ಕುಲೀನ ಮನೆತನ ಬನೂ ಹಾಶಿಮ್‍ನಲ್ಲಿ ಜನಿಸಿದರು. ಬನೂ ಹಾಶಿಮ್ ಮನೆತನವು ಮಕ್ಕಾದ ಸುತ್ತಮುತ್ತಲಿನ ಎಲ್ಲಾ ಗೋತ್ರಗಳಲ್ಲಿಯೂ ಅತ್ಯಂತ ಹೆಚ್ಚು ಪ್ರಖ್ಯಾತವಾಗಿದ್ದಿತು ಮತ್ತು ಗೌರವಾನ್ವಿತವಾಗಿದ್ದಿತು. ಮುಹಮ್ಮದ್‍ರ ಜನನವು ದು:ಖದಿಂದ ಕೂಡಿತ್ತು. ತಾಯಿ ಆಮಿನಾ ಎರಡು ತಿಂಗಳ ಗರ್ಭವತಿಯಾಗಿದ್ದಾಗ ತಂದೆ ಅಬ್ದುಲ್ಲಾರ ನಿಧನ ಯಸ್ರಿಬ್ ಪ್ರವಾಸದಲ್ಲಿದ್ದಾಗ ಆಯಿತು. ಕುಲೀನ ಮನೆತನದಲ್ಲಿ ಜನಿಸಿದ್ದರೂ ತಂದೆಯ ನಿಧನದಿಂದಾಗಿ ತಂದೆಯ ಆಸರೆಯಿಂದ ವಂಚಿತರಾಗಿದ್ದರು.

'ಮುಹಮ್ಮದ್' ಹೆಸರು ಅರೇಬಿಯಾದಲ್ಲಿ ಅಪರಿಚಿತವಾಗಿತ್ತು. 'ಮುಹಮ್ಮದ್' ಶಬ್ದದ ಅರ್ಥ 'ಹೆಚ್ಚು ಪ್ರಶಂಸಿಲ್ಪಡುವವ' ಅಥವಾ 'ಪ್ರಶಂಸೆಗೆ ಅರ್ಹನಾಗಿರುವವ' ಎಂಬುದಾಗಿದೆ. ಆಮಿನಾ ಗರ್ಭವತಿಯಾಗಿದ್ದಾಗ ದೇವಚರ ಅವರಿಗೆ 'ಮಾನವಕುಲದ ನಾಯಕನ' ಜನನದ ವಾರ್ತೆಯನ್ನು ನೀಡಿ ಮಗುವಿನ ಹೆಸರು 'ಮುಹಮ್ಮದ್' ಎಂದು ತಿಳಿಸಿತ್ತು. ಇದೇ ದೇವಚರ ಆಮಿನಾರಿಗೆ ಮಗು ಹುಟ್ಟಿದಾಗ 'ನಾನು ಈ ಮಗುವನ್ನು ಅಸೂಯೆ ಪಡುವವರ ಸಂಚಿನಿಂದ ರಕ್ಷಿಸಲು ಏಕೈಕ ಆರಾಧ್ಯ (ಅಲ್ ವಾಹಿದ್)ನಿಗೆ ಒಪ್ಪಿಸುತ್ತೇನೆ' ಎಂದು ಹೇಳಲು ತಿಳಿಸಿತು. ಪತಿಯ ನಿಧನದ ದು:ಖ ಮತ್ತು ಸುಂದರ ಮಗುವಿನ ಜನನದ ನಡುವೆ ಆಮಿನಾ ತಾವು ಗರ್ಭವತಿಯಾಗಿರುವಾಗ ಕಂಡ ಚಿತ್ರ ವಿಚಿತ್ರ ಸಂಜ್ಞೆಗಳ ಕುರಿತು ಮತ್ತು ಅದರ ನಂತರ ಯಾವುದೇ ಪ್ರಸವ ವೇದನೆಗಳಿಲ್ಲದೇ ಆದ ಮಗುವಿನ ಜನನದ ಕುರಿತು ಪ್ರಸ್ತಾಪಿಸುತ್ತಿದ್ದರು.

## ಮರುಭೂಮಿಯಲ್ಲಿ

ಕುಲೀನ ಮತ್ತು ಉನ್ನತ ವರ್ಗದ ಕುಟುಂಬದಲ್ಲಿ ಹುಟ್ಟಿದ ಮಕ್ಕಳು ಹಳ್ಳಿಯ ಪರಿಶುದ್ಧ ವಾತಾವರಣದಲ್ಲಿ ಬೆಳೆದು ಸಧೃಡಕಾಯವಾಗಿ ಬೆಳೆಯಲೆಂದು ಹುಟ್ಟಿದ ಕೆಲ ದಿನಗಳಲ್ಲಿ ಸನಿಹದ ಹಳ್ಳಿಯ ಸ್ತ್ರೀಯರಿಗೆ ಮೊಲೆ ಹಾಲು ಉಣಿಸಿ, ಪೋಷಿಸಲು ವಹಿಸಿ ಕೊಡುವ ಸಂಪ್ರದಾಯ ಅರಬರಲ್ಲಿತ್ತು.

ನಾಲ್ಕು ವರ್ಷಗಳ ಕಾಲ ಅನಾಥ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಹಲೀಮರ ಆರೈಕೆಯಲ್ಲಿ ಮರಳುಗಾಡಿನಲ್ಲಿ ಬನೂ ಸಅದ್ ಗೋತ್ರದವರ ನಡುವೆ ಬೆಳೆದರು. ದೂರದೂರದವರೆಗೂ ಬೆಟ್ಟ ಗುಡ್ಡಗಳು ಮತ್ತು ಮರಳುಗಾಡು. ಇಂತಹ ಕಷ್ಟಕರ ಪರಿಸರದಲ್ಲಿ ಮುಂದೆ ಪ್ರವಾದಿಯಾಗಲಿದ್ದ ಮುಹಮ್ಮದ್‍ರನ್ನು

ಸೃಷ್ಟಿಕರ್ತನು ತರಬೇತಿಯ ಮೊದಲ ಹಂತದಲ್ಲಿ ಸಾಗಿಸಿದನು.

ಮುಹಮ್ಮದ್‌ರ ಅನಾಥ ಪರಿಸ್ಥಿತಿ, ಮರಳುಗಾಡಿನಲ್ಲಿ ಅವರ ಪಾಲನೆ, ಪೋಷಣೆಯ ವ್ಯವಸ್ಥೆ – ಇದರ ಬಗ್ಗೆ ಕುರ್‌ಆನ್ ಕೆಲ ಕಾಲದ ನಂತರ ಈ ರೀತಿ 'ನೆನಪಿಸಿತ್ತು'.

> "ಅವನು ನಿಮ್ಮನ್ನು ಅನಾಥನಾಗಿ ಕಂಡು ಆಶ್ರಯವನ್ನು ಒದಗಿಸಲಿಲ್ಲವೇ? ಮತ್ತು ನಿಮ್ಮನ್ನು ಸನ್ಮಾರ್ಗವರಿಯದವರಾಗಿ ಕಂಡು ಮಾರ್ಗದರ್ಶನ ಮಾಡಲಿಲ್ಲವೇ? ನಿಮ್ಮನ್ನು ನಿರ್ಗತಿಕನಾಗಿ ಕಂಡು ಸ್ಥಿತಿವಂತನಾಗಿ ಮಾಡಲಿಲ್ಲವೇ? ಆದುದರಿಂದ ಅನಾಥನ ಮೇಲೆ ಕಾಠಿಣ್ಯ ತೋರಬೇಡಿರಿ ಮತ್ತು ಯಾಚಕನನ್ನು ಜರೆಯಬೇಡಿರಿ ಮತ್ತು ನಿಮ್ಮ ಪ್ರಭುವಿನ ಅನುಗ್ರಹವನ್ನು ಪ್ರಕಟಪಡಿಸಿರಿ."
> (ಪವಿತ್ರ ಕುರ್‌ಆನ್ 93:6–11)

ಕುರ್‌ಆನಿನ ಈ ಸೂಕ್ತಗಳು ಅನೇಕ ಬೋಧನೆಗಳನ್ನು ಒಳಗೊಂಡಿವೆ. ಏಕಕಾಲದಲ್ಲಿ ಅನಾಥರೂ ಮತ್ತು ಬಡವರೂ ಆಗಿದ್ದ ಪರಿಸ್ಥಿತಿಯು ವಾಸ್ತವಿಕವಾಗಿ ಕನಿಷ್ಠ ಎರಡು ಕಾರಣಗಳಿಗಾಗಿ ಮುಂದೆ ಪ್ರವಾದಿಯಾಗಲಿದ್ದ ಮುಹಮ್ಮದ್‌ರಿಗೆ ಪ್ರಾರಂಭಿಕ ಹಂತವಾಗಿತ್ತು. ಮೊದಲ ಬೋಧನೆಯು ಅವರ ಬಾಲ್ಯದ ಪರಿಸ್ಥಿತಿಯಿಂದಾಗಿ ಅವರು ಸುಲಭವಾಗಿ ಕಷ್ಟಗಳಿಗೆ ಈಡಾಗುವ ಸನ್ನಿವೇಶ ಮತ್ತು ಅವರು ಸ್ವಾಭಾವಿಕವಾಗಿ ಅನುಭವಿಸಿದ ವಿನಮ್ರತೆಯಾಗಿತ್ತು. ಅವರು ಆರು ವರ್ಷದ ಪ್ರಾಯದವರಾಗಿದ್ದಾಗ ಅವರ ತಾಯಿಯ ನಿಧನ, ಅವರ ಈ ಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಿತ್ತು. ಈ ಸನ್ನಿವೇಶವು ಮುಹಮ್ಮದ್‌ರನ್ನು ಸಂಪೂರ್ಣವಾಗಿ ಸೃಷ್ಟಿಕರ್ತನ ಮೇಲೆ ಆಶ್ರಿತವನ್ನಾಗಿಸಿತ್ತು. ಇದೇ ಸಮಯದಲ್ಲಿ ಸಮಾಜದ ನಿರ್ಗತಿಕರೊಂದಿಗೂ ಅವರನ್ನು ನಿಕಟರನ್ನಾಗಿಸಿತ್ತು. ಇದನ್ನು ಜೀವನ ಪರ್ಯಂತ ವಿಶೇಷವಾಗಿ ಅವರ ಪ್ರವಾದಿತ್ವದ ಹೊಣೆಗಾರಿಕೆಯ ಸಂದರ್ಭದಲ್ಲಿ ಮರೆಯಬಾರದೆಂದು ಕುರ್‌ಆನ್ ಜ್ಞಾಪಿಸುತ್ತದೆ. ಮುಹಮ್ಮದ್ ಅನಾಥರಾಗಿದ್ದರು ಮತ್ತು ಬಡವರಾಗಿದ್ದರು. ಈ ಕಾರಣದಿಂದ ಸಮಾಜದ ನಿರ್ಗತಿಕರನ್ನು, ದುರ್ಬಲರನ್ನು ಕೈಬಿಡಬಾರದೆಂದು ಅವರಿಗೆ ಆದೇಶಿಸಲಾಗಿದೆ. ಎರಡನೆಯ ಬೋಧನೆಯು ಪ್ರತಿಯೋರ್ವ ಮನುಷ್ಯನಿಗೂ ಅನ್ವಯಿಸುತ್ತದೆ. ಎಂದಿಗೂ ನಮ್ಮ ಗತ ಜೀವನವನ್ನು, ಎದುರಿಸಿದ ಸಂಕಷ್ಟಗಳನ್ನು ಮರೆಯಬಾರದು ಮತ್ತು ಈ ಅನುಭವಗಳನ್ನು ಸ್ವಂತ ಜೀವನದಲ್ಲಿ ಮತ್ತು ಇತರರಿಗಾಗಿ ಸಕಾರಾತ್ಮಕವಾಗಿ ಬಳಸಬೇಕು. ಮುಹಮ್ಮದ್‌ರ ಗತ ಜೀವನವು ಒಂದು ತರಬೇತಿ ಶಾಲೆಯಾಗಿದ್ದು, ಇದರಿಂದ ಅವರು ಪ್ರಯೋಜನಕಾರಿ, ಮತ್ತು ಪ್ರಾಯೋಗಿಕ ಜ್ಞಾನವನ್ನು ಪಡೆದು ಅದನ್ನು ಅವರು ಅವರ ಜೊತೆಗಿದ್ದ ದೀನ, ದಲಿತರ, ನಿರ್ಗತಿಕರೊಂದಿಗೆ

ಹಂಚಿಕೊಳ್ಳಬೇಕೆಂದು ಆದೇಶಿಸಲಾಗಿದೆ. ಏಕೆಂದರೆ ಅವರೊಂದಿಗೆ ಜೊತೆಗಿದ್ದ ಕಾರಣ, ಅವರ ಸಂಕಷ್ಟಗಳನ್ನು ಅವರೇ ಬಹು ಚೆನ್ನಾಗಿ ಬಲ್ಲವರಾಗಿದ್ದರು.

## ನಿಸರ್ಗ ಮತ್ತು ಶಿಕ್ಷಣ

ಮರಳುಗಾಡಿನ ಜೀವನ ಪ್ರಕೃತಿಯ ಬಗ್ಗೆ ಹಾಗೂ ವಿಶ್ವದ ವಿವಿಧ ಅಂಗಗಳ ಬಗ್ಗೆ ಮನುಷ್ಯನ ದೃಷ್ಟಿಕೋನಕ್ಕೆ ರೂಪು ನೀಡುತ್ತದೆ. ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಬಾಲ್ಯದಲ್ಲಿ ಹಲೀಮಾರ ಹಳ್ಳಿಗೆ ಬಂದಾಗ ಹಳ್ಳಿಗರಿಂದ ಮೌಖಿಕ ಪದ್ಧತಿಯನ್ನು ಮತ್ತು ಅವರಿಂದ ಉತ್ತಮ ರೀತಿಯಲ್ಲಿ ಭಾಷಣ ಮಾಡುವ ಕಲೆಯನ್ನು ಕಲಿತು ಆಡು ಭಾಷೆಯಲ್ಲಿ ತಮ್ಮದೇ ನಿಪುಣತೆಯನ್ನು ಸಾಧಿಸಿದರು. ಮುಂದೆ ಮುಹಮ್ಮದ್, ತಮ್ಮ ವಾಕ್‌ಚಾತುರ್ಯದಿಂದ, ಇಸ್ಲಾಮಿನ ಆಳ, ವಿಶ್ವವ್ಯಾಪಿ ಬೋಧನೆಗಳನ್ನು ಕೆಲವೇ ಶಬ್ದಗಳಲ್ಲಿ ಜನರಿಗೆ ಮನವರಿಕೆ ಮಾಡುವಲ್ಲಿ ಯಶಸ್ವಿಯಾದರು.

ಬಾಲ್ಯದಲ್ಲಿ ಮುಹಮ್ಮದ್ ಪ್ರಕೃತಿಯೊಂದಿಗೆ ವಿಶಿಷ್ಟ ಸಂಬಂಧವನ್ನು ಬೆಳೆಸಿಕೊಂಡರು. ಈ ಸಂಬಂಧವು ಪ್ರವಾದಿತ್ವದ ಅಂತ್ಯದವರೆಗೂ ಮುಂದುವರೆದಿತ್ತು. ಈ ವಿಶ್ವವು ಸೃಷ್ಟಿಕರ್ತನ ಅಸ್ತಿತ್ವವನ್ನು ಪ್ರಕಟಿಸುವ ಅನೇಕಾರು ಚಿಹ್ನೆಗಳನ್ನು ಸಂಜ್ಞೆಗಳನ್ನು ಹೊಂದಿದೆ. ಇದರ ಜೊತೆಗೆ ಮರಳುಗಾಡು ಮನುಷ್ಯನನ್ನು ವಿಶ್ವದ ಬಗ್ಗೆ ಚಿಂತನೆ ನಡೆಸಲು, ಆಲೋಚಿಸಲು ಪ್ರೇರೇಪಿಸುತ್ತದೆ. ಆದುದರಿಂದ ಪವಿತ್ರ ಕುರ್‌ಆನಿನ ಅನೇಕ ಸೂಕ್ತ (ಆಯತ್)ಗಳು ವಿಶ್ವ ಮತ್ತು ವಿಶ್ವದಿಂದ ದೊರಕುವ ಬೋಧನೆಗಳ ಬಗ್ಗೆ ಪ್ರಸ್ತಾಪಿಸುತ್ತವೆ. ಮರಳುಗಾಡು ಬಾಹ್ಯದಲ್ಲಿ ಯಾವುದೇ ಜೀವವನ್ನು ಹೊಂದಿರದಿದ್ದರೂ ಮರು ಜೀವನಕ್ಕೆ ಮರಳುವಿಕೆಯ ವಾಸ್ತವಿಕತೆಯನ್ನು ಎಚ್ಚರದಿಂದಿರುವ ಪ್ರಜ್ಞೆಗೆ ಪುನರಾವರ್ತಿಸುತ್ತದೆ.

ಬಾಲ್ಯದಿಂದಲೇ ಪ್ರಕೃತಿಯೊಂದಿಗೆ ಮುಹಮ್ಮದ್‌ರ ಸಂಬಂಧವನ್ನು ಗಮನಿಸಿದಾಗ ಪ್ರಕೃತಿಯೊಂದಿಗೆ ಸನಿಹದಲ್ಲಿರುವುದು, ಅದನ್ನು ಗಮನಿಸುವುದು ಅರ್ಥೈಸುವುದು ಮತ್ತು ಅದನ್ನು ಗೌರವಿಸುವುದನ್ನು ಧೃಡ ವಿಶ್ವಾಸಕ್ಕೆ ಅತ್ಯಗತ್ಯ ಎಂಬ ತೀರ್ಮಾನಕ್ಕೆ ನಾವು ಬರಬಹುದು.

ಅನೇಕ ವರ್ಷಗಳ ನಂತರ ಪ್ರವಾದಿ ಮದೀನಾದಲ್ಲಿದ್ದಾಗ, ಯುದ್ಧಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಕುರ್‌ಆನಿನ ಈ ಸೂಕ್ತ ಅವತೀರ್ಣವಾದಾಗ, ಮುಹಮ್ಮದ್ ಇಡಿಯ ರಾತ್ರಿ ರೋದಿಸಿದರೆಂದು ವರದಿಮಾಡಲಾಗಿದೆ.

‘ಭೂಮಿ, ಆಕಾಶಗಳ ಸೃಷ್ಟಿಯಲ್ಲಿಯೂ, ರಾತ್ರಿ ಹಗಲುಗಳು

ಅನುಕ್ರಮವಾಗಿ ಬರುತ್ತಿರುವುದರಲ್ಲಿಯೂ ಬುದ್ಧಿ ಜೀವಿಗಳಿಗೆ ಸಾಕಷ್ಟು ನಿದರ್ಶನಗಳಿವೆ'. (ಪವಿತ್ರ ಕುರ್‌ಆನ್ 3:190)

ಬೆಳಗಿನ ಜಾವ ಬಿಲಾಲ್ ಪ್ರವಾದರಿಗೆ ಅವರು ರೋದಿಸಿದ ಕಾರಣ ಕೇಳಿದಾಗ ಮುಹಮ್ಮದ್ 'ಯಾರು ಕುರ್‌ಆನಿನ ಈ ಸೂಕ್ತವನ್ನು ಕೇಳಿಯೂ ಅದರ ಬಗ್ಗೆ ಚಿಂತನೆ' ನಡೆಸುವುದಿಲ್ಲವೋ, ಅಂಥಹ ಜನರ ಮೇಲೆ ಅಲ್ಲಾಹನ ಶಾಪವಿರಲಿ' ಎಂದು ನುಡಿದು ತಮ್ಮ ದುಃಖದ ಕಾರಣವನ್ನು ತೋಡಿಕೊಂಡರು.

ಕುರ್‌ಆನಿನ ಮತ್ತೊಂದು ಸೂಕ್ತವೂ ಪ್ರಕೃತಿಯ ಚಿಹ್ನೆಗಳ ಬಗ್ಗೆ ಈ ರೀತಿ ಬೆಳಕನ್ನು ಚಲ್ಲುತ್ತದೆ.

"ಆಕಾಶಗಳು ಮತ್ತು ಭೂಮಿಯ ನಿರ್ಮಾಣದಲ್ಲಿ, ಇರುಳು ಹಗಲುಗಳು ಒಂದರ ಹಿಂದೆ ಇನ್ನೊಂದರಂತೆ ನಿರಂತರವಾಗಿ ಬರುತ್ತಿರುವುದರಲ್ಲಿ ಜನೋಪಯೋಗಿ ಸಾಮಾಗ್ರಿಗಳನ್ನು ಹೊತ್ತುಕೊಂಡು ಜಲಧಿಗಳಲ್ಲಿ ಸಂಚರಿಸುತ್ತಿರುವ ನೌಕೆಗಳಲ್ಲಿ, ಅಲ್ಲಾಹನು ಆಕಾಶದಿಂದ ಸುರಿಸಿ ಅದರ ಮೂಲಕ ಭೂಮಿಯನ್ನು ನಿರ್ಜೀವಾವಸ್ಥೆಯ ಬಳಿಕ ಸಜೀವಗೊಳಿಸಿ,ಈ ವ್ಯವಸ್ಥೆಯ ಮೂಲಕ ಭೂಮಿಯಲ್ಲಿ ತರತರದ ಜೀವರಾಶಿಗಳು ಹರಡಿರುವಂತೆ ಮಾಡಿದ ಮಳೆ ನೀರಿನಲ್ಲಿ, ಮೋಡಗಳ ಚಲನೆಯಲ್ಲಿ ಹಾಗೂ ಆಕಾಶ ಮತ್ತು ಭೂಮಿಯ ನಡುವೆ 'ನಿಯಂತ್ರಿಸಲ್ಪಟ್ಟಿರುವ ಮೋಡಗಳಲ್ಲಿ ನಿಶ್ಚಯವಾಗಿಯೂ ವಿಚಾರವಂತರಿಗೆ ಅನೇಕಾನೇಕ ದೃಷ್ಟಾಂತಗಳಿವೆ'." (ಪವಿತ್ರ ಕುರ್‌ಆನ್ 2:164)

ಮುಹಮ್ಮದ್‌ರ ಬಾಲ್ಯವು ನಿಶ್ಚಯವಾಗಿಯೂ ಅವರ ಹೊರನೋಟವನ್ನು ರೂಪುಗೊಳಿಸಿ, ವಿಶ್ವದ ಚಿಹ್ನೆಗಳನ್ನು ಅರ್ಥಮಾಡಲು ಸಜ್ಜುಗೊಳಿಸಿತು.

## ಅನಾಥ ಬಾಲಕ ಮತ್ತು ಆತನ ಶಿಕ್ಷಕ

ಮಕ್ಕಾ ಹಿಂತೆರಳಿದ ನಂತರ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ತಾಯಿ ಆಮಿನಾರೊಂದಿಗೆ ಎರಡು ವರ್ಷಗಳ ಕಾಲ ಇದ್ದರು. ಮುಹಮ್ಮದ್‌ರಿಗೆ ಆರು ವರ್ಷ ಪ್ರಾಯವಾದಾಗ ಆಮಿನಾ ಮುಹಮ್ಮದ್ ಮದೀನಾದಲ್ಲಿರುವ ತಮ್ಮ ಸಂಬಂಧಿಕರೊಂದಿಗೆ ಪರಿಚಯಿಸಿಕೊಳ್ಳಲೆಂದು ಮದೀನಾ ತೆರಳಿದರು. ಆದರೆ ಮದೀನಾದಿಂದ ಮರಳುವಾಗ ಅಬ್ವಾದಲ್ಲಿ ರೋಗಗ್ರಸ್ತರಾಗಿ ನಿಧನಹೊಂದಿದರು. ಈಗ ಮುಹಮ್ಮದ್‌ರಿಗೆ ತಂದೆಯ ಆಸರೆಯೂ, ತಾಯಿಯ ಆಸರೆಯೂ ಇರದಂತಾಯಿತು. ಅನಾಥಾವಸ್ಥೆ, ನೋವು, ಸಂಕಷ್ಟಗಳಲ್ಲಿ ಪ್ರವಾದಿಯಾಗಿ ಅವರು ನೇಮಿಸಲ್ಪಟ್ಟಿರುವ

ಗುರುತುಗಳು ಕಾಣಿಸುತ್ತಿದ್ದವು. ತಾಯಿ ಮತ್ತು ಮಗುವಿನ ಜೊತೆ ಪ್ರಯಾಣಿಸಿದ್ದ ದಾಸಿ ಬರ್ಕ ಮುಹಮ್ಮದ್‌ರನ್ನು ವಾಪಸ್ಸು ಮಕ್ಕಾ ಕರೆತಂದಳು. ಅಬ್ದುಲ್ ಮುತ್ತಲಿಬ್, ಮುಹಮ್ಮದ್‌ರ ಅಜ್ಜ ಮೊಮ್ಮಗನ ಮೇಲೆ ಪ್ರೀತಿಯ ಧಾರೆಯನ್ನೇ ಎರೆದರು. ಆದರೆ ಅಬ್ದುಲ್ ಮುತ್ತಲಿಬ್ ಸಹ ಎರಡು ವರ್ಷಗಳ ನಂತರ ನಿಧನ ಹೊಂದಿದರು.

## ಅಲ್ಲಾಹನ ಸಹಾಯ

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮೇಲೆ ವಿವರಿಸಿರುವಂತೆ ಬಾಲ್ಯದಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಪವಿತ್ರ ಕುರ್‌ಆನ್ ಈ ಬಗ್ಗೆ ಈ ರೀತಿ ಹೇಳಿದೆ.

> "ವಾಸ್ತವದಲ್ಲಿ ಸಂಕೀರ್ಣತೆಯೊಂದಿಗೆ ವೈಶಾಲ್ಯವೂ ಇದೆ. ಖಂಡಿತವಾಗಿಯೂ ಸಂಕೀರ್ಣತೆಯೊಂದಿಗೆ ವೈಶಾಲ್ಯವೂ ಇದೆ" (ಪವಿತ್ರ ಕುರ್‌ಆನ್ 94:5–6)

ಎಂಟು ವರ್ಷದ ಪ್ರಾಯದಲ್ಲಿಯೇ ಮುಹಮ್ಮದ್ ತಂದೆಯನ್ನು ಕಳೆದುಕೊಂಡರು. ನಂತರ ಬಡತನವನ್ನು, ಒಂಟಿತನವನ್ನು ಎದುರಿಸಿದರು. ಒಂಟಿತನದ ನಂತರ ತಾಯಿಯ ಜೊತೆಗಿದ್ದಾಗ ಅಲ್ಪಕಾಲದಲ್ಲಿಯೇ ತಾಯಿಯನ್ನೂ, ಪ್ರೀತಿಯ ಅಜ್ಜನನ್ನೂ ಕಳೆದುಕೊಂಡರು. ಆದರೆ ಇಂತಹ ಪರಿಸ್ಥಿತಿಯಲ್ಲಿ ಜನರು ಮತ್ತು ಸುತ್ತಮುತ್ತಲಿನ ಪರಿಸರ ಅವರ ಸಹಾಯಕ್ಕೆ ಬಂದಿತು. ಅವರ ಬೆಳವಣಿಗೆಗೆ ಪೂರಕವಾದವು. ಅಬ್ದುಲ್ ಮುತ್ತಲಿಬ್ ಮರಣ ಶಯ್ಯೆಯಲ್ಲಿದ್ದಾಗ ಮಗ ಅಬೂ ತಾಲಿಬ್ ರನ್ನು ಬಳಿ ಕರೆದು ಮುಹಮ್ಮದ್‌ರ ಪೋಷಣೆಯ ಜವಾಬ್ದಾರಿಯನ್ನು ಹೊರಿಸಿದರು. ಅಬೂತಾಲಿಬ್ ಸಹೋದರ ಪುತ್ರ ಮುಹಮ್ಮದ್‌ರನ್ನು ತಮ್ಮ ಮಗನಂತೆಯೇ ಆರೈಕೆ ಮಾಡಿದರು. ಮುಹಮ್ಮದ್ ಸದಾ ತಮ್ಮ ಅಜ್ಜ ಅಬ್ದುಲ್ ಮುತ್ತಲಿಬ್ ಮತ್ತು ದೊಡ್ಡಪ್ಪ ಅಬೂತಾಲಿಬ್‌ರ ಪ್ರೀತಿಯನ್ನು ನೆನಸುತ್ತಿದ್ದರು. ಕುರ್‌ಆನ್ ಹೇಳಿರುವಂತೆ, "ವಾಸ್ತವದಲ್ಲಿ ಸಂಕೀರ್ಣತೆಯೊಂದಿಗೆ ವೈಶಾಲ್ಯವೂ ಇದೆ".

ಜೀವನ ಪರ್ಯಂತ ಸಂಕಷ್ಟಗಳ ಸುಳಿಯಲ್ಲಿ ಮುಹಮ್ಮದ್ ಅಲ್ಲಾಹನ ಸಂರಕ್ಷಣೆಯಲ್ಲಿದ್ದರು. ಮಕ್ಕಾದ ಜನತೆ ವಿಗ್ರಹಗಳ ಆರಾಧನೆಯಲ್ಲಿ, ಕೆಡಕುಗಳಲ್ಲಿ ಮುಳುಗಿದ್ದರೂ ಮುಹಮ್ಮದ್ ಇದೆಲ್ಲವುಗಳಿಂದ ರಕ್ಷಿಸಲ್ಪಟ್ಟಿದ್ದರು. ಮದುವೆ ಸಮಾರಂಭಗಳಲ್ಲಿ, ಔತಣಕೂಟಗಳಲ್ಲಿ, ಹಬ್ಬದ ದಿನಗಳಂದು ಜನರು ಮದ್ಯ ವಿನೋದಗಳಲ್ಲಿ ಮುಳುಗಿರುತ್ತಿದ್ದರು. ಆದರೆ ಅಲ್ಲಾಹನು ಇವೆಲ್ಲ ಕೆಡಕುಗಳಿಂದ ಅವರನ್ನು ರಕ್ಷಿಸಿದ್ದನು. ಒಮ್ಮೆ ಮಕ್ಕಾದಲ್ಲಿ ಒಂದು ಮದುವೆ ಸಮಾರಂಭದಲ್ಲಿ

ಮುಹಮ್ಮದ್ ಭಾಗವಹಿಸ ಬಯಸಿದ್ದರು. ದಾರಿಯಲ್ಲಿ ಸಾಗುತ್ತಿದ್ದಾಗ ಆಕಸ್ಮಿಕವಾಗಿ ಮುಹಮ್ಮದ್‌ರಿಗೆ ಬಹಳ ದಣಿವಾಗಿ ಅಲ್ಲಿಯೇ ನಿದ್ರೆಯ ವಶವಾದರು. ಕಣ್ಣು ತೆರೆದಾಗ ಸೂರ್ಯನು ನೆತ್ತಿಗೇರಿದ್ದನು.

## ಯುವ ಕುರಿಕಾಯುವವ

ಮುಂದಿನ ದಿನಗಳಲ್ಲಿ ಯುವ ಮುಹಮ್ಮದ್ ಜೀವನೋಪಾಯಕ್ಕಾಗಿ ಮಕ್ಕಾದ ಹೊರವಲಯದಲ್ಲಿ ಕುರಿಗಳನ್ನು ಕಾಯುವ ಕಾಯಕವನ್ನು ಮಾಡತೊಡಗಿದರು. ಕುರಿಗಳ ಮಂದೆಯೊಂದಿಗೆ ಅವರು ವಿಶಾಲ ಮರುಭೂಮಿಯಲ್ಲಿ ಸುತ್ತಾಡಿದರು. ನಿಸರ್ಗದ ವಿಸ್ಮಯಗಳನ್ನು ಕಾಣಲು ಮತ್ತು ಪ್ರಕೃತಿಯ ಸೌಂದರ್ಯವನ್ನು ತನ್ಮಯತೆಯಿಂದ ಆಸ್ವಾದಿಸಲು ಇದು ಅವಕಾಶವನ್ನು ಒದಗಿಸಿತು.

ತಮ್ಮ ಬಾಲ್ಯವನ್ನು ಕುರಿ ಕಾಯುವ ಕಾಯಕದಲ್ಲಿ ತೊಡಗಿಸಿದುದಕ್ಕಾಗಿ ಮುಹಮ್ಮದರಿಗೆ ಬಹಳ ಹೆಮ್ಮೆ ಇತ್ತು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿಯುತ್ತಿದ್ದರು:

> "ಅಲ್ಲಾಹನು ಕಳುಹಿಸಿರುವ ಎಲ್ಲಾ ಪ್ರವಾದಿಗಳೂ ಕುರಿಕಾಯುವ ಕೆಲಸವನ್ನು ಮಾಡಿರುವರು. ಪ್ರವಾದಿ ಮೂಸಾ (ಅವರ ಮೇಲೆ ಶಾಂತಿ ಇರಲಿ) ಕುರಿ ಕಾಯುವವರಾಗಿದ್ದರು. ಪ್ರವಾದಿ ದಾವೂದ್ (ಅವರ ಮೇಲೆ ಶಾಂತಿ ಇರಲಿ) ಸಹ ಕುರಿ ಕಾಯುವವರಾಗಿದ್ದರು".

ಕುರಿಗಳ ಮತ್ತು ಒಂಟೆಗಳ ಮಂದೆಯನ್ನು ಕಾಯುವುದು ಕಷ್ಟದ ಕೆಲಸವಾಗಿದೆ. ಈ ಪ್ರಾಣಿಗಳಿಗೆ ತಿಳುವಳಿಕೆವಿಲ್ಲದ ಕಾರಣ, ಇವುಗಳನ್ನು ಒಂದೇ ಕಡೆ ಇರುವಂತೆ ನೋಡಿಕೊಳ್ಳುವುದಕ್ಕೆ ಬಹಳ ತಾಳ್ಮೆ ಸಹನೆಯ ಅಗತ್ಯವಿರುತ್ತದೆ.

ಕುರಿ ಕಾಯುವ ಕಾರ್ಯದಿಂದ ಯುವ ಮುಹಮ್ಮದ್ ಏಕಾಂತತೆಯನ್ನು, ತಾಳ್ಮೆಯನ್ನು, ಧ್ಯಾನ, ಎಚ್ಚರಿಕೆಯಿಂದ ಗಮನಿಸುವುದನ್ನು ಕಲಿತರು. ಪ್ರವಾದಿತ್ವದ ಹೊಣೆಗಾರಿಕೆಯನ್ನು ನಿಭಾಯಿಸಲು ಈ ಗುಣಗಳು ಅತ್ಯಾವಶ್ಯಕವಾಗಿದ್ದವು.

ಈ ಮೊದಲು ಕಂಡಿರುವಂತೆ, ಬಾಲ್ಯದಿಂದಲೇ ಅಲ್ಲಾಹನು ಮುಹಮ್ಮದ್‌ರನ್ನು ಪ್ರವಾದಿತ್ವದ ಕಾರ್ಯಕ್ಕಾಗಿ ವಿವಿಧ ಸಂಜ್ಞೆಗಳ ಮೂಲಕ, ನಿಸರ್ಗದ ಮೂಲಕ ಅಣೆಗೊಳಿಸಿದನು.

# 2

# ಪ್ರವಾದಿತ್ವದ ಸಂಕೇತಗಳು

ಅಬ್ದುಲ್ ಮುತ್ತಲಿಬ್ ತಮ್ಮ ಕೊನೆಯ ಕಾಲದಲ್ಲಿ ಅರ್ಥಿಕವಾಗಿ ಕಷ್ಟದ ಪರಿಸ್ಥಿತಿಯನ್ನು ಎದುರಿಸಿದ್ದರು. ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರ ಚಿಕ್ಕಪ್ಪ ಅಬೂತಾಲಿಬ್‌ರ ಆರ್ಥಿಕ ಪರಿಸ್ಥಿತಿಯೂ ಅಷ್ಟೇನು ಹೇಳಿಕೊಳ್ಳುವಂತಿರಲಿಲ್ಲ. ಈ ಕಾರಣಗಳಿಂದಾಗಿ ಮುಹಮ್ಮದ್ ಚಿಕ್ಕ ಪ್ರಾಯದಲ್ಲಿಯೇ ವ್ಯಾಪಾರದಲ್ಲಿ ತೊಡಗಿದರು. ಈ ರೀತಿ ತಮ್ಮ ಕುಟುಂಬದವರಿಗೆ ಅವರು ನೆರವಾದರು.

ಅಬೂ ತಾಲಿಬ್ ಜೀವನೋಪಾಯಕ್ಕಾಗಿ ವ್ಯಾಪಾರವನ್ನು ನಡೆಸುತ್ತಿದ್ದರು. ಒಮ್ಮೆ ವ್ಯಾಪಾರದ ಕಾರಣ ಅವರಿಗೆ ಸಿರಿಯಾ ದೇಶಕ್ಕೆ ಪ್ರಯಾಣ ಬೆಳೆಸ ಬೇಕಾಯಿತು. ಮುಹಮ್ಮದ್‌ರಿಗೂ ಚಿಕ್ಕಪ್ಪರೊಂದಿಗೆ ಸಿರಿಯಾ ದೇಶಕ್ಕೆ ಪ್ರಯಾಣ ಬೆಳೆಸುವ ಆಸೆಯಾಯಿತು. ಎಳೆಯ ಪ್ರಾಯದ ಕಾರಣ ಪ್ರಯಾಣದಲ್ಲಿ ಜೊತೆಗೊಯ್ಯಲು ಅಬೂತಾಲಿಬ್ ಹಿಂಜರಿದರು. ಆದರೆ ಮುಹಮ್ಮದ್‌ರ ಮೇಲಿನ ಮಮತೆಯಿಂದಾಗಿ ಒಪ್ಪಿಕೊಂಡರು.

ಸಿರಿಯಾದಲ್ಲಿ ಬಸ್ರಾ ಎಂಬ ನಗರದಲ್ಲಿ ಈ ವ್ಯಾಪಾರಿ ತಂಡ ತಂಗಿತು. ಬಸ್ರಾ ನಗರದಲ್ಲಿ ಬಹೀರಾ ಎಂಬ ಓರ್ವ ಕ್ರೈಸ್ತ ಸನ್ಯಾಸಿ ಇದ್ದರು. ಪ್ರಾಚೀನ ಗ್ರಂಥಗಳಲ್ಲಿ ಅಂತಿಮ ಪ್ರವಾದಿಯ ಆಗಮನದ ಬಗ್ಗೆ ಅವರು ಓದಿದ್ದರು. ಕ್ರೈಸ್ತರು, ಯಹೂದಿಯರು ಮತ್ತು ಹುನಫಾ ಸನ್ನಿಹಿತ ಅಂತಿಮ ಪ್ರವಾದಿಯ ಆಗಮನವನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದರು. ಬಹೀರಾ ಸಹ ಅಂತಿಮ ಪ್ರವಾದಿಯ ನಿರೀಕ್ಷೆಯಲ್ಲಿ ದಿನ ದೂಡುತ್ತಿದ್ದರು.

ವ್ಯಾಪಾರಿ ತಂಡದ ಆಗಮನವನ್ನು ಬಹೀರಾ ದೂರದಿಂದಲೇ ಗಮನಿಸಿದರು. ಒಂದು ಮೋಡವು ಈ ತಂಡವನ್ನು ಹಿಂಬಾಲಿಸುತ್ತಾ ಸೂರ್ಯನಿಂದ ಇವರನ್ನು ರಕ್ಷಿಸುತ್ತಿದ್ದುದನ್ನೂ ಅವರು ಗಮನಿಸಿದರು.

ವಿವರಗಳನ್ನು ಪಡೆಯಲಿಕ್ಕಾಗಿ ಬಹೀರಾ ವ್ಯಾಪಾರಿ ತಂಡವನ್ನು ಔತಣಕ್ಕೆ ಆಹ್ವಾನಿಸುತ್ತಾರೆ. ಮುಹಮ್ಮದ್‌ರನ್ನು ತದೇಕ ಚಿತ್ತದಿಂದ ನೋಡುತ್ತಾರೆ. ಅವರನ್ನು ಪಕ್ಕಕ್ಕೆ ಕರೆದು ಅವರ ಕುಟುಂಬದ ಬಗ್ಗೆ, ಅವರ ವಿಚಾರಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಕೊನೆಗೆ ಮುಹಮ್ಮದ್‌ರಿಗೆ ಅವರ ಬೆನ್ನು ತೋರಿಸಲು ವಿನಂತಿಸುತ್ತಾರೆ. ಬೆನ್ನಿನ ಮೇಲೆ ಪ್ರವಾದಿಯ ಮೊಹರನ್ನು ಕಾಣುತ್ತಾರೆ. ಮುಹಮ್ಮದ್‌ರಲ್ಲಿ ಪ್ರವಾದಿತ್ವದ ಕುರುಹುಗಳನ್ನು, ಅವರು ಅಂತಿಮ ಪ್ರವಾದಿಯಾಗಿರುವುದನ್ನು ಬಹೀರಾ ಕೂಡಲೇ ಕಂಡುಕೊಳ್ಳುತ್ತಾರೆ.

ಬಹೀರಾ ಅಬೂತಾಲಿಬ್‌ರನ್ನು ಪ್ರಶ್ನಿಸುತ್ತಾರೆ "ಈ ಮಗುವಿನೊಂದಿಗೆ ನಿಮ್ಮ ಸಂಬಂಧವೇನು?" ಅಬೂತಾಲಿಬ್, "ಇವನು ನನ್ನ ಮಗ" ಎಂದು ಉತ್ತರಿಸುತ್ತಾರೆ. ಅದಕ್ಕೆ ಬಹೀರಾ "ಇದು ಸಾಧ್ಯವಿಲ್ಲ. ಈ ಮಗುವಿನ ತಂದೆ ಜೀವಂತವಿರಲು ಸಾಧ್ಯವಿಲ್ಲ"ವೆನ್ನುತ್ತಾರೆ.

ಆಗ ಅಬೂತಾಲಿಬ್ ಈ ಮಗುವಿನ ತಂದೆ ನಿಧನ ಹೊಂದಿರುವ ವಿಷಯವನ್ನು ತಿಳಿಸುತ್ತಾರೆ. ಬಹೀರಾ, "ಈ ಜಗತ್ತಿನ ಸೃಷ್ಟಿಕರ್ತನು ಈ ಮಗುವಿಗೆ ಸಂದೇಶವನ್ನು ನೀಡಲಿದ್ದು ಅದು ಇಡಿಯ ಲೋಕಕ್ಕೆ ಕರುಣೆಯಾಗಿರುವುದು" ಎಂದರು. ಇದನ್ನು ಕೇಳಿ ಅಬೂತಾಲಿಬ್ ಆಶ್ಚರ್ಯ ಚಕಿತರಾಗಿ, "ಅದು ನಿಮಗೆ ಹೇಗೆ ತಿಳಿಯಿತು" ಎಂದು ಪ್ರಶ್ನಿಸಿದರು. ಬಹೀರಾ ಉತ್ತರಿಸಿದರು,

"ನೀವು ಅಕಬಾದ ದಿಕ್ಕಿನಿಂದ ಬರುತ್ತಿದ್ದಾಗ ಗಿಡ ಮರಗಳು, ಬಂಡೆಗಳು ಸಾಷ್ಟಾಂಗವೆರಗುತ್ತಿದ್ದವು. ಅವು ಕೇವಲ ಪ್ರವಾದಿಗೆ ಈ ರೀತಿ ಮಾಡುತ್ತವೆ. ಈ ಮಗುವಿನ ಭುಜದ ಕೆಳಗೆ ಪ್ರವಾದಿಯ ಮೊಹರು ಇದೆ. ಇದರಿಂದಲೂ ನಾನು ಈ ಮಗು ಮುಂದೆ ಪ್ರವಾದಿಯಾಗಲಿದೆ ಎಂಬುದನ್ನು ತಿಳಿಯಬಲ್ಲೆ" ಎಂದರು.

ಬಹೀರಾ ಅಬೂತಾಲಿಬ್‌ರಿಗೆ ಮುಹಮ್ಮದ್‌ರನ್ನು ಕೂಡಲೇ ಮಕ್ಕಾ ವಾಪಸ್ಸು ಕಳುಹಿಸಲು ಸೂಚಿಸಿದರು.

"ಈ ಮಗುವನ್ನು ಯಾರಾದರೂ ಗುರುತಿಸಿದರೆ ಖಂಡಿತ ಅದಕ್ಕೆ ಕೇಡು ಉಂಟು ಮಾಡುವರು".

ಅಬೂ ತಾಲಿಬ್ ಇದನ್ನು ಕೇಳಿ ಕೂಡಲೇ ಮುಹಮ್ಮದ್‌ರನ್ನು ಕೆಲ ಸೇವಕರೊಂದಿಗೆ ಮಕ್ಕಾ ವಾಪಸ್ಸು ಕಳುಹಿಸಿದರು.

# ಫುಝೂಲ್ ಒಪ್ಪಂದ

ಅನೇಕ ವರ್ಷಗಳ ಕಾಲ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮಕ್ಕಾದ ಹೊರವಲಯದಲ್ಲಿ ಕುರಿಕಾಯುವ ಕೆಲಸವನ್ನು ಮುಂದುವರೆಸಿದರು. ಮಕ್ಕಾದ ಆಗುಹೋಗುಗಳಿಂದ ದೂರವಿದ್ದರು. ಮಕ್ಕಾದಲ್ಲಿ ನಡೆಯುತ್ತಿದ್ದ ವಿವಿಧ ಗೋತ್ರಗಳ ನಡುವಿನ ಯುದ್ಧಗಳಿಂದ, ರಕ್ತಪಾತದಿಂದ ಬೇಸತ್ತಿದ್ದರು.

ಮುಹಮ್ಮದ್ 15 ವರ್ಷ ಪ್ರಾಯದವರಾಗಿದ್ದಾಗ ಹಜ್ಜ್‌ನ ಕಾಲದಲ್ಲಿ ಕುರೈಶ್ ಮತ್ತು ಹವಾಝಿನ್ ಪಂಗಡಗಳ ನಡುವೆ ಸ್ಥಾನೀಯ ಯುದ್ಧ ನಡೆಯಿತು. ಮಕ್ಕಾದ ಸಂಪ್ರದಾಯದಂತೆ ಹಜ್ಜ್‌ನ ಕಾಲದಲ್ಲಿ ಯಾವುದೇ ಸಂಘರ್ಷ, ಯುದ್ಧಗಳು, ಆಕ್ರಮಣಗಳು, ನಿಷಿದ್ಧವಾಗಿದ್ದವು. ಆದಾಗ್ಯೂ ಈ ಯುದ್ಧವು ನಾಲ್ಕು ವರ್ಷಗಳ ಕಾಲ ನಡೆದು ಅಪಾರ ಹಾನಿ ಇತ್ತಂಡಗಳಿಗೆ ಆಯಿತು. ಯುದ್ಧಗಳಿಂದಾಗಿ ಜನರು ಬೇಸತ್ತಿದ್ದರು.

ನಿರರ್ಥಕ ಯುದ್ಧಗಳಿಂದಾಗಿ ಯುವ ಮುಹಮ್ಮದ್ ಬೇಸರಗೊಂಡರು. ಅನೇಕ ಜನರೂ ಈ ರೀತಿ ಯುದ್ಧಗಳು ಸಂಭವಿಸದಂತೆ ತಡೆಯಲು ಏನಾದರೂ ಕ್ರಮ ಕೈಗೊಳ್ಳಬೇಕೆಂದು ಯೋಚಿಸತೊಡಗಿದರು.

ಮೋಸ, ವಂಚನೆಯೂ ನಿರಂತರವಾಗಿ ನಡೆಯುತ್ತಿತ್ತು. ಹೊರ ಪ್ರದೇಶದಿಂದ ಬರುವ ವರ್ತಕರಿಗೆ ವಂಚನೆ ಮಾಡಲಾಗುತ್ತಿತ್ತು. ಒಮ್ಮೆ ಯಮನ್ ದೇಶದಿಂದ ಬಂದ ವರ್ತಕನೊಂದಿಗೂ ಇದೇ ರೀತಿ ವ್ಯವಹರಿಸಲಾಯಿತು. ಆದರೆ ಈ ವರ್ತಕ ತನ್ನೊಂದಿಗೆ ಆದ ವಂಚನೆಗೆ ಮೌನ ವಹಿಸಲಿಲ್ಲ. ಆತ ಸಾರ್ವಜನಿಕವಾಗಿ ತನಗೆ ಆದ ಮೋಸವನ್ನು ವಿವರಿಸಿ, ತನಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ವಿನಂತಿಸಿದನು. ಮಕ್ಕಾದ ಕುಲೀನ ಗೋತ್ರದವರಾಗಿದ್ದ ಕುರೈಶ್ ಸರದಾರರಿಗೂ ತನಗೆ ನ್ಯಾಯ ದೊರಕಿಸಿ ಕೊಡುವಂತೆ ಕೋರಿಕೊಂಡನು.

ಯಮನ್ ನಗರದ ವರ್ತಕನ ಮೊರೆಯನ್ನು ಆಲಿಸಿ ಕುರೈಶ್‌ನ ಕೆಲ ಸರದಾರರು ಕಅಬ ಭವನದ ಬಳಿ ಕುಳಿತು ಸಮಾಲೋಚನೆ ನಡೆಸುತ್ತಾರೆ. ನಂತರ ಹಾಶಿಮ್, ಝುಹ್ರ, ಅಸದ್ ಗೋತ್ರಗಳ ಸರದಾರರನ್ನು ಅಬ್ದುಲ್ ಮುತ್ತಲಿಬ್‌ರ ಪುತ್ರ ಝುಬೈರ್ ವಯೋವೃದ್ಧರಾದ ಅಬ್ದುಲ್ಲಾ ಬಿನ್ ಜುದ್‌ಆನ್‌ರ ಮನೆಯಲ್ಲಿ ಸಭೆ ಸೇರಿಸುತ್ತಾರೆ. ದೀರ್ಘ ವಿಚಾರ ವಿನಿಮಯದ ಬಳಿಕ ವಚನ ಭಂಗ, ವಂಚನೆ, ವಿಶ್ವಾಸ ದ್ರೋಹ ಇಂತಹ ಘಟನೆಗಳು ಇನ್ನು ಮುಂದೆ ಸಂಭವಿಸದಂತೆ ಮಾಡಲು ಹಾಗೂ ಈ ರೀತಿ ಯಾರಾದರೂ ಮಾಡಿದರೆ ಅವರೊಂದಿಗೆ ಕಠಿಣವಾಗಿ ವ್ಯವಹರಿಸಲು ಒಂದು ಸಂಘವನ್ನು ಕಟ್ಟಿಕೊಳ್ಳುವ ಮಾತು ಬಂದಿತು. ಎಲ್ಲರೂ ಒಂದು ಒಪ್ಪಂದವನ್ನು

ಸಿದ್ಧಗೊಳಿಸ ಬೇಕೆಂದು ತೀರ್ಮಾನಿಸಿದರು. ಈ ಒಪ್ಪಂದಕ್ಕೆ 'ಹಲ್‌ಫುಲ್ ಫುಝೂಲ್' ಅಥವಾ ಫುಝೂಲ್ ಒಪ್ಪಂದವೆಂದು ಹೆಸರಿಡಲಾಯಿತು. ಯುವ ಮುಹಮ್ಮದ್ ಮತ್ತು ಅಬೂಬಕರ್ ಸಹ ಈ ಒಪ್ಪಂದದಲ್ಲಿ ಪಾಲುಗೊಳ್ಳುತ್ತಾರೆ.

ಅನೇಕ ವರ್ಷಗಳು ಗತಿಸಿದ ನಂತರವೂ ಮುಹಮ್ಮದ್ ಫುಝೂಲ್ ಒಪ್ಪಂದವನ್ನು, ಅದರೊಳಗಿನ ಅಂಶಗಳನ್ನು ಸ್ಮರಿಸುತ್ತಿದ್ದರು.

"ಅಲ್ಲಾಹನಾಣೆ, ಈಗಲೂ ನನಗೆ ಇಂತಹ ಒಪ್ಪಂದಗಳಲ್ಲಿ ಪಾಲುಗೊಳ್ಳಲು ಆಹ್ವಾನಿಸಿದರೆ ಖಂಡಿತವಾಗಿಯೂ ನಾನು ಪಾಲುಗೊಳ್ಳುವೆ" ಎನ್ನುತ್ತಿದ್ದರು.

ನ್ಯಾಯ ಮತ್ತು ದೌರ್ಜನ್ಯಕ್ಕೆ ಒಳಗಾದವರ ಸಹಾಯಾರ್ಥ ಬರುವಂತಹ ತತ್ವಗಳು ಇಸ್ಲಾಮ್‌ನ ಕಡೆಯಿಂದ ಅಥವಾ ಇತರ ಯಾವುದೇ ಭಾಗದಿಂದ ಬರಲಿ, ಇಂತಹ ತತ್ವಗಳನ್ನು ಸ್ವಾಗತಿಸಬೇಕು ಎಂಬುದು ಮುಹಮ್ಮದ್‌ರ ನಿಲುವಾಗಿತ್ತು.

## ಸತ್ಯವಂತ

ಕುರ್‌ಆನ್ ಅವತೀರ್ಣದ ಮೊದಲು ಮತ್ತು ನಂತರದ ಪ್ರವಾದಿ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರ ಜೀವನ ಮೇಲಿನ ವಿಶ್ಲೇಷಣೆಗೆ ಸಾಕ್ಷಿಯಾಗಿದೆ. ನೈತಿಕ ಮೌಲ್ಯಗಳ ಅಗತ್ಯತೆಯನ್ನು, ಅವುಗಳ ಮಹತ್ವವನ್ನು ಮುಹಮ್ಮದ್ ಸದಾ ಪ್ರತಿಪಾದಿಸುತ್ತಿದ್ದರು.

ಕೆಲ ವರ್ಷಗಳ ಕುರಿ ಮೇಯಿಸುವ ಕೆಲಸದ ನಂತರ ಮುಹಮ್ಮದ್, ವ್ಯಾಪಾರದಲ್ಲಿ ತೊಡಗಿದರು. ವ್ಯಾಪಾರ ಮಾಡುವಾಗ ಅವರು ತೋರುತ್ತಿದ್ದ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯಿಂದ ಇಡಿಯ ಅರಬ್ ಪ್ರದೇಶದಲ್ಲಿ ಪ್ರಖ್ಯಾತರಾದರು.

ಮುಹಮ್ಮದ್ ಯೌವನಾವಸ್ಥೆಯನ್ನು ತಲುಪಿದಾಗ ಅರಬ್ ಸಮಾಜದಲ್ಲಿ ಪ್ರಚಲಿತವಿದ್ದ ಸಕಲ ಕೇಡುಗಳಿಂದ ಅಲ್ಲಾಹನ ನೇರ ರಕ್ಷಣೆಯಿಂದಾಗಿ ದೂರವಿದ್ದರು. ಅವರು ಸರಳ ಜೀವಿಯಾಗಿದ್ದರು. ದುರಭಿಮಾನ, ಒಣಪ್ರತಿಷ್ಠೆ ಮೊದಲಾದವುಗಳಿಂದ ಮುಕ್ತರಾಗಿದ್ದರು. ಸಮಾಜದ ದುರ್ಬಲರು, ವಿಧವೆಯರು, ನಿರ್ಗತಿಕರು ಮತ್ತು ಅನಾಥರಿಗೆ ಅನುಕಂಪ ತೋರುತ್ತಿದ್ದರು. ಅವರಿಗೆ ನೆರವಿನ ಹಸ್ತವನ್ನು ಚಾಚುತ್ತಿದ್ದರು. ಸತ್ಯವಂತಿಕೆ, ಪ್ರಾಮಾಣಿಕತೆ, ಉತ್ಕೃಷ್ಟ ನಡವಳಿಕೆಯಿಂದಾಗಿ ಅರಬ್ ಪ್ರದೇಶದಲ್ಲಿ ಪ್ರಖ್ಯಾತರಾಗಿದ್ದರು.

## ನಂಬಿಕಸ್ತ

ಆಗಿನ ಅರಬ್ ಪ್ರದೇಶದಲ್ಲಿ ಯುವಕರು ತೋರುತ್ತಿದ್ದ ಅಸಭ್ಯ ವರ್ತನೆಯಿಂದ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮಾರು ದೂರವಿದ್ದರು. ಪರಸ್ಪರ ಕಾದಾಟ, ಜಗಳಗಳಲ್ಲೂ ಅವರು ಭಾಗವಹಿಸುತ್ತಿರಲಿಲ್ಲ. ಅವರು ಎಂದೂ ಯಾರಿಗೂ ಅವಾಚ್ಯ ಪದಗಳನ್ನು ಬಳಸಿರಲಿಲ್ಲ ಮತ್ತು ನಿಂದಿಸಿರಲಿಲ್ಲ. ಅವರ ಸತ್ಯತೆ ಮತ್ತು ಪ್ರಾಮಾಣಿಕತೆಯನ್ನು ಕಂಡು ಜನರು ಅವರಿಗೆ ಸಾದಿಕ್ (ಸತ್ಯವಂತ) ಮತ್ತು ಅಮೀನ್ (ಪ್ರಾಮಾಣಿಕ) ಎಂಬ ಬಿರುದುಗಳನ್ನು ನೀಡಿದ್ದರು. ಕಲಹಗಳಲ್ಲಿ ನಿರತರಾಗಿರುತ್ತಿದ್ದ ಉಭಯ ಪಕ್ಷಗಳ ನಡುವೆ ಸಂಧಾನಕ್ಕಾಗಿ ಮುಹಮ್ಮದ್‌ರನ್ನು ಮಧ್ಯವರ್ತಿ ಯನ್ನಾಗಿಸಲಾಗುತ್ತಿತ್ತು. ಅಲಿ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಬಿನ್ ಅಬೂತಾಲಿಬ್ **"ಮುಹಮ್ಮದ್‌ರ ಬಳಿ ಬರುತ್ತಿದ್ದವರೆಲ್ಲರೂ ಅವರಿಂದ ಪ್ರಭಾವಿತರಾಗಿ ಅವರನ್ನು ಪ್ರೀತಿಸಲಾರಂಭಿಸುತ್ತಿದ್ದರು"** ಎಂದಿರುವರು.

## ವಿವಾಹ

ಖದೀಜಾ ಓರ್ವ ವಿಧವೆ ಮತ್ತು ಶ್ರೀಮಂತ ವ್ಯಾಪಾರಸ್ಥೆಯಾಗಿದ್ದರು. ಕುಲೀನ ಮನೆತನಕ್ಕೆ ಸೇರಿದ ಅವರು ತಮ್ಮ ಸದ್ಗುಣಗಳಿಂದ ಮಕ್ಕಾದಲ್ಲಿ ಪ್ರಖ್ಯಾತರಾಗಿದ್ದರು. ಕ್ರೈಸ್ತ ಸನ್ಯಾಸಿ ವರಕ ಬಿನ್ ನೌಫಲ್‌ರ ಸೋದರ ಸಂಬಂಧಿಯಾಗಿದ್ದರು. ಯುವ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರ ಸತ್ಯತೆ, ಪ್ರಾಮಾಣಿಕತೆ, ನ್ಯಾಯ ತತ್ಪರತೆಯ ಬಗ್ಗೆ ಕೇಳಿ ಪ್ರಭಾವಿತರಾಗಿದ್ದರು. ತಮ್ಮ ದೂತನ ಮುಖಾಂತರ ಮುಹಮ್ಮದ್‌ರಿಗೆ ತಮ್ಮ ಸರಕುಗಳನ್ನು ಒಯ್ದು ಸಿರಿಯಾ ದೇಶದಲ್ಲಿ ಮಾರಾಟ ಮಾಡಲು ಸಂದೇಶ ಕಳುಹಿಸಿದರು. ಮುಹಮ್ಮದ್ ಯಶಸ್ವಿಯಾಗಿ ಅವರ ಸರಕುಗಳನ್ನು ಮಾರಾಟ ಮಾಡಿದರೆ ಅವರಿಗೆ ಇಮ್ಮಡಿ ದಳ್ಳಾಳಿ ಹಣವನ್ನು ನೀಡುವುದಾಗಿ ತಿಳಿಸಿದರು. ಮುಹಮ್ಮದ್ ಈ ಪ್ರಸ್ತಾವನೆಯನ್ನು ಒಪ್ಪಿದರು. ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ತಮ್ಮ ನಂಬಿಗಸ್ತ ಸೇವಕ ಮೈಸರನನ್ನು ಮುಹಮ್ಮದ್‌ರ ಜೊತೆಯಲ್ಲಿ ಕಳುಹಿಸಿ ಕೊಡುತ್ತಾರೆ. ಮುಹಮ್ಮದ್ ಚತುರತೆಯಿಂದ ವ್ಯಾಪಾರದಲ್ಲಿ ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ನಿರೀಕ್ಷೆಗಿಂತ ಇಮ್ಮಡಿ ಲಾಭ ಬರುವಂತೆ ಮಾಡುತ್ತಾರೆ.

ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮುಹಮ್ಮದ್ ಸಿರಿಯಾ ದೇಶದಿಂದ ಹಿಂದಿರುಗಿದ ನಂತರ ಸೇವಕ ಮೈಸರನಿಂದ ಪ್ರಯಾಣದ ವಿವರಗಳನ್ನೆಲ್ಲ ಪಡೆಯುತ್ತಾರೆ. ಮೈಸರ ಮುಹಮ್ಮದ್‌ರ ಪ್ರಾಮಾಣಿಕತೆಯನ್ನು ಅವರ ಸದ್ಗುಣಗಳನ್ನು

ಹಾಡಿ ಹೊಗಳುತ್ತಾರೆ. ಮುಹಮ್ಮದ್ ಇತರೆಲ್ಲಾ ಜನರಿಂದ ವಿಶಿಷ್ಟರಾಗಿರುವ ಬಗ್ಗೆ ಖದೀಜಾರಿಗೆ ತಿಳಿಸುತ್ತಾರೆ. ಇದರಿಂದ ಪ್ರಭಾವಿತರಾಗಿ ಖದೀಜಾ ತಮ್ಮ ಸ್ನೇಹಿತೆ ನಫೀಸಾ ಮೂಲಕ ಮುಹಮ್ಮದ್‌ರಿಗೆ ವಿವಾಹ ಪ್ರಸ್ತಾಪವನ್ನು ಕಳುಹಿಸಿಕೊಡುತ್ತಾರೆ. ಮುಹಮ್ಮದ್‌ರಿಗೆ ಆಗ 25 ವರ್ಷ ಪ್ರಾಯವಾಗಿದ್ದು, ಖದೀಜಾಕ್ಕಿಂತ 15 ವರ್ಷ ಕಿರಿಯರಾಗಿದ್ದರು.

ನಫೀಸಾ ಮುಹಮ್ಮದ್‌ರ ಮುಂದೆ ಖದೀಜಾರ ಮದುವೆಯ ಪ್ರಸ್ತಾಪವಿಡುತ್ತಾರೆ. ಮುಹಮ್ಮದ್ ಈ ಪ್ರಸ್ತಾಪದಿಂದ ಆಶ್ಚರ್ಯ ಚಕಿತರಾಗುತ್ತಾರೆ. ಅವರು ಕನಸು ಮನಸ್ಸಿನಲ್ಲೂ ಇದನ್ನು ಎಣಿಸಿರಲಿಲ್ಲ. ಮಕ್ಕಾದ ಅನೇಕ ಸರದಾರರ ಪ್ರಸ್ತಾಪಗಳನ್ನು ತಿರಸ್ಕರಿಸಿದ ಖದೀಜಾ, ತಮ್ಮನ್ನು ವರಿಸಲು ಮುಂದೆ ಬಂದುದು ಅವರನ್ನು ವಿಸ್ಮಯಗೊಳಿಸಿತ್ತು. ಮುಹಮ್ಮದ್‌ರಿಗೆ ಖದೀಜಾರ ಪಾವನ ಚಾರಿತ್ರ್ಯ, ಸಹನಶೀಲತೆ ಮತ್ತು ಧೀಮಂತಿಕೆ ಬಹಳ ಮೆಚ್ಚುಗೆಯಾಗಿತ್ತು. ಆದರೆ ಖದೀಜಾ ಎರಡು ಪತಿಯಂದಿರನ್ನು ಕಳಕೊಂಡ ಮಹಿಳೆ ಮತ್ತು 3 ಮಕ್ಕಳ ತಾಯಿ ಎಂಬ ನೆಲೆಯಲ್ಲಿ ಮುಹಮ್ಮದ್ ಚಿಂತಿತರಾಗಿದ್ದರು. ಅಬೂ ತಾಲಿಬ್ ತಮ್ಮ ಸೋದರ–ಸೋದರಿಯರೊಂದಿಗೆ ಸಮಾಲೋಚಿಸಿ ಖದೀಜಾರ ಚಿಕ್ಕಪ್ಪ ಅಮ್ರ್ ಬಿನ್ ಅಸದ್‌ರ ಮುಂದೆ ಮದುವೆಯ ಪ್ರಸ್ತಾಪ ಇಡುತ್ತಾರೆ. ಅವರು ಅದನ್ನು ಕೂಡಲೇ ಅಂಗೀಕರಿಸುತ್ತಾರೆ. ಖದೀಜಾರ ಸೋದರರಿಗೂ ಇದರಿಂದ ಬಹಳ ಸಂತೋಷವಾಗುತ್ತದೆ. ಖದೀಜಾ 65ನೇ ವಯಸ್ಸಿನಲ್ಲಿ ನಿಧನರಾಗುವವರೆಗೆ ಮುಹಮ್ಮದ್‌ರ ಏಕೈಕ ಪತ್ನಿಯಾಗಿದ್ದರು.

ಈ ವಿವಾಹ ನೆರವೇರಿಸಲ್ಪಟ್ಟಾಗ ಖದೀಜಾರಿಗೆ 40 ವರ್ಷ ಪ್ರಾಯವಾಗಿತ್ತೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಇತರ ಕೆಲವರು ಅವರು ಇದಕ್ಕಿಂತ ಕಿರಿಯರಾಗಿದ್ದರು ಎನ್ನುತ್ತಾರೆ. ಉದಾಹರಣೆಗೆ ಅಬ್ದುಲ್ಲಾ ಬಿನ್ ಮಸೂದ್. ಖದೀಜಾರಿಗೆ 28 ವರ್ಷ ವರ್ಷ ಪ್ರಾಯವಾಗಿತ್ತೆಂದು ಅಭಿಪ್ರಾಯಪಡುತ್ತಾರೆ ಮತ್ತು ಇದು ಸರಿಯೆನಿಸುತ್ತದೆ. ಏಕೆಂದರೆ ವಿವಾಹದ ಬಳಿಕ ಖದೀಜಾ ಆರು ಮಕ್ಕಳಿಗೆ ಜನ್ಮ ನೀಡಿದ್ದರು. ಮೊದಲ ಮಗು ಕಾಸಿಮ್ ಎರಡು ವರ್ಷ ಪ್ರಾಯದಲ್ಲಿ ನಿಧನ ಹೊಂದಿದ್ದರು. ನಂತರ ಝೈನಬ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ರುಖಯ್ಯ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಉಮ್ಮೆ ಕುಲ್ಸೂಮ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಫಾತಿಮಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮತ್ತು ಕೊನೆಯದಾಗಿ ಅಬ್ದುಲ್ಲಾರಿಗೆ ಜನ್ಮವಿತ್ತಿದ್ದರು. ಅಬ್ದುಲ್ಲಾ ಸಹ ಎರಡು ವರ್ಷ ಪ್ರಾಯದವರಾಗುವ ಮೊದಲೇ ಅಸು ನೀಗಿದ್ದರು.

# ದತ್ತು ಮಗ

ಮುಹಮ್ಮದ್‌ರ ದತ್ತುಮಗ ಝೈದ್ ಬಿನ್ ಹಾರಿಸ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಕಥೆ ಬಹಳ ಕುತೂಹಲಕಾರಿಯಾಗಿದೆ. ಝೈದ್‌ರನ್ನು ಒಂದು ಯುದ್ಧದಲ್ಲಿ ಸೆರೆ ಹಿಡಿಯಲಾಗಿತ್ತು. ನಂತರ ಒಬ್ಬರು ಇನ್ನೊಬ್ಬರಿಗಂತೆ, ಅನೇಕ ಸಲ ಅವರನ್ನು ಮಾರಲಾಗಿತ್ತು. ಕೊನೆಗೆ ಖದೀಜಾ ಅವರನ್ನು ಖರೀದಿಸಿ ಮುಹಮ್ಮದ್‌ರಿಗೆ ನೀಡಿದ್ದರು. ಝೈದ್ ಮುಹಮ್ಮದ್‌ರ ಸೇವೆಯಲ್ಲಿ ಅನೇಕ ವರ್ಷಗಳ ಕಾಲ ಇದ್ದರು. ಕೊನೆಗೂ ಅವರ ಕುಟುಂಬದವರಿಗೆ ಝೈದ್ ಮಕ್ಕಾದಲ್ಲಿರುವ ವಿಷಯ ತಿಳಿಯಿತು. ಝೈದ್‌ರ ತಂದೆ ಮತ್ತು ಸಂಬಂಧಿಕರೋರ್ವರು ಝೈದ್‌ರನ್ನು ಕರೆತರಲು ಮಕ್ಕಾ ಪ್ರಯಾಣ ಬೆಳೆಸಿದರು. ಮಕ್ಕಾ ತಲುಪಿದಾಗ ಝೈದ್ ಮುಹಮ್ಮದ್‌ರ ಗುಲಾಮರಾಗಿರುವ ವಿಷಯ ತಿಳಿಯಿತು. ಅವರು ಮುಹಮ್ಮದ್‌ರ ಬಳಿ ಬಂದು ಝೈದ್‌ರನ್ನು ಹಣ ಪಡೆದು ಬಿಡುಗಡೆಗೊಳಿಸುವಂತೆ ಮುಹಮ್ಮದ್‌ರನ್ನು ವಿನಂತಿಸಿದರು. ಮುಹಮ್ಮದ್ ಝೈದ್ ತಮ್ಮ ಊರಿಗೆ ಹಿಂತಿರುಗುವ ನಿರ್ಧಾರವನ್ನು ಝೈದ್‌ರಿಗೇ ಬಿಟ್ಟು ಕೊಡಬೇಕೆಂದು ತಿಳಿಸಿದರು. ಝೈದ್ ಊರಿಗೆ ಮರಳ ಬೇಕೆಂದು ಬಯಸಿದರೆ, ಯಾವುದೇ ಪರಿಹಾರ ಪಡೆಯದೇ ಅವರನ್ನು ಸ್ವತಂತ್ರಗೊಳಿಸುವುದಾಗಿಯೂ, ಒಂದು ವೇಳೆ ಝೈದ್ ಊರಿಗೆ ಮರಳಲು ಇಚ್ಛಿಸದಿದ್ದರೆ, ಊರಿಗೆ ಮರಳುವಂತೆ ಅವರನ್ನು ನಿರ್ಬಂಧಿಸಬಾರದೆಂದು ಷರತ್ತನ್ನು ಇಟ್ಟರು. ಝೈದ್‌ರ ತಂದೆ ಮತ್ತು ಸಂಬಂಧಿಕ ಮುಹಮ್ಮದ್‌ರ ಮಾತು ಬಹಳ ನ್ಯಾಯೋಚಿತವಾಗಿರುವುದಾಗಿ ಹೇಳಿ ಅದನ್ನು ಒಪ್ಪಿದರು. ಝೈದ್‌ರಿಗೆ ಅವರ ತಂದೆ, "ಮಗನೇ ನೀನು ನಮ್ಮ ಜೊತೆ ಊರಿಗೆ ಮರಳು" ಎಂದು ಹೇಳಿದಾಗ, ಝೈದ್ ಮುಹಮ್ಮದ್‌ರನ್ನು ಅಗಲಿ ಊರಿಗೆ ಮರಳಲು ನಿರಾಕರಿಸಿದರು. ಅವರು ನುಡಿದರು:

"ಮುಹಮ್ಮದ್‌ರಿಂದ ದೂರವಿರುವುದನ್ನು ನಾನು ಊಹಿಸಲೂ ಸಾಧ್ಯವಿಲ್ಲ. ಇತರ ಯಾವ ಮನುಷ್ಯನಲ್ಲಿಯೂ ಇರದ ಅತ್ಯುತ್ತಮ್ಮ ಗುಣಗಳನ್ನು ನಾನು ಅವರಲ್ಲಿ ಕಂಡಿದ್ದೇನೆ. ಮುಹಮ್ಮದ್‌ರಿಂದ ದೂರನಾಗಿ ಸ್ವತಂತ್ರ ಬಾಳುವೆ ಮಾಡುವುದಕ್ಕಿಂತ ನಾನು ಮುಹಮ್ಮದ್‌ರ ಗುಲಾಮನಾಗಿ ಇರಲು ಬಯಸುತ್ತೇನೆ" ಎಂದು ಉತ್ತರಿಸಿದರು. ಝೈದ್‌ರ ಮಾತನ್ನು ಕೇಳಿದ ಕೂಡಲೇ ಮುಹಮ್ಮದ್ ಝೈದ್‌ರನ್ನು ಸ್ವತಂತ್ರರಾಗಿಸಿರುವುದಾಗಿ, ಅವರನ್ನು ತಮ್ಮ ಮಗನಾಗಿ ಸ್ವೀಕರಿಸುವುದಾಗಿ, ಇನ್ನು ಮುಂದೆ ಝೈದ್, ಝೈದ್ ಬಿನ್ ಮುಹಮ್ಮದ್ ಆಗಿ ಕರೆಯಲ್ಪಡುವರು ಎಂದು ಸಾರ್ವಜನಿಕವಾಗಿ ಘೋಷಿಸಿದರು. ಕುರ್‌ಆನ್, ದತ್ತು ಸ್ವೀಕರಿಸಿದ ಕಾರಣಕ್ಕಾಗಿ ದತ್ತು ಪಡೆಯಲ್ಪಟ್ಟವನ ವಂಶಾವಳಿಯಲ್ಲಿ ಬದಲಾವಣೆ ಯಾಗುವುದಿಲ್ಲವೆಂದೂ, ಆತನನ್ನು

ಆತನ ತಂದೆಯ ವಂಶಾವಳಿಯ ಹೆಸರಿನಲ್ಲಿಯೇ ಕರೆಯಬೇಕೆಂದು ಆದೇಶ ನೀಡುವವರಿಗೆ ಝೈದ್ ಬಿನ್ ಹಾರಿಸ್, ಝೈದ್ ಬಿನ್ ಮುಹಮ್ಮದ್ ಎಂದೇ ಕರೆಯಲ್ಪಡುತ್ತಿದ್ದರು.

> **"**ದತ್ತು ಮಕ್ಕಳನ್ನು ಅವರ ಪಿತರಿಗೆ ಸಂಬಂಧಿಸಿ ಕರೆಯಿರಿ. ಇದು ಅಲ್ಲಾಹನ ಬಳಿ ಹೆಚ್ಚು ನ್ಯಾಯೋಚಿತವಾದ ವಿಷಯವಾಗಿದೆ ಮತ್ತು ನಿಮಗೆ ಅವರ ಪಿತರು ಯಾರೆಂದು ತಿಳಿದಿರದಿದ್ದರೆ ಅವರು ನಿಮ್ಮ ಧರ್ಮ ಸಹೋದರರು ಮತ್ತು ಮಿತ್ರರಾಗಿರುತ್ತಾರೆ. ನೀವು ತಿಳಿಯದೆ ಹೇಳಿದ ಮಾತಿಗಾಗಿ ನಿಮ್ಮ ಮೇಲೇನೂ ದೋಷವಿಲ್ಲ. ಆದರೂ ನೀವು ಉದ್ದೇಶ ಪೂರ್ವಕವಾಗಿ ಹೇಳಿದ ಮಾತಿನ ಬಗ್ಗೆ ಖಂಡಿತ ದೋಷವಿದೆ. ಅಲ್ಲಾಹ್ ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ**"** (ಪವಿತ್ರ ಕುರ್‌ಆನ್ 33:4–5)

ಝೈದ್‌ರ ವೃತ್ತಾಂತ, ಮುಹಮ್ಮದ್‌ರ ಚಾರಿತ್ರ್ಯದ ಮತ್ತೊಂದು ಮುಖವನ್ನು ನಮ್ಮ ಮುಂದಿರಿಸುತ್ತದೆ. ಪ್ರವಾದಿತ್ವದ ಮೊದಲೇ, ಮುಹಮ್ಮದ್ ಸರಳ ಜೀವಿಯೂ, ವಿನಯಶೀಲರೂ ಆಗಿದ್ದರು. ವ್ಯಾಪಾರದಲ್ಲಿ ಪ್ರಾಮಾಣಿಕ ಮತ್ತು ಚತುರರಾಗಿದ್ದರು. ಸಮಾಜದ ದೀನ ದಲಿತರಿಗೆ, ದುರ್ಬಲರಿಗೆ ಅನುಕಂಪ ತೋರುತ್ತಿದ್ದರು. ಅವರಿಗೆ ನೆರವಿನ ಹಸ್ತವನ್ನು ಚಾಚುತ್ತಿದ್ದರು. ಸೇವಕರು, ಗುಲಾಮರೊಂದಿಗೆ ಪ್ರೀತಿಯಿಂದ, ಗೌರವದಿಂದ ನಡೆದುಕೊಳ್ಳುತ್ತಿದ್ದರು. ಈ ಕಾರಣದಿಂದ ಎಲ್ಲರೂ ಅವರನ್ನು ಬಹಳ ಪ್ರೀತಿಸುತ್ತಿದ್ದರು. ಅಮೀನ್ ಮತ್ತು ಸಾದಿಕ್ ಬಿರುದುಗಳಿಂದ ಪ್ರಖ್ಯಾತರಾಗಿದ್ದರು. ಇತರೆಲ್ಲರಿಗಿಂತ ಅವರು ವಿಶಿಷ್ಟರಾಗಿದ್ದರು.

## ಚಾಣಾಕ್ಷ ತೀರ್ಪುಗಾರ

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ವಿವಿಧ ಬುಡಕಟ್ಟುಗಳ ನಡುವಿನ ಜಗಳಗಳನ್ನು ಬಹಳ ಚಾಕಕತ್ಯೆಯಿಂದ ಪರಿಹರಿಸುತ್ತಿದ್ದರು. ಎಂತಹ ಕ್ಲಿಷ್ಟ ಸಮಸ್ಯೆಗಳಿದ್ದರೂ ಅದನ್ನು ಜಾಣತನದಿಂದ, ಯಾರ ಮನಸ್ಸು ನೋಯದಂತೆ ನಿಭಾಯಿಸುತ್ತಿದ್ದರು.

ಕಅಬಾ ಭವನದ ಸುತ್ತಮುತ್ತ ಬೆಟ್ಟಗುಡ್ಡಗಳಿದ್ದು, ಜೋರಾಗಿ ಮಳೆ ಆದಾಗ ನೀರು ಹರಿದು ಬಂದು ಮಕ್ಕಾ ಪಟ್ಟಣದಲ್ಲಿ ಸೇರುತ್ತಿತ್ತು. ಇದರಿಂದಾಗಿ ನೆರೆಯಂತಹ ಪರಿಸ್ಥಿತಿ ಸೃಷ್ಟಿಯಾಗುತ್ತಿತ್ತು. ಅನೇಕ ಸಲ ಇಂತಹ ಪ್ರವಾಹ ಬಂದಿದ್ದರಿಂದ ಕಅಬಾದ ಗೋಡೆಗಳು ಶಿಥಿಲಗೊಂಡು ಅದರ ಗೋಡೆಗಳು ಬಿರುಕುಗೊಂಡಿದ್ದವು. ಕಅಬಾದ ಅಡಿಪಾಯವೂ ದುರ್ಬಲಗೊಂಡಿತ್ತು. ಈ ಕಾರಣದಿಂದಾಗಿ, ಕಅಬಾವನ್ನು ಸಂಪೂರ್ಣವಾಗಿ ಪುನರ್ ನಿರ್ಮಾಣ ಮಾಡಬೇಕೆಂದು ಕುರೈಶ್ ಸರದಾರರು ಒಮ್ಮತದ ತೀರ್ಮಾನಕ್ಕೆ ಬರುತ್ತಾರೆ.

ಕುರೈಶರ ವಿಭಿನ್ನ ಗೋತ್ರಗಳು ತಮ್ಮ ತಮ್ಮ ಪಾಲಿನ ಶ್ರಮದಾನಕ್ಕೆ ಸಿದ್ಧರಾದರು. ಕಅಬಾದ ಗೋಡೆಗಳನ್ನೂ ಅಸ್ತಿವಾರವನ್ನೂ ಪೂರ್ಣವಾಗಿ ಬದಲಿಸಿ ಹೊಸತಾಗಿ ನಿರ್ಮಿಸಲಾಯಿತು. ಕಅಬಾದ ಗೋಡೆಗಳು ಆಳೆತ್ತರಕ್ಕೆ ಏರಿದಾಗ 'ಹಜರುಲ್ ಅಸ್ವದ್' ಕಪ್ಪು ಶಿಲೆಯನ್ನು ಅದರ ಸ್ಥಾನದಲ್ಲಿ ಯಾರು ಇಡಬೇಕು ಎಂಬ ವಿಷಯದ ಬಗ್ಗೆ ವಿವಿಧ ಗೋತ್ರಗಳ ನಡುವೆ ವಿವಾದ ಏರ್ಪಟ್ಟಿತು. ಪ್ರತಿಯೊಂದು ಗೋತ್ರವು, ಈ ಪ್ರತಿಷ್ಠೆಯ ಕೆಲಸ ತನ್ನದಾಗಬೇಕೆಂದು ಹಠ ಹಿಡಿಯಿತು. ಮಾತಿಗೆ ಮಾತು ಬೆಳೆದು ವಿವಿಧ ಗೋತ್ರಗಳು ಹೋರಾಟಕ್ಕೂ ಸಜ್ಜಾದವು. ಖಡ್ಗಗಳು ಒರೆಯಿಂದ ಹೊರಬಂದವು. ವಯೋವೃದ್ಧ ಕುರೈಶ್ ಸರದಾರ ಅಬೂ ಉಮಯ್ಯ ಬಿನ್ ಮುಗೈರ ಈ ಜಟಿಲ ಸಮಸ್ಯೆಯನ್ನು ಪರಿಹರಿಸಲು ಒಂದು ಉಪಾಯವನ್ನು ಸೂಚಿಸುತ್ತಾರೆ.

"ಸಫಾ ಬೆಟ್ಟದ ಕಡೆಯಲ್ಲಿರುವ ಬಾಗಿಲಿನ ಮೂಲಕ ಯಾರು ಮೊದಲು ಕಅಬ ಪ್ರವೇಶಿಸುತ್ತಾರೋ ಅವರನ್ನು ತೀರ್ಪುಗಾರರಾಗಿ ಮಾಡಿ, ಅವರು ನೀಡುವ ಪರಿಹಾರವನ್ನು ಎಲ್ಲರೂ ಒಪ್ಪಿಕೊಳ್ಳೋಣ" ವೆಂದು ನುಡಿದರು. ಎಲ್ಲಾರೂ ಅಬೂ ಉಮಯ್ಯರ ಮಾತನ್ನು ಒಪ್ಪಿಕೊಂಡರು.

ಮಾರನೆಯದಿನ ಸಂದರ್ಭವಶಾತ್ ಸಫಾ ದ್ವಾರದ ಮೂಲಕ ಕಅಬ ಮೊಟ್ಟ ಮೊದಲು ಪ್ರವೇಶಿಸಿದವರು ಮುಹಮ್ಮದ್ ಆಗಿದ್ದರು. ಅವರು ಕಅಬ ಪ್ರವೇಶಿಸುತ್ತಿದ್ದುದನ್ನು ನೋಡುತ್ತಿದ್ದಂತೆಯೇ ಕಅಬದ ಸುತ್ತನೆರೆದ ಜನರು ಅಮೀನ್ (ಪ್ರಾಮಾಣಿಕ) ಬಂದರು. ಅಮೀನ್ ಬಂದರು ಎಂದು ಹರ್ಷೋದ್ಗಾರ ಮಾಡಿದರು. ಮುಹಮ್ಮದ್‌ರನ್ನು ಉದ್ದೇಶಿಸಿ ಅಬೂ ಉಮಯ್ಯ

"ಮುಹಮ್ಮದರೇ, ಹಜರುಲ್ ಅಸ್ವದ್ ಪ್ರತಿಷ್ಠಾಪಿಸುವ ವಿಷಯದಲ್ಲಿ ನಮ್ಮೊಳಗೆ ತೀವ್ರ ಭಿನ್ನಾಭಿಪ್ರಾಯ ಉಂಟಾಗಿದೆ. ಪ್ರತಿಯೊಂದು ಗೋತ್ರವು ಹಜರುಲ್ ಅಸ್ವದ್ ಅನ್ನು ಅದರ ಸ್ಥಾನದಲ್ಲಿ ತಾನೇ ಇಡಬೇಕೆಂದು ಪ್ರತಿಷ್ಠೆಯ ವಿಷಯವನ್ನಾಗಿಸಿಕೊಂಡಿದೆ. ಈ ಮಾತಿಗೆ ಈಗ ಯುದ್ಧವೇ ನಡೆಯುವ ಪ್ರಮೇಯ ಉಂಟಾಗಿದೆ. ಈ ದಿನ ಸಫಾ ದ್ವಾರದ ಮೂಲಕ ಕಅಬವನ್ನು ಯಾರು ಮೊದಲು ಪ್ರವೇಶಿಸುತ್ತಾರೋ ಅವರನ್ನು ಈ ಸಮಸ್ಯೆ ಪರಿಹರಿಸಲು ತೀರ್ಪುಗಾರರಾಗಿ ಒಪ್ಪಿಕೊಳ್ಳಲು ನಾವೆಲ್ಲರೂ ನಿರ್ಧರಿಸಿದ್ದೆವು. ನೀವು ಸಫಾ ದ್ವಾರದಿಂದ ಮೊಟ್ಟ ಮೊದಲಿಗರಾಗಿ ಬಂದಿರುವಿರಿ. ಆದುದರಿಂದ ನೀವೇ ನಮ್ಮ ತೀರ್ಪುಗಾರರಾಗಿರುವಿರಿ. ನಿಮ್ಮ ತೀರ್ಪಿಗೆ ನಾವೆಲ್ಲರೂ ಬದ್ಧರಾಗಿದ್ದೇವೆ" ಎಂದರು.

ಮುಹಮ್ಮದ್ ನೆರೆದಿದ್ದ ಕುರೈಶ್ ಸರದಾರರ ಅನುಮೋದನೆ ಪಡೆದ ಬಳಿಕ ತಮ್ಮ ಶಾಲನ್ನು ನೆಲದ ಮೇಲೆ ಹಾಸಿ ಹಜರುಲ್ ಅಸ್ವದ್ ಅನ್ನು ಅದರ ಮೇಲೆ ಇರಿಸುತ್ತಾರೆ. ಎಲ್ಲಾ ಗೋತ್ರಗಳ ನಾಯಕರಿಗೆ ಆ ಶಾಲಿನ ಒಂದೊಂದು ಮೂಲೆಯನ್ನು ಹಿಡಿದೆತ್ತಿ ಹಜರುಲ್ ಅಸ್ವದ್ ಕಅಬದ ಗೋಡೆಯಲ್ಲಿ ಇಡುವ ಸ್ಥಳಕ್ಕೆ ತರುತ್ತಾರೆ.

ಅಲ್ಲಿ ಮುಹಮ್ಮದ್ ಸ್ವತ: ತಮ್ಮ ಕೈಗಳಿಂದ ಹಜರುಲ್ ಅಸ್ವದ್ ಎತ್ತಿ ಅದರ ಸ್ಥಳದಲ್ಲಿ ಇಡುತ್ತಾರೆ. ನೆರೆದಿದ್ದ ಸರದಾರರೆಲ್ಲರೂ ಹರ್ಷೋದ್ಗಾರಗಳಿಂದ ಮುಹಮ್ಮದ್‌ರ ಕುಶಾಗ್ರ ಬುದ್ಧಿ, ಚಾಕಕತ್ಯತೆ ಮತ್ತು ಸಮಯ ಪ್ರಜ್ಞೆಯನ್ನು ಹಾಡಿ ಹೊಗಳುತ್ತಾರೆ.

ಮುಹಮ್ಮದ್‌ರ ಸಮಯಪ್ರಜ್ಞೆ ಪ್ರತಿಯೊಂದು ಗೋತ್ರದವರ ಸ್ವಪ್ರತಿಷ್ಠೆಯನ್ನು ಮತ್ತು ವಿವಿಧ ಗೋತ್ರಗಳ ಒಗ್ಗಟ್ಟನ್ನು ರಕ್ಷಿಸಿತು. ಮುಹಮ್ಮದ್‌ರ ಈ ಗುಣವು ಮುಂದೆ ಪ್ರವಾದಿತ್ವದ ಕಾರ್ಯವನ್ನು ನಿರ್ವಹಿಸುವಾಗ ವಿವಿಧ ಮಾನಸಿಕ ಪ್ರವರ್ತಿಯನ್ನು ಹೊಂದಿದವರ ನಡುವೆ ಕಾರ್ಯ ನಿರ್ವಹಿಸಲು, ಅವರೆಲ್ಲರೊಂದಿಗೆ ಐಕ್ಯತೆಯನ್ನು ಹೊಂದುವಲ್ಲಿ ಸಹಕಾರಿಯಾಯಿತು.

ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ಮುಹಮ್ಮದ್ ಕಅಬದ ನಿರ್ಮಾಣದ ಸಂದರ್ಭದಲ್ಲಿ ಏರ್ಪಟ್ಟಿದ್ದ ಕಷ್ಟಕರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ತೋರಿದ್ದ ಬುದ್ಧಿವಂತಿಕೆಯನ್ನೇ ಉಪಯೋಗಿಸಿದರು. ಅದೇನೆಂದರೆ ಮನಸ್ಸಿನೊಳಗೆ ದುರಭಿಮಾನದ ಮತ್ತು ಅಹಂಕಾರದ ಉದ್ವೇಗಗಳು ನುಸುಳದಂತೆ ತರಬೇತಿ ನೀಡುವುದು ಮತ್ತು ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುವಂತಹ ಪರಿಹಾರಗಳನ್ನು ಒದಗಿಸಿ ಮೆಲ್ಲನೆ ಸೌಮ್ಯ ರೀತಿಯಲ್ಲಿ ತನ್ನನ್ನು ನಿಯಂತ್ರಿಸುವಂತೆ ಮಾಡುವುದು. ಎಂತಹ ಕಷ್ಟಕರ ಪರಿಸ್ಥಿತಿಗಳಲ್ಲೂ ನ್ಯಾಯೋಚಿತ ಪರಿಜ್ಞಾನದೊಂದಿಗೆ ತನ್ನೊಂದಿಗೂ ಮತ್ತು ಇತರ ಜನರೊಂದಿಗೂ ವ್ಯವಹರಿಸುವ ವೈಶಿಷ್ಟ್ಯವನ್ನು ಅಲ್ಲಾಹನು ಮುಹಮ್ಮದ್‌ರಿಗೆ ನೀಡಿದ್ದನು.

ಮುಹಮ್ಮದ್ ಮೂವತ್ತೈದು ವರ್ಷ ಪ್ರಾಯದವರಾಗುವಷ್ಟರಲ್ಲಿಯೇ ಎಂತಹ ಉತ್ಕೃಷ್ಟ ಗುಣಗಳನ್ನು ಬೆಳೆಸಿಕೊಂಡಿದ್ದರೆಂದರೆ ಬನೂಹಾಷಿಮ್ ಗೋತ್ರದವರು ಮುಂದೆ ಈ ಯುವಕ ತಮ್ಮ ಗೋತ್ರದ ನಾಯಕನಾಗಿ ಗೋತ್ರದ ಹಿರಿಮೆಯನ್ನು, ಕೀರ್ತಿಯನ್ನು ಪುನರ್ ಸ್ಥಾಪಿಸುವನು ಎಂದು ನಂಬಿದ್ದರು. ತಮ್ಮ ವಿವಾಹಗಳಿಂದಾಗಿ, ವ್ಯಾಪಾರದ ಚಟುವಟಿಕೆಗಳಿಂದಾಗಿ ಮತ್ತು ವೈಯಕ್ತಿಕ ಗುಣಗಳ ಕಾರಣ, ಮುಹಮ್ಮದ್ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಪಡೆದಿದ್ದರು. ಅವರ ಹೆಣ್ಣು ಮಕ್ಕಳಿಗೆ ವಿವಾಹ ಪ್ರಸ್ತಾವನೆಗಳು ನಾಲ್ಕೂ ದಿಕ್ಕುಗಳಿಂದ ಬರತೊಡಗಿದವು. ಅವರ ದೊಡ್ಡಪ್ಪ ಅಬೂ ಲಹಬ್ ತನ್ನ ಮಕ್ಕಳು ಉತ್ಬಹ್ ಮತ್ತು ಉತೈಬ್ಬರನ್ನು ಮುಹಮ್ಮದ್‌ರ ಪುತ್ರಿಯರಾದ ರುಕಯ್ಯಾ ಮತ್ತು ಉಮ್ಮೆ ಕುಲ್ಸೂಮ್‌ರೊಂದಿಗೆ ವಿವಾಹ ಮಾಡಿಸಬೇಕೆಂದಿದ್ದರು. ಮುಹಮ್ಮದ್ ಗೋತ್ರದ ಮುಖಂಡರಾದರೆ, ಮುಂದೆ ಉಂಟಾಗಬಹುದಾದ ಲಾಭಗಳ ಬಗ್ಗೆ ಮುಂದಾಲೋಚನೆಯಿಂದ ಮುಹಮ್ಮದ್‌ರ ಕುಟುಂಬದೊಂದಿಗೆ ವೈವಾಹಿಕ ಸಂಬಂಧಗಳನ್ನು ಅವರು ಹೆಣೆಯ ಬಯಸಿದ್ದರು.

# ಸಮಾಜದಲ್ಲಿ ಕೆಡುಕುಗಳು

ಪ್ರವಾದಿ (ಅವರ ಮೇಲೆ ಶಾಂತಿ ಇರಲಿ)ರ ಆಗಮನದ ಮೊದಲು ಅರೇಬಿಯಾದಲ್ಲಿ ಬುಡಕಟ್ಟುಗಳ ನಡುವೆ ಕಲಹಗಳು, ಯುದ್ಧಗಳು ವ್ಯಾಪಕವಾಗಿದ್ದವು. ಕ್ಷುಲ್ಲಕ ವಿಷಯಗಳಿಗೂ ಕದನಗಳು ಏರ್ಪಡುತ್ತಿದ್ದವು. ಕೊಲೆ, ಸುಲಿಗೆ, ದರೋಡೆಗಳು ಸರ್ವೇ ಸಾಮಾನ್ಯವಾಗಿದ್ದವು. ಮೂಢನಂಬಿಕೆಗಳು ಜನರಲ್ಲಿ ಬೇರೂರಿದ್ದವು.

ಯಹೂದಿಯ ಧರ್ಮ ಮತ್ತು ಕ್ರೈಸ್ತ ಧರ್ಮಗಳು, ಅವರ ಧಾರ್ಮಿಕ ಗುರುಗಳ ಅನುಯಾಯಿಗಳ ಸ್ವಾರ್ಥದ ಕಾರಣದಿಂದಾಗಿ ತಮ್ಮ ಮೂಲ ಸ್ವರೂಪವನ್ನೇ ಕಳೆದುಕೊಂಡಿದ್ದವು. ಮಕ್ಕಾದ ಕುರೈಶರು ಯಹೂದಿ ಮತ್ತು ಕ್ರೈಸ್ತ್ರ ಧಾರ್ಮಿಕ ಗುರುಗಳು ತಯಾರಿಸಿದ ಮೂರ್ತಿಗಳನ್ನು ಪೂಜಿಸುತ್ತಿದ್ದರು. ಈ ಮೂರ್ತಿಗಳಲ್ಲಿ ಹಬಲ್, ಅಲ್‌ಲಾತ್ ಮತ್ತು ಉಝ್ಝು ಮೂರ್ತಿಗಳು ಪ್ರಖ್ಯಾತವಾಗಿದ್ದವು. ಈ ಮೂರ್ತಿಗಳೂ ಎಷ್ಟು ಅಸಹಾಯಕವಾಗಿದ್ದವೆಂದರೆ ಯಾರಾದರೂ ಅವುಗಳನ್ನು ನಾಶಗೊಳಿಸಲು ಮುಂದೆ ಬಂದರೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಾಮರ್ಥ್ಯವೂ ಅವುಗಳಿಗೆ ಇರಲಿಲ್ಲ. ಅದಾಗ್ಯೂ ಕುರೈಶರು ಮತ್ತು ಬುಡಕಟ್ಟು ಜನಾಂಗೀಯರು ಈ ಮೂರ್ತಿಗಳನ್ನು ಆರಾಧಿಸುತ್ತಿದ್ದರು. ಅವುಗಳ ಸಹಾಯವನ್ನು ಯಾಚಿಸುತ್ತಿದ್ದರು. ಅವುಗಳ ಹೆಸರಿನಲ್ಲಿ ಪ್ರತಿಜ್ಞೆ ಮಾಡುತ್ತಿದ್ದರು ಮತ್ತು ಅವುಗಳ ಪರವಾಗಿ ಹೋರಾಡುತ್ತಿದ್ದರು.

ಸಮಾಜದ ದುರ್ಬಲರಿಗೆ ಯಾವುದೇ ರಕ್ಷಣೆವಿರಲಿಲ್ಲ. ಮಹಿಳೆಯರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಮಹಿಳೆಯರನ್ನು ಲೈಂಗಿಕ ತೃಷೆ ನೀಗಿಸುವ ವಸ್ತುಗಳಂತೆ ಬಳಸಲಾಗುತ್ತಿತ್ತು. ಹೆಣ್ಣಿನ ಜನನವನ್ನು ಬಹಳ ಅಪಾಯಕಾರಿ ಎಂದು ಪರಿಗಣಿಸಲಾಗುತ್ತಿತ್ತು. ಹೆಣ್ಣು ಶಿಶುವಿನ ಜನನದ ಕೂಡಲೇ ಅದನ್ನು ಜೀವಂತ ಹೂಳಲಾಗುತ್ತಿತ್ತು.

ಇದರ ಬಗ್ಗೆ ಕುರ್‌ಆನ್ ಈ ರೀತಿ ಹೇಳುತ್ತದೆ.

> "ಇವರ ಪೈಕಿ ಯಾರಿಗಾದರೂ ಮಗಳು ಹುಟ್ಟಿದ ಸುವಾರ್ತೆ ನೀಡಿದಾಗ ಅವನ ಮುಖ ಕಳೆಗುಂದಿ ಹೋಗುತ್ತದೆ. ಮತ್ತು ಅವನು ಸಿಡಿಮಿಡಿಗೊಳ್ಳುತ್ತಾನೆ. ಈ ಅಶುಭ ವಾರ್ತೆಯ ಬಳಿಕ ಯಾರಿಗೂ ಮುಖ ತೋರಿಸಲಾಗದೆ ಜನರಿಂದ ತಲೆ ಮರೆಸಿಕೊಳ್ಳುತ್ತಾನೆ. ಈ ಅಪಮಾನದೊಂದಿಗೆ ಮಗುವನ್ನಿರಿಸಿಕೊಳ್ಳಲೇ ಅಥವಾ ಮಣ್ಣಿನಲ್ಲಿ ಹುಗಿದುಬಿಡಲೇ ಎಂದು ಯೋಚಿಸುತ್ತಾನೆ. (ಪವಿತ್ರ ಕುರ್‌ಆನ್ 16:58)

ಜನರು ಶೋಷಣೆಯಲ್ಲಿ; ಅಂಧಕಾರದಲ್ಲಿ ತೊಳಲಾಡುತ್ತಿದ್ದರು. ದೌರ್ಜನ್ಯದಿಂದಾಗಿ ನಲುಗಿ ಹೋಗಿದ್ದರು.

ಕುರ್‌ಆನ್ ಈ ಸ್ಥಿತಿಯನ್ನು ಹೀಗೆ ವರ್ಣಿಸಿತ್ತು:

> **“**ಜನರ ಸ್ವಂತ ಕೈಗಳ ದುಡಿಮೆಯಿಂದ ನೆಲ, ಜಲಗಳಲ್ಲಿ ಕ್ಷೋಭೆಯುಂಟಾಗಿ ಬಿಟ್ಟಿದೆ. ಇದು ಜನರಿಗೆ ಅವರ ಕೆಲವು ಕರ್ಮಗಳ ಸವಿಯನ್ನುಣಿಸಲಿಕ್ಕಾಗಿಯೂ, ಅವರು ಮರಳಲೂಬಹುದೆಂಬ ನಿರೀಕ್ಷೆಯಿಂದಲೂ (ಆಗಿದೆ)**”** (ಪವಿತ್ರ ಕುರ್‌ಆನ್ 30:41)

ಈ ರೀತಿ ಅರೇಬಿಯಾ ಅಂಧಕಾರದಲ್ಲಿ ತೊಳಲಾಡುತ್ತಿತ್ತು. ಮಾನವ ಕೋಟಿಯು ತನ್ನ ಕಷ್ಟಕಾರ್ಪಣ್ಯಗಳನ್ನು ನೀಗಿಸುವವನನ್ನು ಎದುರು ನೋಡುತ್ತಿತ್ತು.

## ಸತ್ಯದ ಅನ್ವೇಷಣೆ

ಮುಹಮ್ಮದ್‌ರಿಗೆ (ಅವರ ಮೇಲೆ ಶಾಂತಿ ಇರಲಿ) ಆಟ ವಿನೋದಗಳಲ್ಲಿ, ಸಂತೋಷಕೂಟಗಳಲ್ಲಿ, ಸ್ನೇಹಿತರೊಂದಿಗೆ ಹರಟೆ ಕೊಚ್ಚುವುದರಲ್ಲಿ ಆಸಕ್ತಿ ಇರಲಿಲ್ಲ. ಸಾರ್ವಜನಿಕ ವಿಷಯಗಳ ಬಗ್ಗೆಯೂ ಅವರು ಅಭಿರುಚಿ ತೋರುತ್ತಿರಲಿಲ್ಲ. ಏಕಾಂತವಾಸವು ಅವರಿಗೆ ಈಗೀಗ ಹೆಚ್ಚೆಚ್ಚು ಪ್ರಿಯವಾಗತೊಡಗಿತ್ತು. ಮಕ್ಕಾದ ಸಮೀಪ ಹಿರಾ ಗುಹೆಯಲ್ಲಿ ಅವರು ಏಕಾಂತರಾಗಿ ಸೃಷ್ಟಿಕರ್ತ, ಸೃಷ್ಟಿ ಮತ್ತು ಸೃಷ್ಟಿಯ ಉದ್ದೇಶ, ಇವುಗಳ ಬಗ್ಗೆ ಚಿಂತನೆ ನಡೆಸುತ್ತಿದ್ದರು. ರಮಝಾನ್ ತಿಂಗಳು ಆಗಮಿಸಿದಾಗ ಹಲವು ದಿನಗಳಿಗೆ ಬೇಕಾಗುವಷ್ಟು ಊಟದ ಸಾಮಾಗ್ರಿಗಳನ್ನು ಶೇಖರಿಸಿ ಕೊಂಡು ಹಿರಾ ಗುಹೆಯಲ್ಲು ತಂಗುತ್ತಿದ್ದರು. ಊಟದ ಸಾಮಾಗ್ರಿಗಳು ಖಾಲಿಯಾದಾಗ ಮನೆಗೆ ತೆರಳಿ ಪುನಃ ಹಿರಾ ಗುಹೆಗೆ ಮರಳುತ್ತಿದ್ದರು. ಹಿರಾ ಗುಹೆಯ ಮಾರ್ಗ ದುರ್ಗಮಯವಾಗಿತ್ತು. ಹಿರಾ ಗುಹೆಯು ಬಹಳ ಕಿರಿದಾಗಿತ್ತು. ಕಷ್ಟದಿಂದ ಎರಡು ಜನರು ಅದರಲ್ಲಿ ಜೊತೆಗಿರಬಹುದಾಗಿತ್ತು. ಹಿರಾ ಗುಹೆಯಿಂದ ದೂರದಲ್ಲಿನ ಕಅಬಾ ಕಾಣಿಸುತ್ತಿತ್ತು. ಕಅಬಾದ ನಂತರ ದೃಷ್ಟಿ ಹರಿಯುವವರೆಗೆ ಬಂಜರು ಭೂಮಿಯೇ ಇದ್ದಿತು.

ಹಿರಾ ಗುಹೆಯಲ್ಲಿ ಏಕಾಂತರಾಗಿ ಮುಹಮ್ಮದ್ ಧ್ಯಾನ ಮಗ್ನರಾಗಿರುತ್ತಿದ್ದರು. ಅವರು ಎಂದೂ ಮೂರ್ತಿ ಪೂಜೆಯಲ್ಲಿ ತೊಡಗಿರಲಿಲ್ಲ. ತಮ್ಮ ಜನಾಂಗದ ಅಂಧ ಆಚಾರ ವಿಚಾರಗಳಲ್ಲಿ ವಿಶ್ವಾಸವಿಟ್ಟಿರಲಿಲ್ಲ. ಎಂದೂ ಅನ್ಯಾಯ, ಅಕ್ರಮಗಳಲ್ಲಿ ಪಾಲುಗೊಂಡಿರಲಿಲ್ಲ. ಮೂರ್ತಿ ಪೂಜೆಯೇ ಆಗಿರಲಿ, ಅಥವಾ ಅಧಿಕಾರ ಮತ್ತು ಸಂಪತ್ತಿನ ಆರಾಧನೆಯೇ ಆಗಿರಲಿ, ಈ ಎಲ್ಲಾ ಕಪಟ ದೈವಗಳ ಆರಾಧನೆಗಳಿಂದ

ಅವರು ದೂರವಿದ್ದರು. ಅನೇಕ ವೇಳೆ ಅವರು ಕಾಣುತ್ತಿದ್ದ ಸ್ವಪ್ನಗಳು ನೈಜವಾಗಿ ಪರಿಣಮಿಸುತ್ತಿದ್ದು ಎಚ್ಚರಗೊಂಡ ನಂತರ ಸ್ವಪ್ನಗಳು ಅವರ ಮೇಲೆ ಗಾಢ ಪರಿಣಾಮವನ್ನು ಬೀರುತ್ತಿದ್ದವು. ಮುಹಮ್ಮದ್ ಸ್ವಪ್ನಗಳ ಪ್ರಸ್ತಾಪವನ್ನು ತಮ್ಮ ಪತ್ನಿ ಖದೀಜಾರಿಗೆ ಮಾಡುತ್ತಿದ್ದರು. ಅವರು ಹುಡುಕುತ್ತಿದ್ದ ವಿವರಣೆಗೆ ಸಮಂಜಸ ಉತ್ತರ ಅವರ ಪರಿಸರದಿಂದ ಸಿಗದಿದ್ದು ಅವರು ಧ್ಯಾನ, ಚಿಂತನೆಯ ಮೂಲಕ ಉತ್ತರಗಳನ್ನು ಪಡೆಯಲು ಯತ್ನಿಸುತ್ತಿದ್ದರು. ಅವರು ನಲವತ್ತು ವರ್ಷ ಪ್ರಾಯಕ್ಕೆ ಸಮೀಪಿಸುತ್ತಿದ್ದು ಆಧ್ಯಾತ್ಮಿಕ ಅನ್ವೇಷಣೆಯ ಅತಿಸೂಕ್ಷ್ಮ ಘಟ್ಟಕ್ಕೆ ಮುಹಮ್ಮದ್ ತಲುಪಿದ್ದರು.

ರಮಝಾನ್ ತಿಂಗಳಿನಲ್ಲಿ ಕ್ರಿ.ಶ. 609ರಲ್ಲಿ ಹಿರಾ ಗುಹೆಗೆ ತೆರಳುತ್ತಿದ್ದಾಗ, ತಮಗೆ ಶುಭವನ್ನು ಕೋರುವ ಶಬ್ದವನ್ನು ಮುಹಮ್ಮದ್ ಪ್ರಥಮ ಬಾರಿಗೆ ಕೇಳಿದರು:

*"ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹ್!"*

ಅಲ್ಲಾಹನ ಸಂದೇಶ ವಾಹಕರೇ, ನಿಮ್ಮ ಮೇಲೆ ಶಾಂತಿ ಇರಲಿ!

☆

# ಪ್ರಥಮ ದಿವ್ಯವಾಣಿ

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹಿರಾ ಗುಹೆಯಲ್ಲಿ ಎಂದಿನಂತೆ ಏಕಾಂತದಲ್ಲಿ ಧ್ಯಾನ ಮಗ್ನರಾಗಿ ಸತ್ಯದ ಅನ್ವೇಷಣೆಯಲ್ಲಿ ನಿರತರಾಗಿದ್ದಾರೆ. ರಮಝಾನ್ ತಿಂಗಳ 18ನೆಯ (ಕ್ರಿ.ಶ. 610 ಆಗಸ್ಟ್ 10) ಸೋಮವಾರ, ರಾತ್ರಿಯ ವೇಳೆಯಲ್ಲಿ ಆಕಸ್ಮಿಕವಾಗಿ ದೇವಚರ ಜಿಬ್ರೀಲ್ (ಅವರ ಮೇಲೆ ಶಾಂತಿ ಇರಲಿ) ಮುಹಮ್ಮದ್‌ರ ಮುಂದೆ ಪ್ರತ್ಯಕ್ಷರಾಗಿ ಅವರನ್ನು ಓದುವಂತೆ ಆಜ್ಞಾಪಿಸುತ್ತಾರೆ. ಮುಹಮ್ಮದ್ ಉತ್ತರಿಸಿದರು: "ನಾನು ಓದು ಬಲ್ಲವನಲ್ಲ"! ಜಿಬ್ರೀಲ್ (ಅವರ ಮೇಲೆ ಶಾಂತಿ ಇರಲಿ), ಮುಹಮ್ಮದ್‌ರನ್ನು ಬಿಗಿದಪ್ಪುತ್ತಾರೆ. ಆ ಬಳಿಕ ಪುನಃ ಓದುವಂತೆ ಆಜ್ಞಾಪಿಸುತ್ತಾರೆ. ಮುಹಮ್ಮದ್ ಪುನಃ "ನಾನು ಓದು ಬಲ್ಲವನಲ್ಲ" ಎಂದು ಪುನರುಚ್ಛಿಸುತ್ತಾರೆ. ಈ ರೀತಿ ಮೂರು ಸಲ ಮುಹಮ್ಮದ್ ರನ್ನು ಬಿಗಿದಪ್ಪಿ ಓದುವಂತೆ ಆಜ್ಞಾಪಿಸಿದ ಬಳಿಕ, ಜಿಬ್ರೀಲ್ ಈ ರೀತಿ ಪಠಿಸಿದರು:

> "(ಸಂದೇಶ ವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ. ಅವನು, ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು. ಓದಿರಿ, ಮತ್ತು ನಿಮ್ಮ ಪ್ರಭು ಮಹಾ ಉದಾರಿ. ಅವರನ್ನು ಲೇಖನಿಯ ಮೂಲಕ ವಿದ್ಯೆ ಕಲಿಸಿದನು. ಮಾನವನು ತಿಳಿದಿರದಂತಹ ಜ್ಞಾನವನ್ನು ಅವನಿಗೆ ದಯಪಾಲಿಸಿದನು".
> (ಪವಿತ್ರ ಕುರ್‌ಆನ್, 96:1–5)

ದೇವಚರ ಜಿಬ್ರೀಲ್‌ರ ಮೂಲಕ ಮುಹಮ್ಮದ್‌ರಿಗೆ ಅವತೀರ್ಣಗೊಂಡ ಪ್ರಥಮ ಕುರ್‌ಆನಿನ ಸೂಕ್ತಗಳು ಇದುವೇ ಆಗಿದ್ದವು.

ಈ ಸೂಕ್ತಗಳನ್ನು ಪಠಿಸಿದ ಬಳಿಕ ಜಿಬ್ರೀಲ್ ಹೊರಟು ಹೋಗುತ್ತಾರೆ. ಈ ಘಟನೆಯಿಂದ ಮುಹಮ್ಮದ್ ಉದ್ವಿಗ್ನರಾಗಿ ಮನೆಗೆ ಮರಳಿ ಪತ್ನಿ ಖದೀಜಾರಿಗೆ "ನನಗೆ ಹೊದಿಸಿರಿ, ನನಗೆ ಹೊದಿಸಿರಿ" ಎನ್ನುತ್ತಾರೆ. ಖದೀಜಾ ಪ್ರವಾದಿರಿಗೆ ಕಂಬಳಿಯನ್ನು ಹೊದಿಸಿ ಏನಾಯಿತು? ಎಂದು ವಿಚಾರಿಸುತ್ತಾರೆ. ಮುಹಮ್ಮದ್ ಹಿರಾ ಗುಹೆಯಲ್ಲಿ ನಡೆದ ಘಟನೆಯನ್ನು ಖದೀಜಾರಿಗೆ ವಿವರಿಸುತ್ತಾರೆ. ನಂತರ "ನನಗೇನಾಗುತ್ತಿದೆ? ನನಗೆ ನನ್ನ ಪ್ರಾಣದ ಭಯವಾಗುತ್ತಿದೆ" ಎನ್ನುತ್ತಾರೆ. ಖದೀಜಾ

ಅವರಿಗೆ ಸಾಂತ್ವಾನ ನೀಡುತ್ತಾ ಹೇಳುತ್ತಾರೆ "ನೀವು ಭಯ ಪಡಬೇಕಾಗಿಲ್ಲ. ಅಲ್ಲಾಹ್ ಖಂಡಿತ ನಿಮ್ಮನ್ನು ದುಃಖಕ್ಕೀಡು ಮಾಡಲಾರ. ನೀವು ಪ್ರಾಮಾಣಿಕರಾಗಿರುವಿರಿ, ಸತ್ಯ ಸಂಧರಾಗಿರುವಿರಿ. ನೀವು ಸಂಬಂಧಿಕರಿಗೆ, ಬಡವರಿಗೆ, ದುರ್ಬಲರಿಗೆ ಸಹಾಯವನ್ನು ಮಾಡುತ್ತೀರಿ. ಅತಿಥಿಗಳನ್ನು ಆದರಿಸುತ್ತೀರಿ. ಜನರೊಂದಿಗೆ ನ್ಯಾಯೋಚಿತವಾಗಿ ವರ್ತಿಸುತ್ತೀರಿ".

## ವರಕ ಬಿನ್ ನೌಫಲ್

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರನ್ನು ಕರೆದುಕೊಂಡು ಖದೀಜಾ ತಮ್ಮ ಸೋದರ ಸಂಬಂಧಿ ವರಕ ಬಿನ್ ನೌಫಲ್‌ರ ಬಳಿ ಹೋಗುತ್ತಾರೆ. ಈ ಘಟನೆಯ ವಾಸ್ತವಿಕತೆಯನ್ನು ಅವರಿಂದ ಕೇಳಿ ತಿಳಿಯಬೇಕೆಂಬುದು ಅವರ ಉದ್ದೇಶವಾಗಿತ್ತು. ವರಕ ಕ್ರೈಸ್ತ ಸನ್ಯಾಸಿಯಾಗಿದ್ದರು. ಮುಹಮ್ಮದ್ ನಡೆದ ಘಟನೆಯನ್ನು ಅವರ ಮುಂದೆ ವಿವರಿಸಿದಾಗ, ವರಕ ಬಿನ್ ನೌಫಲ್ "ಅದು ಮೂಸಾ ಬಳಿಗೆ ಬಂದ ದೇವದೂತರೇ ಆಗಿದ್ದಾರೆ. ನಿಸ್ಸಂಶವಾಗಿಯೂ ಮುಹಮ್ಮದ್ ಈ ಜನರಿಗೆ ಪ್ರವಾದಿಯಾಗಿ ನೇಮಿಸಲ್ಪಟ್ಟಿದ್ದಾರೆ".

ಸ್ವಲ್ಪ ಕಾಲದ ನಂತರ ಕಅಬಾದ ಬಳಿ ಮುಹಮ್ಮದ್‌ರನ್ನು ಭೇಟಿಯಾದಾಗ ವರಕ ಬಿನ್ ನೌಫಲ್, "ಖಂಡಿತವಾಗಿಯೂ ಜನರು ನಿಮ್ಮನ್ನು ಸುಳ್ಳುಗಾರನೆನ್ನುತ್ತಾರೆ. ನಿಮ್ಮೊಂದಿಗೆ ಅನುಚಿತವಾಗಿ ನಡೆದುಕೊಳ್ಳಲಾಗುತ್ತದೆ. ನಿಮ್ಮ ಮೇಲೆ ಆಕ್ರಮಣ ಮಾಡಲಾಗುತ್ತದೆ. ನಿಮ್ಮನ್ನು ಮಕ್ಕಾದಿಂದ ಹೊರಹಾಕಲಾಗುತ್ತದೆ."

ಇದನ್ನು ಕೇಳಿ ಮುಹಮ್ಮದ್ ಆಶ್ಚರ್ಯ ಚಕಿತರಾಗಿ "ನನ್ನನ್ನು ಮಕ್ಕಾದಿಂದ ಹೊರಹಾಕಲಾಗುವುದೇ?" ಎಂದು ಪ್ರಶ್ನಿಸುತ್ತಾರೆ. ವರಕ ಬಿನ್ ನೌಫಲ್, "ನಿಸ್ಸಂದೇಹವಾಗಿಯೂ! ಪ್ರತಿಯೋರ್ವ ಸಂದೇಶವಾಹಕನೊಂದಿಗೆ ಇದೇ ರೀತಿಯಲ್ಲಿ ವರ್ತಿಸಲಾಗಿದೆ" ಎಂದರು.

ಪ್ರವಾದಿತ್ವದ ಕಾರ್ಯ ಈಗಷ್ಟೇ ಆರಂಭವಾಗಿತ್ತು. ಮುಹಮ್ಮದ್‌ರಿಗೆ ಅಂತಿಮ ವಾಣಿಯ ಕೆಲ ಮೂಲಭೂತ ಅಂಶಗಳ ಮತ್ತು ಈ ಮೊದಲು ಆಗಮಿಸಿದ್ದ ಪ್ರವಾದಿಗಳಿಗೆ ನೀಡಲಾಗಿದ್ದ ಬೋಧನೆಯ ತಿರುಳಿನ ಪರಿಚಯ ಮಾಡಿಸಲಾಯಿತು.

ಖದೀಜಾ ಮುಹಮ್ಮದ್‌ರ ಬೆಂಗಾವಲಾಗಿ ನಿಂತರು. ಪ್ರಥಮ ದಿವ್ಯವಾಣಿಯ ಅವತೀರ್ಣದ ನಂತರ ಖದೀಜಾ ನೆರವಿನೊಂದಿಗೆ ಮೆಲ್ಲಮೆಲ್ಲನೆ ಮುಹಮ್ಮದ್‌ರಿಗೆ ತಾವು ಮಾನವ ಕುಲಕ್ಕೆ ಸೃಷ್ಟಿಕರ್ತನ ವತಿಯಿಂದ ಪ್ರವಾದಿಯಾಗಿ ನೇಮಿಸಲ್ಪಟ್ಟಿರುವ ಸತ್ಯದ ಅರಿವಾಯಿತು.

# 3

# ದಿವ್ಯ ಸಂದೇಶ

ಕುರ್‌ಆನ್ ಅವತೀರ್ಣದ ಆರಂಭಿಕ ಕಾಲದಲ್ಲಿ ಕುರ್‌ಆನಿನ ಸಂದೇಶವು ನಾಲ್ಕು ಪ್ರಮುಖ ಅಂಶಗಳ ಮೇಲೆ ಆಧರಿತವಾಗಿತ್ತು. ಸೃಷ್ಟಿಕರ್ತನ ಏಕೈಕತೆ, ಕುರ್‌ಆನಿನ ಸ್ಥಾನ, ಆರಾಧನೆ ಮತ್ತು ಮರಣೋತ್ತರ ಜೀವನ. ಆರಂಭಿಕ ಮುಸ್ಲಿಮರಿಗೆ ಅಮೂಲಾಗ್ರ ಆಧ್ಯಾತ್ಮಿಕ ಬದಲಾವಣೆಗೆ ಕರೆ ನೀಡಲಾಗಿತ್ತು. ಇಸ್ಲಾಮನ್ನು ವಿರೋಧಿಸುತ್ತಿದ್ದವರಿಗೆ ಇಂತಹ ಬದಲಾವಣೆಯ ಪರಿಣಾಮದ ಪೂರ್ಣ ಅರಿವಿತ್ತು. ಈ ಹೊಸ ಧರ್ಮವು ಸಮಾಜದ ನಂಬಿಕೆಗಳಲ್ಲಿ ಮತ್ತು ವ್ಯವಸ್ಥೆಯಲ್ಲಿ ಭಾರಿ ಬದಲಾವಣೆಗಳನ್ನು ಉಂಟು ಮಾಡುವುದೆಂದು ಅವರು ತಿಳಿದಿದ್ದರು.

## ಇಸ್ಲಾಮಿ ಸಂದೇಶದ ಸ್ವೀಕಾರ

ಇಸ್ಲಾಮ್ ಸ್ವೀಕರಿಸುವವರಲ್ಲಿ ಖದೀಜಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮೊಟ್ಟ ಮೊದಲಿಗರಾಗಿದ್ದರು. ಪ್ರವಾದಿತ್ವದ ಆರಂಭದ ಹತ್ತು ವರ್ಷಗಳಲ್ಲಿ ಸಂಪೂರ್ಣವಾಗಿ ಮುಹಮ್ಮದ್‌ರ (ಅವರ ಮೇಲೆ ಶಾಂತಿ ಇರಲಿ) ಬೆನ್ನೆಲುಬಾಗಿ ನಿಂತಿದ್ದರು.

ಖದೀಜಾರ ನಂತರ ಪ್ರವಾದಿರ ಮನೆತನದ ಆಪ್ತ ಸಂಬಂಧಿಕರು, ಅನಂತರ ಅವರ ಮಿತ್ರರು ಇಸ್ಲಾಮ್ ಸ್ವೀಕರಿಸಿದರು.

ಪ್ರವಾದಿರ ಸೋದರ ಸಂಬಂಧಿ ಕಿರಿಯ ಪ್ರಾಯದ ಅಬೂ ತಾಲಿಬ್‌ರ ಪುತ್ರ ಅಲಿ, ಪ್ರವಾದಿರ ದತ್ತು ಪುತ್ರ ಝೈದ್ ಬಿನ್‌ಹಾರಿಸ್, ಪ್ರವಾದಿ 4 ವರ್ಷದ ಪ್ರಾಯದಲ್ಲಿ ಮಕ್ಕಾ ಹಿಂತಿರುಗಿದ್ದಾಗ ಅವರ ಶುಶ್ರೂಷೆ ಮಾಡಿದ್ದ ದಾಯಿ ಉಮ್ಮೆ ಐಮನ್, ಅವರ ಬಾಲ್ಯ ಮತ್ತು ಬಾಳ ಮಿತ್ರ ಅಬೂಬಕರ್ ಸಿದ್ದೀಕ್ ಇಸ್ಲಾಮ್

ಸ್ವೀಕರಿಸುವವರಲ್ಲಿ ಮೊದಲಿಗರಾಗಿದ್ದರು. ಇಸ್ಲಾಮಿನ ಘೋಷಣೆ "ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ, ಮತ್ತು ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿದ್ದಾರೆ" ಎಂದಾಗಿತ್ತು.

ಪ್ರವಾದಿರ ನಿರಂತರ ಬೋಧನೆಯ ಪರಿಣಾಮವಾಗಿ ಇಸ್ಲಾಮ್ ಮೆಲ್ಲ ಮೆಲ್ಲನೆ ಬೆಳೆಯ ತೊಡಗಿತು. ಇಸ್ಲಾಮಿನ ಬೆಳವಣಿಗೆಯಲ್ಲಿ ಅಬೂಬಕರ್ ಸಿದ್ದೀಕ್‌ರ ನೆರವೂ ಅಪಾರವಾಗಿತ್ತು. ಮುಹಮ್ಮದ್‌ರಿಗೆ ಅವರು ಬೆಂಗಾವಲಾಗಿ ಇದ್ದುದಲ್ಲದೇ, ಅನೇಕ ಗುಲಾಮರನ್ನು ಅವರು ಖರೀದಿಸಿ ಬಿಡುಗಡೆಗೊಳಿಸುತ್ತಿದ್ದರು. ಮುಹಮ್ಮದ್‌ರ ಸಚ್ಚಾರಿತ್ರ್ಯ, ಅವರ ನಡವಳಿಕೆ, ಅವರ ಬೋಧನೆಗಳಿಂದ, ಪ್ರಭಾವಿತರಾಗಿ ಕಾಲಕ್ರಮೇಣ ಅನೇಕ ಜನರು ಇಸ್ಲಾಮ್‌ನ ಪರಿವಿಧಿಯಲ್ಲಿ ಬಂದರು.

ಇಸ್ಲಾಮಿನ ಆರಂಭದ ಮೂರು ವರ್ಷಗಳಲ್ಲಿ ಕೇವಲ 30–40 ಕುರೈಶರು ಇಸ್ಲಾಮ್ ಸ್ವೀಕರಿಸಿದ್ದರು. ಅವರು ನವ ಮುಸ್ಲಿಮರ ಮನೆಯಲ್ಲಿ ಸೇರಿ ಇಸ್ಲಾಮೀ ಶಿಕ್ಷಣವನ್ನು ಪಡೆಯುತ್ತಿದ್ದರು. ಇಸ್ಲಾಮ್ ಹರಡುತ್ತಿದ್ದಂತೆಯೇ ಇಸ್ಲಾಮಿನ ವಿರುದ್ಧ ಶತ್ರುಗಳ ವಿರೋಧವೂ ಪ್ರಬಲವಾಗ ತೊಡಗಿತು.

ಆರಂಭದಿಂದಲೂ ಪ್ರವಾದಿ ಗುಣಮಟ್ಟಕ್ಕೆ ಪ್ರಾಮುಖ್ಯತೆ ನೀಡಿದ್ದರೇ ವಿನಹಃ ಸಂಖ್ಯೆಗೆ ನೀಡಿರಲಿಲ್ಲ. ಇಸ್ಲಾಮಿನ ಪರಿವಿಧಿಯಲ್ಲಿ ಜತೆಗೂಡಿದ್ದ ಮುಸ್ಲಿಮರ ಮನ–ಮಸ್ತಿಷ್ಕಗಳನ್ನು ಪ್ರಭಾವಿತಗೊಳಿಸಲು ಅವರು ಗಮನ ನೀಡುತ್ತಿದ್ದರೇ ವಿನಹಃ ಮುಸ್ಲಿಮರ ಸಂಖ್ಯೆಗೆ ಅಲ್ಲ. ಭವಿಷ್ಯದಲ್ಲಿ ಇಸ್ಲಾಮಿಗೆ ಎದುರಾಗಲಿದ್ದ ದೂಷಣೆ, ವಿರೋಧ, ಬಹಿಷ್ಕಾರದ ಅರಿವು ಪ್ರವಾದಿರಿಗೆ ಇತ್ತು. ಈ ಕಾರಣಕ್ಕಾಗಿ ಪ್ರವಾದಿ ಇಸ್ಲಾಮಿನ ಆರಂಭ ಕಾಲದಲ್ಲಿ ಇಸ್ಲಾಮಿನ ವ್ಯಾಪ್ತಿಯಲ್ಲಿ ಬಂದಿದ್ದ ಮುಸ್ಲಿಮರ ಸಣ್ಣ ತಂಡದ ತರಬೇತಿಗೆ ವಿಶೇಷ ಒತ್ತು ನೀಡಿದರು. ಮುಂದೆ ಕಡು ವಿರೋಧದ ನಡುವೆಯೂ ಇದೇ ಮುಸ್ಲಿಮ್ ತಂಡ ಅಚಲವಾಗಿ ಇಸ್ಲಾಮಿನ ಬೆಂಬಲಕ್ಕೆ ನಿಂತಿತ್ತು. ಈ ತಂಡದಲ್ಲಿ ಸಮಾಜದ ಎಲ್ಲಾ ಗೋತ್ರಗಳ, ವರ್ಗಗಳ ಸ್ತ್ರೀ, ಪುರುಷರು ಇದ್ದುದು ವಿಶೇಷತೆಯಾಗಿತ್ತು.

## ದಿವ್ಯ ಗ್ರಂಥದ ಅವತೀರ್ಣ

ಅವತೀರ್ಣಗೊಂಡ ಕುರ್‌ಆನಿನ ಆರಂಭದ ಸೂಕ್ತಗಳು ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಧರ್ಮಪ್ರಜ್ಞೆಯನ್ನು ಮೊದಲು ಅಲ್ಲಾಹನ ಕಡೆಗೆ ವಾಲುವಂತೆ ತರಬೇತಿ ನೀಡಿದವು. ಆರಂಭದ ಸೂಕ್ತಗಳಲ್ಲಿ ದೇವಚರ ಜಿಬ್ರೀಲ್ (ಅವರ ಮೇಲೆ ಶಾಂತಿ ಇರಲಿ) ಅಲ್ಲಾಹನ ಸಂದೇಶದ ಬುನಾದಿಗಳನ್ನು ಪ್ರವಾದಿರಿಗೆ ತಲುಪಿಸಿದ್ದರು. ಮುಹಮ್ಮದ್ ಪ್ರವಾದಿಯಾಗಿ ನೇಮಿಸಲ್ಪಟ್ಟಿರುವ ಶುಭ ಸಂದೇಶದ ಜೊತೆಗೆ, ಮುಂದೆ

ಅವರಿಗೆ ಎದುರಾಗಲಿರುವ ಆಪತ್ತುಗಳು, ವಿಪತ್ತುಗಳ ಬಗ್ಗೆ ಅವರಿಗೆ ಮುನ್ನೆಚ್ಚರಿಕೆ ನೀಡಲಾಯಿತು. ಈ ಮೊದಲು ಆಗಮಿಸಿದ್ದ ಎಲ್ಲಾ ಪ್ರವಾದಿಗಳು ಪ್ರವಾದಿತ್ವದ ಕಾರ್ಯಭಾರವನ್ನು ನಿಭಾಯಿಸುವ ಸಂದರ್ಭದಲ್ಲಿ ಸಮುದಾಯದ ದ್ವೇಷವನ್ನು, ವಿರೋಧಗಳನ್ನು, ನಾನಾ ತರಹದ ಸಂಕಷ್ಟಗಳನ್ನು, ಹಿಂಸೆಗಳನ್ನು ಎದುರಿಸಬೇಕಾಯಿತು. ಮುಹಮ್ಮದ್‌ರನ್ನು ಪ್ರೀತಿಸುತ್ತಿದ್ದ ಅವರ ಬಂಧು ಬಳಗದವರೇ ಅವರನ್ನು ಎಷ್ಟು ದ್ವೇಷಿಸಲಾರಂಭಿಸಿದರೆಂದರೆ, ಅವರು ಮುಹಮ್ಮದ್‌ರನ್ನು ಕೊಲ್ಲಲು ಸಂಚನ್ನು ಹೂಡಿದರು.

ದೇವಚರ ಜಿಬ್ರೀಲ್, ಮುಹಮ್ಮದ್‌ರಿಗೆ ಅನೇಕ ಸಲ ಗೋಚರಿಸಿದ್ದರು. ಕೆಲವು ಸಲ ಮಾನವ ರೂಪದಲ್ಲಿ ಪ್ರಕಟವಾಗಿದ್ದರೆ, ಕೆಲವೊಮ್ಮೆ ತಮ್ಮ ನೈಜ ರೂಪದಲ್ಲಿಯೇ ಗೋಚರವಾಗಿದ್ದರು. ಕೆಲವೊಮ್ಮೆ ಮುಹಮ್ಮದ್‌ರಿಗೆ ಗಂಟೆ ಬಾರಿಸುವ ತರಹ ಶಬ್ದ ಕೇಳಿ ಬರುತ್ತಿತ್ತು ಮತ್ತು ದಿಢೀರನೆ ಕುರ್‌ಆನಿನ ಸೂಕ್ತಗಳು ಅವತೀರ್ಣಗೊಳ್ಳುತ್ತಿದ್ದವು. ಈ ಸಂದರ್ಭದಲ್ಲಿ ಮುಹಮ್ಮದ್‌ರಿಗೆ ಎಷ್ಟು ಏಕಾಗ್ರತೆ ತೋರಬೇಕಾಗುತ್ತಿತ್ತೆಂದರೆ ಅವರಿಗೆ ಉಸಿರುಗಟ್ಟಿದಂತಾಗುತ್ತಿತ್ತು. ವಿಶೇಷವಾಗಿ ಕುರ್‌ಆನ್ ಅವತೀರ್ಣದ ಕೊನೆಯ ವಿಧಾನ ಮುಹಮ್ಮದ್‌ರಿಗೆ ಬಹಳ ಕಷ್ಟಕರವಾಗಿರುತ್ತಿತ್ತು. ಆದ್ದಾಗ್ಯೂ ಮುಹಮ್ಮದ್ ಅವತೀರ್ಣಗೊಂಡ ಕುರ್‌ಆನಿನ ಪ್ರತಿಯೊಂದು ಪದವನ್ನು ಪುನರುಚ್ಚಿಸಲು ಶಕ್ತರಾಗಿರುತ್ತಿದ್ದರು. 23 ವರ್ಷಗಳ ಕಾಲ ಜಿಬ್ರೀಲ್ ಸಂದರ್ಭಾನುಸಾರ ಕುರ್‌ಆನಿನ ಸೂಕ್ತಗಳನ್ನು ಮುಹಮ್ಮದ್‌ರಿಗೆ ತಲುಪಿಸಿದರು. ಕೆಲವೊಮ್ಮೆ ಕೆಲವೇ ಸೂಕ್ತಗಳು ಅವತೀರ್ಣಗೊಳ್ಳುತ್ತಿದ್ದವು. ಕೆಲವೊಮ್ಮೆ ಅನೇಕ ಸೂಕ್ತಗಳು ಏಕಕಾಲದಲ್ಲಿ ಅವತೀರ್ಣಗೊಳ್ಳುತ್ತಿದ್ದವು.

ಕುರ್‌ಆನಿನ ಸೂಕ್ತಗಳ ಅವತೀರ್ಣ ಸನ್ನಿವೇಶದ ಅಗತ್ಯಕ್ಕೆ ಅನುಸಾರವಾಗಿರುತ್ತಿತ್ತು. ಜಿಬ್ರೀಲ್‌ರ ಮಾರ್ಗದರ್ಶನದಂತೆ ಮುಹಮ್ಮದ್ ಸೂಕ್ತಗಳನ್ನು ಕುರ್‌ಆನಿನ ವಿವಿಧ ಅಧ್ಯಾಯಗಳಲ್ಲಿ ಸೇರಿಸುತ್ತಿದ್ದರು. ಪ್ರತಿ ವರ್ಷ ರಮಝಾನ್ ತಿಂಗಳಿನಲ್ಲಿ ಅವರು ಜಿಬ್ರೀಲ್‌ರಿಗೆ ಇಲ್ಲಿಯವರೆಗೆ ಅವತೀರ್ಣಗೊಂಡ ಕುರ್‌ಆನಿನ ಸೂಕ್ತಗಳನ್ನು ಕೇಳಿಸುತ್ತಿದ್ದರು. ಹೀಗೆ ಇಲ್ಲಿಯವರೆಗೆ ಅವತೀರ್ಣಗೊಂಡ ಕುರ್‌ಆನಿನ ಸೂಕ್ತಗಳ ಪರಿಶೀಲನೆ, ದೃಢೀಕರಣ ನಡೆಯುತ್ತಿತ್ತು. ಈ ರೀತಿ ಮೆಲ್ಲ ಮೆಲ್ಲನೆ ಕುರ್‌ಆನ್ ಗ್ರಂಥದ ರೂಪ ಪಡೆಯಲಾರಂಭಿಸಿತು.

# ವುಝು ಮತ್ತು ನಮಾಝ್

ಒಂದು ದಿನ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ದಾರಿಯಲ್ಲಿ ನಡೆಯುತ್ತಿದ್ದಾಗ ಜಿಬ್ರೀಲ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಕಾಣಿಸಿಕೊಂಡರು. ಜಿಬ್ರೀಲ್ ತಮ್ಮ ಹಿಮ್ಮಡಿಯಿಂದ ನೆಲಕ್ಕೆ ಹೊಡೆದಾಗ ನೀರು ಹೊರಬಂತು. ಜಿಬ್ರೀಲ್(ಅವರ ಮೇಲೆ ಶಾಂತಿ ಇರಲಿ) ಪ್ರವಾದಿರಿಗೆ ವುಝು ಮಾಡುವ ವಿಧಾನವನ್ನು ತೋರಿಸಿಕೊಟ್ಟರು. ಆನಂತರ, ಪ್ರವಾದಿರಿಗೆ ನಮಾಝ್ ಮಾಡುವ ಕ್ರಮವನ್ನೂ ತೋರಿಸಿಕೊಟ್ಟರು. ಮುಹಮ್ಮದ್, ಜಿಬ್ರೀಲ್ ತೋರಿಸಿಕೊಟ್ಟ ರೀತಿಯಲ್ಲಿಯೇ ವುಝು ಮಾಡಿ ನಮಾಝ್ ನಿರ್ವಹಿಸಿದರು. ಪರಿಶುದ್ಧತೆ ಹಾಗೂ ನಮಾಝಿನ ಬುನಾದಿಯ ಮೇಲೆ ಇಸ್ಲಾಮ್ ಈಗ ಸಂಸ್ಥಾಪಿಸಲ್ಪಟ್ಟಿತ್ತು. ಖದೀಜಾರ ನಂತರ ಇಸ್ಲಾಮ್ ಸ್ವೀಕರಿಸುವವರಲ್ಲಿ ಅಲಿ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಝೈದ್ ಬಿನ್ ಹಾರಿಸ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಮುಹಮ್ಮದ್‌ರ ಬಾಲ್ಯ ಸಂಗಾತಿ ಅಬೂಬಕರ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮೊದಲಿಗರಾಗಿದ್ದರು.

ಇಸ್ಲಾಮಿನ ಆರಂಭ ಕಾಲದಲ್ಲಿ ನಮಾಝ್ ಅನ್ನು ದಿನದಲ್ಲಿ ಎರಡು ಸಲ ಮಾತ್ರ ನಿರ್ವಹಿಸಲಾಗುತ್ತಿತ್ತು. ಮುಂಜಾನೆ ಮತ್ತು ಸಂಜೆ. ನಂತರವಷ್ಟೇ ದಿನದಲ್ಲಿ ಐದು ಹೊತ್ತಿನ ನಮಾಝ್ ಕಡ್ಡಾಯವಾಯಿತು. ಕಾಲಕ್ರಮೇಣ ಇಸ್ಲಾಮೀ ಆಂದೋಲನದ ವಿರುದ್ಧ ವಿರೋಧ ಪ್ರಬಲವಾಗತೊಡಗಿತು. ಇಂತಹ ಪರಿಸ್ಥಿತಿಯಲ್ಲಿಯೂ ಇಸ್ಲಾಮೀ ಪರಿಧಿಯಲ್ಲಿ ಬರುತ್ತಿದ್ದ ಸ್ತ್ರೀ, ಪುರುಷರು ರಾತ್ರಿಯ ವೇಳೆ ಸದ್ದಿಲ್ಲದೇ ಎದ್ದು ದೀರ್ಘಕಾಲದವರೆಗೆ ನಮಾಝ್ ನಿರ್ವಹಿಸುತ್ತಿದ್ದರು. ನಮಾಝಿನಲ್ಲಿ ಕುರ್‌ಆನಿನ ಸೂಕ್ತಗಳನ್ನು ಪಠಿಸುತ್ತಿದ್ದರು. ಅಲ್ಲಾಹ್ ಕುರ್‌ಆನಿನ ಸೂಕ್ತಗಳನ್ನು ತನ್ನ ಮತ್ತು ಸತ್ಯವಿಶ್ವಾಸಿಗಳ ನಡುವೆ ಒಂದು ವಿಶಿಷ್ಟ ಸಂಪರ್ಕ ಸಾಧನವನ್ನಾಗಿಸಿದ್ದನು. ಈ ಅಧ್ಯಾತ್ಮಿಕ ತರಬೇತಿಯು ಆರಂಭಿಕ ಸತ್ಯ ವಿಶ್ವಾಸಿಗಳಲ್ಲಿ ದೇವಭಕ್ತಿ, ದೃಢವಿಶ್ವಾಸದ ಗುಣಗಳನ್ನು ಬೆಳೆಸಿತು. ಇಸ್ಲಾಮೀ ಸಂದೇಶದ ಸ್ಫೂರ್ತಿಯು, ಸೃಷ್ಟಿಕರ್ತ ಹಾಗೂ ಆತನ ದಾಸನ ನಡುವಿನ ಈ ಅನೋನ್ಯ ಸಂಬಂಧದಲ್ಲಿ ಪ್ರಕಟವಾಗುತ್ತಿತ್ತು. ಈ ರೀತಿ ಆರಂಭಕಾಲದ ಮುಸ್ಲಿಮರ ತರಬೇತಿ ನಡೆಯಿತು. ಈ ಹಂತದ ಮುಸ್ಲಿಮರ ವೈಶಿಷ್ಟ್ಯ ದೇವಭಯ ಮತ್ತು ಅಲ್ಲಾಹನಲ್ಲಿ ಗಾಢ ನಂಬಿಕೆಯಾಗಿತ್ತು. ವಿಶ್ವಾಸದಲ್ಲಿ ಅಚಲರಾಗಿದ್ದರು. ನಮಾಝ್ ಜನರ ಮತ್ತು ಸೃಷ್ಟಿಕರ್ತನ ನಡುವೆ ಸಂವಹನದ ಮಾಧ್ಯಮವಾಗಿತ್ತು.

> "ಓ ಪೈಗಂಬರರೇ, ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ ನಾನು ಅವರಿಗೆ ನಿಕಟನಾಗಿದ್ದೇನೆಂದೂ, ಪ್ರಾರ್ಥಿಸುವವನು ನನ್ನನ್ನು

ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ, ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ" (ಪವಿತ್ರ ಕುರ್‌ಆನ್ 2:186)

ಮುಹಮ್ಮದ್ ದಾಸ ಮತ್ತು ಸೃಷ್ಟಿಕರ್ತನ ಈ ಅನ್ಯೋನ್ಯ ಸಂಬಂಧದ ಕೇಂದ್ರ ಬಿಂದುವಾಗಿದ್ದರು.

"ಓ ಪೈಗಂಬರರೇ, ನೀವು ಜನರೊಡನೆ ಹೀಗೆ ಹೇಳಿಬಿಡಿರಿ – ನೀವು ನಿಜವಾಗಿಯೂ ಅಲ್ಲಾಹನನ್ನು ಪ್ರೀತಿಸುತ್ತೀರೆಂದಾದರೆ ನನ್ನ ಅನುಸರಣೆ ಮಾಡಿರಿ. ಅಲ್ಲಾಹ್ ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು" (ಪವಿತ್ರ ಕುರ್‌ಆನ್ 3:31)

ಸೃಷ್ಟಿಕರ್ತನ ಸಂಪ್ರೀತಿಗಳಿಸಲು ಪ್ರವಾದಿ ಮುಹಮ್ಮದ್‌ರ ಅನುಸರಣೆ ಬುನಾದಿಯಾಗಿತ್ತು.

"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ" (ಪವಿತ್ರ ಕುರ್‌ಆನ್ 33:21)

# 4

# ದೌರ್ಜನ್ಯ ಮತ್ತು ಹಿಂಸೆ

ಕುರ್‌ಆನಿನ ಪ್ರಥಮ ಸೂಕ್ತಗಳ ಅವತೀರ್ಣದ ಸಂದರ್ಭದಲ್ಲಿ ಆದ ಭಯ ಮತ್ತು ಗಾಬರಿಯ ಅನುಭವದಿಂದ ಚೇತರಿಸಿಕೊಂಡ ಪ್ರವಾದಿ(ಅವರ ಮೇಲೆ ಶಾಂತಿ ಇರಲಿ), ಅನಂತರ ಕುರ್‌ಆನ್ ಅವತೀರ್ಣಗೊಂಡಂತೆ, ಅದರ ಸಂದೇಶವನ್ನು ತಮ್ಮ ಹತ್ತಿರದ ಜನರಿಗೆ ತಲುಪಿಸಲಾರಂಭಿಸಿದರು. ಆದರೆ ಸಾರ್ವಜನಿಕವಾಗಿ ಜನರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸುವ ಆದೇಶವನ್ನು ಅಲ್ಲಾಹನಿಂದ ಅವರು ಇನ್ನೂ ಪಡೆದಿರಲಿಲ್ಲ.

## ಸಾರ್ವಜನಿಕ ಕರೆ

ಪ್ರವಾದಿತ್ವದ ಮೂರು ವರ್ಷಗಳ ನಂತರ ಮುಹಮ್ಮದ್ ಸಾರ್ವಜನಿಕವಾಗಿ ಜನರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸುವ ಆದೇಶವನ್ನು ಪಡೆದರು.

> **“**ನಿಮ್ಮ ಅತ್ಯಂತ ನಿಕಟ ಸಂಬಂಧಿಕರಿಗೆ ಎಚ್ಚರಿಕೆ ನೀಡಿರಿ**”**
> (ಪವಿತ್ರ ಕುರ್‌ಆನ್ 26:214)

ಕುರ್‌ಆನಿನ ಈ ಸೂಕ್ತ ಅವತೀರ್ಣಗೊಂಡ ಕೂಡಲೇ ಪ್ರವಾದಿ ತಮ್ಮ ಹತ್ತಿರದ ಸಂಬಂಧಿಕರಿಗೆ ಇಸ್ಲಾಮಿನ ಸಂದೇಶವನ್ನು ನೀಡಲು ನಿರ್ಧರಿಸಿದರು. ಆ ಕಾಲದ ಅರಬ್ ಸಂಪ್ರದಾಯದಂತೆ, ಯಾವುದಾದರೂ ಸಾಮೂಹಿಕ ವಿಪತ್ತಿನಿಂದ ಜನರನ್ನು ಎಚ್ಚರಿಸಬೇಕಿದ್ದಾಗ ಬೆಟ್ಟವನ್ನೇರಿ ಕೂಗಿ ಜನರನ್ನು ಸೇರಿಸಿ ಅಪಾಯದ ಸೂಚನೆಯನ್ನು ನೀಡಲಾಗುತ್ತಿತ್ತು. ಈ ಸಂಪ್ರದಾಯಕ್ಕೆ ಅನುಗುಣವಾಗಿ ಪ್ರವಾದಿ ಒಂದು ದಿನ ಸಫಾ ಬೆಟ್ಟವನ್ನೇರಿ ಕುರೈಶ್ ಗೋತ್ರದ ವಿವಿಧ ಮನೆತನಗಳ ಮುಖಂಡರ ಒಂದೊಂದು ಹೆಸರನ್ನು ಕೂಗಿ ಕರೆದರು. ಯಾವುದೋ ಆಪತ್ತಿನ ಬಗ್ಗೆ ಮುಹಮ್ಮದ್‌ರಿಗೆ ಹೇಳಲಿಕ್ಕಿರಬಹುದೆಂದು ಭಾವಿಸಿ ಜನರು ಬೆಟ್ಟದ ಕಡೆಗೆ ಧಾವಿಸಿದರು.

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ನುಡಿದರು:

"ಜನರೇ! ನಾನು ಬೆಟ್ಟದ ಮೇಲೆ ನಿಂತಿರುವೆನು. ನೀವೆಲ್ಲರೂ ಅದರ ಕೆಳಗಿರುವಿರಿ. ಬೆಟ್ಟದ ಎರಡೂ ಕಡೆ ನಾನು ನೋಡುತ್ತಿರುವೆನು. ಒಂದು ಸಶಸ್ತ್ರ ದರೋಡೆಕೋರರ ತಂಡವು ಮಕ್ಕಾಪಟ್ಟಣದ ಮೇಲೆ ಆಕ್ರಮಣ ಮಾಡಲು ಬರುತ್ತಿದೆ ಎಂದು ನಾನು ಹೇಳಿದರೆ ನೀವು ನಂಬುತ್ತೀರಾ?".

ಜನರು ಒಕ್ಕೊರಲಿನಿಂದ ಉತ್ತರಿಸಿದರು: ಖಂಡಿತವಾಗಿಯೂ. ನೀವು ಸತ್ಯಸಂಧರೆಂಬುದನ್ನು ನಾವು ಬಲ್ಲೆವು. ನೀವು ಎಂದೂ ಸುಳ್ಳು ನುಡಿದವರಲ್ಲ.

ಪ್ರವಾದಿ ಹೇಳಿದರು:

"ಅಲ್ಲಾಹನ ಅತ್ಯಂತ ಕಠಿಣ ಶಿಕ್ಷೆಯು ಬರುವುದಕ್ಕೆ ಮುಂಚಿತವಾಗಿ ನಾನು ನಿಮ್ಮನ್ನು ಎಚ್ಚರಿಸುತ್ತಿದ್ದೇನೆ. ಅಲ್ಲಾಹನು ನನ್ನ ಹತ್ತಿರದ ರಕ್ತ ಸಂಬಂಧಿಗಳನ್ನು ಎಚ್ಚರಿಸಲು ಆಜ್ಞಾಪಿಸಿದ್ದಾನೆ. ಲೋಕದಲ್ಲಿ ನಿಮ್ಮ ಪ್ರಾಣಗಳನ್ನು ರಕ್ಷಿಸಲು ನನಗೆ ಸಾಮರ್ಥ್ಯವಿಲ್ಲ. ಅದರಂತೆಯೇ, ಪರಲೋಕದಲ್ಲಿ ನಿಮ್ಮ ರಕ್ಷಣೆಗೆ ಧಾವಿಸಲು ನನಗೆ ಸಾಧ್ಯವಿರುವುದಿಲ್ಲ. ನೀವು ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ಘೋಷಿಸಿದರೆ ಮಾತ್ರ ಅದು ಸಾಧ್ಯ. ನನ್ನ ಸ್ಥಿತಿಯು ದೂರದಿಂದ ಶತ್ರುಗಳು ಬರುತ್ತಿರುವುದನ್ನು ನೋಡಿ, ಶತ್ರುಗಳು ಆಕ್ರಮಣ ಮಾಡುವ ಮೊದಲು ಓಡೋಡಿ ಬಂದು ಜನರನ್ನು ಎಚ್ಚರಿಸುವುದಾಗಿದೆ."

ಪ್ರವಾದಿರ ಮಾತನ್ನು ಕೇಳಿ ಅವರ ಚಿಕ್ಕಪ್ಪ ಅಬೂಲಹಬ್ ಕೋಪೋದ್ರಿಕ್ತನಾಗಿ "ನೀನು ನಾಶವಾಗಿ ಹೋಗು. ಇದನ್ನು ಕೇಳಿಸಲಿಕ್ಕಾಗಿ ನಮ್ಮನ್ನು ಇಲ್ಲಿ ಒಟ್ಟು ಸೇರಿಸಿದೆಯಾ"? ಎಂದು ನುಡಿದು ಅಲ್ಲಿ ನೆರೆದಿದ್ದ ಕುರೈಶ್ ಸರದಾರರೊಂದಿಗೆ ಹಿಂತೆರಳಿದನು. ಅಬೂಲಹಬ್ ಹೀಗೆ ಪ್ರವಾದಿರನ್ನು ವಿರೋಧಿಸುವ ಬಣದೊಂದಿಗೆ ಸೇರಿ ಕೊನೆಯವರೆಗೆ ಪ್ರವಾದಿರನ್ನು ಉಗ್ರವಾಗಿ ವಿರೋಧಿಸಿದನು.

ಪ್ರವಾದಿರನ್ನು ಅವರ ಕಾರ್ಯದಿಂದ ವಿಮುಖರನ್ನಾಗಿಸಲು ಕುರೈಶ್ ಮುಖಂಡರು ಅವರಿಗೆ ನಾನಾ ತರಹದ ಆಮಿಷಗಳನ್ನೊಡ್ಡಿದರು. ಅವರು ಜನರಿಗೆ ನೀಡುತ್ತಿದ್ದ ಇಸ್ಲಾಮಿನ ಆಹ್ವಾನವನ್ನು ತ್ಯಜಿಸಿದರೆ ಅವರಿಗೆ ಹೇರಳ ಸಂಪತ್ತು ನೀಡಲಾಗುವುದೆಂದು, ಅವರನ್ನು ರಾಜನಾಗಿ ಮಾಡಲಾಗುವುದೆಂದೂ ಪ್ರಸ್ತಾವನೆ ಮಾಡಲಾಯಿತು. ಆದರೆ ಇದಾವುದೂ ಫಲಪ್ರದವಾಗದಿದ್ದಾಗ ಪ್ರವಾದಿ ಓರ್ವ ಮಾಂತ್ರಿಕರೆಂದೂ, ಅವರಿಗೆ ಹುಚ್ಚು ಹಿಡಿದಿದೆಯೆಂದೂ ಪ್ರಚಾರ ಮಾಡಲಾಯಿತು.

ಪ್ರವಾದಿ ತಮ್ಮ ಸಂಬಂಧಿಕರಿಗೆ ಇಸ್ಲಾಮಿನ ಸಂದೇಶ ನೀಡಲಿಕ್ಕಾಗಿ ಒಂದು ಔತಣಕೂಟ ಏರ್ಪಡಿಸಿದರು. ಸುಮಾರು 40 ಮಂದಿ ಔತಣಕೂಟದಲ್ಲಿ ಸೇರಿದ್ದರು.

ಆದರೆ ಅಬೂಲಹಬ್ ಪ್ರವಾದಿರಿಗೆ ಮಾತಾಡಲು ಅವಕಾಶ ನೀಡದ ಕಾರಣ, ಈ ಔತಣಕೂಟದಲ್ಲಿ ಪ್ರವಾದಿರಿಗೆ ನೆರೆದಿದ್ದವರಿಗೆ ಇಸ್ಲಾಮಿನ ಸಂದೇಶ ನೀಡಲು ಸಾಧ್ಯವಾಗಲಿಲ್ಲ. ಮರುದಿನ ಮುಹಮ್ಮದ್ ಪುನಃ ತಮ್ಮ ಮನೆತನದವರನ್ನು ಔತಣಕ್ಕೆ ಆಹ್ವಾನಿಸುತ್ತಾರೆ. ಊಟದ ನಂತರ ಇಸ್ಲಾಮಿನ ಸಂದೇಶವನ್ನು ಸಂಕ್ಷಿಪ್ತವಾಗಿ ಅವರ ಮುಂದೆ ಇಡುವಲ್ಲಿ ಯಶಸ್ವಿಯಾಗುತ್ತಾರೆ. ಅವರ ಸಂಬಂಧಿಕರಲ್ಲಿ ಕೆಲವರು ರಹಸ್ಯವಾಗಿ ಅವರ ಆಹ್ವಾನವನ್ನು ಸ್ವೀಕರಿಸುತ್ತಾರೆ.

ಮುಹಮ್ಮದ್ ತಮ್ಮ ಮನೆತನದವರಿಗೆ ಇಸ್ಲಾಮಿನ ಕಡೆ ಆಹ್ವಾನಿಸುವ ಕಾರ್ಯವನ್ನು ಮುಂದುವರೆಸುತ್ತಾರೆ. ಈಗ ಇಸ್ಲಾಮಿನ ಸಂದೇಶವನ್ನು ಸಾರ್ವಜನಿಕವಾಗಿ ನೀಡಬೇಕೆಂಬ ಆದೇಶ ಅವತೀರ್ಣ ವಾಗುತ್ತದೆ.

> "ಓ ಪೈಗಂಬರರೇ, ನಿಮಗೆ ಕೊಡಲಾಗುತ್ತಿರುವ ಆದೇಶಗಳನ್ನು ಘಂಟಾಘೋಷವಾಗಿ ಸಾರಿ ಬಿಡಿರಿ ಮತ್ತು ಬಹುದೇವ ವಿಶ್ವಾಸಿಗಳನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳಬೇಡಿರಿ"
> (ಪವಿತ್ರ ಕುರ್‌ಆನ್ 15:94)

ಪ್ರವಾದಿತ್ವದ ದ್ಯೋತವು ಈಗ ಹೊಸಹಂತವನ್ನು ತಲುಪುತ್ತಿತ್ತು. ಈಗ ಇಸ್ಲಾಮಿನ ಸಂದೇಶವು ಸಾರ್ವಜನಿಕವಾಗಿತ್ತು. ಈ ಹಂತದಲ್ಲಿ ತೌಹೀದ್ – ಏಕದೇವತ್ವ ಮತ್ತು ಕುರೈಶರ ಬಹುದೇವಾರಾಧನೆಯ ನಡುವೆ ಭಿನ್ನತೆಯನ್ನು ಸ್ಪಷ್ಟಪಡಿಸಬೇಕಾಗಿತ್ತು. ಪ್ರವಾದಿ ತಮ್ಮ ಸುತ್ತಲೂ ನಂಬಿಕೆಗೆ ಅರ್ಹರಿರುವ ಸ್ತ್ರೀ, ಪುರುಷರ ಒಂದು ತಂಡವನ್ನು ಸಜ್ಜುಗೊಳಿಸಿದ್ದರು. ಈ ಗುಂಪಿನಲ್ಲಿಯ ಕೆಲವರು ಪ್ರವಾದಿಯವರ ಸಂಬಂಧಿಕರಾಗಿದ್ದರೆ, ಇತರರು ವಿವಿಧ ಪಂಗಡಗಳಿಗೆ, ಸಮಾಜದ ವಿವಿಧ ವರ್ಗಗಳಿಗೆ ಸೇರಿದವರಾಗಿದ್ದರು. ಮೂರು ವರ್ಷಗಳಿಂದ ಪ್ರವಾದಿ ಅವರಿಗೆ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಶಿಕ್ಷಣವನ್ನು ನೀಡುತ್ತಿದ್ದರು. ಸುದೃಢ ವಿಶ್ವಾಸ ಮತ್ತು ತಾಳ್ಮೆಯಿಂದ ಮುಸ್ಲಿಮರು ಇಸ್ಲಾಮಿನ ಹಾದಿಯಲ್ಲಿನ ಕಷ್ಟಗಳನ್ನು ಎದುರಿಸುತ್ತಿದ್ದರು. ಮಕ್ಕಾದ ಸಮಾಜವು ಧರ್ಮದ ಬುನಾದಿಯ ಮೇಲೆ ಇಬ್ಭಾಗವಾಗತೊಡಗಿತು.

## ಆಮಿಷಗಳು

ಈಗ ಇಸ್ಲಾಮಿನ ಕರೆಯು ಸಾರ್ವಜನಿಕವಾಗಿತ್ತು. ಇಸ್ಲಾಮಿನ ವರ್ತುಲದೊಳಗೆ ಸೇರುತ್ತಿದ್ದ ನವಮುಸ್ಲಿಮರು "ದಾರುಲ್ ಅರ್ಕಮ್"ನಲ್ಲಿ ರಹಸ್ಯವಾಗಿ ತರಬೇತಿ ಪಡೆಯುತ್ತಿದ್ದರೂ, ಇಸ್ಲಾಮಿನ ಸಂದೇಶವನ್ನು ತಮ್ಮ ಸುತ್ತಮುತ್ತಲಿನ ಜನರಿಗೆ, ಸಂಬಂಧಿಕರಿಗೆ ನೀಡಲು ಹಿಂಜರಿಯುತ್ತಿರಲಿಲ್ಲ. ದಿನ ಕಳೆದಂತೆ ಕುರೈಶ್ ಸರದಾರರಿಗೆ ಹೊಸ ಧರ್ಮದಿಂದ ಉಂಟಾಗುತ್ತಿರುವ 'ಗಂಡಾಂತರ'ದ ಅರಿವಾಗತೊಡಗಿತು. ಈ

ಹೊಸಧರ್ಮವು ಅವರು ಆರಾಧಿಸುತ್ತಿದ್ದ ದೇವಿ, ದೇವತೆಗಳ, ಅವರ ಸಂಪ್ರದಾಯಗಳ ವಿರುದ್ಧ ಬಂಡಾಯದ ಕಹಳೆ ಮೊಳಗಿಸಿತ್ತು. ಅಂತಿಮವಾಗಿ ಇದು ಕುರೈಶ್ ಸರದಾರರ ಅಧಿಕಾರವನ್ನು ಬುಡಮೇಲುಗೊಳಿಸುವುದರಲ್ಲಿತ್ತು. ಇಸ್ಲಾಮ್ ಹಬ್ಬಿದಂತೆ, ಕಅಬಾದಲ್ಲಿದ್ದ ಮೂರ್ತಿಗಳಿಗೆ ಕಅಬಾದ ಮುಖಂಡರೆಂಬ ಅವರ ಪ್ರತಿಷ್ಠೆಗೆ ಧಕ್ಕೆ ಉಂಟಾಗುವ ಸಂಭವವಿತ್ತು. ಇದಲ್ಲದೇ, ಮಕ್ಕಾ ಪಟ್ಟಣದ ಸಂಪತ್ತು ಕಅಬಾದಲ್ಲಿದ್ದ ಮೂರ್ತಿಗಳ ದರ್ಶನಕ್ಕಾಗಿ ವರ್ಷವಿಡೀ ಬರುತ್ತಿದ್ದ ಯಾತ್ರಾರ್ತಿಗಳು ನೀಡುತ್ತಿದ್ದ ಕಾಣಿಕೆಗಳ ಮೇಲೆಯೇ ಅವಲಂಬಿತವಾಗಿತ್ತು. ಇದನ್ನು ಹೊರತುಪಡಿಸಿದರೆ ಮಕ್ಕಾದ ನಿವಾಸಿಗಳಿಗೆ ಸಂಪಾದನೆಯ ಇತರ ಯಾವುದೇ ಮಾರ್ಗಗಳಿರಲಿಲ್ಲ.

ಇಸ್ಲಾಮಿನ ಈ ಬೆಳೆಯುತ್ತಿರುವ ಗಂಡಾಂತರವನ್ನು ತಡೆಯಲು ನಿರ್ಧರಿಸಿದ ಕುರೈಶ್ ಸರದಾರರು ಮುಹಮ್ಮದ್‌ರಿಗೆ ರಕ್ಷಣೆ ನೀಡಿ, ಅವರಿಗೆ ಬೆಂಗಾವಲಾಗಿ ನಿಂತಿದ್ದ ಅಬೂತಾಲಿಬ್‌ರ ಬಳಿ ಒಂದು ನಿಯೋಗವನ್ನು ಒಯ್ದರು. ತಮ್ಮ ದೇವತೆಗಳ ವಿರುದ್ಧ, ಸಂಪ್ರದಾಯದ ವಿರುದ್ಧ ಏನೂ ಹೇಳದಂತೆ ಮುಹಮ್ಮದ್‌ರಿಗೆ ತಡೆಯಬೇಕೆಂದು ಅಬೂತಾಲಿಬ್‌ರಿಗೆ ವಿನಂತಿಸಿದರು. ಅಬೂತಾಲಿಬ್ ಯಾವ ಕ್ರಮವನ್ನೂ ತೆಗೆದುಕೊಳ್ಳದ ಕಾರಣ, ಕೆಲ ಸಮಯದ ನಂತರ ಕುರೈಶ್ ಸರದಾರರು ಅಬೂತಾಲಿಬ್‌ರನ್ನು ಮತ್ತೊಮ್ಮೆ ಭೇಟಿ ಮಾಡಿ ಇಸ್ಲಾಮಿನ ಗಂಡಾಂತರವು ಈಗ ಎಲ್ಲೆಯನ್ನು ಮೀರಿದ್ದು ಕೂಡಲೇ ಮುಹಮ್ಮದ್‌ರನ್ನು ತಮ್ಮ ದೇವತೆಗಳ ವಿರುದ್ಧ ಯಾವುದೇ ಮಾತನ್ನು ಹೇಳದಂತೆ ತಡೆಯಬೇಕೆಂದರು. ಅಬೂತಾಲಿಬ್ ಮುಹಮ್ಮದ್‌ರನ್ನು ಬರ ಹೇಳಿ ತಮ್ಮನ್ನು ತಬ್ಬಿಬ್ಬುಗೊಳಿಸುವ ಕಾರ್ಯಗಳಿಂದ ದೂರವಿರುವಂತೆ ಅವರಿಗೆ ತಿಳಿಹೇಳಿದರು.

ಚಿಕ್ಕಪ್ಪ ನುಡಿದ ಮಾತುಗಳನ್ನು ಕೇಳಿ ಮುಹಮ್ಮದ್ ಉತ್ತರಿಸಿದರು: **"**ಚಿಕ್ಕಪ್ಪಾ, ಅಲ್ಲಾಹನಾಣೆ**!** ಅವರು ನನ್ನ ಬಲಕೈಯಲ್ಲಿ ಸೂರ್ಯನನ್ನೂ, ಎಡಕೈಯಲ್ಲಿ ಚಂದ್ರನನ್ನೂ ನೀಡಿದರೂ, ನಾನು ನನ್ನ ಕಾರ್ಯದಿಂದ ಒಂದು ಅಂಗುಲವೂ ಹಿಂದಕ್ಕೆ ಸರಿಯಲಾರೆ. ಒಂದೋ ಅಲ್ಲಾಹ್ ಈ ಕಾರ್ಯದಲ್ಲಿ ನನ್ನನ್ನು ಜಯಶೀಲನನ್ನಾಗಿಸಬೇಕು ಅಥವ ಈ ಕಾರ್ಯವನ್ನು ಮಾಡುತ್ತಾ ನಾನು ಮರಣ ಹೊಂದಬೇಕು**"**.

ಮುಹಮ್ಮದ್‌ರ ದೃಢ ಸಂಕಲ್ಪವನ್ನು ನೋಡಿ ಅಬೂತಾಲಿಬ್ ಅವರಿಗೆ ತಮ್ಮ ಬೆಂಬಲವನ್ನು ಮುಂದುವರೆಸುವ ಭರವಸೆ ನೀಡಿದರು.

ಕೆಲಕಾಲದ ನಂತರ ಕುರೈಶ್ ಸರದಾರರ ಮತ್ತೊಂದು ನಿಯೋಗ ಪ್ರವಾದಿರನ್ನು ಭೇಟಿಮಾಡಿತು. ಈ ನಿಯೋಗ ಪ್ರವಾದಿರಿಗೆ ಸಂಪತ್ತಿನ, ಅಧಿಕಾರದ, ಸುಂದರ ಮಹಿಳೆಯೊಂದಿಗೆ ವಿವಾಹಮಾಡಿಸುವ ಪ್ರಲೋಭನೆಗಳನ್ನು ನೀಡಿತು. ಆದರೆ ಮುಹಮ್ಮದ್, ಅವರ ಪ್ರತಿಯೊಂದು ಪ್ರಲೊಭನೆಯನ್ನು ತಳ್ಳಿ ಹಾಕಿ, ತಾವು ಏಕದೇವನ ಅರಾಧನೆಯ ಕಡೆಗೆ ಕರೆ ನೀಡುವ ಕಾರ್ಯವನ್ನು ಯಾವ ಬೆಲೆ ತೆತ್ತಾದರೂ ಮುಂದುವರೆಸುವುದಾಗಿ ಸ್ಪಷ್ಟವಾಗಿ ನುಡಿದುಬಿಟ್ಟರು.

"ನನಗೆ ಭೂತ, ಪ್ರೇತ ಹಿಡಿದಿಲ್ಲ. ನನಗೆ ಯಾವ ಸಿರಿ, ಸಂಪತ್ತು ಅಥವಾ ಅಧಿಕಾರದ ಅಗತ್ಯವಿಲ್ಲ. ಅಲ್ಲಾಹನು ನನಗೆ ಪ್ರವಾದಿಯಾಗಿ ಕಳುಹಿಸಿದ್ದಾನೆ. ನಿಮಗೆ ಎಚ್ಚರಿಕೆ ನೀಡಲೂ ಮತ್ತು ನೀವು ನನ್ನ ಬೋಧನೆಯನ್ನು ಸ್ವೀಕರಿಸಿದರೆ ನಿಮಗೆ ಶುಭವಾರ್ತೆ ನೀಡಲೂ ಆಜ್ಞಾಪಿಸಿದ್ದಾನೆ. ನಾನು ಸೃಷ್ಟಿಕರ್ತನ ಸಂದೇಶವನ್ನು ನಿಮಗೆ ತಲುಪಿಸಿದ್ದೇನೆ. ಈ ಸಂದೇಶವನ್ನು ನೀವು ಸ್ವೀಕರಿಸಿದರೆ ಇಹ, ಪರಗಳೆರಡರಲ್ಲೂ ವಿಜಯಿಗಳಾಗುವಿರಿ. ಇದನ್ನು ನಿರಾಕರಿಸಿದರೆ ಅಲ್ಲಾಹನು ನನ್ನ ಮತ್ತು ನಿಮ್ಮ ನಡುವೆ ನಿರ್ಣಯ ತೆಗೆದುಕೊಳ್ಳುವವರೆಗೂ ನಾನು ತಾಳ್ಮೆ ವಹಿಸುತ್ತೇನೆ."

ಈ ಪದಗಳನ್ನು ನುಡಿದು ಪ್ರವಾದಿ ಕುರೈಶ್ ಸರದಾರರಿಗೆ ತಮ್ಮ ಪ್ರವಾದಿತ್ವದ ಕಾರ್ಯನಿರ್ವಹಿಸುವಲ್ಲಿ ಯಾವುದೇ ರಾಜಿಗೆ ತಾವು ತಯಾರಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದರು. ಈ ಘಟನೆಯ ನಂತರ ಕುರೈಶ್ ಸರದಾರರು ಇಸ್ಲಾಮ್ ವಿರೋಧದಲ್ಲಿ ಮತ್ತಷ್ಟು ಕಠಿಣ ಧೋರಣೆಯನ್ನು ತಳೆದರು. ಮುಹಮ್ಮದ್ ಹುಚ್ಚರೆಂದೂ, ಭೂತ ಪೀಡಿತರೆಂದೂ, ಅವರು ಮಾಂತ್ರಿಕ, ಜಾದೂಗಾರನೆಂದೂ ಪ್ರಚಾರ ಮಾಡಲಾರಂಭಿಸಿದರು.

## ಕುರೈಶರ ಪ್ರತೀಕಾರ

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರನ್ನು ಕುರೈಶರು ಅಪಹಾಸ್ಯ ಮತ್ತು ಅಪಮಾನ ಮಾಡಲಾರಂಭಿಸಿದರು. ಮುಹಮ್ಮದ್ ಪ್ರವಾದಿಯಾಗಿರುವುದಕ್ಕೆ ಪುರಾವೆ ನೀಡಲು ಪವಾಡ ತೋರಿಸಲು ಬೇಡಿಕೆಯನ್ನಿಟ್ಟರು. ಕುರೈಶರ ಈ ಮಾತುಗಳಿಗೆ ಪ್ರತ್ಯುತ್ತರವಾಗಿ ಪ್ರವಾದಿ ಕುರ್‌ಆನಿನ ಈ ಸೂಕ್ತವನ್ನು ಮುಂದಿಟ್ಟರು.

"ನಾನೊಬ್ಬ ಸಂದೇಶ ತರುವ ಮಾನವನಾಗಿರುವೆನಲ್ಲದೆ ಇನ್ನೇನಾದರೂ ಆಗಿರುವೆನೇ?"

- ಕುರೈಶರು ಮುಸ್ಲಿಮರನ್ನು ಹಿಂಸಿಸಲು ಆರಂಭಿಸಿದರು. ವಿಶೇಷವಾಗಿ ಬಡ ಮುಸ್ಲಿಮರನ್ನು ಮತ್ತು ಯಾವುದೇ ಬುಡಕಟ್ಟುಗಳ ಬೆಂಬಲವಿರದವರನ್ನು ಗುರಿಯನ್ನಾಗಿಸಿದರು. ಗುಲಾಮರಾಗಿದ್ದ ಬಿಲಾಲ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ಸುಡುಬಿಸಿಲಿನಲ್ಲಿ ಅಂಗಾತ ಮಲಗಿಸಿ ಅವರ ಮೇಲೆ ಬಂಡೆಯನ್ನು ಇರಿಸಲಾಯಿತು. ಇಸ್ಲಾಮನ್ನು ತಿರಸ್ಕರಿಸಲು ಒತ್ತಾಯಿಸಲಾಯಿತು. ಆದರೆ ಇಂತಹ ಪರಿಸ್ಥಿತಿಯಲ್ಲಿಯೂ ಬಿಲಾಲ್, ಅಹದ್ ಅಹದ್, ಅಲ್ಲಾಹ್ ಏಕೈಕನು, ಅಲ್ಲಾಹ್ ಏಕೈಕನು ಎಂದು ಪುನರುಚ್ಚರಿಸುತ್ತಿದ್ದರು. ಕೊನೆಗೆ ಅಬೂಬಕರ್, ಅವರನ್ನು ಖರೀದಿಸಿ ಬಿಡುಗಡೆಗೊಳಿಸಿದರು. ಮದೀನಾದಲ್ಲಿ ಇಸ್ಲಾಮೀ ಆಡಳಿತ ಸ್ಥಾಪನೆಗೊಂಡನಂತರ ಬಿಲಾಲ್ 'ಮಸ್ಜಿದ್ ನಬವಿ'ಯಲ್ಲಿ ಅಝಾನ್ ನೀಡುವ ಕಾರ್ಯವನ್ನು ನಿರ್ವಹಿಸಿದರು. ಇಸ್ಲಾಮಿನ ಹಾದಿಯಲ್ಲಿ ಅವರು ಎದುರಿಸಿದ

ಸಂಕಷ್ಟಗಳಿಗಾಗಿ, ಅವರ ಅಚಲ ವಿಶ್ವಾಸಕ್ಕಾಗಿ, ಅವರ ಸುಮಧುರ ಕಂಠಕ್ಕಾಗಿ ಅವರನ್ನು ಬಹಳ ಗೌರವದಿಂದ ಕಾಣಲಾಗುತ್ತಿತ್ತು.

● ಅಬೂಲಹಬ್ ಈಗ ಇಸ್ಲಾಮ್ ವಿರೋಧದ ನಾಯಕತ್ವ ವಹಿಸಿಕೊಂಡರು. ಮುಹಮ್ಮದ್‌ರನ್ನು ನಾನಾ ರೀತಿಯಲ್ಲಿ ಪೀಡಿಸಲು ಆರಂಭಿಸಿದರು. ಅಬೂಲಹಬ್‌ನ ಈರ್ವರು ಪುತ್ರರು ಪ್ರವಾದಿರ ಪುತ್ರಿಯರಾದ ರುಕಯ್ಯಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮತ್ತು ಉಮ್ಮೆಕುಲ್ಸೂಮ್‌ರನ್ನು ವಿವಾಹವಾಗಿದ್ದರು. ಅಬೂಲಹಬ್ ತನ್ನ ಪುತ್ರರಿಗೆ ವಿಚ್ಛೇದನ ನೀಡುವಂತೆ ಒತ್ತಾಯಿಸಿದನು. ಪ್ರವಾದಿರ ಎರಡನೇ ಪುತ್ರ ನಿಧನ ಹೊಂದಿದಾಗ ಆತನು ಹರ್ಷ ವ್ಯಕ್ತಪಡಿಸಿದ್ದನು. ಪ್ರವಾದಿರ ಹಿಮ್ಮಡಿಗಳಿಂದ ರಕ್ತ ಬರುವಂತೆ ಆತ ಕಲ್ಲು ಎಸೆಯುತ್ತಿದ್ದನೆಂದು ತಾರಿಕ್ ಬಿನ್ ಅಬ್ದುಲ್ಲಾ ವರದಿ ಮಾಡಿದ್ದಾರೆ.

● ಅಬೂಲಹಬ್‌ನ ಪತ್ನಿ ಉಮ್ಮೆ ಜಮೀಲ್ ಸಹ ಮುಹಮ್ಮದ್‌ರನ್ನು ಪೀಡಿಸುವುದರಲ್ಲಿ ಹಿಂದೆ ಉಳಿದಿರಲಿಲ್ಲ. ಮುಹಮ್ಮದ್ ಸಾಗುತ್ತಿದ್ದ ದಾರಿಯಲ್ಲಿ ಆಕೆ ಮುಳ್ಳುಕಂಟಿಗಳನ್ನು ಹಾಸುತ್ತಿದ್ದಳು. ಅತ್ಯಂತ ಕೆಟ್ಟ ಪ್ರವೃತ್ತಿಯ, ಗುಣಗಳನ್ನು ಆಕೆ ಹೊಂದಿದ್ದಳು. ಪ್ರವಾದಿರನ್ನು ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದಳು. ಪವಿತ್ರ ಕುರ್‌ಆನ್ ಆಕೆಯನ್ನು ಕುಪ್ರಚಾರಕಳು ಎಂಬ ಹೆಸರಿನಿಂದ ಉಲ್ಲೇಖಿಸಿದೆ.

● ಒಮ್ಮೆ ಪ್ರವಾದಿ ಕಅಬಾದಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅಬೂಜಹಲ್ ಇತರ ಕುರೈಶ್ ಸರದಾರರೊಡನೆ ಕುಳಿತು ಹರಟೆ ಹೊಡೆಯುತ್ತಿದ್ದನು. ಗುಂಪಿನಲ್ಲಿ ಒಬ್ಬನು "ನಿಮ್ಮಲ್ಲಿ ಯಾರು ಒಂಟೆಯ ಕರುಳನ್ನು ತಂದು ಮುಹಮ್ಮದ್ ನಮಾಝ್‌ನಲ್ಲಿ ಸಾಷ್ಟಾಂಗವೆರಗಿರುವಾಗ ಅವರ ಮೇಲೆ ಹಾಕಲು ತಯಾರಿರುವಿರಿ"? ಎಂದು ಪ್ರಶ್ನಿಸಿದನು. ಉತ್ಬಾ ಈ ಕಾರ್ಯವನ್ನು ಮಾಡಲು ಸಿದ್ಧನಾದನು. ಆತನು ಒಂಟೆಯ ಕರುಳನ್ನು ತಂದು ಮುಹಮ್ಮದ್ ಸಾಷ್ಟಾಂಗವೆರಗಿದ್ದಾಗ ಅವರ ಭುಜದ ಮೇಲೆ ಇರಿಸಿದನು. ಗುಂಪಿನಲ್ಲಿದ್ದವರೆಲ್ಲಾ ಕೇಕೆ ಹಾಕಿ, ಸಿಳ್ಳುಹಾಕಿ ಸಂತೋಷವನ್ನು ವ್ಯಕ್ತಪಡಿಸಿದರು. ಮುಹಮ್ಮದ್‌ರ ಪುತ್ರಿ ಫಾತಿಮಾ ಬಂದು ಅದನ್ನು ತೆಗೆಯುವವರೆಗೆ ಮುಹಮ್ಮದ್ ಸಾಷ್ಟಾಂಗದ ಸ್ಥಿತಿಯಲ್ಲಿಯೇ ಇದ್ದರು.

● ಒಂದು ದಿನ ಮುಹಮ್ಮದ್ ಕಅಬಾದಲ್ಲಿ ನಮಾಝ್ ನಿರ್ವಹಿಸುತ್ತಿದ್ದಾಗ ತನ್ನ ವಸ್ತ್ರವನ್ನು ಮುಹಮ್ಮದ್‌ರ ಕೊರಳಿಗೆ ಹಾಕಿ ಜೋರಾಗಿ ಎಳೆದನು. ಮುಹಮ್ಮದ್‌ರಿಗೆ ಉಸಿರುಗಟ್ಟಿದಂತಾಯಿತು.

ಒಬ್ಬರು ಓಡಿ ಹೋಗಿ ಅಬೂಬಕರ್‌ರಿಗೆ ನಡೆದ ಘಟನೆಯನ್ನು ತಿಳಿಸಿದರು. ಅಬೂಬಕರ್ ಕೂಡಲೇ ಸ್ಥಳಕ್ಕೆ ಧಾವಿಸಿ ಉತ್ಬಾನನ್ನು ಪ್ರವಾದಿರಿಂದ ದೂರ ತಳ್ಳಿ,

ಹೇಳಿದರು: "ಓರ್ವ ವ್ಯಕ್ತಿಯು ಅಲ್ಲಾಹ್ ನನ್ನ ಆರಾಧ್ಯನಾಗಿದ್ದಾನೆ ಎಂದ ಮಾತ್ರಕ್ಕೇ ಆತನನ್ನು ಕೊಲ್ಲಲು ಯತ್ನಿಸುವುದೇ?"

ಒಂದು ದಿನ ಉತ್ಬಾ ಪ್ರವಾದಿರ ಬಳಿ ಬಂದು ಉಚ್ಚ ಸ್ವರದಲ್ಲಿ ಈ ರೀತಿ ಹೇಳಿದ: "ನಾನು ಕುರ್‌ಆನಿನ ಯಾವುದೇ ಸೂಕ್ತದ ಮೇಲೆ ವಿಶ್ವಾಸವಿರಿಸುವುದಿಲ್ಲ." ಇಷ್ಟು ನುಡಿದು ಆತನು ಮುಹಮ್ಮದ್‌ರನ್ನು ಎಳೆದಾಡಿ, ಅವರ ಅಂಗಿಯನ್ನು ಹರಿದು ಅವರತ್ತ ಉಗುಳಿದ.

● ಇಸ್ಲಾಮಿನ ಪರಮಶತ್ರು ಅಬುಜಹಲ್ ಒಮ್ಮೆ ತನ್ನ ಸಂಗಾತಿಗಳನ್ನು ಉದ್ದೇಶಿಸಿ ಈ ರೀತಿ ನುಡಿದನು. "ಮುಹಮ್ಮದ್ ನಮ್ಮ ದೇವಿ ದೇವತೆಗಳ ಬಗ್ಗೆ, ನಮ್ಮ ಧರ್ಮದ ಬಗ್ಗೆ ಲಘುವಾಗಿ ಮಾತಾಡುತ್ತಾನೆ. ನಾವು ಮಾಡುತ್ತಿರುವುದು ತಪ್ಪು ಎನ್ನುತ್ತಾನೆ.

ಮುಹಮ್ಮದ್‌ನಿಂದ ಉಂಟಾಗುತ್ತಿರುವ ಕಷ್ಟಗಳನ್ನು, ತೊಂದರೆಯನ್ನು ಶಾಶ್ವತವಾಗಿ ನಿವಾರಿಸಬಯಸುತ್ತಾನೆ. "ಮುಹಮ್ಮದ್ ನಮಾಝ್ ನಿರ್ವಹಿಸುತ್ತಿರುವಾಗ ಸಾಷ್ಟಾಂಗವೆರಗಿರುವ ಸಂದರ್ಭದಲ್ಲಿ ಅವನ ತಲೆಯ ಮೇಲೆ ಒಂದು ಬಂಡೆಕಲ್ಲನ್ನು ಹಾಕಿಬಿಡುತ್ತೇನೆ. ಅವನ ಮನೆತನದವರು ಏನು ಪ್ರತೀಕಾರದ ಕ್ರಮವನ್ನಾದರೂ ತೆಗೆದುಕೊಳ್ಳಲಿ." ಅಲ್ಲಿ ನೆರೆದಿದ್ದ ಜನರು ಅಬುಜಹಲ್‌ನನ್ನು ಅದೇ ರೀತಿ ಮಾಡುವಂತೆ ಹುರಿದುಂಬಿಸಿದರು.

ತರುವಾಯ, ಮಾರನೆಯ ದಿನ ಅಬೂಜಹಲ್ ಮುಹಮ್ಮದ್ ಬರುವುದನ್ನೇ ಕಾಯುತ್ತಿದ್ದನು. ಮುಹಮ್ಮದ್ ಆಗಮಿಸಿ ನಮಾಝಿನಲ್ಲಿ ನಿರತರಾದಾಗ, ಅವರು ಸಾಷ್ಟಾಂಗವೆರಗಿದ್ದ ಅವಕಾಶ ನೋಡಿ ಅಬುಜಹಲ್ ಬಂಡೆಕಲ್ಲನ್ನು ಅವರ ತಲೆಯ ಮೇಲೆ ಹಾಕಲು ಹೋದನು. ಆದರೆ ಕೆಲವೇ ಕ್ಷಣಗಳಲ್ಲಿ ಕಂಪಿಸುತ್ತಾ ಹಿಂದಕ್ಕೆ ಬಂದನು. ಅವನ ಮುಖ ಕಂಗೆಟ್ಟಿತ್ತು. ಕೈಯಿಂದ ಬಂಡೆಕಲ್ಲು ಜಾರಿತ್ತು. ಏನಾಗುವುದೋ ಎಂದು ಕಾತುರದಿಂದ ವೀಕ್ಷಿಸುತ್ತಿದ್ದವರು ಆಶ್ಚರ್ಯ ಚಕಿತರಾಗಿ ವಿಚಾರಿಸಿದಾಗ ಅಬುಜಹಲ್,

"ನಾನು ಕಲ್ಲುಬಂಡೆಯನ್ನು ಹಾಕಲು ಮುಹಮ್ಮದ್‌ರ ಹತ್ತಿರಕ್ಕೆ ಹೋದಾಗ ವಿಚಿತ್ರರೂಪದ, ಕೋರೆಹಲ್ಲುಗಳನ್ನು ಹೊಂದಿರುವ ಒಂಟೆಯನ್ನು ನೋಡಿದೆ. ಕ್ಷಣಮಾತ್ರದಲ್ಲಿ ಅದು ನನ್ನನ್ನು ತಿಂದು ಬಿಡುವುದರಲ್ಲಿತ್ತು" ಎಂದನು. ಈ ಘಟನೆಯ ಬಗ್ಗೆ ಪ್ರಸ್ತಾಪಿಸುತ್ತಾ ಮುಹಮ್ಮದ್, ಅದು ಜಿಬ್ರೀಲ್(ಅವರ ಮೇಲೆ ಶಾಂತಿ ಇರಲಿ) ಆಗಿದ್ದರೆಂದೂ, ಅಬುಜಹಲ್ ಏನಾದರೂ ನನ್ನ ಹತ್ತಿರಕ್ಕೆ ಬಂದಿದ್ದರೆ ಅವನನ್ನು ಕೊಂದು ಬಿಡುತ್ತಿದ್ದರೆಂದು ನುಡಿದರು.

# ಜಾದೂಗಾರ

ಕುರೈಶ್ ಸರದಾರರು ಪ್ರವಾದಿರ (ಅವರ ಮೇಲೆ ಶಾಂತಿ ಇರಲಿ) ಪರಿಹಾಸ್ಯವನ್ನು ಮುಂದುವರೆಸಿ ಇತರ ಜನರನ್ನೂ ಅವರ ಅಪಮಾನ ಮಾಡಲು, ಅವರನ್ನು ಟೀಕಿಸಲು ಒತ್ತಾಸೆ ನೀಡಿದರು. ಮುಹಮ್ಮದ್ ಜನ ಸಾಮಾನ್ಯರಂತೆ ಸಂತೆ, ಮಾರುಕಟ್ಟೆಗೆ ಹೋಗುತ್ತಿದ್ದು, ಓರ್ವ ಜನ ಸಾಮಾನ್ಯ ವ್ಯಕ್ತಿಯನ್ನು ಪ್ರವಾದಿಯಾಗಿ ಆರಿಸಿರುವ ಔಚಿತ್ಯವನ್ನು ಕುರೈಶರು ಪ್ರಶ್ನಿಸುತ್ತಿದ್ದರು.

ಮುಹಮ್ಮದ್ ವಾಸ್ತವಿಕವಾಗಿ ಓರ್ವ ಮಾಂತ್ರಿಕ ಅಥವಾ ಮಾಟಗಾರ ಅಗಿರುವರೆಂದೂ, ಇವರು ಮಕ್ಕಳನ್ನು ಹೆತ್ತವರಿಂದ, ಪತಿಯರನ್ನು ಅವರ ಪತ್ನಿಯರಿಂದ ಬೇರ್ಪಡಿಸಿ ಕುಟುಂಬಗಳನ್ನು ಒಡೆಯುತ್ತಿರುವರೆಂದೂ, ಇವರು ಸಮಾಜಕ್ಕೆ ಕಂಟಕ ಪ್ರಾಯರಾಗಿರುವರೆಂದೂ ಪ್ರಚಾರ ಮಾಡಲಾಯಿತು.

ಮಕ್ಕಾದ ವಾರ್ಷಿಕ ಸಂತೆಯ ಸಮಯ ಹತ್ತಿರ ಬಂದಂತೆ ಎಲ್ಲಿ ಮುಹಮ್ಮದರು ಮಕ್ಕಾಕ್ಕೆ ಆಗಮಿಸುವ ಸಂದರ್ಶಕರ ಎದುರು ಇಸ್ಲಾಮಿನ ಸಂದೇಶವನ್ನು ಇಡುವರೋ ಎಂಬ ಭೀತಿ ಕುರೈಶ್ ಸರದಾರರಿಗೆ ಕಾಡಿತು. ಇದನ್ನು ತಡೆಯಲಿಕ್ಕಾಗಿ ಕುರೈಶರು ಮಕ್ಕಾದ ವಿವಿಧ ಪ್ರವೇಶದ್ವಾರಗಳಲ್ಲಿ ಹೊರ ಪ್ರದೇಶದಿಂದ ಬರುವ ಜನರನ್ನು ಮುಹಮ್ಮದ್‌ರಿಂದ ಎಚ್ಚರಿಸಲಿಕ್ಕಾಗಿ ಕೆಲವ್ಯಕ್ತಿಗಳನ್ನು ನೇಮಿಸಿದರು.

ಕುರೈಶರ ಈ ತಂತ್ರ ಬಹಳಷ್ಟು ಮಟ್ಟಿಗೆ ಸಫಲವಾಯಿತು. ಆದಾಗ್ಯೂ ಕೆಲವರು ಕುರೈಶರ ಮಾತುಗಳಿಂದ ಪ್ರಭಾವಿತರಾಗದಿರಲಿಲ್ಲ. ಉದಾರಣೆಗೆ ಬನು ಗಿಫ್ಫಾರ್ ಗೋತ್ರದ ದರೋಡಕೋರರಾಗಿದ್ದ ಅಬುದರ್ರ್, ಅವರು ಮುಹಮ್ಮದ್ ಏಕೈಕ ದೇವನನ್ನು ಆರಾಧಿಸಬೇಕೆಂಬ ನವೀನ ಬೋಧನೆಯನ್ನು ಮಾಡುತ್ತಿ ರುವರೆಂಬುದನ್ನುಕೇಳಿದ್ದರು. ಮುಹಮ್ಮದ್ ಬೋಧಿಸುತ್ತಿರುವ ಹೊಸ ಧರ್ಮ ಏನಾಗಿರಬಹುದೆಂಬ ಕುತೂಹಲದಿಂದ ಕಅಬದ ಬಳಿ ಹೋಗಿ ಇಲ್ಲಿ ಮುಹಮ್ಮದ್ ಎಂಬುವವರು ಯಾರು ಎಂದು ವಿಚಾರಿಸಿದರು. ನಂತರ ಮುಹಮ್ಮದ್‌ರಿಗೆ ನೀವು ಜನರಿಗೆ ನೀಡುತ್ತಿರುವ ಹೊಸಧರ್ಮದ ಸಂದೇಶದ ಬಗ್ಗೆ ವಿವರಿಸಿರಿ ಎಂದರು. ಮುಹಮ್ಮದ್ ಇಸ್ಲಾಮಿನ ಪರಿಚಯವನ್ನು ಅಬುದರ್ರ್ ಗಿಫ್ಫಾರಿರವರಿಗೆ ನೀಡಿದರು. ಕೂಡಲೇ ಅವರು ಇಸ್ಲಾಮ್ ಅನ್ನು ಸ್ವೀಕರಿಸಿ ಮುಸ್ಲಿಮರಾದರು. ಪ್ರವಾದಿ ಸಂತೋಷದಿಂದ "ಅಲ್ಲಾಹ್ ಯಾರನ್ನು ಇಚ್ಛಿಸುತ್ತಾನೋ, ಅವರಿಗೆ ತನ್ನ ಅನುಗ್ರಹವನ್ನು ದಯಪಾಲಿಸುತ್ತಾನೆ" ಎಂದು ಉದ್ಗರಿಸಿದರು. ನಂತರ

ಅಬೂದರ್ರ್ ಗಿಫ್ಫಾರಿರವರು ಪ್ರವಾದಿರ ಹೆಸರಾಂತ ಅನುಯಾಯಿಯಾದರು. ಬಹಳ ಸರಳ ಜೀವಿಯಾಗಿದ್ದರು. ಅಲ್ಪ ವಸ್ತುಗಳಲ್ಲಿಯೇ ಸಂತೃಪ್ತಿಯನ್ನು ಹೊಂದುತ್ತಿದ್ದರು. ಸುಖಸಾಧನಗಳನ್ನು, ವಿಲಾಸದ ಜೀವನವನ್ನು ಅವರು ದ್ವೇಷಿಸುತ್ತಿದ್ದರು.

## ಇಸ್ಲಾಮಿನ ಪ್ರಥಮ ಹುತಾತ್ಮರು

ಯಮನ್ ದೇಶದ ಅಮ್ಮಾರ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಚಿಕ್ಕ ಪ್ರಾಯದಲ್ಲಿಯೇ ಇಸ್ಲಾಮ್ ಸ್ವೀಕರಿಸಿದ್ದರು. ನಂತರ ಪ್ರವಾದಿರ ಅಡಿಯಲ್ಲಿ ಅಲ್‌ಅರ್ಕಮ್‌ರ ಮನೆಯಲ್ಲಿ ಇಸ್ಲಾಮಿ ತರಬೇತಿಯನ್ನು ಪಡೆದಿದ್ದರು. ಅವರ ಇಸ್ಲಾಮ್ ಸ್ವೀಕಾರದ ಸ್ವಲ್ಪ ಕಾಲದಲ್ಲಿಯೇ ಅವರ ತಂದೆ ಯಾಸಿರ್ ಮತ್ತು ತಾಯಿ ಸುಮಯ್ಯಾ ಸಹ ಇಸ್ಲಾಮ್ ಸ್ವೀಕರಿಸಿದರು. ಇಸ್ಲಾಮ್ ಸ್ವೀಕರಿಸಿದ್ದಕ್ಕಾಗಿ ಅಬೂಜಹಲ್‌ನ ಕಂಗೆಣ್ಣಿಗೆ ಇವರು ಗುರಿಯಾದರು. ಅಬೂಜಹಲ್ ಅವರನ್ನು ಬಹಳ ಕ್ರೂರ ರೀತಿಯಲ್ಲಿ ಹಿಂಸಿಸಿದನು. ಸುಡುಬಿಸಿಲಿನಲ್ಲಿ ಅವರನ್ನು ಕಟ್ಟಿ ಹಾಕಿ ಚಿತ್ರಹಿಂಸೆ ನೀಡುತ್ತಿದ್ದನು. ಅವರನ್ನು ಹೊಡೆಯುತ್ತಿದ್ದನು. ನಿರಂತರ ಹಿಂಸೆಯ ಹೊರತಾಗಿಯೂ ಯಾಸಿರ್ ಮತ್ತು ಸುಮಯ್ಯ ಸತ್ಯವಿಶ್ವಾಸದಿಂದ ಸ್ವಲ್ಪವೂ ವಿಚಲಿತರಾಗಲಿಲ್ಲ. ಒಮ್ಮೆ ಅಬೂಜಹಲ್ ಅವರನ್ನು ಹಿಂಸಿಸುತ್ತಿದ್ದಾಗ ಸುಮಯ್ಯ ಆತನ ಹೇಡಿತನಕ್ಕಾಗಿ ಮೂದಲಿಸಿದರು. ಕೋಪಾವೇಶದಲ್ಲಿ ಅಬೂಜಹಲ್ ಸುಮಯ್ಯರನ್ನು ಕತ್ತಿಯಿಂದ ತಿವಿದು ಹತ್ಯೆ ಮಾಡಿದನು. ನಂತರ ಯಾಸಿರ್‌ರ ಕಡೆಗೆ ತಿರುಗಿ ಅವರನ್ನೂ ಹೊಡೆದು ಹತ್ಯೆ ಮಾಡಿದನು. ಹೀಗೆ ಯಾಸಿರ್ ಮತ್ತು ಸುಮಯ್ಯ ಅಲ್ಲಾಹನ ಮಾರ್ಗದಲ್ಲಿ ಪ್ರಥಮ ಹುತಾತ್ಮರಾದರು. ಏಕೈಕನಾದ ಅಲ್ಲಾಹನಲ್ಲಿ ಮತ್ತು ಅಲ್ಲಾಹನ ದಿವ್ಯಗ್ರಂಥ ಪವಿತ್ರ ಕುರ್‌ಆನಿನಲ್ಲಿ ಅವರು ಇಟ್ಟಿದ್ದ ವಿಶ್ವಾಸವೇ ಅವರ ಅಪರಾಧವಾಗಿತ್ತು.

ದಿನಗಳು ಕಳೆದಂತೆ ಇಸ್ಲಾಮಿನ ವಿರೋಧದಲ್ಲಿ ಹೆಚ್ಚಳವಾಗತೊಡಗಿತು.

ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಮುಸ್ಲಿಮರು, ಬಡ ಮುಸ್ಲಿಮರು ವಿಶೇಷವಾಗಿ ದೌರ್ಜನ್ಯಗಳಿಗೆ ಗುರಿಯಾದರು. ಮುಹಮ್ಮದ್‌ರ ಚಿಕ್ಕಪ್ಪ ಅಬೂತಾಲಿಬ್ ಮತ್ತು ಹಂಝ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮುಹಮ್ಮದ್‌ರಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿ ಅಭಯವನ್ನು ನೀಡಿದ್ದರು. ಆದರೆ ಈ ರಕ್ಷಣೆಯು ಇಸ್ಲಾಮ್ ಸ್ವೀಕರಿಸಿದ್ದ ಎಲ್ಲಾ ಮುಸ್ಲಿಮರಿಗೆ ಲಭ್ಯವಿರಲಿಲ್ಲ. ಸಾಮಾನ್ಯ ಮುಸ್ಲಿಮರು ಅಪಮಾನಗಳನ್ನು, ಪರಿಹಾಸ್ಯವನ್ನು ಮತ್ತು ಹಿಂಸೆಯನ್ನು ಎದುರಿಸಬೇಕಾಯಿತು.

# ಕುರೈಶರಿಂದ ಪ್ರವಾದಿಯವರ ಚಾರಿತ್ರ್ಯವಧನ

ಪ್ರವಾದಿಯವರ ಕಾಲದಲ್ಲಿ ಈಗಿನಂತೆ ಮಾಧ್ಯಮಗಳಿರಲಿಲ್ಲ. ಆದರೂ ಕುರೈಶರು ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿರುದ್ಧ ಅಪ್ರಚಾರ ಮಾಡಲು, ಅವರ ಚಾರಿತ್ರ್ಯ ವಧನ ಮಾಡಲು ಹಿಂಜರಿಯಲಿಲ್ಲ. ಕುರೈಶರರಲ್ಲಿ ಅನೇಕ ಖ್ಯಾತ ಕವಿಗಳಿದ್ದರು. ಕುರೈಶ್ ಮುಖಂಡರು ಮುಹಮ್ಮದ್‌ರ ವಿರುದ್ಧ ಅಪ್ರಚಾರಕ್ಕಾಗಿ ಈ ಕವಿಗಳನ್ನು ಬಳಸಿಕೊಂಡರು.

ಕಅಬ್ ಬಿನ್ ಝುಹೈರ್, ಹಾರಿಸ್ ಬಿನ್ ತಲಾತಿಲ್, ಹುಬೈರ್ಥ ಬಿನ್ ಅಬಿ ವಹ್ಹಾಬ್, ಹುವಾರಿಸ್ ಬಿನ್ ನಫೀದ್ಧ, ಅಬ್ದುಲ್ಲಾ ಬಿನ್ ಕತಲ ಮೊದಲಾದವರು ಕವಿಗಳ ತಂಡದಲ್ಲಿ ಮುಂಚೂಣಿಯಲ್ಲಿದ್ದರು. ಕುರೈಶ್ ನಾಯಕರು ಏರ್ಪಡಿಸುತ್ತಿದ್ದ ಸಭೆಗಳಲ್ಲಿ ಈ ಕವಿಗಳು ಕವನ ಪಠಿಸುತ್ತಿದ್ದರು. ಈ ಕವನಗಳಲ್ಲಿ ಅವಾಚ್ಯ ಪದಗಳನ್ನು ಬಳಸಲಾಗುತ್ತಿತ್ತು. ಅಬ್ದುಲ್ಲಾ ಬಿನ್ ಖತ್ತಾಲ್‌ರ ದಾಸಿ ಫತಾನಾ ಮತ್ತು ಇಕ್ರಿಮಾ ಬಿನ್ ಅಬೂಜಹೆಲ್‌ರದಾಸಿ ಸಾರಾ ಇಂತಹ ಸಭೆಗಳಲ್ಲಿ ನರ್ತಿಸುತ್ತಿದ್ದರು. ಈ ಸಂದರ್ಭಗಳಲ್ಲಿ ಮದ್ಯಪಾನ ಸಾಮಾನ್ಯವಾಗಿರು ತ್ತಿತ್ತು. ಅವಾಚ್ಯ ಮತ್ತು ಅಶ್ಲೀಲ ಪದಗಳಿಂದ ತುಂಬಿದ ಕವನಗಳ ಪಠನದಿಂದ ಪ್ರವಾದಿ ಮತ್ತು ಸಹಾಬಿಗಳಿಗೆ ಬಹಳ ನೋವಾಗುತ್ತಿತ್ತು.

ಸ್ವಲ್ಪ ಕಾಲದಲ್ಲಿಯೇ ಖ್ಯಾತ ಕವಿ ಹಸ್ಸಾನ್ ಬಿನ್ ಸಾಬಿತ್ ಇಸ್ಲಾಮ್ ಸ್ವೀಕರಿಸಿದರು. ಅವರು ಇಸ್ಲಾಮಿನ ವೈಶಿಷ್ಟ್ಯಗಳನ್ನು ವಿವರಿಸುವ ಕವನಗಳನ್ನು ರಚಿಸಿದರು. ಪ್ರವಾದಿ ಹಸ್ಸಾನ್‌ರಿಗೆ ಮಸ್ಜಿದ್ ನಬವಿಯ ಮಿಂಬರ್‌ನಿಂದ ಕವಿತೆಗಳನ್ನು ಪಠಿಸಲು ಅನುಮತಿ ನೀಡಿದರು. ಈ ರೀತಿ ಇಸ್ಲಾಮ್ ವಿರೋಧಿ ಪ್ರಚಾರಕ್ಕೆ ತಕ್ಕ ಉತ್ತರ ದೊರಕಿತು.

ಈ ಆಧುನಿಕ ಕಾಲದಲ್ಲಿಯೂ ವಿವಿಧ ಮಾಧ್ಯಮಗಳ ಮೂಲಕ ಇಸ್ಲಾಮಿನ ವಿರುದ್ಧ ಅಪಪ್ರಚಾರ ನಡೆಯುತ್ತಿದೆ. ಕಾಲ ಬದಲಾದರೂ ಜನರ ಮನೋಭಾವದಲ್ಲಿ ಬದಲಾವಣೆ ಕಂಡುಬರುವುದಿಲ್ಲ.

# 5

# ಕ್ರಾಂತಿ

## ಬೌದ್ಧಿಕವಾಗಿ ಮತ್ತು ಸಾಮಾಜಿಕವಾಗಿ

ಕುರೈಶರ ವಿರೋಧವು ಕೇವಲ ಓರ್ವ ವ್ಯಕ್ತಿ ಹಾಗೂ ಆತನ ಸಂದೇಶದ ವಿರುದ್ಧವಾಗಿರಲಿಲ್ಲ. ಎಲ್ಲಾ ಸಂದೇಶವಾಹಕರೂ ತಮ್ಮ ಸಮುದಾಯದ ಗಣನೀಯ ಸಂಖ್ಯೆಯಿಂದ ವಿರೋಧವನ್ನು ಎದುರಿಸಿದ್ದರು. ಇದಕ್ಕೆ ಕಾರಣ, ಪ್ರವಾದಿಗಳ ಸಂದೇಶವು ಸಮಾಜದ ವ್ಯವಸ್ಥೆಯಲ್ಲಿ ಕ್ರಾಂತಿಯನ್ನು ಉಂಟುಮಾಡುತ್ತಿತ್ತು.

ವಿವಿಧ ಕಾಲಗಳಲ್ಲಿ ಬಂದ ಪ್ರವಾದಿಗಳಿಗೆ, ಅವರು ಜನರ ಮುಂದೆ ಸಂದೇಶವನ್ನಿಟ್ಟಾಗ ಜನರಿಂದ ಬಂದ ಪ್ರತಿಕ್ರಿಯೆಗಳನ್ನು ಕುರ್‌ಆನ್ ದಾಖಲಿಸಿದೆ. ಸಮಾಜದ ಮುಖಂಡರು ಪ್ರವಾದಿಗಳ ಸಂದೇಶದ ಕಾರಣ ತಮ್ಮ ಅಧಿಕಾರವನ್ನು, ಸ್ಥಾನಮಾನವನ್ನು ಕಳೆದುಕೊಳ್ಳುವ ಭಯದಿಂದ ಪ್ರವಾದಿಗಳನ್ನು ವಿರೋಧಿಸುತ್ತಿದ್ದರು. ಇದಕ್ಕೆ ಉದಾಹರಣೆ ಮೂಸಾ(ಅವರ ಮೇಲೆ ಶಾಂತಿ ಇರಲಿ) ಮತ್ತು ಹಾರೂನ್‌ರಿಗೆ (ಅವರ ಮೇಲೆ ಶಾಂತಿ ಇರಲಿ) ಫಿರ್‌ಔನ್‌ನ ಸಮುದಾಯದವರು ನೀಡಿದ ಉತ್ತರವಾಗಿದೆ.

> **"**ನಾವು ನಮ್ಮ ಪೂರ್ವಿಕರನ್ನು ಕಂಡಿದ್ದ ಪದ್ಧತಿಯಿಂದ ನಮ್ಮನ್ನು ಹಿಂತಿರುಗಿಸಲಿಕ್ಕಾಗಿಯೂ, ಭೂಮಿಯಲ್ಲಿ ನಿಮ್ಮಿಬ್ಬರ ಹಿರಿಮೆ ಸಂಸ್ಥಾಪಿಸಲಿಕ್ಕಾಗಿಯೂ ನೀನು ಬಂದಿರುವೆಯಾ? ನಾವು ನಿಮ್ಮ ಮಾತನ್ನು ಸ್ವೀಕರಿಸುವವರಲ್ಲ**"** (ಪವಿತ್ರ ಕುರ್‌ಆನ್ 10:78)

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮೂರ್ತಿಪೂಜೆಯನ್ನು ನಿರಾಕರಿಸಲು, ಏಕೈಕನಾದ ಅಲ್ಲಾಹನನ್ನು ಆರಾಧಿಸಲು, ಪರಲೋಕದ ಜೀವನದಲ್ಲಿ

ವಿಶ್ವಾಸವಿಡಲು, ನ್ಯಾಯವನ್ನು ಪರಿಪಾಲಿಸಲು, ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಲು ನೀಡಿದ ಕರೆಯು ಜನರಲ್ಲಿ ಬೌದ್ಧಿಕವಾಗಿ ಕ್ರಾಂತಿಯನ್ನುಂಟು ಮಾಡುವುದರಲ್ಲಿತ್ತು. ಮುಹಮ್ಮದ್‌ರ ಸಂದೇಶವು ಪರಲೋಕದ ಜೀವನಕ್ಕೆ ಒತ್ತು ನೀಡುತ್ತಿದ್ದರಿಂದ ಭೂಮಿಯ ಮೇಲೆ ಅಧಿಕಾರ ಶಾಹಿಗಳ ಅಧಿಕಾರದ ಬುನಾದಿಯನ್ನೇ ಅಲ್ಲಾಡಿಸಿತು.

ಏಕೈಕ ಆರಾಧ್ಯನ ಮೇಲೆ ವಿಶ್ವಾಸ ಮತ್ತು ಪರಲೋಕ ಜೀವನದ ಸಿದ್ಧಾಂತ, ನೈತಿಕತೆಯ ಬೋಧನೆಗಳು ನವಮುಸ್ಲಿಮರಿಗೆ ಅಧ್ಯಾತ್ಮಿಕ, ಬೌದ್ಧಿಕ ಮತ್ತು ಸಾಮಾಜಿಕವಾಗಿ ವಿಮೋಚನೆಯ ಹಾದಿಯನ್ನು ತೋರಿದವು. ಕುರೈಶ್ ಸರದಾರರು, ಮುಹಮ್ಮದ್‌ರ ಸಂದೇಶದ ಪರಿಣಾಮ ದೂರದೂರದವರೆಗೆ ವ್ಯಾಪಿಸಿ ಅವರ 'ಭಾಗ್ಯ'ದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಲಿದೆ ಎಂಬುದನ್ನು ಅರಿತುಕೊಂಡರು. ಏಕೈಕ ದೇವನ ಮೇಲಿನ ವಿಶ್ವಾಸವು ಮನುಷ್ಯನಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದು ಸಮಾಜದ ವ್ಯವಸ್ಥೆಯಲ್ಲಿ ಪರಿವರ್ತನೆಯನ್ನು ಉಂಟುಮಾಡಲಿದೆ ಎಂಬುದನ್ನು ಗ್ರಹಿಸಿದರು.

> 'ಹೇಳಿರಿ, "ಆತನು ಅಲ್ಲಾಹನು. ಆತನು ಏಕೈಕನು. ಆತನಿಗೆ ಯಾವ ಸಂತಾನವಿಲ್ಲ. ಆತನು ಯಾರ ಸಂತಾನವೂ ಅಲ್ಲ. ಆತನಿಗೆ ಸರಿಸಮಾನರಾದವರು ಯಾರೂ ಇಲ್ಲ". (ಪವಿತ್ರ ಕುರ್‌ಆನ್:112)

ಕುರ್‌ಆನಿನ ಈ ಸೂಕ್ತವು ಒಂದು ಗಡಿರೇಖೆಯ ಕಡೆಗೆ ಸೂಚನೆಯನ್ನು ನೀಡುತ್ತದೆ.

> "ಹೇಳಿಬಿಡಿರಿ, ಸತ್ಯನಿಷೇಧಿಗಳೇ, ನೀವು ಆರಾಧಿಸುವವು ಗಳನ್ನು ನಾನು ಆರಾಧಿಸುವುದಿಲ್ಲ" ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ." (ಪವಿತ್ರ ಕುರ್‌ಆನ್:109)

ಕುರೈಶ್ ಸರದಾರರು ತಾವು ಅನುಸರಿಸುತ್ತಿದ್ದ ಬಹುದೇವಾರಾಧಕ ಧರ್ಮ ಮತ್ತು ಮುಹಮ್ಮದ್ ಬೋಧಿಸುತ್ತಿದ್ದ ಏಕದೇವ ಸಿದ್ಧಾಂತಗಳ ನಡುವೆ ಒಂದು ಬಗೆಯ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಬಯಸಿದಾಗ ಮೇಲಿನ ಅಧ್ಯಾಯವು ಅವತೀರ್ಣಗೊಂಡಿತು. ಕುರ್‌ಆನಿನ ಈ ಸೂಕ್ತದ ಅರ್ಥ ಮತ್ತು ಸಂದೇಶವು ಸ್ಪಷ್ಟವಾಗಿದೆ. ಈ ಎರಡೂ ಸಿದ್ಧಾಂತಗಳ ನಡುವೆ ಹೊಂದಾಣಿಕೆ ಮಾಡಲಾಗದಂತಹ ವ್ಯತ್ಯಾಸವಿದ್ದು ಆದಾಗ್ಯೂ ಪರಸ್ಪರರ ನಂಬಿಕೆಗಳನ್ನು ಗೌರವದಿಂದ ಕಾಣಲು ಆಸ್ಪದವನ್ನು ನೀಡುತ್ತದೆ.

# ಮೂರು ಪ್ರಶ್ನೆಗಳು

ಕುರೈಶರು ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಸಂದೇಶವು ಹರಡದಂತೆ ತಡೆಯಲು ಚಿಂತಿತರಾಗಿದ್ದರು. ಮದೀನಾದ ಯಹೂದಿಗಳು ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಬೋಧಿಸುತ್ತಿದ್ದ ಏಕದೇವನ ಆರಾಧನೆಯನ್ನೇ ಪ್ರತಿಪಾದಿಸುತ್ತಿದ್ದರಿಂದ ಹಾಗೂ ಮುಹಮ್ಮದ್ ಅವರ ಪ್ರವಾದಿ ಮೂಸಾ(ಅವರ ಮೇಲೆ ಶಾಂತಿ ಇರಲಿ)ರನ್ನು ಉಲ್ಲೇಖಿಸುತ್ತಿದ್ದರಿಂದ, ಮುಹಮ್ಮದ್‌ರ ಧರ್ಮದ ಸತ್ಯತೆಯ ಬಗ್ಗೆ ತಿಳಿಯಲು ಮದೀನಾಕ್ಕೆ ಒಂದು ನಿಯೋಗವನ್ನು ಕಳುಹಿಸಲು ಕುರೈಶ ಸರದಾರರು ನಿರ್ಧರಿಸಿದರು.

ಯಹೂದಿ ಧಾರ್ಮಿಕ ವಿದ್ವಾಂಸರು ಮುಹಮ್ಮದ್‌ರ ಪ್ರವಾದಿತ್ವದ, ಧರ್ಮದ ಸತ್ಯತೆಯನ್ನು ಅರಿಯಲು, ಮುಹಮ್ಮದ್‌ರಿಗೆ ಮೂರು ಪ್ರಶ್ನೆಗಳನ್ನು ಕೇಳುವಂತೆ ನಿಯೋಗದ ತಂಡಕ್ಕೆ ತಿಳಿಸಿದರು. ಮೊದಲನೆಯ ಪ್ರಶ್ನೆ ರೂಹ್ (ಆತ್ಮ)ಗೆ ಕುರಿತಾಗಿತ್ತು. ಎರಡನೆಯ ಪ್ರಶ್ನೆ ಕಹ್ಫ್ (ಗುಹೆಯುವರು) ಯಾರಾಗಿದ್ದರು? ಎಂದು ಮತ್ತು ಮೂರನೆಯ ಪ್ರಶ್ನೆ ದುಲ್‌ಕರ್ನೈನ್‌ರ ಕಥೆಗೆ ಸಂಬಂಧಿಸಿತ್ತು.

ಕುರೈಶರ ನಿಯೋಗವು ಸಂತೋಷದಿಂದ ಮದೀನಾದಿಂದ ಮರಳಿತು. ಮುಹಮ್ಮದ್‌ರನ್ನು ಈಗ ಬೋನಿಗೆ ಸಿಕ್ಕಿಸಬಹುದೆಂದು ಅವರು ಭಾವಿಸಿದರು. ಮಕ್ಕಾ ಹಿಂತೆರಳಿದ ನಂತರ ಮುಹಮ್ಮದ್‌ರಿಗೆ ಯಹೂದಿ ವಿದ್ವಾಂಸರು ತಿಳಿಸಿದ್ದ ಮೂರು ಪ್ರಶ್ನೆಗಳನ್ನು ಕೇಳಿದರು. ಪ್ರವಾದಿರು ತತ್‌ಕ್ಷಣ "ನಿಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ನಾನು ನಾಳೆ ನೀಡುತ್ತೇನೆ" ಎಂದು ಉತ್ತರಿಸಿದರು.

ಆದರೆ ಮಾರನೆಯ ದಿನ ದೇವಚರ ಜಿಬ್ರೀಲ್(ಅವರ ಮೇಲೆ ಶಾಂತಿ ಇರಲಿ) ಪ್ರತ್ಯಕ್ಷರಾಗಲಿಲ್ಲ. ಕುರೈಶರು ಕೇಳಿದ್ದ ಮೂರು ಪ್ರಶ್ನೆಗಳಿಗೆ ಉತ್ತರ ಅಲ್ಲಾಹನಿಂದ ಅವತೀರ್ಣವಾಗಲಿಲ್ಲ. ಇದೇ ರೀತಿ ಹದಿನಾಲ್ಕು ದಿನಗಳು ಕಳೆದವು. ಕುರೈಶರು ಆನಂದದಿಂದ ಕುಣಿದಾಡಿದರು. ಯಹೂದಿಗಳು ತಿಳಿಸಿದ್ದ ಮೂರು ಪ್ರಶ್ನೆಗಳಿಗೆ ಮುಹಮ್ಮದ್ ಉತ್ತರ ನೀಡಲು ವಿಫಲರಾಗಿದ್ದರಿಂದ, ಮುಹಮ್ಮದ್ ಕಪಟ ಪ್ರವಾದಿಯಾಗಿರುವರೆಂಬುದು ಸಾಬೀತಾಗಿದೆ ಎಂದು ಅವರು ಭಾವಿಸಿದರು. ಇತ್ತ ಅಲ್ಲಾಹನಿಂದ ಉತ್ತರಗಳು ಅವತೀರ್ಣಗೊಳ್ಳದಿದ್ದುದರಿಂದ ಮುಹಮ್ಮದ್ ದುಃಖಿತರಾದರು. ಅಲ್ಲಾಹ್ ನನ್ನನ್ನು ಕೈಬಿಟ್ಟಿರುವನೇ? ಎಂದು ಚಿಂತಿತರಾದರು. ತಮ್ಮ ಪ್ರಶ್ನೆಗಳಿಗೆ ಮುಹಮ್ಮದ್ ಇನ್ನೂವರೆಗೂ ಉತ್ತರಿಸದಿರದಕ್ಕಾಗಿ ಕುರೈಶರ ಕುಹಕದ ಮಾತುಗಳು ಮುಂದುವರೆದಿದ್ದವು.

# ಇನ್‌ಶಾ ಅಲ್ಲಾಹ್
# "ಅಲ್ಲಾಹ್ ಇಚ್ಛಿಸಿದರೆ"

ಎರಡು ವಾರಗಳ ಕಾಯುವಿಕೆಯ ನಂತರ ದಿವ್ಯವಾಣಿ ಅವತೀರ್ಣಗೊಂಡಿತು.

> "ಮತ್ತು ಗಮನಿಸಿರಿ ಯಾವ ವಿಷಯದ ಬಗೆಗೂ ನಾನು ನಾಳೆ ಈ ಕೆಲಸವನ್ನು ಮಾಡಿ ಬಿಡುವೆನು ಎನ್ನಬೇಡಿರಿ, ಅಲ್ಲಾಹನು ಇಚ್ಛಿಸುವ ಹೊರತು (ನೀವೇನನ್ನೂ ಮಾಡಲಾರಿರಿ). ಮರವೆಯಿಂದ ಇಂತಹ ಮಾತು ನಿಮ್ಮ ಬಾಯಿಯಿಂದ ಬಂದರೆ ಕೂಡಲೇ ನಿಮ್ಮ ಪ್ರಭುವನ್ನು ಸ್ಮರಿಸಿಕೊಳ್ಳಿರಿ ಮತ್ತು ನನ್ನಪ್ರಭು ಈ ವಿಷಯದಲ್ಲಿ ಸತ್ಯಕ್ಕೆ ಸಮೀಪವಾದುದರ ಕಡೆಗೆ ನನಗೆ ಮಾರ್ಗದರ್ಶನ ಮಾಡುವನೆಂದು ನಾನು ನಿರೀಕ್ಷಿಸುತ್ತೇನೆ ಎನ್ನಿರಿ."
> (ಪವಿತ್ರ ಕುರ್‌ಆನ್ 18:23–24)

ಈ ದಿವ್ಯವಾಣಿಯು ಖಂಡನೆಯನ್ನೂ, ಬೋಧನೆಯನ್ನೂ ಒಳಗೊಂಡಿತ್ತು. ಮುಹಮ್ಮದ್‌ರ ಸ್ಥಾನಮಾನ, ಅವರ ಜ್ಞಾನ ಮತ್ತು ಅವರ ವಿಧಿಯು ಏಕೈಕ ಸಾರ್ವಭೌಮನಾದ ಅಲ್ಲಾಹನ ಮೇಲೆ ನೆಲೆ ನಿಂತಿತ್ತು. ಇದನ್ನು ಎಂದೂ ಅವರು ಮರೆಯಬಾರದು ಎಂದು ಅವರನ್ನು ಜ್ಞಾಪಿಸಲಾಯಿತು.

"ಅಲ್ಲಾಹನು ಇಚ್ಛಿಸಿದರೆ" ಎಂಬ ಪದಗಳು ಮನುಷ್ಯನ ಇತಿಮಿತಿಗಳನ್ನು ತೋರಿಸುತ್ತವೆ. ಓರ್ವ ವ್ಯಕ್ತಿಯು ಒಂದು ಕೆಲಸವನ್ನು ಮಾಡುತ್ತಿದ್ದರೂ, ಕೇವಲ ಅಲ್ಲಾಹನ ಸಹಾಯದಿಂದ ಮಾತ್ರ ಅವನಿಗೆ ಈ ಕಾರ್ಯವನ್ನು ಮಾಡಲು ಸಾಧ್ಯವಾಗಿದೆ ಎಂಬ ಅರಿವು ವ್ಯಕ್ತಿಗೆ ಉಂಟಾಗಿ, ವ್ಯಕ್ತಿಯಲ್ಲಿ ನಮ್ರತೆಯ ಭಾವನೆಯನ್ನು ಉಂಟುಮಾಡುತ್ತದೆ.

"ಅಲ್ಲಾಹನು ಬಯಸಿದರೆ" ಎಂಬ ಪದಗಳ ಅರ್ಥ ಮನುಷ್ಯನು ಯಾವುದೇ ಕಾರ್ಯವನ್ನು ಮಾಡಬಾರದು ಎಂದು ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮನುಷ್ಯನು ಕಾರ್ಯವನ್ನು ಕೈಗೊಳ್ಳುತ್ತಾ, ಈ ಕಾರ್ಯವನ್ನು ಮಾಡುವಲ್ಲಿ ಆತನಿಗಿರುವ ಇತಿಮಿತಿಗಳನ್ನು ನೆನಪಿನಲ್ಲಿಡಬೇಕು. ಎರಡನೆಯ ಬಾರಿ ಪ್ರವಾದಿರಿಗೆ ಸೃಷ್ಟಿಕರ್ತನು ಜಾಗೃತಗೊಳಿಸಿದ್ದನು. ಎಂತಹ ಕಠಿಣ ಪರಿಸ್ಥಿತಿಯು ಎದುರಾದರೂ ಓರ್ವನ ಶಕ್ತಿ, ಸಾಮರ್ಥ್ಯಗಳು, "ತಾನು ಸಾರ್ವಭೌಮನಾದ ಅಲ್ಲಾಹನ ಮೇಲೆ ಅವಲಂಬಿತನಾಗಿದ್ದೇನೆ" ಎಂಬ ಭಾವನೆಯಲ್ಲಿ ಅಡಕವಾಗಿರುತ್ತವೆ.

ಈ ದಿವ್ಯವಾಣಿಯ ಅವತೀರ್ಣದ ನಂತರವಷ್ಟೇ ಪ್ರವಾದಿರಿಗೆ ಕೇಳಲಾಗಿದ್ದ ಮೂರು ಪ್ರಶ್ನೆಗಳಿಗೆ ಅಲ್ಲಾಹನು ಉತ್ತರಗಳನ್ನು ಅವತೀರ್ಣಗೊಳಿಸಿದನು. ಅಲ್ಲಾಹನು ಉತ್ತರಗಳನ್ನು ತಿಳಿಸಲು ವಿಳಂಬ ಮಾಡಿದಕ್ಕೆ ಕಾರಣ ಸತ್ಯ ವಿಶ್ವಾಸಿಗಳ ವಿಶ್ವಾಸವನ್ನು

ಸುದೃಢಗೊಳಿಸಲಿಕ್ಕಾಗಿ ಯಾಗಿತ್ತು. ಈ ವಿಳಂಬವು ಮುಹಮ್ಮದ್ ಪವಿತ್ರ ಕುರ್‌ಆನ್‌ನನ್ನು ಸ್ವತಃ ರಚಿಸುತ್ತಿಲ್ಲವೆಂದೂ, ದಿವ್ಯವಾಣಿಯ ಅವತೀರ್ಣಗೊಳ್ಳುವಿಕೆಗೆ ಅವರು ಅಲ್ಲಾಹನ ಮೇಲೆ ಅವಲಂಬಿತವಾಗಿರುವರು ಎಂಬುದನ್ನು ಸಾಬೀತುಗೊಳಿಸಿತು.

"ರೂಹ್" (ಆತ್ಮ) ಗೆ ಸಂಬಂಧಿಸಿದ ಪ್ರಶ್ನೆಗೆ, ಈ ವಿಷಯವು ಅಲ್ಲಾಹನ ವಿಶೇಷ ಜ್ಞಾನಕ್ಕೆ ಸಂಬಂಧಿಸಿರುವುದಾಗಿದೆ ಎಂದು ತಿಳಿಸಲಾಯಿತು.

> "ಇವರು ನಿಮ್ಮೊಡನೆ 'ರೂಹ್' ಕುರಿತು ಪ್ರಶ್ನಿಸುತ್ತಾರೆ. ಹೇಳಿರಿ – ಈ 'ರೂಹ್' ನನ್ನ ಪ್ರಭುವಿನ ಅಪ್ಪಣೆಯಿಂದ ಬರುತ್ತದೆ. ಆದರೆ ನೀವು ಜ್ಞಾನದ ಅಲ್ಪಾಂಶವನ್ನು ಮಾತ್ರ ಪಡೆದಿರುತ್ತೀರಿ".
> (ಪವಿತ್ರ ಕುರ್‌ಆನ್ 17:85)

ಕಹ್ಫ್ (ಗುಹೆಯವರು) ಮತ್ತು ದುಲ್‌ಕರ್ನೈನ್‌ಗೆ ಸಂಬಂಧಿಸಿದಂತೆ ವಿವರಗಳು ಕುರ್‌ಆನಿನ 18ನೇ ಅಧ್ಯಾಯದಲ್ಲಿ ಅವತೀರ್ಣಗೊಂಡವು. ಕುರ್‌ಆನಿನ ಈ ಅಧ್ಯಾಯದಲ್ಲಿ ಈ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ನಿರೂಪಣೆ ಎಷ್ಟು ವಿವರಾತ್ಮಕವಾಗಿತ್ತೆಂದರೆ ಮದೀನಾದ ಯಹೂದಿ ವಿದ್ವಾಂಸರು ಮತ್ತು ಮಕ್ಕಾದ ಕುರೈಶ್ ಸರದಾರರು ಇದನ್ನು ಕೇಳಿ ದಂಗಾದರು. ಮುಹಮ್ಮದ್ ಈ ವಿವರಗಳನ್ನು ನೀಡಬಲ್ಲರು ಎಂದು ಅವರು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಪ್ರವಾದಿ ಮೂಸಾ ರವರು ಸಹ ಒಂದು ಕ್ಷಣದ ಮರೆವಿನಲ್ಲಿ ತಾವು ಪ್ರವಾದಿಯಾಗಿರುವ ನೆಲೆಯಲ್ಲಿ "ತಮಗೆ ತಿಳಿದಿದೆ" ಎಂದು ನುಡಿದಿದ್ದರು. ಅಲ್ಲಾಹ್, ಮೂಸಾರಿಗಿಂತ ಹೆಚ್ಚು ಅರಿತಿದ್ದ ಧುಲ್‌ಕರ್ನೈನ್‌ರನ್ನು ಮೂಸಾರ ಮುಖಾಮುಖಿಯನ್ನಾಗಿಸಿದ ಕತೆ ಇದೇ ಅಧ್ಯಾಯದಲ್ಲಿ ಬರುತ್ತದೆ. ದುಲ್‌ಕರ್ನೈನ್, ಮೂಸಾರಿಗೆ ಅಲ್ಲಾಹನಿಗಿರುವ ಉತ್ಕೃಷ್ಟ ಜ್ಞಾನದ ಬಗ್ಗೆ, ತಾಳ್ಮೆ ವಹಿಸುವ, ನಮ್ರತೆಯಿಂದ ಇರುವ ಮತ್ತು ಹೆಚ್ಚು ಪ್ರಶ್ನೆಗಳನ್ನು ಕೇಳದಿರುವಂತೆ ತಿಳಿ ಹೇಳಿದರು.

ಮೂಸಾರವರು ತೋರಿದ ಅಸಹನೆ, ಮುಹಮ್ಮದ್‌ರವರು ತಾವು ಅಲ್ಲಾಹನ ಮೇಲೆ ಅವಲಂಬಿತರಾಗಿರುವುದನ್ನು ಮರೆತದ್ದು, ಇಡಿಯ ಮಾನವ ಕುಲವು ಅಲ್ಲಾಹನಿಂದ ಕೇವಲ ಅಲ್ಪ ಜ್ಞಾನವನ್ನು ಪಡೆದಿರುವುದು, ಈ ಎಲ್ಲಾ ಘಟನೆಗಳು ಮುಸ್ಲಿಮರ ದುರ್ಬಲತೆ, ಅಲ್ಲಾಹನ ಮೇಲೆ ಅವರ ಅವಲಂಬನೆಯನ್ನು ತೋರುತ್ತಿದ್ದು, ಇದರ ಉಪದೇಶ ಕುರ್‌ಆನಿನ ಸಂಪೂರ್ಣ ಅಧ್ಯಾಯ "ಗುಹೆಯಲ್ಲಿ" ಕಾಣಸಿಗುತ್ತದೆ. ಮುಸ್ಲಿಮರು ತಮ್ಮನ್ನು ತಾವೇ ಮತ್ತು ಅಲ್ಲಾಹನನ್ನು ಎಂದೂ ಮರೆಯಬಾರದೆಂದು ಪ್ರವಾದಿ ಮುಸ್ಲಿಮರಿಗೆ ಕುರ್‌ಆನಿನ ಈ ಅಧ್ಯಾಯವನ್ನು ಪ್ರತಿ ಶುಕ್ರವಾರ ಪಠಿಸಲು ಆಜ್ಞಾಪಿಸಿರುವರು.

# 6

# ಇಥಿಯೋಪಿಯಾಕ್ಕೆ ವಲಸೆ

ದಿವ್ಯವಾಣಿಯ ಅವತೀರ್ಣ ಮುಂದುವರೆದ ಹಾಗೆ ಮುಸ್ಲಿಮರ ಮೇಲಿನ ದೌರ್ಜನ್ಯದಲ್ಲಿಯೂ ಹೆಚ್ಚಳವಾಗತೊಡಗಿತು: ಈಗ ದುರ್ಬಲ ಮುಸ್ಲಿಮರಷ್ಟೇ ಕುರೈಶರ ದೌರ್ಜನ್ಯಕ್ಕೆ ಗುರಿಯಾಗಲಿಲ್ಲ. ಸಮಾಜದ ಗಣ್ಯ ಮುಸ್ಲಿಮರೂ ಸಹ ಕುರೈಶರ ಅವಹೇಳನಕ್ಕೆ, ಕಿರುಕುಳಕ್ಕೆ ಗುರಿಯಾಗತೊಡಗಿದರು. ಉದಾಹರಣೆಗೆ ಅಬೂಬಕರ್ ಸಿದ್ದೀಕ್ ಮೊದಲಾದವರು. ಅಬೂತಾಲಿಬ್‌ರಿಂದ ಅಭಯವನ್ನು ಪಡೆದಿದ್ದ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರನ್ನೂ ಪರಿಹಾಸ್ಯ ಮಾಡಲಾಗುತ್ತಿತ್ತು ಮತ್ತು ಪೀಡಿಸಲಾಗುತ್ತಿತ್ತು.

ಪರಿಸ್ಥಿತಿಯು ಅಸಹನೀಯ ಮಟ್ಟಕ್ಕೆ ತಲುಪಿದಾಗ ಪ್ರವಾದಿತ್ವದ ಐದನೇ ವರ್ಷದಲ್ಲಿ ಪ್ರವಾದಿ ತಮ್ಮ ಸಂಗಾತಿಗಳನ್ನು ಉದ್ದೇಶಿಸಿ ಹೀಗೆ ಹೇಳಿದರು.

“ನೀವು ಇಲ್ಲಿಂದ ಹೊರಟು ಇಥಿಯೋಪಿಯಾಕ್ಕೆ ಹೋಗುವುದು ಒಳ್ಳೆಯದು. ಅಲ್ಲಿಯ ದೊರೆಯ ಆಡಳಿತದಲ್ಲಿ ಯಾರ ಮೇಲೂ ಅನ್ಯಾಯವಾಗುವುದಿಲ್ಲ. ಅದು ಧರ್ಮದ ನಾಡಾಗಿದೆ. ನಿಮ್ಮ ಕಷ್ಟಗಳನ್ನು ನಿವಾರಿಸಲು ಅಲ್ಲಾಹ್ ಏನಾದರೂ ಮಾರ್ಗ ತೋರುವವರೆಗೆ ನೀವು ಅಲ್ಲೇ ನೆಲೆಸಿರಿ.”

ಇಥಿಯೋಪಿಯಾದ ದೊರೆ ನಜ್ಜಾಶಿ ಕ್ರೈಸ್ತರಾಗಿದ್ದರು. ಅವರ ಒಳ್ಳೆಯ ಗುಣಗಳು ಮತ್ತು ಪ್ರಜೆಗಳೊಂದಿಗಿನ ಉತ್ತಮ ನಡವಳಿಕೆಯಿಂದಾಗಿ ಹೆಸರುವಾಸಿಯಾಗಿದ್ದರು. ಪ್ರವಾದಿರ ಆದೇಶದ ಮೇರೆಗೆ ಕೆಲ ಮುಸ್ಲಿಮರು ರಹಸ್ಯವಾಗಿ ಇಥಿಯೋಪಿಯಾಕ್ಕೆ ವಲಸೆ ಹೋಗಲು ಉದ್ಯುಕ್ತರಾದರು. 83 ಪುರುಷರು, ಮತ್ತು 20 ಮಹಿಳೆಯರು ಹೀಗೆ ಸುಮಾರು ನೂರು ಮಂದಿ ಮುಸ್ಲಿಮರು ಇಥಿಯೋಪಿಯಾಗೆ ಹೊರಟರು. ಈ ಘಟನೆಯು ಕ್ರಿ.ಶ. 615 ರಲ್ಲಿ ಜರುಗಿತು.

ಕೆಲವೇ ದಿನಗಳಲ್ಲಿ ಕುರೈಶ್ ಸರದಾರರಿಗೆ ಇದರ ಸುಳಿವು ದೊರೆಯಿತು. ಹೆಚ್ಚಿನ ಸಂಖ್ಯೆಯ ಗಣ್ಯ ಮುಸ್ಲಿಮರು ವಲಸೆ ಹೋಗಿರುವುದನ್ನು ಅವರು ಕಂಡುಕೊಂಡರು. ಮುಸ್ಲಿಮರ ಈ ತಂಡವು ಮಕ್ಕಾದ ಖ್ಯಾತಿಗೆ ಅಪವಾದ ತರಬಹುದು ಅಥವಾ ಇತರರೊಡನೆ ಕೈ ಜೋಡಿಸಿ ತಮ್ಮ ವಿರುದ್ಧ ತಿರುಗಿ ಬೀಳಬಹುದೆಂದು ಶಂಕಿಸಿದ ಕುರೈಶ್ ಸರದಾರರು ಅಬ್ದುಲ್ಲಾ ಬಿನ್ ಅಬೀ ರಬೀಅ ಮತ್ತು ಅಮ್ರ್ ಬಿನ್ ಅಸ್‌ರನ್ನು ದೊರೆ ನಜ್ಜಾಶಿಯ ಮನವೊಲಿಸಿ ಅವರಲ್ಲಿಗೆ ಪಲಾಯನಗೈದಿರುವ ಮುಸ್ಲಿಮರನ್ನು ಮರಳಿ ಕಳುಹಿಸುವಂತೆ ಕೋರಲು ಇಥಿಯೋಪಿಯಾಕ್ಕೆ ದೌಡಾಯಿಸಿದರು. ದೊರೆ ನಜ್ಜಾಷಿಯ ಆಸ್ಥಾನಿಕರನ್ನು ತಮ್ಮ ಪರವಾಗಿ ಮಾಡಿಕೊಳ್ಳಲು ಉಡುಗೊರೆಗಳನ್ನೂ ಕಾಣಿಕೆಗಳನ್ನೂ ಅವರೊಂದಿಗೆ ಕಳುಹಿಸಲಾಯಿತು.

## ದೊರೆ ನಜ್ಜಾಶಿ

ಅಬ್ದುಲ್ಲಾ ಬಿನ್ ರಬೀಅ ಮತ್ತು ಅಮ್ರ್ ಬಿನ್ ಆಸ್ ದೊರೆ ನಜ್ಜಾಶಿಯನ್ನು ಭೇಟಿ ಮಾಡಿ **"**ನಮ್ಮ ಕೆಲ ಅವಿವೇಕಿಗಳು ತಮ್ಮಲ್ಲಿಗೆ ಓಡಿ ಬಂದಿರುವರು. ನಮ್ಮ ಸರದಾರರು ನಮ್ಮನ್ನು ತಮ್ಮ ಬಳಿಗೆ ಕಳುಹಿಸಿರುವರು. ಈ ಜನರು ನಮ್ಮ ಧರ್ಮವನ್ನು ತೊರೆದಿರುವರು**"** ಎಂದು ನುಡಿದು ಅವರನ್ನು ಮರಳಿಸುವಂತೆ ವಿನಂತಿಸಿದರು. ಆದರೆ ದೊರೆ ನಜ್ಜಾಶಿ ಇದಕ್ಕೆ ಒಪ್ಪಲಿಲ್ಲ.

**"**ತಮ್ಮ ದೇಶವನ್ನು ತೊರೆದು ನನ್ನ ಸಾಮ್ರಾಜ್ಯದ ಮೇಲೆ ನಂಬಿಕೆ ಇಟ್ಟು ಆಶ್ರಯ ಕೋರಿ ಬಂದವರಿಗೆ ನಾನು ದ್ರೋಹ ಬಗೆಯಲಾರೆ. ಮೊದಲು ಅವರನ್ನು ಕರೆದು ನಿಜಾಂಶವೇನು ಎಂದು ವಿಚಾರಿಸುತ್ತೇನೆ**"** ಎಂದರು.

ಮಕ್ಕಾದ ವಲಸಿಗರು ಜಾಫರ್ ಬಿನ್ ಅಬೂತಾಲಿಬ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ರನ್ನು ದೊರೆ ನಜ್ಜಾಶಿಯ ಮುಂದೆ ತಮ್ಮ ಪರವಾಗಿ ಮಾತನ್ನು ಮಂಡಿಸಲು ಪ್ರತಿನಿಧಿಯಾಗಿ ಆರಿಸಿದರು. ದೊರೆ ನಜ್ಜಾಶಿ ಜಾಫರ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರಿಗೆ ಅವರ ಹೊಸ ಧರ್ಮದ ಕುರಿತು ವಿಚಾರಿಸಿದರು. ಜಾಫರ್ ಕುರ್‌ಆನ್ ಮತ್ತು ಮುಹಮ್ಮದ್‌ರ ಬೋಧನೆಯ ಮೂಲತತ್ವಗಳಾದ ಏಕದೇವನ ಆರಾಧನೆ, ಮೂರ್ತಿ ಪೂಜೆಯ ನಿರಾಕರಣೆ, ರಕ್ತ ಸಂಬಂಧಗಳನ್ನು ಗೌರವಿಸುವುದು, ಸತ್ಯವನ್ನು ನುಡಿಯುವುದು, ಅನ್ಯಾಯ, ಶೋಷಣೆಯ ವಿರುದ್ಧ ಹೋರಾಡುವುದು ಮೊದಲಾದವುಗಳನ್ನು ವಿವರಿಸಿದರು. ಜಾಫರ್, ಈ ಬೋಧನೆಗಳನ್ನು ಪಾಲಿಸಿದ ಕಾರಣಕ್ಕಾಗಿ ಕುರೈಶರು ಅವರ ಮೇಲೆ ದೌರ್ಜನ್ಯ ನಡೆಸುತ್ತಿರುವುದಾಗಿ, ಹಿಂಸೆಯನ್ನು ತಾಳಲಾರದೇ ಆಶ್ರಯಕ್ಕಾಗಿ ಇಥಿಯೋಪಿಯಾಕ್ಕೆ ವಲಸೆ ಬಂದಿರುವುದಾಗಿ ನುಡಿದರು.

ದೊರೆ ನಜ್ಜಾಶಿಯು, ಮುಹಮ್ಮದ್‌ರ ಮೇಲೆ ಅವತೀರ್ಣಗೊಳ್ಳುತ್ತಿರುವ ದಿವ್ಯವಾಣಿಯ ಕೆಲಭಾಗವನ್ನು ಪಠಿಸಲು ಕೋರಿದರು. ಜಾಫರ್ ಕುರ್‌ಆನಿನ ಅಧ್ಯಾಯ "ಮರ್ಯಮ್"ನ ಕೆಲ ಸೂಕ್ತಗಳನ್ನು ದೊರೆಯ ಮುಂದೆ ಪಠಿಸಿದರು.

> "ಓ ಪೈಗಂಬರರೇ, ಈ ಗ್ರಂಥದಲ್ಲಿ ಮರ್ಯಮರ ವಿಷಯ ಪ್ರಸ್ತಾಪಿಸಿರಿ. ಅವರು ತನ್ನವರಿಂದ ಸರಿದು ಪೂರ್ವದಿಕ್ಕಿನಲ್ಲಿ ಏಕಾಂತ ವಾಸದಲ್ಲಿದ್ದಾಗ ಹಾಗೂ ತೆರೆಯನ್ನಿಳಿಸಿ ಅವರಿಂದ ಮರೆಯಾಗಿ ಕುಳಿತಿದ್ದ ಸ್ಥಿತಿಯಲ್ಲಿ ನಾವು ಅವರ ಬಳಿಗೆ ನಮ್ಮ ರೂಹನ್ನು (ದೇವಚರನನ್ನು) ಕಳುಹಿಸಿದೆವು. ಅವನು ಅವರ ಮುಂದೆ ಮನುಷ್ಯ ರೂಪದಲ್ಲಿ ಪ್ರತ್ಯಕ್ಷನಾದನು. ಮರ್ಯಮ್ ಥಟ್ಟನೆ, "ನೀನೊಬ್ಬ ದೇವ ಭಯವುಳ್ಳವನಾಗಿದ್ದರೆ ನಾನು ನಿನ್ನಿಂದ ದಯಾಮಯನಾದ ದೇವನ ಅಭಯ ಯಾಚಿಸುತ್ತೇನೆ" ಎಂದರು. ಆಗ ಅವನು, "ನಾನು ನಿಮ್ಮ ಪ್ರಭುವಿನ ದೂತನಾಗಿರುತ್ತೇನೆ ಮತ್ತು ನಿಮಗೆ ಓರ್ವ ಪವಿತ್ರ ಬಾಲಕನನ್ನು ಕೊಡಲಿಕ್ಕಾಗಿ ಬಂದಿರುತ್ತೇನೆ" ಎಂದನು. ಆಗ ಮರ್ಯಮ್, "ನನ್ನನ್ನು ಪುರುಷನಾರೂ ಮುಟ್ಟದೇ ಇರುವಾಗ ನನ್ನಲ್ಲಿ ಬಾಲಕನಾಗುವುದು ಹೇಗೆ? ಮತ್ತು ನಾನೇನೂ ದುರಾಚಾರಿ ಸ್ತ್ರೀಯಲ್ಲ" ಎಂದರು. ಆಗ ದೇವಚರನು "ಹಾಗೆಯೇ ಆಗುವುದು ಇದು ನನಗೆ ಬಹಳ ಸುಲಭವಾದುದೆಂದೂ, ಆ ಬಾಲಕನನ್ನು ಜನರಿಗೆ ಒಂದು ನಿದರ್ಶನವನ್ನಾಗಿ ಮತ್ತು ನಮ್ಮ ಕಡೆಯಿಂದ ಒಂದು ಕರುಣೆಯನ್ನಾಗಿ ಮಾಡಲಿಕ್ಕೋಸ್ಕರ ನಾವು ಹಾಗೆ ಮಾಡುವೆವೆಂದೂ ನಿನ್ನ ಪ್ರಭು ಹೇಳುತ್ತಾನೆ. ಈ ಕಾರ್ಯ ಆಗಿಯೇ ತೀರಬೇಕಾಗಿದೆ" ಎಂದನು. (ಪವಿತ್ರ ಕುರ್‌ಆನ್ 19:16–21)

ದೊರೆ ನಜ್ಜಾಶಿ ಮತ್ತು ಆತನ ಆಸ್ಥಾನಿಕರು ದಿವ್ಯಗ್ರಂಥದ ಪಠಣದಿಂದ ಬಹಳ ಪ್ರಭಾವಿತರಾದರು. ನಜ್ಜಾಶಿ ನುಡಿದರು: "ಖಂಡಿತವಾಗಿಯೂ ಈ ವಾಣಿ ಮತ್ತು ಈಸಾ ತಂದ ವಾಣಿ ಎರಡೂ ಒಂದೇ ಮೂಲದಿಂದ ಹೊರಟಿದೆ."

ನಂತರ ಮಕ್ಕಾದಿಂದ ಬಂದಿದ್ದ ಇಬ್ಬರು ರಾಯಭಾರಿಗಳ ಕಡೆಗೆ ತಿರುಗಿ, "ಅಲ್ಲಾಹನಾಣೆ! ನಾನು ವಲಸಿಗರನ್ನು ನಿಮ್ಮ ವಶಕ್ಕೆ ಒಪ್ಪಿಸಲಾರೆ" ಎಂದು ನುಡಿದರು.

## ಈಸಾ

### (ಅವರ ಮೇಲೆ ಶಾಂತಿ ಇರಲಿ)

ತಮ್ಮ ಕುತಂತ್ರ ವಿಫಲವಾದುದನ್ನು ಕಂಡು ಮರುದಿನ ಅಮ್ರ್ ಬಿನ್‌ಆಸ್ ನಜ್ಜಾಶಿಯೊಡನೆ

"ತಾವು ಅವರೊಂದಿಗೆ ಮರ್ಯಮರ ಪುತ್ರ ಈಸಾ(ಅವರ ಮೇಲೆ ಶಾಂತಿ ಇರಲಿ)ರ ಬಗ್ಗೆ ಅವರ ನಂಬಿಕೆ ಏನೆಂದು ಕೇಳಿರಿ. ಅವರ ಕುರಿತು ಈ ಜನರು ನಿಮ್ಮ ನಂಬಿಕೆಗಳಿಗೆ ವಿರುದ್ಧವಾಗಿ ಹೇಳುತ್ತಾರೆ" ಎಂದರು.

ಆಗ ನಜ್ಜಾಶಿ ಪುನಃ ವಲಸಿಗರನ್ನು ಕರೆಸಿ "ಈಸಾರ ಕುರಿತು ಮುಹಮ್ಮದ್ ಏನು ನುಡಿಯುತ್ತಾರೆ" ಎಂದು ವಿಚಾರಿಸಿದರು. ಕ್ರೈಸ್ತರ ನಂಬಿಕೆಗಳಿಗೂ ಇಸ್ಲಾಮಿನ ಪ್ರತಿಪಾದನೆಯ ನಡುವೆ ಇರುವ ವ್ಯತ್ಯಾಸಗಳ ಕಾರಣದಿಂದ ನಜ್ಜಾಶಿ ತಮ್ಮನ್ನು ಮಕ್ಕಾಕ್ಕೆ ಹಿಂತಿರುಗಿಸಬಹುದೆಂಬ ಭಯ ಮುಸ್ಲಿಮರಿಗೆ ಆವರಿಸಿತು. ಆದಾಗ್ಯೂ, ಸತ್ಯವನ್ನೇ ನುಡಿಯಬೇಕೆಂದು ನಿರ್ಧರಿಸಿ, ಜಾಫರ್ ಸ್ವಲ್ಪವೂ ಅಳುಕದೇ,

"ಈಸಾ ಅಲ್ಲಾಹನದಾಸರು, ಅವನ ಸಂದೇಶವಾಹಕರು, ಅವನ ಕಡೆಯಿಂದ ಒಂದು ರೂಹ್ (ಆತ್ಮ) ಮತ್ತು ಕಲಿಮಃ (ವಚನ) ಆಗಿದ್ದು, ಅದನ್ನು ಅಲ್ಲಾಹನುಕುಮಾರಿಯಾಗಿದ್ದ ಮರ್ಯಮ್‌ರಿಗೆ ಇಳಿಸಿದ್ದನು" ಎಂದರು. ಇದನ್ನು ಕೇಳಿದ ನಜ್ಜಾಶಿ ನೆಲದಿಂದ ಒಂದು ಹುಲ್ಲು ಕಡ್ಡಿಯನ್ನೆತ್ತಿ,

"ದೇವನಾಣೆ! ಈಸಾ ನೀವು ಹೇಳಿದುದಕ್ಕಿಂತ ಈ ಹುಲ್ಲು ಕಡ್ಡಿಯಷ್ಟೂ ಹೆಚ್ಚಾಗಿರಲಿಲ್ಲ" ಎಂದು ಹೇಳಿದರು.

ಅನಂತರ ನಜ್ಜಾಶಿ ರಾಜನು ಮಕ್ಕಾದ ರಾಯಭಾರಿಗಳನ್ನು ಉದ್ದೇಶಿಸಿ "ನಾನು ಲಂಚ ಸ್ವೀಕರಿಸುವವನಲ್ಲ" ಎನ್ನುತ್ತಾ ಕುರೈಶರು ಕಳುಹಿಸಿದ್ದ ಬೆಲೆಬಾಳುವ ಕಾಣಿಕೆಗಳೆಲ್ಲವನ್ನೂ ಹಿಂದಿರುಗಿಸಿದರು. ಮುಹಾಜಿರ್‌ಗಳ ಕಡೆಗೆ ತಿರುಗಿ, "ನೀವು ನನ್ನ ಸಾಮ್ರಾಜ್ಯದಲ್ಲಿ ನೆಮ್ಮದಿಯಿಂದ ಬಾಳಬಹುದು" ಎಂದರು.

## ದುಷ್ಪರಿಣಾಮದ ಸಾಧ್ಯತೆ ಮತ್ತು ಸತ್ಯದ ಮಾತು

ನಜ್ಜಾಶಿ ರಾಜನ ದರಬಾರಿನಲ್ಲಿ ಮುಹಾಜಿರರು ಕಠಿಣ ಸತ್ವದ ಪರೀಕ್ಷೆಯನ್ನು ಎದುರಿಸಿದ್ದರು. ಈಸಾರ ಕುರಿತು ಸತ್ಯವನ್ನು ನುಡಿಯುವುದರಿಂದ ಅವರನ್ನು ದೇಶದಿಂದ ಹೊರಹಾಕುವ ಸಾಧ್ಯತೆಗಳಿದ್ದವು. ಇಂತಹ ಅಪಾಯದ ಪರಿಸ್ಥಿತಿಯಲ್ಲಿಯೂ ಮುಹಾಜಿರರು ಸತ್ಯವನ್ನೇ ನುಡಿಯಲು ಸಿದ್ಧರಾದರು. ಈಸಾರ ಕುರಿತು ನಜ್ಜಾಶಿ

ಕೇಳಿದ ಪ್ರಶ್ನೆಗೆ ಅವರು ಜಾರಿಕೊಳ್ಳಲು ಯತ್ನಿಸಲಿಲ್ಲ. ಅಥವಾ ಸುಳ್ಳು ನುಡಿಯಲಿಲ್ಲ. ಪರಿಣಾಮ ಏನೇ ಆದರೂ ಸತ್ಯವನ್ನೇ ನುಡಿಯಲು ಸನ್ನದ್ಧರಾದರು ಮತ್ತು ಅದರಂತೆಯೇ ನಡೆದುಕೊಂಡರು.

ಜಾಫರ್ ತಮ್ಮ ಭಾಷಣದಲ್ಲಿ ಮೊಟ್ಟಮೊದಲು ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಗಳ ನಡುವೆ ಇರುವ ಸಾಮ್ಯತೆಗಳನ್ನು ಎತ್ತಿ ತೋರಿಸಿದ್ದರು. ಅವರು ಪಠಿಸಿದ ಪ್ರಾರಂಭಿಕ ಕುರ್‌ಆನಿನ ಸೂಕ್ತಗಳಲ್ಲಿ, ದಿವ್ಯ ಸಂದೇಶದ ಮೂಲವು ಒಂದೇ ಆಗಿದ್ದು, ಕ್ರೈಸ್ತರು ವಿಶ್ವಾಸವಿಡುವ ದೇವನ ಮೇಲೆಯೇ ಮುಸ್ಲಿಮರೂ ವಿಶ್ವಾಸವಿಡುತ್ತಿದ್ದು ಈಸಾ ಅಲ್ಲಾಹನ ಸಂದೇಶವಾಹಕ ರಾಗಿರುವರು ಎಂದು ನಂಬಿಕೆ ಇಡುತ್ತಾರೆ ಎಂದು ಹೇಳಲಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮಕ್ಕಾದ ರಾಯಭಾರಿಗಳು ಈ ಎರಡೂ ಧರ್ಮಗಳ ನಡುವೆ ಘರ್ಷಣೆಯನ್ನು, ಸಮಸ್ಯೆಯನ್ನು ಉಂಟುಮಾಡುವ ಉದ್ದೇಶದಿಂದ, ಇವುಗಳ ನಡುವಿರುವ ವ್ಯತ್ಯಾಸಗಳನ್ನು ಎತ್ತಿತೋರಿಸಲು ಪ್ರಯತ್ನಿಸಿದ್ದರು. ಆದರೆ ಜಾಫರ್ ಬಹಳ ಜಾಣ್ಮೆಯಿಂದ ಇಸ್ಲಾಮಿನ ಸಂದೇಶವನ್ನು ಅದರ ವೈಶಿಷ್ಟ್ಯಗಳೊಂದಿಗೆ ನಜ್ಜಾಶಿ ರಾಜ ಮತ್ತು ಅವರ ಸಭಿಕರ ಮುಂದೆ ಇಟ್ಟರು.

ಇಥಿಯೋಪಿಯಾದಲ್ಲಿ ಮುಸ್ಲಿಮರು ಆಶ್ರಯಪಡೆಯಲು ಆಗಮಿಸಿದ್ದು ಕ್ರೈಸ್ತರಿಗೆ ಮತ್ತೊಂದು ಸಂದೇಶವನ್ನೂ ರವಾನಿಸಿತು. ಅದೇನೆಂದರೆ ಮುಸ್ಲಿಮರು ನಜ್ಜಾಶಿ ರಾಜನನ್ನು ಓರ್ವ ನ್ಯಾಯೋಚಿತ ಮತ್ತು ತತ್ವನಿಷ್ಠ ವ್ಯಕ್ತಿಯೆಂದು ಗುರುತಿಸಿದ್ದು, ಈ ಕಾರಣಕ್ಕಾಗಿಯೇ ಆತನ ಅಧಿಪತ್ಯದಲ್ಲಿ ಆಶ್ರಯ ಪಡೆಯಲು ಬಯಸಿದ್ದಾರೆ ಎಂಬುದಾಗಿತ್ತು. ನಜ್ಜಾಶಿ ರಾಜನು ಮುಸ್ಲಿಮನಾಗಿರಲಿಲ್ಲ. ಆದರೂ ಇಸ್ಲಾಮಿನ ಸಂದೇಶವನ್ನು ಪರಿಪೂರ್ಣವಾಗಿ ಗ್ರಹಿಸಿದರು. ಎರಡೂ ಧರ್ಮಗಳ ನಡುವೆ ಇರುವ ವ್ಯತ್ಯಾಸಗಳ ಹೊರತಾಗಿಯೂ, ಎರಡೂ ಧರ್ಮಿಯರ ದೇವರು ಒಬ್ಬನೇ ಆಗಿರುವನೆಂದೂ, ಮೌಲ್ಯಗಳು ಒಂದೇ ಆಗಿರುವುವು ಎಂದು ಅರಿತುಕೊಂಡರು. ಈ ಕಾರಣದಿಂದ ನಜ್ಜಾಶಿ ರಾಜನು ಮುಸ್ಲಿಮರಿಗೆ ತನ್ನ ರಾಜ್ಯದಲ್ಲಿ ಆಶ್ರಯ ನೀಡಲು ಮುಂದಾದರು.

ಸ್ವಲ್ಪ ಕಾಲದ ನಂತರ ನಜ್ಜಾಶಿ ರಾಜರು ಇಸ್ಲಾಮ್ ಸ್ವೀಕರಿಸಿದರು. ಪ್ರವಾದಿರೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ನಜ್ಜಾಶಿ ರಾಜರು ನಿಧನ ಹೊಂದಿದಾಗ ಪ್ರವಾದಿ ಅವರ ಅನುಪಸ್ಥಿತಿಯಲ್ಲಿ ಜನಾಝಾ ನಮಾಝ್ ನಿರ್ವಹಿಸಿದ್ದರು. ಮುಸ್ಲಿಮರು ಇಥಿಯೋಪಿಯಾದಲ್ಲಿ 15 ವರ್ಷಗಳವರೆಗೆ ಇದ್ದರೂ ನಂತರ ಖೈಬರ್ ಯುದ್ಧದ ಸಂದರ್ಭದಲ್ಲಿ (ಕ್ರಿ.ಶ. 630) ಮದೀನಾ ಹಿಂತೆರಳಿದರು. ಕೆಲ ಮುಸ್ಲಿಮರು ಮಕ್ಕಾದಲ್ಲಿ ಪರಿಸ್ಥಿತಿಯು ಸುಧಾರಿಸಿರುವ ವಿಷಯ ಕೇಳಿ ಮಕ್ಕಾ ಪಟ್ಟಣಕ್ಕೆ ಈ ಮೊದಲೇ ಹಿಂತೆರಳಿದ್ದರು.

☆

# ಇಸ್ಲಾಮಿನ ಮುಂಚೂಣಿಯಲ್ಲಿ

# ಹಂಝ

## (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)

ಇಸ್ಲಾಮಿನ ವಿರುದ್ಧ ಹಿಂಸೆ, ದೌರ್ಜನ್ಯಗಳು ತಾರಕದಲ್ಲಿದ್ದಾಗ, ಪ್ರವಾದಿತ್ವದ ಆರನೇಯ ವರ್ಷದಲ್ಲಿ ಹಂಝ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಇಸ್ಲಾಮಿನ ಸ್ವೀಕಾರ, ಮುಸ್ಲಿಮರಿಗೆ ಬಾನಂಚಿನಲ್ಲಿ ಭರವಸೆಯ ಕಿರಣದಂತೆ ಕಂಡುಬಂತು.

ಒಂದು ದಿನ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಸಫಾ ಬೆಟ್ಟದ ಮೇಲೆ ಧ್ಯಾನಮಗ್ನರಾಗಿ ಕುಳಿತಿದ್ದರು. ಅಬೂಜಹಲ್ ಸನಿಹದಿಂದ ಹಾದುಹೋಗುತ್ತಿದ್ದನು. ಮುಹಮ್ಮದ್ ಏಕಾಂಗಿಯಾಗಿರುವುದನ್ನು ಕಂಡು ಅವನ ರೋಷ ಉಕ್ಕಿಬಂತು. ಮನಸಾರೆ ಮುಹಮ್ಮದ್‌ರ ಬೋಧನೆಗಳನ್ನೂ, ಮುಹಮ್ಮದ್‌ರನ್ನೂ ತೆಗಳಿದನು. ಆದರೆ ಸಹನೆಯ ಸಾಕಾರ ಮೂರ್ತಿಯಾಗಿದ್ದ ಮುಹಮ್ಮದ್ ಅಬೂಜಹಲ್‌ನ ಕಡೆಗೆ ಗಮನ ಹರಿಸದೇ ತಮ್ಮ ಧ್ಯಾನವನ್ನು ಮುಂದುವರೆಸುತ್ತಾರೆ. ಇದರಿಂದ ಅಬೂಜಹಲ್‌ನ ಕೋಪ ನೆತ್ತಿಗೇರಿ ಒಂದು ಕಲ್ಲನ್ನೆತ್ತಿ ಮುಹಮ್ಮದ್‌ರ ಕಡೆಗೆ ಬೀಸಿದನು. ಅದು ಮುಹಮ್ಮದ್‌ತಲೆಗೆ ತಾಕಿ ರಕ್ತ ಚಿಮ್ಮಿ ಹರಿಯತೊಡಗಿತು. ಇದರ ನಂತರ ಅಬೂಜಹಲ್ ಸಭೆ ಸೇರಿದ್ದ ಕುರೈಶರೊಂದಿಗೆ ಸೇರಿಕೊಂಡನು. ಅಬ್ದುಲ್ಲಾ ಬಿನ್ ಜುದ್‌ಆನ್‌ನದಾಸಿ ನಡೆದ ಘಟನೆಯನ್ನು ಕಂಡು ಮಮ್ಮಲ ಮರುಗಿದಳು.

ಅಷ್ಟರಲ್ಲಿ ಅದೇ ದಾರಿಯಿಂದ ಹಂಝ, ಮುಹಮ್ಮದ್‌ರ ಚಿಕ್ಕಪ್ಪ ಹೆಗಲ ಮೇಲೆ ಬತ್ತಳಿಕೆಯನ್ನೇರಿಸಿ, ಕೈಯಲ್ಲೊಂದು ಬಿಲ್ಲು ಹಿಡಿದು ನಡೆದುಬಂದರು. ದಾಸಿಯು ಅಬೂಜಹಲ್ ಮುಹಮ್ಮದ್‌ರ ಮೇಲೆ ಮಾಡಿದ ಆಕ್ರಮಣದ ಸಂಪೂರ್ಣ ವೃತ್ತಾಂತವನ್ನು ಹಂಝರಿಗೆ ತಿಳಿಸಿದಳು.

ಇದನ್ನು ಕೇಳಿ ಹಂಝ ಕೆಂಡಾಮಂಡಲವಾದರು. ಕೋಪಾವೇಶದಿಂದ ಕಅಬಾದ ಕಡೆಗೆ ಧಾವಿಸಿದರು. ಅಲ್ಲಿ ಕುರೈಶರ ಗುಂಪಿನಲ್ಲಿದ್ದ ಅಬೂಜಹಲ್‌ನನ್ನು ನೋಡಿ ಸೀದಾ ಅವನು ಕುಳಿತಲ್ಲಿಗೆ ಬಂದು ತಮ್ಮ ಬಿಲ್ಲಿನಿಂದ ಜೋರಾಗಿ ಅವನ ತಲೆಗೆ ಹೊಡೆದರು ಮತ್ತು ನುಡಿದರು.

“ನೀನು ಮುಹಮ್ಮದ್‌ರನ್ನು ಒಬ್ಬಂಟಿಗರಾಗಿರುವರೆಂದು ಭಾವಿಸಿ ಅವರನ್ನು

ಹಿಂಸಿಸುತ್ತೀಯಾ? ನಾನೂ ಮುಹಮ್ಮದ್ ಬೋಧಿಸುತ್ತಿರುವ ಧರ್ಮವನ್ನು ಸೇರಿದ್ದೇನೆ. ನೀನು ಮನಸ್ಸಿಗೆ ಬಂದ ಹಾಗೆ ಮಾಡಿಕೋ".

ಹಂಝ ಮುಹಮ್ಮದ್‌ರ ಬಳಿ ತೆರಳಿ, "ಸಹೋದರ ಪುತ್ರನೇ, ನಿನಗೆ ಒಂದು ಸಂತೋಷದ ವಿಷಯ ತಿಳಿಸಲಿಕ್ಕಿದೆ. ಅಬೂಜಹಲ್ ನಿನ್ನ ಮೇಲೆ ಮಾಡಿದ ಆಕ್ರಮಣದ ಪ್ರತೀಕಾರವನ್ನು ನಾನು ಪಡೆದಿದ್ದೇನೆ. ಅವನ ತಲೆಯಿಂದ ರಕ್ತ ಚಿಮ್ಮುವಂತೆ ನನ್ನ ಬಿಲ್ಲಿನಿಂದ ಹೊಡೆದಿದ್ದೇನೆ"ಎಂದರು.

ಮುಹಮ್ಮದ್ ಉತ್ತರಿಸಿದರು.

"ಚಿಕ್ಕಪ್ಪಾ! ನೀವು ಪ್ರತೀಕಾರ ತೆಗೆದುಕೊಳ್ಳುವುದರಿಂದ ನನಗೆ ಸಂತೋಷವಾಗುವುದಿಲ್ಲ. ನೀವು ಇಸ್ಲಾಮ್ ಸ್ವೀಕರಿಸಿ, ಅಲ್ಲಾಹನಿಗೆ ವಿಧೇಯರಾಗಿ ನಡೆದುಕೊಂಡರೆ ನನಗೆ ಸಂತೋಷವಾಗುತ್ತದೆ".

ಹಂಝಾ ಮುಹಮ್ಮದ್‌ರನ್ನೇ ದಿಟ್ಟಿಸಿ ನೋಡಿ, ಶಾಂತಚಿತ್ತರಾಗಿ ನುಡಿದರು:

"ಸೋದರ ಪುತ್ರನೇ, ಇಸ್ಲಾಮ್ ಸ್ವೀಕಾರದಿಂದ ನಿನಗೆ ಸಂತೋಷವಾಗು ವುದಾದರೆ, ಇದೋ ನಾನು ಇಸ್ಲಾಮ್ ಸ್ವೀಕರಿಸುತ್ತೇನೆ!"

ಹಂಝರ ಇಸ್ಲಾಮ್ ಸ್ವೀಕಾರ ಆರಂಭದಲ್ಲಿ ತಮ್ಮ ಸಂಬಂಧಿಯನ್ನು ಇತರರು ಹಿಂಸಿಸಿದ್ದು, ಇದನ್ನು ಸಹಿಸದ ಪ್ರತಿಷ್ಠೆಯ ಕಾರಣದಿಂದಾಗಿತ್ತು. ಆದರೆ ನಂತರ ಅವರು ಇಸ್ಲಾಮನ್ನು ಅರಿತು ಪರಿಪೂರ್ಣ ಮುಸ್ಲಿಮರಾದರು. ತಮ್ಮ ಶೌರ್ಯ, ಪ್ರತಾಪದಿಂದ ಇಸ್ಲಾಮ್ ಮತ್ತು ಮುಸ್ಲಿಮರಿಗೆ ಬೆನ್ನೆಲುಬಾಗಿ ನಿಂತರು.

## ಉಮರ್

### (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)

ಪ್ರವಾದಿತ್ವದ ಆರನೆಯ ವರ್ಷದಲ್ಲಿ ಮತ್ತು ಹಂಝ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಇಸ್ಲಾಮ್ ಸ್ವೀಕಾರದ ಮೂರು ದಿನಗಳ ನಂತರ ಉಮರ್ ಇಸ್ಲಾಮ್ ಸ್ವೀಕರಿಸಿದ್ದರು. ಅವರ ಇಸ್ಲಾಮ್ ಸ್ವೀಕಾರದಿಂದ ಮುಸ್ಲಿಮರಿಗೆ ಪ್ರಬಲ ಆಸರೆ ಸಿಕ್ಕಿದಂತಾಯಿತು. ಉಮರ್ ಕುಶಾಗ್ರಮತಿಯೂ, ಬಹಳ ಶಕ್ತಿಶಾಲಿ ಮತ್ತು ದೃಢಕಾಯದ ಯುವಕರಾಗಿದ್ದರು. ಅವರನ್ನು ನೋಡಿ ಎಲ್ಲರೂ ಭಯಪಡುತ್ತಿದ್ದರು. ಉಮರ್ ಇಸ್ಲಾಮಿನ ಕಡುವೈರಿಯಾಗಿದ್ದರು. ಪ್ರವಾದಿ ಒಮ್ಮೆ ಹೀಗೆ ಪ್ರಾರ್ಥಿಸಿದ್ದರು:

"ಓ ಅಲ್ಲಾಹ್! ಅಮ್ರ್ ಬಿನ್ ಹಿಶಾಮ್ ಅಥವಾ ಉಮರ್ ಬಿನ್ ಖತ್ತಾಬ್‌ರ

ಮೂಲಕ ಇಸ್ಲಾಮಿನ ನೆರವಾಗುವಂತೆ ಮಾಡು."

ಮುಹಮ್ಮದ್‌ರ ಹೊಸ ಧರ್ಮದಿಂದ ಅವರು ಬಹಳ ಕುಪಿತರಾಗಿದ್ದರು. ಈ ಹೊಸ ಧರ್ಮದಿಂದಾಗಿ ಕುಟುಂಬಗಳು ಛಿದ್ರಛಿದ್ರವಾಗಿ ಸಮಾಜದಲ್ಲಿ ಕ್ಷೋಭೆಯುಂಟಾಗಿದೆ ಎಂದು ಅವರು ಭಾವಿಸಿದರು. ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂಬಂತೆ ಮುಹಮ್ಮದ್‌ರನ್ನು ವಧಿಸಲು ನಿಶ್ಚಯಿಸಿ ಒಂದು ದಿನ ಕೈಯಲ್ಲಿ ಖಡ್ಗವನ್ನು ಹಿಡಿದು ಹೊರಟರು. ದಾರಿಯಲ್ಲಿ ಅದ್ದೀ ಗೋತ್ರದ ನಈಮ್‌ರನ್ನು ಭೇಟಿಯಾಗುತ್ತಾರೆ. ಉಮರ್ ಕೋಪದಿಂದ ಕೈಯಲ್ಲಿ ಖಡ್ಗ ಹಿಡಿದುಕೊಂಡು ಬರುತ್ತಿರುವುದನ್ನು ನೋಡಿ ಏನೋ ಅಪಾಯವಿದೆ ಎಂದು ಗ್ರಹಿಸಿ "ಎಲ್ಲಿಗೆ ಹೊರಟಿರುವಿರಿ?" ಎಂದು ಉಮರ್ ಅನ್ನು ವಿಚಾರಿಸುತ್ತಾರೆ. ನಈಮ್ ಈಗಾಗಲೇ ಮುಸ್ಲಿಮರಾಗಿದ್ದು, ತಮ್ಮ ಇಸ್ಲಾಮ್ ಸ್ವೀಕಾರವನ್ನು ರಹಸ್ಯವಾಗಿಟ್ಟಿದ್ದರು. ಉಮರ್ ತಾವು ಮುಹಮ್ಮದ್‌ರನ್ನು ಕೊಲ್ಲಲು ಹೊರಟಿರುವುದಾಗಿ ನುಡಿಯುತ್ತಾರೆ. ಉಮರ್‌ರನ್ನು ಈ ಕಾರ್ಯದಿಂದ ತಡೆಯಲು,

"ಮುಹಮ್ಮದ್‌ರ ಕಥೆ ಮುಗಿಸುವ ಮೊದಲು ನಿಮ್ಮ ಕುಟುಂಬದವರನ್ನು ವಿಚಾರಿಸಿಕೊಳ್ಳಿರಿ" ಎನ್ನುತ್ತಾರೆ. ಉಮರ್ ಆಶ್ಚರ್ಯಚಕಿತರಾಗಿ, "ಏಕೆ? ಏನು ವಿಷಯ?"ಎಂದು ವಿಚಾರಿಸುತ್ತಾರೆ, ನಈಮ್, ಉಮರ್ ಸಹೋದರಿ ಫಾತಿಮಾ ಮತ್ತು ಭಾವ ಸಈದ್ ಮುಸ್ಲಿಮರಾಗಿರುವ ವಿಷಯವನ್ನು ತಿಳಿಸುತ್ತಾರೆ. ಇದನ್ನು ಕೇಳಿದ ಕೂಡಲೇ ಉಮರ್‌ರಿಗೆ ಸಿಡಿಲೆರಗಿದಂತಾಯಿತು. ಮೊದಲು ಸಹೋದರಿ ಮತ್ತು ಭಾವವನ್ನು ವಿಚಾರಿಸಿಕೊಳ್ಳುವೆ ಎಂದು ನಿರ್ಧರಿಸಿ, ತಂಗಿಯ ಮನೆಯ ಕಡೆಗೆ ತಿರುಗಿದರು.

ಉಮರ್‌ರ ಸಹೋದರಿ ಫಾತಿಮಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಅವರ ಪತಿ ಸಈದ್ ಮತ್ತು ಓರ್ವ ಯುವ ಸಂಗಾತಿ ಖಬ್ಬಾಬ್, ಸಈದ್‌ರ ಮನೆಯಲ್ಲಿ ಕುರ್‌ಆನ್ ಪಠಿಸುತ್ತಿರುವಾಗ ಮನೆಯ ಕಡೆ ಯಾರೋ ಬರುತ್ತಿರುವ ಸಪ್ಪಳ ಅವರಿಗೆ ಕೇಳಿಸಿತು. ಖಬ್ಬಾಬ್ ಕುರ್‌ಆನ್ ಪಠಣವನ್ನು ನಿಲ್ಲಿಸಿ, ಕುರ್‌ಆನ್ ಬಚ್ಚಿಟ್ಟರು. ಉಮರ್ ಕುರ್‌ಆನ್ ಪಠಣದ ಶಬ್ದವನ್ನು ಕೇಳಿಸಿಕೊಂಡಿದ್ದರು. ಬಾಗಿಲನ್ನು ಸಈದ್ ತೆರೆದರು. ಮನೆಯನ್ನು ಪ್ರವೇಶಿಸುತ್ತಲೇ ಒರಟಾಗಿ ಕೇಳಿದರು: "ನೀವೇನು ಓದುತ್ತಿದ್ದೀರಿ"? "ಏನೂ ಇಲ್ಲ" "ನಾನೆಲ್ಲವನ್ನೂ ಆಲಿಸಿದ್ದೇನೆ. ನೀವೆಲ್ಲರೂ ಧರ್ಮಭ್ರಷ್ಟರಾಗಿರುವಿರಿ" ಎನ್ನುತ್ತಾ ತಮ್ಮ ಭಾವನ ಮೇಲೆ ಮುಗಿಬಿದ್ದರು. ತಂಗಿ ತನ್ನ ಪತಿಯ ಮೇಲಿನ ಆಕ್ರಮಣವನ್ನು ತಡೆಯಲು ಯತ್ನಿಸಿದರು. ಉಮರ್ ಆಕೆಯನ್ನೂ ಚೆನ್ನಾಗಿ ಥಳಿಸಿದರು. ಫಾತಿಮಾರ ತಲೆಯಲ್ಲಿ ಗಾಯವಾಗಿ ರಕ್ತ ಹರಿಯತೊಡಗಿತು. ಸಹೋದರಿಯ ತಲೆಯಿಂದ ರಕ್ತ ಹರಿಯುವುದನ್ನು ಕಂಡು

ಉಮರ್ ಕ್ಷಣಕಾಲ ತಬ್ಬಿಬ್ಬಾದರು. ಫಾತಿಮಾ ಆವೇಶದಿಂದ ನುಡಿದರು:

"ಹೌದು. ನಾವು ಮುಸ್ಲಿಮರಾಗಿದ್ದೇವೆ. ನಾವು ಏಕೈಕನಾದ ಅಲ್ಲಾಹನಲ್ಲಿ ಮತ್ತು ಆತನ ಪ್ರವಾದಿಯಲ್ಲಿ ವಿಶ್ವಾಸವಿಟ್ಟಿದ್ದೇವೆ. ನೀವು ಏನು ಮಾಡುತ್ತೀರೊ ಮಾಡಿ."

ಈ ಮಾತು ಬಾಣದಂತೆ ಉಮರ್‌ರ ಮನದಲ್ಲಿ ನಾಟಿತು. ಒಂದು ಕಡೆ ಮುಗ್ಧ ತಂಗಿಯ ತಲೆಯಿಂದ ಸುರಿಯುತ್ತಿರುವ ರಕ್ತ. ಮತ್ತೊಂದು ಕಡೆ ತಂಗಿ ಮತ್ತು ಭಾವ ಮುಸ್ಲಿಮರಾಗಿರುವ ಆಘಾತಕರ ಸುದ್ದಿ! ಕೆಲಕ್ಷಣಗಳವರೆಗೆ ಉಮರ್ ತಲೆ ತಗ್ಗಿಸಿಕೊಂಡು ನಿಂತರು. ತರುವಾಯ ಸಾವರಿಸಿಕೊಂಡು ಹೇಳಿದರು: "ನೀವು ಓದುತ್ತಿದ್ದುದನ್ನು ನನಗೊಮ್ಮೆ ತೋರಿಸಿ".

ಫಾತಿಮಾರ ಹೃದಯದಲ್ಲಿ ಆಶಾಕಿರಣವೊಂದು ಮೂಡಿತು. ನಡುಗುವ ಕೈಗಳಿಂದ ಕುರ್‌ಆನಿನ ವಾಕ್ಯಗಳನ್ನು ಬರೆದ ಹಾಳೆಯನ್ನು ಉಮರ್‌ರಿಗೆ ನೀಡುತ್ತಾರೆ. ಅದರಲ್ಲಿ ಸೂರಃ ತಾಹಾದ ಆರಂಭಿಕ ಸೂಕ್ತಗಳಿದ್ದವು.

> "ತಾಹಾ. ನಾವು ಈ ಕುರ್‌ಆನ್‌ನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ. ಇದು ಭಯವಿರಿಸುವ ಪ್ರತಿಯೊಬ್ಬನಿಗೆ ನೆನಪಿಸುವ ಒಂದು ಸಾಧನವಾಗಿದೆ. ಭೂಮಿಯನ್ನೂ, ಉನ್ನತ ಆಕಾಶಗಳನ್ನೂ ಸೃಷ್ಟಿಸಿದವನ ಕಡೆಯಿಂದ ಇದು ಅವತೀರ್ಣಗೊಂಡಿದೆ. ಆ ದಯಾಮಯನು (ವಿಶ್ವ) ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದಾನೆ. ಅವನು ಆಕಾಶಗಳಲ್ಲೂ, ಭೂಮಿಯಲ್ಲೂ, ಅವೆರಡರ ನಡುವೆಯೂ ಹಾಗೂ ಮಣ್ಣಿನಲ್ಲಿಯೂ ಇರುವ ಸಕಲ ವಸ್ತುಗಳ ಮಾಲಿಕನಾಗಿರುತ್ತಾನೆ. ನೀವು ನಿಮ್ಮ ಮಾತನ್ನು ಉಚ್ಚ ಸ್ವರದಲ್ಲೇ ಹೇಳಿದರೂ, ಅವನಂತು ಮೆಲುದನಿಯ ಮಾತನ್ನು ಮಾತ್ರವಲ್ಲ, ಅದಕ್ಕಿಂತಲೂ ರಹಸ್ಯವಾದ ಮಾತನ್ನೂ ಅರಿಯುತ್ತಾನೆ. ಅವನು ಅಲ್ಲಾಹ್. ಅವನ ಹೊರತು ಅನ್ಯ ಆರಾಧ್ಯನಿಲ್ಲ. ಅವನಿಗೆ ಅತ್ಯುತ್ತಮ ನಾಮಗಳಿವೆ" (ಪವಿತ್ರ ಕುರ್‌ಆನ್, 20:1–8)

"ಅಲ್ಲಾಹನಾಣೆ, ಎಷ್ಟೊಂದು ಪರಿಶುದ್ಧ ವಚನವಿದು?" ಎಂದು ಉಮರ್ ತಮಗರಿವಿಲ್ಲದೆಯೇ ಉದ್ಗರಿಸುತ್ತಾರೆ. ಉಮರ್ ಕುರ್‌ಆನಿನ ಪಠಣವನ್ನು ಮುಂದುವರಿಸುತ್ತಾರೆ. ಕುರ್‌ಆನಿನ ಈ ಸೂಕ್ತವನ್ನು ತಲುಪಿದಾಗ,

> "ನಿಶ್ಚಯವಾಗಿಯೂ ನಾನೇ ಅಲ್ಲಾಹ್. ನನ್ನ ಹೊರತು ಇನ್ನಾವ ದೇವನೂ ಇಲ್ಲ. ಆದುದರಿಂದ ನೀವು ನನ್ನ ದಾಸ್ಯಾರಾಧನೆ ಮಾಡಿರಿ

ಮತ್ತು ನನ್ನ ಸ್ಮರಣೆಗಾಗಿ ನಮಾಝ್ ಅನ್ನು ಸಂಸ್ಥಾಪಿಸಿರಿ" (ಪವಿತ್ರ ಕುರ್‌ಆನ್ 20:14)

"ಅಲ್ಲಾಹನಾಣೆ! ಎಷ್ಟೊಂದು ಉತ್ತಮ ಹಾಗೂ ಪರಿಶುದ್ಧ ವಾಣಿಯಿದು" ಎಂದು ನುಡಿದರು. ಉಮರ್‌ರ ಈ ನುಡಿಗಳನ್ನು ಕೇಳಿ ಖಬ್ಬಾಬ್ ತಾವು ಅಡಗಿದ್ದ ಸ್ಥಳದಿಂದ ಎದ್ದು ಬಂದು ಹೀಗೆ ನುಡಿದರು.

"ಉಮರ್! ಮುಹಮ್ಮದ್‌ರ ಬಳಿಗೆ ಧಾವಿಸಿರಿ. ಅವರು ಹೀಗೆ ಪ್ರಾರ್ಥಿಸಿದ್ದರು.

'ಓ ಅಲ್ಲಾಹ್! ಅಮ್ರ್ ಬಿನ್ ಹಿಶಾಮ್ ಅಥವಾ ಉಮರ್ ಬಿನ್ ಖತ್ತಾಬ್‌ರ ಮೂಲಕ ಇಸ್ಲಾಮಿಗೆ ನೆರವಾಗು".

ಈ ಪ್ರಾರ್ಥನೆಯನ್ನು ಅಲ್ಲಾಹ್ ನಿಮ್ಮ ಪರವಾಗಿ ಸ್ವೀಕರಿಸಿರುವನೆಂದು ನಾನು ಭಾವಿಸುತ್ತೇನೆ"

ಉಮರ್ "ಮುಹಮ್ಮದ್ ಎಲ್ಲಿದ್ದಾರೆ?" ಎಂದು ಪ್ರಶ್ನಿಸುತ್ತಾರೆ. ಮುಹಮ್ಮದ್ ಅರ್ಕಮ್‌ರ ಮನೆಯಲ್ಲಿರುವರು ಎಂದು ತಿಳಿದಾಗ, ಉಮರ್ ನೇರವಾಗಿ ಅರ್ಕಮ್‌ರ ಮನೆಯ ಕಡೆಗೆ ನಡೆದರು.

ಅರ್ಕಮ್‌ರ ಮನೆಯಲ್ಲಿ ಪ್ರವಾದಿ ತಮ್ಮ ಸಂಗಾತಿಗಳೊಡನೆ ಕುಳಿತಿದ್ದರು. ಉಮರ್ ಬಂದಿರುವುದನ್ನು ನೋಡಿ ಎಲ್ಲರೂ ಗಾಬರಿಗೊಳ್ಳುತ್ತಾರೆ. ಉಮರ್ ಇಸ್ಲಾಮಿನ ಕಡು ವೈರಿಯಾಗಿರುವುದು ಎಲ್ಲರೂ ತಿಳಿದ ವಿಷಯವೇ ಆಗಿತ್ತು. ಮುಹಮ್ಮದ್ ಅವರನ್ನು ಒಳಗೆ ಕರೆಯಲು ಆಜ್ಞಾಪಿಸುತ್ತಾರೆ. ಒಳಗೆ ಬಂದ ಉಮರ್ ಮೆಲು ಧ್ವನಿಯಲ್ಲಿ ನುಡಿಯುತ್ತಾರೆ:

"ಪ್ರವಾದಿಯವರೇ, ಮುಸ್ಲಿಮ್ ಆಗಲು ಬಂದಿದ್ದೇನೆ."

ಪ್ರವಾದಿ 'ಅಲ್ಲಾಹು ಅಕ್ಬರ್' (ಅಲ್ಲಾಹ್ ಸರ್ವಶ್ರೇಷ್ಠನು) ಎಂದು ಉದ್ಗರಿಸುತ್ತಾರೆ.

## ಹೃದಯದಲ್ಲಿ ಕ್ರಾಂತಿ!

ಜನರ ಹೃದಯದಲ್ಲಿ ಪರಿವರ್ತನೆಯನ್ನುಂಟು ಮಾಡಲು ತಮಗೆ ಸಾಮರ್ಥ್ಯವಿಲ್ಲವೆಂಬುದನ್ನು, ಅಲ್ಲಾಹನು ಮಾತ್ರ ಈ ಸಾಮರ್ಥ್ಯ ಹೊಂದಿರುವನೆಂಬುದನ್ನು ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅರಿತಿದ್ದರು. ಉಮರ್ ಮತ್ತು ಅಬೂಜಹಲ್‌ರಲ್ಲಿರುವ ವಿಶೇಷ ಗುಣಗಳನ್ನು, ಸಾಮರ್ಥ್ಯಗಳನ್ನು ಕಂಡು, ಪ್ರವಾದಿ ಇವರೀರ್ವರಲ್ಲಿ ಓರ್ವರನ್ನು ಇಸ್ಲಾಮಿ ಅನುಯಾಯಿಯನ್ನಾಗಿಸುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿದ್ದರು.

ಕೆಲವರಿಗೆ ಇಸ್ಲಾಮಿನ ಅನುಯಾಯಿಯಾಗಲು ದೀರ್ಘಕಾಲದ ಅಧ್ಯಯನ, ಅವಲೋಕನದ ಅಗತ್ಯತೆ ಉಂಟಾಗಿತ್ತು. ಆದರೆ ಇನ್ನಿತರರಿಗೆ ಮುಸ್ಲಿಮರಾಗಲು ಕೆಲ ಕ್ಷಣಗಳೇ ಸಾಕಷ್ಟಾಗಿತ್ತು. ಕುರ್‌ಆನಿನ ಕೆಲ ವಾಕ್ಯಗಳ ಪಠಣ, ಅಥವಾ ಯಾವುದೇ ಒಂದು ಘಟನೆ ಇಸ್ಲಾಮಿನತ್ತ ಆಕರ್ಷಿತರಾಗಲು ಪ್ರೇರಕವಾಗಿದ್ದವು.

"ಮುಸ್ಲಿಮರಾಗಲು ದೀರ್ಘ ಸಮಯ ತೆಗೆದುಕೊಂಡವರು ಇಸ್ಲಾಮಿನ ಹಾದಿಯಲ್ಲಿ ಸುಧೃಢರಾಗಿದ್ದರು ಮತ್ತು ಅಲ್ಪ ಸಮಯದಲ್ಲಿಯೇ ಮುಸ್ಲಿಮರಾದವರು ಇಸ್ಲಾಮಿನಲ್ಲಿ ದೃಢ ಹೆಜ್ಜೆ ಇಡುವಲ್ಲಿ ವಿಫಲರಾಗಿದ್ದರು" ಎನ್ನುವುದೂ ಅಪಾರ್ಥವಾಗಿದ್ದಿತು.

ಹೃದಯ ಪರಿವರ್ತನೆಯ ವಿಷಯದಲ್ಲಿ ಕೇವಲ ಅಲ್ಲಾಹನೇ ಪರಮಾಧಿಕಾರ ಹೊಂದಿದ್ದು, ಉಮರ್ ಪ್ರವಾದಿರನ್ನು ವಧಿಸುವ ಉದ್ದೇಶದಿಂದ ಹೊರಟಿದ್ದರು. ಆದರೆ ಕುರ್‌ಆನಿನ ವಿದ್ವತ್‌ಪೂರ್ಣ ಬೋಧನೆಯಿಂದ ಪ್ರಭಾವಿತರಾಗಿ ಕೆಲ ಕ್ಷಣಗಳಲ್ಲಿಯೇ ಇಸ್ಲಾಮ್ ಸ್ವೀಕರಿಸಿದ್ದರು. ಪ್ರವಾದಿರ ಶ್ರೇಷ್ಠ ಅನುಯಾಯಿಯಗಳಲ್ಲಿ ಅವರು ಒಂದಾಗಿ ಮಾರ್ಪಟ್ಟರು. ಉಮರ್‌ರವರ ದ್ವೇಷವನ್ನು ಕಂಡಿದ್ದ ಜನರು, ಅವರು ಇಸ್ಲಾಮ್ ಸ್ವೀಕರಿಸಬಹುದು ಎಂದು, ಊಹಿಸಿರಲಿಲ್ಲ. ಉಮರ್‌ರ ಹೃದಯದಲ್ಲಿ ಉಂಟಾದ ಕ್ರಾಂತಿಯಿಂದ ಎರಡು ಸಂದೇಶಗಳು ನಮಗೆ ಸಿಗುತ್ತವೆ. ಒಂದು ಅಲ್ಲಾಹನಿಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ ಮತ್ತು ಎರಡನೆಯದಾಗಿ ಯಾವುದೇ ವ್ಯಕ್ತಿಯ ಬಗ್ಗೆ ಮತ್ತು ಯಾವುದೇ ಕಾರ್ಯದ ಬಗ್ಗೆ ನಾವು ನಿರ್ದಿಷ್ಟ ನಿರ್ಧಾರ ತಳೆಯಬಾರದು.

ಉಮರ್ ತಮ್ಮ ಇಸ್ಲಾಮ್ ಸ್ವೀಕಾರವನ್ನು ಸಾರ್ವಜನಿಕವಾಗಿ ಘೋಷಿಸ ಬಯಸಿದರು. ನೇರವಾಗಿ ಅಬೂಜಹಲ್‌ನ ಬಳಿ ತೆರಳಿ, ತಾವು ಇಸ್ಲಾಮ್ ಸ್ವೀಕರಿಸಿರುವುದಾಗಿ ತಿಳಿಸಿದರು. ಉಮರ್ ಪ್ರವಾದಿರಿಗೆ ಮುಸ್ಲಿಮರು ಹೆದರಬಾರದೆಂದೂ, ಕಅಬಾದಲ್ಲಿ ಸಾರ್ವಜನಿಕವಾಗಿ ನಮಾಝ್ ನಿರ್ವಹಿಸಬೇಕೆಂದೂ ತಿಳಿಸಿದರು. ಇದರಂತೆ ಉಮರ್ ಮತ್ತು ಹಂಝುರ ಮುಂದಾಳತ್ವದಲ್ಲಿ ಪ್ರಥಮ ಬಾರಿ ಮುಸ್ಲಿಮರು ಕಅಬಾದ ಆವರಣದಲ್ಲಿ ಸಾರ್ವಜನಿಕವಾಗಿ ನಮಾಝ್ ನಿರ್ವಹಿಸಿದರು. ಮುಸ್ಲಿಮರ ಈ ಕಾರ್ಯವನ್ನು ವಿರೋಧಿಸುವ ಎದೆಗಾರಿಕೆಯನ್ನು ಯಾರೂ ತೋರಲಿಲ್ಲ.

# 7

# ಬಹಿಷ್ಕಾರ

ಇಸ್ಲಾಮ್ ಹರಡಿದಂತೆ ಕುರೈಶರು ಮತ್ತು ಮುಸ್ಲಿಮರ ನಡುವೆ ಮನಸ್ತಾಪ ಮತ್ತು ದ್ವೇಷ ಹೆಚ್ಚಲಾರಂಭಿಸಿತು. ಮುಸ್ಲಿಮರಿಗೆ ಕಡಿವಾಣ ಹಾಕಲು ಉಗ್ರ ಕ್ರಮಗಳನ್ನು ಕೈಗೊಳ್ಳಲು ಕುರೈಶ್ ಮುಖಂಡರು ನಿರ್ಧರಿಸಿದರು. ಆರಂಭ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದವರಲ್ಲಿ ವಿವಿಧ ಗೋತ್ರಗಳಿಗೆ ಸೇರಿದ ಜನರಿದ್ದರು. ಇದರಿಂದಾಗಿ ಮುಸ್ಲಿಮರ ವಿರುದ್ಧ ಯಾವುದೇ ಕಠಿಣ ಕ್ರಮ ತೆಗೆದುಕೊಳ್ಳುವುದು ಸುಲಭದ ಮಾತಾಗಿರಲಿಲ್ಲ. ಸುದೀರ್ಘ ಚರ್ಚೆಯ ಬಳಿಕ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರ ಗೋತ್ರ 'ಬನುಹಾಷಿಮ್'ಗೆ ಬಹಿಷ್ಕಾರ ಹಾಕಲು ನಿರ್ಧರಿಸಲಾಯಿತು.

ಸುಮಾರು 40 ಕುರೈಶ್ ಮುಖಂಡರು ಒಪ್ಪಂದಕ್ಕೆ ಸಹಿ ಹಾಕಿ ಅದನ್ನು ಕಅಬಾದ ಒಳಭಾಗದಲ್ಲಿ ನೇತು ಹಾಕಿದರು. ಬನುಹಾಷಿಮ್ ಗೋತ್ರಕ್ಕೆ ಸೇರಿದ್ದ ಅಬುಲಹಬ್ ಈ ಬಹಿಷ್ಕಾರವನ್ನು ಬೆಂಬಲಿಸಿದನು. ಇದು ಸಂಪ್ರದಾಯಿಕ ಶಿಷ್ಟಾಚಾರಕ್ಕೆ ತದ್ವಿರುದ್ದವಾಗಿದ್ದಿತು. ಅಬೂತಾಲಿಬ್ ಮುಹಮ್ಮದ್‌ರನ್ನು ಬೆಂಬಲಿಸಲು ನಿರ್ಧರಿಸಿದರು. ಈ ಕಾರಣದಿಂದ ಕುರೈಶರು ಅಬ್ದುಲ್ ಮುತ್ತಲಿಬ್ ಗೋತ್ರದ ಮೇಲೂ ಬಹಿಷ್ಕಾರ ಹೇರಲು ನಿರ್ಧರಿಸಿದರು.

ಮೂರು ವರ್ಷಗಳವರೆಗೆ ಬನು ಹಾಷಿಮ್ ಮನೆತನವು ಅಬೂತಾಲಿಬ್ ಕಣಿವೆಯಲ್ಲಿ ದಿಗ್ಬಂಧನದಲ್ಲಿತ್ತು. ಎಲ್ಲಾ ಜನರೂ ಇವರೊಂದಿಗೆ ಸಂಪರ್ಕವನ್ನು ಕಡಿದುಕೊಂಡಿದ್ದರು. ಧಾನ್ಯದ ಪೂರೈಕೆಯನ್ನೂ ನಿಲ್ಲಿಸಲಾಗಿತ್ತು. ಅನೇಕ ವೇಳೆ ಮುಹಮ್ಮದ್‌ರ ಗೋತ್ರದ ಸದಸ್ಯರು ಎಲೆಗಳನ್ನು, ಗಿಡಗಳ ಬೇರುಗಳನ್ನು ತಿನ್ನಬೇಕಾಯಿತು. ಹಸಿವೆಯಿಂದ ಪುಟ್ಟ ಮಕ್ಕಳ ಆಕ್ರಂದವು ಮುಗಿಲು ಮುಟ್ಟುತ್ತಿತ್ತು. ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮತ್ತು ಅಬೂಬಕರ್ ಸಿದ್ದೀಕ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ತಮ್ಮ ಸಂಪೂರ್ಣ ಸಂಪತ್ತನ್ನು ಧಾರೆಯೆರೆದರು.

# ಒಪ್ಪಂದದ ರದ್ದುಗೊಳ್ಳುವಿಕೆ

ಅನೇಕ ಕುರೈಶ್ ಮುಖಂಡರು ಬನೂ ಹಾಷಿಮ್ ಮನೆತನದ ಬಹಿಷ್ಕಾರವನ್ನು ಅನ್ಯಾಯವೆಂದು ಬಗೆದರು. ಬಹಿಷ್ಕಾರದ ಮೂರು ವರ್ಷಗಳಲ್ಲಿ ಇದನ್ನು ರದ್ದುಗೊಳಿಸಲು ಅನೇಕ ಪ್ರಯತ್ನಗಳು ನಡೆದವು. ಆದರೆ ಅಬೂಜಹಲ್ ಮತ್ತು ಅಬೂಲಹಬ್‌ರ ತೀವ್ರ ವಿರೋಧದ ಕಾರಣ, ಈ ಪ್ರಯತ್ನಗಳು ಸಫಲವಾಗಲಿಲ್ಲ.

ಬಹಿಷ್ಕಾರದ ಒಪ್ಪಂದವನ್ನು ಬರೆದ ದಸ್ತಾವೇಜನ್ನು ಗೆದ್ದಲು ತಿಂದಿದೆ ಯೆಂದೂ, ಅಲ್ಲಾಹನ ಹೆಸರಿನ ಹೊರತು ಅದರಲ್ಲಿ ಏನೂ ಉಳಿದಿಲ್ಲವೆಂದು ಅಲ್ಲಾಹ್ ಮುಹಮ್ಮದ್‌ರಿಗೆ ದಿವ್ಯವಾಣಿಯ ಮುಖಾಂತರ ತಿಳಿಸಿದನು.

ಮುಹಮ್ಮದ್ ಈ ವಿಷಯವನ್ನು ಅಬೂತಾಲಿಬರಿಗೆ ತಿಳಿಸಿದಾಗ ಅವರು ಆಶ್ಚರ್ಯ ವ್ಯಕ್ತಪಡಿಸಿದರು. ಆದರೆ ಮುಹಮ್ಮದ್ ಎಂದೂ ಸುಳ್ಳಾಡುವುದಿಲ್ಲವೆಂದು ಅವರಿಗೆ ತಿಳಿದಿತ್ತು. ಅವರು ಕೆಲವು ಸಂಬಂಧಿಕರ ಜೊತೆ ಕಅಬಾ ಭವನಕ್ಕೆ ತೆರಳಿದರು.

ಅಬೂತಾಲಿಬ್ ಮತ್ತು ಸಂಗಡಿಗರು ಅನಿರೀಕ್ಷಿತವಾಗಿ ಬಂದುದನ್ನು ಕಂಡು ಕುರೈಶ್ ಸರದಾರರು ಆಶ್ಚರ್ಯಚಕಿತರಾದರು. ಕುರೈಶ್ ಸರದಾರರನ್ನು ಉದ್ದೇಶಿಸಿ ಅಬೂತಾಲಿಬ್ ನುಡಿದರು.

"ನನಗೆ ನನ್ನ ಸೋದರ ಪುತ್ರ ಒಂದು ವಿಷಯ ತಿಳಿಸಿರುವನು. ಅಲ್ಲಾಹನಾಣೆ ಅವನೆಂದೂ ಸುಳ್ಳು ಹೇಳಿದವನಲ್ಲ. ಬಹಿಷ್ಕಾರದ ದಸ್ತಾವೇಜನ್ನು ತರಿಸಿ ನೋಡಿ. ಅದಕ್ಕೆ ಗೆದ್ದಲು ಹಿಡಿದಿದ್ದು ಕೇವಲ ಅಲ್ಲಾಹನ ಹೆಸರು ಮಾತ್ರ ಉಳಿದಿದೆ. ನನ್ನ ಸೋದರ ಪುತ್ರನ ಮಾತು ನಿಜವಾಗಿದ್ದರೆ ನಮ್ಮ ಬಹಿಷ್ಕಾರವನ್ನು ಕೊನೆಗೊಳಿಸಿ ದಸ್ತಾವೇಜಿನಲ್ಲಿ ಬರೆದಿರುವುದನ್ನು ರದ್ದುಗೊಳಿಸಿ. ಒಂದು ವೇಳೆ ಮುಹಮ್ಮದ್ ಸುಳ್ಳು ಹೇಳಿದ್ದರೆ ನಾನು ಅವನನ್ನು ನಿಮ್ಮ ವಶಕ್ಕೊಪ್ಪಿಸುವೆನು. ಅವನೊಂದಿಗೆ ನಿಮಗೆ ಇಷ್ಟ ಬಂದಂತೆ ವ್ಯವಹರಿಸಬಹುದು." ಕುರೈಶ್ ಸರದಾರರಿಗೆ ಎಲ್ಲಿಲ್ಲದ ಖುಷಿಯಾಯಿತು.

"ಇದು ಅಪ್ಪಟಸುಳ್ಳು. ಕಅಬಾ ಭವನದೊಳಗೆ ದಸ್ತಾವೇಜಿಗೆ ಗೆದ್ದಲು ಹಿಡಿದಿರುವುದು ಅಬೂತಾಲಿಬ್ ಕಣಿವೆಯಲ್ಲಿರುವ ಮುಹಮ್ಮದರಿಗೆ ಹೇಗೆ ತಿಳಿಯಲು ಸಾಧ್ಯ? ಅಲ್ಲಾಹನಾಣೆ! ನೀವು ಅತ್ಯಂತ ನ್ಯಾಯಪೂರ್ಣ ಮಾತನ್ನು ನುಡಿದಿರುವಿರಿ."

ಕಅಬಾದಿಂದ ದಸ್ತಾವೇಜನ್ನು ತರಿಸಿ ನೋಡಿದಾಗ ಕುರೈಶ್ ಸರದಾರರು ದಿಗ್ಭ್ರಾಂತರಾದರು. ದಸ್ತಾವೇಜಿನಲ್ಲಿ "ಬಿಸ್ಮಿಕ ಅಲ್ಲಾಹುಮ್ಮ" ಪದಗಳನ್ನು ಬಿಟ್ಟು ಉಳಿದೆಲ್ಲವನ್ನು ಗೆದ್ದಲು ತಿಂದಿತ್ತು!

ಬಹಿಷ್ಕಾರವನ್ನು ಮುಂದುವರೆಸುವಲ್ಲಿ ಯಾವ ಅರ್ಥವೂ ಇಲ್ಲವೆಂಬುದನ್ನು ಅರಿತ ಕುರೈಶ್ ಸರದಾರರು, ಬಹಿಷ್ಕಾರವನ್ನು ಕೊನೆಗೊಳಿಸಿದರು. ಮುಹಮ್ಮದ್ ಮತ್ತು ಅವರ ಕುಟುಂಬದವರು ಮನೆಗಳಿಗೆ ಹಿಂತೆರಳಿದರು. ಬಹಿಷ್ಕಾರದ ಘಟನೆಯಲ್ಲಿ ಕುರೈಶ್ ಸರದಾರರಿಗೆ ಮುಹಮ್ಮದ್ ಪ್ರವಾದಿಯಾಗಿರುವುದರ ಬಗ್ಗೆ ಅತ್ಯುತ್ತಮ ಪುರಾವೆ ದೊರಕಿತ್ತು. ಆದರೆ ಕುರೈಶ್ ಸರದಾರರು ಇಸ್ಲಾಮಿನೊಂದಿಗಿನ ಕುರುಡು ದ್ವೇಷದಲ್ಲಿ ಇದನ್ನು ಕಾಣದಾದರು.

## ದುಃಖಗಳ ವರ್ಷ

ಬಹಿಷ್ಕಾರ ಕೊನೆಗೊಂಡ ನಂತರ ಮುಸ್ಲಿಮರ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿತು. ಮುಸ್ಲಿಮರು ಕುರೈಶರೊಂದಿಗೆ ಸಂಬಂಧಗಳನ್ನು ಪುನಃ ಸ್ಥಾಪಿಸುವಲ್ಲಿ ತಕ್ಕಮಟ್ಟಿಗೆ ಸಫಲರಾದರು. ಪ್ರವಾದಿ ಇಸ್ಲಾಮಿನ ಸಂದೇಶವನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಮುಂದುವರೆಸಿದರು. ಇಸ್ಲಾಮಿನ ಸಂದೇಶವನ್ನು ಸಾರ್ವತ್ರಿಕಗೊಳಿಸುವ ಉಮರ್‌ರ ಹಂಬಲ ಸಾಕಾರಗೊಳ್ಳುತ್ತಿತ್ತು. ಇದರೊಂದಿಗೇ, ಮುಸ್ಲಿಮರ ವಿರುದ್ಧ ದೌರ್ಜನ್ಯವೂ ಮುಂದುವರೆದಿತ್ತು.

ಆದರೆ ಪರಿಸ್ಥಿತಿಯಲ್ಲಿ ಕ್ಷಿಪ್ರ ಬದಲಾವಣೆಗಳು ಉಂಟಾದವು. ಬಹಿಷ್ಕಾರ ಕೊನೆಗೊಂಡ ಅಲ್ಪ ಕಾಲದಲ್ಲಿಯೇ ಪ್ರವಾದಿರ ಪತ್ನಿ ಖದೀಜಾ ನಿಧನ ಹೊಂದಿದರು. ಖದೀಜಾ ಮಕ್ಕಾಪಟ್ಟಣದ ಅತ್ಯಂತ ಶ್ರೀಮಂತ ಮಹಿಳೆಯಾಗಿದ್ದರು. ತಮ್ಮ ಸರ್ವಸ್ವವನ್ನು ಇಸ್ಲಾಮಿಗಾಗಿ ಧಾರೆಯೆರೆದರು. 25 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಅವರು ಮುಹಮ್ಮದ್‌ರ ಬೆಂಗಾವಲಾಗಿದ್ದರು. ಪ್ರವಾದಿತ್ವದ ಒಂಬತ್ತನೆಯ ವರ್ಷದಲ್ಲಿ ಖದೀಜಾ ಮರಣ ಹೊಂದಿದ್ದರು.

ಖದೀಜಾರ ನಿಧನದ ಸ್ವಲ್ಪ ಕಾಲದಲ್ಲಿಯೇ ಮುಹಮ್ಮದ್‌ರ ಚಿಕ್ಕಪ್ಪ ಅಬೂತಾಲಿಬ್ ರೋಗಗ್ರಸ್ತರಾಗಿ ಮರಣ ಶಯ್ಯೆಗೆ ತಲುಪಿದರು. ಪ್ರವಾದಿ ಅತ್ಯಂತ ಪ್ರೀತಿಯಿಂದ ನುಡಿದರು.

"ಚಿಕ್ಕಪ್ಪಾ, ಈಗಲಾದರೂ 'ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ' ಎಂದು ಘೋಷಿಸಿರಿ. ನೀವು ಸತ್ಯ ವಿಶ್ವಾಸಿಗಳಾಗಿದ್ದರೆಂದು ಅಲ್ಲಾಹನ ಬಳಿ ನಾನು ಸಾಕ್ಷ್ಯವಹಿಸುತ್ತೇನೆ."

ಅಬೂತಾಲಿಬ್ ಮುಹಮ್ಮದರತ್ತ ವಾತ್ಸಲ್ಯಭರಿತ ದೃಷ್ಟಿ ಬೀರುತ್ತಾ ಏನೋ ಹೇಳಬೇಕೆಂದಿರುವಾಗ ಅಲ್ಲಿಯೇ ಇದ್ದ ಕುರೈಶ್ ಸರದಾರರಾದ ಅಬೂಜಹಲ್ ಮತ್ತು ಅಬ್ದುಲ್ಲಾ ಬಿನ್ ಉಮಯ್ಯ ಬೆಚ್ಚಿಬಿದ್ದು ಹೇಳುತ್ತಾರೆ.

**'ಓ ಸರದಾರರೇ! ತಾವು ತಮ್ಮ ತಂದೆ ಅಬ್ದುಲ್ ಮುತ್ತಲಿಬರ ಧರ್ಮವನ್ನು ತೊರೆಯುವಿರಾ?'**

ಮುಹಮ್ಮದ್ ಅಬೂತಾಲಿಬ್‌ರನ್ನು ಪವಿತ್ರ ಕಲಿಮಃ ಪಠಿಸುವಂತೆ ಕೋರುತ್ತಿದ್ದರೆ, ಅಬೂಜಹಲ್ ಮತ್ತು ಅಬ್ದುಲ್ಲಾ ಬಿನ್ ಉಮಯ್ಯ ಮತ್ತೆ ಮತ್ತೆ ಅಬೂತಾಲಿಬ್‌ರನ್ನು ಅದರಿಂದ ತಡೆಯುತ್ತಿದ್ದರು. ಕೊನೆಗೆ ಮುಹಮ್ಮದ್‌ರನ್ನು ಉದ್ದೇಶಿಸಿ ಅಬೂತಾಲಿಬ್ ಹೇಳಿದರು.

**"ಸೋದರ ಪುತ್ರಾ!, ಜನರು ನನ್ನ ಬಗ್ಗೆ ಕೆಟ್ಟ ಮಾತುಗಳನ್ನಾಡುವರು ಮತ್ತು ಕುರೈಶರು, ನಾನು ಮರಣದ ಭಯದಿಂದ 'ಕಲಿಮ' ಪಠಿಸಿರುವನೆಂದು ಹೇಳುವ ಭಯವಿಲ್ಲದಿರುತ್ತಿದ್ದರೆ ಖಂಡಿತ ನಾನು 'ಕಲಿಮ' ಪಠಿಸುತ್ತಿದ್ದೆ.** ಸ್ವಲ್ಪ ಸಮಯದ ನಂತರ ಅವರ ಕಣ್ಣುಗಳು ಸ್ತಬ್ಧವಾದವು. ಮುಹಮ್ಮದ್‌ರಿಗೆ ನಿರಂತರ ಬೆಂಬಲ, ರಕ್ಷಣೆ ನೀಡಿದ್ದ ಅಬೂತಾಲಿಬ್ ಕೊನೆಗೂ ಇಸ್ಲಾಮ್ ಸ್ವೀಕರಿಸಲಿಲ್ಲ.

ಪ್ರವಾದಿ ತಮ್ಮ ಚಿಕ್ಕಪ್ಪನನ್ನು ಬಹಳ ಪ್ರೀತಿಸುತ್ತಿದ್ದರು. ಅವರ ನಿಧನದಿಂದ ಪ್ರವಾದಿ ಬಹಳ ಶೋಕತಪ್ತರಾದರು. ಅಬೂತಾಲಿಬ್‌ರನ್ನು ಇಸ್ಲಾಮಿನ ಪರಿವಿಧಿಯಲ್ಲಿ ತರಲು ಕೊನೆಯ ಕ್ಷಣದವರೆಗೂ ಅವರು ನಡೆಸಿದ ಪ್ರಯತ್ನ ಸಫಲವಾಗದಿರುವುದು ಅವರನ್ನು ಮತ್ತಷ್ಟು ದುಃಖಕ್ಕೆ ಈಡು ಮಾಡಿತ್ತು. ಈ ಸಂದರ್ಭದಲ್ಲಿ ಕುರ್‌ಆನಿನ ಈ ವಾಣಿಯು ಅವತೀರ್ಣಗೊಂಡಿತು.

> **"ಪ್ರವಾದಿಗಳೇ, ನೀವಿಚ್ಛಿಸಿದವರಿಗೆ ಸನ್ಮಾರ್ಗ ನೀಡಲು ನಿಮ್ಮಿಂದಾಗದು. ಆದರೆ ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗ ನೀಡುತ್ತಾನೆ. ಅವನು ಸನ್ಮಾರ್ಗ ಸ್ವೀಕರಿಸುವವರನ್ನು ಚನ್ನಾಗಿ ಅರಿತಿರುತ್ತಾನೆ".** (ಪವಿತ್ರ ಕುರ್‌ಆನ್ 28:56)

ಕೆಲವೇ ತಿಂಗಳುಗಳ ಅಂತರದಲ್ಲಿ ಮುಹಮ್ಮದ್ ತಮಗೆ ಪ್ರೀತಿಯನ್ನು ಧಾರೆ ಎರೆದಿದ್ದ ಬಾಳಸಂಗಾತಿಯನ್ನು, ಕಷ್ಟಗಳ ಸುರಿಮಳೆಯಲ್ಲಿ ತಮಗೆ ರಕ್ಷಣೆ ನೀಡಿದ್ದ ಚಿಕ್ಕಪ್ಪನನ್ನು ಕಳೆದುಕೊಂಡು ಅಸಹಾಯಕ ಸ್ಥಿತಿಯನ್ನು ಎದುರಿಸುವಂತಾದರು.

# ಖದೀಜಾ

### (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)

ಈ ಸಂದರ್ಭದಲ್ಲಿ ಪ್ರವಾದಿ(ಅವರ ಮೇಲೆ ಶಾಂತಿ ಇರಲಿ)ರ ಜೀವನದಲ್ಲಿ ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಪಾತ್ರದ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುವುದು ಉಚಿತವೆನಿಸುತ್ತದೆ. ಮುಹಮ್ಮದ್‌ರ ಸತ್ಯತೆಯನ್ನು, ಪ್ರಾಮಾಣಿಕತೆಯನ್ನು ಗುರುತಿಸಿದ ಖತೀಜಾ, ಅವರನ್ನು ಜೀವನ ಸಂಗಾತಿಯಾಗಿ ಆಯ್ಕೆ ಮಾಡಿದ್ದರು. ಅವರ ವೈವಾಹಿಕ ಜೀವನದಲ್ಲಿ ಸುಖ ದುಃಖಗಳು ಸಮ್ಮಿಳಿತವಾಗಿದ್ದವು. ಇಬ್ಬರು ಪುತ್ರರು ಖಾಸಿಮ್ ಮತ್ತು ಅಬ್ದುಲ್ಲಾರನ್ನು ಹಸುಳೆಯಾಗಿರುವಾಗಲೇ ಕಳೆದುಕೊಂಡಿದ್ದರು. ನಾಲ್ವರು ಪುತ್ರಿಯರು ಮಾತ್ರ ಜೀವಂತವಾಗಿದ್ದರು. ಪುತ್ರಿಯರ ಜನನವನ್ನು ಅಪಮಾನಕರವೆಂದು ಭಾವಿಸುತ್ತಿದ್ದ ಕಾಲದಲ್ಲಿ ಪುತ್ರಿಯರ ಮೇಲೆ ಪ್ರೀತಿಯ ಧಾರೆಯನ್ನು ಎರೆದಿದ್ದರು.

ನಲವತ್ತನೇಯ ವಯಸ್ಸಿನಲ್ಲಿ ಮುಹಮ್ಮದ್‌ರ ಮೇಲೆ ಪ್ರಥಮ ದಿವ್ಯವಾಣಿ ಅವತೀರ್ಣಗೊಂಡಾಗ, ಮುಹಮ್ಮದ್ ಭಯ, ಭೀತಿ ಹಾಗೂ ಗೊಂದಲದ ಸ್ಥಿತಿಯಲ್ಲಿದ್ದರು. ಇಂತಹ ಪರಿಸ್ಥಿತಿಯಲ್ಲಿ ಖದೀಜಾ ಮುಹಮ್ಮದ್‌ರಿಗೆ, ಅವರ ವೈಶಿಷ್ಟ್ಯತೆಗಳನ್ನು ನೆನಪಿಸಿ ಅಲ್ಲಾಹ್ ಅವರನ್ನು ವ್ಯರ್ಥಗೊಳಿಸುವುದಿಲ್ಲ, ಅವರಿಗೆ ಯಾವ ಹಾನಿಯೂ ಆಗುವುದಿಲ್ಲ ಎಂದು ಸಾಂತ್ವಾನ ಹೇಳಿ ಧೈರ್ಯ ತುಂಬಿದ್ದರು. ಅಂದಿನಿಂದ ಇಬ್ಬರೂ ಜೀವನದ ಸುಖ–ದುಃಖಗಳನ್ನು ಜೊತೆಯಾಗಿ ಎದುರಿಸಿದ್ದರು. ಅನಂತರ ಪ್ರವಾದಿರಿಗೆ ನಿರಂತರ ಬೆಂಬಲವನ್ನು ನೀಡಿದ್ದರು. ಅವರೋರ್ವ ನಿಷ್ಠಾವಂತ, ಮುಸ್ಲಿಮರಾಗಿದ್ದರು. ಪ್ರವಾದಿತ್ವದ ಒಂಬತ್ತು ವರ್ಷಗಳಲ್ಲಿ, ಮುಹಮ್ಮದ್‌ರಿಗೆ ಪ್ರತಿಯೊಂದು ಕಾರ್ಯದಲ್ಲಿ ಅವರು ಸಹಭಾಗಿಯಾಗಿದ್ದರು.

ಖದೀಜಾ ನಿಧನ ಹೊಂದಿದಾಗ ಶೋಕತಪ್ತರಾಗಿ ಪ್ರವಾದಿ ಈ ರೀತಿ ನುಡಿದಿದ್ದರು.

> "ಜನರು ನನ್ನಲ್ಲಿ ವಿಶ್ವಾಸವಿಡದ ಸಂದರ್ಭದಲ್ಲಿ ಆಕೆ ನನ್ನಲ್ಲಿ ವಿಶ್ವಾಸವಿಟ್ಟಳು. ಜನರು ನನ್ನಲ್ಲಿ ನಂಬಿಕೆ ತೋರದಿದ್ದಾಗ ಆಕೆ ನನ್ನಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿದ್ದಳು. ಜನರು ನನಗೆ ಸಹಾಯ ಮಾಡದಿದ್ದಾಗ ಆಕೆ ತನ್ನ ಸರ್ವಸ್ವವನ್ನೂ ನನ್ನ ಮೇಲೆ ಧಾರೆಯೆರೆದಳು. ಅಲ್ಲಾಹನು ಆಕೆಯಿಂದ ನನಗೆ ಸಂತಾನವನ್ನು ದಯಪಾಲಿಸಿದನು."

# ತಾಯಿಫ್

ಪ್ರವಾದಿತ್ವದ 10ನೇ ವರ್ಷ ಒಂದು ದಿನ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ತಮ್ಮ ದತ್ತು ಪುತ್ರ ಝೈದ್ ಬಿನ್ ಹಾರಿಸ್‌ರ ಜೊತೆ ಮಕ್ಕಾದಿಂದ ಸುಮಾರು 75 ಮೈಲು ದೂರದ ತಾಯಿಫ್ ಪಟ್ಟಣಕ್ಕೆ ಕಾಲ್ನಡಿಗೆಯಲ್ಲಿ ಹೊರಟರು. ತಾಯಿಫ್ ಪಟ್ಟಣದಲ್ಲಿ ಸಕೀಫ್ ಗೋತ್ರದ ಜನರಿದ್ದರು. ಈ ಜನರನ್ನು ಇಸ್ಲಾಮಿನೆಡೆಗೆ ಆಹ್ವಾನಿಸುವುದು ಅವರ ಉದ್ದೇಶವಾಗಿತ್ತು. ಆದರೆ ಸಕೀಫ್ ಗೋತ್ರದ ಸರದಾರರು ಪ್ರವಾದಿರ ಕರೆಗೆ ಓಗೊಡಲಿಲ್ಲ. ಮುಹಮ್ಮದ್ ಪ್ರವಾದಿಯಾಗಿರುವ ಬಗ್ಗೆ ಅಪಹಾಸ್ಯ ಮಾಡಿದರು. ಅಷ್ಟೇ ಅಲ್ಲ. ತಾಯಿಫ್‌ನ ಪುಂಡರು, ಪೋಕರಿಗಳನ್ನು ಮುಹಮ್ಮದ್‌ರ ಮೇಲೆ ಛೂ ಬಿಟ್ಟರು. ಅವರು ಪ್ರವಾದಿರನ್ನು ಅವಾಚ್ಯ ಶಬ್ದಗಳಿಂದ ಬೈದು ಕಲ್ಲುಗಳಿಂದ ಘಾಸಿಗೊಳಿಸಿದರು. ಪ್ರವಾದಿ ಗಾಯಗೊಂಡು ರಕ್ತಧಾರೆಯಾಗಿ ಹರಿಯಿತು. ಅವರ ರಕ್ಷಣೆಗೆ ಧಾವಿಸಿದ ಝೈದರ ತಲೆ ಗಾಯಗೊಂಡಿತು. ತಾಯಿಫ್ ಪಟ್ಟಣದಿಂದ ಸುಮಾರು 2–3 ಮೈಲುಗಳಾಚೆ ಪ್ರವಾದಿರನ್ನು ಪುಂಡರು ಹಿಂಬಾಲಿಸಿದರು.

ಝುರ್ಝರಿತರಾಗಿದ್ದ ಪ್ರವಾದಿ ಒಂದು ತೋಟದಲ್ಲಿ ಆಶ್ರಯವನ್ನು ಪಡೆಯುತ್ತಾರೆ. ಅಲ್ಲಿ ಒಂದು ಕಡೆ ನೆರಳಿನಲ್ಲಿ ಕುಳಿತು ಪ್ರವಾದಿ ಈ ರೀತಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಾರೆ.

"ಓ ಅಲ್ಲಾಹ್! ನಾನು ನನ್ನ ಅಸಹಾಯಕತೆ, ಬಲಹೀನತೆ ಮತ್ತು ಜನರ ದೃಷ್ಟಿಯಲ್ಲಿ ನನ್ನ ಅಗೌರವದ ಬಗ್ಗೆ ನಿನ್ನಲ್ಲೇ ಮೊರೆಯಿಡುತ್ತೇನೆ. ಓ ದಯಾಮಯರಲ್ಲಿ ದಯಾಮಯನಾದವನೇ! ನೀನು ಎಲ್ಲಾ ಬಲಹೀನರ ಪ್ರಭುವಾಗಿರುವೆ. ನನ್ನ ಪ್ರಭುವೂ ನೀನೇ ಆಗಿರುವೆ. ನನ್ನನ್ನು ನೀನು ಯಾರ ವಶಕ್ಕೆ ಒಪ್ಪಿಸಿರುವೆ? ನನ್ನೊಂದಿಗೆ ಕಠಿಣವಾಗಿ ವರ್ತಿಸುವ ಅಪರಿಚಿತರ ವಶಕ್ಕೆ ನನ್ನನ್ನು ಒಪ್ಪಿಸುವೆಯಾ? ಅಥವಾ ನನ್ನ ಮೇಲೆ ಪ್ರಾಬಲ್ಯ ಹೊಂದಿದ ಶತ್ರುವಿನ ವಶಕ್ಕೆ ನನ್ನನ್ನು ಒಪ್ಪಿಸುವೆಯಾ? ನೀನು ನನ್ನಲ್ಲಿ ಕುಪಿತನಾಗಿರದಿದ್ದರೆ ನನಗೆ ಯಾವ ಸಂಕಷ್ಟದ ಪರಿವೆಯೂ ಇಲ್ಲ. ನಿನ್ನ ಕಡೆಯಿಂದ ನನಗೆ ಕ್ಷೇಮವು ಲಭಿಸಿದರೆ ಅದರಲ್ಲಿ ನನ್ನ ಪಾಲಿಗೆ ಹೆಚ್ಚು ಶ್ರೇಯಸ್ಸು ಇದೆ. ನಾನು ಅಂಧಕಾರದಲ್ಲಿ ಬೆಳಕಾಗಿರುವ ಮತ್ತು ಇಹ–ಪರಲೋಕಗಳ ವ್ಯವಹಾರಗಳನ್ನು ಸುಗಮಗೊಳಿಸುವ ನಿನ್ನ ಜ್ಯೋತಿಯ ಆಶ್ರಯ ಯಾಚಿಸುತ್ತೇನೆ.

ನಿನ್ನ ಕ್ರೋಧವು ನನ್ನ ಮೇಲೆ ಎರಗುವುದರಿಂದ ನನ್ನನ್ನು ರಕ್ಷಿಸು. ನಿನ್ನ ಶಾಪಕ್ಕೆ ಗುರಿಯಾಗುವುದರಿಂದ ನನ್ನನ್ನು ಕಾಪಾಡು. ನಾನು ನಿನ್ನ ಇಚ್ಛೆಯಲ್ಲಿ ಸಂತೃಪ್ತನಾಗಿರುವಂತೆ ಮಾಡು. ನೀನು ನನ್ನಿಂದ ಸಂತೃಪ್ತನಾಗು. ನಿನ್ನ ಹೊರತು ಯಾರಲ್ಲಿಯೂ ಯಾವುದೇ ಶಕ್ತಿ ಮತ್ತು ಸಾಮರ್ಥ್ಯಗಳಿಲ್ಲ."

ಯಾರದೇ ಸಹಾಯ ಆಸರೆ ದೊರಕದ ಪರಿಸ್ಥಿತಿಯಲ್ಲಿ ಪ್ರವಾದಿ ಸಂಪೂರ್ಣವಾಗಿ ಅಲ್ಲಾಹನಿಗೆ ತಮ್ಮನ್ನು ತಾವೇ ಸಮರ್ಪಿಸಿಕೊಂಡರು. ಈ ಪ್ರಾರ್ಥನೆಯು ಪ್ರವಾದಿ ಅಲ್ಲಾಹದೊಂದಿಗೆ ಹೊಂದಿದ್ದ ಸಂಬಂಧವನ್ನು ಮತ್ತು ಅಲ್ಲಾಹನಿಂದ ಅವರು ಪಡೆದ ಆತ್ಮವಿಶ್ವಾಸ ಮತ್ತು ಸುರಕ್ಷತೆಯನ್ನು ತೋರಿಸುತ್ತದೆ. ಪ್ರಖ್ಯಾತವಾಗಿರುವ ಈ ಪ್ರಾರ್ಥನೆಯು ಜನಸಾಮಾನ್ಯರ ಅಸಹಾಯಕತೆಯನ್ನು ಮತ್ತು ಪ್ರವಾದಿರ ಅಸಾಧಾರಣ ಅಧ್ಯಾತ್ಮಿಕ ಶಕ್ತಿಯನ್ನು ಪ್ರಕಟಸುತ್ತದೆ.

## ಅದ್ದಾಸ್‌ನ ಇಸ್ಲಾಮ್ ಸ್ವೀಕಾರ

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರನ್ನು ತನ್ನ ತೋಟದಲ್ಲಿ ಕಂಡ ಉತ್ಬಾ, ತನ್ನ ದಾಸ ಅದ್ದಾಸ್‌ನನ್ನು ಕರೆದು, ಮುಹಮ್ಮದ್‌ರಿಗಾಗಿ ಒಂದು ದ್ರಾಕ್ಷಿಯ ಗೊಂಚಲನ್ನು ಕೊಟ್ಟು ಕಳುಹಿಸುತ್ತಾನೆ. ಮುಹಮ್ಮದ್ 'ಬಿಸ್ಮಿಲ್ಲಾಹ್' ಎಂದು ನುಡಿದು ದ್ರಾಕ್ಷಿಯನ್ನು ತಿನ್ನಲು ಆರಂಭಿಸುತ್ತಾರೆ. ಈ ಪದವನ್ನು ಕೇಳಿ ಅದ್ದಾಸ್ ಆಶ್ಚರ್ಯ ಚಕಿತನಾಗುತ್ತಾನೆ. ಈ ತನಕ ಆತನು ಅಂತಹ ಪದವನ್ನು ಯಾರಿಂದಲೂ ಕೇಳಿರಲಿಲ್ಲ.

ಆತ ಹೇಳಿದ: "ಅಲ್ಲಾಹನಾಣೆ! ಈ ನಾಡಿನಲ್ಲಿ ಈ ವಚನವನ್ನು ಹೇಳುವವರು ಯಾರೂ ಇಲ್ಲ." ಮುಹಮ್ಮದ್ ಆತನ ಊರು ಮತ್ತು ಧರ್ಮದ ಬಗ್ಗೆ ವಿಚಾರಿಸಿದರು. ಅದ್ದಾಸ್, ತಾನು ಕ್ರೈಸ್ತ ಧರ್ಮದ ಅನುಯಾಯಿ ಎಂದೂ, ನೈನವಾ ಊರಿನವನೆಂದು ಉತ್ತರಿಸಿದನು.

ಮುಹಮ್ಮದ್ "ನೀವು ಪ್ರವಾದಿ ಯೂನುಸ್ ಬಿನ್ ಮತಾ ಅವರ ಊರಿನವರೇ"? ಎಂದು ವಿಚಾರಿಸಿದರು. ಅದ್ದಾಸ್ ಆಶ್ಚರ್ಯಭರಿತನಾಗಿ, ಅವರ ಬಗ್ಗೆ ನಿಮಗೆ ಹೇಗೆ ಗೊತ್ತು? ಎಂದು ಕೇಳಿದನು. ಮುಹಮ್ಮದ್ "ಅವರು ನನ್ನ ಸೋದರರಾಗಿದ್ದರು. ಅವರೂ ಅಲ್ಲಾಹನ ಪ್ರವಾದಿ ಯಾಗಿದ್ದರು. ನಾನೂ ಪ್ರವಾದಿಯಾಗಿದ್ದೇನೆ" ಎಂದರು. ಇದನ್ನು ಕೇಳಿದ ಕೂಡಲೇ ಅದ್ದಾಸ್ ಇಸ್ಲಾಮ್ ಸ್ವೀಕರಿಸಿದರು.

ಇಸ್ಲಾಮಿನ ಹಾದಿಯಲ್ಲಿ ಈವರೆಗೆ ಈರ್ವರು ಕ್ರೈಸ್ತರು ಇಸ್ಲಾಮಿನ ನೆರವಿಗೆ ಧಾವಿಸುವುದನ್ನು ಮುಹಮ್ಮದ್ ಕಂಡಿದ್ದರು. ಇಥಿಯೋಪಿಯಾದ ದೊರೆ ನಜ್ಜಾಶಿ ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳ ನಡುವೆ ಸಾಮ್ಯತೆಯನ್ನು ಕಂಡುಕೊಂಡು ಮಕ್ಕಾದಿಂದ ಬಂದ ವಲಸಿಗರಿಗೆ ಆಶ್ರಯವನ್ನು ನೀಡಿದ್ದರು. ಮುಹಮ್ಮದ್‌ರನ್ನು ತಾಯಿಫ್‌ನ ಜನರು ಅಪಮಾನಿಸಿ, ತೀವ್ರವಾಗಿ ಹಿಂಸಿಸಿದ್ದಾಗ, ಕ್ರೈಸ್ತನಾಗಿದ್ದ ಅದ್ದಾಸ್ ಗುಲಾಮನು ಪ್ರವಾದಿಯವರ ನೆರವಿಗೆ ಧಾವಿಸಿದ್ದ.

ಒಮ್ಮೆ ಆಯಿಷಾ ಪ್ರವಾದಿರನ್ನು, "ಪ್ರವಾದಿಗಳೇ, ಉಹದ್ ದಿನಕ್ಕಿಂತ ಕಠಿಣವಾದ ದಿನವನ್ನು ನೀವು ಜೀವನದಲ್ಲಿ ಎದುರಿಸಿರುವಿರಾ?" ಎಂದು ಪ್ರಶ್ನಿಸಿದರು. ಆಗ ಪ್ರವಾದಿ, "ಆಯಿಷಾ, ತಾಯಿಫ್‌ನ ದಿನ ನನ್ನ ಜೀವನದಲ್ಲಿ ಅತ್ಯಂತ ಕಷ್ಟಮಯವಾಗಿತ್ತು" ಎಂದು ಉತ್ತರಿಸಿದ್ದರು.

ತೋಟದಲ್ಲಿ ಸ್ವಲ್ಪ ದ್ರಾಕ್ಷಿಗಳನ್ನು ತಿಂದು, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ಬಳಿಕ ಮುಹಮ್ಮದ್ 'ಕರ್ನುಲ್ ಸಆಲಿಬ್' ಎಂಬಲ್ಲಿಗೆ ತಲುಪಿದಾಗ ಆಕಾಶದಲ್ಲಿ ಒಂದು ಮೋಡದಂತಹ ವಸ್ತು ಕಾಣಿಸಿಕೊಂಡಿತು. ಅದರಲ್ಲಿ ಜಿಬ್ರೀಲ್ ಗೋಚರಿಸಿದರು. ಅವರು ನುಡಿದರು: "ಮುಹಮ್ಮದರೇ! ಅಲ್ಲಾಹನು ತಮ್ಮ ಬಳಿಗೆ ಪರ್ವತಗಳ ಈ ದೇವಚರನನ್ನು ಕಳುಹಿಸಿದ್ದಾನೆ. ನಿಮಗೇನು ಬೇಕು ಅವರಲ್ಲಿ ಆಜ್ಞಾಪಿಸಿರಿ."

ಪರ್ವತಗಳ ದೇವಚರ ಮುಹಮ್ಮದ್‌ರನ್ನು ಅಭಿವಂದಿಸಿ, "ಮುಹಮ್ಮದರೇ, ತಮಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ. ತಾವು ಆಜ್ಞಾಪಿಸಿದರೆ ತಾಯಿಫ್ ಪಟ್ಟಣದ ಇಕ್ಕೆಲಗಳಲ್ಲಿರುವ ಪರ್ವತಗಳನ್ನು ಎತ್ತಿ ಆ ಪಟ್ಟಣವನ್ನು ಪುಡಿ ಪುಡಿ ಮಾಡಿ ಬಿಡುವೆನು."

ಆದರೆ ಲೋಕಾನುಗ್ರಹಿಯಾದ ಪ್ರವಾದಿ ಅತ್ಯಂತ ತಾಳ್ಮೆಯಿಂದ ಉತ್ತರಿಸಿದರು: "ನಾನು ನಿರಾಶನಾಗಿಲ್ಲ. ಇವರ ಸಂತತಿಗಳಲ್ಲಾದರೂ ಅಲ್ಲಾಹನು ಕೇವಲ ತನ್ನ ದಾಸ್ಯ ಮತ್ತು ಆರಾಧನೆ ಮಾಡುವ ಜನರನ್ನು ಸೃಷ್ಟಿಸುವನೆಂಬ ಭರವಸೆ ನನಗಿದೆ."

ಮುಹಮ್ಮದ್ ಮತ್ತು ಝೈದ್ ಬಿನ್ ಹಾರಿಸ್ ಮಕ್ಕಾದ ಕಡೆಗೆ ಹೊರಡುತ್ತಾರೆ. ಹಿರಾ ಗುಹೆಯ ಬಳಿ ತಲುಪಿದಾಗ ಕೆಲ ಕುರೈಶರ ಭೇಟಿಯಾಗುತ್ತದೆ. ತಾಯಿಫ್ ಯಾತ್ರೆಯ ವೈಫಲ್ಯದ ಬಳಿಕ ಕುರೈಶ್ ಸರದಾರರು ಮಾಡಿಕೊಂಡಿರುವ ಒಳಸಂಚುಗಳ ವಿವರ ಅವರಿಂದ ತಿಳಿದುಬರುತ್ತದೆ. ಮುಹಮ್ಮದ್ ಅಬ್ದುಲ್ಲಾರನ್ನು ಉದ್ದೇಶಿಸಿ "ಅಬ್ದ್ ಮನಾಫ್ ಗೋತ್ರದ ಶಾಖೆಯಾದ ನೌಫಲ್ ಗೋತ್ರದ ಮುತ್‌ಇಮ್ ಬಿನ್ ಅದೀಯರ ಬಳಿಗೆ ಹೋಗಿ ಅಲ್ಲಾಹನ ಸಂದೇಶವನ್ನು ಮುಕ್ತವಾಗಿ ಪ್ರಚಾರ ಮಾಡಲು ಅವಕಾಶವಾಗುವಂತೆ ನನಗೆ ಅಭಯಾಶ್ರಯವನ್ನು ನೀಡಬೇಕೆಂದು ಕೇಳಿರಿ" ಎಂದರು. ಅಬ್ದುಲ್ಲಾ ಮುತ್‌ಇಮ್ ಈ ಪ್ರಸ್ತಾವನೆಗೆ ಕೂಡಲೇ ಒಪ್ಪಿಗೆ ಸೂಚಿಸಿದರು.

# ಅಕಬಾ ಒಪ್ಪಂದಗಳು

ಪ್ರವಾದಿತ್ವದ ಹನ್ನೊಂದನೆಯ ವರ್ಷದಲ್ಲಿ, ಹಜ್ಜ್ ಸಂದರ್ಭದಲ್ಲಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಧರ್ಮಪ್ರಚಾರ ಕಾರ್ಯಕ್ಕಾಗಿ ಅಕಬಾ ತಲುಪಿದ್ದರು. ದೂರದ ಒಂದು ಡೇರೆಯಲ್ಲಿ ಮದೀನಾದಿಂದ ಬಂದಿದ್ದ 6 ಹಾಜಿಗಳ ತಂಡವೊಂದಿತ್ತು. ಇವರು ಮದೀನಾದ ಎರಡು ಪ್ರಸಿದ್ಧ ಗೋತ್ರಗಳಾದ ಔಸ್ ಮತ್ತು ಖಝ್ರಜ್‌ಗಳ ಪೈಕಿ, ಖಝ್ರಜ್ ಗೋತ್ರಕ್ಕೆ ಸೇರಿದವರಾಗಿದ್ದರು.

ಮುಹಮ್ಮದ್ ಏಕದೇವತ್ವದ ಸಂದೇಶವನ್ನೂ, ಇಸ್ಲಾಮಿನ ಬೋಧನೆಗಳನ್ನೂ ಅವರ ಮುಂದಿಟ್ಟರು. ಮದೀನಾದಲ್ಲಿ ವಾಸಿಸುತ್ತಿದ್ದ ಯಹೂದಿಗಳು ಓರ್ವ ಅಂತಿಮ ಪ್ರವಾದಿ ಬರಲಿಕ್ಕಿರುವ ವಿಷಯವನ್ನು ಮದೀನಾ ನಿವಾಸಿಗಳ ಮುಂದೆ ಪ್ರಸ್ತಾಪಿಸುತ್ತಿದ್ದರು. ಯಹೂದಿಗಳು ಹೇಳುತ್ತಿದ್ದ ಅಂತಿಮ ಪ್ರವಾದಿ ಇವರೇ ಆಗಿರುವರು ಎಂಬುದು ಅವರಿಗೆ ಮನವರಿಕೆಯಾಯಿತು. ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದರು. ಮದೀನಾ ತೆರಳಿ ತಮ್ಮ ಜನಾಂಗದ ಪ್ರತಿಯೊಬ್ಬರ ಮುಂದೆ ಇಸ್ಲಾಮಿನ ಸಂದೇಶವನ್ನು ಇಟ್ಟರು.

ಒಂದು ವರ್ಷ ಕಳೆಯಿತು. ಪ್ರವಾದಿತ್ವದ 12ನೆಯ ವರ್ಷದಲ್ಲಿ ಮದೀನಾದ ಅನ್ಸಾರ್‌ಗಳ 12 ಮಂದಿಯ ಒಂದು ತಂಡವು ಹಜ್ಜ ನಿರ್ವಹಿಸಲಿಕ್ಕಾಗಿ ಮಕ್ಕಾ ತಲುಪಿತು. 12 ಮಂದಿಯಲ್ಲಿ ಹಿಂದಿನ ವರ್ಷ ಪ್ರವಾದಿರನ್ನು ಭೇಟಿ ಮಾಡಿದ್ದ ಐವರು ಇದ್ದರು. ಅವರು ಪ್ರವಾದಿರೊಂದಿಗೆ ಏಕೈಕ ಆರಾಧ್ಯನ ಆರಾಧನೆ ಮಾಡುವುದಾಗಿಯೂ, ಇಸ್ಲಾಮಿನ ಬೇಡಿಕೆಗಳನ್ನು ಪೂರ್ಣಗೊಳಿಸುವುದಾಗಿಯೂ ಪ್ರತಿಜ್ಞೆ ಮಾಡಿದರು.

ಮರಳಿ ಮದೀನಾಕ್ಕೆ ಹೋಗಲು ಈ ತಂಡವು ಸಿದ್ಧವಾದಾಗ, ಪ್ರವಾದಿ ತಂಡದ ಜೊತೆಗೆ ಮುಸ್‌ಅಬ್ ಬಿನ್ ಉಮೈರ್‌ರನ್ನು ಕಳುಹಿಸಿಕೊಟ್ಟರು. ಮುಸ್‌ಅಬ್ ಬಿನ್ ಉಮೈರ್ ಬುದ್ಧಿವಂತಿಕೆಗೆ, ಶಾಂತ ಸ್ವಭಾವಕ್ಕೆ ಪ್ರಸಿದ್ಧರಾಗಿದ್ದರು. ಅವರು ಕುರ್‌ಆನ್‌ನನ್ನು ಸುಶ್ರಾವ್ಯವಾಗಿ ಪಠಿಸುತ್ತಿದ್ದರು.

12 ಮಂದಿಯ ಈ ತಂಡವು ಮದೀನಾ ಹಿಂತೆರಳಿದ ನಂತರ ಮನೆಮನೆಗೂ ಇಸ್ಲಾಮಿನ ಸಂದೇಶವನ್ನು ತಲುಪಿಸಿತು. ಮುಸ್‌ಅಬ್ ಬಿನ್ ಉಮೈರ್‌ರ ಪ್ರಯತ್ನಗಳಿಂದಾಗಿ ಮದೀನಾದಲ್ಲಿ ಇಸ್ಲಾಮ್ ಶರವೇಗದಲ್ಲಿ ವ್ಯಾಪಿಸತೊಡಗಿತು. ಕಡುವೈರಿಗಳಾಗಿದ್ದ ಔಸ್ ಮತ್ತು ಖಝ್ರಜ್ ಗೋತ್ರಗಳು ಏಕೋದರ ಸಹೋದರರಾಗಿ ಮಾರ್ಪಟ್ಟರು.

ಪ್ರವಾದಿತ್ವದ 13ನೆಯ ವರ್ಷ ಮದೀನಾದಿಂದ ಮಕ್ಕಾದ ಕಡೆಗೆ ಹಜ್ಜ್ ನಿರ್ವಹಣೆಗಾಗಿ ಹೊರಟ ತಂಡದಲ್ಲಿ 73 ಮುಸ್ಲಿಮ್ ಪುರುಷರು ಮತ್ತು ಇಬ್ಬರು ಸ್ತ್ರೀಯರು ಇದ್ದರು. ಮುಹಮ್ಮದ್ ಮದೀನಾ ಹೊರಡುವ ಮೊದಲು ಮದೀನಾದ ಜನರೊಂದಿಗೆ ಎಲ್ಲಾ ವಿಷಯಗಳನ್ನು ಚರ್ಚಿಸಿ ಒಂದು ಬಲಿಷ್ಠ ಒಪ್ಪಂದವನ್ನು ಮಾಡಿಕೊಳ್ಳಲು ಬಯಸಿದ್ದರು.

ಮದೀನಾದಿಂದ ಬಂದ ಜನರು ಸುಸ್ಥಿತಿಯಲ್ಲೂ, ದುಸ್ಥಿತಿಯಲ್ಲೂ ಪ್ರವಾದಿರ ಆಜ್ಞೆಗಳನ್ನು ಪಾಲಿಸುವ, ಶ್ರೀಮಂತಿಕೆಯಲ್ಲೂ ಬಡತನದಲ್ಲೂ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ, ಒಳಿತನ್ನು ಆಜ್ಞಾಪಿಸುವ, ಕೆಡುಕನ್ನು ತಡೆಯುವ, ಪ್ರವಾದಿರನ್ನು ಸಂರಕ್ಷಿಸುವ ಪ್ರತಿಜ್ಞೆಯನ್ನು ಮಾಡಿದರು.

ಈ ದ್ವಿತೀಯ ಅಕಬಾ ಒಪ್ಪಂದವು ಮುಹಮ್ಮದ್‌ರಿಗೆ ಭವಿಷ್ಯದಲ್ಲಿ ಇಸ್ಲಾಮಿಗಾಗಿ ಸುವರ್ಣ ಅವಕಾಶವನ್ನು ಒದಗಿಸಿತು. ಇದರ ನಂತರ ಮುಹಮ್ಮದ್ ಮುಸ್ಲಿಮರನ್ನು ಮದೀನಾ ವಲಸೆ ಹೋಗಲು ಉತ್ತೇಜಿಸಿದರು. ಆದರೆ ಪ್ರವಾದಿರ ಆಪ್ತ ಸಂಗಾತಿಗಳು ಮಕ್ಕಾದಲ್ಲಿಯೇ ಉಳಿದುಕೊಂಡರು.

## ಹತ್ಯೆಯ ಸಂಚು

ಮುಹಮ್ಮದ್‌ರಿಗೆ ಅಭಯವನ್ನು ನೀಡಿದ್ದ ಅಬ್ದುಲ್ಲಾ ಮುತ್‌ಇಮ್ ನಿಧನ ಹೊಂದಿದರು. ಮುಸ್ಲಿಮರು ಮದೀನಾಕ್ಕೆ ವಲಸೆ ಹೋಗಿ, ಅಲ್ಲಿ ಬಲಿಷ್ಠರಾಗುತ್ತಿರುವುದನ್ನು ನೋಡಿ ಕುರೈಶರು ಕ್ರುದ್ಧರಾದರು. ಏನಾದರೂ ಮಾಡಿ ಈ ಸಮಸ್ಯೆಯನ್ನು ಶಾಶ್ವತವಾಗಿ ಕೊನೆಗೊಳಿಸಲು ನಿರ್ಧರಿಸಿದರು. ಒಂದು ಸಂಜೆ ದಾರುನ್ನದ್‌ವಾದಲ್ಲಿ ಮಕ್ಕಾದ ಆಯ್ದ 14 ಮಂದಿ ಕುರೈಶ್ ಸರದಾರರು ಒಂದು ವಿಶೇಷ ಸಭೆ ಸೇರಿದರು. ಮುಹಮ್ಮದ್‌ರಿಂದ ಯಾವ ರೀತಿ ಮುಕ್ತಿ ಪಡೆಯಬಹುದು ಎಂಬುದೇ ಚರ್ಚೆಯ ವಿಷಯವಾಗಿತ್ತು. ಸುದೀರ್ಘ ಚರ್ಚೆಯ ಬಳಿಕ ಎಲ್ಲಾ ಗೋತ್ರಗಳಿಂದ ಓರ್ವ ಯುವಕನನ್ನು ಆರಿಸಿ ಮುಹಮ್ಮದ್‌ರ ಮನೆಗೆ ಮುತ್ತಿಗೆ ಹಾಕಲು ನಿರ್ಧರಿಸಲಾಯಿತು. ಸೂರ್ಯನು ಉದಯಿಸುವ ಮೊದಲು ಮುಹಮ್ಮದ್ ನಮಾಝ್‌ಗೆ ಮನೆಯಿಂದ ಹೊರಡುವಾಗ ಎಲ್ಲರೂ ಏಕಕಾಲದಲ್ಲಿ ಅವರ ಮೇಲೆ ಆಕ್ರಮಣ ಮಾಡಿ ಅವರನ್ನು ವಧಿಸುವುದೆಂದೂ, ಈ ರೀತಿ ಮುಹಮ್ಮದ್‌ರ ಹತ್ಯೆಯ ಆರೋಪವು ಮಕ್ಕಾದ ಎಲ್ಲಾ ಗೋತ್ರಗಳಲ್ಲಿ ಹಂಚಿ ಹೋಗಿ ಹಾಷಿಮ್ ಗೋತ್ರವು ರಕ್ತ ಪರಿಹಾರಕ್ಕೆ ಒಪ್ಪಲು ನಿರ್ಬಂದಿತವಾಗುವುದೆಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು.

ಈ ಸಂಚನ್ನು ಅತ್ಯಂತ ರಹಸ್ಯವಾಗಿಡಲಾಗಿತ್ತು. ಆದರೆ ಅಲ್ಲಾಹ್, ಜಿಬ್ರೀಲ್‌ರ

ಮೂಲಕ ಮುಹಮ್ಮದ್‌ರಿಗೆ ಸಂಚಿನ ವಿವರಗಳನ್ನು ತಲುಪಿಸಿದನು.

ಗಾಢಾಂಧಕಾರದ ರಾತ್ರಿಯಲ್ಲಿ ಮುಹಮ್ಮದ್ ತಮ್ಮ ಹಾಸಿಗೆಯಲ್ಲಿ ಅಲಿರನ್ನು ಮಲಗಿಸಿದರು. ಶತ್ರುಗಳು ಗೋಡೆಯ ಎಡೆಯಿಂದ ಒಳಗೆ ಇಣುಕಿ ನೋಡಿದಾಗ ಅವರಿಗೆ ಮುಹಮ್ಮದ್ ನಿದ್ರಿಸುತ್ತಿದ್ದಂತೆ ಕಂಡು ಬರುತ್ತಿತ್ತು.

ಬೆಳಗಿನ ಜಾವ ಸಮೀಪಿಸಿದಾಗ ಶತ್ರುಗಳು ಒಮ್ಮೆಲೆ ಮನೆಯನ್ನು ಪ್ರವೇಶಿಸುತ್ತಾರೆ. ಹಾಸಿಗೆಯ ಮೇಲೆ ಮುಹಮ್ಮದ್ ಮಲಗಿರುವರು ಎಂದು ಭಾವಿಸಿ ಆಕ್ರಮಣ ಮಾಡಲು ಉದ್ಯುಕ್ತರಾದಾಗ, ಅವರಿಗೆ ತಾವು ಮೋಸಹೋಗಿರುವುದರ ಅರಿವಾಯಿತು. ರಾತ್ರಿಯಲ್ಲಿ ಮುಹಮ್ಮದ್ ಅಬೂಬಕರ್ ಸಿದ್ದೀಕ್‌ರ ಮನೆಗೆ ತೆರಳಿ ಮದೀನಾಕ್ಕೆ ಹಿಜ್ರತ್ ಮಾಡಲು ಅವಶ್ಯ ಏರ್ಪಾಡುಗಳನ್ನು ಮಾಡಿದ್ದರು.

# 8

# ಹಿಜ್ರತ್

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸುಮಾರು ಎರಡು ವರ್ಷಗಳಿಂದ ಮದೀನಾಕ್ಕೆ ಹಿಜ್ರತ್ ಮಾಡುವ ವಿಚಾರವನ್ನು ಮಾಡುತ್ತಿದ್ದರು. ಈಗ ಅಲ್ಲಾಹನ ಅನುಮತಿ ಬಂದ ನಂತರ ಅಬೂಬಕರ್ ಸಿದ್ದೀಕ್‌ರೊಂದಿಗೆ ಮಕ್ಕಾದ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದರು. ಅವರ ಗುರಿ ಮದೀನಾ ಆಗಿದ್ದರೂ ವೈರಿಗಳು ಬೆನ್ನಟ್ಟುವುದನ್ನು ತಪ್ಪಿಸಲು ಉತ್ತರದ ಬದಲು ದಕ್ಷಿಣದ ಹಾದಿಯನ್ನು ಹಿಡಿದರು. ಮಕ್ಕಾದಿಂದ ಮೂರು ಮೈಲಿಗಳ ದೂರದಲ್ಲಿರುವ ಸೌರ್ ಪರ್ವತದ ಬಳಿ ತಲುಪುತ್ತಾರೆ.

## ಅಬೂಬಕರ್

ಮಾರನೆಯ ದಿನ ಕುರೈಶರು ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ)ರಿಗಾಗಿ ಹುಡುಕಾಟ ನಡೆಸುತ್ತಾರೆ. ವಿಭಿನ್ನ ತಂಡಗಳನ್ನು ಎಲ್ಲಾ ದಿಕ್ಕುಗಳಲ್ಲಿ ರವಾನಿಸುತ್ತಾರೆ. ಒಂದು ತಂಡವು ಹುಡುಕುತ್ತಾ ಸೌರ್ ಗುಹೆಯ ಬಳಿ ತಲುಪುತ್ತದೆ. ಜನರ ಧ್ವನಿಯನ್ನು ಕೇಳಿ ಅಬೂಬಕರ್ ಕಳವಳಗೊಂಡು, "ಪ್ರವಾದಿಯವರೇ! ಅವರು ತಮ್ಮ ಕಾಲುಗಳತ್ತ ನೋಡಿದರೆ ಖಂಡಿತ ನಮ್ಮನ್ನು ಕಾಣುವರು" ಎಂದು ನುಡಿದರು.

ಪ್ರವಾದಿ ಶಾಂತಚಿತ್ತದಿಂದ "ಭಯಪಡಬೇಡಿರಿ. ಅಲ್ಲಾಹ್ ನಮ್ಮ ಜತೆಯಲ್ಲಿದ್ದಾನೆ" ಎಂದು ಉತ್ತರಿಸಿದರು.

ಮುಂದುವರೆದು, "ಮೂರನೆಯವನು ಅಲ್ಲಾಹನಾಗಿರುವ ಆ ಇಬ್ಬರು ವ್ಯಕ್ತಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದರು.

ಅಲ್ಲಾಹ್, ಅವರ ರಕ್ಷಣೆಗಾಗಿ ಜೇಡರಹುಳ ಮತ್ತು ಪಾರಿವಾಳಗಳಿಗೆ ಆಜ್ಞಾಪಿಸುತ್ತಾನೆ. ಜೇಡರಹುಳವು ಸೌರ್‌ಗುಹೆಯ ಪ್ರವೇಶದಲ್ಲಿ ಬಲೆಯನ್ನು ಕಟ್ಟಿತು. ಪಾರಿವಾಳದ ಜೋಡಿಯು ಗುಹೆಯ ಬಾಯಿಯಲ್ಲಿ ಗೂಡು ಕಟ್ಟಿ ಮೊಟ್ಟೆಗಳನ್ನಿಡುತ್ತದೆ. ಜೇಡರ ಬಲೆಯನ್ನು ಮತ್ತು ಪಾರಿವಾಳದ ಗೂಡನ್ನು ಗುಹೆಯ ಪ್ರವೇಶ ದ್ವಾರದಲ್ಲಿ ಕಂಡ ಜನರು, ಯಾರೂ ಗುಹೆಯಲ್ಲಿ ಪ್ರವೇಶಿಸಲು ಸಾಧ್ಯವಿಲ್ಲವೆಂದು ಬಗೆದು ಹಿಂತೆರಳಿದರು.

ಮುಹಮ್ಮದ್ ಮತ್ತು ಅಬೂಬಕರ್ ಸಿದ್ದೀಕ್ ಕುರೈಶರಿಂದ ರಕ್ಷಣೆ ಪಡೆಯಲು ಎಷ್ಟೇ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡರೂ, ಅಂತಿಮವಾಗಿ ಅಲ್ಲಾಹನಲ್ಲಿ ಅವರ ಪರಿಪೂರ್ಣ ನಂಬಿಕೆಯೇ ಅವರನ್ನು ರಕ್ಷಿಸಿತ್ತು. ಹಿಜ್ರತ್‌ನ ನೈಜ ಅರ್ಥವು ಇದೇ ಆಗಿದೆ. ಅಲ್ಲಾಹ್‌ನಲ್ಲಿ ಪರಿಪೂರ್ಣ ವಿಶ್ವಾಸ ಮತ್ತು ಲೌಕಿಕ ಸಹಾಯ ಮತ್ತು ಭರವಸೆಗಳಿಂದ ನಿರಪೇಕ್ಷತೆ.

ಮುಹಮ್ಮದ್ ಮತ್ತು ಅಬೂಬಕರ್ ಮೂರು ದಿನಗಳ ಕಾಲ ಸೌರ್ ಗುಹೆಯಲ್ಲಿದ್ದರು. ಅಬೂಬಕರ್ ಮದೀನಾವನ್ನು ಹೆಚ್ಚು ಪರಿಚಿತವಲ್ಲದ ಮತ್ತು ಕಡಿಮೆ ದೂರದ ಮಾರ್ಗದಿಂದ ತಲುಪುವಂತೆ ಮಾರ್ಗದರ್ಶನ ಮಾಡಲು ಅಬ್ದುಲ್ಲಾ ಬಿನ್ ಅರೀಕತ್ ಎಂಬ ವ್ಯಕ್ತಿಯನ್ನು ಈ ಮೊದಲೇ ನೇಮಿಸಿದ್ದರು. ಈ ವ್ಯಕ್ತಿ ಮಕ್ಕಾ ಮತ್ತು ಮದೀನಾಗಳ ನಡುವಿನ ಎಲ್ಲಾ ಮಾರ್ಗಗಳನ್ನು ಬಲ್ಲವನೂ, ನಂಬಿಗಸ್ಥನೂ ಆಗಿದ್ದನು. ಅಬೂಬಕರ್ ಸಿದ್ದೀಕ್ ಆತನಿಗೆ ಎರಡು ಒಂಟೆಗಳನ್ನು ನೀಡಿ, ತಾವು ಹೇಳಿದಾಗ ಮತ್ತು ಹೇಳಿದ ಸ್ಥಳಕ್ಕೆ ಒಂಟೆಗಳೊಂದಿಗೆ ತಲುಪಬೇಕೆಂದು ತಿಳಿಸಿದ್ದರು.

ನಾಲ್ಕನೆಯ ರಾತ್ರಿಯ ಕೊನೆಯ ಜಾವದಲ್ಲಿ ಹಅಬೂಬಕರ್‌ರ ಆದೇಶದಂತೆ ಅಬ್ದುಲ್ಲಾ ಬಿನ್ ಅರೀಕತ್ ಎರಡು ಒಂಟೆಗಳೊಂದಿಗೆ ಸೌರ್‌ಗುಹೆ ತಲುಪಿದನು. ಸಮುದ್ರ ತೀರದ ಮಾರ್ಗಗಳ ಮೂಲಕ ಈ ಸಣ್ಣ ತಂಡವು ಮದೀನಾ ಕಡೆ ಹೊರಟಿತು. ಇದು ಮದೀನಾಕ್ಕೆ ಹೋಗುವ ಅತ್ಯಂತ ಹತ್ತಿರದ ಮಾರ್ಗವಾಗಿತ್ತು. ಈ ಮಾರ್ಗದಲ್ಲಿ ಬರುವ 'ಮಫಾಯಿರ್' ಪರ್ವತದ ಮೂಲಕ ಹಾದು ಹೋಗುವುದು ಕಷ್ಟವಾದ ಕಾರಣ, ಈ ಹಾದಿಯನ್ನು ಹೆಚ್ಚಿನ ಜನರು ಬಳಸುತ್ತಿರಲಿಲ್ಲ.

ಮುಹಮ್ಮದ್ ಮತ್ತು ಅಬೂಬಕರ್ ಸಿದ್ದೀಕ್ ಅಲ್ಲಾಹ್‌ನಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದ್ದರೂ ನಂಬಿಗಸ್ತನೂ, ಮಕ್ಕಾ ಮತ್ತು ಮದೀನಾದ ಹಾದಿಯನ್ನು ಚನ್ನಾಗಿ ಬಲ್ಲವನಾಗಿದ್ದ ಬಹುದೇವ ವಿಶ್ವಾಸ ಹೊಂದಿದ್ದ ಅಬ್ದುಲ್ಲಾ ಬಿನ್ ಅರೀಕತ್‌ನ ಸಹಾಯವನ್ನು ಪಡೆಯಲು ಹಿಂಜರಿಯಲಿಲ್ಲ. ಮುಹಮ್ಮದ್ ತಮ್ಮ ಜೀವನ ಪರ್ಯಂತ ಇದೇ ಧೋರಣೆಯನ್ನು ಅನುಸರಿಸಿದರು. ತಮಗೆ ನಿಕಟ ವರ್ತಿಗಳಾಗಿದ್ದ ಜನರು, ತಮ್ಮ ತತ್ವ, ಸಿದ್ಧಾಂತಗಳಲ್ಲಿ ನಂಬಿಕೆ ಇಡದಿದ್ದರೂ, ಅವರ ಉತ್ತಮ ನಡವಳಿಕೆ ಅಥವಾ ಅವರಲ್ಲಿದ್ದ ವೈಶಿಷ್ಟ್ಯಗಳ ಕಾರಣದಿಂದಾಗಿ ಅವರ ಸಹಾಯವನ್ನು ಪಡೆಯಲು, ಅವರ ಮೇಲೆ ಭರವಸೆಯಿಡಲು ಅವರು ಹಿಂದೇಟು ಹಾಕಲಿಲ್ಲ.

# ವಲಸೆ

ತಮ್ಮ ಮೇಲೆ ಹಿಂಸೆ, ದೌರ್ಜನ್ಯಗಳು ಎಲ್ಲೆ ಮೀರಿದ್ದರಿಂದ ಮತ್ತು ತಾವು ನಂಬಿದ್ದ ಧರ್ಮವನ್ನು ನಿರಾತಂಕವಾಗಿ ಪಾಲಿಸಲು ಇತರ ಯಾವುದೇ ಮಾರ್ಗ ಉಳಿಯದಿರುವುದರಿಂದ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮತ್ತು ಅವರ ಅನುಯಾಯಿಗಳು ತಮ್ಮ ತಾಯ್ನಾಡನ್ನು ತೊರೆಯಲು ನಿರ್ಬಂದಿತರಾಗಿದ್ದರು.

ಕುರ್‌ಆನ್ ಹೇಳಿರುವಂತೆ ಅಲ್ಲಾಹನ ಭೂಮಿಯು ವಿಶಾಲವಾಗಿದೆ. ಮುಸ್ಲಿಮರು ಇಸ್ಲಾಮ್ ಧರ್ಮವನ್ನು ಅನುಸರಿಸಲು ತಾವು ಹುಟ್ಟಿ ಬೆಳೆದ ಊರಿನೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡು, ದೂರದ ಪರದೇಶದಲ್ಲಿ ದೇಶಭ್ರಷ್ಟ ಜೀವನದ ಸಂಕಷ್ಟಗಳನ್ನು ಎದುರಿಸಲು ಸಿದ್ಧರಾದರು.

ಕುರ್‌ಆನ್ ಸತ್ಯವಿಶ್ವಾಸಿಗಳ ಈ ಕ್ರಮವನ್ನು ಈ ರೀತಿ ವರ್ಣಿಸಿದೆ:

> **"**ಮರ್ದನ ಸಹಿಸಿದ ತರುವಾಯ ಅಲ್ಲಾಹನಿಗಾಗಿ ಹಿಜ್ರತ್ ಮಾಡಿದವರಿಗೆ (ವಲಸೆ ಹೋದವರಿಗೆ) ನಾವು ಇಹಲೋಕದಲ್ಲಿಯೇ ಉತ್ತಮ ವಾಸಸ್ಥಾನ ನೀಡುವೆವು ಮತ್ತು ಪರಲೋಕದ ಪ್ರತಿಫಲವಂತು ಅತ್ಯಂತ ಹಿರಿದಾಗಿದೆ. ಅದೆಷ್ಟು ಶ್ರೇಷ್ಠವಾದ ಪ್ರತಿಫಲವು ಅವರನ್ನು ಕಾದಿದೆ ಎಂಬುದನ್ನು ತಾಳ್ಮೆ ವಹಿಸಿದ ಹಾಗೂ ತಮ್ಮ ಪ್ರಭುವಿನ ಭರವಸೆಯಲ್ಲಿ ಕಾರ್ಯವೆಸಗುತ್ತಿರುವ ಮರ್ದಿತರು ಅರಿತುಕೊಂಡಿದ್ದರೆ!**"**
> (ಪವಿತ್ರ ಕುರ್‌ಆನ್ 16:41–42)

ವಲಸೆಯು ಸತ್ಯ ವಿಶ್ವಾಸದ ಸತ್ವ ಪರೀಕ್ಷೆಯೂ ಆಗಿದೆ. ಹಿಂದೆ ಗತಿಸಿರುವ ಪ್ರವಾದಿಗಳು ಮತ್ತು ಸತ್ಯವಿಶ್ವಾಸಿಗಳು ಇದನ್ನು ಎದುರಿಸಿರುವರು. ಸತ್ಯವಿಶ್ವಾಸಕ್ಕಾಗಿ ಅಲ್ಲಾಹನಿಗಾಗಿ, ಓರ್ವ ಸತ್ಯವಿಶ್ವಾಸಿಯು ಎಷ್ಟು ತ್ಯಾಗ, ಬಲಿದಾನಗಳನ್ನು ಕಷ್ಟಗಳನ್ನು ಸಹಿಸಲು ಸಿದ್ಧನಿದ್ದಾನೆ ಎಂದು ಅಲ್ಲಾಹ್ ಪರೀಕ್ಷಿಸಬಯಸುತ್ತಾನೆ. ಹಿಜ್ರತ್ ಸಹ ಇಸ್ಲಾಮಿನ ಆರಂಭಿಕ ಘಟ್ಟದಲ್ಲಿ ಮುಸ್ಲಿಮ್ ಸಮುದಾಯ ಎದುರಿಸಿದ ಒಂದು ಸತ್ವಪರೀಕ್ಷೆಯಾಗಿತ್ತು.

ಪರಿಸರ, ವಾಸಸ್ಥಳ, ರೀತಿ ರಿವಾಜುಗಳು, ಸಂಸ್ಕೃತಿ ಬದಲಾದರೂ ಇಸ್ಲಾಮಿನ ಬೋಧನೆಗಳನ್ನು ಪಾಲಿಸುವ ಪಾಠವನ್ನು ಕಲಿಯಲೂ ಸಹ ಮುಸ್ಲಿಮರ ತಾಯ್ನಾಡಿನ ತ್ಯಜಿಸುವಿಕೆಯ ಅಗತ್ಯತೆವಿತ್ತು. ಮದೀನಾದಲ್ಲಿ ಮುಸ್ಲಿಮರು ಹೊಸ ಸಾಮಾಜಿಕ ಸಂಬಂಧಗಳನ್ನು, ಹೊಸ ಪರಿಸರವನ್ನು ಎದುರಿಸಬೇಕಿತ್ತು.

ತಮ್ಮ ಮೇಲಿನ ದೌರ್ಜನ್ಯ ಮತ್ತು ಹಿಂಸೆಯ ಕಾರಣದಿಂದ ಮುಸ್ಲಿಮರು ತಮ್ಮ ಪೀಡಕರಿಂದ ದೂರವಾಗಿ ಸ್ವಾತಂತ್ರ್ಯದತ್ತ ಸಾಗಬಯಸಿದರು. ಈ ರೀತಿ ಮುಸ್ಲಿಮರು ತಾವು ದೌರ್ಜನ್ಯವನ್ನು ಸಹಿಸಲು, ಮರ್ದಿತರ ಸ್ಥಾನದಲ್ಲಿಯೇ

ಮುಂದುವರಿಯಲು ಸಿದ್ಧರಿಲ್ಲವೆಂದು ತೋರಿಸಿಕೊಟ್ಟರು. ಅಲ್ಲಾಹನ ಹೆಸರಿನ ಘೋಷಣೆಯೇ ಸ್ವಾತಂತ್ರ್ಯ ಅಥವಾ ಬಂಧನದಿಂದ ಮುಕ್ತಿಯಾಗಿದೆ. ಇದೇ ಸಂದೇಶವನ್ನು ಮಕ್ಕಾದ ಗುಲಾಮರಿಗೆ ಪ್ರವಾದಿ ನೀಡಿದ್ದರು. ಇಸ್ಲಾಮಿನ ಸ್ವೀಕಾರದ ಅರ್ಥ ಅವರಿಗೆ ದಾಸ್ಯದಿಂದ ವಿಮೋಚನೆಯಾಗಿತ್ತು. ಹಿಜ್ರತ್‌ನ ಸಂದರ್ಭದಲ್ಲಿ ಮುಸ್ಲಿಮ್ ಸಮುದಾಯಕ್ಕೆ ಒಂದು ವಿಶಾಲವಾದ ಕರೆಯನ್ನು ನೀಡಲಾಯಿತು. ಸತ್ಯವಿಶ್ವಾಸದ ಬೇಡಿಕೆ "ಸ್ವಾತಂತ್ರ್ಯ" ಮತ್ತು "ನ್ಯಾಯ"ವಾಗಿದ್ದು ಇದಕ್ಕಾಗಿ ಮುಸ್ಲಿಮ್ ಸಮುದಾಯ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಬೆಲೆಯನ್ನು ತೆರಬೇಕಾಗಿತ್ತು.

ಹಿಜ್ರತ್, ಕಪಟ ಆರಾಧ್ಯರಿಂದ, ಕೆಡಕುಗಳಿಂದ ಹೃದಯ ಮತ್ತು ಆತ್ಮದ ದೂರವಾಗುವಿಕೆಯೂ ಆಗಿದೆ. ಹಣದ, ಅಧಿಕಾರದ ವ್ಯಾಮೋಹದಿಂದ, ಅನೈತಿಕತೆಯಿಂದ ವಿಮುಖರಾಗುವುದು ಹಿಜ್ರತ್ ಆಗಿದೆ. ಒಮ್ಮೆ ಪ್ರವಾದಿರನ್ನು ಸಹಾಬಿಗಳು "ಅತ್ಯುತ್ತಮ ಹಿಜ್ರತ್ ಯಾವುದು"? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರವಾದಿ, "ಕೆಡುಕಿನಿಂದ ವಿಮುಖರಾಗುವುದು" ಎಂದು ಉತ್ತರಿಸಿದರು.

ಈ ರೀತಿ ಮಕ್ಕಾದಿಂದ ಮದೀನಾಕ್ಕೆ ಹಿಜ್ರತ್ ಮಾಡಿದ ಮುಸ್ಲಿಮರು ಇಸ್ಲಾಮಿ ಬೋಧನೆಯ ನವೀನ ಆಯಾಮದ ಸ್ವಾದವನ್ನು ಅನುಭವಿಸಿದರು. ಮಕ್ಕಾದಿಂದ ಮದೀನಾಕ್ಕೆ ವಲಸೆಯು ಅವರ ಮಟ್ಟಿಗೆ ಒಂದು ಆಧ್ಯಾತ್ಮಿಕ ವಲಸೆಯಾಗಿತ್ತು. ಮಕ್ಕಾದಿಂದ ದೂರವಾಗಿ, ಭೌತಿಕ ಸರಹದ್ದುಗಳನ್ನು ದಾಟಿ ಅಲ್ಲಾಹನಿಗೆ ಸನಿಹವಾದರು. ಮಕ್ಕಾದಿಂದ ಮದೀನಾದ ಮುಸ್ಲಿಮರ ಹಿಜ್ರತ್‌ನ ಪ್ರಾಮುಖ್ಯತೆಯನ್ನು ಅರಿತೇ, ಉಮರ್, ಹಿಜ್ರತ್‌ನ ಘಟನೆಯನ್ನು ಇಸ್ಲಾಮಿ ಶಕೆಯ ಆರಂಭವನ್ನಾಗಿ ಪರಿಗಣಿಸಿದರು.

# 9

# ಮದೀನಾದಲ್ಲಿ ಸ್ವಾಗತ

ಪ್ರವಾದಿ ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) 20 ದಿನಗಳ ಪ್ರಯಾಣದ ನಂತರ ಮದೀನಾದ ಹೊರ ವಲಯದಲ್ಲಿದ್ದ ಪುಟ್ಟ ಹಳ್ಳಿ ಕುಬಾ ತಲುಪುತ್ತಾರೆ. ಕುಬಾದ ಜನರು ಪ್ರವಾದಿರನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದರು. ಪ್ರವಾದಿರನ್ನು ಕಂಡ ಕೂಡಲೇ ಸಂತೋಷದಿಂದ ಕುಣಿದಾಡಿದರು. ಪ್ರವಾದಿ ಮತ್ತು ಅಬೂಬಕರ್ ಸಿದ್ದೀಕ್ ಮೂರು ದಿನಗಳ ಕಾಲ ಕುಬಾದಲ್ಲಿ ತಂಗಿದರು. ಅಲ್ಲಿ ಒಂದು ಮಸೀದಿಯ ನಿರ್ಮಾಣ ಮಾಡಿದರು. ಮುಸ್ಲಿಮರು ನಿರ್ಮಿಸಿದ ಪ್ರಥಮ ಮಸೀದಿ ಇದಾಗಿತ್ತು.

ಕುಬಾದಿಂದ ಹೊರಟು ಪ್ರವಾದಿ ಮದೀನಾದ ಹಾದಿಯಲ್ಲಿ ಝುಹ್ರ್ ನಮಾಝಿನ ಸಮಯಕ್ಕೆ ಸಾಲಿಮ್‌ಗೋತ್ರದವರ ಊರನ್ನು ತಲುಪಿದರು. ಅಂದು ಶುಕ್ರವಾರದ ದಿನವಾಗಿದ್ದರಿಂದ ಜುಮಾ ನಮಾಝು ನಿರ್ವಹಿಸಲಾಯಿತು. ಪ್ರವಾದಿರ ನೇತೃತ್ವದಲ್ಲಿ ನಿರ್ವಹಿಸಿದ ಪ್ರಥಮ ಜುಮಾ ನಮಾಝ್ ಇದಾಗಿತ್ತು. ಪ್ರವಾದಿ ಇಲ್ಲಿಯೂ ಒಂದು ಮಸೀದಿಯನ್ನು ನಿರ್ಮಿಸಿದರು.

ಸೋಮವಾರ 622 ಕ್ರಿ.ಶ. ಅಕ್ಟೋಬರ್ 4ನೇ ತಾರೀಖು ರಂದು ಪ್ರವಾದಿ ಮದೀನಾ ಪ್ರವೇಶಿಸಿದರು. ಯಸ್ರಿಬ್ ಇಂದು ಸಂಭ್ರಮ, ಉಲ್ಲಾಸದಲ್ಲಿ ಮೈ ಮರೆತಿತ್ತು. ಇಡಿಯ ನಗರದಲ್ಲಿ ಉತ್ಸವದ ಕಳೆಯಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಜನರು ಕಿಕ್ಕಿರಿದು ನಿಂತಿದ್ದರು. ಪ್ರವಾದಿ ಮತ್ತು ಸಂಗಾತಿಗಳು ಹತ್ತಿರ ಬರುತ್ತಿದ್ದಂತೆ ಅಲ್ಲಾಹು ಅಕ್ಬರ್ (ಅಲ್ಲಾಹ್ ಶ್ರೇಷ್ಠನು) ಧ್ವನಿಯು ಮುಗಿಲು ಮುಟ್ಟಿತು. ಯಸ್ರಿಬ್ ನಿವಾಸಿಗಳು ಹಿಂದೆಂದೂ ಇಂತಹ ಸಡಗರ, ಸಂಭ್ರಮದ ವಾತಾವರಣ ಕಂಡಿರಲಿಲ್ಲ.

ಪ್ರತಿಯೊಬ್ಬರೂ ಪ್ರವಾದಿ ತಮ್ಮ ಅತಿಥಿಯಾಗಬೇಕೆಂದು ಮನವಿ ಮಾಡಲಾರಂಭಿಸಿದರು. ಪ್ರವಾದಿ "ನನ್ನ ಒಂಟೆಗೆ ದಾರಿ ಬಿಡಿ. ಇದು ಅಲ್ಲಾಹನ

ಕಡೆಯಿಂದ ಆದೇಶ ಪಡೆದಿದೆ" ಎಂದು ಉತ್ತರಿಸುತ್ತಿದ್ದರು. ಕೊನೆಗೆ ಒಂಟೆಯು ಖಾಲಿದ್ ಬಿನ್ ಝೈದ್‌ರ ಮನೆಯ ಮುಂದೆ ಕುಳಿತಿತು. ಮುಹಮ್ಮದ್ ನುಡಿದರು:

"ಅಲ್ಲಾಹನು ಬಯಸಿದರೆ ಇದುವೇ ನಮ್ಮ ವಾಸಸ್ಥಳವಾಗಲಿದೆ."

ಅಬೂ ಅಯ್ಯೂಬ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಮನೆಯಲ್ಲಿ ಪ್ರವಾದಿ ಸುಮಾರು ಏಳು ತಿಂಗಳ ಕಾಲ ವಾಸ ಮಾಡಿದರು.

## ಮಸೀದಿ

ಒಂಟೆಯು ಕುಳಿತ ಸ್ಥಳದಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಸೀದಿ ನಿರ್ಮಿಸಲು ಬಯಸಿದರು. ಆ ನೆಲವು ಅಮ್ರೌನ ಅನಾಥ ಮಕ್ಕಳಾದ ಸಹಲ್ ಮತ್ತು ಸುಹೈಲ್‌ರಿಗೆ ಸೇರಿತ್ತು. ಆದರೆ ಮಸೀದಿ ನಿರ್ಮಿಸುವುದಕ್ಕಿಂತ ಮೊದಲು, ಆ ಸ್ಥಳವನ್ನು ಖರೀದಿಸಿ ವಕ್ಫ್ ಮಾಡುವುದು ಅಗತ್ಯವಾಗಿತ್ತು. ಸಹಲ್ ಮತ್ತು ಸುಹೈಲ್ ಯಾವುದೇ ಬೆಲೆಯನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಆದರೂ ಮುಹಮ್ಮದ್‌ರ ಒತ್ತಾಯದ ಮೇರೆಗೆ ಬೆಲೆಯನ್ನು ನಿಗದಿಪಡಿಸಲಾಯಿತು. ಅಬೂಬಕರ್ ಸಿದ್ದೀಕ್ ಭೂಮಿಯ ಬೆಲೆಯನ್ನು ಪಾವತಿಸಿದರು.

ಈ ಮೂರು ಮಸೀದಿಗಳ ನಿರ್ಮಾಣದಲ್ಲಿ ಮುಹಮ್ಮದ್ ಸಮಾಜದಲ್ಲಿ ಮಸೀದಿಗೆ ಇರುವ ಕೇಂದ್ರೀಯ ಸ್ಥಾನದ ಕಡೆಗೆ ಜನರ ಗಮನ ಸೆಳೆಯಬಯಸಿದ್ದರು.

"ಸಂಪೂರ್ಣ ಜಗತ್ತು ಮಸೀದಿಯಾಗಿದೆ" ಎಂದು ಪ್ರವಾದಿ ನುಡಿದಿದ್ದಾರೆ. ಜಗತ್ತಿನ ಯಾವುದೇ ಭಾಗದಲ್ಲಿ ನಮಾಝ್ ನಿರ್ವಹಿಸಲು ಅಲ್ಲಾಹ್ ಅನುಮತಿ ನೀಡಿದ್ದಾನೆ. ಇದರ ಅರ್ಥ ಭೂಮಿಯ ಯಾವುದೇ ಭಾಗವು 'ಅಶುದ್ಧ" ವಲ್ಲವೆಂಬುದಾಗಿದೆ.

ಪ್ರವಾದಿಯವರ ಹೇಳಿಕೆಯ ಮತ್ತೊಂದು ಅರ್ಥವೂ ಇದೆ. ಜನರು ಮಸೀದಿಯಲ್ಲಿ ಶುದ್ಧರಾಗಿರುವ ಸ್ಥಿತಿಯಲ್ಲಿ ಪ್ರವೇಶಿಸುತ್ತಾರೆ. ಅವರ ದೇಹ ಮತ್ತು ಅವರ ಉಡುಪುಗಳು ಶುದ್ಧವಾಗಿರುತ್ತವೆ. ಅವರ ಮನಸ್ಸುಗಳು ಮತ್ತು ಹೃದಯಗಳು ಶುದ್ಧವಾಗಿರುತ್ತವೆ. ಮಸೀದಿಯನ್ನು ಅಲ್ಲಾಹನ ವಿನಮ್ರ ಸೇವಕರೆಂಬ ಭಾವದಲ್ಲಿ ಪ್ರವೇಶಿಸುತ್ತಾರೆ. ಮಸೀದಿಯನ್ನು ಪ್ರವೇಶಿಸುವಾಗ ಮಸೀದಿಯೊಳಗಿರುವವರ ಮೇಲೆ ಶಾಂತಿಯನ್ನು ಕೋರುತ್ತಾರೆ. ಈ ರೀತಿ ಮಸೀದಿಯು ಶಾಂತಿ ಮತ್ತು ಸೌಹಾರ್ದತೆಯ ಸಂದೇಶವನ್ನು, ಅಲ್ಲಾಹನ ಏಕೈಕತೆಯ ಸಂದೇಶವನ್ನು ಜಗತ್ತಿಗೆ ಸಾರುತ್ತದೆ. ಜಗತ್ತಿನಲ್ಲಿ ಸರ್ವಶ್ರೇಷ್ಠ ಮಸೀದಿ ಕಅಬಾದ ಒಳಗಡೆ ಮತ್ತು ಅದರ ಪರಿಸರದಲ್ಲಿ ರಕ್ತ ಹರಿಸುವುದನ್ನು

ನಿಷಿದ್ಧಗೊಳಿಸಲಾಗಿದೆ. ಮಸೀದಿಯು ನೀಡುವ ಶಾಂತಿಯ ಸಂದೇಶವು ರಕ್ತ ಹರಿಸುವಿಕೆಯ ನಿಷೇಧದಿಂದ ಉತ್ತುಂಗಕ್ಕೆ ಏರುತ್ತದೆ.

ಈ ಜಗತ್ತನ್ನು ಮಸೀದಿಗೆ ಹೋಲಿಸುವಾಗ ಪ್ರವಾದಿರ ಉದ್ದೇಶ ಇದನ್ನೂ ಸಹ ಶಾಂತಿಯ ತಾಣವನ್ನಾಗಿಸುವುದು ಆಗಿತ್ತು. ಜಗತ್ತಿನ ಯಾವುದೇ ಭಾಗದಲ್ಲಿ, ಯಾವುದೇ ಮೂಲೆಯಲ್ಲಿದ್ದರೂ, ಎಲ್ಲಾ ಜನರೂ ಶಾಂತಿಯಿಂದ, ನೆಮ್ಮದಿಯಿಂದ ಬಾಳಬೇಕು ಎಂಬುದು ಪ್ರವಾದಿಯವರ ಆಶಯವಾಗಿತ್ತು.

ಕುಬಾದಲ್ಲಿ ಪ್ರವಾದಿ ಹಸಿದವರಿಗೆ ಉಣಬಡಿಸಲು, ರಕ್ತಸಂಬಂಧಗಳನ್ನು ಗೌರವಿಸಲು, ಎಲ್ಲಾ ಗೋತ್ರಗಳೊಂದಿಗೆ ಶಾಂತಿ, ಸೌಹಾರ್ದಯುತ ಸಂಬಂಧಗಳನ್ನು ಹೊಂದುವಂತೆ ಜನರಿಗೆ ಬೋಧಿಸಿದರು. ರಾತ್ರಿಯ ವೇಳೆ ಜನರೆಲ್ಲರೂ ನಿದ್ರಿಸುವಾಗ, ಎದ್ದು ಅಲ್ಲಾಹನ ಆರಾಧನೆಯಲ್ಲಿ ನಿರತರಾಗಿರಲು ತಿಳಿಸಿದರು.

ಪ್ರವಾದಿರ ಆಗಮನದ ಮೊದಲೇ ಮದೀನಾದ ಪ್ರತಿಯೊಂದು ಮನೆಗೆ ಇಸ್ಲಾಮ್ ವ್ಯಾಪಿಸಿತ್ತು. ಇಸ್ಲಾಮಿನ ಸಂದೇಶವು ಕಡುವೈರಿಗಳಾಗಿದ್ದ ಔಸ್ ಮತ್ತು ಖಝ್ರಜ್ ಗೋತ್ರಗಳನ್ನು ಒಗ್ಗೂಡಿಸಿತ್ತು. ವಿವಿಧ ಗೋತ್ರಗಳಲ್ಲಿ, ವರ್ಗಗಳಲ್ಲಿ ಹರಿದು ಹಂಚಾಗಿದ್ದ ಜನರನ್ನು ಏಕದೇವತ್ವದ ಬಾವುಟದಡಿಯಲ್ಲಿ ಸಂಘಟಿಸುವಲ್ಲಿ ಇಸ್ಲಾಮ್ ಯಶಸ್ವಿಯಾಗಿತ್ತು.

## *ಅಸ್ಸಲಾಮು ಅಲೈಕುಮ್*
## ನಿಮ್ಮ ಮೇಲೆ ಅಲ್ಲಾಹನ ಶಾಂತಿ ಇರಲಿ!

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕುಬಾ ತಲುಪಿದ ಕೂಡಲೇ ಅಲ್ಲಿಯ ಜನರಿಗೆ ನೀಡಿದ ಬೋಧನೆಗಳಲ್ಲಿ, ಇಸ್ಲಾಮಿ ಶುಭಾಷಯ ಕೋರುವ ರೀತಿಯನ್ನು ತಿಳಿಸುವುದಾಗಿತ್ತು. ಮುಹಮ್ಮದ್ ಮುಸ್ಲಿಮರು ಪರಸ್ಪರ ಭೇಟಿಯಾದಾಗ, *'ಅಸ್ಸಲಾಮು ಅಲೈಕುಮ್'* (ನಿಮ್ಮ ಮೇಲೆ ಅಲ್ಲಾಹನ ಶಾಂತಿ ಇರಲಿ) ಹೇಳಬೇಕೆಂದೂ, ಇದಕ್ಕೆ ಉತ್ತರವಾಗಿ *'ವಾಲೇಕುಮ್ ಸಲಾಮ್'* (ನಿಮ್ಮ ಮೇಲೂ ಅಲ್ಲಾಹನ ಶಾಂತಿವಿರಲಿ) ಎಂದು ನುಡಿಯಬೇಕೆಂದು ತಿಳಿಸಿದರು. ಈ ರೀತಿ ಜನರಲ್ಲಿ ಶಾಂತಿಯ ಸಂದೇಶವನ್ನು ಪ್ರವಾದಿ ಹರಡ ಬಯಸಿದರು. ಜನರಿಗೆ ಹಸಿದವರಿಗೆ ಉಣ ಬಡಿಸಲು, ರಕ್ತ ಸಂಬಂಧಗಳನ್ನು ಗೌರವಿಸಲು, ರಾತ್ರಿಯ ವೇಳೆ ಜಗತ್ತು ನಿದ್ರೆಯಲ್ಲಿರುವಾಗ, ಎದ್ದು ಅಲ್ಲಾಹನ ಆರಾಧನೆಯಲ್ಲಿ ತೊಡಗಲು ತಿಳಿಸಿದರು. ರಾತ್ರಿಯ ವೇಳೆ ಎದ್ದು ಅಲ್ಲಾಹನ ಆರಾಧನೆಯಲ್ಲಿ ನಿರತರಾಗುವುದರಿಂದ ಮನುಷ್ಯನಿಗೆ 'ಅಧ್ಯಾತ್ಮಿಕ ಶಕ್ತಿ' ದೊರಕುತ್ತದೆ. ಇದರಿಂದ ವ್ಯಕ್ತಿಗೆ ತನ್ನ ಹಕ್ಕುಗಳನ್ನು ಪೂರೈಸಲು ಸಾಧ್ಯವಾಗುತ್ತದೆ.

ಪ್ರವಾದಿತ್ವದ ಉದ್ದಕ್ಕೂ ಮುಹಮ್ಮದ್ ಜನರಿಗೆ ಬೋಧನೆಗಳನ್ನು ನೀಡುತ್ತಿದ್ದು.

ಮದೀನಾ ತಲುಪಿದಾಗ ಪ್ರವಾದಿರಿಗೆ ಅದಾಗಲೇ ಸಾಂಕೇತಿಕ ರಾಜಕೀಯ ಅಧಿಕಾರ ಲಭಿಸಿತ್ತು. ಮದೀನಾದ ಅನೇಕ ಜನರು ಇಸ್ಲಾಮ್ ಸ್ವೀಕರಿಸಿದ್ದರು. ಪರಮ ಶತ್ರುಗಳಾಗಿದ್ದ ಔಸ್ ಮತ್ತು ಖಝ್ರಜ್ ಗೋತ್ರಗಳನ್ನು ಇಸ್ಲಾಮ್ ಒಗ್ಗೂಡಿಸಿತ್ತು. ಇಸ್ಲಾಮಿನ ಸಂದೇಶವು ವಿವಿಧ ಗೋತ್ರಗಳ, ಬುಡಕಟ್ಟುಗಳ, ವಿವಿಧ ವರ್ಗಗಳ ಸ್ತ್ರೀ, ಪುರುಷರನ್ನು ಒಂದಾಗಿಸಿತ್ತು.

## ಯಹೂದಿಯರೊಂದಿಗೆ ಒಪ್ಪಂದ

ಮದೀನಾದ ಬಹುದೇವಾರಾಧಕರು ಪ್ರವಾದಿರನ್ನು ಮತ್ತು ಇಸ್ಲಾಮ್‌ಅನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಮದೀನಾದಲ್ಲಿ ಕೆಲ ಕಪಟ ವಿಶ್ವಾಸಿಗಳೂ ಇದ್ದರು. ಅವರು ಮುಸ್ಲಿಮರೊಂದಿಗೆ ಒಡನಾಟವನ್ನಿಟ್ಟುಕೊಂಡಿದ್ದರೂ, ಇಸ್ಲಾಮಿನ ಶತ್ರುಗಳೊಂದಿಗೆ ಕೈಸೇರಿ ಸಂಚನ್ನು ರೂಪಿಸುತ್ತಿದ್ದರು. ಇದಲ್ಲದೇ, ಮದೀನಾದಲ್ಲಿ ಯಹೂದಿಗಳ ಮೂರು ಪ್ರಮುಖ ಗೋತ್ರಗಳು ಕೈನುಕಾ ಗೋತ್ರ, ನಝೀರ್ ಗೋತ್ರ ಮತ್ತು ಕುರೈಝಾ ಗೋತ್ರ ವಾಸವಾಗಿದ್ದವು. ಇವು ಸದಾ ಪ್ರವಾದಿರ ವಿರುದ್ಧ ಸಂಚನ್ನು ಹೂಡುತ್ತಿದ್ದವು. ಶಾಂತಿ ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಸಮಾಜದ ವಿವಿಧ ವರ್ಗಗಳನ್ನು ಪರಸ್ಪರ ಬೆಸೆಯುವ ಅಗತ್ಯವಿತ್ತು. ಈ ಕ್ರಮಗಳನ್ನು ಕೈಗೊಳ್ಳದೇ, ಮದೀನಾಕ್ಕೆ ಭವಿಷ್ಯದಲ್ಲಿ ಒದಗಬಹುದಾದ ಸಂಕಷ್ಟಗಳಿಂದ ರಕ್ಷಿಸುವುದು ಸಾಧ್ಯವಿರಲಿಲ್ಲ.

ಈ ಉದ್ದೇಶ ಸಾಧನೆಗಾಗಿ ಪ್ರವಾದಿ ಒಂದು ಕರಾರನ್ನು ಸಿದ್ಧಪಡಿಸಿದರು. ಇದು ಮದೀನಾದ ಪ್ರಪ್ರಥಮ ಸಂವಿಧಾನವೆನಿಸಿಕೊಂಡಿತು. ಇದೊಂದು ಅಪ್ರತಿಮ ದಸ್ತಾವೇಜಾಗಿತ್ತು. ಕರಾರಿನ ಅಂಶಗಳು ಈ ರೀತಿ ಇದ್ದವು.

1. ಯಹೂದಿಗಳು ತಮ್ಮ ಧರ್ಮದ ಮತ್ತು ಮುಸ್ಲಿಮರು ತಮ್ಮ ಧರ್ಮದ ಪಾಲನೆ ಮಾಡುವರು.
2. ಯಹೂದಿಗಳು ಅವರ ವೆಚ್ಚಗಳಿಗೆ ಹೊಣೆಗಾರರಾಗಿರುವರು ಮತ್ತು ಮುಸ್ಲಿಮರು ಅವರ ವೆಚ್ಚಗಳಿಗೆ ಹೊಣೆಗಾರರಾಗಿರುವರು.
3. ಮೂರನೆಯ ಪಕ್ಷ ಇವರ ಮೇಲೆ ಆಕ್ರಮಣ ಮಾಡಿದಲ್ಲಿ, ಪರಸ್ಪರರು ಸಹಾಯಕ್ಕೆ ಧಾವಿಸಬೇಕು.
4. ಪರಸ್ಪರರು ಸಮಾಲೋಚಿಸಬೇಕು. ಪರಸ್ಪರರ ಸಂಬಂಧಗಳು ಒಳಿತಿನ ಬುನಾದಿಯ ಮೇಲಿರುವುದು. ಕೆಡುಕಿಗೆ ಯಾವುದೇ ಆಸ್ಪದವಿರುವುದಿಲ್ಲ.
5. ಪರಸ್ಪರರಿಗೆ ಹಾನಿಯಾಗುವಂತಹ ಕಾರ್ಯಗಳನ್ನು ಮಾಡಬಾರದು.
6. ಬಾಧಿತರಿಗೆ ಸಹಾಯವನ್ನು ಮಾಡಬೇಕು.

7. ಮುಸ್ಲಿಮರ ಪರವಾಗಿ ಹೋರಾಡುವವರೆಗೆ ಯಹೂದಿಗಳು ಯುದ್ಧ ವೆಚ್ಚವನ್ನು ನೀಡಬೇಕು.
8. ಈ ಕರಾರಿನಲ್ಲಿ ಭಾಗಿಯಾಗುವ ಎಲ್ಲಾ ಪಕ್ಷಗಳಿಗೆ ಮದೀನಾ ಪವಿತ್ರವಾಗಿರುವುದು. ಯಾರೂ ಇದರ ಪಾವಿತ್ರ್ಯತೆಗೆ ಧಕ್ಕೆ ಒದಗಿಸಬಾರದು.
9. ಈ ಕರಾರನ್ನು ಒಪ್ಪಿಕೊಂಡಿರುವವರ ನಡುವೆ ಭಿನ್ನಾಭಿಪ್ರಾಯಗಳು ಉಂಟಾದಲ್ಲಿ ಅದನ್ನು ಅಲ್ಲಾಹ್ ಮತ್ತು ಆತನ ಪ್ರವಾದಿ ಬಗೆಹರಿಸುವರು.
10. ಈ ಕರಾರಿಗೆ ಸಹಿ ಮಾಡಿರುವವರು ಕುರೈಷರನ್ನು ವಾಣಿಜ್ಯೋದ್ಯಮದಲ್ಲಿ ಬಹಿಷ್ಕರಿಸಬೇಕು. ಅವರಿಗೆ ಯಾವುದೇ ಸಹಾಯವನ್ನು ನೀಡಬಾರದು.
11. ಶತ್ರುಗಳು ಮದೀನಾದ ಮೇಲೆ ಆಕ್ರಮಣ ನಡೆಸಿದರೆ ಮದೀನಾವನ್ನು ರಕ್ಷಿಸಬೇಕು.
12. ಕಾನೂನು ಬದ್ಧ ಪ್ರತೀಕಾರ ಪಡೆಯಲು ಉಭಯೇತ್ರ ಪಕ್ಷಗಳಿಗೆ ಯಾವುದೇ ಅಡೆತಡೆಗಳಿರುವುದಿಲ್ಲ.

ಈ ಕರಾರು ಜಾರಿಗೆ ಬಂದ ನಂತರ ಮದೀನಾ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳು ಕೂಡಿ ಒಂದು ಪ್ರಜಾಸತ್ತಾತ್ಮಕ ರಾಷ್ಟ್ರವಾಗಿ ರೂಪಗೊಂಡಿತು. ಮದೀನಾ ಈ ರಾಷ್ಟ್ರದ ರಾಜಧಾನಿಯಾಗಿತ್ತು ಮತ್ತು ಮುಹಮ್ಮದ್ ಇದರ ರಾಷ್ಟ್ರಾಧ್ಯಕ್ಷರಾಗಿದ್ದರು. ಮದೀನಾದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿ ಬಂದು ಅಧಿಕಾರವು ಬಹುತೇಕ ಮುಸ್ಲಿಮರ ಕೈಯಲ್ಲಿಯೇ ಕೇಂದ್ರೀಕೃತವಾಗಿತ್ತು. ಮುಹಮ್ಮದ್ ಈ ರಾಷ್ಟ್ರದ ಸುತ್ತಮುತ್ತಲಿನ ಪ್ರದೇಶದಲ್ಲಿಯೂ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ವಿವಿಧ ಗೋತ್ರ, ಪಂಗಡಗಳೊಂದಿಗೆ ಇದೇ ತರಹದ ಕರಾರನ್ನು ಮಾಡಿಕೊಂಡರು.

ಈ ರೀತಿ 'ಕರಾರು' ಇಸ್ಲಾಮಿನಲ್ಲಿ ಪ್ರಾಮುಖ್ಯತೆ ಪಡೆಯಿತು. ವಿವಾಹದ ಕರಾರಿರಬಹುದು ವ್ಯಾಪಾರ ವಹಿವಾಟಿನ ಕರಾರಿರಬಹುದು ಅಥವಾ ಯಾವುದೇ ವ್ಯಾಜ್ಯವನ್ನು ಬಗೆಹರಿಸಲು ಮಾಡಿಕೊಂಡ ಕರಾರಿಬಹುದು ಅಥವಾ ಯುದ್ಧದ ಸಂದರ್ಭದಲ್ಲಿ ರೂಪಿಸಿರುವ ಕರಾರಿರಬಹುದು. ಉಭಯೇತ್ರ ಪಕ್ಷಗಳು ಕರಾರಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಬದ್ಧರಾಗಿದ್ದರು. ಕುರ್‌ಆನ್ ಈ ರೀತಿ ಹೇಳುತ್ತದೆ.

> "ವಚನವನ್ನು ಪಾಲಿಸಿರಿ. ನಿಶ್ಚಯವಾಗಿಯೂ ವಚನದ ಕುರಿತು ನಿಮ್ಮನ್ನು ಪ್ರಶ್ನಿಸಲಾಗುವುದು." (ಪವಿತ್ರ ಕುರ್‌ಆನ್ 17:34)

ಪ್ರವಾದಿ ಮುಸ್ಲಿಮರು ಕರಾರಿನ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸಬೇಕೆಂದು ಆದೇಶಿಸಿರುವರು.

# ಕಪಟ ವಿಶ್ವಾಸಿಗಳು

ಮುಹಮ್ಮದ್(ಅವರ ಮೇಲೆ ಶಾಂತಿ ಇರಲಿ) ಮದೀನಾದಲ್ಲಿ ಒಂದು ಹೊಸ ಸಮಸ್ಯೆಯನ್ನು ಎದುರಿಸಬೇಕಾಗಿತ್ತು. ಇದು ಕಪಟ ವಿಶ್ವಾಸಿಗಳ ಸಮಸ್ಯೆಯಾಗಿತ್ತು. ಮಕ್ಕಾದಲ್ಲಿ ಒಬ್ಬ ವ್ಯಕ್ತಿ ಇಸ್ಲಾಮ್ ಸ್ವೀಕರಿಸಬಯಸಿದ್ದರೆ, ಆತನು ಅನೇಕ ಸಂಕಷ್ಟಗಳನ್ನು ಎದುರಿಸಿದ ಬಳಿಕವಷ್ಟೇ ಇಸ್ಲಾಮ್ ಸ್ವೀಕರಿಸಬಹುದಾಗಿತ್ತು. ಈ ರೀತಿ ಮುಸ್ಲಿಮರಾದವರು ಸತ್ಯ ವಿಶ್ವಾಸದಲ್ಲಿ ಪ್ರಾಮಾಣಿಕರಾಗಿದ್ದರು. ಅವರ ಮನಮಸ್ತಿಷ್ಕದಲ್ಲಿ ಇಸ್ಲಾಮ್ ಆಳವಾಗಿ ಬೇರೂರಿತ್ತು.

ಆದರೆ ಮದೀನಾದಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು. ಮುಸ್ಲಿಮರು ಇಲ್ಲಿ ಪ್ರಬಲರಾಗಿರುವುದನ್ನು ಕಂಡು ಕೆಲ ಜನರು ಸ್ವಹಿತಾಸಕ್ತಿಗಾಗಿ ಇಸ್ಲಾಮ್ ಸ್ವೀಕರಿಸಿದರು. ಈ ಜನರು ತಮ್ಮ ಇಸ್ಲಾವ್ ಸ್ವೀಕಾರದಲ್ಲಿ ಪ್ರಾವಾಣಿಕ ರಾಗಿರಲಿಲ್ಲ. ಮುಸ್ಲಿಮರೊಂದಿಗಿದ್ದಾಗ ಮುಸ್ಲಿಮರಂತೆಯೇ ವರ್ತಿಸುತ್ತಿದ್ದರು. ಏಕಾಂತದಲ್ಲಿ ಇಸ್ಲಾಮಿನ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಕಪಟ ವಿಶ್ವಾಸಿಗಳ ಈ ವರ್ತನೆ ಕುರಿತು ಕುರ್‌ಆನ್ ಈ ರೀತಿ ಬಣ್ಣಿಸಿದೆ.

> **“**ಕೆಲ ಜನರಲ್ಲಿ, ನಾವು ಅಲ್ಲಾಹನಲ್ಲಿ ಹಾಗೂ ಅಂತಿಮ ದಿನದಲ್ಲಿ ವಿಶ್ವಾಸವಿಟ್ಟಿದ್ದೇವೆ**”** ಎಂದು ಹೇಳುವವರು ಇದ್ದಾರೆ. ಆದರೆ ನಿಜವಾಗಿ ಅವರು ವಿಶ್ವಾಸಿಗಳಲ್ಲ. ಅವರು ಅಲ್ಲಾಹನನ್ನೂ, ವಿಶ್ವಾಸಿಗಳನ್ನೂ ವಂಚಿಸುತ್ತಾರೆ. ವಾಸ್ತವದಲ್ಲಿ ಅವರು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಿದ್ದಾರೆ ಮತ್ತು ಅವರಿಗೆ ಅದರ ಬೋಧವಿರುವುದಿಲ್ಲ.**”**
> (ಪವಿತ್ರ ಕುರ್‌ಆನ್ 2:8–9)

> **“**ಇವರು ಸತ್ಯ ವಿಶ್ವಾಸಿಗಳನ್ನು ಕಂಡಾಗ, **“**ನಾವು ವಿಶ್ವಾಸವಿಟ್ಟಿದ್ದೇವೆ**”** ಎನ್ನುತ್ತಾರೆ. ಅತ್ತ ತಮ್ಮ ಶೈತಾನರನ್ನು ಸಂಧಿಸಿದಾಗ ಅವರೊಡನೆ, ‘ನಿಜವಾಗಿ ನಾವು ನಿಮ್ಮ ಜೊತೆಯಲ್ಲೇ ಇದ್ದೇವೆ. ನಾವು ವಿಶ್ವಾಸವಿಡುವವರನ್ನು ಕೇವಲ ಅಪಹಾಸ್ಯ ಮಾಡುತ್ತಿದ್ದೇವೆ**”** ಎನ್ನುತ್ತಾರೆ.
> (ಪವಿತ್ರ ಕುರ್‌ಆನ್ 2:14)

ಕಪಟ ವಿಶ್ವಾಸಿಗಳು ಔಸ್ ಮತ್ತು ಖಝ್ರುಜ್ ಗೋತ್ರಗಳ ನಡುವೆ ಪುನಃ ದ್ವೇಷವನ್ನು ಸೃಷ್ಟಿಸಲು ಯತ್ನಿಸಿದರು. ಆದರೆ ಅವರ ಪ್ರಯತ್ನಗಳು ಸಫಲವಾಗಲಿಲ್ಲ. ಖಝ್ರುಜ್ ಗೋತ್ರದ ಅಬ್ದುಲ್ಲಾ ಬಿನ್ ಉಬೈ ಮುಹಮ್ಮದ್‌ರ ಮದೀನಾಕ್ಕೆ ಆಗಮನದ ಮೊದಲು ಮದೀನಾದ ದೊರೆಯೆಂದು ಘೋಷಿಸಲ್ಪಟ್ಟಿದ್ದ. ಮುಹಮ್ಮದ್‌ರ ಆಗಮನದಿಂದ ಅವನು ದೊರೆಯಾಗುವ ಕನಸು ನುಚ್ಚು ನೂರಾಗಿತ್ತು. ಇಸ್ಲಾಮ್

ಸ್ವೀಕರಿಸಿದ್ದರೂ ಅಬ್ದುಲ್ಲಾ ಬಿನ್ ಉಬೈ ಒಳಗಿಂದೊಳಗೇ ಇಸ್ಲಾಮಿನ ವಿರುದ್ಧ ಕತ್ತಿ ಮಸೆಯುತ್ತಿದ್ದ.

## ಸಹೋದರ ಸಂಬಂಧ

ಮಕ್ಕಾದಿಂದ ಮದೀನಾಕ್ಕೆ ವಲಸೆ ಬಂದಿದ್ದ ಮುಹಾಜಿರರ ಮತ್ತು ಮದೀನಾ ವಾಸಿಗಳ (ಅನ್ಸಾರ್)ರ ನಡುವಿನ ಸಂಬಂಧಗಳನ್ನು ಸುದೃಢಗೊಳಿಸಲು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನಿರ್ಧರಿಸಿದರು. ಮುಹಾಜಿರ್ ತಮ್ಮ ಸಕಲ ಸಂಪತ್ತು, ವಸ್ತುಗಳನ್ನು ಮಕ್ಕಾದಲ್ಲಿ ಬಿಟ್ಟು ಬರಿಗೈಯಲ್ಲಿ ಮದೀನಾ ಬಂದಿದ್ದರು. ಅವರ ಜೀವನೋಪಾಯಕ್ಕಾಗಿ ಏನಾದರೂ ಮಾರ್ಗವನ್ನು ರೂಪಿಸಬೇಕಾಗಿತ್ತು. ಪ್ರವಾದಿ ಪ್ರತಿಯೋರ್ವ ಮುಹಾಜಿರ್‌ಗೆ ಓರ್ವ ಅನ್ಸಾರ್‌ನನ್ನು ಸಹೋದರನೆಂದು ಘೋಷಿಸಿದರು. ಈ ರೀತಿ ಮುಹಾಜಿರ್ ಮತ್ತು ಅನ್ಸಾರ್ ನಡುವೆ ಸಹೋದರ ಸಂಬಂಧಗಳು ಸ್ಥಾಪಿಸಲ್ಪಟ್ಟವು. ಅನ್ಸಾರ್ ಈ ಹೊಸ ಸಹೋದರ ಸಂಬಂಧವನ್ನು ಎಷ್ಟು ಉತ್ತಮ ರೀತಿಯಲ್ಲಿ ನಿಭಾಯಿಸಿದರೆಂದರೆ, ತಮ್ಮ ಸ್ವತ್ತು ವಿತ್ತಗಳನ್ನು ಸಮಭಾಗ ಮಾಡಿ, ಒಂದು ಭಾಗವನ್ನು ಮುಹಾಜಿರ್‌ಗೆ ನೀಡಿದರು. ಅನ್ಸಾರ್‌ರ ಇಂತಹ ಉತ್ಕೃಷ್ಟ ನಡವಳಿಕೆಯ ಉದಾಹರಣೆ ಜಗತ್ತಿನಲ್ಲಿ ಮತ್ತೊಂದಿಲ್ಲ.

ನಿರ್ಣಾಯಕ ದಿನದಂದು ಅಲ್ಲಾಹ್ ನುಡಿಯುವನು: "ನನ್ನ ಸಂಪ್ರೀತಿಗಾಗಿ ಪರಸ್ಪರ ಪ್ರೀತಿಸುವವರು ಎಲ್ಲಿರುವರು? ನನ್ನ ನೆರಳಲ್ಲದೇ ಯಾವುದೇ ನೆರಳು ದೊರಕದ ಈ ದಿನ, ನಾನು ಅವರಿಗೆ ನನ್ನ ನೆರಳನ್ನು ನೀಡುವೆನು".

ಅನ್ಸಾರ್ ಮತ್ತು ಮುಹಾಜಿರರ ಗಾಢ ಸಂಬಂಧಗಳು ಮುಂದೆ ಮುಸ್ಲಿಮ್ ಸಮುದಾಯದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಶಕ್ತಿಗೆ, ಮುನ್ನಡೆಗೆ ನಾಂದಿಯಾದವು.

☆

## ಅದಾನ್

# ನಮಾಝಿನ ಕರೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಮದೀನಾ ಹಿಜ್ರತ್‌ನ ಕೆಲ ಕಾಲದ ಬಳಿಕ ಇಸ್ಲಾಮಿನ ಆರಾಧನಾ ಕ್ರಮಗಳು ಒಂದೊಂದಾಗಿ ಅನುಷ್ಠಾನಗೊಳಿಸಲ್ಪಟ್ಟವು. ರಮಝಾನ್ ತಿಂಗಳಿನಲ್ಲಿ ಉಪವಾಸ ವ್ರತದ ಆಚರಣೆ, ಝಕಾತ್ ಕಡ್ಡಾಯಗೊಳಿಸಲ್ಪಟ್ಟವು. ನಮಾಝ್ ಮಸೀದಿಯಲ್ಲಿ ನಿರ್ವಹಿಸಲ್ಪಡುತ್ತಿತ್ತು.

ನಮಾಝಿನ ಸಮಯವಾದಾಗ, ಮುಸ್ಲಿಮರನ್ನು ನಮಾಝ್ ನಿರ್ವಹಿಸಲು ಕರೆಯಲು ಒಂದು ಕ್ರಮದ ಬಗ್ಗೆ ಪ್ರವಾದಿ(ಅವರ ಮೇಲೆ ಶಾಂತಿ ಇರಲಿ) ಆಲೋಚಿಸುತ್ತಿದ್ದರು. ಒಂದು ದಿನ ಅಬ್ದುಲ್ಲಾ ಬಿನ್ ಝೈದ್ ಪ್ರವಾದಿಯವರ ಬಳಿಗೆ ಬಂದು ತಮಗೆ ಕನಸಿನಲ್ಲಿ ಓರ್ವ ವ್ಯಕ್ತಿ ನಮಾಝ್‌ಗೆ ಜನರನ್ನು ಕರೆಯುವ ವಿಧಾನವನ್ನು ತಮಗೆ ಕಲಿಸಿಕೊಟ್ಟನೆಂದು ಹೇಳಿ, ಅದನ್ನು ಪ್ರವಾದಿರ ಮುಂದೆ ಪುನರಾವರ್ತಿಸಿದರು. ಪ್ರವಾದಿರಿಗೆ ಅಬ್ದುಲ್ಲಾ ಬಿನ್ ಝೈದ್‌ರ ಕನಸು ನಿಜವಾಗಿರುವುದಾಗಿ ತಿಳಿಯಿತು. ಅವರು ಬಿಲಾಲ್‌ರನ್ನು ಹೇಳಿಕಳುಹಿಸಿದರು. ಬಿಲಾಲ್ ತಮ್ಮ ಕಂಠಮಾಧುರ್ಯಕ್ಕೆ ಪ್ರಖ್ಯಾತರಾಗಿದ್ದರು. ಇನ್ನು ಮುಂದೆ ಅಬ್ದುಲ್ಲಾ ಬಿನ್ ಝೈದ್‌ರವರು ತಿಳಿಸಿದ ರೀತಿಯಲ್ಲಿ 'ಅದಾನ್' ನೀಡುವಂತೆ ಪ್ರವಾದಿಅವರಿಗೆ ಆದೇಶಿಸಿದರು.

ನಮಾಝಿನ ಕರೆಯು ಈ ರೀತಿ ಇದೆ:

| | | |
|---|---|---|
| 1. | ಅಲ್ಲಾಹು ಅಕ್ಬರ್: | ಅಲ್ಲಾಹನು ಶ್ರೇಷ್ಠನು (ನಾಲ್ಕು ಸಲ ಪುನರಾವರ್ತಿಸಬೇಕು) |
| 2. | ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್: | ಅಲ್ಲಾಹನಲ್ಲದೇ ಇನ್ನಾರೂ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ. (ಎರಡು ಸಲ ಪುನರಾವರ್ತಿಸಬೇಕು) |
| 3. | ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್: | ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿರುವರೆಂದು ನಾನು ಸಾಕ್ಷ್ಯ ವಹಿಸುತ್ತೇನೆ. (ಎರಡು ಸಲ ಪುನರಾವರ್ತಿಸಬೇಕು) |
| 4. | ಹಯ್ಯಾ ಅಲಸ್ಸಲಾಹ್: | ನಮಾಝಿನ ಕಡೆಗೆ ಬನ್ನಿರಿ (ಎರಡು ಸಲ ಪುನರಾವರ್ತಿಸಬೇಕು) |
| 5. | ಹಯ್ಯಾ ಅಲಲ್‌ಫಲಾಹ್: | ಯಶಸ್ಸಿನ ಕಡೆಗೆ ಬನ್ನಿರಿ (ಎರಡು ಸಲ ಪುನರಾವರ್ತಿಸಬೇಕು) |
| 6. | ಅಲ್ಲಾಹು ಅಕ್ಬರ್: | ಅಲ್ಲಾಹ್ ಶ್ರೇಷ್ಠನು (ಎರಡು ಸಲ ಪುನರಾವರ್ತಿಸಬೇಕು) |
| 7. | ಲಾ ಇಲಾಹ ಇಲ್ಲಲ್ಲಾಹ್: | ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ. |

ಅಲ್ಲಾಹ್ ಶ್ರೇಷ್ಠನೆಂದು ದೃಢಪಡಿಸುವಿಕೆ, ಅಲ್ಲಾಹ್‌ನಲ್ಲದೇ ಅನ್ಯ ಆರಾಧ್ಯರಿಲ್ಲವೆಂದೂ, ಮುಹಮ್ಮದ್ ಅಲ್ಲಾಹನ ಸಂದೇಶವಾಹಕ ರಾಗಿರುವರೆಂಬ ಸಾಕ್ಷ್ಯ ನಮಾಝಿನ ಕಡೆಗೆ ಮತ್ತು ಯಶಸ್ಸಿನ ಕಡೆಗೆ ಈ ಇಸ್ಲಾಮಿ ಕರೆಯು 15 ಶತಮಾನಗಳಿಂದಲೂ ಜಗತ್ತಿನಾದ್ಯಂತ ಮಾರ್ದನಿಸುತ್ತಿದೆ.

ದಿನಂಪ್ರತಿ ಐದು ಸಲ ನಮಾಝಿನ ಕಡೆಗೆ ಈ ಸುಂದರ ಕರೆಯು ಈ ವಿಶ್ವದ ಅತ್ಯಂತ ಸುಂದರ 'ಅಲ್‌ಜಮೀಲ್' ಆಗಿರುವ ಅಲ್ಲಾಹನನ್ನು ಭೇಟಿ ಮಾಡುವ ಕರೆಯಾಗಿದೆ.

☆

## ಮದೀನಾ – ಸುಕ್ಷೇಮ ರಾಷ್ಟ್ರ

ಮದೀನಾದಲ್ಲಿ ಇಸ್ಲಾಮೀ ರಾಷ್ಟ್ರವು ಮೆಲ್ಲನೆ ರೂಪುಗೊಳ್ಳುತ್ತಿತ್ತು. ಒಡಂಬಡಿಕೆಗಳ ಹೊರತಾಗಿಯೂ ಮುಸ್ಲಿಮರು ಮತ್ತು ವಿವಿಧ ಗೋತ್ರಗಳ ನಡುವಿನ ಸಂಬಂಧಗಳು ಆತಂಕಕ್ಕೆ ಎಡೆ ಮಾಡುತ್ತಿದ್ದವು. ಏತನ್ಮಧ್ಯೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಅನುಯಾಯಿಗಳ ಅಧ್ಯಾತ್ಮಿಕ ತರಬೇತಿಯು ಮುಂದುವರೆದಿತ್ತು.

ಮಕ್ಕಾದಲ್ಲಿ ಕುರೈಶ್ ಮುಖಂಡರ ಮುಸ್ಲಿಮರ ವಿರುದ್ಧ ದ್ವೇಷ ಹೆಚ್ಚಾಗತೊಡಗಿತು. ಮದೀನಾಕ್ಕೆ ಮುಸ್ಲಿಮರ ಸಫಲ ವಲಸೆ, ಅಲ್ಲಿ ಇಸ್ಲಾಮಿ ರಾಷ್ಟ್ರದ ಸ್ಥಾಪನೆಯು ಕುರೈಶರಿಗೆ ದೊಡ್ಡ ಅಪಮಾನದ ವಿಷಯವಾಗಿದ್ದಿತು. ಕುರೈಶರು ಪವಿತ್ರ ಕಅಬಾದ ಮೇಲ್ವಿಚಾರಕರಾಗಿದ್ದರಿಂದ ಅನೇಕ ದಶಕಗಳಿಂದ ಅರೇಬಿಯಾ ಪ್ರದೇಶದಲ್ಲಿ ಕುರೈಶರ ಪ್ರಾಬಲ್ಯವಿತ್ತು.

ಮುಹಮ್ಮದ್‌ರ ಮದೀನಾಕ್ಕೆ ಹಿಜ್ರತ್ ಮತ್ತು ಅಲ್ಲಿ ಅವರ ಯಶಸ್ವೀ ಅಧಿಕಾರರೂಢನದಿಂದಾಗಿ ಕುರೈಶರ ಪ್ರತಿಷ್ಠೆಗೆ ಧಕ್ಕೆ ಒದಗಿತ್ತು. ಈ ಕಾರಣದಿಂದ ಕುರೈಶರಿಂದ ಏನಾದರೂ ಪ್ರತೀಕಾರದ ಕ್ರಮ ಜರುಗಬಹುದೆಂದು ಪ್ರವಾದಿ ನಿರೀಕ್ಷಿಸಿದ್ದರು.

## ಕುರೈಶ್‌ರೊಂದಿಗೆ ಜಗಳ

ಎಲ್ಲಾ ಮುಸ್ಲಿಮರು ಮದೀನಾಕ್ಕೆ ಹಿಜ್ರತ್ ಮಾಡಿರಲಿಲ್ಲ. ಕೆಲ ಮುಸ್ಲಿಮರು ವಿವಿಧ ಕಾರಣಗಳಿಂದಾಗಿ ಮಕ್ಕಾ ಪಟ್ಟಣದಲ್ಲಿಯೇ ಉಳಿದುಕೊಂಡಿದ್ದರು. ಇನ್ನು ಕೆಲ ಮುಸ್ಲಿಮರು ತಮ್ಮ ಇಸ್ಲಾಮ್ ಸ್ವೀಕಾರವನ್ನು ಗೌಪ್ಯವಾಗಿಸಿದ್ದರು. ತಾವು ಇಸ್ಲಾಮ್

ಸ್ವೀಕರಿಸಿರುವುದನ್ನು ತಿಳಿದು ಎಲ್ಲಿ ಕುರೈಶರು ತಮ್ಮ ಮೇಲೆ ಹಲ್ಲೆ ಮಾಡುವರೋ ಎಂದು ಅವರು ಆತಂಕಗೊಂಡಿದ್ದರು.

ಮದೀನಾಕ್ಕೆ ಹಿಜ್ರತ್ ಮಾಡಿದವರ ಸೊತ್ತು ವಿತ್ತಗಳನ್ನು ಕುರೈಶ್ ಮುಖಂಡರು ಸಂಪ್ರದಾಯಗಳಿಗೆ ವಿರುದ್ಧವಾಗಿ ವಶಪಡಿಸಿಕೊಂಡರು. ಕುರೈಶರ ಈ ಕ್ರಮವು ಹೀನ ಮತ್ತು ಲಜ್ಜಾಸ್ಪದವಾಗಿತ್ತು. ಸ್ವಾಭಾವಿಕವಾಗಿ ಮುಸ್ಲಿಮರು ಇದರಿಂದಾಗಿ ಕ್ರುದ್ಧಗೊಂಡರು.

ಮಕ್ಕಾದ ಕಾರವಾನಗಳು ಇರಾಕ್ ಮತ್ತು ಸಿರಿಯಾ ದೇಶಗಳಿಗೆ ಪ್ರಯಾಣ ಬೆಳೆಸ ಬೇಕಿದ್ದರೆ ಕೆಂಪು ಸಮುದ್ರದ ಬಳಿಯ ಮಾರ್ಗವನ್ನು ಬಳಸಬೇಕಿತ್ತು. ಮುಹಮ್ಮದ್, ಈ ಮಾರ್ಗದಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಜನರೊಂದಿಗೆ ಅನೇಕ ಒಪ್ಪಂದಗಳನ್ನು ಮಾಡಿಕೊಂಡರು. ಈಗ ಕುರೈಶರಿಗೆ ಪೌರ್ವಾತ್ಯ ದೇಶಗಳಿಗೆ ವ್ಯಾಪಾರಕ್ಕಾಗಿ ತೆರಳಲು ಬೇರೆ ಮಾರ್ಗಗಳನ್ನು ಹುಡುಕಿಕೊಳ್ಳದೇ ಗತ್ಯಂತರವಿರಲಿಲ್ಲ. ಈ ಕಾರಣದಿಂದ ಕುರೈಶ್ ಮತ್ತು ಮದೀನಾದ ಮುಸ್ಲಿಮರ ನಡುವೆ ಪ್ರಕ್ಷುಬ್ಧತೆ ದಿನದಿಂದ ದಿನಕ್ಕೆ ಬೆಳೆಯತೊಡಗಿತು. ಕುರೈಶರು ಮುಸ್ಲಿಮರಿಗೆ ಅಪಖ್ಯಾತಿ ತರುವ ಸಲುವಾಗಿ ಇರಾಕ್ ಮತ್ತು ಸಿರಿಯಾ ದೇಶಗಳ ಮಾರ್ಗದಲ್ಲಿದ್ದ ಬುಡಕಟ್ಟು ಜನರನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲಾರಂಭಿಸಿದರು.

ಇದೇ ಸಮಯದಲ್ಲಿ ಪ್ರವಾದಿ ತಂಡಗಳನ್ನು ರವಾನಿಸಿ ಕುರೈಶರ ಚಲನವಲನಗಳ ಬಗ್ಗೆ, ಅವರ ಚಟುವಟಿಕೆಗಳ ಬಗ್ಗೆ ಅವರ ಯುದ್ಧದ ಸಿದ್ಧತೆಗಳ ಬಗ್ಗೆ, ಕುರೈಶರು ವಿವಿಧ ಬುಡಕಟ್ಟುಗಳೊಂದಿಗೆ ಮಾಡಿಕೊಳ್ಳುತ್ತಿದ್ದ ಒಪ್ಪಂದಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸತೊಡಗಿದರು. ಕುರೈಶರ ವೈರತ್ವ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರಿಂದ ಮತ್ತು ಕಾಣಬರುತ್ತಿದ್ದುದರಿಂದ ಕುರೈಶರ ಮೇಲೆ ನಿಗಾವಿಡುವುದು ಅವಶ್ಯಕವಾಗಿತ್ತು.

ಮುಹಮ್ಮದ್ ಸಂಗ್ರಹಿಸುತ್ತಿದ್ದ ರಹಸ್ಯ ಮಾಹಿತಿಯಿಂದ ಕುರೈಶರೊಂದಿಗೆ ಯುದ್ಧವು ಸನ್ನಿಹಿತವಾಗಿರುವುದು ಸ್ಪಷ್ಟವಾಗಿತ್ತು.

☆

# ಜಿಹಾದ್

## ಪ್ರತಿರೋಧ

ವಿರೋಧಿಗಳು ಆಕ್ರಮಣ ಮಾಡಿದಾಗಲೆಲ್ಲಾ, ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರನ್ನು ಉತ್ತರಿಸಲು, ತಮ್ಮ ರಕ್ಷಣೆಗಾಗಿ ಮತ್ತು ಪ್ರತಿರೋಧ ನೀಡಲಿಕ್ಕಾಗಿ ಕುರ್‌ಆನಿನ ಸಹಾಯವನ್ನು ಪಡೆಯುತ್ತಿದ್ದರು. ಮುಹಮ್ಮದ್‌ರಿಗೆ ಇದೇ ರೀತಿ ಪ್ರತಿಕ್ರಿಯಿಸಲು ಕುರ್‌ಆನ್ ಕಲಿಸಿತ್ತು. **'ಜಿಹಾದ್'** ಬಗ್ಗೆ ಪ್ರಪ್ರಥಮ ದಿವ್ಯವಾಣಿ ಈ ರೀತಿ ಅವತೀರ್ಣಗೊಂಡಿತ್ತು.

> **"**ಆದುದರಿಂದ ಪೈಗಂಬರರೇ, ಸತ್ಯ ನಿಷೇಧಿಗಳ ಮಾತನ್ನು ಅನುಸರಿಸಲೇ ಬೇಡಿರಿ ಮತ್ತು ಈ ಕುರ್‌ಆನನ್ನು ತೆಗೆದುಕೊಂಡು ಅವರ ವಿರುದ್ಧ ಉಗ್ರ ಹೋರಾಟ ನಡೆಸಿರಿ**"** (ಪವಿತ್ರ ಕುರ್‌ಆನ್ 25:52)

ಎಲ್ಲಾ ಕಡೆಗಳಿಂದ ವಿವಿಧ ರೀತಿಯ ಪ್ರತಿರೋಧ ಬರುತ್ತಿದ್ದು, ಮುಹಮ್ಮದ್‌ರಿಗೆ, ಅವರು ಕೈಗೊಳ್ಳಬೇಕಿದ್ದ ಪ್ರತಿರೋಧ–**'ಜಿಹಾದ್'** ಬಗ್ಗೆ ಕುರ್‌ಆನಿನ ಸೂಕ್ತ ಅವತೀರ್ಣಗೊಂಡಿತು.

**'ಜಿಹಾದ್'** ಪದದ ನೈಜ ಅರ್ಥವನ್ನು ನಾವು ತಿಳಿದುಕೊಳ್ಳಬೇಕಿದೆ. ಅರಬಿ ಪದ **'ಜ–ಹಾ–ದ'** ದ ಅರ್ಥ ಹೋರಾಟ ಮಾಡುವುದಾಗಿದೆ. ದೌರ್ಜನ್ಯ ಮತ್ತು ಮರ್ದನದ ವಿರುದ್ಧ ಪ್ರತಿರೋಧ ಒಡ್ಡುವುದೂ **'ಜಿಹಾದ್'**ನ ಮತ್ತೊಂದು ಅರ್ಥವಾಗಿದೆ.

ಅಲ್ಲಾಹನು ಕುರೈಶರ ದೌರ್ಜನ್ಯವನ್ನು ಕುರ್‌ಆನಿನ ಸಹಾಯದಿಂದ ಎದುರಿಸಲು ಆಜ್ಞಾಪಿಸಿದನು. ಇಸ್ಲಾಮಿನ ವಿರುದ್ಧ ಆಕ್ರಮಣವನ್ನು ಎದುರಿಸಲು ಕುರ್‌ಆನ್ ಪ್ರವಾದಿರ ಅಧ್ಯಾತ್ಮಿಕ ಮತ್ತು ಬೌದ್ಧಿಕ ಆಯುಧವಾಗಿತ್ತು. ಅಪಹಾಸ್ಯ ಮಾಡುವವರಿಗೆ, ಅಪಮಾನ ಮಾಡುವವರಿಗೆ, ಆಕ್ರಮಣ ಮಾಡುವವರಿಗೆ, ಚಿತ್ರಹಿಂಸೆ ನೀಡುವವರಿಗೆ, ಹತ್ಯೆ ಗೈಯುವವರಿಗೆ, ಪ್ರವಾದಿತ್ವದ ಪುರಾವೆ ಕೇಳುವವರಿಗೆ, ಪವಾಡ ತೋರಿಸುವಂತೆ ಹೇಳುತ್ತಿದ್ದವರಿಗೆ ಮುಹಮ್ಮದ್ ಕುರ್‌ಆನಿನ ಸಹಾಯದಿಂದ ಉತ್ತರಿಸಿದರು.

ಆರಂಭ ಕಾಲದಲ್ಲಿ ಮುಹಮ್ಮದ್ ಕುರೈಶರ ವಿರೋಧವನ್ನು ಕಡೆಗಣಿಸಿ ಇಸ್ಲಾಮಿನ ಸಂದೇಶ ಪ್ರಚಾರವನ್ನು ಕೈಗೊಂಡರು. ಮುಹಮ್ಮದ್‌ರ ಈ ನಿಲುವು ಕುರೈಶರೊಂದಿಗೆ

ಸಂಘರ್ಷಣೆ ತಪ್ಪಿಸಲಿಕ್ಕಾಗಿತ್ತು.

ಇಸ್ಲಾಮ್ ಹರಡುತ್ತಿರುವಂತೆ, ಕುರೈಶರ ವಿರೋಧದಲ್ಲಿ ತೀವ್ರತೆ ಉಂಟಾಯಿತು. ಆರಂಭ ಕಾಲದ ಮುಸ್ಲಿಮರು ಏಕೈಕನಾದ ಅಲ್ಲಾಹನಲ್ಲಿ, ಮರಣೋತ್ತರ ಜೀವನದಲ್ಲಿ, ನಿರ್ಣಾಯಕ ದಿನದ ಬಗ್ಗೆ ಒಳಿತಿನ ಕಡೆಗೆ ಜನರಿಗೆ ಕರೆ ನೀಡುತ್ತಾ ಕುರೈಶರ ವಿರೋಧಕ್ಕೆ ಉತ್ತರ ನೀಡುತ್ತಿದ್ದರು. ತೀವ್ರ ಸ್ವರೂಪದ ಮರ್ದನವನ್ನು ಎದುರಿಸಲೂ ಆರಂಭ ಕಾಲದ ಮುಸ್ಲಿಮರು ಕುರ್‌ಆನ್‌ನನ್ನೇ ಆಶ್ರಯಿಸಿದ್ದರು.

ಆದರೆ ಕುರೈಶರ ವಿರೋಧವು ತೀವ್ರವಾದಾಗ, ಮುಸ್ಲಿಮರಿಗೆ ಅದನ್ನು ಎದುರಿಸುವುದು ಕಷ್ಟಕರವಾಯಿತು.

ಒಂದು ದಿನ ಸಹಾಬಿಗಳು ಪ್ರವಾದಿರನ್ನು ಭೇಟಿ ಮಾಡಿ "ಪ್ರವಾದಿಗಳೇ, ನಮ್ಮ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿದ್ದು, ನಮಗೆ ಸಹಾಯ ಮಾಡುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿರಿ" ಎಂದು ನುಡಿದರು. ಇದನ್ನು ಕೇಳಿ ಪ್ರವಾದಿರ ಮುಖಾರವಿಂದ ಕೋಪದಿಂದ ಕೆಂಪಾಯಿತು. ಪ್ರವಾದಿ ಉತ್ತರಿಸಿದರು:

"ನಿಮಗಿಂತ ಮೊದಲು ಗತಿಸಿದ ಸತ್ಯ ವಿಶ್ವಾಸಿಗಳು ಇನ್ನೂ ಕಠಿಣ ಪರೀಕ್ಷೆಗೆ ಗುರಿಯಾಗಿದ್ದರು. ಅವರನ್ನು ಕುಣಿಯಲ್ಲಿ ಹಾಕಿ ಗರಗಸೆಯಿಂದ ಅವರ ದೇಹವನ್ನು ಇಬ್ಬಾಗ ಮಾಡಲಾಗುತ್ತಿತ್ತು. ಕೈ, ಕಾಲುಗಳನ್ನು ವಿರುದ್ಧ ದಿಕ್ಕುಗಳಲ್ಲಿ ಎಳೆದು ದೇಹವನ್ನು ಸೀಳಲಾಗುತ್ತಿತ್ತು. ಆದರೆ ಇದಾವುದೂ ಅವರನ್ನು ಸತ್ಯ ವಿಶ್ವಾಸದಿಂದ ಹಿಮ್ಮೆಟ್ಟಿಸಲಿಲ್ಲ. ಅಲ್ಲಾಹನಾಣೆ! ಖಂಡಿತ ವಾಗಿಯೂ ಇಸ್ಲಾಮ್ ಧರ್ಮವು ಜಗತ್ತಿನಲ್ಲಿ ಸಂಸ್ಥಾಪಿಸಲ್ಪಡುವುದು, ಎಲ್ಲಿಯವರಿಗೆಂದರೆ ಓರ್ವ ಮಹಿಳೆ ಏಕಾಂಗಿಯಾಗಿ ಸನಾಅದಿಂದ ಹಝುರಲ್‌ಮೌತ್‌ಗೆ ಪ್ರಯಾಣಿಸುವಳು. ಅವಳಿಗೆ ಅಲ್ಲಾಹನ ಭಯದ ಹೊರತಾಗಿ ಮತ್ತಾವ ಭಯವೂ ಇರದು. ನೀವು ಬಹಳ ತಾಳ್ಮೆ ಇಲ್ಲದವರಾಗಿರುವಿರಿ!"

ಈ ರೀತಿ ಮುಹಮ್ಮದ್ ಸಹಾಬಿಗಳಿಗೆ ತಾಳ್ಮೆ ವಹಿಸುವ, ಕಷ್ಟಗಳನ್ನು ಸಹಿಸುವ, ಸತ್ಯ ವಿಶ್ವಾಸದಲ್ಲಿ ಅಚಲರಾಗಿ ನಿಲ್ಲುವ ತರಬೇತಿಯನ್ನು ನೀಡಿದರು. "ಎಂದೂ, ಅಲ್ಲಾಹನ ನಿರ್ಣಯದ ಬಗ್ಗೆ ವಿಶ್ವಾಸವನ್ನು ಕಳೆದುಕೊಳ್ಳಬಾರದು" ಎಂದು ಬೋಧನೆ ನೀಡಿದರು. ಸಂಕಷ್ಟಗಳನ್ನು ಸಹಿಸುತ್ತಾ ಅಲ್ಲಾಹನಲ್ಲಿ ನಂಬಿಕೆಯನ್ನು ಇಡುವ ಪಾಠವನ್ನು ಮುಹಮ್ಮದ್ ಜನರಿಗೆ ನೀಡಿದರು. ದೈಹಿಕ ಹಿಂಸೆಯನ್ನು ಸಹಿಸುವ ತರಬೇತಿಯಿಂದಾಗಿ ಮುಸ್ಲಿಮರು ಎಷ್ಟೇ ಪ್ರತಿರೋಧದ ನಡುವೆಯೂ ಇಸ್ಲಾಮಿನಲ್ಲಿ ಅಚಲರಾಗಿ ನಿಲ್ಲುವ ಹಂತವನ್ನು ತಲುಪಿದರು.

## *ಕಿತಾಲ್*

## ಆಯುಧಗಳೊಂದಿಗೆ ಹೋರಾಟ

ಮದೀನಾದಲ್ಲಿ ಮುಹಮ್ಮದ್‌ರ ಮೇಲೆ ಭಿನ್ನ ಸ್ವರೂಪದ ಆದರೆ ಪರಿಣಾಮದ ದೃಷ್ಟಿಯಿಂದ ಈ ಮೊದಲಿನ ಕ್ರಮಕ್ಕೆ ವ್ಯತಿರಿಕ್ತವಾಗಿದ್ದಂತಹ ಕುರ್‌ಆನಿನ ಸೂಕ್ತಗಳು ಒಂದರ ಹಿಂದೆ ಒಂದರಂತೆ ಅವತೀರ್ಣಗೊಂಡವು. ಹದಿಮೂರು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಗೆ ಮುಸ್ಲಿಮರಿಗೆ ನಿರಂತರ ಹಿಂಸೆ, ಮರ್ದನಕ್ಕೆ ಎದುರಾಗಿ ತಾಳ್ಮೆ ವಹಿಸುವಂತೆ ಸೂಚಿಸಲಾಗಿತ್ತು. ಮುಸ್ಲಿಮರು ಕುರೈಶರೊಂದಿಗೆ ಸಂಘರ್ಷಕ್ಕೆ ಇಳಿಯದೇ, ಅತ್ಯಂತ ತಾಳ್ಮೆಯಿಂದ ಮಕ್ಕಾದಲ್ಲಿ ಕುರೈಶರ ವಿರೋಧವನ್ನು ಎದುರಿಸಿದ್ದರು. ನಂತರ ಮದೀನಾಕ್ಕೆ ಹಿಜ್ರತ್ ಮಾಡಿದ್ದರು.

ಆದರೆ ಮುಸ್ಲಿಮರು ಮದೀನಾ ಹಿಜ್ರತ್ ಮಾಡಿ, ಅಲ್ಲಿ ನೆಲೆಸಿದ ನಂತರ ಕುರೈಶರು ಮುಸ್ಲಿಮರ ಮೇಲೆ ನೇರ ಆಕ್ರಮಣ ಮಾಡಲಿರುವರು ಎಂಬುದು ನಿಚ್ಚಳವಾಗಿತ್ತು. ಏಕೆಂದರೆ ಇಲ್ಲಿಯವರೆಗೆ ಮುಸ್ಲಿಮರ ಚಟುವಟಿಕೆಗಳಿಂದ ತಮ್ಮ ನಂಬಿಕೆಗಳು, ಸಂಪ್ರದಾಯಗಳಿಗೆ ಧಕ್ಕೆ ಒದಗಿದೆಯೆಂದು ಕುರೈಶರು ನಂಬಿದ್ದರು. ಆದರೆ ಮದೀನಾದಲ್ಲಿ ಇಸ್ಲಾಮೀ ರಾಷ್ಟ್ರದ ಸ್ಥಾಪನೆಯ ನಂತರ ಇಡಿಯ ಅರೇಬಿಯಾ ಪ್ರದೇಶದಲ್ಲಿ ಅಧಿಕಾರದ ಚುಕ್ಕಾಣಿಯಲ್ಲಿ ಏರುಪೇರು ಉಂಟಾಗುತ್ತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಸುತ್ತಮುತ್ತಲಿನ ಬುಡಕಟ್ಟುಗಳಲ್ಲಿ ಕುರೈಶರ ಸ್ಥಾನಮಾನ, ಅಧಿಕಾರ, ಪ್ರತಿಷ್ಠೆಗೆ ಈಗ ಸಂಚಕಾರ ಬಂದಿತ್ತು!

ಈ ಸಂದರ್ಭದಲ್ಲಿ ಅಲ್ಲಾಹ್ ಈ ಸೂಕ್ತವನ್ನು ಅವತೀರ್ಣಗೊಳಿಸಿದನು.

> "ಯಾರ ವಿರುದ್ಧ ಯುದ್ಧ ನಡೆಸಲಾಗುತ್ತಿದೆಯೋ, ಅವರಿಗೆ (ಯುದ್ಧ ಮಾಡಲು) ಅನುಮತಿ ನೀಡಲಾಗಿದೆ. ಏಕೆಂದರೆ ಅವರು ಮರ್ದಿತರು ಮತ್ತು ನಿಶ್ಚಯವಾಗಿಯೂ ಅಲ್ಲಾಹನು ಅವರಿಗೆ ಸಹಾಯ ಮಾಡಲು ಸಮರ್ಥನು. ಇವರು "ನಮ್ಮ ಪ್ರಭು ಅಲ್ಲಾಹ್ ಎಂದಿಷ್ಟೇ ಹೇಳಿದ ತಪ್ಪಿಗಾಗಿ ತಮ್ಮ ಮನೆಗಳಿಂದ ಅನ್ಯಾಯವಾಗಿ ಹೊರಹಾಕಲ್ಪಟ್ಟವರು". (ಪವಿತ್ರ ಕುರ್‌ಆನ್ 22:39–40)

ಸ್ವಲ್ಪ ಕಾಲದ ನಂತರ ಅಬೂಬಕರ್ ಸಿದ್ದೀಕ್ "ಈ ಸೂಕ್ತವು ಅವತೀರ್ಣಗೊಂಡಾಗ, ಇನ್ನು ಕುರೈಶರೊಂದಿಗೆ ಯುದ್ಧವು ಸನ್ನಿಹಿತವಾಗಿರುವುದು ನಮಗೆ ಸ್ಪಷ್ಟವಾಗಿತ್ತು" ಎಂದರು. ಪ್ರವಾದಿ ಮತ್ತು ಇತರ ಸಹಾಬಿಗಳೂ ಈ ಸೂಕ್ತದ ಅರ್ಥವನ್ನು ಕೂಡಲೇ ಗ್ರಹಿಸಿದರು. ಇನ್ನು ಮುಂದೆ ಮುಸ್ಲಿಮರು ಕುರೈಶರ

ವಿರೋಧವನ್ನು ಸಾತ್ವಿಕವಾಗಿ ಎದುರಿಸಬೇಕಾಗಿರಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಶತ್ರುಗಳ ಆಕ್ರಮಣದ ವಿರುದ್ಧ ರಕ್ಷಣಾತ್ಮಕ ಕ್ರಮವನ್ನು ಅನುಸರಿಸಲು ಸೂಚಿಸಲಾಯಿತು. ಶತ್ರುಗಳ ಆಕ್ರಮಣಕ್ಕೆ ಶಸ್ತ್ರಾರ್ಜಿತವಾಗಿ ಎದುರಿಸಿ ಆತ್ಮರಕ್ಷಣೆ ಮಾಡಿಕೊಳ್ಳುವಂತೆ ತಿಳಿಸಲಾಯಿತು. ಇದಕ್ಕೆ ಕಿತಾಲ್ ಎನ್ನುತ್ತಾರೆ.

ಜಿಹಾದ್‌ನ ಎಲ್ಲಾ ಬಗೆಗಳೂ ಪ್ರತಿರೋಧಕ್ಕೆ ಸಂಬಂಧವನ್ನು ಹೊಂದಿವೆ. ಇದರಂತೆ **'ಕಿತಾಲ್'** ಸಹ ಪ್ರತಿರೋಧಕ್ಕೆ ಸಂಬಂಧವನ್ನು ಹೊಂದಿದೆ. ಜನರು ಪ್ರಾಕೃತಿಕವಾಗಿ ಅತಿರೇಕಗಳನ್ನು ಎಸಗುವ ಸ್ವಭಾವವನ್ನು ಹೊಂದಿದ್ದು ಈ ಕಾರಣದಿಂದಾಗಿ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ಕಿತಾಲ್ ಅತ್ಯಾವಶ್ಯಕವೆಂದು ಸೂಕ್ತದ ಕೊನೆಯಲ್ಲಿ ತಿಳಿಸಲಾಗಿದೆ.

> **"**ಅಲ್ಲಾಹ್ ಜನರಲ್ಲಿ ಕೆಲವರನ್ನು ಬೇರೆ ಕೆಲವರ ಮೂಲಕ ನೀಗಿಸದಿರುತ್ತಿದ್ದರೆ ಅಲ್ಲಾಹನ ನಾಮವನ್ನು ಅತಿ ಹೆಚ್ಚಾಗಿ ಸ್ಮರಿಸಲಾಗುತ್ತಿರುವ ಆಶ್ರಮಗಳೂ, ಇಗರ್ಜಿಗಳೂ, ಯಹೂದಿಯರ ಆರಾಧನಾಲಯಗಳೂ, ಮಸೀದಿಗಳೂ ಧ್ವಂಸ ಗೊಳಿಸಲ್ಪಡುತ್ತಿದ್ದವು. ಯಾರು ಅಲ್ಲಾಹನಿಗೆ ಸಹಾಯ ಮಾಡುವರೋ, ಅವರಿಗೆ ಅವನು ಖಂಡಿತ ಸಹಾಯ ಮಾಡುವನು. ಅಲ್ಲಾಹ್ ಮಹಾ ಶಕ್ತಿವಂತನೂ, ಪ್ರಬಲನೂ ಆಗಿರುತ್ತಾನೆ**"**. (ಪವಿತ್ರ ಕುರ್‌ಆನ್ 22:40)

ಮನುಷ್ಯನ ಸ್ವಭಾವವನ್ನು ಪರಿಗಣಿಸಿದರೆ, ಅದನ್ನು ನಿಯಂತ್ರಿಸಲು ಬಲಪ್ರಯೋಗ ಅತ್ಯಾವಶ್ಯಕವಾಗಿರುವುದು ಸ್ಪಷ್ಟವಾಗುತ್ತದೆ. ಒಬ್ಬ ವ್ಯಕ್ತಿಗೆ, ಒಂದು ರಾಷ್ಟ್ರಕ್ಕೆ ಅಥವಾ ಒಂದು ಸಾಮ್ರಾಜ್ಯಕ್ಕೆ ಸರ್ವಾಧಿಕಾರವನ್ನು ನೀಡಿದರೆ ಅದು ಸಮಾಜದ ವೈವಿಧ್ಯಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಆದುದರಿಂದಲೇ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ಬಲ ಪ್ರಯೋಗದ ಅವಶ್ಯಕತೆವಿದೆ ಎಂದು ಕುರ್‌ಆನಿನ ಮತ್ತೊಂದು ಸೂಕ್ತದಲ್ಲಿ ತಿಳಿಸಲಾಗಿದೆ.

> **"**ಹೀಗೆ ಅಲ್ಲಾಹ್ ಮಾನವರ ಒಂದು ಕೂಟವನ್ನು ಇನ್ನೊಂದು ಕೂಟದ ಮೂಲಕ ಸರಿಸಿಬಿಡದಿರುತ್ತಿದ್ದರೆ ಭೂಮಿಯ ವ್ಯವಸ್ಥೆಯು ಕೆಟ್ಟು ಹೋಗುತ್ತಿತ್ತು**"**. (ಪವಿತ್ರ ಕುರ್‌ಆನ್ 2:251)

ಹೀಗೆ ಜಿಹಾದ್‌ನ ಮೂಲ ಉದ್ದೇಶ ಶಾಂತಿಯ ಸ್ಥಾಪನೆಯಾಗಿದ್ದು ಕಿತಾಲ್ ಕೆಲ ಸಂದರ್ಭಗಳಲ್ಲಿ ಶಾಂತಿಯ ಸ್ಥಾಪನೆಗಾಗಿ ಕೈಗೊಳ್ಳುವ ಅಗತ್ಯ ಕ್ರಮವಾಗಿದೆ.

☆

# ಶ್ರೇಷ್ಠ ಜಿಹಾದ್

ಹುನೈನ್ ಯುದ್ಧದ ನಂತರ ಮರಳುವಾಗ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಂಗಾತಿಗಳನ್ನು ಉದ್ದೇಶಿಸಿ ನುಡಿದರು: "ನಾವು ಕೆಳಮಟ್ಟದ ಜಿಹಾದ್‌ನಿಂದ ಶ್ರೇಷ್ಠ ಮಟ್ಟದ ಜಿಹಾದ್ ಕಡೆಗೆ ಮರಳುತ್ತಿದ್ದೇವೆ".

ಸಹಾಬಿಗಳು ಪ್ರವಾದಿರನ್ನು ಪ್ರಶ್ನಿಸಿದರು. "ಪ್ರವಾದಿಗಳೇ, ಶ್ರೇಷ್ಠ ಮಟ್ಟದ ಜಿಹಾದ್ ಯಾವುದು?" ಪ್ರವಾದಿ ಉತ್ತರಿಸಿದರು. "ತನ್ನ ಚಿತ್ತಕಾಂಕ್ಷೆಗಳ ವಿರುದ್ಧ ಹೋರಾಡುವುದು ಶ್ರೇಷ್ಠ ಮಟ್ಟದ ಜಿಹಾದ್‌ವಾಗಿದೆ'.

ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸುವಾಗ ಆಗುವ ಎಡರು ತೊಡರುಗಳನ್ನು ತಾಳ್ಮೆಯಿಂದ ಎದುರಿಸುವುದು, ವಿರೋಧಿಗಳ ವಿರುದ್ಧ ಹೋರಾಡುವುದು, ಶಸ್ತ್ರ ಸಜ್ಜಿತ ಶತ್ರು ಸೈನ್ಯದ ವಿರುದ್ಧ ಹೋರಾಡುವುದು ಧೈರ್ಯ, ಸಾಹಸದ ಕಾರ್ಯವೇ ಸರಿ. ಆದರೆ ಪ್ರವಾದಿ ಈ ಹೋರಾಟವನ್ನು ಕೆಳಮಟ್ಟದ ಜಿಹಾದ್ ಎಂದಿರುವರು. ಓರ್ವ ಮನುಷ್ಯ ಶತ್ರುಗಳ ವಿರುದ್ಧ ಸೆಣಸಾಡಬಲ್ಲ. ತನ್ನ ಪ್ರಾಣವನ್ನೇ ಪಣಕ್ಕಿಡಬಲ್ಲ. ಆದರೆ ದಿನಂಪ್ರತಿ, ಪ್ರತಿಕ್ಷಣ ತನ್ನ ಚಿತ್ತಕಾಂಕ್ಷೆಗಳ ವಿರುದ್ಧ ಹೋರಾಡುವುದು ಬಹಳ ಕಷ್ಟಕರ. ಆದುದರಿಂದಲೇ ಪ್ರವಾದಿ ಇದನ್ನು ಶ್ರೇಷ್ಠ ಮಟ್ಟದ ಜಿಹಾದ್ ಎಂದು ಕರೆದಿರುವುದು.

## 10

# ಪ್ರಥಮ ಸಂಘರ್ಷಣೆ

# ಬದ್ರ್

ಕುರೈಶ್ ಸರದಾರ ಅಬೂ ಸುಫ್‌ಯಾನ್‌ರ ನೇತೃತ್ವದಲ್ಲಿ ಒಂದು ಕಾರವಾನ ಹೇರಳ ಸಾಮಾನು ಸರಂಜಾಮುಗಳೊಂದಿಗೆ ಸಿರಿಯಾದಿಂದ ಹಿಂತೆರಳುತ್ತಿತ್ತು. ಕುರೈಶರ ಅನೇಕ ಗೋತ್ರಗಳು ಈ ವ್ಯಾಪಾರೀ ತಂಡದಲ್ಲಿ ಬಂಡವಾಳ ಹೂಡಿದ್ದವು. ಈ ಕಾರವಾನಿನ ರಕ್ಷಣೆಗಾಗಿ ಮತ್ತು ಹೊರಹೊಮ್ಮುತ್ತಿರುವ ಮುಸ್ಲಿಮ್ ಶಕ್ತಿಯನ್ನು ಸದೆ ಬಡಿಯುವ ಉದ್ದೇಶದಿಂದ ಕುರೈಶರು ಸುಸಜ್ಜಿತ ಸೇನಾತುಕಡಿಯನ್ನು ರವಾನಿಸಿದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) 313 ಸಹಾಬಿಗಳೊಂದಿಗೆ ಕುರೈಶರ ಸೇನೆಯನ್ನು ಎದುರಿಸಲು ಹೊರಟರು. ಮುಸ್ಲಿಮರ ಸೇನೆಯಲ್ಲಿ ಶಸ್ತ್ರಾಸ್ತ್ರಗಳ ಮತ್ತು ಸವಾರಿಗಳ ತೀವ್ರ ಕೊರತೆಯಿತ್ತು. ಪ್ರವಾದಿರ ಮಗಳು ರುಕಯ್ಯಾ ರೋಗಗ್ರಸ್ಥರಾಗಿದ್ದರಿಂದ ಪ್ರವಾದಿ ಉಸ್ಮಾನ್‌ರಿಗೆ ತಮ್ಮ ಪತ್ನಿಯನ್ನು ನೋಡಿಕೊಳ್ಳಲು ಮದೀನಾದಲ್ಲಿಯೇ ಇರಲು ಸೂಚಿಸಿದ್ದರು.

ಅಬೂ ಸುಫ್‌ಯಾನ್‌ರ ಬೇಹುಗಾರರು ಮುಸ್ಲಿಮರಿಂದ ವ್ಯಾಪಾರೀ ತಂಡದ ಮೇಲೆ ಆಕ್ರಮಣವಾಗಲಿದೆ ಎಂಬ ಸುಳಿವನ್ನು ನೀಡಿದ್ದರು. ಅಬೂಸುಫ್‌ಯಾನ್ ವ್ಯಾಪಾರೀ ತಂಡಕ್ಕೆ ಸಹಾಯ ಒದಗಿಸುವಂತೆ ಕುರೈಶರಿಗೆ ತಿಳಿಸಲು ಓರ್ವ ದೂತನನ್ನು ಮಕ್ಕಾ ದೌಡಾಯಿಸಿದ್ದರು. ಅಷ್ಟರಲ್ಲಿ ಅಬೂ ಸುಫ್‌ಯಾನ್ ತಾವು ಬಳಸುತ್ತಿದ್ದ ಮಾರ್ಗವನ್ನು ಬದಲಿಸಿದರು. ಮುಸ್ಲಿಮರಿಂದ ಈಗ ಆಕ್ರಮಣದ ಭಯವಿಲ್ಲದಿದ್ದುದರಿಂದ, ಈಗಾವ ಭಯವಿಲ್ಲವೆಂದು, ವ್ಯಾಪಾರೀ ತಂಡದ ರಕ್ಷಣೆಗೆ ಸೇನೆಯನ್ನು ಕಳುಹಿಸುವ ಅಗತ್ಯವಿಲ್ಲವೆಂದು ಕುರೈಶರಿಗೆ ಸಂದೇಶವನ್ನು ರವಾನಿಸಿದರು.

ಆದರೆ ಈಗಾಗಲೇ ಕುರೈಶರ ಒಂದು ಸಾವಿರ ಯೋಧರು ಸಕಲ ಸಿದ್ಧತೆಗಳೊಂದಿಗೆ ಮದೀನಾಕ್ಕೆ ಹೊರಟಿದ್ದರು. ಅಬೂ ಜಹಲನು, ವ್ಯಾಪಾರೀ ತಂಡಕ್ಕೆ ಈಗ ಭಯವಿಲ್ಲದಿದ್ದರೂ, ಮುಸ್ಲಿಮರನ್ನು ಸದೆ ಬಡೆಯುವ ಉದ್ದೇಶದಿಂದ ಕುರೈಶ್ ಸೇನೆ ಮುಂದುವರೆಯಬೇಕೆಂದು ಒತ್ತಾಯಿಸಿದನು. ಮುಸ್ಲಿಮರ ಎದುರು ತಮ್ಮ ಬಲ ಪ್ರದರ್ಶನ ಮಾಡುವ ಉದ್ದೇಶವೂ ಅವನಿಗಿದ್ದಿತು.

ಪ್ರವಾದಿ ಮತ್ತು ಅವರ ಸಂಗಾತಿಗಳು ಮದೀನಾದಿಂದ ಸುಮಾರು 130 ಕಿ.ಮೀ. ದೂರ ಬದ್ರ್ ಎಂಬ ಸ್ಥಳದಲ್ಲಿ ಬಿಡಾರವನ್ನು ಹೂಡಿದ್ದರು. ಒಂದು ಸಾವಿರ ಕುರೈಶ್ ಸೇನೆ ಮುಸ್ಲಿಮರನ್ನು ಎದುರಿಸಲು ಬರುತ್ತಿರುವ ಸುದ್ದಿ ಅವರಿಗೆ ತಲುಪಿತು. ಕುರೈಶರ ಸೇನೆ ಮುಸ್ಲಿಮ್ ಸೇನೆಯ ಮೂರರಷ್ಟಿತ್ತು. ಮುಸ್ಲಿಮರು ಕುರೈಶ್ ಸೇನೆಯನ್ನು ಎದುರಿಸುವ ಪರಿಸ್ಥಿತಿಯಲ್ಲಿರಲಿಲ್ಲ.

## ಸಮಾಲೋಚನೆ

ಉದ್ಭವಿಸಿರುವ ಪರಿಸ್ಥಿತಿಯನ್ನು ಎದುರಿಸುವ ಸಂಬಂಧ ಪ್ರವಾದಿ ತಮ್ಮ ಅನುಯಾಯಿಗಳೊಂದಿಗೆ ಸಮಾಲೋಚನೆ ನಡೆಸಿದರು. ಮಿಕ್‌ದಾದ್ ಮುಹಮ್ಮದ್‌ರನ್ನು ಉದ್ದೇಶಿಸಿ ನುಡಿಯುತ್ತಾರೆ. "ಪ್ರವಾದಿವರ್ಯರೇ! ಅಲ್ಲಾಹನು ತಮಗೆ ಏನನ್ನು ಆದೇಶಿಸುತ್ತಾನೋ ಅದನ್ನೇ ಮಾಡಿರಿ. ನಾವು ತಮ್ಮ ಜತೆಗಿರುವೆವು."

ಮುಹಾಜಿರರ ಪರವಾಗಿ ಈ ಮಾತುಗಳನ್ನು ಕೇಳಿ ಪ್ರವಾದಿರ ಮುಖ ಸಂತೋಷದಿಂದ ಅರಳಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಿಗೆ ಅನ್ಸಾರರ ಅಭಿಪ್ರಾಯವನ್ನೂ ಪಡೆಯಬೇಕಿತ್ತು.

ಸಅದ್‌ಬಿನ್‌ಮುಆದ್ ಪ್ರವಾದಿವರ್ಯರನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ. "ಪ್ರವಾದಿವರ್ಯರೇ! ನಾವು ತಮ್ಮ ಜೊತೆಗಿದ್ದೇವೆ. ತಮ್ಮನ್ನು ಸತ್ಯದ ಸಹಿತ ನಿಯುಕ್ತಗೊಳಿಸಿದ ಅಲ್ಲಾಹನಾಣೆ! ತಾವು ಸಮುದ್ರವನ್ನು ನಮ್ಮ ಮುಂದೆ ತಂದು ಅದರಲ್ಲಿ ಪ್ರವೇಶಿಸಿದರೆ ನಾವು ತಮ್ಮ ಜೊತೆಗೆ ಅದರಲ್ಲಿ ಪ್ರವೇಶಿಸುವೆವು. ನಮ್ಮ ಪೈಕಿ ಒಬ್ಬನೂ ಅದರಿಂದ ಹಿಂಜರಿಯಲಾರನು."

ಮುಹಾಜಿರರು ಮತ್ತು ಅನ್ಸಾರ್‌ರಿಂದ ಸಹಮತಿಯನ್ನು ಪಡೆದ ಪ್ರವಾದಿ ಕುರೈಶ್ ಸೇನೆಯನ್ನು ಎದುರಿಸಲು ನಿಶ್ಚಯಿಸಿದರು.

# ವೈಚಾರಿಕ ಬೆಳವಣಿಗೆಯ ತರಬೇತಿ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಜೀವನದ ಒಂದು ವಿಶಿಷ್ಟ ಆಯಾಮದ ಪರಿಚಯವನ್ನು ನಾವು ಇಲ್ಲಿ ಮಾಡಿಸುತ್ತಿದ್ದೇವೆ. ಪ್ರವಾದಿ ತಮ್ಮ ಅನುಯಾಯಿಗಳಲ್ಲಿ ಸ್ವತಂತ್ರವಾಗಿ ಆಲೋಚಿಸುವುದನ್ನೂ, ನಿರ್ಭಿಡತೆಯಿಂದ ತಮ್ಮ ವಿಚಾರಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ಉತ್ತೇಜಿಸುತ್ತಿದ್ದರು. ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಪ್ರವಾದಿ ಸಂಗಾತಿಗಳ ಸಲಹೆಗಳನ್ನು ಪಡೆಯುತ್ತಿದ್ದರು.

ಪ್ರವಾದಿರ ಈ ಗುಣವನ್ನು ರಾಜಕೀಯ ಮುಖಂಡರ ಮತ್ತು ಧಾರ್ಮಿಕ ನೇತಾರರ ವರ್ತನೆಯೊಂದಿಗೆ ಹೋಲಿಸಿದರೆ ವ್ಯತ್ಯಾಸವು ಸ್ಪಷ್ಟವಾಗುತ್ತದೆ.

ಪ್ರವಾದಿ ವಿವಿಧ ವಿಷಯಗಳ ಬಗ್ಗೆ ಸಹಾಬಿಗಳಿಗೆ ಪ್ರಶ್ನೆ ಕೇಳಿ ಅವರನ್ನು ಆಲೋಚಿಸುವಂತೆ ಮಾಡುತ್ತಿದ್ದರು. ಹಲವೊಮ್ಮೆ ಪ್ರವಾದಿ ಸಹಾಬಿಗಳು ಕೇಳುವ ಪ್ರಶ್ನೆಗಳಿಗೆ ನೇರ ಉತ್ತರ ನೀಡದೇ, ಅವರು ವಿಷಯದ ಬಗ್ಗೆ ಮತ್ತಷ್ಟು ಯೋಚಿಸುವಂತೆ ಮಾಡುತ್ತಿದ್ದರು.

ಉದಾಹರಣೆಗೆ ಪ್ರವಾದಿ ಒಮ್ಮೆ ನುಡಿದರು: "ಶತ್ರುವನ್ನು ಮಣಿಸುವವನು ಪ್ರಬಲನಲ್ಲ"

ಸಹಾಬಿಗಳು ಪ್ರವಾದಿರ ಈ ನುಡಿಯ ಬಗ್ಗೆ ಪರಸ್ಪರರಲ್ಲಿಯೇ ಚರ್ಚಿಸಿ ಪ್ರವಾದಿರಿಗೆ ಪ್ರಶ್ನಿಸಿದರು. "ಹಾಗಾದರೇ ನೈಜ ಶಕ್ತಿವಂತನು ಯಾರು?" ಪ್ರವಾದಿ ಉತ್ತರಿಸಿದರು.

"ಕೋಪಗೊಂಡಾಗ ತನ್ನನ್ನು ತಾನು ನಿಯಂತ್ರಿಸುವವನೇ ನೈಜ ಶಕ್ತಿವಂತನು." ಮತ್ತೊಂದು ಸಂದರ್ಭದಲ್ಲಿ ಪ್ರವಾದಿ ನುಡಿದರು.

"ನೀವು ಹೊಂದಿರುವ ಐಶ್ವರ್ಯದಲ್ಲಿ ಸಿರಿವಂತಿಕೆ ಅಡಗಿಲ್ಲ" ನಂತರ ಸಹಾಬಿಗಳಿಗೆ ವಿವರಿಸಿದರು. "ನೈಜ ಸಂಪತ್ತು ಹೃದಯದ ಸಂಪತ್ತಾಗಿದೆ."

ಒಮ್ಮೊಮ್ಮೆ ಪ್ರವಾದಿರ ಮಾತು ವಾಸ್ತವಿಕತೆಗೆ ವ್ಯತಿರಿಕ್ತವಾಗಿ ತೋರುತ್ತಿತ್ತು.

"ನಿಮ್ಮ ಸಹೋದರನು ನ್ಯಾಯವಂತನಾಗಿದ್ದರೂ, ಅನ್ಯಾಯವಂತ ನಾಗಿದ್ದರೂ ಅವನಿಗೆ ಸಹಾಯ ಮಾಡಿ."

ಸಹೋದರನು ಅನ್ಯಾಯವೆಸಗಿದ್ದರೂ ಅವನಿಗೆ ಸಹಾಯ ಮಾಡುವುದು ಹೇಗೆ ಎಂಬುದು ಸಹಾಬಿಗಳಿಗೆ ಅರ್ಥವಾಗಲಿಲ್ಲ. ಆಗ ಪ್ರವಾದಿ ಈ ರೀತಿ ಸ್ಪಷ್ಟೀಕರಿಸಿದರು.

"ನಿಮ್ಮ ಸಹೋದರನು ಅನ್ಯಾಯ ಮಾಡುವುದರಿಂದ ತಡೆಯುವುದೇ ಆತನಿಗೆ ಸಹಾಯ ಮಾಡುವುದಾಗಿದೆ."

ಈ ರೀತಿ ಪ್ರವಾದಿ ತಮ್ಮ ಸಂಗಾತಿಗಳಿಗೆ ಪ್ರಶ್ನಿಸುವುದರ ಮೂಲಕ ಹಾಗೂ ವ್ಯತಿರಿಕ್ತವಾಗಿ ಕಾಣುವಂತಹ ಹೇಳಿಕೆಗಳನ್ನು ನೀಡುವ ಮೂಲಕ ಅವರು ಚಿಂತಿಸುವಂತೆ ಮಾಡುತ್ತಿದ್ದರು. ತಮ್ಮ ಅನುಯಾಯಿಗಳು ಯಾಂತ್ರಿಕವಾಗಿ ತಮ್ಮನ್ನು ಅನುಸರಿಸುವುದನ್ನು ಪ್ರವಾದಿ ಇಷ್ಟಪಡುತ್ತಿರಲಿಲ್ಲ. ಅನುಯಾಯಿಗಳು ಸಮಂಜಸ ಸಲಹೆ ನೀಡಬೇಕಿದ್ದರೆ ಪ್ರವಾದಿಯ ಉಪಸ್ಥಿತಿಯಲ್ಲಿ ನಿರ್ಭಯರಾಗಿರಬೇಕಾಗಿದ್ದುದು ಅಗತ್ಯವಾಗಿತ್ತು. ಸಂಗಾತಿಗಳಿಗೆ ಉತ್ತರಿಸುವ, ಸಲಹೆ ನೀಡುವ ಅವಕಾಶ ನೀಡುವ ಮೂಲಕ ಪ್ರವಾದಿ ಅವರಲ್ಲಿ ಸ್ವತಂತ್ರವಾಗಿ, ನಿರ್ಭಯವಾಗಿ ಆಲೋಚಿಸುವ, ಚಿಂತನೆ ನಡೆಸುವ ಗುಣವನ್ನು ಬೆಳೆಸಿದರು.

ಬದ್ರ್ ಯುದ್ಧದ ಸಂದರ್ಭದಲ್ಲಿ ಮುಹಮ್ಮದ್ ಅವರಿಗೆ ಸಿಕ್ಕಿದ ಪ್ರಥಮ ಬಾವಿಯ ಬಳಿ ಮುಸ್ಲಿಮ್ ಸೇನೆಗೆ ಠಿಕಾಣಿ ಹೂಡಲು ಆದೇಶಿಸಿದ್ದರು. ಯುವ ಸಹಾಬಿ ಹುಬ್ಬಾಬ್, "ಪ್ರವಾದಿಗಳೇ, ತಾವು ಅಲ್ಲಾಹನ ಅದೇಶದ ಮೇರೆಗೆ ಸ್ಥಳದಲ್ಲಿ ಠಿಕಾಣಿ ಹೂಡಿರುವಿರೋ ಅಥವಾ ಇದು ನಿಮ್ಮ ವೈಯಕ್ತಿಕ ನಿರ್ಧಾರವೋ?" ಎಂದು ಪ್ರಶ್ನಿಸಿದರು. ಆಗ ಪ್ರವಾದಿ, ಇದು ನನ್ನ ವೈಯಕ್ತಿಕ ನಿರ್ಧಾರವೆಂದು ಉತ್ತರಿಸಿದರು. ಹುಬ್ಬಾಬ್.

"ಪ್ರವಾದಿಗಳೇ ನಾವು ಶತ್ರುಗಳು ಹಾದು ಹೋಗುವ ಮಾರ್ಗದಲ್ಲಿ ಬರುವ ದೊಡ್ಡ ಬಾವಿಯ ಬಳಿ ಠಿಕಾಣಿ ಹೂಡಬೇಕು. ಈ ರೀತಿ ನಾವು ವೈರಿಗಳಿಗೆ ನೀರು ಸಿಗದಂತೆ ಮಾಡಬಹುದು" ಎಂದು ಸಲಹೆ ನೀಡಿದರು. ಹುಬ್ಬಾಬ್‌ರ ಮಾತನ್ನು ಗಮನದಿಂದ ಆಲಿಸಿದ ಮುಹಮ್ಮದ್ ಅದರಂತೆ ದೊಡ್ಡ ಬಾವಿಯ ಬಳಿ ಡೇರೆಗಳನ್ನು ಹಾಕುವಂತೆ ಸೇನೆಗೆ ಆಜ್ಞಾಪಿಸಿದರು. ಬದ್ರ್ ಯುದ್ಧ ನಡೆದಾಗ, ಈ ತಂತ್ರವು ವೈರಿಗಳನ್ನು ಮಣಿಸಲು ಬಹಳ ಸಹಕಾರಿಯಾಗಿ ಪರಿಣಮಿಸಿತು.

ಮೇಲಿನ ಉದಾಹರಣೆಯು ಪ್ರವಾದಿಗಳ ಸಂಗಾತಿಗಳು ಅಲ್ಲಾಹನಿಂದ ಅವತೀರ್ಣಗೊಂಡ ಆದೇಶಗಳ ಮತ್ತು ಮುಹಮ್ಮದ್‌ರ ವೈಯಕ್ತಿಕ ಅಭಿಪ್ರಾಯಗಳ ನಡುವೆ ವ್ಯತ್ಯಾಸವನ್ನು ಮಾಡುತ್ತಿದ್ದರೆಂಬುದನ್ನು ತೋರಿಸುತ್ತದೆ. ಪ್ರವಾದಿರ ಅನುಯಾಯಿಗಳು ಅಲ್ಲಾಹನ ಆದೇಶವನ್ನು ಚಕಾರವೆತ್ತದೇ ಅನುಸರಿಸುತ್ತಿದ್ದರು, ನಿರ್ದಿಷ್ಟ ಸಂದರ್ಭಗಳಲ್ಲಿ ಪ್ರವಾದಿರು ನೀಡಿದ ಅಭಿಪ್ರಾಯವನ್ನು ಚರ್ಚಿಸಿ, ಅದಕ್ಕೆ ಎದುರಾಗಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ನೀಡುತ್ತಿದ್ದರು. ಮುಹಮ್ಮದ್ ಎಂದೂ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಜನರ ಮೇಲೆ ಹೇರುತ್ತಿರಲಿಲ್ಲ.

ಮುಹಮ್ಮದ್ ಸ್ತ್ರೀ, ಪುರುಷರು, ಮಕ್ಕಳೆಂಬ ವ್ಯತ್ಯಾಸವಿಲ್ಲದೇ, ಸ್ವತಂತ್ರವಾಗಿ ಜನರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸುತ್ತಿದ್ದರು. ಪ್ರವಾದಿ ಎಂಬ ನೆಲೆಯಲ್ಲಿ ತಮ್ಮ ಸ್ಥಾನಮಾನ ಎಂದೂ ಜನರ ಸ್ವಾತಂತ್ರ್ಯಕ್ಕೆ ಅಡ್ಡಿ ಬರದಂತೆ

ನೋಡಿಕೊಳ್ಳುತ್ತಿದ್ದರು. ಈ ಕಾರಣದಿಂದ ಪ್ರವಾದಿರ ಅನುಯಾಯಿಗಳು ಪ್ರವಾದಿರನ್ನು ಬಹಳ ಪ್ರೀತಿಸುತ್ತಿದ್ದರು.

## ಬದ್ರ್ ಯುದ್ಧದ ಕಡೆಗೆ ಮುನ್ನಡೆ

ಅಬೂಸುಫ್‌ಯಾನ್‌ರ ವ್ಯಾಪಾರದ ತಂಡವು ಪಾರಾಗಿದ್ದು, ಕುರೈಶರ ವಿರುದ್ಧ ಘೋರ ಯುದ್ಧವು ಜರುಗಲಿರುವುದೆಂದು ಅರಿತ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), ಈ ಯುದ್ಧವನ್ನು ತಪ್ಪಿಸಲಿಕ್ಕಾಗಿ ಉಮರ್‌ರನ್ನು ಕುರೈಶರ ಬಳಿಗೆ ಕಳುಹಿಸಿದರು. ಕುರೈಶರಲ್ಲಿಯೂ ಕೆಲವರಿಗೆ ಯುದ್ಧ ನಡೆಯುವುದು ಬೇಕಾಗಿರಲಿಲ್ಲ. ಆದರೆ ಕೆಲ ಕುರೈಶ್ ಮುಖಂಡರು ತಮ್ಮ ಸಂಖ್ಯಾ ಬಲದ ಮದದ ಕಾರಣದಿಂದಾಗಿ ಮುಸ್ಲಿಮರನ್ನು ಸದೆಬಡಿಯಬಯಸಿದ್ದರು. ಆದುದರಿಂದ ಈ ಸುವರ್ಣ ಅವಕಾಶವನ್ನು ಅವರು ಕಳೆದುಕೊಳ್ಳಲು ತಯಾರಿರಲಿಲ್ಲ.

ಇದು ರಮಝಾನ್ ತಿಂಗಳಾಗಿತ್ತು. ಆದುದರಿಂದ ಕೆಲ ಮುಸ್ಲಿಮರು ಉಪವಾಸ ವ್ರತವನ್ನು ಆಚರಿಸಬಯಸಿದರು. ಆದರೆ ಪ್ರಯಾಣದಲ್ಲಿರುವಾಗ ಉಪವಾಸ ವ್ರತದ ಆಚರಣೆ ಕಡ್ಡಾಯವಲ್ಲವೆಂದು ಮುಹಮ್ಮದ್ ಮುಸ್ಲಿಮರಿಗೆ ತಿಳಿಸಿದರು.

**"**ಪ್ರಯಾಣದಲ್ಲಿರುವಾಗ ಉಪವಾಸವನ್ನು ಆಚರಿಸುವುದು ದೈವಭಕ್ತಿಯ ಸಂಕೇತವಲ್ಲ. ಇಂತಹ ಸಂದರ್ಭಗಳಲ್ಲಿ ಅಲ್ಲಾಹನು ನೀಡಿರುವ ರಿಯಾಯಿತಿಗಳ ಪ್ರಯೋಜನ ಪಡೆಯುವುದು ಮುಸ್ಲಿಮರ ಕರ್ತವ್ಯವಾಗಿದೆ**"** ಎಂದು ಮುಹಮ್ಮದ್ ಜನರಿಗೆ ತಿಳಿ ಹೇಳಿದರು. ಧರ್ಮದ ಆಚರಣೆಯನ್ನು ಸರಳಗೊಳಿಸಬೇಕು. ಧರ್ಮದ ಕಡೆಗೆ ಆಕರ್ಷಿಸುವಂತಹ ವಿಷಯಗಳನ್ನು ಜನರ ಮುಂದೆ ತರಬೇಕೇ ವಿನಹಃ ಧರ್ಮದಿಂದ ಜಿಗುಪ್ಸೆಗೊಳಿಸುವಂತಹ ವಿಷಯಗಳನ್ನಲ್ಲ. ಬದ್ರ್‌ನ ಸಂದರ್ಭದಲ್ಲಿ ಮಾದರಿಯನ್ನು ಸ್ಥಾಪಿಸಲಿಕ್ಕಾಗಿ ಮುಹಮ್ಮದ್ ಉಪವಾಸನ್ನು ತ್ಯಜಿಸಿದರು.

# ಬದ್ರ್ ಯುದ್ಧ

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕುರೈಶರನ್ನು ಮದೀನಾದಿಂದ ಸುಮಾರು 129 ಕಿ.ಮೀ. ದೂರದಲ್ಲಿದ್ದ ಬದ್ರ್ ಎಂಬ ಸ್ಥಳದಲ್ಲಿ ಎದುರಿಸಲು ನಿರ್ಧರಿಸಿದರು. 17 ರಮಝಾನ್ ಎರಡನೇ ಹಿಜರಿಯಂದು ಪ್ರವಾದಿ 313 ಅನುಯಾಯಿ ಗಳೊಂದಿಗೆ ಹೊರಟರು. ಅಲಿ ಇಸ್ಲಾಮಿಾ ಪತಾಕೆಯನ್ನು ಹಿಡಿದಿದ್ದರು. ಮುಹಮ್ಮದ್ ಮುಸ್ಲಿಮ್ ಸೇನೆಯನ್ನು 5 ಪಂಗಡಗಳಲ್ಲಿ ವಿಂಗಡಿಸಿ ಪ್ರತಿಯೊಂದು ಪಂಗಡಕ್ಕೆ ನಾಯಕನನ್ನು ನೇಮಿಸಿದರು. ಬದ್ರ್‌ನ ಒಂದು ಎತ್ತರದ ಗುಡ್ಡದಲ್ಲಿ ಒಂದು ಚಪ್ಪರವನ್ನು ನಿರ್ಮಿಸಲಾಯಿತು. ಅಲ್ಲಿಂದ ಬದ್ರ್‌ನ ರಣಾಂಗವು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಮುಹಮ್ಮದ್ ಈ ಚಪ್ಪರದಿಂದ ಸೇನೆಯ ಮಹಾದಂಡನಾಯಕನ ಕರ್ತವ್ಯವನ್ನು ನಿರ್ವಹಿಸಿದರು.

ಪಹರೆಯನ್ನು ನಿರ್ವಹಿಸುತ್ತಿದ್ದ ಮುಸ್ಲಿಮ್ ಸೈನಿಕರು ಬಾವಿಯಿಂದ ನೀರು ಪಡೆಯಲು ಬಂದಿದ್ದ ಇಬ್ಬರು ವ್ಯಕ್ತಿಗಳನ್ನು ಬಂಧಿಸಿದರು. ಅವರನ್ನು ಪ್ರವಾದಿರ ಬಳಿಗೆ ಕರೆದೊಯ್ಯಲಾಯಿತು. ಆಗ ಪ್ರವಾದಿ ನಮಾಝ್‌ನಲ್ಲಿ ನಿರತರಾಗಿದ್ದರು. ಮುಸ್ಲಿಮ್ ಸೈನಿಕರು ಬಂದಿಗಳನ್ನು ವಿಚಾರಣೆಗೆ ಒಳಪಡಿಸಿದರು. ಬಂದಿಗಳು ತಾವು ಮಕ್ಕಾದ ಸೇನೆಗೆ ಸೇರಿದವರೆಂದು ನುಡಿದರು. ಇದನ್ನು ಒಪ್ಪದ ಮುಸ್ಲಿಮ್ ಸೈನಿಕರು ಬಂದಿಗಳ ವಿಚಾರಣೆಯನ್ನು ಮುಂದುವರೆಸಿದರು. ಮುಸ್ಲಿಮ್ ಸೈನಿಕರ ಒತ್ತಾಯಕ್ಕೆ ಮಣಿದು ಬಂದಿಗಳು ತಾವು ಅಬು ಸುಫ್‌ಯಾನ್‌ರ ಕಾರವಾನದವರೆಂದರು. ನಂತರ ಪುನಃ ವಿಚಾರಣೆಗೆ ಒಳಪಡಿಸಲಾದಾಗ, ಅವರು ತಮ್ಮ ಹೇಳಿಕೆಯನ್ನು ಹಿಂಪಡೆದು, ತಾವು ಮಕ್ಕಾದ ಸೇನೆಗೆ ಸೇರಿದವರೆಂದರು.

ಪ್ರವಾದಿ ನಮಾಝ್ ಮುಗಿಸಿದ ನಂತರ ಮುಸ್ಲಿಮ್ ಸೈನಿಕರನ್ನು ಉದ್ದೇಶಿಸಿ, "ಅವರು ಸತ್ಯವನ್ನು ನುಡಿದಾಗ ನೀವು ಅವರನ್ನು ಹೊಡೆದಿರಿ. ಅವರು ಸುಳ್ಳು ನುಡಿದಾಗ ಅವರನ್ನು ಬಿಟ್ಟು ಬಿಟ್ಟಿರಿ" ಎಂದರು.

ನಂತರ ಪ್ರವಾದಿ ಸ್ವತಃ ಬಂದಿಗಳ ವಿಚಾರಣೆ ನಡೆಸಿದರು "ನೀವು ಯಾರು".

ಬಂದಿಗಳು ಉತ್ತರಿಸಿದರು: "ನಾವು ಮಕ್ಕಾದ ಸೇನೆಗೆ ಸೇರಿದವರು". "ನಿಮ್ಮ ಸೇನೆಯಲ್ಲಿ ಎಷ್ಟು ಸೈನಿಕರಿದ್ದಾರೆ?" ಬಂದಿಗಳು: "ನಮಗೆ ಗೊತ್ತಿಲ್ಲ".

ಪ್ರವಾದಿರಿಗೆ ಬಂದಿಗಳು ನಿಜವನ್ನು ಹೇಳುತ್ತಿರುವುದೆಂಬುದು ತಿಳಿಯಿತು. ಪ್ರವಾದಿ ಪ್ರಶ್ನಿಸಿದರು. "ಪ್ರತಿದಿನ ಎಷ್ಟು ಒಂಟೆಗಳನ್ನು ಕೊಯ್ಯಲಾಗುತ್ತಿದೆ?"

ಬಂದಿಗಳು, ಒಂದು ದಿನ 9 ಒಂಟೆಗಳೆಂದೂ, ಮತ್ತೊಂದು ದಿನ 10 ಒಂಟೆಗಳೆಂದು ಉತ್ತರಿಸಿದರು. ಒಂದು ಒಂಟೆಯನ್ನು ಕೊಯ್ದರೆ ಅದರಿಂದ ನೂರು ಜನರು ಊಟ ಮಾಡಬಹುದಾಗಿದ್ದರಿಂದ ಕುರೈಶ್ ಸೇನೆಯಲ್ಲಿ ಸುಮಾರು 900–1000 ಸೈನಿಕರಿರಬಹುದೆಂದು ಪ್ರವಾದಿ ಊಹಿಸಿದರು. ವಾಸ್ತವಿಕವಾಗಿ ಕುರೈಶ್ ಸೇನೆಯಲ್ಲಿ 950 ಸೈನಿಕರಿದ್ದರು. ನಂತರ ಪ್ರವಾದಿ ಕುರೈಶ್ ಸೇನೆಯ ವಿವಿಧ ತುಕಡಿಗಳ ನಾಯಕತ್ವ ವಹಿಸಿದ್ದ ಮುಖಂಡರ ಹೆಸರುಗಳನ್ನು ಕೇಳಿ ತಿಳಿದುಕೊಂಡರು. ಈ ಎಲ್ಲಾ ಹೆಸರುಗಳು ಪ್ರವಾದಿರಿಗೆ ಚಿರಪರಿಚಿತವಾಗಿದ್ದವು.

ಕುರೈಶ್ ಸೇನೆಯಲ್ಲಿ 950 ಸೈನಿಕರಿದ್ದರು, ಆದರೆ ಮುಸ್ಲಿಮ್ ಸೇನೆಯಲ್ಲಿ ಕೇವಲ 313 ಸೈನಿಕರಿದ್ದರು. ಮುಸ್ಲಿಮ್ ಸೇನೆಯಲ್ಲಿ ಕೇವಲ ಎರಡು ಕುದುರೆಗಳು ಮತ್ತು ಸ್ವಲ್ಪವೇ ಶಸ್ತ್ರಾಸ್ತ್ರಗಳಿದ್ದರೆ ಶತ್ರು ಸೇನೆಯಲ್ಲಿ ನೂರಕ್ಕಿಂತ ಹೆಚ್ಚು ಕುದುರೆಗಳು, ಹೆಚ್ಚಿನ ಸಂಖ್ಯೆಯಲ್ಲಿ ಶಸ್ತ್ರಾಸ್ತ್ರಗಳಿದ್ದವು. ಎಲ್ಲಾ ವಿಧಗಳಲ್ಲೂ ಶತ್ರುಸೇನೆಯು ಮುಸ್ಲಿಮ್ ಸೇನೆಗಿಂತ ಪ್ರಬಲವಾಗಿತ್ತು. ಯುದ್ಧಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿದ ಬಳಿಕ ಪ್ರವಾದಿ ಅತ್ಯಧಿಕ ಭಯಭಕ್ತಿ ಮತ್ತು ತನ್ಮಯತೆಯಿಂದ ಎರಡೂ ಕೈಗಳನ್ನೆತ್ತಿ ಈ ರೀತಿ ಪ್ರಾರ್ಥಿಸಿದರು.

"ಓ ಅಲ್ಲಾಹ್! ಇಂದು ಈ ಕೆಲವು ಮಂದಿ ನಾಶವಾದರೆ ಮತ್ತೆ ಈ ಭೂಮಿಯ ಮೇಲೆ ನಿನ್ನ ಆರಾಧನೆ ಮಾಡುವವರು ಯಾರೂ ಉಳಿಯಲಾರರು"

ಮೊದಲ ಬಾರಿ ಪ್ರವಾದಿ ಮುಹಮ್ಮದ್ ತೆರೆದ ಮೈದಾನದಲ್ಲಿ ನಡೆಯುವ ಯುದ್ಧದಲ್ಲಿ ನವೀನ ತಂತ್ರವನ್ನು ಉಪಯೋಗಿಸಿದರು. ಈ ಮೊದಲು ಈ ರೀತಿಯ ಯುದ್ಧಗಳಲ್ಲಿ ಸೈನಿಕರು ಸಣ್ಣ ಸಣ್ಣ ಗುಂಪುಗಳಲ್ಲಿ ಶತ್ರುಸೇನೆಯ ಮೇಲೆ ಆಕ್ರಮಣ ಮಾಡುತ್ತಿದ್ದರು. ಆದರೆ ಬದ್ರ್ ಯುದ್ಧದಲ್ಲಿ ಪ್ರವಾದಿ ಎರಕ ಹೊಯ್ದ ಉಕ್ಕಿನ ಗೋಡೆಯಂತೆ ಮುಸ್ಲಿಮ್ ಸೇನೆಯನ್ನು ಪಂಕ್ತಿ ಬದ್ಧಗೊಳಿಸಿದರು. ಇಡಿಯ ಸೇನೆ ಏಕಕಾಲದಲ್ಲಿ ಚಲನವಲನ ಮಾಡುತ್ತಿತ್ತು. ಏಕಕಾಲದಲ್ಲಿ ಖಡ್ಗಗಳು, ಈಟಿಗಳು, ಗುರಾಣಿಗಳು ಚಲಿಸುತ್ತಿದ್ದವು. ಈ ರೀತಿ ಪ್ರತಿ ಸೈನಿಕನಿಗೆ, ಇತರ ಸೈನಿಕನಿಂದ ಶಕ್ತಿ ದೊರಕುತ್ತಿತ್ತು. ಓರ್ವ ಚತುರ ಮತ್ತು ದೂರದೃಷ್ಟಿತ್ವವುಳ್ಳ ಸೇನಾನಾಯಕನು ಮಾತ್ರ ಇಂತಹ ಕ್ರಮವನ್ನು ಕೈಗೊಳ್ಳಲು ಸಾಧ್ಯವಿತ್ತು. ಮುಹಮ್ಮದ್ ವಾಸ್ತವದಲ್ಲಿ ಓರ್ವ

ಮಹಾನ್ ಸೇನಾನಿಯಾಗಿದ್ದರು!

ಅರಬ್ ಸಂಪ್ರದಾಯದಂತೆ ಕುರೈಶ್ ಸೇನೆಯಿಂದ ಶೀಬಾ, ಉತ್ಬಾ ಮತ್ತು ವಲೀದ್, ತಮ್ಮನ್ನು ಎದುರಿಸುವಂತೆ ಮುಸ್ಲಿಮರಿಗೆ ಆಹ್ವಾನಿಸುತ್ತಾರೆ. ಮುಹಮ್ಮದ್‌ರ ಆದೇಶದಂತೆ ಹಂಝಾ, ಅಲಿ ಮತ್ತು ಉಬೈದ ಇವರನ್ನು ಎದುರಿಸಲು ಮುಂದೆ ಬರುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ಶೀಬಾ, ಉತ್ಬಾ ಮತ್ತು ವಲೀದ್ ವಿಲವಿಲನೆ ಒದ್ದಾಡುತ್ತಾ ಸಾಯುತ್ತಾರೆ. ಉಬೈದ ತೀವ್ರವಾಗಿ ಗಾಯಗೊಳ್ಳುತ್ತಾರೆ.

ಈಗ ಭೀಕರ ಯುದ್ಧ ಅರಂಭವಾಯಿತು. ಮುಸ್ಲಿಮ್ ಸೇನೆ ಪರಾಕ್ರಮದಿಂದ ಹೋರಾಡಿತು. ಕುರೈಶ್ ಸೇನೆಯು ಸೋಲಿಸಲ್ಪಟ್ಟಿತು. ಬದ್ರ್ ಯುದ್ಧದಲ್ಲಿ ಅಲ್ಲಾಹ್ ಮುಸ್ಲಿಮ್‌ಸೇನೆಗೆ ನೆರವಾದ ಬಗ್ಗೆ ನಂತರ ಕುರ್‌ಆನ್‌ನಲ್ಲಿ ಈ ರೀತಿ ಪ್ರಸ್ತಾಪವಾಯಿತು.

> "ಇದಕ್ಕೆ ಮುಂಚೆ ಬದ್ರ್ ಯುದ್ಧದಲ್ಲಿ ನೀವು ದುರ್ಬಲರಾಗಿದ್ದರೂ ಅಲ್ಲಾಹ್ ನಿಮಗೆ ಸಹಾಯ ಮಾಡಿದ್ದನು. ಆದುದರಿಂದ ನೀವು ಅಲ್ಲಾಹನ ಕೃತಘ್ನತೆಯಿಂದ ದೂರವಿರಬೇಕು. ಮುಂದೆ ನೀವು ಕೃತಜ್ಞರಾಗುವಿರೆಂದು ಆಶಿಸಲಾಗಿದೆ". (ಪವಿತ್ ಕುರ್‌ಆನ್ 3:123)

ಬದ್ರ್ ಯುದ್ಧದಲ್ಲಿ ಮುಸ್ಲಿಮರ ವಿಜಯವು ಐತಿಹಾಸಿಕ ವಿಜಯವಾಗಿತ್ತು. ಯುದ್ಧದಲ್ಲಿ ಸೋಲಿನಿಂದಾಗಿ ಕುರೈಶರ ಘನತೆಗೆ ತೀವ್ರ ಧಕ್ಕೆ ಒದಗಿಬಂತು. ಅರೇಬಿಯಾ ಪ್ರದೇಶದಾದ್ಯಂತ ಅವರ ಸೋಲಿನ ವಾರ್ತೆ ಕಾಡ್ಗಿಚ್ಚಿನಂತೆ ಹರಡಿತು.

ಯುದ್ಧದಲ್ಲಿ ಮುಸ್ಲಿಮರ ಹದಿನಾಲ್ಕು ಯೋಧರು ಹತರಾದರು. ಕುರೈಶ್ ಸೇನೆಯಲ್ಲಿ 70ಕ್ಕಿಂತಲೂ ಹೆಚ್ಚಿನ ಯೋಧರು ಹತರಾದರು. ಕುರೈಶ್ ಸರದಾರ ಮತ್ತು ಇಸ್ಲಾಮಿನ ಕಡು ಶತ್ರು ಅಬೂಜಹಲ್ ಯುದ್ಧದಲ್ಲಿ ಹತನಾದನು. ಕುರೈಶರ 70 ಸೈನಿಕರು ಬಂದಿಗಳಾದರು. ಇವರಲ್ಲಿ ಮುಹಮ್ಮದ್ ಮದೀನಾಕ್ಕೆ ವಲಸೆ ಬರುವ ಮೊದಲು ಸಹಕರಿಸಿದ್ದ ಅನ್ಸಾರ್‌ರೊಂದಿಗೆ ಮಾತುಕತೆ ಮಾಡಿದ್ದ ಮುಹಮ್ಮದ್‌ರ ಚಿಕ್ಕಪ್ಪ ಅಬ್ಬಾಸ್ ಸಹ ಇದ್ದರು.

## ಮಕ್ಕಾದಲ್ಲಿ ಪ್ರತೀಕಾರಕ್ಕೆ ಪಣ

ಬದ್ರ್ ಯುದ್ಧದ ಸೋಲಿನಿಂದ ಕುರೈಶರು ತೀವ್ರ ಮುಖಭಂಗಕ್ಕೆ ಗುರಿಯಾಗಿದ್ದರು. ಅನೇಕ ಗೋತ್ರಗಳ ಕುರೈಶ್ ಮುಖಂಡರು ಯುದ್ಧದಲ್ಲಿ ಹತರಾಗಿದ್ದರು. ಈ ಕಾರಣದಿಂದ ಕುರೈಶರು ಪ್ರತೀಕಾರಕ್ಕಾಗಿ ಚಡಪಡಿಸುತ್ತಿದ್ದರು. ಈ ದಿಸೆಯಲ್ಲಿ ಅವರು ಕೂಡಲೇ ಕಾರ್ಯಪ್ರವೃತ್ತರಾದರು. ಸುತ್ತ ಮುತ್ತಲಿನ ಪಂಗಡಗಳೊಂದಿಗೆ ಕುರೈಶರು

ಒಪ್ಪಂದಗಳನ್ನು ಮಾಡಿಕೊಳ್ಳಲಾರಂಭಿಸಿದರು.

ಇಸ್ಲಾಮಿನ ಕಡುವೈರಿ ಅಬೂಲಹಬ್ ಅನಾರೋಗ್ಯದ ಕಾರಣದಿಂದಾಗಿ ಬದ್ರ್ ಯುದ್ಧದಲ್ಲಿ ಪಾಲುಗೊಂಡಿರಲಿಲ್ಲ. ಕುರೈಶರ ಸೋಲಿಗೆ ಕಾರಣವೇನೆಂದು ಅಬೂಸುಫ್‌ಯೂನ್‌ರಲ್ಲಿ ಅಬೂ ಲಹಬ್ ವಿಚಾರಿಸಿದನು. ಅಬೂ ಸುಫ್‌ಯಾನ್, "ಶತ್ರುಗಳನ್ನು ಎದುರಿಸಿದ ಕೂಡಲೇ ನಾವು ಪಲಾಯನ ಮಾಡಿದೆವು. ಶತ್ರುಗಳು ನಮ್ಮ ಅನೇಕ ಸೈನಿಕರನ್ನು ಸೆರೆಯಾಳುಗಳನ್ನಾಗಿಸಿದರು. ನಮ್ಮ ಸೈನಿಕರನ್ನೂ ನಾವು ದೂರುವಂತಿರಲಿಲ್ಲ. ಏಕೆಂದರೆ ನಮ್ಮ ಸೈನಿಕರು ಮುಸ್ಲಿಮ್ ಯೋಧರ ಜೊತೆಗೆ ಭೂಮಿ ಆಕಾಶಗಳ ನಡುವೆ ವಿವಿಧ ಬಣ್ಣಗಳ ಕುದುರೆಗಳ ಮೇಲೆ ಸವಾರಿಯಾಗಿದ್ದ ಶ್ವೇತವರ್ಣದ ಯೋಧರನ್ನು ಎದುರಿಸಬೇಕಾಗಿತ್ತು" ಎಂದರು.

ಅಬು ಸುಫ್‌ಯಾನ್ ಕುರೈಶರ ಸೋಲಿನ ವೃತ್ತಾಂತವನ್ನು ಅಬೂಲಹಬ್‌ರಿಗೆ ವಿವರಿಸುತ್ತಿದ್ದಾಗ ಅಬೂರಾಫಿ ಸನಿಹದಲ್ಲೇ ಕುಳಿತು ಇವರೀರ್ವರ ಸಂಭಾಷಣೆಯನ್ನು ಆಲಿಸುತ್ತಿದ್ದರು. ಇವರೋರ್ವ ಗುಲಾಮರಾಗಿದ್ದು, ತಮ್ಮ ಇಸ್ಲಾಮ್ ಸ್ವೀಕಾರವನ್ನು ರಹಸ್ಯವಾಗಿಟ್ಟಿದ್ದರು. ಭೂಮಿ ಆಕಾಶಗಳ ನಡುವೆ ಶ್ವೇತವರ್ಣದ ಯೋಧರ ಪ್ರಸ್ತಾಪ ಕೇಳಿದಾಗ ಅವರು ಕೂಡಲೇ "ಅವರು ದೇವಚರರು" ಎಂದು ಸಂತೋಷಾತಿರೇಕದಿಂದ ಉದ್ಗರಿಸಿದರು. ಇದನ್ನು ಕೇಳಿ ಕೋಪದಿಂದ ಅಬೂಲಹಬ್ ಅವರ ಮುಖಕ್ಕೆ ಬಲವಾಗಿ ಹೊಡೆದನು. ಇದನ್ನು ಕಂಡು ಉಮ್ಮುಲ್ ಫದ್ಲ್ ಅಬ್ಬಾಸ್‌ರ ಪತ್ನಿ ಮತ್ತು ಅಬೂಲಹಬ್‌ರ ನಾದಿನಿ, ಅಬೂಲಹಬ್‌ನಿಗೆ ಡೇರೆಯ ಕಂಬದಿಂದ ಬಲವಾಗಿ ಹೊಡೆದಳು. ಅಬೂಲಹಬ್ ತೀವ್ರವಾಗಿ ಗಾಯಗೊಂಡನು. ಗಾಯದ ಪರಿಣಾಮವಾಗಿ ಕೆಲವೇ ದಿನಗಳಲ್ಲಿ ಸೋಂಕು ದೇಹದ ತುಂಬ ಹರಡಿ, ಆತನು ಸಾವನ್ನಪ್ಪಿದನು. ಅಬೂಲಹಬ್ ಮತ್ತು ಆತನ ಪತ್ನಿ ಇಸ್ಲಾಮನ್ನು ಬಹಳ ದ್ವೇಷಿಸುತ್ತಿದ್ದು ಅಬೂಲಹಬ್ ಮತ್ತು ಆತನ ಪತ್ನಿಯ ದಾರುಣಮಯ ಸಾವಿನ ಬಗ್ಗೆ ಕುರ್‌ಆನ್ ಕೆಲ ವರ್ಷಗಳ ಮೊದಲೇ ಮುನ್ಸೂಚನೆ ನೀಡಿತ್ತು. ಅಬೂಲಹಬ್ ಕುರ್‌ಆನಿನಲ್ಲಿ ಹೆಸರಿನ ಪ್ರಸ್ತಾಪದೊಂದಿಗೆ ಖಂಡಿಸಲ್ಪಟ್ಟ ಏಕೈಕ ವ್ಯಕ್ತಿಯಾಗಿದ್ದಾನೆ. ಅನೇಕ ಇಸ್ಲಾಮಿನ ಶತ್ರುಗಳು ಕೆಲಕಾಲದ ಬಳಿಕ ತಮ್ಮ ಮನೋಭಾವನೆಯನ್ನು ಬದಲಿಸಿದ್ದರೂ, ಅಬೂಲಹಬ್ ಮತ್ತು ಆತನ ಪತ್ನಿಯ ಇಸ್ಲಾಮ್ ದ್ವೇಷದಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ.

"ಅವರಿಬ್ಬರೂ ಕೊನೆಯವರೆಗೂ ಸತ್ಯವನ್ನು ನಿರಾಕರಿಸುವವರಲ್ಲಾಗಿರುವರು" ಎಂಬ ಕುರ್‌ಆನಿನ ಮುನ್ಸೂಚನೆಯಂತೆ, ಅವರು ಸತ್ಯ ನಿರಾಕರಣೆಯ ಸ್ಥಿತಿಯಲ್ಲಿಯೇ ಸಾವನ್ನಪ್ಪಿದರು.

## ಮದೀನಾದಲ್ಲಿ ಸಂತೋಷ ಮತ್ತು ದುಃಖಗಳ ಛಾಯೆ

ಬದ್ರ್ ಯುದ್ಧದಲ್ಲಿ ವಿಜಯ ಹೊಂದಿ ಮರಳುತ್ತಿದ್ದ ಮುಸ್ಲಿಮ್ ಸೇನೆಗೆ ಮದೀನಾದ ಅರ್‌ರೌಹ ಎಂಬ ಸ್ಥಳದಲ್ಲಿ ಭವ್ಯವಾದ ಸ್ವಾಗತವನ್ನು ನೀಡಲಾಯಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಈಗ ರಾಜಕೀಯವಾಗಿ ಒಂದು ಶಕ್ತಿಯಾಗಿ ಹೊರಹೊಮ್ಮಿದ್ದರು. ಈ ಕಾರಣದಿಂದ ಮದೀನಾದ ಅನೇಕ ಜನರು ಇಸ್ಲಾಮ್ ಸ್ವೀಕರಿಸಿದರು. ಇಸ್ಲಾಮ್ ಮದೀನಾದಲ್ಲಿ ಒಂದು ಶಕ್ತಿಯಾಗಿತ್ತು.

ಬದ್ರ್ ಯುದ್ಧದಿಂದ ಹಿಂತೆರಳುವಾಗ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಿಗೆ ಅವರ ಮಗಳು ರುಕಯ್ಯಾ ನಿಧನ ಹೊಂದಿರುವ ವಾರ್ತೆಯನ್ನು ನೀಡಲಾಯಿತು. ಬದ್ರ್ ಯುದ್ಧದಲ್ಲಿ ಪ್ರವಾದಿಯವರ ಕೆಲ ಆಪ್ತ ಸಂಗಾತಿಗಳು ನಿಧನ ಹೊಂದಿದ್ದರು. ಆ ದುಃಖದೊಂದಿಗೆ, ಈಗ ಪ್ರವಾದಿಯವರು ತಮ್ಮ ಮಗಳು ನಿಧನ ಹೊಂದಿರುವ ದುಃಖವನ್ನು ಸಹಿಸಬೇಕಾಯಿತು. ಸಂತೋಷ ಮತ್ತು ದುಃಖಗಳ ಸಮ್ಮಿಳನ ಜೀವನದ ನಶ್ವರತೆಯನ್ನು ಸಾರುತ್ತಿತ್ತು.

ಪ್ರವಾದಿ, ಕೈದಿಗಳೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವಂತೆ ಮುಸ್ಲಿಮರಿಗೆ ಆದೇಶಿಸಿದರು. ಮುಸ್ಲಿಮರು ಸ್ವತಃ ಹಸಿವೆಯಿಂದ ಇದ್ದು ಕೈದಿಗಳಿಗೆ ಉಣಬಡಿಸುವ ಮೂಲಕ ಪ್ರವಾದಿರ ಆದೇಶದ ಪಾಲನೆಯನ್ನು ಮಾಡಿದರು.

ಪ್ರವಾದಿ, ಸಹಾಬಿಗಳೊಂದಿಗೆ ಸಮಾಲೋಚಿಸಿ ಕೈದಿಗಳನ್ನು ಪರಿಹಾರ ಧನ ಸ್ವೀಕರಿಸಿ ಬಿಡುಗಡೆಗೊಳಿಸಿದರು. ಏನನ್ನೂ ನೀಡಲು ಸಮರ್ಥರಿಲ್ಲದ ಕೈದಿಗಳನ್ನು ಯಾವುದೇ ಪರಿಹಾರಧನ ಸ್ವೀಕರಿಸದೇ, ಔದಾರ್ಯದ ಮೇರೆಗೆ ಸ್ವತಂತ್ರಗೊಳಿಸಲಾಯಿತು. ಪರಿಹಾರ ಧನ ನೀಡಲು ಸಮರ್ಥರಿಲ್ಲದ ಕೈದಿಗಳು ಓದು ಬರಹ ಬಲ್ಲವನಾಗಿದ್ದರೆ, ಅವರು ಬಿಡುಗಡೆ ಹೊಂದಲು ಹತ್ತು ಮುಸ್ಲಿಮರಿಗೆ ಓದು ಬರಹ ಕಲಿಸುವಂತೆ ಆದೇಶಿಸಲಾಯಿತು. ಈ ರೀತಿ ಪ್ರವಾದಿ ಮುಸ್ಲಿಮರಿಗೆ ಜ್ಞಾನದ ಪ್ರಾಮುಖ್ಯತೆಯ ಅರಿವನ್ನು ಮೂಡಿಸಿದರು.

☆

# ಉಪಕಾರ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅಬೂಲಬಾಬ್ಬ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಬದ್ರ್ ಯುದ್ಧದ ಸಂದರ್ಭದಲ್ಲಿ ಪ್ರವಾದಿ, ಅಬೂಲಬಾಬ್ಬರನ್ನು ಮದೀನಾದ ಮೇಲ್ವಿಚಾರಕರಾಗಿ ನೇಮಿಸಿದ್ದರು. ಒಮ್ಮೆ ಓರ್ವ ಅನಾಥ ಯುವಕನು ಪ್ರವಾದಿಯವರ ಬಳಿಗೆ ಬಂದು, ತನ್ನ ಬಳಿ ದೀರ್ಘಕಾಲದಿಂದ ಇದ್ದ ತಾಳೆಯ ಗಿಡವನ್ನು ಅಬೂಲಬಾಬ್ಬ ತೆಗೆದುಕೊಂಡಿರುವರು ಎಂದು ದೂರು ನೀಡಿದನು.

ಪ್ರವಾದಿ ಅಬೂಲಬಾಬ್ಬನ್ನು ಕರೆಸಿ ವಿಚಾರಿಸಿದಾಗ, ತಾಳೆಗಿಡವು ಅವರದು ಎಂಬುದು ದೃಢಪಟ್ಟಿತು. ಪ್ರವಾದಿ ತಾಳೆಗಿಡವನ್ನು ಅಬೂಲಬಾಬ್ಬರಿಗೆ ನೀಡಿದರು. ಇದರಿಂದ ಅನಾಥ ಯುವಕನು ತೀವ್ರವಾಗಿ ನೊಂದನು. ಪ್ರವಾದಿ ನಂತರ ಅಬೂಲುಬಾಬ್ಬರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ನ್ಯಾಯೋಚಿತವಾಗಿ ತಾಳೆಗಿಡ ಅವರಿಗೆ ನೀಡಲಾಗಿದೆಯೆಂದೂ, ಆದರೆ ದೀರ್ಘಕಾಲದಿಂದ ಅನಾಥ ಯುವಕನ ಬಳಿ ತಾಳೆಗಿಡವಿದ್ದು, ಅದು ಅವನಿಗೆ ಬಹಳ ಅಮೂಲ್ಯವಾಗಿರುವುದರಿಂದ ಅವನಿಗೆ ಮರಳಿಸಲು ವಿನಂತಿಸಿದರು. ಆದರೆ ಅಬೂಲುಬಾಬ್ಬ ಒಪ್ಪಲಿಲ್ಲ. ತಾಳೆಗಿಡ ನನ್ನದು. ಇದು ನನ್ನ ಹಕ್ಕು ಎಂದು ಉತ್ತರಿಸಿದರು. ಅಬೂಲಬಾಬ್ಬ ನ್ಯಾಯದ ಬುನಾದಿಯ ಮೇಲೆ ತಮ್ಮ ಹಕ್ಕು ಪ್ರತಿಪಾದಿಸಿದರು. ತಮ್ಮ ಹಕ್ಕನ್ನು ಮೀರಿ ಉನ್ನತ ಮಟ್ಟದ ವರ್ತನೆಗೆ ಅವರು ತಯಾರಿರಲಿಲ್ಲ.

> **"**ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ**"** (ಪವಿತ್ರ ಕುರ್‌ಆನ್, 16.90)

ಇದು ತಮ್ಮ ಹಕ್ಕನ್ನು ಬಿಟ್ಟು ಕೊಡುವ ಪ್ರಶ್ನೆಯಾಗಿರಲಿಲ್ಲ (ಅಬೂಲಬಾಬ್ಬ ತಮ್ಮ ಹಕ್ಕು ಪ್ರತಿಪಾದಿಸಿ ತಪ್ಪೇನೂ ಎಸಗಿರಲಿಲ್ಲ). ಇದು ಇತರರ ಸಂತೋಷಕ್ಕಾಗಿ, ಸ್ವಇಚ್ಛೆಯಿಂದ ತಮ್ಮ ನ್ಯಾಯೋಚಿತ ಹಕ್ಕನ್ನು ಬಿಟ್ಟುಕೊಡುವುದಾಗಿತ್ತು.

ಅಬೂಲಬಾಬ್ಬರ ವರ್ತನೆಯಿಂದ ಪ್ರವಾದಿರಿಗೆ ದುಃಖವಾಯಿತು. ಅವರ ಬಗ್ಗೆ

ಪ್ರವಾದಿರಿಗೆ ಗೌರವ ಭಾವನೆಯಿತ್ತು. ಈ ಘಟನೆಯನ್ನು ಕಂಡು ಸಾಬಿತ್ ತಾಳೆಗಿಡದ ಬದಲು ಒಂದು ಇಡಿಯ ತೋಟವನ್ನು ಅಬೂಲುಬಾಬ್ಬರಿಗೆ ನೀಡಿದರು. ತಾಳೆಗಿಡವನ್ನು ಅನಾಥ ಯುವಕನಿಗೆ ಮರಳಿಸಲಾಯಿತು. ಪ್ರವಾದಿ ಬಹಳ ಸಂತುಷ್ಟಗೊಂಡರು. ಪ್ರವಾದಿ ಅಬೂಲುಬಾಬ್ಬರ ವರ್ತನೆಯನ್ನು ಕ್ಷಮಿಸಿದರು.

ಬನೂ ಕುರೈಝಾರ ಮುತ್ತಿಗೆಯ ಸಂದರ್ಭದಲ್ಲಿ ಅಬೂಲಬಾಬ್ಬರನ್ನು ಬನೂಕುರೈಝಾ ಜನರೊಂದಿಗೆ ಮಾತುಕತೆಗಾಗಿ ಪ್ರವಾದಿರವಾನಿಸಿದ್ದರು. ಆದರೆ ಅಬೂಲಬಾಬ್ಬ ಆಕಸ್ಮಿಕವಾಗಿ ಉದ್ದೇಶಪೂರ್ವಕವಿಲ್ಲದೇ ಬನೂಕುರೈಝಾರಿಗೆ ಅವರು ಹತ್ಯೆಯಾಗುವ ವಿಷಯವನ್ನು ತಿಳಿಸಿದರು. ತಮ್ಮ ಈ ಕೃತ್ಯದಿಂದ ಅವಮಾನದ ಭಾವನೆಯಿಂದ ಅಬೂಲಬಬ್ಬ ಪ್ರಾಯಶ್ಚಿತ್ತವಾಗಿ ಮಸ್ಜಿದ್ ನಬವಿಯ ಒಂದು ಕಂಬಕ್ಕೆ ಸ್ವಪ್ರೇರಣೆಯಿಂದ ಹಗ್ಗದಿಂದ ಕಟ್ಟಿಕೊಂಡರು. 6 ದಿನಗಳ ನಂತರ ಪ್ರವಾದಿ ಉಮ್ಮೆ ಸಲ್ಮರ ಮನೆಯಲ್ಲಿ ಇದ್ದಾಗ ಅಲ್ಲಾಹನು ಅಬೂಲಬಾಬ್ಬರ ತಪ್ಪನ್ನು ಕ್ಷಮಿಸಿದನು.

ಪ್ರವಾದಿರ ಮುಖಾರವಿಂದ ಸಂತೋಷದಿಂದ ಅರಳಿತು. ಉಮ್ಮೆ ಸಲ್ಮ, "ಅಲ್ಲಾಹ್ ನಿಮ್ಮನ್ನು ಸದಾ ನಗುತ್ತಲೇ ಇರುವಂತೆ ಮಾಡಲಿ. ನೀವು ಸಂತುಷ್ಟರಾಗಿರುವ ಕಾರಣವೇನು?" ಎಂದು ಪ್ರವಾದಿರನ್ನು ಪ್ರಶ್ನಿಸಿದರು.

"ಅಲ್ಲಾಹ್ ಅಬೂಲಬಾಬ್ಬರ ಪಶ್ಚಾತ್ತಾಪವನ್ನು ಸ್ವೀಕರಿಸಿದ್ದಾನೆ.... ನೀನು ಬಯಸಿದರೆ ಇದನ್ನು ಅವರಿಗೆ ತಿಳಿಸು" ಎಂದು ಪ್ರವಾದಿ ನುಡಿದರು. ಉಮ್ಮೆ ಸಲ್ಮ ತಮ್ಮ ಕೋಣೆಯ ಬಾಗಿಲಿನಿಂದ, "ಅಬೂಲಬಾಬ್ಬ! ನಿಮಗೆ ಶುಭವಾಗಲಿ. ಅಲ್ಲಾಹ್ ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿದ್ದಾನೆ" ಎಂದು ಕೂಗಿ ಹೇಳಿದರು. ಅವರ ಮಾತನ್ನು ಕೇಳಿ ಇಡಿಯ ಮದೀನಾದ ಜನರು ಮಸ್ಜಿದ್ ನಬವಿಗೆ ಧಾವಿಸಿದರು.

ಪ್ರವಾದಿ ಸ್ವತಃ ತಮ್ಮ ಹಸ್ತಗಳಿಂದ ಅಬೂಲಬಾಬ್ಬರ ಹಗ್ಗವನ್ನು ಬಿಚ್ಚಿದರು. ಈ ಘಟನೆಯು ಪ್ರವಾದಿ ಮಾನವೀಯತೆಯಿಂದ ತಮ್ಮ ಸಂಗಾತಿಗಳ ತರಬೇತಿಯನ್ನು ಮಾಡುತ್ತಿದ್ದರು ಎಂಬುದನ್ನು ತೋರಿಸುತ್ತದೆ.

## 11

# ನಮ್ರತೆ, ವಾತ್ಸಲ್ಯ ಮತ್ತು ಕರುಣೆ

ಬಿಡುವಿಲ್ಲದ ಕಾರ್ಯಗಳ ಹೊರತಾಗಿಯೂ, ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಸುತ್ತಲಿನ ಜನರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅವರ ಬಗ್ಗೆ ಸೂಕ್ಷ್ಮ ವಿವರಗಳನ್ನೂ ಅವರು ಪಡೆಯುತ್ತಿದ್ದರು. ಪ್ರವಾದಿ ರಾತ್ರಿಯಲ್ಲಿ ದೀರ್ಘಾವಧಿಯನ್ನು ನಮಾಝ್‌ನಲ್ಲಿ ಕಳೆಯುತ್ತಿದ್ದರು. ಆಯಿಷಾ ಒಮ್ಮೆ ಅವರನ್ನು "ಪ್ರವಾದಿಗಳೇ ನಿಮ್ಮ ಸಕಲ ಪಾಪಗಳನ್ನು ಅಲ್ಲಾಹನು ಕ್ಷಮಿಸಿರುವಾಗ ನೀವು ಇಷ್ಟು ಶ್ರಮಪಟ್ಟು ಆರಾಧನೆಯನ್ನು ಮಾಡುವುದೇಕೆ?" ಎಂದು ಪ್ರಶ್ನಿಸಿದರು. ಅದಕ್ಕೆ ಪ್ರವಾದಿ "ನಾನು ಅಲ್ಲಾಹನ ಕೃತಜ್ಞದಾಸನಾಗುವುದು ಬೇಡವೇ?" ಎಂದು ಉತ್ತರಿಸಿದರು.

ತಮ್ಮಂತೆ ಸಹಾಬಿಗಳು ಕಠಿಣ ರೀತಿಯಲ್ಲಿ ಆರಾಧನೆಗಳನ್ನು ನಿರ್ವಹಿಸು ವುದನ್ನು ಪ್ರವಾದಿ ಇಷ್ಟಪಡುತ್ತಿರಲಿಲ್ಲ. ಈ ರೀತಿ ಮಾಡದಂತೆ ಅನುಯಾಯಿಗಳನ್ನು ತಡೆಯುತ್ತಿದ್ದರು. ಕೆಲ ಸಹಾಬಿಗಳು ಹಗಲಿನಲ್ಲಿ ಉಪವಾಸವಿದ್ದು, ಇಡಿಯ ರಾತ್ರಿ ಆರಾಧನೆಯಲ್ಲಿ ಕಳೆಯ ಬಯಸುತ್ತಿದ್ದರು. ಅವರನ್ನು ಈ ರೀತಿ ಮಾಡದಂತೆ ತಡೆಯುತ್ತಾ ಪ್ರವಾದಿ ನುಡಿದರು.:

"ಕೆಲದಿನಗಳಲ್ಲಿ ಉಪವಾಸವಿಡಿ ಮತ್ತು ಉಳಿದ ದಿನಗಳಲ್ಲಿ ತಿನ್ನಿರಿ. ರಾತ್ರಿಯಲ್ಲಿ ಕೆಲಸಮಯ ನಿದ್ರಿಸಿರಿ ಮತ್ತು ಕೆಲಸಮಯವನ್ನು ಆರಾಧನೆಯಲ್ಲಿ ಕಳೆಯಿರಿ. ನಿಮ್ಮ ದೇಹಕ್ಕೆ ನಿಮ್ಮ ಮೇಲೆ ಹಕ್ಕಿದೆ. ನಿಮ್ಮ ಕಣ್ಣುಗಳಿಗೆ ನಿಮ್ಮ ಮೇಲೆ ಹಕ್ಕಿದೆ."

ಒಮ್ಮೆ ಪ್ರವಾದಿ ಈ ರೀತಿ ಮೂರು ಬಾರಿ ನುಡಿದರು: "ಧರ್ಮವನ್ನು ಕಷ್ಟಕರವನ್ನಾಗಿಸುವವರ ಮೇಲೆ ಅಲ್ಲಾಹನ ಶಾಪವಿರಲಿ!"

ಮತ್ತೊಂದು ಸಂದರ್ಭದಲ್ಲಿ ಪ್ರವಾದಿ ನುಡಿದರು "ಸಂತುಲಿತ ಮಾರ್ಗವನ್ನು

ಅನುಸರಿಸಿರಿ, ಸಂತುಲಿತ ಮಾರ್ಗವನ್ನು ಅನುಸರಿಸಿರಿ. ಸಂತುಲಿತ ಮಾರ್ಗವನ್ನು ಅನುಸರಿಸುವುದರಲ್ಲಿ ನಿಮ್ಮ ಯಶಸ್ಸು ಅಡಗಿದೆ."

ಪ್ರವಾದಿ ಸಹಾಬಿಗಳಿಗೆ ಧೈರ್ಯವನ್ನು ತುಂಬುತ್ತಿದ್ದರು. ಆತ್ಮವಿಶ್ವಾಸದ ಮಾತುಗಳನ್ನಾಡುತ್ತಿದ್ದರು. ಒಂದು ದಿನ ಹಂಝುಲ ಅಬೂಬಕರ್ ಸಿದ್ದೀಕ್‌ರನ್ನು ಭೇಟಿ ಮಾಡಿ "ನಾನು ಕಪಟ ವಿಶ್ವಾಸಿಯಾದೆ, ನಾನು ಕಪಟ ವಿಶ್ವಾಸಿಯಾದೆ" ಎಂದರು. ಅಬೂಬಕರ್ ಸಿದ್ದೀಕ್, ಅವರು ಈ ರೀತಿ ಹೇಳುತ್ತಿರುವುದಕ್ಕೆ ಕಾರಣ ವಿಚಾರಿಸಿದಾಗ, ಹಂಝುಲ, "ನಾನು ಪ್ರವಾದಿರೊಂದಿಗೆ ಇದ್ದಾಗ ನನ್ನ ಸತ್ಯವಿಶ್ವಾಸದ ಸ್ಥಿತಿಯು ಒಂದು ರೀತಿಯದಾಗಿರುತ್ತದೆ. ಆದರೆ ನಾನು ಪ್ರವಾದಿರಿಂದ ದೂರವಿದ್ದು ಲೌಕಿಕ ಕಾರ್ಯಗಳಲ್ಲಿ ಮಗ್ನರಾಗಿರುವಾಗ ನನ್ನ ವಿಶ್ವಾಸದ ಸ್ಥಿತಿಯು ಭಿನ್ನವಾಗಿರುತ್ತದೆ."

ಇದನ್ನು ಕೇಳಿ ಅಬೂಬಕರ್ ಸಿದ್ದೀಕ್, ನನ್ನ ಸ್ಥಿತಿಯೂ ಇದೇ ತರಹದ್ದಾಗಿದೆ ಎಂದರು. ಇಬ್ಬರೂ ಪ್ರವಾದಿರ ಬಳಿಗೆ ಹೋಗಿ ಈ ವಿಷಯವನ್ನು ಪ್ರಸ್ತಾಪಿಸಿದರು. ಪ್ರವಾದಿ ಉತ್ತರಿಸಿದರು:

"ಹೃದಯದಲ್ಲಿ ಸತ್ಯ ವಿಶ್ವಾಸದ ಸ್ಥಿತಿಯು ಸದಾ ಒಂದೇ ಸಮವಾಗಿರುವುದಿಲ್ಲ. ಅದು ಹೆಚ್ಚು, ಕಡಿಮೆಯಾಗುತ್ತಿರುತ್ತದೆ. ಇದೇ ಓರ್ವ ಸತ್ಯವಿಶ್ವಾಸಿಯ ಲಕ್ಷಣವಾಗಿದೆ."

ಮತ್ತೊಂದು ಸಂದರ್ಭದಲ್ಲಿ ಪ್ರವಾದಿ ನುಡಿದರು:

"ಒಳಿತಿನ ಆದೇಶ ನೀಡುವುದು ಸದಕಃವಾಗಿದೆ. ಕೆಡುಕನ್ನು ತಡೆಯುವುದು ಸದಕ:ವಾಗಿದೆ. ಪತ್ನಿಯೊಂದಿಗೆ ಲೈಂಗಿಕ ಕ್ರಿಯೆಯು ಸದಕಃವಾಗಿದೆ."

ಇದನ್ನು ಕೇಳಿದ ಪ್ರವಾದಿರ ಸಂಗಾತಿಗಳಿಗೆ ಆಶ್ಚರ್ಯವಾಯಿತು. ಅವರು ಕೇಳಿದರು: "ಪ್ರವಾದಿಗಳೇ, ಪತ್ನಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆಯೂ ಸದಕಃವಾಗಿದೆಯೇ?"

ಪ್ರವಾದಿ ಹೇಳಿದರು: "ಪತ್ನಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆಯೂ ಸದಕಃವಾಗಿದೆ. ಏಕೆಂದರೆ ನಿಮ್ಮ ಲೈಂಗಿಕ ತೃಷೆಯನ್ನು ನೀಗಿಸಿಕೊಳ್ಳಲು ನೀವು ಪರಸ್ತ್ರೀಯೊಂದಿಗೆ ಸಂಸರ್ಗ ಮಾಡುತ್ತಿದ್ದರೆ ಅದು ಪಾಪಕಾರ್ಯವಾಗುತ್ತಿರಲಿಲ್ಲವೇ?"

ಪ್ರವಾದಿ ಜನರಿಗೆ ಆತ್ಮ ನಿಯಂತ್ರಣದತ್ತ ಆಹ್ವಾನಿಸಿದರು. ಆಧ್ಯಾತ್ಮಿಕತೆ ಎಂದರೆ ನೈಸರ್ಗಿಕ ಬೇಡಿಕೆಗಳನ್ನು ಪೂರೈಸುವುದು ಮತ್ತು ನಿಯಂತ್ರಿಸುವುದಾಗಿದೆ.

ಪಾಪದ ಪ್ರಜ್ಞೆಯಿಂದ ದೂರ ಉಳಿಯುವಂತೆ ಪ್ರವಾದಿ ಅನುಯಾಯಿಗಳಿಗೆ ಬೋಧಿಸಿದರು.

"ತಮ್ಮ ತಪ್ಪುಗಳಿಗೆ ಪ್ರಾಯಶ್ಚಿತ್ತಪಟ್ಟು ಅಲ್ಲಾಹನತ್ತ ಮರಳುವವರನ್ನು ಅಲ್ಲಾಹ್ ಪ್ರೀತಿಸುತ್ತಾನೆ ಮತ್ತು ಅವರನ್ನು ಸಂಸ್ಕರಿಸುತ್ತಾನೆ" ಎಂದರು.

ವಾತ್ಸಲ್ಯ ಮತ್ತು ಕರುಣೆ ಪ್ರವಾದಿರ ಬೋಧನೆಯ ತಿರುಳಾಗಿತ್ತು. ಪ್ರವಾದಿ ನುಡಿಯುತ್ತಿದ್ದರು. "ಅಲ್ಲಾಹ್ ಕರುಣಾಮಯಿಯಾಗಿದ್ದು ಕರುಣೆಯನ್ನು ಮೆಚ್ಚುತ್ತಾನೆ"

ಪ್ರವಾದಿ ಈ ಮಾತನ್ನು ನುಡಿದಿರುವರು

"ಬಲಪ್ರಯೋಗದ ಕಾರ್ಯಗಳಿಗೆ ನೀಡದಿರುವುದನ್ನು ಅಲ್ಲಾಹ ನಮ್ರತೆಯಿಂದ ಮಾಡಿದ ಕಾರ್ಯಗಳಿಗೆ ನೀಡುತ್ತಾನೆ". ಒಂದು ಸಂದರ್ಭದಲ್ಲಿ ಪ್ರವಾದಿ ನುಡಿದರು. "ನಿಮ್ಮ ಸಹೋದರನಲ್ಲಿ ನೀವು ಮೆಚ್ಚದ ಗುಣವನ್ನು ಕಂಡರೆ, ಅದಕ್ಕಾಗಿ 70 ಸಬೂಬುಗಳನ್ನು ಕಂಡುಕೊಳ್ಳಿರಿ. ಯಾವುದೇ ಸಬೂಬು ಕಂಡುಕೊಳ್ಳಲಾಗದಿದ್ದರೆ ಸಬೂಬನ್ನು ನೀವು ಅರಿತುಕೊಳ್ಳಲಾಗಲಿಲ್ಲ ವೆಂದು ಭಾವಿಸಿರಿ."

ಪ್ರವಾದಿ ತಮ್ಮ ಅನುಯಾಯಿಗಳನ್ನು ಬಹಳ ಪ್ರೀತಿಸುತ್ತಿದ್ದರು ಮತ್ತು ಅದನ್ನು ವ್ಯಕ್ತಪಡಿಸುತ್ತಿದ್ದರು. ಅನುಯಾಯಿಗಳಿಗೂ ಪರಸ್ಪರರನ್ನು ಪ್ರೀತಿಸಲು, ಅದನ್ನು ಪ್ರಕಟಿಸಲು ತಿಳಿಸುತ್ತಿದ್ದರು.

"ಯಾರಾದರೂ ತಮ್ಮ ಸಹೋದರನನ್ನು ಅಥವಾ ಸಹೋದರಿಯನ್ನು ಪ್ರೀತಿಸಿದರೆ ಅವರು ಅದನ್ನು ವ್ಯಕ್ತಪಡಿಸಬೇಕು."

ಒಮ್ಮೆ ಪ್ರವಾದಿ, ಮುಆಝ್‌ರ ಕೈಯನ್ನು ಹಿಡಿದು ಅವರ ಕಿವಿಯಲ್ಲಿ ಉಸುರಿದರು.

"ಓ ಮುಆಝ್, ಅಲ್ಲಾಹನಾಣೆ! ನಾನು ನಿನ್ನನ್ನು ಪ್ರೀತಿಸುತ್ತೇನೆ. ಓ ಮುಆಝ್ ಪ್ರತಿ ನಮಾಝಿನ ಬಳಿಕ ಈ ರೀತಿ ಅಲ್ಲಾಹನಲ್ಲಿ ಪ್ರಾರ್ಥಿಸಲು ಮರೆಯಬೇಡ."

"ಅಲ್ಲಾಹ್! ನಿನ್ನನ್ನು ಸ್ಮರಿಸಲು, ನಿನಗೆ ಕೃತಜ್ಞತೆ ಸಲ್ಲಿಸಲು ಮತ್ತು ನಿನ್ನ ಆರಾಧನೆಯನ್ನು ಪರಿಪೂರ್ಣಗೊಳಿಸಲು ನನಗೆ ನೆರವನ್ನು ನೀಡು."

ಈ ರೀತಿ ಯುವ ಮುಆಝ್‌ರಿಗೆ ಪ್ರವಾದಿರ ಪ್ರೀತಿ ಮತ್ತು ಅಧ್ಯಾತ್ಮಿಕ ಬೋಧನೆ, ಎರಡೂ ದೊರೆಯಿತು. ಪ್ರೀತಿಪೂರ್ವಕ ನೀಡಲಾದುದರಿಂದ ಅಧ್ಯಾತ್ಮಿಕ ಬೋಧನೆಯು ಅವರ ಹೃದಯಾಂತರಾಳದಲ್ಲಿ ಇಳಿಯಿತು.

# ಅಸ್ಸುಫಃ

ಕೆಲ ನವ ಮುಸ್ಲಿಮರಿಗೆ ವಾಸಿಸಲು ಮನೆಯಿರದಿದ್ದು, ಇವರು ಮಸ್ಜಿದ್ ನಬವಿಯ ಸುತ್ತುಮುತ್ತ ನೆಲೆಸಿದ್ದರು. ಅನೇಕ ವೇಳೆ ಇವರಿಗೆ ತಿನ್ನಲು ಏನೂ ಇರುತ್ತಿರಲಿಲ್ಲ. ಮುಸ್ಲಿಮರು ನೀಡುತ್ತಿದ್ದ ದಾನ, ಕಾಣಿಕೆಗಳ ಮೇಲೆ ಅವರು ಅವಲಂಬಿತರಾಗಿದ್ದರು. ಈ ಜನರನ್ನು ಅಸ್ಸುಫಃ ಎಂದು ಕರೆಯುತ್ತಿದ್ದರು. ಪ್ರವಾದಿಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಈ ಜನರ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದರು. ಅವರ ಅವಶ್ಯಕತೆಗಳನ್ನು ಪೂರೈಸಲು ಶ್ರಮಿಸುತ್ತಿದ್ದರು.

ಪ್ರವಾದಿ ಉತ್ತರ ನೀಡುವಾಗ, ಅದರ ಒಂದು ವೈಶಿಷ್ಟ್ಯತೆ ಇರುತ್ತಿತ್ತು. ಅಧ್ಯಾತ್ಮಿಕತೆ, ಸತ್ಯವಿಶ್ವಾಸ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಜನರು ಕೇಳುತ್ತಿದ್ದ ಒಂದೇ ಬಗೆಯ ಪ್ರಶ್ನೆಗಳಿಗೆ ಅವರು ಜನರ ತಿಳುವಳಿಕೆ, ಬುದ್ಧಿಮಟ್ಟ, ಹಾಗೂ ಅನುಭವಕ್ಕೆ ಅನುಸಾರವಾಗಿ ವಿಭಿನ್ನ ಉತ್ತರಗಳನ್ನು ನೀಡುತ್ತಿದ್ದರು.

ಪ್ರವಾದಿರ ಬದುಕು ಬಹಳ ಸರಳವಾಗಿದ್ದಿತು. ಅನೇಕ ಸಂದರ್ಭಗಳಲ್ಲಿ ಅವರಿಗೆ ತಿನ್ನಲು ಖರ್ಜೂರವಲ್ಲದೇ ಮತ್ತೇನೂ ಇರುತ್ತಿರಲಿಲ್ಲ. ಅದಾಗ್ಯೂ ಪ್ರವಾದಿ ಜನರ ಅವಶ್ಯಕತೆಗಳ ಬಗ್ಗೆ ಗಮನಹರಿಸುತ್ತಿದ್ದರು; ವಿಶೇಷವಾಗಿ ಅಸ್ಸುಫಃರ ಬಗ್ಗೆ. ಪ್ರವಾದಿರ ಬಳಿ ಜೀವನ ಸಾಮಾಗ್ರಿಗಳು ಏನೂ ಇರದಿದ್ದರೂ ಸಮಾಜದ ನಿರ್ಗತಿಕರು, ಮಹಿಳೆಯರು, ಮಕ್ಕಳು ತಮ್ಮ ಅವಶ್ಯಕತೆಗಳ ಪೂರೈಕೆಗಾಗಿ ಪ್ರವಾದಿರನ್ನೇ ಆಶ್ರಯಿಸುತ್ತಿದ್ದರು. ಪ್ರವಾದಿ ಈ ಜನರ ಒಂದು ಅವಿಭಾಜ್ಯ ಅಂಗವಾಗಿದ್ದರು.

"ನಾನೋರ್ವ ಶಿಕ್ಷಕನಾಗಿ ಕಳುಹಿಸಲ್ಪಟ್ಟಿದ್ದೇನೆ" ಎಂದು ಪ್ರವಾದಿ ಘೋಷಿಸಿದ್ದರು. ಪ್ರವಾದಿ ವಿದ್ಯಾಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣವನ್ನು ಜನರಿಗೆ ತಲುಪುವ ವ್ಯವಸ್ಥೆಯನ್ನು ಮಾಡಿದ್ದರು. ಅಸ್ಸುಫಃ ಇಂತಹ ಒಂದು ಶಿಕ್ಷಣ ಕೇಂದ್ರವಾಗಿದ್ದಿತು. ಅಸ್ಸುಫಃ ಹಗಲಿನಲ್ಲಿ ವಿದ್ಯಾಕೇಂದ್ರ ಮತ್ತು ರಾತ್ರಿಯಲ್ಲಿ ವಿದ್ಯಾರ್ಥಿಗಳ ತಂಗುದಾಣವಾಗಿತ್ತು. ಈ ರೀತಿ ಅಸ್ಸುಫಃ ಇಸ್ಲಾಮಿನ ಪ್ರಥಮ ವಸತಿ ಶಾಲೆ ಆಗಿದ್ದಿತು.

ಪ್ರಖ್ಯಾತ ಸಹಾಬಿ ಮುಆಝ್ ಬಿನ್ ಜಬಲ್‌ರವರನ್ನು ಪ್ರವಾದಿ ಉಪಕುಲಪತಿಯ ಕಾರ್ಯಭಾರಕ್ಕಾಗಿ ನೇಮಿಸಿದ್ದರು. ಮುಆಝ್‌ಬಿನ್ ಜಬಲ್ ಇಸ್ಲಾಮಿಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ್ದರು.

ಅಸ್ಸುಫಃ ವಿದ್ಯಾಕೇಂದ್ರದಲ್ಲಿ ಎರಡು ವಿಧದ ವಿದ್ಯಾರ್ಥಿಗಳಿದ್ದರು. ಕೆಲವರು ಹಗಲಿನಲ್ಲಿ ವಿದ್ಯಾರ್ಜನೆಗಾಗಿ ಬರುತ್ತಿದ್ದರೆ, ಇನ್ನುಳಿದ ವಿದ್ಯಾರ್ಥಿಗಳು ಇತರ ಯಾವುದೇ ಆಶ್ರಯವಿಲ್ಲದ ಕಾರಣ, ಅಲ್ಲಿಯೇ ತಂಗುತ್ತಿದ್ದರು. ಪ್ರವಾದಿ ಈ ಜನರ ಅವಶ್ಯಕತೆಗಳನ್ನು

ಪೂರೈಸಲು ಕ್ರಮವಹಿಸುತ್ತಿದ್ದರು. ಕೆಲವೊಮ್ಮೆ ಸರಕಾರದ ಖಜಾನೆಯಿಂದ ಅವರಿಗೆ ಸಹಾಯ ಧನ ನೀಡಲಾಗುತ್ತಿತ್ತು. ವಿದ್ಯಾರ್ಥಿಗಳು ಸಹ ಸಂಪಾದನೆ ಮಾಡಿ ಆದಷ್ಟು ಸ್ವಾವಲಂಬಿಗಳಾಗಲು ಪ್ರಯತ್ನಿಸುತ್ತಿದ್ದರು.

ಮಸ್ಜಿದ್‌ನಬವಿಯಲ್ಲದೇ, ಮದೀನಾ ಪಟ್ಟಣದಲ್ಲಿ ಇನ್ನೂ ಒಂಬತ್ತು ಮಸೀದಿಗಳನ್ನು ನಿರ್ಮಿಸಲಾಗಿತ್ತು. ಪ್ರತಿಯೊಂದು ಮಸೀದಿಯಲ್ಲಿ ವಿದ್ಯಾರ್ಜನೆಗಾಗಿ ಏರ್ಪಾಟು ಮಾಡಲಾಗಿತ್ತು. ಪ್ರವಾದಿ ಸ್ವತಃ ಜನರಿಗೆ ಶಿಕ್ಷಣವನ್ನು ನೀಡಲು ಉತ್ಸುಕರಾಗಿದ್ದರು. ಅಸ್ಸುಫಃದಲ್ಲಿ ಜನರಿಗೆ ಬೋಧನೆಯನ್ನು ನೀಡುತ್ತಿದ್ದರು. ಇದಲ್ಲದೆ ಮದೀನಾದಿಂದ ಸುಮಾರು 3 ಕಿ.ಮೀ. ದೂರದಲ್ಲಿದ್ದ ಮಸ್ಜಿದ್ ಕುಬಾಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು.

ಬಿಡುವಿಲ್ಲದ ಕಾರ್ಯಗಳ ಹೊರತಾಗಿಯೂ ಪ್ರವಾದಿ ಸ್ವತಃ ಅಸ್ಸುಫಃದಲ್ಲಿ ಉಪನ್ಯಾಸವನ್ನು ಮಾಡುತ್ತಿದ್ದರು. ಅನೇಕ ಸಹಾಬಿಗಳು ಇದರಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಪ್ರವಾದಿ ಅಸ್ಸುಫಃದಲ್ಲಿ ಆಗಮಿಸಿದಾಗ, ಅಲ್ಲಿ ಒಂದು ಗುಂಪು ಚರ್ಚೆಯಲ್ಲಿ ಮತ್ತು ಇನ್ನೊಂದು ಗುಂಪು ಕಲಿಕೆಯಲ್ಲಿ ಮಗ್ನರಾಗಿರುವುದನ್ನು ಕಂಡು ನುಡಿದರು.

"ಈ ಎರಡೂ ಗುಂಪುಗಳು ಒಳ್ಳೆಯ ಕಾರ್ಯದಲ್ಲಿ ನಿರತರಾಗಿದ್ದರೂ, ಕಲಿಕೆಯಲ್ಲಿ ನಿರತರಾಗಿರುವ ಗುಂಪು ಉತ್ತಮವಾಗಿರುವುದು."

ನಂತರ ಪ್ರವಾದಿ ಕಲಿಕೆಯಲ್ಲಿ ತೊಡಗಿದ್ದ ಗುಂಪಿನೊಂದಿಗೆ ಶಾಮೀಲಾದರು. ಒಂದು ಸಂದರ್ಭದಲ್ಲಿ ಪ್ರವಾದಿ ಹೇಳಿದರು

"ರಾತ್ರಿಯಲ್ಲಿ ಒಂದು ಗಂಟೆಯ ಕಾಲ ವಿದ್ಯಾರ್ಜನೆಯಲ್ಲಿ ಕಳೆಯುವುದು ಸಂಪೂರ್ಣ ರಾತ್ರಿಯನ್ನು ಆರಾಧನೆಯಲ್ಲಿ ಕಳೆಯುವುದಕ್ಕಿಂತ ಉತ್ತಮವಾಗಿರುವುದು."

ಮದೀನಾದ ಹೊರವಲಯದ ಪ್ರದೇಶದಲ್ಲಿ ಜನರು ಹೆಚ್ಚು ಹೆಚ್ಚಾಗಿ ಇಸ್ಲಾಮ್ ಸ್ವೀಕರಿಸತೊಡಗಿದಾಗ ಪ್ರವಾದಿ ಈ ನವಮುಸ್ಲಿಮರಿಗೆ ಇಸ್ಲಾಮಿ ಶಿಕ್ಷಣ ನೀಡುವ ಸಲುವಾಗಿ ಕೆಲ ಸಹಾಬಿಗಳನ್ನು ರವಾನಿಸಿದರು. ಅಮ್ರ್‌ರನ್ನು ಯಮನ್‌ನಿನ ಗವರ್ನರ್ ಆಗಿ ನೇಮಿಸಿದಾಗ ಅವರ ಹೊಣೆಗಾರಿಕೆಗಳಲ್ಲಿ ಯಮನ್‌ನಿನ ರಾಜ್ಯಭಾರದೊಂದಿಗೆ ಜನರಿಗೆ ಶಿಕ್ಷಣ ನೀಡುವ ಜವಾಬ್ದಾರಿಯೂ ಸೇರಿತ್ತು.

# ಫಾತಿಮಾ

## (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಮಗಳು ಫಾತಿಮಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಮುಹಮ್ಮದ್‌ರಿಗೆ ಬಹಳ ಆಪ್ತರಾಗಿದ್ದರು. ಅಬೂತಾಲಿಬ್ ಪುತ್ರ ಅಲಿರನ್ನು ಅವರು ವಿವಾಹವಾಗಿದ್ದರು. ಫಾತಿಮಾ ಬಡ ಬಗ್ಗರಿಗೆ ಅಪಾರ ಅನುಕಂಪ ತೋರುತ್ತಿದ್ದರು.

ಪ್ರವಾದಿರಿಗೆ ಜನಿಸಿದ್ದ ಮೂವರು ಪುತ್ರರೂ ಅತಿ ಚಿಕ್ಕ ಪ್ರಾಯದಲ್ಲಿಯೇ ಮರಣವನ್ನು ಹೊಂದಿದ್ದರು. ಪ್ರವಾದಿಯವರ ನಾಲ್ವರು ಪುತ್ರಿಯರೂ ಪ್ರವಾದಿಯವರ ಮೊದಲನೆಯ ಪತ್ನಿ ಖದೀಜಾರವರಿಗೆ ಜನಿಸಿದ್ದರು. ಫಾತಿಮಾ ಕೊನೆಯ ಪುತ್ರಿಯಾಗಿದ್ದರು. ಪ್ರವಾದಿರಿಗೆ ಫಾತಿಮಾರ ಮೇಲೆ ಅಪಾರ ಪ್ರೇಮವಿತ್ತು. ಹೊರ ಪ್ರಯಾಣದಿಂದ ಮರಳಿದಾಗ ಪ್ರತಿಸಲವೂ ಪ್ರವಾದಿ, ಮಸೀದಿಯಲ್ಲಿ ನಮಾಜ್ ನಿರ್ವಹಿಸಿದ ಬಳಿಕ ಮೊಟ್ಟ ಮೊದಲು ಫಾತಿಮಾರ ಮನೆಗೆ ತೆರಳುತ್ತಿದ್ದರು. ಉಮೈರ್‌ರ ಪುತ್ರ ಜುಮೈ ಒಮ್ಮೆ ಆಯಿಷಾರಿಗೆ "ಪ್ರವಾದಿ ಅತ್ಯಧಿಕವಾಗಿ ಯಾರನ್ನು ಪ್ರೀತಿಸುತ್ತಾರೆ" ಎಂದು ಪ್ರಶ್ನಿಸಿದ್ದರು. ಅದಕ್ಕೆ ಆಯಿಷಾ, ಫಾತಿಮಾ ಎಂದು ಉತ್ತರಿಸಿದ್ದರು.

"ಫಾತಿಮಾ ನನ್ನ ಭಾಗವಾಗಿರುವಳು. ಯಾರು ಫಾತಿಮಾಗಳಿಗೆ ನೋವನ್ನುಂಟುಮಾಡುತ್ತಾರೋ ಅವರು ನನಗೆ ನೋವನ್ನುಂಟುಮಾಡುತ್ತಾರೆ" ಎಂದು ಪ್ರವಾದಿ ನುಡಿದಿದ್ದರು.

ಪ್ರವಾದಿ ಮನೆಯಲ್ಲಿರುವಾಗ ಅಥವಾ ಸಾರ್ವಜನಿಕ ಸ್ಥಳದಲ್ಲಿರುವಾಗ, ಫಾತಿಮಾ ಆಗಮಿಸಿದಾಗ ಎದ್ದು ನಿಂತು ಅವರನ್ನು ಸ್ವಾಗತಿಸುತ್ತಿದ್ದರು. ಅರಬರ ಸಂಪ್ರದಾಯದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಾಗುತ್ತಿರಲಿಲ್ಲ. ಪ್ರವಾದಿರ ಫಾತಿಮಾರೊಂದಿಗಿನ ವರ್ತನೆಯು ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು.

ಪ್ರವಾದಿ ಫಾತಿಮಾರನ್ನು ಮುದ್ದಿಸುತ್ತಿದ್ದರು. ಅವರನ್ನು ಸನಿಹದಲ್ಲಿ ಕುಳ್ಳಿರಿಸುತ್ತಿದ್ದರು. ಫಾತಿಮಾರಲ್ಲಿ ಪ್ರವಾದಿ ತಮ್ಮ ಅಂತರಂಗದ ಮಾತುಗಳನ್ನು ಹೇಳುತ್ತಿದ್ದರು. ಒಮ್ಮೆ ಪ್ರವಾದಿ ಗ್ರಾಮೀಣ ಅರಬರ ಮುಂದೆ, ತಮ್ಮ ಮೊಮ್ಮಗ ಹಸನ್‌ರನ್ನು ಮುದ್ದಿಸಿದರು. ಇದನ್ನು ನೋಡಿ ಅವರು ದಿಗ್ಮೂಢಗೊಂಡರು. ಅಲ್‌ಅಕ್ರ ಬಿನ್ ಹಬೀಸ್ ನುಡಿದರು: "ಪ್ರವಾದಿಗಳೇ, ನನಗೆ ಹತ್ತು ಮಕ್ಕಳಿದ್ದು, ಒಮ್ಮೆಯೂ ನಾನು ಯಾವ ಮಗುವಿಗೂ ಮುದ್ದಿಸಿಲ್ಲ".

ಪ್ರವಾದಿ ಉತ್ತರಿಸಿದರು. "ಯಾರು ಇತರರನ್ನು ಪ್ರೀತಿಸುವುದಿಲ್ಲವೋ, ಅಲ್ಲಾಹ್ ಅಂತಹ ವ್ಯಕ್ತಿಗಳನ್ನು ಪ್ರೀತಿಸುವುದಿಲ್ಲ."

ಪ್ರವಾದಿ ತಮ್ಮ ಕಾರ್ಯಗಳಿಂದ ಮತ್ತು ನುಡಿಗಳಿಂದ ಜನರಿಗೆ ಸದ್ವರ್ತನೆ, ಪ್ರೀತಿ, ಅನುಕಂಪ, ಮಕ್ಕಳನ್ನು ಗೌರವಿಸುವುದನ್ನು, ಮಹಿಳೆಯರನ್ನು ಆದರಿಸುವುದನ್ನು ಕಲಿಸಿದರು. ಪ್ರವಾದಿ ಹೇಳಿರುವರು "ನಾನು ಸದ್ವರ್ತನೆಯನ್ನು ಪರಿಪೂರ್ಣಗೊಳಿಸಲು ಕಳುಹಿಸಲ್ಪಟ್ಟಿದ್ದೇನೆ."

ಫಾತಿಮಾ ಬಹಳ ಕರುಣಾಳುವಾಗಿದ್ದರು. ಬಡಜನರಿಗೆ, ನಿರ್ಗತಿಕರಿಗೆ ಸಹಾಯವನ್ನು ಮಾಡುತ್ತಿದ್ದರು. ಅಲಿ ಮತ್ತು ಫಾತಿಮಾ ಬಡತನದಲ್ಲಿ ಜೀವಿಸುತ್ತಿದ್ದರು. ದಿನನಿತ್ಯದ ಬಳಕೆಯ ವಸ್ತುಗಳೂ ಅವರ ಬಳಿ ಇರಲಿಲ್ಲ. ಹೀಗಿರುವಾಗ ಒಮ್ಮೆ ಫಾತಿಮಾ ತಮ್ಮ ತಂದೆ ಮುಹಮ್ಮದ್‌ರ ಬಳಿ ತಮ್ಮ ಕಷ್ಟಗಳನ್ನು ತೋಡಿಕೊಂಡು ಸಹಾಯವನ್ನು ಬೇಡುವ ಅಪೇಕ್ಷೆಯಿಂದ ಹೊರಟರು. ಆದರೆ ಮುಹಮ್ಮದ್‌ರ ಬಳಿ ತಲುಪಿದಾಗ ಅವರಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲಾಗಲಿಲ್ಲ. ಹಾಗೆಯೇ ಹಿಂತಿರುಗಿದರು. ಫಾತಿಮಾ ಬರಿಗೈಯಲ್ಲಿ ಹಿಂತಿರುಗಿರುವುದನ್ನು ಕಂಡು ಅಲಿ ಸ್ವತಃ ಮುಹಮ್ಮದ್‌ರ ಬಳಿ ಸಹಾಯವನ್ನು ಕೇಳುವ ಇಚ್ಛೆಯಿಂದ ಫಾತಿಮಾರೊಂದಿಗೆ ತೆರಳಿದರು. ಅವರ ಮಾತುಗಳನ್ನು ಆಲಿಸಿದ ಪ್ರವಾದಿ, ತಾವು ಅವರಿಗೆ ಯಾವ ಸಹಾಯವನ್ನೂ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಎಂದು ನುಡಿದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಅಲಿ ಮತ್ತು ಫಾತಿಮಾರಿಗೆ ತಾಳ್ಮೆಯನ್ನು ವಹಿಸಲು ತಿಳಿಸಿದರು. ಅಲಿ ಮತ್ತು ಫಾತಿಮಾ ಪ್ರವಾದಿರ ಅಳಿಯ ಮತ್ತು ಮಗಳು ಆಗಿದ್ದರೂ, ಅವರಿಗೆ ಯಾವುದೇ ವಿಶೇಷ ಸವಲತ್ತುಗಳು ಸಿಗಲಿಲ್ಲ.

ಸಂಜೆ ಪ್ರವಾದಿ ಫಾತಿಮಾ ಮನೆಗೆ ತೆರಳಿದರು. ಫಾತಿಮಾ ಬಳಿ ವಾತ್ಸಲ್ಯದಿಂದ ಕುಳಿತ ಪ್ರವಾದಿ ನುಡಿದರು. "ಫಾತಿಮಾ ನೀನು ನನ್ನನ್ನು ಕೇಳಿದ ವಸ್ತುಗಳಿಗಿಂತ ಉತ್ತಮವಾದುದನ್ನು ನಿನಗೆ ಹೇಳಲೇ? ನಮಾಝಿನ ಬಳಿಕ ಹತ್ತು ಸಲ ಸುಬ್ಹಾನಲ್ಲಾ, (ಅಲ್ಲಾಹ ಪರಮ ಪಾವನನು) ಅಲ್‌ಹಮ್‌ದುಲಿಲ್ಲಾಹ್ (ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು) ಅಲ್ಲಾಹು ಅಕ್ಬರ್ (ಅಲ್ಲಾಹ್ ಶ್ರೇಷ್ಠನು) ಎಂದು ಹೇಳು. ದೇವಚರ ಜಿಬ್ರೀಲ್ ಇದನ್ನು ನನಗೆ ಕಲಿಸಿರುವರು. ರಾತ್ರಿ ಮಲಗುವ ಮುನ್ನ ಇವುಗಳನ್ನು 33 ಸಲ ಪಠಿಸಬೇಕು."

ಫಾತಿಮಾ, ಅಲಿ, ರಂತೆ ಅಲ್ಲಾಹನನ್ನು ಭಯಪಡುವವರೂ, ಬಡಜನರಿಗೆ ನಿರ್ಗತಿಕರಿಗೆ ಕರುಣೆ ತೋರುವವರು, ದಾನಧರ್ಮಗಳನ್ನು ಮಾಡುವವರೂ ಆಗಿದ್ದರು. ಫಾತಿಮಾ ಪ್ರವಾದಿರ ಬೋಧನೆಯಂತೆ ನಡೆದುಕೊಂಡರು. ಲೌಕಿಕ ವಸ್ತುಗಳನ್ನು

ಅವರು ಬೇಡಲಿಲ್ಲ. ತಮ್ಮ ಬಳಿ ಇದ್ದ ವಸ್ತುಗಳಲ್ಲಿಯೇ ಅವರು ಸಂತೃಪ್ತರಾದರು. ಇತರರಿಗೆ ಸಹಾಯ ಮಾಡುವುದರಲ್ಲಿ, ದಾನಧರ್ಮ ನೀಡುವುದರಲ್ಲಿ ಅವರು ಕೃತಾರ್ಥತೆಯನ್ನು ಕಂಡುಕೊಂಡರು.

ಒಂದು ಸಂದರ್ಭದಲ್ಲಿ ಪ್ರವಾದಿ ನುಡಿದರು "ಫಾತಿಮಾ, ನೀನು ಪ್ರವಾದಿಯ ಪುತ್ರಿಯಾಗಿರುವ ಕಾರಣದಿಂದ ಸ್ವರ್ಗದಲ್ಲಿ ನಿನಗೆ ಉನ್ನತ ಸ್ಥಾನ ದೊರಕುವುದೆಂದು ನೀನು ಭಾವಿಸಬೇಡ. ನಿನ್ನ ಕರ್ಮಗಳು ಸ್ವರ್ಗದಲ್ಲಿ ನಿನ್ನ ಸ್ಥಾನವನ್ನು ನಿರ್ಧರಿಸುತ್ತವೆ."

ಪ್ರವಾದಿಯ ಸಂತಾನವಾಗಿರುವ ಕಾರಣ ಅಥವಾ ಮಹಾಪುರುಷರ ಸಂತತಿರವರಾಗಿರುವ ಕಾರಣ ಯಾರೂ ಸ್ವರ್ಗವನ್ನು ಪಡೆಯುವುದಿಲ್ಲ, ತಮ್ಮ ತಮ್ಮ ಕರ್ಮಗಳ ಅನುಸಾರ ಜನರು ಪ್ರತಿಫಲವನ್ನು ಪಡೆಯುತ್ತಾರೆ.

ಕೆಲ ವರ್ಷಗಳು ಕಳೆದನಂತರ ಮುಹಮ್ಮದ್ ಮರಣಾಶಯ್ಯೆ ಯಲ್ಲಿದ್ದರು. ಅಲ್ಲಾಹ್ ತಮ್ಮನ್ನು ತನ್ನ ಬಳಿ ಕರೆಸಿಕೊಳ್ಳುತ್ತಿರುವನು ಎಂದು ಮುಹಮ್ಮದ್ ಫಾತಿಮಾರ ಕಿವಿಯಲ್ಲಿ ಉಸುರಿದಾಗ, ಫಾತಿಮಾ ರೋದಿಸಲಾರಂಭಿಸಿದರು. ಮುಹಮ್ಮದ್, ಫಾತಿಮಾರಿಗೆ "ನನ್ನ ಕುಟುಂಬದಲ್ಲಿ ನೀನೇ ಮೊಟ್ಟಮೊದಲು ನನ್ನನ್ನು ಸೇರುವ ವಳಾಗಿರುವಿ" ಎಂದಾಗ ಫಾತಿಮಾ ಸಂತೋಷದಿಂದ ಮಂದಹಾಸ ಬೀರಿದರು.

# ಆಯಿಷಾ

## (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)

ಆಯಿಷಾ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಅತ್ಯಂತ ಪ್ರೀತಿಯ ಮಡದಿಯಾಗಿದ್ದರು. ಅವರು ಪ್ರವಾದಿರ ಮಾರ್ಗದರ್ಶನದಲ್ಲಿ ಬೆಳೆದರು ಮತ್ತು ತರಬೇತಿಯನ್ನು ಹೊಂದಿದರು. ಪ್ರವಾದಿರ ನಿಧನದ ನಂತರ, ಪ್ರವಾದಿರ ದಿನಚರ್ಯೆಗಳ ಬಗ್ಗೆ, ಅವರ ಜೀವನದ ಸೂಕ್ಷ್ಮ ವಿವರಣೆಗಳನ್ನು ಆಯಿಷಾ ಉಲ್ಲೇಖಿಸಿರುವರು. ಪ್ರವಾದಿರನ್ನು ವಿವಾಹವಾದಾಗ ಆಯಿಷಾ ಇನ್ನೂ ಎಳೆಯ ಪ್ರಾಯದವರಾಗಿದ್ದರು. ಪ್ರವಾದಿ, ಆಯಿಷಾ ಎಳೆಯ ಪ್ರಾಯದ ಕಾರಣ, ಅವರ ಆಟ, ವಿನೋದಗಳ ಕಡೆಯೂ ಗಮನ ನೀಡುತ್ತಿದ್ದರು. ಒಮ್ಮೆ ಒಂದು ತಂಡ ಆಗಮಿಸಿ ಪ್ರವಾದಿರ ಕೊಠಡಿಯ ಅಂಗಳದಲ್ಲಿ ವಿವಿಧ ಆಟಗಳನ್ನು, ಸಂಪ್ರದಾಯಿಕ ನೃತ್ಯಗಳನ್ನು ಪ್ರದರ್ಶಿಸಿದರು. ಪ್ರವಾದಿ, ಆಯಿಷಾ ಇವುಗಳನ್ನು ನೋಡಲು ಅನುವಾಗಲೆಂದು ಕೊಠಡಿಯ ಬಾಗಿಲಲ್ಲಿ ನಿಂತರು. ಆಯಿಷಾ, ಪ್ರವಾದಿರ ಹಿಂಬದಿಯಲ್ಲಿ ನಿಂತು ಇದನ್ನು ವೀಕ್ಷಿಸಿದರು.

ಪ್ರವಾದಿ ಆಯಿಷಾ ಬಗ್ಗೆ ಬಹಳ ಪ್ರೀತಿ, ಅನುಕಂಪ ತೋರುತ್ತಿದ್ದರು. ಆಯಿಷಾ ಉಲ್ಲೇಖಿಸಿರುವ ವರದಿಗಳಿಂದ ನಮಗೆ ಇದರ ವಿವರಣೆಗಳು ದೊರೆಯುತ್ತವೆ.

ಆಯಿಷಾ ಮಾದರಿ ಮಹಿಳೆಯಾಗಿದ್ದರು. ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಮಹಿಳೆಯರು ಆಯಿಷಾರನ್ನು ಅನುಕರಿಸಬೇಕೆಂದು ಪ್ರವಾದಿ ನುಡಿದಿದ್ದರು.

ಪ್ರವಾದಿ ಮನೆಯ ಪಕ್ಕದಲ್ಲಿ ಪರ್ಷಿಯ ಮೂಲದ ವ್ಯಕ್ತಿ ವಾಸಿಸುತ್ತಿದ್ದನು. ಒಂದು ದಿನ ಆತನು ಪ್ರವಾದಿರನ್ನು ಊಟಕ್ಕೆ ಆಮಂತ್ರಿಸಿದನು. ಪ್ರವಾದಿ ಆಮಂತ್ರಣವು ಆಯಿಷಾರಿಗೆ ಇಲ್ಲವೇ? ಎಂದು ವಿಚಾರಿಸಿದರು. ಆ ವ್ಯಕ್ತಿಯು, ಔತಣವು ಕೇವಲ ಅವರಿಗೇ ಮಾತ್ರ ಎಂದು ಉತ್ತರಿಸಿದನು. ಪ್ರವಾದಿ ಆಮಂತ್ರಣವನ್ನು ನಿರಾಕರಿಸಿದರು. ಕೆಲ ದಿನಗಳ ಬಳಿಕ ವ್ಯಕ್ತಿ ಪುನಃ ಪ್ರವಾದಿರನ್ನು ಊಟಕ್ಕೆ ಆಹ್ವಾನಿಸಿದನು. ಪ್ರವಾದಿ, ಆಹ್ವಾನವು ಆಯಿಷಾರಿಗೆ ಇಲ್ಲವೇ? ಎಂದು ವಿಚಾರಿಸಿದರು. ಆ ವ್ಯಕ್ತಿ ಇಲ್ಲವೆಂದಾಗ, ಪ್ರವಾದಿ ಆಮಂತ್ರಣವನ್ನು ಸ್ವೀಕರಿಸಲು ಪುನಃ ನಿರಾಕರಿಸಿದರು. ಹೀಗೆ 3 ಸಲ ಪುನರಾವರ್ತಿತವಾಯಿತು. ನಾಲ್ಕನೆಯ ಸಲ, ನೆರೆಮನೆಯವನು ಪುನಃ ಊಟಕ್ಕೆ ಆಹ್ವಾನಿಸಿ ಆಮಂತ್ರಣವು ಪ್ರವಾದಿ ಹಾಗೂ ಆಯಿಷಾ ಇಬ್ಬರಿಗೂ ಇದೆ ಎಂದು ನುಡಿದಾಗ, ಪ್ರವಾದಿ ಸಂತೋಷದಿಂದ ಆಹ್ವಾನವನ್ನು ಸ್ವೀಕರಿಸಿದರು. ಹೀಗೆ ಪ್ರವಾದಿ ಜನರ ನಡವಳಿಕೆಗಳನ್ನು, ತಪ್ಪು ಸಂಪ್ರದಾಯಗಳನ್ನು ನಯ, ನಾಜೂಕು

ರೀತಿಯಲ್ಲಿ ತಿದ್ದುತ್ತಿದ್ದರು.

ಪ್ರವಾದಿರ ಕುಟುಂಬದ ಮಹಿಳೆಯರು ಖದೀಜಾ, ಆಯಿಷಾ, ಮತ್ತು ಪ್ರವಾದಿರ ಇತರ ಪತ್ನಿಯರು, ಪುತ್ರಿಯರು ಸಾಮಾಜಿಕ ಜೀವನದಲ್ಲಿ ಭಾಗವಹಿಸುತ್ತಿದ್ದರು. ಪರ್ದಾದ ಹೆಸರಿನಲ್ಲಿ, ಸಾಮಾಜಿಕ, ರಾಜಕೀಯ, ಆರ್ಥಿಕ ರಂಗಗಳಲ್ಲಿ ಭಾಗವಹಿಸಲು ಅವರು ಹಿಂಜರಿಯುತ್ತಿರಲಿಲ್ಲ. ಯುದ್ಧದಲ್ಲೂ ಅವರು ಭಾಗವಹಿಸಿದ್ದರು.

ಪ್ರವಾದಿ ಮಹಿಳೆಯರ ಸಂಕೋಚ ಮತ್ತು ಲಜ್ಜೆ, ಧಾರ್ಮಿಕ ವಿಷಯಗಳನ್ನು ಅರಿಯುವಲ್ಲಿ ತಡೆಯಾಗದಂತೆ ಕಾಳಜಿ ವಹಿಸಿದ್ದರು. ಮಹಿಳೆಯರು, ತಮ್ಮ ವೈಯಕ್ತಿಕ ಜೀವನದ ಬಗ್ಗೆ ಆಸೆ, ಆಕಾಂಕ್ಷೆಗಳ ಬಗ್ಗೆ ಮುಕ್ತವಾಗಿ ವಿಷಯಗಳನ್ನು ಅರುಹಲು, ಚರ್ಚಿಸಲು ಪ್ರವಾದಿ ಸ್ವಾತಂತ್ರ್ಯವನ್ನು ನೀಡಿದ್ದರು. ಈ ವಿಷಯದಲ್ಲಿ ಆಯಿಷಾ ಅನ್ಸಾರ್ ಮಹಿಳೆಯರನ್ನು ಅವರ ಧೀಮಂತತನಕ್ಕಾಗಿ ಶ್ಲಾಘಿಸುತ್ತಿದ್ದರು.

ಕುರ್‌ಆನ್ ಪ್ರವಾದಿರ ಮೇಲೆ ಅವತೀರ್ಣಗೊಳ್ಳುತ್ತಿದ್ದ ವೇಳೆ ಆಯಿಷಾ ಉಪಸ್ಥಿತರಿರುತ್ತಿದ್ದರು. ಪ್ರವಾದಿ ಕುರ್‌ಆನಿನ ವಿವರಣೆಗಳನ್ನು ಜನರಿಗೆ ನೀಡುತ್ತಿದ್ದಾಗ ಜೊತೆಗಿರುತ್ತಿದ್ದರು. ರಾತ್ರಿಯ ವೇಳೆ ಪ್ರವಾದಿ ಏಕಾಂಗಿಯಾಗಿ ಆರಾಧನೆಯಲ್ಲಿ ತಲ್ಲೀನರಾಗಿರುವಾಗ ಅದನ್ನು ಸಮೀಪದಿಂದ ವೀಕ್ಷಿಸಿದ್ದರು. ಪ್ರವಾದಿರನ್ನು ಕುರ್‌ಆನಿನ ಆಯತ್‌ಗಳ ಬಗ್ಗೆ, ಇಸ್ಲಾಮ್‌ಧರ್ಮದ ಬಗ್ಗೆ ಪ್ರಶ್ನಿಸುತ್ತಿದ್ದರು. ಆಯಿಷಾ ಬಹಳ ಚುರುಕು, ಬುದ್ಧಿವಂತೆಯೂ, ಮೇಧಾವಿಯೂ ಆಗಿದ್ದರು. ಅವರ ಜ್ಞಾಪನಾಶಕ್ತಿಯು ಅಮೋಘವಾಗಿತ್ತು. ಈ ಕಾರಣದಿಂದ 2000ಕ್ಕೂ ಹೆಚ್ಚಿನ ಪ್ರವಾದಿ ವಚನಗಳನ್ನು ಅವರು ಉಲ್ಲೇಖಿಸಿರುವರು. ಇತರ ಸಹಾಬಿಗಳು ವರದಿ ಮಾಡಿರುವ ಕೆಲ ವರದಿಗಳನ್ನು ಅವರು ಸರಿಪಡಿಸಿರುವರು.

ಪ್ರವಾದಿ ಮತ್ತು ಆಯಿಷಾ ಪರಸ್ಪರ ಪ್ರೀತಿಸುತ್ತಿದ್ದರು. ಸಮಾಜಕ್ಕೆ ಆಯಿಷಾ ಒಂದು ಮಾದರಿಯಾಗಿದ್ದರು. ಆಯಿಷಾರ ಕೊಠಡಿಯಲ್ಲಿ ಪ್ರವಾದಿ ತಮ್ಮ ಅಂತಿಮ ಉಸಿರನ್ನು ಎಳೆಯಬಯಸಿದ್ದರು. ಆಯಿಷಾರ ಕೊಠಡಿಯಲ್ಲಿಯೇ ಪ್ರವಾದಿರನ್ನು ದಫನ ಮಾಡಲಾಯಿತು.

# 12

# ಉಹದ್ ಯುದ್ಧ

## ಯಾವುದೂ ಅಂತಿಮವಲ್ಲ

ಬದ್ರ್ ಯುದ್ಧದಲ್ಲಿ ಸೋಲಿನ ಸೇಡನ್ನು ತೀರಿಸಲು ಕುರೈಶ್ ಸೇನೆ ಮದೀನಾದ ಮೇಲೆ ಆಕ್ರಮಣ ಮಾಡಬಹುದೆಂದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನಿರೀಕ್ಷಿಸಿದ್ದರು. ಪ್ರವಾದಿರ ಚಿಕ್ಕಪ್ಪ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್ ಮುಹಮ್ಮದ್‌ರಿಗೆ ಒಂದು ರಹಸ್ಯ ಪತ್ರವನ್ನು ರವಾನಿಸುತ್ತಾರೆ. ಪತ್ರದಲ್ಲಿ ಕುರೈಶರ 3000ಕ್ಕಿಂತಲೂ ಹೆಚ್ಚಿನ ಯೋಧರು ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಮಕ್ಕಾದಿಂದ ರವಾನೆಯಾಗಿರುವ ವಿಷಯವನ್ನು ತಿಳಿಸಿದರು.

ಕುರೈಶ್ ಸೇನೆಯನ್ನು ಎದುರಿಸುವ ಬಗ್ಗೆ ಚರ್ಚಿಸಲು ಪ್ರವಾದಿ ಸಭೆಯನ್ನು ಕರೆದರು. ಸಭೆಯಲ್ಲಿ ಕುರೈಶ್ ಸೇನೆಯನ್ನು ಮದೀನಾದಲ್ಲಿದ್ದು ಕೊಂಡು ಎದುರಿಸುವುದೇ ಅಥವಾ ಮದೀನಾದ ಹೊರಗಡೆ ಬಂದು ಮೈದಾನದಲ್ಲಿ ಎದುರಿಸುವುದೇ ಎಂಬುದರ ಬಗ್ಗೆ ಚರ್ಚೆ ನಡೆಯಿತು. ಪ್ರವಾದಿ ಮತ್ತು ಇತರ ಕೆಲ ಸಹಾಬಿಗಳು ಶತ್ರು ಸೇನೆಯನ್ನು ಮದೀನಾದಲ್ಲಿದ್ದುಕೊಂಡು ಎದುರಿಸುವುದು ಸೂಕ್ತವೆಂಬ ಅಭಿಪ್ರಾಯ ತಾಳಿದರು. ಆದರೆ ಕೆಲ ಯುವ ಸಹಾಬಿಗಳು ಮತ್ತು ವಿಶೇಷವಾಗಿ ಬದ್ರ್ ಯುದ್ಧದಲ್ಲಿ ಪಾಲುಗೊಳ್ಳಲು ಸಾಧ್ಯವಾಗದಿರುವ ಸಹಾಬಿಗಳು ಕುರೈಶ್ ಸೇನೆಯನ್ನು ಮದೀನಾದ ಹೊರಗಡೆ ಎದುರಿಸಬೇಕೆಂದು ವಾದಿಸಿದರು. ಸಮಾಲೋಚನೆಯ ಬಳಿಕ ಕುರೈಶ್ ಸೇನೆಯನ್ನು ಮದೀನಾದ ಹೊರಗಡೆ ಎದುರಿಸಬೇಕೆಂದು ಬಹುಮತದ ಆಧಾರದಲ್ಲಿ ತೀರ್ಮಾನಿಸಲಾಯಿತು.

ಪ್ರವಾದಿ ಕೊಠಡಿಗೆ ತೆರಳಿ ಯುದ್ಧ ಕವಚ ತೊಟ್ಟು, ಖಡ್ಗವನ್ನು ಭುಜದಿಂದ

ನೇತಾಡಿಸಿದರು. ಸ್ವಲ್ಪ ಸಮಯದ ಬಳಿಕ ಮದೀನಾದಿಂದ ಹೊರಬಂದು ಶತ್ರುಸೇನೆಯನ್ನು ಎದುರಿಸಬೇಕೆಂದು ವಾದಿಸಿದ್ದ ಸಹಾಬಿಗಳಿಗೆ, ತಾವು ಪ್ರವಾದಿರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ವಾದಿಸಬಾರದಿತ್ತೆಂದು ಅನಿಸಿತು. ಅವರು ಪ್ರವಾದಿರ ಬಳಿ ತೆರಳಿ, ಮದೀನಾದಲ್ಲಿದ್ದುಕೊಂಡು ಶತ್ರುಗಳನ್ನು ಎದುರಿಸೋಣವೆಂದರು. ಆದರೆ ಪ್ರವಾದಿ, ಒಮ್ಮೆ ಶಸ್ತ್ರಾಸ್ತ್ರಗಳನ್ನು ಧರಿಸಿದ ಬಳಿಕ ಅದನ್ನು ಕಳಚುವುದು ಪ್ರವಾದಿಗೆ ಭೂಷಣವಲ್ಲವೆಂದು ನುಡಿದು ಅವರ ಮಾತನ್ನು ತಳ್ಳಿ ಹಾಕಿದರು.

## ರಣರಂಗಕ್ಕೆ ಪ್ರಯಾಣ

ಮುಸ್ಲಿಮ್ ಸೇನೆ ಮದೀನಾದಿಂದ ಐದು ಕಿ.ಮೀ. ದೂರದಲ್ಲಿರುವ ಉಹದ್‌ಬೆಟ್ಟದ ಕಡೆಗೆ ಹೊರಟಿತು. ಮುಸ್ಲಿಮ್ ಸೇನೆಯಲ್ಲಿ ಒಂದು ಸಾವಿರ ಸೈನಿಕರಿದ್ದರು. ದಾರಿಯಲ್ಲಿ ಕಪಟ ವಿಶ್ವಾಸಿಯಾಗಿದ್ದ ಅಬ್ದುಲ್ಲಾ ಬಿನ್ ಉಬೈ ಮತ್ತು ಅವನ ಮುನ್ನೂರು ಮಂದಿ ಸಂಗಾತಿಗಳು

"ಮದೀನಾದಲ್ಲೇ ಇದ್ದು ಶತ್ರುಗಳನ್ನು ಎದುರಿಸಬೇಕು" ಎಂಬ ತಮ್ಮ ಸಲಹೆಯನ್ನು ಸ್ವೀಕರಿಸದ ಕಾರಣ ತಾವು ಮರಳುತ್ತಿದ್ದೇವೆಂದು ನುಡಿದು ಮದೀನಾ ಹಿಂತೆರಳುತ್ತಾರೆ.

ಪ್ರವಾದಿ ಅನುಭವವಿರದೆ, ಚಿಕ್ಕ ಪ್ರಾಯದವರ ಮಾತಿಗೆ ಮನ್ನಣೆ ನೀಡಿದ್ದಾರೆ ಎಂದು ಅಬ್ದುಲ್ಲಾ ಬಿನ್ ಉಬೈ ಆಕ್ಷೇಪಿಸಿದನು. ಅಬ್ದುಲ್ಲಾ ಬಿನ್ ಉಬೈ ಸಹ ಮುಸ್ಲಿಮರು ಮದೀನಾದಲ್ಲಿದ್ದುಕೊಂಡು ಶತ್ರುಗಳನ್ನು ಎದುರಿಸಬೇಕೆಂದು ಸಲಹೆ ನೀಡಿದ್ದನು. ಅವನ ರಣರಂಗದಿಂದ ತೆರಳುವಿಕೆ ಮುಸ್ಲಿಮ್ ಸೇನೆಯ ಮೇಲೆ ಬಹಳ ಪರಿಣಾಮವನ್ನು ಬೀರಿತು. ಮೊದಲೇ ಕಡಿಮೆ ಸಂಖ್ಯೆಯಲ್ಲಿದ್ದ ಮುಸ್ಲಿಮ್ ಸೇನೆಯ ಸಂಖ್ಯೆ 700 ಕ್ಕೆ ಇಳಿಯಿತು. ಮುಸ್ಲಿಮ್ ಸೇನೆಗೆ ತನ್ನ ರಣತಂತ್ರವನ್ನು ಬದಲಿಸಲೂ ಆಸ್ಪದವಿರಲಿಲ್ಲ. ಅಬ್ದುಲ್ಲಾ ಬಿನ್ ಉಬೈನ ಕಪಟತೆ ಎಲ್ಲರಿಗೂ ತಿಳಿದ ವಿಷಯವೇ ಆಗಿತ್ತು. ಯುದ್ಧದ ವೇಳೆ ರಣರಂಗದಿಂದ ಆತನ ತೆರಳುವಿಕೆ, ಆತನ ಕಪಟತೆಯನ್ನು ಮತ್ತಷ್ಟು ಪ್ರಕಟಿಸಿತು.

ಅಬ್ದುಲ್ಲಾ ಬಿನ್ ಉಬೈನ ಈ ಕೃತ್ಯದಿಂದ ಮುಸ್ಲಿಮ್ ಸೇನೆಯಲ್ಲಿ ಈಗ ಕೇವಲ 700 ಸೈನಿಕರು ಮಾತ್ರವಿದ್ದರು.

ಶತ್ರುಸೇನೆಗೆ ತಮ್ಮ ಚಲನವಲನದ ಯಾವ ಅರಿವೂ ಉಂಟಾಗದಂತೆ ರಹಸ್ಯವಾಗಿ ಮುಸ್ಲಿಮ್ ಸೇನೆ ರಣರಂಗ ತಲುಪಬೇಕಿತ್ತು. ಇದಕ್ಕಾಗಿ ಪ್ರವಾದಿ ಯಾರಿಗೂ ತಿಳಿಯದ ಮಾರ್ಗದಲ್ಲಿ ಹಾದು ಉಹದ್ ಬೆಟ್ಟ ತಲುಪಬಯಸಿದರು. ಇಂತಹ

ನಾಜೂಕು ಕಾರ್ಯಕ್ಕಾಗಿ ಪ್ರವಾದಿ ಓರ್ವ ಮುಸ್ಲಿಮೇತರ ಮಾರ್ಗದರ್ಶಿಯನ್ನು ಆರಿಸಿಕೊಂಡರು. ಈ ಮಾರ್ಗದರ್ಶಿಯು ಬಹಳ ನಿಪುಣನಾಗಿದ್ದನು. ಅವನು ಮುಸ್ಲಿಮ್ ಸೇನೆಯನ್ನು ರಹಸ್ಯ ಮಾರ್ಗದಿಂದ ಉಹದ್ ಬೆಟ್ಟ ತಲುಪಿಸಿದನು.

ಪ್ರವಾದಿ ಮುಸ್ಲಿಮ್ ಸೇನೆಯನ್ನು ಸಜ್ಜುಗೊಳಿಸಿದರು. ಉಹದ್ ಪರ್ವತದ ಕಣಿವೆಯಲ್ಲಿ ಒಂದು ಸಣ್ಣ ಗುಡ್ಡವಿದೆ. ಆ ಗುಡ್ಡದ ಮೇಲೆ ಪ್ರವಾದಿ 50 ಮಂದಿ ಬಿಲ್ಲಾಳುಗಳನ್ನು ನೇಮಿಸಿದರು.

**“**ನಮಗೆ ವಿಜಯವಾಗಲಿ**,** ಅಥವಾ ಸೋಲಾಗಲಿ ನೀವು ನಿಮ್ಮ ಸ್ಥಾನದಿಂದ ಕದಲಬಾರದು. ನಮಗೆ ಸಮರಾರ್ಜಿತ ಸೊತ್ತು ಸಿಗುವುದನ್ನು ನೀವು ಕಂಡರೂ ನಮ್ಮ ಜೊತೆ ಬಂದು ಸೇರಬಾರದು. ನಾವು ಕೊಲ್ಲಲ್ಪಡುತ್ತಿರುವುದನ್ನು ನೀವು ಕಂಡರೂ ನಮ್ಮ ಸಹಾಯಕ್ಕೆ ಬರಬಾರದು**”** ಎಂದು ಈ ಸೇನಾ ತುಕಡಿಗೆ ಆಜ್ಞಾಪಿಸಲಾಯಿತು.

ಯುದ್ಧ ಆರಂಭವಾದಾಗ ಈ ಗುಡ್ಡದ ಬಳಿಯ ಮಾರ್ಗದಿಂದ ಬಂದು ಮುಸ್ಲಿಮ್ ಸೇನೆಯ ಮೇಲೆ ಆಕ್ರಮಣ ಮಾಡಲು ಕುರೈಶ್ ಸೇನೆ ಹವಣಿಸಿತು. ಆದರೆ ಗುಡ್ಡದ ಮೇಲಿದ್ದ ಬಿಲ್ಲಾಳುಗಳು ಬಾಣಗಳ ಸುರಿಮಳೆಯನ್ನು ಸುರಿಸಿದ ಕಾರಣ ಅವರು ತಮ್ಮ ಪ್ರಯತ್ನವನ್ನು ಕೈಬಿಡಬೇಕಾಯಿತು.

## ಉಹದ್ ಯುದ್ಧ

ಎರಡೂ ಸೇನೆಗಳ ನಡುವೆ ಘೋರಯುದ್ಧವು ಆರಂಭವಾಯಿತು. ಹಂತ ಹಂತವಾಗಿ ಮುಸ್ಲಿಮ್ ಸೇನೆ ಪ್ರಾಬಲ್ಯವನ್ನು ಪಡೆಯಿತು. ಕುರೈಶ್ ಸೇನೆ ಮೆಲ್ಲಮೆಲ್ಲನೆ ರಣರಂಗದಿಂದ ಹಿಂತೆರಳಲಾರಂಭಿಸಿತು. ಮುಸ್ಲಿಮ್ ಸೈನಿಕರು ವೀರಾವೇಷದಿಂದ ಹೋರಾಡಿದರು. ಈರ್ವರು ಮಹಿಳೆಯರು ಉಮ್ಮೆ ಸುಲೈಮ್ ಮತ್ತು ಅನ್ಸಾರ್ ಮಹಿಳೆ ನುಸೈಬ್ಬಾ ಖಡ್ಗಗಳನ್ನು ಹಿಡಿದು ಕುರೈಶ್ ಸೇನೆಯ ಮೇಲೆ ಆಕ್ರಮಣ ಮಾಡಿದರು. ನುಸೈಬ್ಬ ಮುಸ್ಲಿಮ್ ಸೈನಿಕರಿಗೆ ನೀರು ಕುಡಿಸಲು ಮತ್ತು ಗಾಯಾಳುಗಳಿಗೆ ಶುಶ್ರೂಷೆ ಮಾಡಲು ಯುದ್ಧ ಭೂಮಿಗೆ ಬಂದಿದ್ದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಹಿಳೆಯರಿಗೆ ಯುದ್ಧದಲ್ಲಿ ಹೋರಾಡಲು ಆಜ್ಞಾಪಿಸಿರಲಿಲ್ಲ. ಆದರೆ ಈ ಮಹಿಳೆಯರ ಸ್ಥೈರ್ಯವನ್ನು, ವೀರಾವೇಶವನ್ನು ಕಂಡು ಅವರನ್ನು ಶ್ಲಾಘಿಸಿದರು.

ಆರಂಭಿಕ ಹಿನ್ನೆಡೆಯ ನಂತರ ಮುಸ್ಲಿಮ್ ಸೇನೆ ಯುದ್ಧದಲ್ಲಿ ಪ್ರಾಬಲ್ಯವನ್ನು ಸ್ಥಾಪಿಸಿತು. ಕುರೈಶ್ ಸೇನೆ ತಮ್ಮ ಸವಾರಿಗಳನ್ನು ಸಾಮಗ್ರಿಗಳನ್ನು ರಣರಂಗದಲ್ಲಿ

ಬಿಟ್ಟು ಪಲಾಯನ ಮಾಡಲಾರಂಭಿಸಿದರು. ಬೆಟ್ಟದ ಮೇಲಿದ್ದ ಬಿಲ್ಲಾಳುಗಳ ತಂಡವು ಕುರೈಶ್ ಸೇನೆಯು ಹಿಮ್ಮೆಟ್ಟುತ್ತಿರುವುದನ್ನು ಕಂಡಿತು. ಬಿಲ್ಲಾಳುಗಳ ಪೈಕಿ ಕೆಲ ಸೈನಿಕರು, "ವಿಜಯವು ಈಗ ಪ್ರಾಪ್ತವಾಗಿದೆ. ನಾವೂ ಸಮರಾರ್ಜಿತ ಸೊತ್ತನ್ನು ಪಡೆಯೋಣ"ವೆಂದು ನಿರ್ಧರಿಸಿದರು. 40 ಬಿಲ್ಲಾಳುಗಳು ಗುಡ್ಡವಿಳಿದು ಬಂದರು.

ಪ್ರವಾದಿರ ಆಜ್ಞೆಯನ್ನು ಇವರು ಮರೆತರು. ಕೆಲವೇ ಬಿಲ್ಲಾಳುಗಳು ಮಾತ್ರ ಈಗ ಗುಡ್ಡದ ಮೇಲೆ ಉಳಿದರು. ಖಾಲಿದ್ ಬಿನ್ ವಲೀದ್ ಚತುರ ಮತ್ತು ಚಾಣಾಕ್ಷ ಯೋಧರಾಗಿದ್ದರು. ಬಿಲ್ಲಾಳುಗಳು ಗುಡ್ಡದಿಂದ ಇಳಿದು ಬರುತ್ತಿರುವುದನ್ನು ನೋಡಿ ಖಾಲಿದ್ ಬಿನ್‌ವಲೀದ್ ಗುಡ್ಡವನ್ನು ಬಳಸಿ, ಮುಸ್ಲಿಮ್ ಸೇನೆಯ ಹಿಂಬದಿಯಿಂದ ಒಮ್ಮೆಗೆ ಆಕ್ರಮಣ ಮಾಡಿದರು. ಅನಿರೀಕ್ಷಿತ ಆಕ್ರಮಣದಿಂದ ಮುಸ್ಲಿಮ್ ಸೇನೆಯಲ್ಲಿ ಗೊಂದಲ ಉಂಟಾಯಿತು. ಯಾರು ಯಾರೊಂದಿಗೆ ಹೋರಾಡುತ್ತಿದ್ದೇವೆ ಎಂಬ ಅರಿವೂ ಇರಲಿಲ್ಲ. ಅನೇಕ ಮುಸ್ಲಿಮ್ ಸೈನಿಕರು ಹತರಾದರು. ಕೆಲ ಸೈನಿಕರು ಯುದ್ಧದಿಂದ ಪಲಾಯನಗೈದರು.

ಪ್ರವಾದಿರ ಮೇಲೆ ಶತ್ರು ಸೈನಿಕರು ಆಕ್ರಮಣ ಮಾಡಿದರು. ಸ್ವಲ್ಪದರಲ್ಲಿಯೇ ಪ್ರವಾದಿ ಹತ್ಯೆಯಿಂದ ಪಾರಾದರು. ಶತ್ರು ಸೈನಿಕ ಎಸೆದ ಕಲ್ಲಿನಿಂದ ಪ್ರವಾದಿರ ಮೇಲಿನ ತುಟಿಯು ಸೀಳಿತು. ಪ್ರವಾದಿರ ಒಂದು ಹಲ್ಲೂ ಸಹ ಮುರಿಯಿತು. ಮತ್ತೊಬ್ಬ ಶತ್ರು ಸೈನಿಕನ ಆಕ್ರಮಣದಿಂದ ಪ್ರವಾದಿರ ತಲೆಗೆ ಬಲವಾದ ಪೆಟ್ಟು ಬಿದ್ದಿತು. ತಲೆಯಿಂದ ರಕ್ತಧಾರಾಕಾರವಾಗಿ ಹರಿಯಿತು. ಪ್ರವಾದಿ ನೆಲದ ಮೇಲೆ ಕುಸಿದು ಬಿದ್ದರು. ಮುಸ್ಲಿಮ್ ಸೈನಿಕರು ಪ್ರವಾದಿರ ರಕ್ಷಣೆಗೆ ಧಾವಿಸಿ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು. ಪ್ರವಾದಿರ ಆರು ಅಂಗರಕ್ಷಕರು ಹತರಾದರು. ಮತ್ತೋರ್ವ ಅಂಗ ರಕ್ಷಕ ಗಂಭೀರವಾಗಿ ಗಾಯಗೊಂಡರು.

ಅಷ್ಟರಲ್ಲಿ ಪ್ರವಾದಿ ಹತರಾಗಿದ್ದಾರೆ ಎಂಬ ವದಂತಿಯು ಕಾಡ್ಗಿಚ್ಚಿನಂತೆ ಹರಡಿತು. ಇದನ್ನು ಕೇಳಿ ಅನೇಕ ಮುಸ್ಲಿಮ್ ಸೈನಿಕರು ಧೈರ್ಯಗುಂದಿದರು. ಮುಸ್ಲಿಮ್ ಸೈನಿಕರ ಗೊಂದಲ ಮತ್ತಷ್ಟು ಹೆಚ್ಚಿತು. ಮುಸ್ಲಿಮ್ ಸೇನೆ ರಣರಂಗದಿಂದ ಹಿಂದೆ ಸರಿಯಿತು. ಯುದ್ಧವು ಕೊನೆಗೊಂಡಿತು. ಕುರೈಶ್ ಸೇನೆಯಲ್ಲಿ 22 ಸೈನಿಕರು ಹತರಾದರು ಮತ್ತು ಮುಸ್ಲಿಮ್ ಸೇನೆಯಲ್ಲಿ 70 ಸೈನಿಕರು ಹತರಾದರು.

# ಸೇಡು

ಬದ್ರ್ ಯುದ್ಧದಲ್ಲಿ ಹತರಾಗಿದ್ದ ತನ್ನ ಸಂಬಂಧಿಕರ ಸೇಡನ್ನು ಅಬೂಸುಫಿಯಾನ್‌ರ ಪತ್ನಿ ಹಿಂದ ಪಡೆಯಬಯಸಿದ್ದಳು. ಹಂಝರನ್ನು ಹತ್ಯೆ ಮಾಡುವುದಕ್ಕಾಗಿ ಆಕೆಯು ಅಬಿಸೀನಿಯಾದ ಖ್ಯಾತಗುರಿಕಾರ ವಹ್‌ಶೀಯನ್ನು ನೇಮಿಸಿದ್ದಳು. ಹಂಝರನ್ನು ವಧಿಸಿದರೆ ಆತನನ್ನು ಸ್ವತಂತ್ರಗೊಳಿಸುವುದಾಗಿ ಮತ್ತು ಬಹಳಷ್ಟು ಉಡುಗೊರೆಗಳನ್ನು ನೀಡುವ ಆಮಿಷವನ್ನು ಆಕೆಯು ನೀಡಿದ್ದಳು. ವಹ್‌ಶೀ ಹೊಂಚುಹಾಕಿ ಕುಳಿತಿದ್ದನು. ಹಂಝ ಯುದ್ಧಭೂಮಿಯಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದಾಗ ಸಮಯ ಸಾಧಿಸಿ, ಗುರಿಯಿಟ್ಟು ಆತನು ಹಂಝರ ಮೇಲೆ ಭರ್ಚಿ ಎಸೆದನು. ಕೂಡಲೇ ಹಂಝ ನೆಲಕ್ಕೆ ಉರುಳಿದರು. ನಂತರ ಯುದ್ಧಭೂಮಿಯಲ್ಲಿ ಹಂಝರ ಮೃತದೇಹವನ್ನು ಹುಡುಕುತ್ತಾ ಬಂದ ಹಿಂದ, ಅವರ ಹೊಟ್ಟೆಯನ್ನು ಬಗೆದು, ಕರುಳನ್ನು ಹೊರತೆಗೆದು ಜಗಿದಳು. ಮೂಗು ಮತ್ತು ಕಿವಿಗಳನ್ನು ಕತ್ತರಿಸಿ ಮಾಲೆಯಾಗಿ ಮಾಡಿ ಕೊರಳಲ್ಲಿ ಧರಿಸಿದಳು. ಹೀಗೆ ತನ್ನ ಸೇಡನ್ನು ಆಕೆಯು ತೀರಿಸಿಕೊಂಡಳು.

ಕುರೈಶರು ರಣರಂಗದಿಂದ ತಮ್ಮ ಮೃತಸೈನಿಕರ ಶವಗಳನ್ನು ತೆಗೆದುಕೊಂಡು ಹೋದರು. ಕೆಲ ಮುಸ್ಲಿಮ್ ಯೋಧರ ಶವಗಳನ್ನು ವಿರೂಪಗೊಳಿಸಲಾಗಿತ್ತು. ಪ್ರವಾದಿ ಹಂಝರ ವಿರೋಪಗೊಂಡ ಶವವನ್ನು ಕಂಡು ಬಹಳ ದುಃಖಿತರಾದರು. ಪ್ರವಾದಿ ಮೃತ ಸೈನಿಕರ ದೇಹವನ್ನು ವಿರೂಪಗೊಳಿಸುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಇದು ಮಾನವ ಘನತೆಯ ವಿರುದ್ಧದ ಕ್ರಮವೆನ್ನುತ್ತಿದ್ದರು.

# ಬಿಳ್ಳಾಳುಗಳ ಅವಿಧೇಯತೆ

ಗುಡ್ಡದ ಮೇಲೆ ನೇಮಿಸಿದ್ದ ಬಿಳ್ಳಾಳುಗಳ ತಂಡದ ಅವಿಧೇಯತೆ ಉಹದ್ ಯುದ್ಧದ ದಿಕ್ಕನ್ನೇ ಬದಲಿಸಿತ್ತು. ಸಮರಾರ್ಜಿತ ಸೊತ್ತನ್ನು ಹೊಂದುವ ಆಸೆಯಲ್ಲಿ ಬಿಳ್ಳಾಳುಗಳು ಇಸ್ಲಾಮಿನ ಬೋಧನೆಗಳನ್ನು, ಪ್ರವಾದಿರ ಆದೇಶವನ್ನು ಮರೆತರು. ಏಕದೇವನಲ್ಲಿ ವಿಶ್ವಾಸ, ನ್ಯಾಯನೀತಿ, ಲೌಕಿಕತೆಯಿಂದ ದೂರವಿರುವಂತೆ ನಿರಂತರ ಬೋಧನೆಗಳನ್ನು ನೀಡಲಾಗಿದ್ದರೂ, ಸಮರಾರ್ಜಿತ ಸೊತ್ತನ್ನು ಕಣ್ಣು ಮುಂದೆ ನೋಡಿ ಬಿಳ್ಳಾಳುಗಳು ಎಲ್ಲವನ್ನೂ ಮರೆತ್ತಿದ್ದರು. ಅಜ್ಞಾನ ಕಾಲದ ಸಂಪ್ರದಾಯದಂತೆ, ಯುದ್ಧಗಳಲ್ಲಿ ವಿಜಯವನ್ನು ಗಳಿಸಿದ ಸಮರಾರ್ಜಿತ ಸೊತ್ತಿನಿಂದ ಅಳೆಯಲಾಗುತ್ತಿತ್ತು. ಉಹದ್ ಯುದ್ಧದಲ್ಲಿ ಬಿಳ್ಳಾಳುಗಳು ಈ ಸಂಪ್ರದಾಯದ ಪ್ರಭಾವದಿಂದ ಅಧ್ಯಾತ್ಮಿಕ ತರಬೇತಿಯನ್ನು ಮರೆತರು.

ಇದರ ಪರಿಣಾಮವಾಗಿ ಮುಸ್ಲಿಮ್ ಸೇನೆ ಖಾಲಿದ್ ಬಿನ್ ವಲೀದ್‌ರ

ರಣತಂತ್ರದಿಂದ ಸೋಲಬೇಕಾಯಿತು. ಈ ಘಟನೆಯ ಕೆಲವೇ ವರ್ಷಗಳ ಬಳಿಕ ಖಾಲಿದ್ ಬಿನ್ ವಲೀದ್ ಇಸ್ಲಾಮ್ ಸ್ವೀಕರಿಸಿ ಮುಸ್ಲಿಮ್ ಸೇನೆಯ 'ಹೀರೋ' ಆದರು. ಉಹದ್ ಯುದ್ಧದ ಈ ಘಟನೆ ಬಹಳ ಬೋಧನಾಯುಕ್ತ ವಾಗಿದೆ. ಮನುಷ್ಯರಿಗೆ ತಮ್ಮ ಗತ ಜೀವನದ ಸಂಪ್ರದಾಯಗಳಿಂದ, ಅನುಭವಗಳಿಂದ ಹೊರಬರುವುದು ಬಹಳ ತ್ರಾಸದ ಕೆಲಸ. ಈ ಘಟನೆಯಿಂದ ಹೊರಹೊಮ್ಮುವ ಮತ್ತೊಂದು ಪಾಠವೆಂದರೆ ಯಾವನೇ ವ್ಯಕ್ತಿಯ ಬಗ್ಗೆ ನಿರ್ದಿಷ್ಟ ನಿಲುವು ತಾಳುವುದು ಸರಿಯಲ್ಲ. ಕೆಲ ಮುಸ್ಲಿಮ್ ಸೈನಿಕರು ಉಹದ್ ಯುದ್ಧದಲ್ಲಿ ತಮ್ಮ ಹಿಂದಿನ ಸಂಪ್ರದಾಯದ ಪ್ರಭಾವಕ್ಕೆ ಸಿಲುಕಿದರು. ಖಾಲಿದ್ ಬಿನ್ ವಲೀದ್ ಈ ಘಟನೆಯ ಕೆಲ ವರ್ಷಗಳ ನಂತರ ಇಸ್ಲಾಮ್ ಸ್ವೀಕರಿಸಿ, ಈ ಮೊದಲು ಅವರ ಬಗ್ಗೆ ತಾಳಲಾಗಿದ್ದ ಎಲ್ಲಾ ಅಭಿಪ್ರಾಯಗಳನ್ನು, ನಿಲುವುಗಳನ್ನು ಸುಳ್ಳಾಗಿಸಿದರು. 'ಯಾವುದೂ ಶಾಶ್ವತವಲ್ಲ' ಎಂಬುದು ವಿನಯತೆಯ ಪಾಠವಾಗಿದೆ. ಅದರಂತೆ, ಯಾವುದೇ ವಿಷಯದ ಬಗ್ಗೆ ಅಂತಿಮ ನಿರ್ಧಾರವನ್ನು ತಾಳಬಾರದೆಂಬುದು ಭವಿಷ್ಯಕ್ಕೆ ಭರವಸೆಯಾಗಿದೆ.

## ಪ್ರವಾದಿ ಮುಹಮ್ಮದ್‌ರ ಕಾರ್ಯತಂತ್ರ

ಮುಸ್ಲಿಮ್ ಸೇನೆಯು ಮದೀನಾ ಹಿಂತಿರುಗಿತು. ಬಿಲ್ಲಾಳುಗಳ ಅವಿಧೇಯತೆ ಯಿಂದಾಗಿ ಅನೇಕ ಮುಸ್ಲಿಮ್ ಯೋಧರು ಹತರಾಗಿದ್ದರು ಮತ್ತು ಗಾಯಾಳುಗಳಾಗಿದ್ದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕುರೈಶ್‌ಸೇನೆಗೆ ಉಹದ್‌ಯುದ್ಧದಲ್ಲಿ ಹೆಚ್ಚಿನ ವಿಜಯ ದೊರಕದಿರುವುದನ್ನು ಮನಗಂಡು ಮದೀನಾದ ಮೇಲೆ ಅವರು ಪುನಃ ಆಕ್ರಮಣ ಮಾಡಬಹುದೆಂದು ಶಂಕಿಸಿದರು. ಆದುದರಿಂದ ಪ್ರವಾದಿ ಮುಸ್ಲಿಮ್ ಸೇನೆಗೆ ಮದೀನಾದಿಂದ 12 ಕಿ.ಮೀ. ದೂರದಲ್ಲಿರುವ ಹಮ್ರ ಎಂಬ ಸ್ಥಳದಲ್ಲಿ ಠಿಕಾಣಿ ಹೂಡಲು ಆಜ್ಞಾಪಿಸಿದರು. ಪ್ರತಿಯೋರ್ವ ಸೈನಿಕನಿಗೂ ರಾತ್ರಿಯ ವೇಳೆ ಕಟ್ಟಿಗೆ ಒಟ್ಟುಗೂಡಿಸಿ ಬೆಂಕಿ ಹಚ್ಚಲು ತಿಳಿಸಿದರು. ಇದರಿಂದ ಶತ್ರುಸೇನೆಗೆ ಮುಸ್ಲಿಮರು ಅಪಾರ ಸಂಖ್ಯೆಯಲ್ಲಿ ಯುದ್ಧಕ್ಕೆ ಸನ್ನದ್ಧರಾಗಿರುವರೆಂಬ ಭಾವನೆ ಮೂಡುತ್ತಿತ್ತು.

ಪ್ರವಾದಿರ ಶಂಕೆಯು ನಿಜವಾಗಿ ಪರಿಣಮಿಸಿತು. ಮಕ್ಕಾಕ್ಕೆ ತೆರಳುತ್ತಿದ್ದ ಕುರೈಶ್ ಸೇನೆಗೆ, ಯುದ್ಧದಲ್ಲಿ ಮುಸ್ಲಿಮ್ ಸೇನೆಯನ್ನು ಸಂಪೂರ್ಣವಾಗಿ ಸದೆ ಬಡಿಯದೇ ಬರಿಗೈಯಲ್ಲಿ ಹಿಂತಿರುಗಿದ ತಪ್ಪಿನ ಅರಿವಾಯಿತು. ಇದೇ ಸಂದರ್ಭದಲ್ಲಿ ಪ್ರವಾದಿ ಮಬಾದ್ ಹೆಸರಿನ ಓರ್ವ ನಾಸ್ತಿಕನನ್ನು ಕುರೈಶ್ ಸೇನೆಯ ಬಳಿ ರವಾನಿಸಿದರು.

ಮಬಾದ್ ಕುರೈಶ್ ಮುಖಂಡರನ್ನು ಭೇಟಿ ಮಾಡಿ, ಮುಸ್ಲಿಮರು ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿರುವರೆಂದು, ಉಹದ್ ಯುದ್ಧದಲ್ಲಿ ಆದ ಹಿನ್ನಡೆಗೆ ಸೇಡು

ತೀರಿಸಿಕೊಳ್ಳಲು ಸರ್ವತ್ಯಾಗಗಳಿಗೆ ಸಿದ್ಧರಾಗಿರುವರೆಂದು ನುಡಿದನು. ಇದನ್ನು ಕೇಳಿ ಮದೀನಾದ ಮೇಲೆ ಆಕ್ರಮಣ ನಡೆಸಬೇಕೆನ್ನುತ್ತಿದ್ದ ಕುರೈಶ್ ನಾಯಕರ ಜಂಘಾಬಲವೇ ಉಡುಗಿಹೋಯಿತು. ಅವರು ಕೂಡಲೇ ಮಕ್ಕಾದ ಹಾದಿಯನ್ನು ಹಿಡಿದರು.

## ಸಮಾಲೋಚನೆ

ಉಹದ್ ಯುದ್ಧದಲ್ಲಿ ನಡೆದ ಘಟನಾವಳಿಗಳಿಂದ ಜರ್ಝರಿತರಾಗಿ, ಮುಸ್ಲಿಮರು ಮದೀನಾ ಹಿಂತೆರಳಿದರು. ಉಹದ್ ಯುದ್ಧದಿಂದ ಅವರು ಬಹಳ ನಿರಾಶರಾಗಿದ್ದರು. ಬಿಳ್ಳಾಳುಗಳ ಅವಿಧೇಯತೆಯ ಕಾರಣ ಅವರು ಸೋಲನ್ನು ಅನುಭವಿಸಬೇಕಾಗಿ ಬಂತು. ಅನೇಕ ಮುಸ್ಲಿಮ್ ಸೈನಿಕರು ಹತರಾದರು. ಪ್ರವಾದಿರನ್ನು ಒಳಗೊಂಡಂತೆ ಅನೇಕ ಸಹಾಬಿಗಳು ಯುದ್ಧದಲ್ಲಿ ಗಾಯ ಗೊಂಡಿದ್ದರು.

ಅನಂತರದ ದಿನಗಳಲ್ಲಿ ಉಹದ್ ಯುದ್ಧ ಕುರಿತಂತೆ ಅಲ್ಲಾಹ್ ಕುರ್‌ಆನಿನ ಸೂಕ್ತಗಳನ್ನು ಅವತೀರ್ಣಗೊಳಿಸಿದನು. ಯುದ್ಧವನ್ನು ಮಾಡುವ ಬಗ್ಗೆ, ಬಿಳ್ಳಾಳುಗಳ ಅವಿಧೇಯತೆ ಬಗ್ಗೆ, ಸಹಾಬಿಗಳ ಹುತಾತ್ಮತೆಯ ಬಗ್ಗೆ ಮತ್ತು ಪ್ರವಾದಿರ ಧೋರಣೆ ಬಗ್ಗೆ ಕುರ್‌ಆನಿನ ಸೂಕ್ತದಲ್ಲಿ ಚರ್ಚಿಸಲಾಯಿತು.

ಬಿಳ್ಳಾಳುಗಳು ಅವಿಧೇಯತೆ ತೋರಿದ್ದರೂ, ಪ್ರವಾದಿ ತಮ್ಮ ಸ್ಥಿಮಿತವನ್ನು ಕಳೆದುಕೊಂಡಿರಲಿಲ್ಲ. ಶಾಂತಚಿತ್ತರಾಗಿಯೇ ಬಿಳ್ಳಾಳುಗಳೊಂದಿಗೆ ವರ್ತಿಸಿದರು. ಕುರ್‌ಆನ್ ಈ ಎಲ್ಲಾ ಘಟನಾವಳಿಗಳನ್ನು ವಿಮರ್ಷಿಸಿತು. ಪ್ರವಾದಿರ ಗುಣ – ತತ್ವಗಳೊಂದಿಗೆ ಗೌರವಾದರ ಇದರೊಂದಿಗೇ ತಮ್ಮ ವರ್ತನೆಯಲ್ಲಿ ಸೌಮ್ಯತೆ!

> "(ಓ ಪೈಗಂಬರರೇ), ನೀವು ಇವರ ಪಾಲಿಗೆ ಅತ್ಯಂತ ಸೌಮ್ಯ ಸ್ವಭಾವಿಯಾಗಿರುವುದು ಅಲ್ಲಾಹನ ಮಹಾಕೃಪೆಯಾಗಿದೆ. ನೀವು ಕಠಿಣ ಸ್ವಭಾವಿ ಮತ್ತು ಕಲ್ಲೆದೆಯವರಾಗಿರುತ್ತಿದ್ದರೆ ಇವರೆಲ್ಲರೂ ನಿಮ್ಮ ಸುತ್ತಮುತ್ತಲಿನಿಂದ ಚದುರಿಹೋಗುತ್ತಿದ್ದರು. ಇವರ ಪ್ರಮಾದಗಳನ್ನು ಕ್ಷಮಿಸಿರಿ, ಇವರ ಪಾಪ ವಿಮೋಚನೆಗಾಗಿ ಪ್ರಾರ್ಥಿಸಿರಿ ಮತ್ತು ಧರ್ಮದ ಕೆಲಸಗಳಲ್ಲಿ ಇವರೊಡನೆ ಸಮಾಲೋಚಿಸಿರಿ. ಆ ಬಳಿಕ, ಯಾವುದಾದರೊಂದು ಅಭಿಪ್ರಾಯದಲ್ಲಿ ನೀವು ದೃಢ ನಿರ್ಧಾರ ತಾಳಿದರೆ, ಅಲ್ಲಾಹನ ಮೇಲೆ ಭರವಸೆಯಿಡಿರಿ. ಅಲ್ಲಾಹನ ಮೇಲೆಯೇ ಭರವಸೆಯಿಟ್ಟು ಕಾರ್ಯವೆಸಗುವವರನ್ನು ಅವನು ಪ್ರೀತಿಸುತ್ತಾನೆ."
> (ಪವಿತ್ರ ಕುರ್‌ಆನ್ 3:159)

ಉಹದ್ ಯುದ್ಧದ ಸಂದರ್ಭದಲ್ಲಿ ಪ್ರವಾದಿರ ಅಭಿಪ್ರಾಯದ ವಿರುದ್ಧ ನಿರ್ಣಯ ತೆಗೆದುಕೊಳ್ಳುವುದರೊಂದಿಗೆ ಘಟನಾವಳಿಗಳು ಆರಂಭಗೊಂಡಿದ್ದವು. ನಂತರ ಬಿಳ್ಗಾಲುಗಳ ತಂಡವು ಪ್ರವಾದಿರ ಆಜ್ಞೆಯನ್ನು ಮೀರಿ ತನ್ನ ಕರ್ತವ್ಯ ಪಾಲನೆಯಲ್ಲಿ ಲೋಪವನ್ನು ಎಸಗಿತ್ತು. ಕುರ್‌ಆನ್ ಮುಸ್ಲಿಮರ ಪ್ರತಿಯೊಂದು ವ್ಯವಹಾರದಲ್ಲಿ ಸಮಾಲೋಚನೆ ಮಾಡುವುದಕ್ಕೆ ಒತ್ತು ನೀಡಿತು. ಸಮಾಲೋಚನೆಯ ನಂತರ ತೆಗೆದುಕೊಂಡ ನಿರ್ಧಾರಕ್ಕೆ ಬದ್ಧರಾಗಿರಬೇಕೆಂದೂ ತಿಳಿಸಲಾಯಿತು.

ಮುಸ್ಲಿಮರು ವ್ಯವಹಾರಗಳನ್ನು ಮಾಡುವಾಗ ಸಲಹೆಗಳನ್ನು ಪಡೆಯುತ್ತಾರೆ. ಈ ತತ್ವವನ್ನು ಎಲ್ಲಾ ಸಂದರ್ಭಗಳಲ್ಲೂ ಮುಸ್ಲಿಮರು ಪಾಲಿಸಬೇಕು.

ಉಹದ್ ಯುದ್ಧದ ವೇಳೆ ಅತ್ಯಂತ ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಪ್ರವಾದಿರ ಗುಣಗಳು ಮುಸ್ಲಿಮರ ಸಹಾಯಕ್ಕೆ ಬಂದವು ಎಂದು ಕುರ್‌ಆನ್ ವಿವರಿಸಿತು. ವಿಶೇಷವಾಗಿ ಬಿಳ್ಗಾಳುಗಳು ಕರ್ತವ್ಯ ಲೋಪವೆಸಗಿದಾಗ, ಪ್ರವಾದಿ ಅವರೊಂದಿಗೆ ಕಠೋರತೆಯಿಂದ ವರ್ತಿಸಲಿಲ್ಲ. ಪ್ರವಾದಿರ ಸೌಮ್ಯ ವರ್ತನೆ ಅವರ ಸಂಗಾತಿಗಳನ್ನು ಸಂತೈಸಿತು. ಅವರ ಮನೋಧಾರ್ಢ್ಯವನ್ನು ಹೆಚ್ಚಿಸಲು ಕಾರಣವಾಯಿತು. ಈ ಘಟನೆಯಿಂದ ಅವರು ಪಾಠವನ್ನು ಕಲಿತರು. ಈ ಅಚಾತುರ್ಯ ಘಟನೆಗೆ ಅವರೇ ಕಾರಣಕರ್ತರಾಗಿದ್ದರೂ, ಅಲ್ಲಾಹ್ ಅವರ ಭಾಗ್ಯದೊಂದಿಗಿದ್ದನು.

☆

# ವಿನಯತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು. "ವಿನಯತೆ ಮತ್ತು ಸೌಜನ್ಯತೆ ಅಲ್ಲಾಹನಿಗೆ ಭಯಭಕ್ತಿ ತೋರುವ ಉಪಾಧಿಗಳಾಗಿವೆ."

ವಿನಯತೆ ಪದವು ಲ್ಯಾಟಿನ್ ಪದ 'ಹೂಮಸ್'ನಿಂದ ಉತ್ಪತ್ತಿಯಾಗಿದ್ದು, ಇದರ ಅರ್ಥ 'ಭೂಮಿ'ಯಾಗಿದೆ. ನಾವು ಮಣ್ಣಿನಿಂದ ಸೃಷ್ಟಿಸಲ್ಪಟ್ಟಿದ್ದು, ಮಣ್ಣಿನ ಕಡೆಗೇ ನಮಗೆ ಮರಳಲಿಕ್ಕಿದೆ. Anglo – Saxon ಸಮಾನಾಂತರದ ಪದದ ಅರ್ಥ 'ಕೆಳ ದರ್ಜೆಯ'ವಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ವಿನಯತೆಯ ಅರ್ಥ ಓರ್ವ ವ್ಯಕ್ತಿಯು ಎಷ್ಟೇ ಶ್ರೇಷ್ಠನಾಗಿದ್ದರೂ, ಅವನು ಮನುಷ್ಯನೇ ಹೊರತು, ಸೃಷ್ಟಿಕರ್ತನಲ್ಲವೆಂಬುದಾಗಿದೆ.

ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹ್ ಹೇಳಿರುವನು.

> "ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಪೃಥ್ವಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ" (ಪವಿತ್ರ ಕುರ್‌ಆನ್ 17:37)

> "ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗೂ ಅಹಂಕಾರಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ."
> (ಪವಿತ್ರ ಕುರ್‌ಆನ್ 31:18)

ಪ್ರವಾದಿ ಮುಹಮ್ಮದ್ ಸದಾ ವಿನಮ್ರತೆಯ ಸಾಕಾರವಾಗಿದ್ದರು. ಪ್ರವಾದಿರ ಮನೆ ಮಣ್ಣಿನ ಇಟ್ಟಿಗೆಗಳಿಂದ ನಿರ್ಮಿತವಾಗಿತ್ತು. ಅದರ ಛಾವಣಿಯು ಖರ್ಜೂರದ ಎಲೆಗಳಿಂದಾಗಿತ್ತು. ಪ್ರವಾದಿ ಸ್ವತಃ ಈ ಮನೆಯ ನಿರ್ಮಾಣದಲ್ಲಿ ಕೈ ಜೋಡಿಸಿದ್ದರು.

ಪ್ರವಾದಿರ ಮಡದಿಯರಿಗಾಗಿ ಮನೆಯಲ್ಲಿ ವಿಭಜನೆಗಳನ್ನು ಮಾಡಲಾಗಿತ್ತು. ಪ್ರವಾದಿರಿಗೆ ವೈಯಕ್ತಿಕ ಕೊಠಡಿ ಯಾವುದೂ ಇರಲಿಲ್ಲ. ಪ್ರವಾದಿ ನಂತರ ತಮಗಾಗಿ ಒಂದು ಪರದೆಯನ್ನು ಹಾಕಿಕೊಂಡರು.

ಪ್ರವಾದಿ ಬಹಳ ಸರಳ ಜೀವನವನ್ನು ನಡೆಸಿದ್ದರು. ಹಗಲಿನಲ್ಲಿ ಅವರಿಗೆ ಬಿಡುವಿಲ್ಲದ ಕಾರ್ಯಗಳಿರುತ್ತಿದ್ದವು. ಅವರು ಏಕಕಾಲದಲ್ಲಿ ಇಸ್ಲಾಮೀ ರಾಷ್ಟ್ರದ ನಾಯಕರೂ, ಮುಖ್ಯ ನ್ಯಾಯಧೀಶರೂ, ಧಾರ್ಮಿಕ ನೇತಾರರೂ ಆಗಿದ್ದರು. ರಾತ್ರಿಯ ಮೂರನೆಯ ಎರಡು ಭಾಗವನ್ನು ಆರಾಧನೆಯಲ್ಲಿ ಕಳೆಯುತ್ತಿದ್ದರು. ಆರಾಧನೆಯಲ್ಲಿ ಅನೇಕ ವೇಳೆ ಅವರ ಕಣ್ಣುಗಳಿಂದ ಅಶ್ರು ಧಾರೆ ಹರಿಯುತ್ತಿತ್ತು. ಕಂಠ ಗದ್ಗತಿತವಾಗುತ್ತಿತ್ತು. ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಲು ಶಕ್ತಿ ನೀಡುವಂತೆ ಅಲ್ಲಾಹನನ್ನು ಬೇಡುತ್ತಿದ್ದರು. ಚಾಪೆ, ಖರ್ಜೂರದ ಎಲೆಗಳನ್ನು ತುಂಬಿರುವ ತಲೆದಿಂಬು, ಮಣ್ಣಿನ ಮಡಿಕೆ ಮತ್ತು ಒಂದು ಕಂಬಳಿ ಇವೇ ಅವರ ಸಂಪತ್ತಾಗಿತ್ತು. ಅವರ ಉಡುಪು ಬಹಳ ಸರಳವಾಗಿತ್ತು. ಅವರ ಉಡುಪು ಅನೇಕ ತೇಪೆಗಳಿಂದ ಕೂಡಿತ್ತು.

ಅವರ ಜೀವನವು ಎಷ್ಟು ಸರಳವಾಗಿತ್ತೆಂದರೆ ಅವರ ಪತ್ನಿಯರು ಒಂದು ಸಂದರ್ಭದಲ್ಲಿ ಪ್ರವಾದಿರಿಗೆ ಉತ್ತಮ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿದ್ದರು. ಆದರೆ ಅವರಿಗೆ ಯಾವ ಹೆಚ್ಚಿನ ಸೌಕರ್ಯವನ್ನು ನೀಡಲಾಗಲಿಲ್ಲ. ಪ್ರವಾದಿ ಎಂದೂ ಮೇಜಿನ ಮೇಲೆ ಊಟ ಮಾಡಲಿಲ್ಲ. ಸದಾ ನೆಲದ ಮೇಲೆ ಅರಬ್ ಸಂಪ್ರದಾಯದಂತೆ ಬಗ್ಗಿ ಕುಳಿತು ಊಟ ಮಾಡುತ್ತಿದ್ದರು. ಯಾವಾಗಲೂ ಊಟಕ್ಕಾಗಿ ತಮ್ಮ ಬಲಕೈಯನ್ನೇ ಉಪಯೋಗಿಸಿದರು. ಊಟ ಮಾಡಲಿಕ್ಕಾಗಿ ಇತರ ವಸ್ತುಗಳನ್ನು ಉಪಯೋಗಿಸಲಿಲ್ಲ. ಪ್ರವಾದಿ ನಿಧನ ಹೊಂದಿದಾಗ ಇಡಿಯ ಜಗತ್ತಿಗೆ ಪ್ರಕಾಶವನ್ನು ಬೀರಿದ್ದ ಅವರ ಮನೆ ಕತ್ತಲೆಯಲ್ಲಿ ಮುಳುಗಿತ್ತು. ಏಕೆಂದರೆ ಮನೆಯಲ್ಲಿ ದೀಪವನ್ನು ಬೆಳಗಲು ಎಣ್ಣೆ ಇರಲಿಲ್ಲ.

ಮುಹಮ್ಮದ್ ಇಸ್ಲಾಮಿ ಸಾಮ್ರಾಜ್ಯದ ಸಾಮ್ರಾಟರಾಗಿದ್ದರೂ, ನಿಧನ ಹೊಂದಿದಾಗ ಕುಟುಂಬದವರಿಗೆ ಯಾವುದೇ ಸ್ವತ್ತನ್ನು ಬಿಟ್ಟಿರಲಿಲ್ಲ. ಕುಟುಂಬದ ಸದಸ್ಯರಿಗೆ 'ಉಯಿಲು' ಸಹ ಬರೆದಿರಲಿಲ್ಲ.

"ನಾವು ಪ್ರವಾದಿಗಳಿಗೆ ಯಾರೂ ವಾರಿಸುದಾರರಿಲ್ಲದಿದ್ದು, ನಾವು ಬಿಟ್ಟಿ ಅಗಲಿರುವ ವಸ್ತುಗಳನ್ನು ದಾನ ಮಾಡಬೇಕು"

ಎಂದು ಪ್ರವಾದಿ ನುಡಿದಿದ್ದರು. ಇವು ವಿಶ್ವದ ಅತ್ಯಂತ ವಿಶಾಲ ಸಾಮ್ರಾಜ್ಯದ ಸಂಸ್ಥಾಪಕ ನಾಯಕನ ಮಾತುಗಳಾಗಿತ್ತು! ಪ್ರವಾದಿರಿಗೆ ಸಧ್ಯದಲ್ಲಿಯೇ ಇಸ್ಲಾಮ್ ಏಷಿಯಾ, ಆಫ್ರಿಕಾ ಮತ್ತು ಯುರೋಪನ್ನು ಕ್ರಮಿಸುವುದು ಎಂಬುದು ತಿಳಿದಿತ್ತು.

# ನಾನೋರ್ವ ಪ್ರಯಾಣಿಕನಂತೆ !

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅರೇಬಿಯಾ ಭೂಭಾಗದ ಸಾಮ್ರಾಟರಾಗಿದ್ದರು. ಇತಿಹಾಸ ಕಂಡರಿಯದ ವಿಧೇಯ ಅನುಯಾಯಿಗಳ ತಂಡವನ್ನು ಹೊಂದಿದ್ದರು. ಆದರೆ ಜೀವನ ಪರ್ಯಂತ ಪ್ರವಾದಿ ಸರಳ ಜೀವನವನ್ನು ನಡೆಸಿದ್ದರು.

ಮುಹಮ್ಮದ್‌ರ ಆಪ್ತ ಸಂಗಾತಿ ಉಮರ್ ಒಂದು ಘಟನೆಯನ್ನು ವಿವರಿಸುತ್ತಾರೆ.

"ಒಮ್ಮೆ ನಾನು ಪ್ರವಾದಿರನ್ನು ಕಾಣಲೆಂದು ಅವರ ಮನೆಗೆ ಹೋದೆ. ಪ್ರವಾದಿ ಖರ್ಜೂರದ ಎಲೆಗಳಿಂದ ತಯಾರಿಸಿದ್ದ ಚಾಪೆಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದರು. ಮೇಲುಡುಪು ಧರಿಸದ ಕಾರಣದಿಂದಾಗಿ ಚಾಪೆಯ ಗುರುತುಗಳು ದೇಹದ ಮೇಲೆ ಮೂಡಿದ್ದವು. ಕಟ್ಟಿಗೆಯ ಒಂದು ಮೇಜು ಮೂಲೆಯಲ್ಲಿತ್ತು. ಮೇಜಿನ ಮೇಲೆ ಸ್ವಲ್ಪ ಪ್ರಮಾಣದ ಬಾರ್ಲಿ! ಇದನ್ನು ನೋಡಿ ನನಗೆ ಸಹಿಸಲಾಗಲಿಲ್ಲ. ನಾನು ರೋಧಿಸಲಾರಂಭಿಸಿದೆ.

ಪ್ರವಾದಿ "ನೀವೇಕೆ ರೋಧಿಸುತ್ತಿರುವಿರಿ?" ಎಂದು ಪ್ರಶ್ನಿಸಿದರು. ನಾನು ಉತ್ತರಿಸಿದೆ.

"ಪ್ರವಾದಿಗಳೇ ಪರ್ಷಿಯಾ ಮತ್ತು ರೋಮ್ ಸಾಮ್ರಾಜ್ಯಗಳ ಸಾಮ್ರಾಟರು ಐಷಾರಾಮಿ ಜೀವನ ನಡೆಸುತ್ತಿರುವಾಗ, ನೀವು ಅಲ್ಲಾಹನ ಪ್ರವಾದಿಯಾಗಿ ಇಷ್ಟು ಕಷ್ಟಗಳನ್ನುಪಡುವುದೇ?"

ನನ್ನ ಮಾತನ್ನು ಕೇಳಿ ಪ್ರವಾದಿ ಎದ್ದು ಕುಳಿತು ಉತ್ತರಿಸಿದರು.

"ಉಮರ್, ನೀವೇನು ಹೇಳ ಬಯಸುತ್ತೀರಿ? ಈ ಜನರು ಐಹಿಕ ಸುಖ ಸಾಧನಗಳನ್ನು ಪಡೆದು, ನಾವು ಪರಲೋಕದ ಯಶಸ್ಸು ಪಡೆಯುವುದನ್ನು ನೀವು ಬಯಸುವುದಿಲ್ಲವೇ?"

ಪ್ರವಾದಿರ ಕೊನೆಗಾಲದಲ್ಲಿ ಇಸ್ಲಾಮೀ ಸಾಮ್ರಾಜ್ಯವು ದೂರದೂರದ ಪ್ರದೇಶಕ್ಕೆ ವ್ಯಾಪಿಸಿತ್ತು. ಮದೀನಾ ಸಂಪತ್ತಿನಿಂದ ತುಂಬಿ ತುಳುಕುತ್ತಿತ್ತು. ಇಂತಹ ಸಂಪತ್ಭರಿತ ದಿನಗಳಲ್ಲೂ ಅರೇಬಿಯಾದ ಸಾಮ್ರಾಟರ ಮನೆಯಲ್ಲಿ ಅನೇಕ ದಿನಗಳವರೆಗೆ ಒಲೆಯು ಉರಿಯುತ್ತಿರಲಿಲ್ಲ. ಪ್ರವಾದಿರ ಕುಟುಂಬವು ಖರ್ಜೂರ ಮತ್ತು ನೀರನ್ನು ಸೇವಿಸಿ ಜೀವಿಸುತ್ತಿತ್ತು. ಹಲವೊಮ್ಮೆ ತಿನ್ನಲು ಸಹ ಏನೂ ದೊರೆಯದೇ ಹಸಿವೆಯಿಂದ ಅನೇಕ ದಿನಗಳನ್ನು ದೂಡುತ್ತಿದ್ದರು. ಎಂದೂ ಪ್ರವಾದಿರ ಮನೆಯಲ್ಲಿ ಆಹಾರ ಸಾಮಾಗ್ರಿಗಳ ಸಂಗ್ರಹಣೆವಿರುತ್ತಿರಲಿಲ್ಲ.

ಪ್ರವಾದಿ ನಿಧನ ಹೊಂದಿದಾಗ ಅವರು ಯಾವ ಸಂಪತ್ತನ್ನು ಹೊಂದಿರಲಿಲ್ಲ. ಪ್ರವಾದಿ ನುಡಿದಿದ್ದರು. "ನಾವು ಪ್ರವಾದಿಗಳಿಗೆ ಯಾರೇ ವಾರಿಸುದಾರರಿರುವುದಿಲ್ಲ. ನಾವು ಬಿಟ್ಟು ಅಗಲುವ ವಸ್ತುಗಳನ್ನು ದಾನ ಮಾಡಬೇಕು."

ಒಮ್ಮೆ ಓರ್ವ ಅನ್ಸಾರ್ ಮಹಿಳೆ ಆಯಿಷಾರ ಕೊಠಡಿಗೆ ಆಗಮಿಸಿದಳು. ಅಲ್ಲಿ ಪ್ರವಾದಿ ಚಾಪೆಯಲ್ಲಿ ಮಲಗುವುದನ್ನು ನೋಡಿ, ಉಣ್ಣೆ ತುಂಬಿರುವ ಮೆತ್ತನೆಯ ಹಾಸಿಗೆಯನ್ನು ತಂದಳು. ಪ್ರವಾದಿ ಇದನ್ನು ಕಂಡು ಈ ಹಾಸಿಗೆ ಎಲ್ಲಿಂದ ಬಂದಿತು? ಎಂದು ವಿಚಾರಿಸಿದಾಗ, ಆಯಿಷಾ, ಓರ್ವ ಅನ್ಸಾರ್ ಮಹಿಳೆ ಇದನ್ನು ನೀಡಿರುವುದಾಗಿ ತಿಳಿಸಿದರು. ಪ್ರವಾದಿ, ಆಯಿಷಾರಿಗೆ ಹಾಸಿಗೆಯನ್ನು ಹಿಂತಿರುಗಿಸಲು ತಿಳಿಸಿದರು. ಆಯಿಷಾ ಹಾಸಿಗೆಯನ್ನು ಇಟ್ಟುಕೊಳ್ಳಲು ಬಯಸಿದಾಗ, ಪ್ರವಾದಿ ನುಡಿದರು: "ಆಯಿಷಾ!, ನಾನು ಇಚ್ಛಿಸುತ್ತಿದ್ದರೆ ಅಲ್ಲಾಹ್ ನನಗೆ ಚಿನ್ನ ಮತ್ತು ಬೆಳ್ಳಿಯ ಪರ್ವತಗಳನ್ನು ನೀಡುತ್ತಿದ್ದನು."

## ಸಹನಶೀಲ

ಒಂದು ದಿನ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಒಂದು ಒರಟು ಚಾಪೆಯ ಮೇಲೆ ವಿಶ್ರಮಿಸುತ್ತಿದ್ದರು. ಚಾಪೆಯ ಗುರುತುಗಳು ಅವರ ದೇಹದ ಮೇಲೆ ಮೂಡಿದ್ದವು. ಪ್ರವಾದಿರ ಕೆಲ ಅನುಯಾಯಿಗಳು "ಪ್ರವಾದಿಗಳೇ, ನೀವು ಅನುಮತಿಸಿದರೆ, ನಾವು ನಿಮಗಾಗಿ ಮೆತ್ತನೆಯ ಒಂದು ಹಾಸಿಗೆಯನ್ನು ತರುವೆವು" ಎಂದರು. ಪ್ರವಾದಿ "ಲೌಕಿಕ ಸುಖ ಸಾಧನಗಳೊಂದಿಗೆ ನನಗೇನು ಸಂಬಂಧ? ನಾನೊಬ್ಬ ಪ್ರಮಾಣಿಕನಿದ್ದಂತೆ. ಪ್ರಯಾಣದ ನಡುವೆ ಸ್ವಲ್ಪ ವಿಶ್ರಮಿಸಿ, ಪುನಃ ನನ್ನ ಪ್ರಯಾಣವನ್ನು ಮುಂದುವರೆಸಬೇಕಿದೆ" ಎಂದು ಉತ್ತರಿಸಿದರು.

ಪ್ರವಾದಿ ಮನೆಯಲ್ಲಿದ್ದಾಗ ಮನೆಕೆಲಸಗಳಲ್ಲಿ ಸಹಕರಿಸುತ್ತಿದ್ದರು ಎಂದು ಆಯಿಷಾ ವರದಿ ಮಾಡಿದ್ದಾರೆ. ಪ್ರವಾದಿ ತಮ್ಮ ಬಟ್ಟೆಗಳನ್ನು ಹೊಲಿಯುತ್ತಿದ್ದರು, ಚಪ್ಪಲಿಯನ್ನು ದುರಸ್ತಿಗೊಳಿಸುತ್ತಿದ್ದರು. ಮೇಕೆಗಳ ಹಾಲನ್ನು ಹಿಂಡುತ್ತಿದ್ದರು, ದನಕರುಗಳಿಗೆ ಮೇವನ್ನು ಹಾಕುತ್ತಿದ್ದರು. ಸಂತೆಗೆ ಹೋಗಿ ಸಾಮಾಗ್ರಿಗಳನ್ನು ತರುತ್ತಿದ್ದರು. ಪ್ರವಾದಿ ಸದಾ ಮಂದಹಾಸ ಬೀರುತ್ತಾ ಕುಟುಂಬದವರೊಂದಿಗೆ ಆತ್ಮೀಯತೆಯೊಂದಿಗೆ ಇರುತ್ತಿದ್ದರು. ಎಲ್ಲಾ ಜನರೊಂದಿಗೂ ಅನ್ಯೋನ್ಯತೆಯಿಂದ ಇರುತ್ತಿದ್ದರು. ಅವರು ಜನರಿಗೆ ತೋರುತ್ತಿದ್ದ ಪ್ರೀತಿಗಿಂತ ಹೆಚ್ಚಿನ ಪ್ರೀತಿಯನ್ನು ಇನ್ನಾರೂ ತೋರುತ್ತಿರಲಿಲ್ಲ.

ಕುದುರೆಯ ಮೇಲೆ ಸವಾರಿ ಮಾಡುವುದನ್ನು ಪ್ರವಾದಿ ಇಷ್ಟಪಡುತ್ತಿದ್ದರು. ಕುದುರೆಯನ್ನು ಸ್ವತಃ ಸ್ವಚ್ಛಗೊಳಿಸುತ್ತಿದ್ದರು.

## ವಿಶೇಷ ಸೌಲಭ್ಯವಿಲ್ಲದ ಜೀವನ

ಜನರೊಂದಿಗೆ ನಡೆಯುವಾಗ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಎಂದೂ, ಜನರ ಮುಂದೆ ಇರುತ್ತಿರಲಿಲ್ಲ. ಇತರ ಜನರನ್ನು ಅಥವಾ ಮಕ್ಕಳನ್ನು ಮುಂದಾಳತ್ವ ವಹಿಸಲು ಬಿಡುತ್ತಿದ್ದರು.

ಸಭೆಗೆ ಆಗಮಿಸಿದಾಗ ಜನರು ಗೌರವ ಪೂರ್ವಕವಾಗಿ ಎದ್ದು ನಿಲ್ಲುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಜನರಿಗೆ ಕುಳಿತ ಸ್ಥಿತಿಯಲ್ಲಿಯೇ ಇರಲು ತಿಳಿಸುತ್ತಿದ್ದರು. ತಮಗಾಗಿ ಪ್ರತ್ಯೇಕ ಸ್ಥಾನವನ್ನು ಕಾಯ್ದಿರಿಸುವುದನ್ನು ಪ್ರವಾದಿ ಮೆಚ್ಚುತ್ತಿರಲಿಲ್ಲ. ಸಭೆಯಲ್ಲಿ ಎಲ್ಲಿ ಸ್ಥಳ ದೊರಕುತ್ತಿತ್ತೋ, ಅಲ್ಲಿ ಕುಳಿತುಕೊಳ್ಳುತ್ತಿದ್ದರು.

"ನಾನೂ ನಿಮ್ಮಂತೆಯೇ ಓರ್ವ ಸಾಮಾನ್ಯ ಮನುಷ್ಯನಾಗಿದ್ದೇನೆ" ಎಂದು ಪ್ರವಾದಿ ಹೇಳುತ್ತಿದ್ದರು. ತಮಗಾಗಿ ವಿಶೇಷ ಸವಲತ್ತುಗಳನ್ನು ಅವರು ಮೆಚ್ಚುತ್ತಿರಲಿಲ್ಲ.

> ಅಲ್ಲಾಹನ ನೈಜದಾಸರು ಭೂಮಿಯ ಮೇಲೆ ಸೌಮ್ಯ ನಡಿಗೆ ನಡೆಯುತ್ತಾರೆ. ತಿಳಿಗೇಡಿಗಳು ವ್ಯರ್ಥ ತಕರಾರಿಗೆ ಬಂದಾಗ "ನಿಮಗೆ ಸಲಾಮ್" ಎಂದು ಬಿಡುತ್ತಾರೆ. (ಕುರ್‌ಆನ್ 25:63)

## ತಾರತಮ್ಯವಿಲ್ಲ

ಒಮ್ಮೆ ಪ್ರಯಾಣದಲ್ಲಿದ್ದಾಗ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಸಂಗಾತಿಗಳಿಗೆ ಒಂದು ಆಡನ್ನು ಕೊಯ್ದು ಅಡುಗೆ ಮಾಡಲು ತಿಳಿಸಿದರು. ಓರ್ವ ಸಂಗಾತಿ ಆಡನ್ನು ಕೊಯ್ದರು, ಮತ್ತೋರ್ವ ಸಂಗಾತಿ ಆಡಿನ ಚರ್ಮವನ್ನು ಸುಲಿದರು. ಇನ್ನೋರ್ವ ಸಂಗಾತಿ ಅಡುಗೆ ಮಾಡಲು ಸಿದ್ಧರಾದರು. ಪ್ರವಾದಿ, ತಾವು ಕಟ್ಟಿಗೆಯನ್ನು ಆರಿಸಿಕೊಂಡು ಬರುವುದಾಗಿ ತಿಳಿಸಿದರು. ಅನುಯಾಯಿಗಳು,

"ಪ್ರವಾದಿಗಳೇ ನಾವೇ ಎಲ್ಲಾ ಕೆಲಸಗಳನ್ನು ಮಾಡುವೆವು" ಎಂದು ಹೇಳಿದಾಗ, ಪ್ರವಾದಿ "ಇದು ಸರಿಯಲ್ಲ. ಇದು ತಾರತಮ್ಯ ಮಾಡಿದಂತಾಗುತ್ತದೆ. ಭೇದಭಾವ ಮಾಡುವುದನ್ನು ಅಲ್ಲಾಹ್ ಮೆಚ್ಚುವುದಿಲ್ಲ" ಎಂದರು. ಪ್ರವಾದಿ ಎಷ್ಟು ವಿನಮ್ರರಾಗಿದ್ದರೆಂದರೆ, ಅವರು ನುಡಿಯುತ್ತಿದ್ದರು: "ಅಲ್ಲಾಹನಾಣೆ! ನಾನು ಪ್ರವಾದಿಯಾಗಿದ್ದರೂ, ನಿರ್ಣಾಯಕದಿನದಂದು ನನ್ನ ಪರಿಣಾಮ ಏನಾಗಬಹುದೆಂದು ನನಗೆ ತಿಳಿದಿಲ್ಲ. ಅದರಂತೆ ನಿಮ್ಮ ಪರಿಣಾಮವೂ ಏನಾಗಬಹುದೆಂದು ನನಗೆ ತಿಳಿದಿಲ್ಲ".

# ಸಹಿಷ್ಣು

ಓರ್ವ ಯಹೂದಿಯಿಂದ ಸ್ವಲ್ಪ ಹಣವನ್ನು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಾಲವಾಗಿ ಪಡೆದಿದ್ದರು. ಸಾಲ ತೀರಿಸಲು ಇನ್ನೂ 2–3 ದಿನಗಳು ಇರುವಾಗಲೇ, ಯಹೂದಿಯು ಆಗಮಿಸಿ, ಪ್ರವಾದಿರ ಅಂಗಿಯನ್ನು ಹಿಡಿದು ಒರಟಾಗಿ ಹಣವನ್ನು ಹಿಂತಿರುಗಿಸುವಂತೆ ಹೇಳುತ್ತಾ, "ಅಬ್ದುಲ್ ಮುತ್ತಲಿಬ್‌ರ ವಂಶಸ್ಥರು ಸಾಲವನ್ನು ಸರಿಯಾಗಿ ಮರುಪಾವತಿ ಮಾಡುವುದಿಲ್ಲ" ಎಂದನು. ಪ್ರವಾದಿ ಶಾಂತಚಿತ್ತರಾಗಿಯೇ, "ಸಾಲವನ್ನು ಮರುಪಾವತಿಸಲು ಇನ್ನೂ ಮೂರು ದಿನಗಳ ಸಮಯಾವಕಾಶವಿದೆಯಲ್ಲ?" ಎಂದರು. ಆದರೆ ಪಕ್ಕದಲ್ಲಿಯೇ ಇದ್ದ ಉಮರ್‌ರಿಗೆ ಯಹೂದಿಯ ಒರಟು ವರ್ತನೆಯಿಂದ ಕೋಪ ಬಂದಿತು. ಅವರು ಯಹೂದಿಯನ್ನು ಜರೆದು ಅವನನ್ನು ಹೊಡೆಯುವುದರಲ್ಲಿದ್ದರು.

ಉಮರ್‌ರನ್ನು ಉದ್ದೇಶಿಸಿ ಪ್ರವಾದಿ ನುಡಿದರು:

"ಝೈದ್ ಮತ್ತು ನಾನು ನಿಮ್ಮಿಂದ ಉತ್ತಮ ವರ್ತನೆಯನ್ನು ನಿರೀಕ್ಷಿಸಿದ್ದೆವು. ಯಹೂದಿಗೆ ಅವನ ಸಾಲನ್ನು ಸಕಾಲಿಕ ಹಿಂತಿರುಗಿಸಬೇಕಾಗಿತ್ತು ಎಂದು ನೀವು ನನಗೆ ತಿಳಿಸಬೇಕಿತ್ತು ಮತ್ತು ಯಹೂದಿಗೆ ಉತ್ತಮ ರೀತಿಯಲ್ಲಿ ಸಾಲದ ಮರುಪಾವತಿ ಕೇಳುವಂತೆ ತಿಳಿಸಬೇಕಿತ್ತು. ಯಹೂದಿಯನ್ನು ನಿಮ್ಮ ಜೊತೆಗೆ ಕರೆದೊಯ್ಯಿರಿ ಮತ್ತು ಅವನಿಗೆ ನೀಡಬೇಕಿರುವ ಸಾಲವನ್ನು ಪಾವತಿಸಿರಿ. ಯಹೂದಿಯನ್ನು ನಿಮ್ಮ ಬೆದರಿಕೆಗಳಿಂದ ಬೆಚ್ಚಿ ಬೀಳುವಂತೆ ಮಾಡಿದುದಕ್ಕಾಗಿ ಅವನಿಗೆ 20 ಸಾಲ್ (ಸುಮಾರು 40 ಕಿಲೋ) ಖರ್ಜೂರಗಳನ್ನು ಹೆಚ್ಚುವರಿ ನೀಡಿರಿ".

ಇಸ್ಲಾಮೀ ಸಾಮ್ರಾಜ್ಯದ ಮುಖ್ಯಸ್ಥನಾಗಿಯೂ ಪ್ರವಾದಿ ಈ ಮಾದರಿಯ ವಿನಯತೆ, ಸಹನೆ, ತಾಳ್ಮೆ ತೋರುತ್ತಿದ್ದುದು ಗಮನಾರ್ಹವಾಗಿದೆ.

# ಸದಾ ನಗುಮುಖ ಮತ್ತು ಸೌಹಾರ್ದಮಯಿ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಜನರೊಂದಿಗೆ ಸಮಾನವಾಗಿ ಬೆರೆಯುತ್ತಿದ್ದರು. ಅವರನ್ನು ಎಷ್ಟೇ ಟೀಕಿಸಿದರೂ, ಪ್ರಚೋದಿಸಿದರೂ, ಪ್ರವಾದಿ ಶಾಂತ ಸ್ಥಿತಿಯನ್ನು ಕಳೆದುಕೊಳ್ಳುತ್ತಿರಲಿಲ್ಲ.

ಒಮ್ಮೆ ಹಳ್ಳಿಗನೋರ್ವನು ಬಂದು ಪ್ರವಾದಿರ ಶಾಲನ್ನು ಜೋರಾಗಿ ಎಳೆದು, "ಮುಹಮ್ಮದ್, ನನಗೆ ಎರಡು ಒಂಟೆಗಳು ಹೋರುವಷ್ಟು ಸಾಮಾನುಗಳನ್ನು ಕೊಡು. ನಿನ್ನ ಬಳಿ ಇರುವ ವಸ್ತುಗಳು ನಿನ್ನದೂ ಅಲ್ಲ, ನಿನ್ನ ಅಪ್ಪನದೂ ಅಲ್ಲ" ಎಂದು ಒರಟಾಗಿ ನುಡಿದನು. ಶಾಲನ್ನು ಎಷ್ಟು ಜೋರಾಗಿ ಎಳೆದಿದ್ದನೆಂದರೆ, ಪ್ರವಾದಿರ

ಕುತ್ತಿಗೆಯ ಮೇಲೆ ಗುರುತು ಮೂಡಿತ್ತು. ಆದರೆ ಪ್ರವಾದಿ ಹಳ್ಳಿಗನ ಈ ವರ್ತನೆಯಿಂದ ಸ್ವಲ್ಪವೂ ಕೋಪಗೊಳ್ಳದೇ "ಎಲ್ಲಾ ವಸ್ತುಗಳೂ ಅಲ್ಲಾಹನಿಗೇ ಸೇರಿವೆ. ನಾನು ಕೇವಲ ಆತನ ದಾಸನಷ್ಟೇ" ಎಂದು ಉತ್ತರಿಸಿದರು. ನಂತರ "ನನ್ನೊಂದಿಗೆ ಈ ರೀತಿ ಒರಟಾಗಿ ವರ್ತಿಸಲು ನಿನಗೆ ಭಯವಾಗಲಿಲ್ಲವೇ" ಎಂದು ಪ್ರವಾದಿ ಆತನನ್ನು ಪ್ರಶ್ನಿಸಿದಾಗ, "ನೀವು ಕೆಟ್ಟ ರೀತಿಯಲ್ಲಿ ಪ್ರತ್ಯುತ್ತರಿಸುವುದಿಲ್ಲ ಎಂಬುದು ನನಗೆ ತಿಳಿದಿತ್ತು" ಎಂದನು.

ಹಳ್ಳಿಗನ ಉತ್ತರವನ್ನು ಕೇಳಿ ಪ್ರವಾದಿ ಮುಗುಳ್ನಗೆ ಬೀರಿ ಆತನಿಗೆ ಒಂದು ಒಂಟೆ ಹೋರುವಷ್ಟು ಬಾರ್ಲಿ ಮತ್ತು ಖರ್ಜೂರವನ್ನು ನೀಡಿದರು.

## ಕರುಣಾಮಯಿ

ಮಸ್ಜಿದ್ ನಬವಿಯನ್ನು ಓರ್ವ ಕರಿಯ ಮಹಿಳೆ ಗುಡಿಸುತ್ತಿದ್ದಳು. ಒಂದು ದಿನ ಆಕೆ ಕಾಣಿಸದಿದ್ದಾಗ, ಆಕೆ ಏಕೆ ಬಂದಿಲ್ಲವೆಂದು ಪ್ರವಾದಿ ವಿಚಾರಿಸಿದರು. ಜನರು, ಆಕೆ ನಿಧನ ಹೊಂದಿರುವುದಾಗಿ ತಿಳಿಸಿದರು. ಪ್ರವಾದಿ, ನನಗೆ ಈ ವಿಷಯವನ್ನು ಮೊದಲೇ ಏಕೆ ಹೇಳಲಿಲ್ಲ ಎಂದು ನುಡಿದು, ಆಕೆಯ ಗೋರಿಯ ಬಳಿ ತೆರಳಿ ಆಕೆಗಾಗಿ ಪ್ರಾರ್ಥಿಸಿದರು.

## ಘನತೆ ಮತ್ತು ಗಾಂಭೀರ್ಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಪ್ರತಿಯೊಂದು ಕಾರ್ಯದಲ್ಲಿ ಘನತೆ ಮತ್ತು ಗಾಂಭೀರ್ಯವನ್ನು ತೋರುತ್ತಿದ್ದರು. ಪ್ರವಾದಿರ ನಡವಳಿಕೆಯ ಬಗ್ಗೆ ಬರೆಯಲು ಪ್ರತ್ಯೇಕ ಒಂದು ಗ್ರಂಥವೇ ಬೇಕಾದೀತು. ಆಯಿಷಾ ಪ್ರವಾದಿರ ಪ್ರೀತಿಯ ಪತ್ನಿಯಾಗಿದ್ದರು. ಜನರು, ಆಯಿಷಾರಿಗೆ, ಪ್ರವಾದಿರ ನಡವಳಿಕೆ ಹೇಗಿತ್ತು? ಎಂದು ವಿಚಾರಿಸಿದಾಗ, ಆಯಿಷಾ, "ನೀವು ಕುರ್‌ಆನ್ ಓದಿಲ್ಲವೇ?" ಎಂದು ಉತ್ತರಿಸಿದ್ದರು. ಅಂದರೆ ಪ್ರವಾದಿರ ನಡವಳಿಕೆ ಸಂಪೂರ್ಣವಾಗಿ ಕುರ್‌ಆನಿನ ಬೋಧನೆಗೆ ಅನುಗುಣವಾಗಿತ್ತು.

ದೊಂಬಿ, ಗದ್ದಲವನ್ನು ಪ್ರವಾದಿ ದ್ವೇಷಿಸುತ್ತಿದ್ದರು. ನಮಾಜ್ ನಿರ್ವಹಿಸಲು ತೆರಳುವಾಗ ಓಡುತ್ತಾ ಹೋಗುವುದರಿಂದ ಅವರು ತಡೆದಿದ್ದರು. ಹಜ್ಜ್ ಸಂದರ್ಭದಲ್ಲಿ ನೂಕು, ಗದ್ದಲ ಉಂಟಾದಾಗ, ಪ್ರವಾದಿ ತಮ್ಮ ಚಾಟಿಯನ್ನು ಎತ್ತಿ, "ಆತುರ ತೋರುವುದು ಸನ್ನಡತೆಯಲ್ಲ" ಎಂದು ನುಡಿದಿದ್ದರು. ಘನತೆ ಮತ್ತು ಗಾಂಭೀರ್ಯವನ್ನು ಪಾಲಿಸಲು ಸೂಚಿಸಿದ್ದರು.

# ಮಾನವತೆಗೆ ವಿಮೋಚನೆ

ಸಾಮಾನ್ಯವಾಗಿ ಯುದ್ಧದಲ್ಲಿ ಜಯಹೊಂದಿದವರು ದರ್ಪವನ್ನು ತೋರುತ್ತಾರೆ ಮತ್ತು ಶತ್ರುಗಳ ಮೇಲೆ ಪ್ರತೀಕಾರ ಪಡೆಯುತ್ತಾರೆ. ಆದರೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಕ್ಕಾದ ವಿಜಯದ ಸಂದರ್ಭದಲ್ಲಿ ಇದಾವುದನ್ನೂ ತೋರಿರಲಿಲ್ಲ. ವಿಜಯಿಯಾಗಿ ಮಕ್ಕಾ ಪ್ರವೇಶಿಸುತ್ತಿದ್ದಾಗ ಪ್ರವಾದಿ ಎಷ್ಟು ವಿನೀತಭಾವ ಪ್ರದರ್ಶಿಸಿದರೆಂದರೆ, ಅವರ ಹಣೆಯು ಒಂಟೆಯ ಬೆನ್ನಿಗೆ ತಾಗುತ್ತಿತ್ತು. ಕಅಬಃದ ಬಾಗಿಲ ಬಳಿ ನಿಂತು ಪ್ರವಾದಿ ನುಡಿದರು:

"ಅಲ್ಲಾಹನಲ್ಲದೇ ಆರಾಧನೆಗೆ ಮತ್ತಾರೂ ಅರ್ಹರಿಲ್ಲ. ಆತನು ತನ್ನ ವಾಗ್ದಾನವನ್ನು ಪೂರ್ಣಗೊಳಿಸಿ ತನ್ನ ದಾಸನಿಗೆ ಜಯವನ್ನು ನೀಡಿದನು. ಅಲ್ಲಾಹನೊಬ್ಬನೇ ಶತ್ರುಗಳನ್ನು ಮಣಿಸಿದನು."

ಮುಹಮ್ಮದ್ ಮಕ್ಕಾದಲ್ಲಿ ವಿಜಯ ಸಾಧಿಸಿದುದಕ್ಕಾಗಿ ತಮ್ಮನ್ನು ತಾವೇ ಶ್ಲಾಘಿಸಿಕೊಳ್ಳಲಿಲ್ಲ. ವಿಜಯಕ್ಕೆ ಅಲ್ಲಾಹನು ಕಾರಣನು ಎಂದು ಅವರು ಸಾರಿದರು.

# ನಾನು ಅಲ್ಲಾಹನ ದಾಸ

ಒಂದು ಸಂದರ್ಭದಲ್ಲಿ ಓರ್ವ ಸಹಾಬಿ, "ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿ ಇಚ್ಛಿಸಿದರೆ..." ಎಂದು ನುಡಿದರು.

ಇದರಿಂದ ಕೋಪಗೊಂಡ ಪ್ರವಾದಿ, ಸಹಾಬಿಯನ್ನು ಉದ್ದೇಶಿಸಿ, "ನೀವು ನನ್ನನ್ನು ಅಲ್ಲಾಹನೊಂದಿಗೆ ಸಮವಾಗಿಸುವಿರಾ? ಕೇವಲ ಅಲ್ಲಾಹ್ ಬಯಸಿದರೆ ಮಾತ್ರ ಎಂದು ಹೇಳಿ" ಎಂದರು.

ತಮ್ಮ ಮರಣಾನಂತರ ತಮ್ಮ ಗೋರಿಯನ್ನು ಆರಾಧನಾಲಯವನ್ನಾಗಿಸ ಬಾರದೆಂದು ಪ್ರವಾದಿ ತಾಕೀತು ಮಾಡಿದ್ದರು. ಪ್ರವಾದಿಗಳ ಗೋರಿಗಳನ್ನು ಆರಾಧನಾಲಯವನ್ನಾಗಿಸುವವರ ಮೇಲೆ ಶಾಪವಿರಲಿ ಎಂದು ಪ್ರವಾದಿ ನುಡಿದಿದ್ದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು.

"ಕ್ರೈಸ್ತರು ಯೇಸುಕ್ರಿಸ್ತರನ್ನು ಪ್ರಶಂಸಿಸಿದಂತೆ ನೀವು ನನ್ನನ್ನು ಪ್ರಶಂಸಿಸಬಾರದು. ನೀವು ನನ್ನನ್ನು 'ಅಲ್ಲಾಹನ ದಾಸ' ಮತ್ತು 'ಅಲ್ಲಾಹನ ಪ್ರವಾದಿ' ಎಂದು ಕರೆದರೆ ಸಾಕು. (ಅಲ್ಲಾಹನ ಪುತ್ರನೆಂದೋ ಅಥವಾ ವಿಶೇಷ ದೈವಿಕ ಶಕ್ತಿಗಳನ್ನು ಹೊಂದಿರುವನೆಂದೋ ಹೇಳಬಾರದು).

13

# ಕಂದಕ, ವಿದ್ರೋಹ ಮತ್ತು ಜಾಣ್ಮೆ

ಉಹದ್ ಯುದ್ಧವು ಮುಸ್ಲಿಮರ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿತ್ತು. ಮುಸ್ಲಿಮರು ಬಲಹೀನರೆಂದು ಬಗೆದು ಮದೀನಾದ ಸುತ್ತಮುತ್ತಲಿನ ಬುಡಕಟ್ಟುಗಳು ಮದೀನಾದ ಮೇಲೆ ಆಕ್ರಮಣ ಮಾಡಲು ಯತ್ನಿಸಿದವು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸೇನಾತುಕಡಿಗಳನ್ನು ರವಾನಿಸಿ ಈ ಆಕ್ರಮಣಗಳನ್ನು ಎದುರಿಸಿದರು. ಮದೀನಾದ ಮೇಲೆ ಆಕ್ರಮಣ ಮಾಡದಂತೆ ಕೆಲ ಬುಡಕಟ್ಟುಗಳ ಮನ ಒಲಿಸಿಕೊಳ್ಳಲಾಯಿತು. 4ನೇ ಹಿಜರಿ ವರ್ಷವು ಇಂತಹ ಘಟನೆಗಳಿಂದಲೇ ತುಂಬಿತ್ತು (ಕ್ರಿ.ಶ. 626).

ಮದೀನಾ ಮೇಲೆ ಆಕ್ರಮಣದ ಮಾಹಿತಿ ದೊರೆತಾಗ, ಪ್ರವಾದಿ 100–150 ಸೈನಿಕರುಳ್ಳ ತುಕಡಿಗಳನ್ನು ಕಳುಹಿಸಿ ಆಕ್ರಮಣವನ್ನು ತಡೆಯುತ್ತಿದ್ದರು, ಇಲ್ಲವೇ ಬುಡಕಟ್ಟಿನವರನ್ನು ಸಮಾಧಾನ ಪಡಿಸುತ್ತಿದ್ದರು.

ಈ ಸಣ್ಣ ಪ್ರಮಾಣದ ಆಕ್ರಮಣಗಳು ಕೆಲವೊಮ್ಮೆ ಮೈತ್ರಿಗಳನ್ನು ಬದಲಿಸಿದರೆ ಕೆಲವೊಮ್ಮೆ ಮೈತ್ರಿಗಳನ್ನು ಮುಂದುವರೆಸಲು ನೆರವಾಗುತ್ತಿದ್ದವು. ಮಕ್ಕಾದ ಕುರೈಶರ ಮತ್ತು ಮದೀನಾದ ಮುಸ್ಲಿಮರ ನಡುವೆ ಇದು ಒಂದು ತರಹದ 'ಚೆಸ್' ಆಟವಾಗಿತ್ತು. ಉಭಯೇತ್ರರಿಗೂ ಸಧ್ಯದಲ್ಲಿಯೇ ದೊಡ್ಡ ಪ್ರಮಾಣದ ಯುದ್ಧ ಸಂಭವಿಸಲಿರುವ ಬಗ್ಗೆ ಅರಿವಿತ್ತು. ಮಕ್ಕಾದ ಕುರೈಶರು, ಅರೇಬಿಯಾ ಪ್ರದೇಶದಿಂದ ಮುಸ್ಲಿಮರ ಅಸ್ತಿತ್ವವನ್ನು ಅಳಿಸಿ ಹಾಕುವ ತಮ್ಮ ಉತ್ಕಟಾಂಕ್ಷೆಯನ್ನು ಬಚ್ಚಿಟ್ಟಿರಲಿಲ್ಲ.

ಇತ್ತ ಕುರೈಶರು ಮುಸ್ಲಿಮರ ಅಸ್ತಿತ್ವವನ್ನೇ ಅಳಿಸಲು ಶತಾಯಗತಾಯ ಪ್ರಯತ್ನಗಳನ್ನು ನಡೆಸಲಾರಂಭಿಸಿದರು. ಈ ದಿಸೆಯಲ್ಲಿ ಸುತ್ತಮುತ್ತಲಿನ ಬುಡಕಟ್ಟುಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾರಂಭಿಸಿದರು. ಮಕ್ಕಾದಿಂದ

ಇರಾಕ್ ಮತ್ತು ಸಿರಿಯಾಕ್ಕೆ ವ್ಯಾಪಾರದ ಮಾರ್ಗಗಳು ಮದೀನಾದ ಮುಸ್ಲಿಮರ ನಿಯಂತ್ರಣದಲ್ಲಿಯೇ ಇತ್ತು. ಈ ಕಾರಣದಿಂದ ಕುರೈಶರು ಆದಷ್ಟು ಬೇಗ ಮದೀನಾದ ಮೇಲೆ ಆಕ್ರಮಣ ಮಾಡಿ ತಮ್ಮ ವ್ಯಾಪಾರಕ್ಕೆ ಇರುವ ಆತಂಕದಿಂದ ನಿಶ್ಚಿಂತರಾಗಬಯಸಿದ್ದರು.

## ಮೈತ್ರಿಗಳು

ಅರೇಬಿಯಾದ ಕೆಲ ಬುಡಕಟ್ಟುಗಳು ಮತ್ತು ಕುರೈಶರು ಜತೆಗೂಡಿ ಮದೀನಾದ ಮೇಲೆ ಆಕ್ರಮಣ ಮಾಡಲು ಭಾರಿ ಪ್ರಮಾಣದ ತಯಾರಿ ಆರಂಭಿಸಿದರು. ಬನು ನಝೀರ್ ಗೋತ್ರದ ಮುಖಂಡರು ಖೈಬರ್ ಪ್ರಾಂತ್ಯದ ಯಹೂದಿ ಮುಖಂಡರೊಡನೆ ಮಕ್ಕಾ ತೆರಳಿ ಕುರೈಶರಿಗೆ ಮದೀನಾದ ಮೇಲೆ ಆಕ್ರಮಣ ಮಾಡುವಂತೆ ಹುರಿದುಂಬಿಸಿದರು. ಬನು ನಝೀರ್, ಅಸದ್, ಬನು ಗಫ್ವಾನ್ ಮತ್ತು ಬನು ಸುಲೈಮ್ ಗೋತ್ರಗಳು ಮುಸ್ಲಿಮರನ್ನು ಅಳಿಸಲು ಒಡಂಬಡಿಕೆಯನ್ನು ಮಾಡಿಕೊಂಡರು.

ಮಕ್ಕಾದಲ್ಲಿ ಬೃಹತ್ ಸಂಖ್ಯೆಯಲ್ಲಿ ಕುರೈಶ್ ಮತ್ತು ಅವರ ಮಿತ್ರ ಪಕ್ಷಗಳ ಸೈನಿಕರು ಜಮಾವಣೆಗೊಂಡರು. ಇದನ್ನು ನೋಡಿದರೆ ಮುಸ್ಲಿಮ್ ಸೇನೆ ಇವರಿಗೆ ಯಾವ ರೀತಿಯಲ್ಲೂ ಸರಿಸಮಾನರಲ್ಲವೆಂಬುದು ಸ್ಪಷ್ಟವಾಗಿತ್ತು. ದಕ್ಷಿಣ ಭಾಗದಿಂದ ಕುರೈಶರು ಮತ್ತು ಅವರ ಮಿತ್ರ ಪಕ್ಷಗಳು 4000 ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪೂರ್ವ ದಿಕ್ಕಿನಿಂದ ನಜ್ದ್ ಪ್ರದೇಶದಿಂದ ಅನೇಕ ಬುಡಕಟ್ಟುಗಳು ಒಗ್ಗೂಡಿ ಸುಮಾರು 6000 ಸಂಖ್ಯೆಯಲ್ಲಿ ಮದೀನಾ ಮೇಲೆ ಆಕ್ರಮಣ ಮಾಡಲು ಹೊರಟರು. ಹೀಗೆ ಮದೀನಾದ ಮೇಲೆ ಆಕ್ರಮಣ ಮಾಡಲು ಪೂರ್ವ ಮತ್ತು ದಕ್ಷಿಣ ಭಾಗದಿಂದ 10,000 ಸೈನಿಕರು ಹೊರಟರು. ಇಂತಹ ಬೃಹತ್ ಸೇನೆಯನ್ನು ಮುಸ್ಲಿಮ್ ಸೇನೆ ಎದುರಿಸಬಹು ದೆಂದು ಕನಸು ಮನಸ್ಸಿನಲ್ಲಿಯೂ ಯಾರೂ ಯೋಚಿಸುವಂತಿರಲಿಲ್ಲ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಚಿಕ್ಕಪ್ಪ ಅಬ್ಬಾಸ್, ಕುರೈಶರ ಆಕ್ರಮಣದ ವಿವರಗಳನ್ನು ಪ್ರವಾದಿರಿಗೆ ಮುನ್ಸೂಚನೆಯಾಗಿ ದೂತನ ಮೂಲಕ ರಹಸ್ಯವಾಗಿ ರವಾನಿಸಿದರು. ಈ ಸಂದೇಶ ಪ್ರವಾದಿರಿಗೆ ತಲುಪಿದಾಗ, ಪ್ರವಾದಿರಿಗೆ ಈ ಬೃಹತ್ ಸೇನೆಯನ್ನು ಎದುರಿಸಲು ಯೋಜನೆ ರೂಪಿಸಲು ಕೇವಲ ಒಂದು ತಿಂಗಳ ಕಾಲಾವಕಾಶ ಮಾತ್ರವಿತ್ತು. ಪ್ರವಾದಿರಿಗೆ ಮೂರು ಸಾವಿರ ಸೈನಿಕರನ್ನು ಜಮಾಯಿಸಲು ಸಾಧ್ಯವಾಯಿತು. ಇದು ಕುರೈಶ್ ಸೇನೆಯ 1/3 ರಷ್ಟಾಗಿತ್ತು.

# ಯುದ್ಧದ ಹೊಸತಂತ್ರ

ಉದ್ಭವಿಸಿದ ಪರಿಸ್ಥಿತಿಯ ಅವಲೋಕನ ನಡೆಸಿ ಕಾರ್ಯತಂತ್ರ ರೂಪಿಸಲು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಹಾಬಿಗಳೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಿದರು. ಸಭೆಯಲ್ಲಿ ಕೆಲ ಸಹಾಬಿಗಳು ಬದ್ರ್ ಯುದ್ಧದಲ್ಲಿ ಶತ್ರುಗಳನ್ನು ರಣರಂಗದಲ್ಲಿ ಎದುರಿಸಿದಂತೆ, ಮೈದಾನದಲ್ಲಿ ಎದುರಿಸಬೇಕೆಂದು ಸಲಹೆ ನೀಡಿದರು. ಇನ್ನು ಕೆಲಸಹಾಬಿಗಳು ಉಹದ್ ಯುದ್ಧದ ಉದಾಹರಣೆಯನ್ನು ಮುಂದಿರಿಸುತ್ತಾ ಮದೀನಾದಲ್ಲಿದ್ದುಕೊಂಡು ಶತ್ರುಗಳನ್ನು ಎದುರಿಸುವುದನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ ಎಂದರು. ಸಭೆಯಲ್ಲಿ ಹಾಜರಿದ್ದವರಲ್ಲಿ ಸಲ್ಮಾನ್ ಫಾರ್ಸಿ ಸಹ ಇದ್ದರು. ಇವರ ಕತೆ ಬಹಳ ಕುತೂಹಲಕಾರಿಯಾಗಿದೆ. ದೀರ್ಘಕಾಲದಿಂದ ಸಲ್ಮಾನ್ ಫಾರ್ಸಿ ಸತ್ಯದ ಮತ್ತು ಸೃಷ್ಟಿಕರ್ತನ ಅನ್ವೇಷಣೆಯಲ್ಲಿದ್ದರು. ಪ್ರವಾದಿರ ಬಗ್ಗೆ ತಿಳಿದ ಮೇಲೆ, ಪ್ರವಾದಿರ ಸನಿಹದಲ್ಲಿ ಇರಬೇಕೆಂಬ ಉದ್ದೇಶದಿಂದ ಮಕ್ಕಾ ಪ್ರಯಾಣ ಬೆಳೆಸಿದ್ದರು. ಸಲ್ಮಾನ್ ಫಾರ್ಸಿ ನಿಷ್ಠಾವಂತ ಮತ್ತು ದೈವಭಕ್ತಿವುಳ್ಳ ಮುಸ್ಲಿಮರಾಗಿದ್ದರು.

ಸಭೆಯಲ್ಲಿ ಸಲ್ಮಾನ್ ಫಾರ್ಸಿ, ಇಲ್ಲಿಯವರೆಗೂ ಅರಬರಿಗೆ ತಿಳಿಯದಿರುವಂತಹ ಒಂದು ನವೀನ ತಂತ್ರವನ್ನು ಮಂಡಿಸಿದರು.

"ಪ್ರವಾದಿಗಳೇ, ಪರ್ಶಿಯಾದಲ್ಲಿ ನಾವು ಶತ್ರುಗಳನ್ನು ಎದುರಿಸಲು ನಗರದ ಸುತ್ತಲೂ ಕಂದಕವನ್ನು ತೋಡುತ್ತಿದ್ದೆವು. ಕುರೈಶ್‌ರನ್ನು ಎದುರಿಸಲು ನಾವು ಮದೀನಾದ ಸುತ್ತಲೂ ಕಂದಕವನ್ನು ತೋಡುವುದು ಸೂಕ್ತ" ವೆಂದರು.

ಸಲ್ಮಾನ್ ಫಾರ್ಸಿರವರ ಸಲಹೆ ಸಹಾಬಿಗಳಿಗೆ ಅಚ್ಚರಿ ಮೂಡಿಸಿತರಾದರೂ, ಸಭೆಯಲ್ಲಿ ಅವರು ನೀಡಿದ ಸಲಹೆಯಂತೆ ಕಾರ್ಯವಹಿಸಲು ನಿರ್ಧರಿಸಲಾಯಿತು.

ಮುಸ್ಲಿಮರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇವಲ ಒಂದು ತಿಂಗಳ ಕಾಲಾವಕಾಶ ಮಾತ್ರವಿತ್ತು. ಈ ಕಂದಕವು ಎಷ್ಟು ಅಗಲ ವಿರಬೇಕಾಗಿತ್ತೆಂದರೆ ಶತ್ರುಗಳ ಕುದುರೆಗಳಿಗೆ ಇದನ್ನು ಹಾರಿ ಮದೀನಾದಲ್ಲಿ ಪ್ರವೇಶಿಸಲು ಸಾಧ್ಯವಾಗಬಾರದಿತ್ತು. ಯಾವನೇ ವ್ಯಕ್ತಿ ಈ ಕಂದಕಲ್ಲಿ ಬಿದ್ದರೆ, ಅವನಿಗೆ ಮೇಲೆದ್ದು ಬರಲು ಅವಕಾಶವಿರಬಾರದಿತ್ತು.

ಪ್ರವಾದಿ ಸಹಾಬಿಗಳೊಂದಿಗೆ ಮದೀನಾದ ಸುತ್ತ ಪರಿಶೀಲಿಸಿ ಕಂದಕ ತೋಡುವ ಯೋಜನೆಗೆ ಅಂತಿಮ ರೂಪು ರೇಷೆಗಳನ್ನು ನೀಡಿದರು. ಹಗಲು, ರಾತ್ರಿ ಎನ್ನದೇ ಎಲ್ಲರೂ ಒಂದು ತಿಂಗಳೊಳಗೆ ಮದೀನಾದ ಸುತ್ತಲೂ ಆಳವಾದ ಕಂದಕವನ್ನು ತೋಡಿದರು. ಪ್ರವಾದಿ ಸ್ವತಃ ಕಂದಕ ತೋಡುವ ಕಾರ್ಯದಲ್ಲಿ ಭಾಗವಹಿಸಿದರು.

ಕುರೈಶರೊಂದಿಗೆ ಇದು ಮೂರನೆಯ ಯುದ್ಧವಾಗಿತ್ತು. ಪ್ರತಿಯೊಂದು ಯುದ್ಧದಲ್ಲಿಯೂ, ಪ್ರವಾದಿ ಅವಶ್ಯಕತೆಗೆ ಅನುಸಾರವಾಗಿ ಕಾರ್ಯತಂತ್ರವನ್ನು ರೂಪಿಸಿದ್ದರು. ಬದ್ರ್ ಯುದ್ಧದಲ್ಲಿ ಮುಸ್ಲಿಮ್ ಸೇನೆಯನ್ನು ಬಾವಿಯ ಬಳಿ ಜಮಾಯಿಸಲು ಸೂಚಿಸಿದ್ದರು. ಉಹದ್ ಯುದ್ಧದಲ್ಲಿ ಬಿಲ್ಲಾಳುಗಳ ತಂಡವನ್ನು ಒಂದು ಬೆಟ್ಟದ ಮೇಲೆ ನಿಲ್ಲಿಸಿದ್ದರು. ಈಗ ಮೂರನೆಯ ಯುದ್ಧದ ಸಂದರ್ಭದಲ್ಲಿ ಮದೀನಾದ ಸುತ್ತ ಕಂದಕವನ್ನು ತೋಡಿ ಮದೀನಾವನ್ನು ರಕ್ಷಿಸದೇ ಅನ್ಯ ಉಪಾಯವಿರಲಿಲ್ಲ. ಈ ರೀತಿ ಪ್ರವಾದಿ ಧಾರ್ಮಿಕ ಶ್ರದ್ಧೆಯ ಜೊತೆಯಲ್ಲಿ ವಿಚಾರಶಕ್ತಿಯನ್ನು ಬೆಳೆಸಿಕೊಳ್ಳುವ ತರಬೇತಿಯನ್ನು ನೀಡಿದರು. ಪ್ರವಾದಿ ಮತ್ತು ಅವರ ಸಂಗಾತಿಗಳು ಶತ್ರುಗಳನ್ನು ಎದುರಿಸಲು ನಗರದ ಸುತ್ತ ಕಂದಕವನ್ನು ತೋಡುವಂತಹ ವಿದೇಶಿಯ ತಂತ್ರಗಾರಿಕೆಯನ್ನು ಮದೀನಾದ ರಕ್ಷಣೆಗಾಗಿ ಅಳವಡಿಸಲು ಹಿಂಜರಿಯಲಿಲ್ಲ!

"ಬೌದ್ಧಿಕ ಶಕ್ತಿ ಸತ್ಯವಿಶ್ವಾಸಿಗಳ ಕಳೆದು ಹೋದ ಸಂಪತ್ತಾಗಿದೆ. ಯಾರು ಅದನ್ನು ಪಡೆದರೋ, ಅವರೇ ಭಾಗ್ಯವಂತರು" ಎಂದು ಪ್ರವಾದಿ ನುಡಿದಿದ್ದರು. ಹೀಗೆ ಪ್ರವಾದಿ ಜನರ ಬುದ್ಧಿವಂತಿಕೆಯನ್ನು, ಅವರ ನವೀನ ವಿಚಾರಗಳನ್ನು ಅಳವಡಿಸಲು ಹಿಂದೇಟು ಹಾಕುತ್ತಿರಲಿಲ್ಲ.

ಜನರ ನವೀನ ವಿಚಾರಗಳನ್ನು ಆಚರಣೆಗೆ ತರಲು ಪ್ರವಾದಿರ ಕಂದಕ ಯುದ್ಧದಲ್ಲಿನ ಕ್ರಮ ಒಂದು ಆಮಂತ್ರಣವಾಗಿತ್ತು. ಇದನ್ನು ಮಾನವತೆಯ ಬಳುವಳಿಯಾಗಿ ಪರಿಗಣಿಸಲು ಪ್ರವಾದಿ ಬೋಧಿಸಿರುವರು. (ಎಲ್ಲಾ ಜನರಿಗೂ ಸಮಾನಾಂತರವಾಗಿ ಒಳಿತಿರುವುದು–ಮಾರೂಫ್). ಅಂದರೆ ಜನರ ವ್ಯವಹಾರಗಳಲ್ಲಿ ಹೊಸತನವನ್ನು ಹುಡುಕುವ ಹಂಬಲ, ಅದರ ಅಳವಡಿಕೆಯ ಕಡೆಗೆ ಇದು ಸಂಜ್ಞೆಯಾಗಿತ್ತು. ಇದು ಕೇವಲ ಪ್ರವಾದಿಯವರ ಯುದ್ಧದ ಸಿದ್ಧತೆಯಲ್ಲಿ ರಣತಂತ್ರದಲ್ಲಿ ಮಾತ್ರ ಕಂಡು ಬಂದದ್ದಲ್ಲ. ಪ್ರವಾದಿತ್ವದ ಉದ್ದಕ್ಕೂ ಇದನ್ನು ನಾವು ಕಾಣಬಹುದಾಗಿದೆ.

## ಕಂದಕ

ಮದೀನಾ ಪಟ್ಟಣವು ಮೂರು ಕಡೆಗಳಲ್ಲಿ ಮನೆಗಳಿಂದ ಸುತ್ತುವರಿಯಲ್ಪಟ್ಟಿದ್ದು, ಒಂದು ಭಾಗದಲ್ಲಿ ಮೈದಾನ ಪ್ರದೇಶವಿತ್ತು. ಮೂರು ಸಾವಿರ ಸಹಾಬಿಗಳು ಕಂದಕ ತೋಡುವುದರಲ್ಲಿ ಭಾಗವಹಿಸಿದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಪ್ರತಿಯೋರ್ವ ಸಹಾಬಿಗೆ 100 ಅಡಿ ಉದ್ದ ಸ್ಥಳವನ್ನು ಕಂದಕ ತೋಡಲು ನೀಡಿದರು. ಕಂದಕದ ಉದ್ದ 6 ಕಿ.ಮೀ., ಅಗಲ 30 ಅಡಿ ಮತ್ತು ಆಳ 15 ಅಡಿ

ಆಗಿದ್ದಿತು. ಸುಮಾರು 25,06,000 ಘನ ಮೀಟರ್ ಪ್ರಮಾಣದ ಮಣ್ಣನ್ನು ಮೂರು ವಾರದಲ್ಲಿ ಅಗೆದಿದ್ದು, ಇದೊಂದು ಐತಿಹಾಸಿಕ ಘಟನೆಯಾಗಿದೆ. ಸಹಾಬಿಗಳಿಗೆ ಮಣ್ಣು ಅಗೆಯುವ ಸಲಕರಣೆಗಳು ಸಹ ಲಭ್ಯವಿರಲಿಲ್ಲ! ಕೆಲ ಸಲಕರಣೆಗಳನ್ನು ಬನುಕುರೈಝಾ ಗೋತ್ರದವರಿಂದ ಸಾಲದ ರೂಪದಲ್ಲಿ ಪಡೆಯಲಾಗಿತ್ತು. ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೆ ಈ ಕಾರ್ಯ ನಡೆಯಿತು.

'ನಾನೊಬ್ಬ ಸೇವಕ' ಎಂದು ಪ್ರವಾದಿ ನುಡಿದರು. ಪ್ರವಾದಿವರ್ಯರೂ ಕಂದಕ ತೋಡುವುದರಲ್ಲಿ ಪಾಲುಗೊಂಡಿದ್ದರು. ಅಗೆದ ಮಣ್ಣನ್ನು ಪ್ರವಾದಿ ಭುಜದ ಮೇಲೆ ಹೊತ್ತರು. ಸಲ್ಮಾನ್ ಫಾರ್ಸಿ ಮಣ್ಣನ್ನು ಅಗೆಯುತ್ತಿದ್ದಾಗ ಒಂದು ಬಂಡೆ ತೊಡಕಾಯಿತು. ಸಲ್ಮಾನ್ ಫಾರ್ಸಿರಿಗೆ ಬಂಡೆಯನ್ನು ತೆಗೆಯಲಾಗಲಿಲ್ಲ. ಅವರ ಕಷ್ಟವನ್ನು ನೋಡಿ ಪ್ರವಾದಿ ಅವರ ಕೈಯಿಂದ ಪಿಕಾಸೆಯನ್ನು ತೆಗೆದುಕೊಂಡು ಬಂಡೆ ಕಲ್ಲಿಗೆ ಜೋರಾಗಿ ಒಂದು ಏಟು ಕೊಟ್ಟರು. ಕೂಡಲೇ ಬಂಡೆಯು ಎರಡು ಹೋಳಾಯಿತು.

ಯಾವುದೇ ಕೆಲಸ ನಡೆಯುತ್ತಿದ್ದರೂ, ಪ್ರವಾದಿ ಜನರಿಗೆ ನೆರವಾಗಲು ಧಾವಿಸುತ್ತಿದ್ದರು. ಮನೆಯ ಕೆಲಸಗಳಲ್ಲಿಯೂ ಸಹ ಪ್ರವಾದಿ ಪತ್ನಿಯರಿಗೆ, ಸೇವಕರಿಗೆ ನೆರವಾಗುತ್ತಿದ್ದರು. ಅನಸ್ ಪ್ರವಾದಿರ ಸೇವೆಯಲ್ಲಿ ಕೆಲಕಾಲವಿದ್ದರು. ಅವರು ಹೇಳುತ್ತಿದ್ದರು:

"ಪ್ರವಾದಿರಿಗೆ ನಾನು ಸೇವೆ ಸಲ್ಲಿಸುವುದಕ್ಕಿಂತ ಹೆಚ್ಚಾಗಿ ಪ್ರವಾದಿ ನನ್ನ ಕಾರ್ಯಗಳಲ್ಲಿ ನನಗೆ ಸಹಾಯ ಮಾಡುತ್ತಿದ್ದರು! ಅವರು ಎಂದಿಗೂ ನನ್ನ ಮೇಲೆ ಕೋಪಗೊಂಡಿರಲಿಲ್ಲ. ಎಂದೂ ನನ್ನೊಂದಿಗೆ ಒರಟಾಗಿ ವರ್ತಿಸಿರಲಿಲ್ಲ".

ಜನರು ಕಂದಕವನ್ನು ತೋಡುತ್ತಿದ್ದರೆ, ಪ್ರವಾದಿ ಸುಮ್ಮನೆ ಕುಳಿತುಕೊಂಡು ನೋಡುತ್ತಿರಲಿಲ್ಲ. ಪ್ರವಾದಿರವರೂ ಸಹ ಕಂದಕವನ್ನು ತೊಡುವ ಕಾರ್ಯದಲ್ಲಿ ಪಾಲುಗೊಂಡರು.

ಪ್ರವಾದಿ ಮಣ್ಣನ್ನು ಅಗೆಯುತ್ತಾ ಅಲ್ಲಾಹನನ್ನು ಸ್ತುತಿಸುತ್ತಿದ್ದರು. ಕೆಲವೊಮ್ಮೆ ಕವನಗಳನ್ನು ಪಠಿಸುತ್ತಿದ್ದರು. ಎಲ್ಲಾ ಸಹಾಬಿಗಳು ಇಂತಹ ಸಂದರ್ಭಗಳಲ್ಲಿ ಜತೆಗೂಡುತ್ತಿದ್ದರು. ಈ ಕ್ಷಣಗಳು ಸಹಾಬಿಗಳಲ್ಲಿ ಆತ್ಮೀಯತೆ, ಸಹೋದರತೆಯ ಸಂಬಂಧಗಳನ್ನು ಮತ್ತಷ್ಟು ದೃಢಪಡಿಸಿದವು.

ಅನುಯಾಯಿಗಳಿಗೆ ಸಾಮೂಹಿಕವಾಗಿ ತಮ್ಮ ಭಾವನೆಗಳನ್ನು, ಆಕಾಂಕ್ಷೆಗಳನ್ನು, ಮತ್ತು ನಿರೀಕ್ಷೆಗಳನ್ನು ಪ್ರಕಟಪಡಿಸಲು ಇಂತಹ ಸಂದರ್ಭಗಳು ಅವಕಾಶ ನೀಡಿದವು. ಪ್ರವಾದಿ ತಮ್ಮ ಅನುಯಾಯಿಗಳ ಶಕ್ತಿಯನ್ನು ಒಗ್ಗೂಡಿಸಬೇಕಾದ ಸಂದರ್ಭಗಳಲ್ಲಿ,

ಅನುಯಾಯಿಗಳೊಂದಿಗೆ ಒಂದಾಗುತ್ತಿದ್ದರು. ಏಕೈಕ ದೇವನಾದ ಅಲ್ಲಾಹನಲ್ಲಿ ದೃಢ ವಿಶ್ವಾಸ, ಭಾವನೆಗಳನ್ನು ಕವನದ ಮೂಲಕ ಹೊರಹೊಮ್ಮಿಸಲಾಗುತ್ತಿತ್ತು! ಮುಹಮ್ಮದ್ ಅನುಯಾಯಿಗಳ ಸಮುದಾಯಕ್ಕೇ ಸೇರಿದವರಾಗಿದ್ದು, ತಮ್ಮ ಜನಾಂಗದ ಆಚಾರ, ವಿಚಾರಗಳನ್ನು ಹಂಚಿಕೊಳ್ಳುವ ಮೂಲಕ ಅವರಲ್ಲಿ ಒಂದಾಗಿದ್ದರು.

## ಶ್ರೇಷ್ಠ ದಂಡ ನಾಯಕ

ಮದೀನಾದ ಸುತ್ತ ಕಂದಕ ತೊಡುವ ಕಾರ್ಯ ಯಶಸ್ಸಿನೊಂದಿಗೆ ಮುಕ್ತಾಯಗೊಂಡಿತು. ಕಂದಕದ ಯಾವುದೇ ಭಾಗದಲ್ಲಿ ಶತ್ರು ಸೈನಿಕರಿಗೆ ಕುದುರೆ ಏರಿ ಅದನ್ನು ದಾಟುವುದು ಕಷ್ಟ ಸಾಧ್ಯ ಕೆಲಸವಾಗಿತ್ತು. ಯಾರಾದರೂ ಹಾಗೆ ಪ್ರಯತ್ನಿಸಿದರೆ, ಅವರನ್ನು ಹಿಮ್ಮೆಟ್ಟಿಸಲು ಮುಸ್ಲಿಮ್ ಬಿಲ್ಲಾಳುಗಳು ಸಿದ್ಧವಾಗಿದ್ದರು.

ಕಂದಕ ಯುದ್ಧದ ಸಂದರ್ಭದಲ್ಲಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಸೈನಿಕ ನಿಪುಣತೆ ಅತ್ಯುನ್ನತ ಮಟ್ಟದಲ್ಲಿ ಪ್ರದರ್ಶಿತವಾಯಿತು. ಯುದ್ಧದ ಆರಂಭದ ಪೂರ್ವದಲ್ಲಿಯೇ ಮುಹಮ್ಮದ್ ಅನೇಕ ಸಿದ್ಧತಾ ಕ್ರಮಗಳನ್ನು ಕೈಗೊಂಡರು.

ಮುಹಮ್ಮದ್ ಕುದುರೆಯನ್ನೇರಿ, ಕೆಲ ಸಂಗಾತಿಗಳೊಂದಿಗೆ ಕಂದಕದ ಸುತ್ತ ಪರಿವೀಕ್ಷಣೆ ಮಾಡಿದರು. ಕಂದಕದಲ್ಲಿ ಎಲ್ಲಿ ಶತ್ರುಗಳು ಸುಲಭವಾಗಿ ನಗರವನ್ನು ಪ್ರವೇಶಿಸಬಹುದಾಗಿತ್ತೋ, ಅಂತಹ ಭಾಗಗಳ ಪರಿಶೀಲನೆ ಮಾಡಿ ಅಲ್ಲಿ ಕಂದಕದ ಆಳವನ್ನು ಹೆಚ್ಚಿಸಿದರು. ಪ್ರವಾದಿ ಓರ್ವ ಇಂಜಿನಿಯರ್‌ನ ಪಾತ್ರವನ್ನು ವಹಿಸಿದರು. ಸ್ವತಃ ಸ್ಥಳದಲ್ಲಿ ನಿಂತು ವೈರಿಗಳ ಆಗಮನದ ಮುಂಚೆ ರಕ್ಷಣಾ ಕಾರ್ಯಗಳನ್ನು ಪೂರ್ಣಗೊಳಿಸಿದರು.

ಕಂದಕವನ್ನು ತೋಡಿ ನಗರವನ್ನು ರಕ್ಷಿಸುವ ಕ್ರಮವು ಅರಬರಿಗೆ ತೀರಾ ಅಪರಿಚಿತವಾಗಿದ್ದು, ಈ ವಿಷಯವು ಕುರೈಶರಿಗೆ ತಲುಪದಂತೆ ಮುಹಮ್ಮದ್ ಎಚ್ಚರ ವಹಿಸಿದರು. ಈ ಕಾರಣಕ್ಕಾಗಿ ಮದೀನಾದ ಸುತ್ತ ಮುತ್ತ ಜನರ ಓಡಾಟವನ್ನು ನಿಷೇಧಿಸಿದರು. ಅಲಿ ಮತ್ತು ಇತರ ಸಹಾಬಿಗಳನ್ನು ಹಗಲು ರಾತ್ರಿ 24 ಗಂಟೆಗಳು ಮದೀನಾದ ಪಹರೆಗೆ ನೇಮಿಸಿದರು. ಶತ್ರುಗಳ ಚಲನವಲನಗಳನ್ನು ಗಮನಿಸಲಿಕ್ಕಾಗಿ ಮುಹಮ್ಮದ್ ಮದೀನಾದ ಸುತ್ತ 'ವಾಚ್ ಟವರ್ಸ್' Watch Tower ನಿರ್ಮಿಸಿದ್ದರು.

ಮುಹಮ್ಮದ್‌ರ ಆದೇಶದ ಮೇರೆ ಸಹಾಬಿಗಳು ಮದೀನಾದ ಹೊರವಲಯದ ಹೊಲಗದ್ದೆಗಳಿಂದ ಮತ್ತು ಹಣ್ಣಿನ ತೋಟಗಳಿಂದ ದವಸ ಧಾನ್ಯಗಳನ್ನು, ಹಣ್ಣು ಹಂಪಲಗಳನ್ನು ಸಂಗ್ರಹಿಸಿದರು. ಈ ರೀತಿ ಮುಹಮ್ಮದ್ ಮದೀನಾದ ಮುತ್ತಿಗೆಯ

ಸಮಯದಲ್ಲಿ ಮದೀನಾ ವಾಸಿಗಳಿಗೆ ಆಹಾರದ ಕೊರತೆಯಾಗದಂತೆ ಎಚ್ಚರಿಕೆ ವಹಿಸಿದರು. ಮುಹಮ್ಮದ್‌ರ ಈ ಕ್ರಮದಿಂದ ಶತ್ರು ಸೇನೆಗೆ ಮದೀನಾದಿಂದ ಯಾವುದೇ ಆಹಾರ ಸಾಮಾಗ್ರಿ ದೊರಕದೇ ತಮ್ಮ ಜೊತೆಗೆ ಒಯ್ದಿದ್ದ ಆಹಾರ ಸಾಮಾಗ್ರಿಗಳ ಮೇಲೆಯೇ ಅವಲಂಬಿತರಾಗಲು ನಿರ್ಭಂದಿತರಾದರು.

ಕುರೈಶರ ಸೇನೆ ಆಗಮಿಸತೊಡಗಿದಾಗ 3000 ಮುಸ್ಲಿಮ್ ಸೇನೆ ಲಗುಬಗನೆ ಕಂದಕದ ಹಿಂದಕ್ಕೆ ತೆರಳಿ ಶತ್ರು ಸೇನೆಯನ್ನು ನಿರೀಕ್ಷಿಸತೊಡಗಿದರು.

**'ಕಾನ್ಸ್‌ಟನ್‌ಟೈನ್ ವರ್ಗಿಲ್ ಜಾರ್ಜಿಯೊ'** Constantin virgil Gheorghiu (ಪ್ಯಾರಿಸ್, ಫ್ರಾನ್ಸ್) ತಮ್ಮ ಪುಸ್ತಕ **'ಮಹೋಮೆಟ್'** 'Mahomet' ನಲ್ಲಿ ಈ ರೀತಿ ಬರೆದಿದ್ದಾರೆ.

**"**ಜರ್ಮನಿಯ ವಿರುದ್ಧ ರಷ್ಯಾ ಸೇನೆಯು ಇದೇ ತಂತ್ರವನ್ನು ಅನುಸರಿಸಿತ್ತು. ಜರ್ಮನಿ ಸೇನೆ ಬರುತ್ತಿದ್ದ ಮಾರ್ಗದಲ್ಲಿ ಹೊಲಗದ್ದೆಗಳಲ್ಲಿ ದವಸ ಧಾನ್ಯಗಳನ್ನು ಮತ್ತು ತೋಟಗಳಿಂದ ಹಣ್ಣು ಹಂಪಲುಗಳನ್ನು ಕಟಾವು ಮಾಡಿದ್ದರು, ಅಥವಾ ಹಾಳುಗೆಡವಿದ್ದರು. ಶತ್ರುಗಳು ಇವುಗಳಿಂದ ಯಾವುದೇ ಪ್ರಯೋಜನ ಪಡೆಯದಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಇದು 20ನೆಯ ಶತಮಾನದ ಘಟನೆ. ಆದರೆ ಪ್ರವಾದಿ 7ನೇ ಶತಮಾನದಲ್ಲಿಯೇ ಈ ಕ್ರಮವನ್ನು ಅನುಸರಿಸಿದ್ದರು.

ಕುರೈಶ್ ಸೇನೆ ಮದೀನಾದ ಸರಹದ್ದು ತಲುಪಿದಾಗ, ಮದೀನಾದ ಸುತ್ತ ಕಂದಕ ತೋಡಿರುವುದನ್ನು ಕಂಡು ಅವಕ್ಕಾದರು ! ಕಂದಕವನ್ನು ತೋಡಿ ಸೇನೆಯೊಂದಿಗೆ ನೇರ ಸಂಘರ್ಷವನ್ನು ತಪ್ಪಿಸಿದಂತಹ ಶತ್ರುವನ್ನು ಅವರು ಎಂದೂ ಎದುರಿಸಿರಲಿಲ್ಲ. ಈ ಮೊದಲು ಯಾರೂ ಅವರಿಗೆ ದವಸ ಧಾನ್ಯ, ಹಣ್ಣು, ಹಂಪಲು, ಜಾನುವಾರುಗಳಿಗೆ ಮೇವು ದೊರಕದಂತೆ ಮಾಡಿರಲಿಲ್ಲ! ಸ್ವಲ್ಪ ಸಮಯದಲ್ಲಿಯೇ ಕುರೈಶ್ ಸೈನಿಕರಿಗೆ ಆಹಾರದ ಕೊರತೆ ಮತ್ತು ಅವರ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಯಿತು.

## ಮದೀನಾದ ಮುತ್ತಿಗೆ

ಹತ್ತು ಸಾವಿರ ಕುರೈಶ್ ಸೈನಿಕರು 600 ಕುದುರೆಗಳು, ಅನೇಕ ಒಂಟೆಗಳೊಂದಿಗೆ ನಾಲ್ಕನೆಯ ಹಿಜರಿ (627 ಕ್ರಿ.ಶ. ಮಾರ್ಚ್ 31) ಮದೀನಾದ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಬಂದು ಬೀಡುಬಿಟ್ಟರು. ಪೈರುಗಳೆಲ್ಲಾ ಕಟುವಾಗಿರುವುದನ್ನು ನೋಡಿ ಕುರೈಶರು ಹೈರಾನಾದರು. ಅವರಿಗೆ ತಮ್ಮ ಜೊತೆಯಲ್ಲಿ ತಂದಿದ್ದ ಪ್ರಾಣಿಗಳಿಗೆ ಮೇವು ನೀಡಲೂ, ಮೇವು ಮದೀನಾದಲ್ಲಿ ಲಭ್ಯವಿರಲಿಲ್ಲ. ಮದೀನಾವನ್ನು ಎಲ್ಲಾ ದಿಕ್ಕುಗಳಿಂದ ಆಕ್ರಮಿಸಿ, ಮುಸ್ಲಿಮರನ್ನು ಆದಷ್ಟು ಶೀಘ್ರ ಮಣಿಸಬೇಕೆಂದು ಮದೀನಾದ

ಕಡೆಗೆ ದೌಡಾಯಿಸಿದಾಗ ಮದೀನಾದ ಸುತ್ತ ಕಂದಕವಿರುವುದನ್ನು ಕಂಡು ದಂಗಾದರು. ಕನಸು ಮನಸ್ಸಿನಲ್ಲಿಯೂ ಮದೀನಾದ ರಕ್ಷಣೆಗೆ ಈ ರೀತಿಯ ಕ್ರಮವನ್ನು ವಹಿಸಲಾಗುವುದೆಂದು ಅವರು ಊಹಿಸಿರಲಿಲ್ಲ.

ಕುರೈಶ್ ಮತ್ತು ಅವರ ಮಿತ್ರ ಸೇನೆಗಳು ತಮ್ಮ ರಣತಂತ್ರವನ್ನು ಈಗ ಬದಲಾಯಿಸಿದರು. ಹೆಚ್ಚಿನ ಸೇನೆಯನ್ನು ಮದೀನಾದ ಉತ್ತರ ಭಾಗದಲ್ಲಿ ಜಮಾಯಿಸುವುದೆಂದೂ, ಇದಕ್ಕೆ ಉತ್ತರವಾಗಿ ಮುಸ್ಲಿಮ್ ಸೈನಿಕರೂ, ಮದೀನಾದ ಉತ್ತರ ಭಾಗದಲ್ಲಿ ಬಂದಾಗ, ಮದೀನಾದ ದಕ್ಷಿಣ ಭಾಗದಿಂದ ಆಕ್ರಮಣ ಮಾಡುವುದೆಂದು ನಿರ್ಧರಿಸಲಾಯಿತು. ಮದೀನಾದ ದಕ್ಷಿಣ ಭಾಗದಲ್ಲಿ ಬಂಡೆಗಳು ಬಹಳವಿದ್ದು ಈ ಭಾಗದಿಂದ ಮದೀನಾ ಪ್ರವೇಶಿಸುವುದು ಸುಲಭವೆಂದು ಕಂಡುಬರುತ್ತಿತ್ತು.

## ವಿದ್ರೋಹ!

ಮದೀನಾದ ದಕ್ಷಿಣದ ಭಾಗದಲ್ಲಿ ಯಹೂದಿ ಗೋತ್ರ ಬನು ಕುರೈಝಾ ನೆಲೆಸಿದ್ದರು. ಇವರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದರು. ಯಹೂದಿಯರ ಇನ್ನೊಂದು ಗೋತ್ರ ಬನು ನದೀರ್‌ನ ಸರದಾರ ಹಯ್ಯಿ ಬಿನ್ ಅಖ್ತಬ್ ಬನು ಕುರೈಝಾ ಗೋತ್ರದ ಸರದಾರ ಕಅಬ್ ಬಿನ್ ಅಸದ್‌ರನ್ನು ಭೇಟಿ ಮಾಡಿ ಪ್ರವಾದಿರೊಂದಿಗಿನ ಒಡಂಬಡಿಕೆಯನ್ನು ರದ್ದುಗೊಳಿಸಿ ವಿದ್ರೋಹವೆಸಗಲು ಪ್ರೇರೇಪಿಸುತ್ತಾನೆ. ಆರಂಭದಲ್ಲಿ ಕಅಬ್‌ಬಿನ್ ಅಸದ್ ಇದಕ್ಕೆ ಒಪ್ಪದಿದ್ದರೂ ಹಯ್ಯಿ ಬಿನ್ ಅಖ್ತಬ್‌ನ ಒತ್ತಾಯದಿಂದಾಗಿ ಪ್ರವಾದಿರಿಗೆ ವಿದ್ರೋಹವೆಸಗಲು ತಯಾರಾಗುತ್ತಾನೆ.

ಬನು ಕುರೈಝಾರ ವಿದ್ರೋಹದಿಂದಾಗಿ ಪ್ರವಾದಿರ ಮದೀನಾದ ರಕ್ಷಣೆಯ ಯೋಜನೆಯು ಸಂಪೂರ್ಣವಾಗಿ ಬುಡಮೇಲಾಗುವುದರಲ್ಲಿತ್ತು. ಏಕೆಂದರೆ ಮದೀನಾದ ದಕ್ಷಿಣ ಭಾಗದಿಂದ ಶತ್ರುಗಳ ಸೇನೆ ಸುಲಭವಾಗಿ ಮದೀನಾ ಪ್ರವೇಶಿಸಿ ಮುಸ್ಲಿಮರ ಮಾರಣ ಹೋಮ ನಡೆಸಬಹುದಿತ್ತು.

ಯಹೂದಿ ಗೋತ್ರ ಬನು ಕುರೈಝಾ ಕುರೈಶ್ ಮತ್ತು ಅವರ ಮಿತ್ರ ಪಕ್ಷಗಳೊಂದಿಗೆ ಕೈ ಜೋಡಿಸಲು ಸಿದ್ಧರಾದರು. ಪ್ರವಾದಿ ಶತ್ರು ಸೈನಿಕರ ಚಲನವಲನಗಳ ಮೇಲೆ ನಿಗಾವಿರಿಸಿದ್ದರು. ಶತ್ರುಗಳು ಮದೀನಾದ ಉತ್ತರ ಭಾಗದಲ್ಲಿ ಜಮಾವಣೆಯಾಗುತ್ತಿರುವುದನ್ನು ಗಮನಿಸಿ ಅವರು ಶತ್ರುಗಳು ಕುತಂತ್ರವನ್ನು ರೂಪಿಸುತ್ತಿರುವುದನ್ನು ಊಹಿಸಿದರು. ಪ್ರವಾದಿ ಬನೂ ಕುರೈಝಾರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ವಿಶ್ವಾಸಾರ್ಹತೆ ಪರೀಕ್ಷಿಸಬಯಸಿದರು. ಏಕೆಂದರೆ ಬನು ಕುರೈಝಾ ತಮ್ಮ ಜೊತೆಗಿನ ಒಪ್ಪಂದದಲ್ಲಿ ಪ್ರಾಮಾಣಿಕರಾಗಿರುವುದು

ಸಂಶಯಾಸ್ಪದವಾಗಿತ್ತು.

ಅಷ್ಟರಲ್ಲಿ ಬನುಕುರೈಝಾ ಮುಸ್ಲಿಮರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದುಗೊಳಿಸಿರುವ ವಾರ್ತೆ ಪ್ರವಾದಿರಿಗೆ ತಲುಪಿತು. ಈ ವಾರ್ತೆಯ ನಿಖರತೆಯನ್ನು ತಿಳಿಯಲು ಪ್ರವಾದಿ ದೂತರನ್ನು ನಿಯೋಜಿಸಿದರು. ವಾರ್ತೆಯು ಸುಳ್ಳಾಗಿದ್ದಲ್ಲಿ ಅದನ್ನು ಸಾರ್ವಜನಿಕವಾಗಿ ಘೋಷಿಸಬೇಕೆಂದೂ, ಒಂದು ವೇಳೆ ವಾರ್ತೆಯು ನಿಜವಾಗಿದ್ದಲ್ಲಿ ಅದನ್ನು ರಹಸ್ಯವಾಗಿ ತಮಗೆ ತಿಳಿಸಬೇಕೆಂದು ಪ್ರವಾದಿ ಆಜ್ಞಾಪಿಸಿದರು. ದೂತರು ವಾರ್ತೆಯು ನಿಜವಾಗಿರುವುದಾಗಿ ಪ್ರವಾದಿರಿಗೆ ತಿಳಿಸಿದರು. ಪ್ರವಾದಿ ಕೂಡಲೇ ಝೈದ್‌ರ ನೇತೃತ್ವದಲ್ಲಿ 300 ಸೈನಿಕರ ತಂಡವನ್ನು ಮದೀನಾದ ದಕ್ಷಿಣ ಭಾಗದ ರಕ್ಷಣೆಗಾಗಿ ದೌಡಾಯಿಸಿದರು.

ಮದೀನಾದ ಮುತ್ತಿಗೆ ಮುಂದುವರೆದಂತೆ ಮುಸ್ಲಿಮರ ಕಷ್ಟಗಳು ಮತ್ತು ಕಳವಳ ಹೆಚ್ಚಾಗತೊಡಗಿತು. ಒಂದು ಸಂದರ್ಭದಲ್ಲಿ ಕುರೈಶರ ಆಕ್ರಮಣ ಎಷ್ಟು ಪ್ರಬಲವಾಗಿತ್ತೆಂದರೆ ಮುಸ್ಲಿಮರಿಗೆ ಝುಹರ್ ಮತ್ತು ಅಸ್ರ್ ನಮಾಝ್ ನಿರ್ವಹಿಸಲು ಸಾಧ್ಯವಾಗಲಿಲ್ಲ. ಆನಂತರ ಮಗ್ರಿಬ್ ನಮಾಝ್ ನಿರ್ವಹಿಸಲೂ ಮುಸ್ಲಿಮರಿಗೆ ಸಾಧ್ಯವಾಗಿರಲಿಲ್ಲ. ಈ ಕಾರಣದಿಂದಾಗಿ ಪ್ರವಾದಿರಿಗೆ ಅತೀವ ವೇದನೆಯಾಯಿತು. ಕುರ್‌ಆನ್ ಮುಸ್ಲಿಮರ ಈ ಸಂದರ್ಭದ ಪರಿಸ್ಥಿತಿಯನ್ನು ಈ ರೀತಿ ಬಣ್ಣಿಸಿದೆ:

> "ಶತ್ರುಗಳು ಮೇಲಿಂದಲೂ, ಕೆಳಗಿಂದಲೂ ನಿಮ್ಮ ಮೇಲೆ ಏರಿ ಬಂದಾಗ, ಭಯದಿಂದ ಕಣ್ಣುಗಳು ನಿಶ್ಚಲಗೊಂಡಾಗ, ಹೃದಯಗಳು ಬಾಯಿಗೆ ಬಂದಾಗ ಮತ್ತು ನೀವು ಅಲ್ಲಾಹನ ವಿಷಯದಲ್ಲಿ ತರಹ ತರಹದ ಗುಮಾನಿಗಳನ್ನಿರಿಸಲು ತೊಡಗಿದಾಗ, ಸತ್ಯವಿಶ್ವಾಸಿಗಳು ಚೆನ್ನಾಗಿ ಪರೀಕ್ಷಿಸಲ್ಪಟ್ಟರು ಮತ್ತು ತೀವ್ರವಾಗಿ ನಡುಗಿಸಲ್ಪಟ್ಟರು"
> (ಪವಿತ್ರ ಕುರ್‌ಆನ್ 33:10–11)

ಈ ಸತ್ಯ ಪರೀಕ್ಷೆಯು ಬಹಳ ತೀವ್ರವಾಗಿತ್ತು. ಈ ಪರೀಕ್ಷೆಯಲ್ಲಿ ಪ್ರತಿಯೊಂದು ಪಂಗಡದ, ಪ್ರತಿಯೊಂದು ವ್ಯಕ್ತಿಯ ನೈಜ ರೂಪವು ಮುಂದೆ ಬಂದಿತು. ಬನು ಕುರೈಝಾರ ದ್ರೋಹವೂ ಪ್ರಕಟವಾಯಿತು. ಕಪಟ ವಿಶ್ವಾಸಿಗಳ ನೈಜ ಬಣ್ಣವೂ ಹೊರಬಿದ್ದಿತು.

> "ಕಪಟ, ವಿಶ್ವಾಸಿಗಳೂ, ಹೃದಯಗಳಲ್ಲಿ ರೋಗವಿದ್ದವರೂ – ಅಲ್ಲಾಹ್ ಮತ್ತು ಅವನ ಪ್ರವಾದಿ ನಮ್ಮೊಡನೆ ಮಾಡಿದ್ದ ವಾಗ್ದಾನಗಳೆಲ್ಲವೂ ವಂಚನೆಯೇ ವಿನಹ ಇನ್ನೇನೂ ಅಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ" (ಪವಿತ್ರ ಕುರ್‌ಆನ್ 33:12)
>
> "ಅವರ ಒಂದು ಕೂಟವು ನಮ್ಮ ಮನೆಗಳು ಅಪಾಯಕ್ಕೊಳ ಗಾಗಿವೆ"

> ಎನ್ನುತ್ತಾ ತಮ್ಮ ಪ್ರವಾದಿಯಿಂದ ಅನುಮತಿ ಕೇಳತೊಡಗಿದಾಗ (ಪವಿತ್ರ ಕುರ್‌ಆನ್ 33:13)

ಇಂತಹ ಪರಿಸ್ಥಿತಿಯಲ್ಲಿ, ಕೆಲಜನರು ಮುಸ್ಲಿಮರ ಪ್ರತಿರಕ್ಷಣೆಯು ಕುಸಿಯುವುದರಲ್ಲಿದೆ ಎಂದು ಬಗೆದು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬಯಸಿದ್ದರು. ಶತ್ರುಗಳ ಆಕ್ರಮಣವನ್ನು ದೀರ್ಘಕಾಲದವರೆಗೆ ಎದುರಿಸುವುದು ಕಷ್ಟ ಸಾಧ್ಯವೆಂದು ಅವರಿಗೆ ಅನಿಸಿತು.

ಆದರೆ ನೈಜ ಸತ್ಯವಿಶ್ವಾಸಿಗಳು ಈ ಸತ್ವ ಪರೀಕ್ಷೆಯಲ್ಲಿ ಸಂಪೂರ್ಣವಾಗಿ ಸಫಲರಾದರು. ಇಂತಹ ಕ್ಲಿಷ್ಟ ಘಳಿಗೆಯಲ್ಲಿಯೂ, ಅವರು ಪ್ರವಾದಿರಿಗೆ ಸಂಪೂರ್ಣ ನಿಷ್ಠೆಯನ್ನು ತೋರಿದರು. ಕುರ್‌ಆನ್ ಈ ಸಂದರ್ಭದಲ್ಲಿ ಪ್ರವಾದಿರ ಉತ್ಕೃಷ್ಟತೆಯನ್ನು ಉದ್ಧರಿಸಿತು.

> "ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ" (ಪವಿತ್ರ ಕುರ್‌ಆನ್ 33:21)

ಪ್ರವಾದಿರ ಆದರ್ಶಪ್ರಾಯ ಮಾದರಿಯು ಕೇವಲ ರಣರಂಗಕ್ಕೆ ಸೀಮಿತವಾದುದಲ್ಲ. ಪ್ರತಿಯೋರ್ವ ವ್ಯಕ್ತಿಯ ಸಂಪೂರ್ಣ ಜೀವನಕ್ಕೆ ಪ್ರವಾದಿ ಮಾದರಿಯಾಗಿರುವರು. ಕುರ್‌ಆನಿನ ಈ ಸೂಕ್ತವು ಅವತೀರ್ಣಗೊಂಡ ಸಂದರ್ಭವನ್ನು ವಿಶ್ಲೇಷಿಸಿದಾಗ ಇದರ ಪ್ರಾಮುಖ್ಯತೆಯು ನಿಚ್ಚಳವಾಗುತ್ತದೆ. ಪುಟ್ಟ ಮುಸ್ಲಿಮ್ ಸಮುದಾಯವು ಆಕ್ರಮಣಕ್ಕೆ ಒಳಗಾಗಿತ್ತು. ದಿಗ್ಭಂಧನದ ಕಾರಣದಿಂದ ಧೃತಿಗೆಟ್ಟಿತ್ತು. ಈ ವಿಪತ್ತಿನಿಂದ ಬದುಕುಳಿಯುವ ಯಾವ ದಾರಿಯೂ ಅವರಿಗೆ ಕಂಡು ಬರುತ್ತಿದ್ದಿಲ್ಲ. ಆದರೂ ಈ ಮುಸ್ಲಿಮ್ ಸಮುದಾಯ ಪ್ರವಾದಿರ ಸುತ್ತ, ಅವರ ಸಂದೇಶದಲ್ಲಿ ವಿಶ್ವಾಸವಿಟ್ಟು ಜಮಾಯಿಸಿದ್ದರು. ಕುರ್‌ಆನಿನ ಈ ಸೂಕ್ತವು ಇದನ್ನು ದೃಢಪಡಿಸುತ್ತದೆ. ಸತ್ಯ ವಿಶ್ವಾಸಿಗಳು, ಶತ್ರು ಸೈನಿಕರನ್ನು ಕಂಡಾಗ ಉದ್ಗರಿಸಿದರು.

> "ನೈಜ ಸತ್ಯವಿಶ್ವಾಸಿಗಳು, ಶತ್ರುಸೇನೆಗಳನ್ನು ಕಂಡಾಗ, 'ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಾತು ನಿಜವಾಗಿತ್ತು" ಎಂದು ಉದ್ಗರಿಸಿದರು. ಈ ಘಟನೆಯು ಅವರ ವಿಶ್ವಾಸವನ್ನು ಅವರ ಸಮರ್ಪಣಾ ಭಾವವನ್ನೂ ಇನ್ನಷ್ಟು ವರ್ಧಿಸಿಬಿಟ್ಟಿತು. (ಪವಿತ್ರ ಕುರ್‌ಆನ್ 33:22)

# ಒಂದು ಚತುರ ತಂತ್ರ !

ಮದೀನಾದ ಮುತ್ತಿಗೆಯಿಂದಾಗಿ ಮುಸ್ಲಿಮರು ಸಂಕಷ್ಟದಿಂದ ದಿನದೂಡುತ್ತಿದ್ದರು. ಇತ್ತ ಕುರೈಶ್ ಮತ್ತು ಅವರ ಮಿತ್ರ ಸೇನೆಗಳೂ ತೊಂದರೆಗಳನ್ನು ಎದುರಿಸಲಾರಂಭಿಸಿದರು. ಅವರ ಬಳಿಯಿದ್ದ ಆಹಾರ ಸಾಮಾಗ್ರಿಗಳು ದಿನಗಳು ಕಳೆದಂತೆ ಕಡಿಮೆಯಾಗಿ, ಕೊರತೆ ಉಂಟಾಯಿತು. ಚಳಿಗಾಲದ ಕಾರಣ ತೀವ್ರ ಚಳಿಯನ್ನು ಅವರು ಎದುರಿಸಬೇಕಾಗಿ ಬಂತು.

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಡೇರೆಯಲ್ಲಿ ಕುಳಿತಿದ್ದಾರೆ. ಅಷ್ಟರಲ್ಲಿ ನುಐಮ್ ಬಿನ್ ಮಸ್‌ಊದ್ ಪ್ರವಾದಿರ ಅನುಮತಿ ಪಡೆದು ಒಳಗೆ ಪ್ರವೇಶಿಸುತ್ತಾರೆ. ನುಐಮ್ ಬಿನ್ ಮಸೂದ್ ಕುರೈಶ್ ಗೋತ್ರದ ಹಿರಿಯ ನಾಯಕರಾಗಿದ್ದರು. ಅರಬ್ ಪ್ರದೇಶದ ಎಲ್ಲಾ ಗೋತ್ರಗಳೂ ಅವರನ್ನು ಗೌರವದಿಂದ ಕಾಣುತ್ತಿದ್ದರು.

"ಪ್ರವಾದಿ ವರ್ಯರೇ! ನಾನು ಇಸ್ಲಾಮ್ ಸ್ವೀಕರಿಸಿದ್ದೇನೆ. ಆದರೆ ನಾನು ಮುಸ್ಲಿಮ್‌ನಾಗಿರುವ ವಿಷಯ ಯಾರಿಗೂ ತಿಳಿದಿಲ್ಲ. ನಾನು ಕುರೈಶ್ ಸೇನೆಯಲ್ಲಿ ಒಡಕುಂಟು ಮಾಡಲು ಯತ್ನಿಸುವೆನು." ಎಂದು ನುಐಮ್ ತಿಳಿಸಿದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದರು:

"ಶತ್ರು ಸೇನೆಯಲ್ಲಿ ಒಡಕು ಉಂಟು ಮಾಡಲು ಅವಶ್ಯಕ ಕ್ರಮಕೈಗೊಳ್ಳಿರಿ! ಮದೀನಾದ ಮೇಲೆ ಶತ್ರುಗಳ ಹಿಡಿತ ಸಡಿಲಿಸಲು ಪ್ರಯತ್ನ ನಡೆಸಿರಿ".

ನುಐಮ್ ಒಂದು ಚತುರ ತಂತ್ರವನ್ನು ರೂಪಿಸುತ್ತಾರೆ. ಅವರು ಮೊದಲು ಯಹೂದಿ ಗೋತ್ರ ಬನುಕುರೈಝಾರ ಬಳಿ ತೆರಳುತ್ತಾರೆ. ಬನುಕುರೈಝಾರಿಗೆ ಕುರೈಶರು ಕೈ ಬಿಡುವುದಿಲ್ಲವೆಂದು ದೃಢಪಡಿಸಲು ಕೆಲ ಕುರೈಶರನ್ನು ಬನು ಕುರೈಝಾರ ಬಳಿ ಒತ್ತೆಯಾಳುಗಳನ್ನಾಗಿರಿಸಬೇಕೆಂಬ ಬೇಡಿಕೆಯನ್ನು ಕುರೈಶರ ಬಳಿ ಇಡಬೇಕೆಂದು ತಿಳಿಸುತ್ತಾರೆ. ಬನು ಕುರೈಝಾರಿಗೆ ನುಐಮ್‌ರ ಮಾತು ಹಿಡಿಸಿತು. ಅದರಂತೆ ಕುರೈಶರ ಬಳಿ ತಮ್ಮ ಬೇಡಿಕೆ ಇರಿಸಲು ರಾಯಭಾರಿಯನ್ನು ರವಾನಿಸುತ್ತಾರೆ.

ಇದರ ನಂತರ ನುಐಮ್ ಕುರೈಶ್ ನಾಯಕ ಅಬು ಸುಫ್ಯಾನ್‌ರ ಬಳಿ ತೆರಳಿ, ಬನು ಕುರೈಝಾ ಕುರೈಶರೊಂದಿಗೆ ವಿದ್ರೋಹ ಮಾಡುತ್ತಿರುವರೆಂದೂ, ವಾಸ್ತವಿಕವಾಗಿ ಅವರು ಮುಹಮ್ಮದ್‌ರ ಮಿತ್ರರಾಗಿರುವರೆಂದೂ, ತಿಳಿಸಿದರು. ಬನು ಕುರೈಝಾ ಕುರೈಶರಿಗೆ, ಅವರ ಕೆಲ ಮಂದಿಯನ್ನು ಒತ್ತೆಯಾಳುಗಳಾಗಿ ತಮ್ಮಲ್ಲಿ ಇರಿಸಬೇಕೆಂಬ ಬೇಡಿಕೆಯನ್ನು ಇಡುವರೆಂದೂ, ಆದರೆ ಈ ಒತ್ತೆಯಾಳುಗಳನ್ನು

ಅವರು ತಮ್ಮ ಮಿತ್ರತ್ವದ ಪುರಾವೆಯಾಗಿ ಮುಹಮ್ಮದ್‌ರಿಗೆ ಹಸ್ತಾಂತರಿಸಲಿರುವರು ಎಂದರು.

ಬನು ಕುರೈಝಾರ ರಾಯಭಾರಿ ಅಬು ಸುಫ್ಯಾನ್‌ರ ಬಳಿ ಬಂದು ಅವರ ಕೆಲ ಮಂದಿಯನ್ನು ಒತ್ತೆಯಾಳುಗಳನ್ನಾಗಿರಿಸಬೇಕೆಂಬ ಬೇಡಿಕೆಯನ್ನಿಟ್ಟಾಗ ಅಬು ಸುಫ್ಯಾನ್‌ರಿಗೆ ನುಐಮ್‌ರವರು ಹೇಳಿದ್ದ ಮಾತು ನಿಜವೆಂದು ಮನವರಿಕೆಯಾಯಿತು. ಬನು ಕುರೈಝಾ ಕುರೈಶರಿಗೆ ದ್ರೋಹ ಮಾಡುತ್ತಿರುವರೆಂದು ಅವರು ಭಾವಿಸಿದರು. ಅಬು ಸುಫ್ಯಾನ್ ಕೂಡಲೇ ಬನು ನಝೀರ್ ಗೋತ್ರದ ಮುಖಂಡರನ್ನು ಕರೆಸಿ ಬನು ಕುರೈಝಾ ಗೋತ್ರದ ವಿದ್ರೋಹದ ಬಗ್ಗೆ ಪ್ರಶ್ನಿಸುತ್ತಾರೆ. ಅಬು ಸುಫ್ಯಾನ್‌ರ ಮಾತನ್ನು ಕೇಳಿ ಬನು ನಝೀರ್ ಗೋತ್ರದ ನಾಯಕರು ದಿಗ್ಮೂಢರಾಗುತ್ತಾರೆ. ಅವರಿಗೆ ಅಬು ಸುಫ್ಯಾನ್‌ರ ಮಾತಿಗೆ ಏನೆಂದು ಉತ್ತರಿಸಬೇಕೆಂದು ಗೋಚರಿಸಲಿಲ್ಲ! ಅಬು ಸುಫ್ಯಾನ್‌ರಿಗೆ ಬನು ಕುರೈಝಾರ ವಿದ್ರೋಹಕ್ಕೆ ಇದು ಸಾಕ್ಷಿ ಎಂದು ಮನವರಿಕೆಯಾಯಿತು.

ಕುರೈಶ್ ಮತ್ತು ಅವರ ಮಿತ್ರ ಪಕ್ಷಗಳ ನಡುವೆ ಒಡಕಿನ ಚಿಹ್ನೆಗಳು ಕಾಣಲಾರಂಭಿಸಿದವು. ಕೆಲ ಪಂಗಡಗಳ ನಡುವೆ ನಂಬಿಕೆ ಮುಂದುವರಿಯಿತಾದರೂ ಇನ್ನುಳಿದ ಪಂಗಡಗಳ ನಡುವೆ ಅಪನಂಬಿಕೆ ಮೂಡಿತು. ಈ ಒಡಕಿನಿಂದಾಗಿ ಕುರೈಶ್ ಸೈನಿಕರ ಮನೋಬಲ ಕುಗ್ಗಿತು. ಮದೀನಾದ ಮುತ್ತಿಗೆ ಹಾಕಿ ಎರಡು ವಾರಗಳು ಸಂದಿದ್ದವು. ಮೇವಿಲ್ಲದೇ ಕುರೈಶ್ ಸೇನೆಯ ಅನೇಕ ಕುದುರೆಗಳು ಮತ್ತು ಒಂಟೆಗಳು ಸಾವನ್ನಪ್ಪಿದವು. ದೀರ್ಘ ಮುತ್ತಿಗೆಯ ಕಾರಣದಿಂದ ಬಳಲಿಕೆ, ಆಹಾರದ ಕೊರತೆ, ತೀವ್ರ ಚಳಿ ಮೊದಲಾದ ಕಾರಣಗಳಿಂದ ಕುರೈಶ್ ಸೈನಿಕರು ಕಂಗಾಲಾದರು. ಇದೇ ಸಮಯದಲ್ಲಿ ಭೀಕರ ತಂಗಾಳಿ ಬೀಸಲಾರಂಭಿಸಿತು.

ಪ್ರವಾದಿರಿಗೆ ಕುರೈಶ್ ಸೈನಿಕರ ಅವಸ್ಥೆಯ ಮಾಹಿತಿ ತಲುಪುತ್ತಿತ್ತು. ಹೆಚ್ಚಿನ ಮಾಹಿತಿಯನ್ನು ಪಡೆಯಲು ಪ್ರವಾದಿ ಹುದೈಫರನ್ನು ರಾತ್ರಿಯ ವೇಳೆ ರವಾನಿಸಿದರು. ಹುದೈಫ ಹಿಂತಿರುಗಿ, ಪ್ರವಾದಿರಿಗೆ, ಕುರೈಶ್ ಸೈನಿಕರು ಸಂಪೂರ್ಣವಾಗಿ ಕಂಗೆಟ್ಟಿರುವುದಾಗಿ, ಶತ್ರು ಸೈನ್ಯದಲ್ಲಿ ಗೊಂದಲ ಉಂಟಾಗಿರುವುದಾಗಿ ತೀವ್ರ ತಂಗಾಳಿಯಿಂದಾಗಿ, ಸೈನಿಕರ ಮನೋಬಲ ಸಂಪೂರ್ಣವಾಗಿ ಕುಗ್ಗಿದ್ದು, ಅನೇಕ ಸೈನಿಕರು ಬಿಡಾರಗಳನ್ನು ತೊರೆದು ವಾಪಸ್ಸು ತೆರಳಿದ್ದಾರೆ ಎಂದು ವರದಿ ನೀಡಿದರು.

ಪ್ರವಾದಿ ಮಾರನೆಯ ದಿನ ಫಜರ್ ನಮಾಝಿನ ಬಳಿಕ ಶತ್ರು ಸೇನೆ ಮದೀನಾ ಮುತ್ತಿಗೆಯಿಂದ ಹಿಂದೆ ಸರೆದು, ವಾಪಸ್ಸು ತೆರಳಿರುವ ಸುವಾರ್ತೆಯನ್ನು ಜನರಿಗೆ ನೀಡಿದರು. ಮದೀನಾ ಮುತ್ತಿಗೆ 25 ದಿನಗಳ ವರೆಗೆ ಇದ್ದಿತು. ಕುರೈಶರು

ಮುಸ್ಲಿಮ್ ಸೈನ್ಯದೊಂದಿಗೆ ನೇರವಾಗಿ ಹೋರಾಡಲಿಕ್ಕಾಗದೇ, ಕಷ್ಟ-ನಷ್ಟಗಳನ್ನು ಅನುಭವಿಸಿ, ಸೋಲಿನ ಅಪಮಾನದೊಂದಿಗೆ ಮರಳ ಬೇಕಾಯಿತು.

ಮುಸ್ಲಿಮರ ವಿಜಯದ ಸುದ್ದಿ ಕಾಳ್ಗಿಚ್ಚಿನಂತೆ ಅರೇಬಿಯಾದ್ಯಂತ ಹಬ್ಬಿತು. ಮುಸ್ಲಿಮರು ಹತ್ತು ಸಾವಿರ ಶತ್ರು ಸೇನೆಯನ್ನು ಎದುರಿಸಿದುದಷ್ಟೇ ಅಲ್ಲ, ಕಠಿಣ ಪರಿಸ್ಥಿತಿಯ ನಡುವೆಯೂ ಅಪ್ರತಿಮ ಮನೋಸ್ಥೈರ್ಯವನ್ನು ತೋರಿಸಿದ್ದರು.

# ಮುಸ್ಲಿಮರ ಔದಾರ್ಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪುತ್ರಿ ಝೈನಬ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಅಬುಲ್‌ಅಲ್‌ಆಸ್‌ರನ್ನು ವಿವಾಹವಾಗಿದ್ದರು. ಈ ಸಂಬಂಧದಿಂದ ಅವರಿಗೆ ಓರ್ವ ಪುತ್ರಿ ಉಮಾಮ ಸಹ ಜನಿಸಿದ್ದಳು. ವಿವಾಹದ ಸಮಯದಲ್ಲಿ ಅಬುಲ್ ಅಲ್ ಆಸ್ ಇನ್ನೂ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಝೈನಬ್ ತಮ್ಮ ಪತಿಯನ್ನು ಬಹಳ ಪ್ರೀತಿಸುತ್ತಿದ್ದರು. ಮಕ್ಕಾದಲ್ಲಿ ಅವರು ಪತಿಯೊಂದಿಗೆ ಇದ್ದರು. ಪ್ರವಾದಿ ಅವರನ್ನು ಪುಟ್ಟ ಮಗಳು ಉಮಾಮರೊಂದಿಗೆ ಮದೀನಾ ಹಿಜ್ರತ್ ಮಾಡಲು ತಿಳಿಸಿದರು. ಅವರು ಮದೀನಾಕ್ಕೆ ಹಿಜ್ರತ್ ಮಾಡಿದಾಗ ಅಬುಲ್ ಅಲ್ ಆಸ್ ಮಕ್ಕಾದಲ್ಲಿಯೇ ಉಳಿದುಕೊಂಡಿದ್ದರು. ವೈಚಾರಿಕ ಭಿನ್ನಾಭಿಪ್ರಾಯದ ಹೊರತಾಗಿಯೂ ಇವರಿಬ್ಬರೂ ಮರು ವಿವಾಹ ಮಾಡಿಕೊಂಡಿರಲಿಲ್ಲ.

ಮದೀನಾಕ್ಕೆ ಹಿಜ್ರತ್ ಮಾಡುವ ಸಂದರ್ಭದಲ್ಲಿ ಉಮ್ಮೆ ಸಲಾಮ್ಹ:ರ ಕುಟುಂಬ, ಅವರನ್ನು ಹಿಜ್ರತ್ ಮಾಡುವುದರಿಂದ ತಡೆಹಿಡಿದರು. ತಮ್ಮ ಪತ್ನಿಯೊಂದಿಗೆ ಪ್ರಯಾಣ ಮಾಡಲು ಅವರು ಅನುಮತಿಸಲಿಲ್ಲ. ಇಷ್ಟೇ ಅಲ್ಲ. ಉಮ್ಮೆ ಸಲಾಮ್ಹಃರ ಅತ್ತೆ–ಮಾವ, ಅವರ ಪುಟ್ಟ ಮಗುವನ್ನು ಅವರಿಂದ ಕಸಿದುಕೊಂಡರು. ಉಮ್ಮೆ ಸಲಾಮ್ಹ: ಪ್ರತಿದಿನ ಬೆಳಿಗ್ಗೆ ಮದೀನಾಕ್ಕೆ ಹೋಗುವ ರಸ್ತೆಗೆ ತೆರಳಿ ಸಂಜೆಯ ತನಕ ರೋಧಿಸುತ್ತಾ ಕುಳಿತಿರುತ್ತಿದ್ದರು. ಈ ರೀತಿ ಒಂದು ವರ್ಷ ಕಳೆಯಿತು. ಅವರ ಸಹೋದರ ಸಂಬಂಧಿ ಅವರ ಮೇಲೆ ಕರುಣೆ ತೋರಿ, ಮಗುವನ್ನು ಅವರೊಂದಿಗೆ ಒಗ್ಗೂಡಿಸಿದರು. ಮದೀನಾಕ್ಕೆ ಅವರು ತೆರಳಲು ಅನುಮತಿಯನ್ನೂ ನೀಡಲಾಯಿತು.

ಉಮ್ಮೆ ಸಲಾಮ್ಹಃ ಒಂಟೆಯನ್ನು ಏರಿ, ಒಬ್ಬಂಟಿಗರಾಗಿ ಮದೀನಾಕ್ಕೆ ಪ್ರಯಾಣ ಬೆಳೆಸಿದರು. ಮರಳುಗಾಡಿನಲ್ಲಿ ಒಬ್ಬಂಟಿಗರಾಗಿ ಸಾಗುತ್ತಿದ್ದಾಗ, ದಾರಿಯಲ್ಲಿ ಉಸ್ಮಾನ್‌ಬಿನ್ ತಲ್ಹ ಅವರನ್ನು ಕಂಡು, ಅವರನ್ನು ಮದೀನಾದವರೆಗೆ ಸುರಕ್ಷಿತರಾಗಿ ತಲುಪಿಸಲು ಮುಂದೆ ಬಂದರು. ಅದರಂತೆ ಅವರು ಉಮ್ಮೆ ಸಲಾಮ್ಹ:ರೊಂದಿಗೆ ಮದೀನಾದವರೆಗೆ

ಪ್ರಯಾಣ ಬೆಳೆಸಿ, ಅಲ್ಲಿಂದ ಮರಳಿದರು. ಉಮ್ಮೆ ಸಲಾಮ್ಹ ಉಸ್ಮಾನ್ ಬಿನ್ ತಲ್ಹ ಈ ಔದಾರ್ಯವನ್ನು ಸದಾ ಸ್ಮರಿಸುತ್ತಿದ್ದರು.

ಕುರೈಶರ ಮತ್ತೋರ್ವ ನಾಯಕ ಅಬೂ ಸುಫ್‌ಯಾನ್, ಪ್ರವಾದಿರ ಪುತ್ರಿ ಝೈನಬ್‌ರ ಬಿಡುಗಡೆ ಮತ್ತು ಅವರು ಮದೀನಾಕ್ಕೆ ಹಿಜ್ರತ್ ಮಾಡುವಲ್ಲಿ ಸಹಾಯ ಮಾಡಿದ್ದರು. ಬದ್ರ್ ಯುದ್ಧದಲ್ಲಿ ಝೈನಬ್‌ರ ಪತಿ ಅಬು ಅಲ್ ಆಸ್ ಮುಸ್ಲಿಮರ ಸೆರೆ ಸಿಕ್ಕಿದ್ದರು. ಆಗಿನ್ನೂ ಅವರು ಮುಸ್ಲಿಮರಾಗಿರಲಿಲ್ಲ. ಝೈನಬ್‌ರನ್ನು ಮದೀನಾಕ್ಕೆ ಕಳುಹಿಸಿಕೊಡಬೇಕೆಂಬ ಷರತ್ತಿನ ಮೇರೆಗೆ, ಅವರನ್ನು ಬಿಡುಗಡೆಗೊಳಿಸಲಾಗಿತ್ತು. ಅಬುಸುಫ್‌ಯಾನ್‌ರ ಪತ್ನಿ ಹಿಂದ, ಝೈನಬ್ ಮದೀನಾ ತೆರಳುವಲ್ಲಿ ಸಹಾಯ ಮಾಡುವುದಾಗಿ ತಿಳಿಸಿದರು. ಆದರೆ ಝೈನಬ್‌ರಿಗೆ ಅವರಲ್ಲಿ ವಿಶ್ವಾಸವಿರಲಿಲ್ಲ. ಕೊನೆಗೆ ಝೈನಬ್, ತಮ್ಮ ಪತಿಯ ಸಹೋದರ ಕಿನಾನ್ವರೊಂದಿಗೆ ಮದೀನಾ ಪ್ರಯಾಣ ಬೆಳೆಸಿದರು. ಆದರೆ ಕುರೈಶ್‌ನ ಕೆಲ ಮುಖಂಡರು, ಅವರನ್ನು ಮುಂದೆ ಪ್ರಯಾಣ ಬೆಳೆಸಲು ಬಿಡಲಿಲ್ಲ. ಕಿನಾನ್ವ ಈ ಕುರೈಶ್ ಮುಖಂಡರೊಂದಿಗೆ ಹೋರಾಡಲು ಸಜ್ಜಾದರು. ಇನ್ನೇನು ರಕ್ತಪಾತವಾಗುವುದಿತ್ತು. ಅಷ್ಟರಲ್ಲಿ ಅಬು ಸುಫ್‌ಯಾನ್ ಕೆಲ ಮುಖಂಡರೊಂದಿಗೆ ಅಲ್ಲಿ ಆಗಮಿಸಿದರು. ಸಂಘರ್ಷಣೆಯನ್ನು ತಪ್ಪಿಸಲಿಕ್ಕಾಗಿ ಅಬೂ ಸುಫ್‌ಯಾನ್ ಝೈನಬ್ ಮತ್ತು ಕಿನಾನ್ವರನ್ನು ಮಕ್ಕಾ ಹಿಂತೆರಳುವಂತೆ ಮನವೊಲಿಸಿದರು. ಕುರೈಶ್ ಮುಖಂಡರು ಸ್ವಲ್ಪ ಸಮಾಧಾನಗೊಂಡನಂತರ, ಅಬೂಸುಫ್‌ಯಾನ್, ಝೈನಬ್ ಮದೀನಾ ತೆರಳಲು ಸಹಾಯ ಮಾಡಿದರು.

ಕಂದಕ ಯುದ್ಧ ನಡೆದ ಕೆಲ ತಿಂಗಳುಗಳ ಬಳಿಕ ಉತ್ತರ ಭಾಗದಿಂದ ಸರಕು–ಸರಂಜಾಮುಗಳೊಂದಿಗೆ ಬರುತ್ತಿದ್ದ ಕುರೈಶ್ ಕಾರವಾನವನ್ನು ತಡೆಯಲು ಪ್ರವಾದಿ ಒಂದು ತಂಡವನ್ನು ರವಾನಿಸಿದರು. ಝೈದ್ ಈ ತಂಡದ ನಾಯಕರಾಗಿದ್ದರು. ಅವರು ಕಾರವಾನದ ಸರಕುಗಳನ್ನು ವಶಪಡಿಸಿ, ಕಾರವಾನದ ಅನೇಕರನ್ನು ಸೆರೆ ಹಿಡಿದರು. ಕೆಲ ಜನರು ತಪ್ಪಿಸಿಕೊಂಡು ಹೋಗುವಲ್ಲಿ ಯಶಸ್ವಿಯಾದರು. ತಪ್ಪಿಸಿಕೊಂಡು ಹೋಗುವವರಲ್ಲಿ ಅಬುಲ್ ಅಲ್ ಆಸ್ ಸಹ ಇದ್ದರು. ಮಕ್ಕಾ ಹಿಂತಿರುಗುವಾಗ ಅವರು ಮದೀನಾದಲ್ಲಿದ್ದ ಪತ್ನಿ ಮತ್ತು ಪುತ್ರಿಯನ್ನು ರಹಸ್ಯವಾಗಿ ಕಾಣ ಬಯಸಿದರು. ಅವರ ಈ ಕೃತ್ಯ ಬಹಳ ಗಂಡಾಂತರಕಾರಿಯಾಗಿತ್ತು. ಆದರೆ ಪತ್ನಿ ಮತ್ತು ಪುತ್ರಿಯನ್ನು ನೋಡುವ ಉತ್ಕಟಾಂಕ್ಷೆಯಿಂದಾಗಿ ಅಬುಲ್ ಅಲ್ ಆಸ್ ಎದುರಿಗಿದ್ದ ಅಪಾಯಗಳನ್ನು ಎದುರಿಸಲು ಸಿದ್ಧರಾದರು. ಮಧ್ಯರಾತ್ರಿಯ ವೇಳೆ ಪತ್ನಿಯ ಮನೆ ಬಾಗಿಲನ್ನು ತಟ್ಟಿದರು. ಝೈನಬ್ ಬಾಗಿಲನ್ನು ತೆರೆದು ಅಬುಲ್ ಅಲ್ ಆಸ್‌ರನ್ನು ಒಳ ಬರಮಾಡಿಕೊಂಡರು.

ಫಜರ್ ನಮಾಝ್‌ನ ಸಮಯದಲ್ಲಿ ಝೈನಬ್ ಎಂದಿನಂತೆ ನಮಾಝ್ ನಿರ್ವಹಿಸಲು ಮಸೀದಿಗೆ ಹೋದರು. ಪುರುಷರ ಹಿಂದೆ ಮಹಿಳೆಯರ ಮೊದಲ ಸಾಲಿನಲ್ಲಿ ಝೈನಬ್ ನಿಂತರು. ಪ್ರವಾದಿ ನಮಾಝ್ ಆರಂಭಿಸಲಿದ್ದ ಕ್ಷಣದಲ್ಲಿ,

ಝೈನಬ್ ಏರು ಧ್ವನಿಯಲ್ಲಿ "ಜನರೇ! ನಾನು ಅಬು ಅಲ್ ಆಸ್ ಬಿನ್ ರಾಬಿರಿಗೆ ರಕ್ಷಣೆ ನೀಡಿದ್ದೇನೆ" ಎಂದು ಘೋಷಿಸಿದರು. ಪ್ರವಾದಿರಿಗೆ ಅಬು ಅಲ್ ಆಸ್ ಝೈನಬ್‌ರ ಮನೆಗೆ ಬಂದಿರುವ ವಿಷಯ ಗೊತ್ತಿರಲಿಲ್ಲ. ನಮಾಝ್ ಪೂರ್ಣಗೊಳಿಸಿದ ಬಳಿಕ ಪ್ರವಾದಿ ಝೈನಬ್ ಆಗಷ್ಟೇ ಮಾಡಿದ್ದ ಘೋಷಣೆಯನ್ನು ದೃಢಪಡಿಸಿಕೊಂಡರು.

ಪ್ರವಾದಿ, ರಕ್ಷಣೆಯನ್ನು ನೀಡುವ ವ್ಯಕ್ತಿ ಯಾವನೇ ಆಗಿರಲಿ, ಅವನು/ಅವಳು ನೀಡಿರುವ ರಕ್ಷಣೆಯನ್ನು ಗೌರವಿಸಬೇಕು ಎಂದು ಆದೇಶಿಸಿದರು.

ಝೈನಬ್ ನಡೆದ ವೃತ್ತಾಂತವನ್ನು ಪ್ರವಾದಿರಿಗೆ ತಿಳಿಸಿದರು. ಕುರೈಶರು ಸರಕು ಸಾಮಗ್ರಿಗಳನ್ನು ಅಬುಲ್‌ಆಸ್‌ರಿಗೆ ವಹಿಸಿದ್ದರೆಂದೂ, ಈಗ ಮುಸ್ಲಿಮರು ಈ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದರಿಂದ ಕುರೈಶರಿಗೆ ಅದನ್ನು ಹಿಂತಿರುಗಿಸುವ ಹೊಣೆ ಅಬುಲ್ ಆಸ್‌ರದ್ದಾಗಿದೆ ಎಂದು ಝೈನಬ್ ಪ್ರವಾದಿರಿಗೆ ತಿಳಿಸಿದರು. ಪ್ರವಾದಿ ಮುಸ್ಲಿಮರಿಗೆ ಅವರು ಬಯಸಿದರೆ, ಅವರು ವಶಪಡಿಸಿಕೊಂಡಿದ್ದ ವಸ್ತುಗಳನ್ನು ಅಬುಲ್‌ಆಸ್‌ರಿಗೆ ಹಿಂತಿರುಗಿಸಬಹುದು ಎಂದು ತಿಳಿಸಿದರು. ಅಬುಲ್‌ಆಸ್‌ರ ಎಲ್ಲಾ ವಸ್ತುಗಳನ್ನು ಅವರಿಗೆ ಹಿಂತಿರುಗಿಸಲಾಯಿತು. ಕೆಲ ಸಹಾಬಿಗಳು ಅಬು ಅಲ್‌ಆಸ್‌ರಿಗೆ ಇಸ್ಲಾಮ್ ಸ್ವೀಕರಿಸಿ, ಎಲ್ಲಾ ಸರಕುಗಳನ್ನು ಅವರೇ ಇಟ್ಟುಕೊಳ್ಳುವಂತೆ ಸಲಹೆ ನೀಡಿದರು. ಜನರ ವಿಶ್ವಾಸಕ್ಕೆ ದ್ರೋಹಬಗೆಯಲು ಅವರು ನಿರಾಕರಿಸಿದರು. ಅಬುಲ್‌ಆಸ್ ಸಾಮಗ್ರಿಗಳೊಂದಿಗೆ ಮಕ್ಕಾ ಹಿಂತಿರುಗಿ, ಕುರೈಶರಿಗೆ ಅವುಗಳನ್ನು ಮರಳಿಸಿದರು. ನಂತರ ಮದೀನಾ ಒಂದು ಇಸ್ಲಾಮ್ ಸ್ವೀಕರಿಸಿದರು. ಮುಸ್ಲಿಮರ ಔದಾರ್ಯದ ಕಾರಣದಿಂದಾಗಿ ಅಬುಲ್ ಆಸ್‌ರಿಗೆ ಕುರೈಶರ ಸರಕುಗಳನ್ನು ಹಿಂತಿರುಗಿಸಲು ಅವಕಾಶ ದೊರೆತು, ಈ ಘಟನೆಯಿಂದ ಪ್ರಭಾವಿತರಾದ ಅಬುಲ್‌ಆಸ್ ಇಸ್ಲಾಮ್ ಸ್ವೀಕರಿಸಿದರು.

ಇಸ್ಲಾಮಿನ ಆರಂಭಕಾಲದ ಮುಸ್ಲಿಮರ ಔದಾರ್ಯವನ್ನು ನಾವು ಇಲ್ಲಿ ಕಾಣಬಹುದಾಗಿದೆ. ಪ್ರವಾದಿರಂತೆ, ಮುಸ್ಲಿಮರಿಗೆ ಅಬು ಅಲ್ ಆಸ್‌ರಿಂದ ಯಾವುದೇ ಅಗತ್ಯತೆ ಇರಲಿಲ್ಲ. ಅಬು ಅಲ್ ಆಸ್ ಮುಸ್ಲಿಮರಾಗಿರಲಿಲ್ಲ, ಅವರು ಶತ್ರು ಪಾಳೆಯಕ್ಕೆ ಸೇರಿದವರಾಗಿದ್ದರು, ಇಸ್ಲಾಮ್ ಸ್ವೀಕರಿಸಲು ತಿಳಿಸಿದರೂ ಅವರು ನಿರಾಕರಿಸಿದ್ದರು. ಆದಾಗ್ಯೂ, ಮುಸ್ಲಿಮರು ಎಲ್ಲಾ ಸರಕುಗಳನ್ನು ಅವರಿಗೆ ಹಿಂತಿರುಗಿಸಿದರು, ಅವರಿಗೆ ಮಕ್ಕಾ ಹಿಂತೆರಳಲು ಬಿಟ್ಟುಕೊಟ್ಟರು. ಇದರಿಂದಾಗಿ ಅಬು ಅಲ್ ಆಸ್‌ರಿಗೆ ಇಸ್ಲಾಮ್ ಬಗ್ಗೆ ಪುನರ್ ಚಿಂತನೆ ಮಾಡಲು ಅವಕಾಶ ದೊರಕಿತು. ಸಂಧಿಗ್ಧ ಪರಿಸ್ಥಿತಿಯಲ್ಲಿ ಮುಸ್ಲಿಮರ ರಕ್ಷಣೆಯೂ ಅವರಿಗೆ ದೊರಕಿತ್ತು.

☆

# ವಾಕ್ ಸ್ವಾತಂತ್ರ್ಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪುತ್ರಿ ಝೈನಬ್ ತಮ್ಮ ಪತಿಯ ಪರವಾಗಿ ಮಸೀದಿಯಲ್ಲಿ ಸಾರ್ವಜನಿಕವಾಗಿ, ನಿರ್ಭಿಡರಾಗಿ ಅವರಿಗೆ ರಕ್ಷಣೆ ನೀಡುವ ಘೋಷಣೆ ಮಾಡಿದರು. ಅವರು ಈ ರೀತಿ ಘೋಷಣೆ ಮಾಡಿದುದಕ್ಕಾಗಿ ಯಾರೂ ಅವರನ್ನು ಆಕ್ಷೇಪಿಸಲಿಲ್ಲ. ಮಸೀದಿಯಲ್ಲಿ ಸ್ತ್ರೀಯರಿರಲಿ, ಪುರುಷರಿರಲಿ, ಸ್ವತಂತ್ರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಮುಕ್ತ ಸ್ವಾತಂತ್ರ್ಯವಿತ್ತು.

ಮತ್ತೊಂದು ಸಂದರ್ಭದಲ್ಲಿ ಖೌಲಿ. ಬಿಂತೆ ತಲಾಬಃ ಔಸ್ ಬಿನ್ ಸಾಬಿತ್‌ರ ಪತ್ನಿ ಮಸ್ಜಿದ್ ನಬವಿಯಲ್ಲಿ ಆಗಿನ ಅರಬಿ ಬುಡಕಟ್ಟು ಸಂಪ್ರದಾಯದ ವಿರುದ್ಧ ಧ್ವನಿ ಎತ್ತಿದರು. ಕೆಲ ಬುಡಕಟ್ಟು ಜನಾಂಗದ ಪುರುಷರು ಪತ್ನಿಯೊಂದಿಗೆ ಜಗಳವಾಡಿದಾಗ ಅಥವಾ ಕೋಪಾವೇಷದಲ್ಲಿ “ನೀನು ನನ್ನ ತಾಯಿಯ ಬೆನ್ನಿನಂತೆ” ಎಂದು ಘೋಷಿಸುತ್ತಿದ್ದರು. ಹೀಗೆ ಘೋಷಿಸಿದ ಕ್ಷಣದಿಂದ ಆತನ ಪಾಲಿಗೆ ಆತನ ಪತ್ನಿ ನಿಷಿದ್ಧವಾಗಿ ಬಿಡುತ್ತಿದ್ದಳು. ಆಕೆಯೊಂದಿಗೆ ಎಲ್ಲಾ ವೈವಾಹಿಕ ಸಂಬಂಧಗಳು ಅಂತ್ಯಗೊಳ್ಳುತ್ತಿದ್ದವು. ಆದರೆ ಆಕೆಗೆ ಮರು ವಿವಾಹದ ಅವಕಾಶವಿರುತ್ತಿರಲಿಲ್ಲ. ಹೀಗೆ ಆಕೆಯ ಇಂತಹ ಸ್ತ್ರೀಯರ ಸ್ಥಿತಿ ತ್ರಿಶಂಕುವಾಗುತ್ತಿತ್ತು.

ಮಸ್ಜಿದ್‌ಯೆನಬವಿಯಲ್ಲಿ ಖೌಲಿಃ ರವರು ಎತ್ತಿದ ಆಕ್ಷೇಪಣೆ ಎಷ್ಟು ಪ್ರಭಾವಶಾಲಿ ಮತ್ತು ಪ್ರಬಲವಾಗಿತ್ತೆಂದರೆ, ಅಲ್ಲಾಹ್ ಈ ಘಟನೆಯ ಕುರಿತು ಕುರ್‌ಆನಿನ ಆಯತ್‌ಗಳನ್ನು ಅವತೀರ್ಣಗೊಳಿಸಿದನು.

> “ನಿಮ್ಮೊಡನೆ ತನ್ನ ಪತಿಯ ವಿಷಯದಲ್ಲಿ ವಾದಿಸುತ್ತಿರುವ ಹಾಗೂ ಅಲ್ಲಾಹನೊಡನೆ ಮೊರೆಯಿಡುತ್ತಿರುವ ಸ್ತ್ರೀಯ ಮಾತನ್ನು ಅಲ್ಲಾಹ್

ಆಲಿಸಿದನು. ಅಲ್ಲಾಹ್ ನಿಮ್ಮಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದಾನೆ".
(ಪವಿತ್ರ ಕುರ್‌ಆನ್ 58:1)

ನಂತರ, ಈ ಸಂಪ್ರದಾಯವನ್ನು ಅನೂರ್ಜಿತಗೊಳಿಸಲಾಯಿತು.

"ನಿಮ್ಮ ಪೈಕಿ ತಮ್ಮ ಪತ್ನಿಯರನ್ನು 'ಝಿಹಾರ್' ಮಾಡುವವರ ಪತ್ನಿಯರು ಅವರ ತಾಯಂದಿರಲ್ಲ. ಅವರನ್ನು ಹೆತ್ತವರೇ ಅವರ ತಾಯಂದಿರು. ಇವರು ಅತ್ಯಂತ ಅಪ್ರಿಯ ಹಾಗೂ ಸುಳ್ಳಾದ ಒಂದು ಮಾತನ್ನು ಹೇಳುತ್ತಾರೆ". (ಪವಿತ್ರ ಕುರ್‌ಆನ್ 58:2)

ಮಸೀದಿಯಲ್ಲಿ, ನಮಾಝಿನ ವೇಳೆ ಸ್ತ್ರೀಯರು ಪುರುಷರ ಹಿಂದೆ ಪಂಕ್ತಿ ಬದ್ಧರಾಗಿ ನಿಂತು ನಮಾಝ್ ನಿರ್ವಹಿಸುತ್ತಿದ್ದರು. ಮಸೀದಿಯಲ್ಲಿ ಮಹಿಳೆಯರು ಸಭ್ಯ ರೀತಿಯಲ್ಲಿ, ಘನತೆ, ಗೌರವದೊಂದಿಗೆ ನಡೆದುಕೊಳ್ಳು ತ್ತಿದ್ದರು. ಮಸೀದಿಯಲ್ಲಿ ಮಹಿಳೆಯರು ನಮಾಝ್ ನಿರ್ವಹಿಸುತ್ತಿದ್ದರು ಮತ್ತು ಅಧ್ಯಯನವನ್ನು ನಡೆಸುತ್ತಿದ್ದರು. ನಮಾಝ್ ನಿರ್ವಹಿಸಿದ ನಂತರ ಮಸೀದಿಯಿಂದ ಮಹಿಳೆಯರು ತೆರಳುವವರೆಗೆ ಪುರುಷರು ಕಾಯುವಂತೆ ಪ್ರವಾದಿ ಆದೇಶಿಸಿದ್ದರು. ಪ್ರವಾದಿ ಸದಾ ಮಹಿಳೆಯರೊಂದಿಗೆ ಕರುಣೆಯಿಂದ ವರ್ತಿಸುತ್ತಿದ್ದರು. ಮಹಿಳೆಯರ ಅಭಿಪ್ರಾಯವನ್ನು, ಪ್ರಶ್ನೆಗಳನ್ನು ಗಮನವಿಟ್ಟು ಕೇಳುತ್ತಿದ್ದರು. ಮಹಿಳೆಯರು ಮುಕ್ತವಾಗಿ ಚರ್ಚಿಸಲು, ಪ್ರಶ್ನೆ ಕೇಳಲು ಪ್ರವಾದಿ ಪ್ರೋತ್ಸಾಹಿಸುತ್ತಿದ್ದರು.

☆

## ಅಲ್ಲಾಹ್ ನನ್ನನ್ನು ಕ್ಷಮಿಸಲಿ....

ಉಮರ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಖಿಲಾಫತ್‌ನ ಕಾಲದಲ್ಲಿ ಮುಸ್ಲಿಮರು ಸುಸ್ಥಿತಿಯಲ್ಲಿದ್ದು ಜನರು ಹೆಚ್ಚಿನ ಮೆಹ್ರ್ ಮೊತ್ತವನ್ನು ಗೊತ್ತುಪಡಿಸಲಾರಂಭಿಸಿದರು. ಇದರಿಂದ ಆತಂಕಗೊಂಡ ಉಮರ್ ಜನರು 400 ದಿಹ್ರಮ್‌ಗಿಂತ ಹೆಚ್ಚಿನ ಮಹ್ರ್ ನಿಗದಿಪಡಿಸಬಾರದೆಂದು ಈ ರೀತಿ ಮಾಡಿದರೆ ಅದನ್ನು ಬೈತುಲ್ ಮಾಲ್‌ನಲ್ಲಿ ಜಮಾ ಮಾಡುವುದಾಗಿ ಆದೇಶವನ್ನು ಹೊರಡಿಸಿದರು. ಓರ್ವ ಮಹಿಳೆಯು ಕೂಡಲೇ ಮಸೀದಿಯಲ್ಲಿ ಎದ್ದುನಿಂತು "ಖಲೀಫರೇ, ಮಹ್ರ್‌ಗೆ ಕುರ್‌ಆನ್ ಯಾವುದೇ ಮಿತಿಯನ್ನು ನಿಗದಿಪಡಿಸದಿರುವಾಗ, ಮಹ್ರ್‌ಗೆ ಮಿತಿ ನಿಗದಿಪಡಿಸುವ ಅಧಿಕಾರವನ್ನು ನಿಮಗೆ ಯಾರು ನೀಡಿದರು?" ಎಂದು ಪ್ರಶ್ನಿಸಿದಳು. ನಂತರ ಕುರ್‌ಆನಿನ ಈ ಸೂಕ್ತವನ್ನು ಪಠಿಸಿದಳು.

> "ನೀವು ಓರ್ವ ಪತ್ನಿಯ ಸ್ಥಾನದಲ್ಲಿ ಇನ್ನೋರ್ವ ಪತ್ನಿಯನ್ನು ತರುವ ನಿರ್ಧಾರವನ್ನೇ ಮಾಡಿಕೊಂಡರೆ ಅವಳಿಗೆ ನೀವು (ಮೊದಲ ಪತ್ನಿಗೆ) ಸಂಪತ್ತಿನ ರಾಶಿಯನ್ನೇ ಕೊಟ್ಟಿದ್ದರೂ ಅದರಿಂದ ಲೇಶಮಾತ್ರವನ್ನೂ ಹಿಂದಕ್ಕೆ ಪಡೆಯಬಾರದು. ನೀವು ಸುಳ್ಳಾರೋಪ ಹೊರಿಸಿ ಮತ್ತು ಪ್ರತ್ಯಕ್ಷ ಅತಿರೇಕವೆಸಗಿ ಅದನ್ನು ಹಿಂದಕ್ಕೆ ಪಡೆಯುವಿರಾ?"(ಪವಿತ್ರ ಕುರ್‌ಆನ್ 4:20)

ಕೂಡಲೇ ಉಮರ್‌ರಿಗೆ ತಮ್ಮ ತಪ್ಪಿನ ಅರಿವಾಯಿತು. ಆದೇಶವನ್ನು ಹಿಂಪಡೆಯುತ್ತಾ, "ಉಮರ್‌ಗಿಂತ ಹೆಚ್ಚಿನ ಜ್ಞಾನವನ್ನು ಈ ಮಹಿಳೆ ಒಳಗೊಂಡಂತೆ ಎಲ್ಲಾರೂ ಹೊಂದಿದ್ದಾರೆ" ಎಂದರು.

☆

# ಮಾನವಸೇವೆ

ಕುರ್‌ಆನ್ ಎರಡು ಬುನಾದಿ ವಿಷಯಗಳ ಬಗ್ಗೆ ಆದೇಶ ನೀಡುತ್ತದೆ. ಒಂದು ಮನುಷ್ಯನು ಅಲ್ಲಾಹನೊಂದಿಗೆ ಗಾಢ ಸಂಬಂಧವನ್ನು ಹೊಂದಬೇಕೆಂದೂ, ಕೇವಲ ಏಕೈಕನಾದ ಅಲ್ಲಾಹನ ಆರಾಧನೆಯನ್ನು ಮಾತ್ರ ಮಾಡಬೇಕೆಂದೂ, ಆತನ ಆರಾಧನೆಯಲ್ಲಿ ಇತರ ಯಾರನ್ನೂ ಷಾಮೀಲುಗೊಳಿಸಬಾರದೆಂದೂ ಆದೇಶಿಸುತ್ತದೆ. ಎರಡನೆಯದಾಗಿ ಮನುಷ್ಯನು ಇತರ ಜನರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವ್ಯವಹರಿಸಬೇಕೆಂದು, ತನ್ನ ತಂದೆತಾಯಿಗಳ, ಸಂಬಂಧಿಕರ, ನೆರೆಹೊರೆಯರ ಹಕ್ಕುಗಳನ್ನು ನೀಡಬೇಕೆಂದೂ, ಸಮಾಜದ ನಿರ್ಗತಿಕರೊಂದಿಗೆ, ಅನಾಥರೊಂದಿಗೆ ಅತ್ಯುತ್ತಮ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಆದೇಶಿಸುತ್ತದೆ. ತನ್ನ ಸ್ವತ್ತು, ಘನತೆ, ಗೌರವವನ್ನು ಕಾಪಾಡಿಕೊಳ್ಳುವ ರೀತಿಯಲ್ಲಿಯೇ ಇತರರ ಸ್ವತ್ತು, ಘನತೆ, ಗೌರವಗಳನ್ನು ಕಾಪಾಡಬೇಕೆಂದು, ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸಬೇಕೆಂದೂ, ಆದೇಶಿಸುತ್ತದೆ. ಪವಿತ್ರ ಕುರ್‌ಆನ್‌ನಲ್ಲಿ ಈ ಆದೇಶಗಳನ್ನು ಅನೇಕ ಸಲ ಪುನರಾವರ್ತಿಸಲಾಗಿದೆ.

ವ್ಯಕ್ತಿಯು ಪ್ರಬಲನಾಗಿದ್ದರೆ, ಬಲಹೀನರ ವಿರುದ್ಧ ತನ್ನ ಶಕ್ತಿಯನ್ನು ದುರುಪಯೋಗಪಡಿಸಬಾರದು. ಇದಕ್ಕೆ ವ್ಯತಿರಿಕ್ತವಾಗಿ ಬಲಹೀನರಿಗೆ ಆಸರೆಯಾಗಬೇಕು. ವ್ಯಕ್ತಿಯ ವರ್ತನೆಯಿಂದ ಜನ ಬೇಸತ್ತಬಾರದು. ವ್ಯಕ್ತಿಯ ವರ್ತನೆಯಿಂದ ಜನ ಶಾಂತಿ, ನೆಮ್ಮದಿ ಪಡೆಯುವಂತಿರಬೇಕು. ಕುರ್‌ಆನ್ ಈ ಬೋಧನೆಗಳಿಗೆ ಬಹಳ ಪ್ರಾಮುಖ್ಯತೆ ನೀಡಿದ್ದು ಕುರ್‌ಆನಿನಲ್ಲಿ ಅನೇಕ ಕಡೆ ಈ ಬೋಧನೆಗಳ ಪುನರಾವರ್ತನೆಯಾಗಿದೆ. ಕುರ್‌ಆನಿನ ಅಧ್ಯಾಯ 17 'ಬನೀ ಇಸ್ರಾಈಲ್' ಇದರ ಉತ್ತಮ ನಿದರ್ಶನವಾಗಿದೆ.

# ಅಲ್ಲಾಹನ ಸಂಪ್ರೀತಿ

ಈ ಜಗತ್ತಿನಲ್ಲಿ ಕೆಲ ಜನರು ಸ್ಥಿತಿವಂತರಾಗಿರುತ್ತಾರೆ ಮತ್ತು ಇನ್ನು ಕೆಲವರಿಗೆ ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಕಷ್ಟಕರವಾಗಿರುತ್ತದೆ. ಸ್ಥಿತಿವಂತರು ಇತರ ಜನರಿಗೆ ಸಹಾಯ ನೀಡುವುದು ಅವರ ಮೇಲಿನ ಕರ್ತವ್ಯವಾಗಿರುತ್ತದೆ. ಸ್ಥಿತಿವಂತರ ಸಂಪತ್ತಿನಲ್ಲಿ ಸಂಬಂಧಿಕರ, ನೆರೆಹೊರೆಯವರ, ನಿರ್ಗತಿಕರ, ಅನಾಥರ ಹಕ್ಕು ಇರುತ್ತದೆ. ಅಲ್ಲಾಹನು ಸಂಪತ್ತನ್ನು ನೀಡಿಯೂ ನಾವು ಇತರರಿಗೆ ಸಹಾಯ ಮಾಡದಿದ್ದರೆ, ಅದು ಅಲ್ಲಾಹನಿಗೆ ಕೃತಘ್ನತೆ ತೋರಿದಂತಾಗುತ್ತದೆ.

ಇಸ್ಲಾಮ್ ಜನರ ಸೇವೆ ಮಾಡುವುದನ್ನು ಅಲ್ಲಾಹನ ಸೇವೆ ಮಾಡುವುದಕ್ಕೆ ಸಮವೆಂದಿದೆ. ಜನರು ಕಷ್ಟದಲ್ಲಿರುವಾಗ, ಅವರಿಗೆ ಸಹಾಯ ಮಾಡಿದರೆ, ಅದು ಅಲ್ಲಾಹನಿಗೆ ಸಹಾಯ ಮಾಡಿದಂತೆ. ಬೇಡುವವನಿಗೆ ಏನನ್ನೂ ನೀಡದೇ ಮರಳಿಸಿದರೆ, ಅಲ್ಲಾಹನಿಗೆ ಏನನ್ನೂ ನೀಡದಿರುವುದಕ್ಕೆ ಸಮ. ಅಲ್ಲಾಹನನ್ನು ಸಂಪ್ರೀತಿಗೊಳಿಸುವ ಅತ್ಯುತ್ತಮ ವಿಧಾನ ಆತನ ಸೃಷ್ಟಿಗಳನ್ನು ಸಂತುಷ್ಟಗೊಳಿಸುವುದಾಗಿದೆ. ಭೂಮಿಯ ಮೇಲೆ ನಾವು ಪರಸ್ಪರ ಕರುಣೆ ತೋರದಿದ್ದರೆ ಅಲ್ಲಾಹ್ ನಮ್ಮ ಮೇಲೆ ಕರುಣೆ ತೋರುವುದಿಲ್ಲ.

ಪ್ರವಾದಿರ ಒಂದು ವಚನ ಈ ಸತ್ಯವನ್ನು ಅತ್ಯುತ್ತಮ ರೀತಿಯಲ್ಲಿ ವಿಷದೀಕರಿಸುತ್ತದೆ.

ಅಸಹಾಯಕರ ಸಹಾಯಕ್ಕೆ ಧಾವಿಸುವುದರಿಂದ ಅಲ್ಲಾಹ್ ಸಂತುಷ್ಟಗೊಳ್ಳುತ್ತಾನೆ. ಭೂಮಿಯ ಮೇಲಿರುವವರ ಮೇಲೆ ಕರುಣೆ ತೋರುವವರ ಮೇಲೆ ಅಲ್ಲಾಹ್ ಕರುಣೆ ತೋರುತ್ತಾನೆ.

"ನಿರ್ಣಾಯಕ ದಿನದಂದು ಅಲ್ಲಾಹ್ ಹೇಳುವನು, ಓ ಆದಮನ ಪುತ್ರನೇ, ನಾನು ರೋಗಗ್ರಸ್ಥನಾಗಿದ್ದೆ. ನೀನು ನನ್ನ ಯೋಗಕ್ಷೇಮ ವಿಚಾರಿಸಲು ಬರಲಿಲ್ಲ. ವ್ಯಕ್ತಿಯು ನುಡಿಯುವನು, ನೀನು ಸರ್ವಲೋಕಗಳ ಒಡೆಯನಾಗಿರುವೆ. ನೀನು ಎಂದು ರೋಗಗ್ರಸ್ಥನಾಗಿದ್ದೆ? ಅಲ್ಲಾಹ್ ಹೇಳುವನು. ಓರ್ವ ವ್ಯಕ್ತಿಯು ರೋಗಗ್ರಸ್ಥನಾಗಿದ್ದ. ನೀನು ಅವನ ಯೋಗಕ್ಷೇಮ ವಿಚಾರಿಸಲಿಲ್ಲ. ಅಲ್ಲಾಹ್ ಪುನಃ ಹೇಳುವನು "ಓ ಆದಮರ ಪುತ್ರನೇ, ನಾನು ಹಸಿವೆಯಿಂದ ಇದ್ದೆ. ನೀನು ನನಗೆ ಉಣ ಬಡಿಸಲಿಲ್ಲ. ವ್ಯಕ್ತಿಯು ನುಡಿಯುವನು. ಅಲ್ಲಾಹ್! ನೀನು ಎಂದು ಹಸಿವೆಯಿಂದ ಇದ್ದೆ? ಅಲ್ಲಾಹನು ಹೇಳುವನು, ನಿರ್ದಿಷ್ಟ ವ್ಯಕ್ತಿ ಹಸಿವೆಯಿಂದ ಇದ್ದಾಗ ನೀನು ಅವನನ್ನು ಉಣಬಡಿಸಲಿಲ್ಲ. ಭೂಮಿಯಲ್ಲಿ ನೀವು ಜನರಿಗೆ ಅವರ ಅವಶ್ಯಕತೆಗಳನ್ನು ಪೂರೈಸಿದ್ದರೆ, ಅದರ ಪ್ರತಿಫಲವನ್ನು ಪರಲೋಕದಲ್ಲಿ ಪಡೆಯುತ್ತಿದ್ದಿರಿ" ಅಲ್ಲಾಹ್ ಹೇಳುವನು: ಓ ಆದಮನ ಪುತ್ರನೇ, ನಾನು ನಿನಗೆ ನೀರು ಬೇಡಿದ್ದೆ. ಆದರೆ ನೀನು ನನಗೆ ನೀರನ್ನು

ನೀಡಲಿಲ್ಲ? ವ್ಯಕ್ತಿಯು ಹೇಳುವನು: ಓ ಸಕಲ ಲೋಕಗಳ ಪಾಲಕನೇ, ನೀನು ಎಂದು ಬಾಯಾರಿಕೆಯಿಂದ ಬಳಲುತ್ತಿದ್ದಿ? ಅಲ್ಲಾಹ್ ಉತ್ತರಿಸುವನು: ನಿರ್ದಿಷ್ಟ ದಿನದಂದು ಓರ್ವ ವ್ಯಕ್ತಿ ನಿನಗೆ ನೀರು ಬೇಡಿದಾಗ, ನೀನು ಅವನಿಗೆ ನೀರನ್ನು ನೀಡಲು ನಿರಾಕರಿಸಿದ್ದಿ ಅಂದು ನೀನು ಅವನ ಬಾಯಾರಿಕೆಯನ್ನು ತಣಿಸಿದ್ದರೆ, ಇಂದು ಅದರ ಪ್ರತಿಫಲವನ್ನು ಪಡೆಯುತ್ತಿದ್ದಿ".

ಜನರ ಸೇವೆ ಮಾಡುವುದನ್ನು ಅಲ್ಲಾಹನ ಸೇವೆಗೈಯುವುದಕ್ಕೆ ಸಮವೆಂದು ಕುರ್‌ಆನ್ ತಿಳಿಸುತ್ತದೆ. ಇದನ್ನು ಕಡೆಗಣಿಸುವುದು ದೊಡ್ಡ ಲೋಪವಾಗುತ್ತದೆ.

## ಯಾವುದೇ ಬೇಧಭಾವ ತೋರದೇ ಸಮಾಜಸೇವೆಗೈಯುವುದು

ಯಾವುದೇ ಬೇಧಭಾವ ತೋರದೇ ಸಮಾಜದ ಎಲ್ಲಾ ಜನರ ಸೇವೆಯನ್ನು ಮಾಡಬೇಕೆಂದು ಇಸ್ಲಾಮ್ ಬೋಧಿಸುತ್ತದೆ. ಸಮಾಜಸೇವೆ ಮಾಡುವಾಗ ಜನರ ಧರ್ಮ, ಜಾತಿ, ದೇಶ, ವರ್ಣ ಮೊದಲಾದವುಗಳನ್ನು ಪರಿಗಣಿಸಬಾರದು. ಮತಾಂಧತೆ ದ್ವೇಷವನ್ನೂ, ವೈರತ್ವವನ್ನೂ ಕಲಿಸುತ್ತದೆ. ರಾಷ್ಟ್ರೀಯತೆಯ ಪ್ರತಿಪಾದಕ ಎಂದಿಗೂ ಇತರ ರಾಷ್ಟ್ರೀಯರನ್ನು ಸಹಿಷ್ಣುತೆಯಿಂದ, ಸಹಾನುಭೂತಿಯಿಂದ ನೋಡುವುದಿಲ್ಲ. ಪ್ರವಾದಿ ಈ ರೀತಿ ನುಡಿದಿರುವರಾಗಿ ಅನಸ್ ವರದಿ ಮಾಡಿರುವರು.

"ಎಲ್ಲಾ ಜನರು ಅಲ್ಲಾಹನ ಕುಟುಂಬವಾಗಿದ್ದಾರೆ. ಯಾರು ಕುಟುಂಬದ ಅತ್ಯುತ್ತಮ ಸೇವೆಗೈಯುತ್ತಾರೋ, ಅವರೇ ನಿಮ್ಮಲ್ಲಿಯ ಶ್ರೇಷ್ಠರು."

ಕುರ್‌ಆನ್ ಬಡವರ, ಅಸಹಾಯಕರ, ನಿರ್ಗತಿಕರ ಸೇವೆಯನ್ನು ಮಾಡಬೇಕೆಂದು ಆದೇಶಿಸಿದೆ. ಅದು ಎಂದೂ ಕೇವಲ ಮುಸ್ಲಿಮರ ಅಥವಾ ಸಂಬಂಧಿಕರ ಸೇವೆಯನ್ನು ಮಾಡಬೇಕೆಂದು ತಿಳಿಸಿಲ್ಲ. ಜನರು ಸಂಬಂಧಿಕರಿರಲಿ ಅಥವಾ ಇಲ್ಲದಿರಲಿ, ನಮ್ಮ ಭಾಷೆಯನ್ನು ಮಾತಾಡುವವರಿರಲಿ ಅಥವಾ ಇಲ್ಲದಿರಲಿ, ನಮ್ಮ ಮಾತನ್ನು ಒಪ್ಪಲಿ ಅಥವಾ ಒಪ್ಪದಿರಲಿ, ಯಾವುದೇ ಭೇದ ಭಿನ್ನತೆವಿಲ್ಲದೇ ಸೇವೆಗೆ ಅರ್ಹರಾಗಿದ್ದಾರೆ. ಯಾವನೇ ಮನುಷ್ಯ ನೋವಿನಲ್ಲಿದ್ದರೆ, ಅವನಿಗೆ ಸಹಾಯ ಮಾಡದೇ ಇರಬಾರದು. ಏಕೆಂದರೆ, ವರ್ಣ, ರಾಷ್ಟ್ರೀಯತೆಯ, ಜನಾಂಗದ, ಭಾಷೆಯ ವ್ಯತ್ಯಾಸವಿದ್ದರೂ, ಎಲ್ಲರೂ ಮಣ್ಣಿನಿಂದ ಸೃಷ್ಟಿಸಲ್ಪಟ್ಟಿದ್ದಾರೆ ಮತ್ತು ಎಲ್ಲರೂ ಆದಮರ ಸಂತತಿಗಳಾಗಿದ್ದಾರೆ. ಪ್ರವಾದಿರ ಈ ವಚನಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಎಲ್ಲಾ ಜನರು ಆದಮರ ಸಂತತಿಯಾಗಿದ್ದು ಒಂದೇ ಕುಟುಂಬದ ಸದಸ್ಯರಾಗಿದ್ದಾರೆ. ಈ ಕೆಳಗೆ ನೀಡಿರುವ ಪ್ರವಾದಿರ ವಚನಗಳು ಈ ಮಾತನ್ನು ಪುಷ್ಟೀಕರಿಸುತ್ತವೆ.

ಜಾಬಿರ್ ಬಿನ್ ಅಬ್ದುಲ್ಲಾ ವರದಿ ಮಾಡಿರುವರು.

ಪ್ರವಾದಿ ನುಡಿದಿರುವರು: "ಯಾರು ಇತರರ ಮೇಲೆ ಕರುಣೆ ತೋರುವುದಿಲ್ಲವೋ, ಅಲ್ಲಾಹ್ ಅವರ ಮೇಲೆ ಕರುಣೆ ತೋರುವುದಿಲ್ಲ."

ಅಬ್ದುಲ್ಲಾ ಬಿನ್ ಉಮರ್ ವರದಿ ಮಾಡಿರುವರು. ಪ್ರವಾದಿ ನುಡಿದಿರುವರು.

"ಯಾರು ಕರುಣೆಯನ್ನು ತೋರುತ್ತಾರೋ, ರಹ್ಮಾನನು ಅವರ ಮೇಲೆ ಕರುಣೆ ತೋರುತ್ತಾನೆ. ನೀವು ಭೂಮಿಯ ಮೇಲಿರುವವರ ಮೇಲೆ ಕರುಣೆ ತೋರಿ. ಆಕಾಶದಲ್ಲಿರುವವನು ನಿಮ್ಮ ಮೇಲೆ ಕರುಣೆ ತೋರುತ್ತಾನೆ."

ಅಬ್ದುಲ್ಲಾ ಬಿನ್ ಮಸೂದ್ ವರದಿ ಮಾಡಿರುವರು. ಪ್ರವಾದಿ ನುಡಿದಿರುವರು.

"ನೀವು ಕರುಣೆ ತೋರುವವರೆಗೆ ನೀವು ಸತ್ಯವಿಶ್ವಾಸಿಗಳಲ್ಲ" ಸಹಾಬಿಗಳು ನುಡಿದರು. "ಪ್ರವಾದಿಗಳೇ ನಾವೆಲ್ಲರೂ ಕರುಣೆ ತೋರುತ್ತೇವೆ."

ಆಗ ಪ್ರವಾದಿ ಉತ್ತರಿಸಿದರು.

"ನೀವು ನಿಮ್ಮ ಸಂಬಂಧಿಕರಿಗೆ ತೋರುವ ಕರುಣೆ, ಇದರ ಅರ್ಥವಲ್ಲ. ನೀವು ಎಲ್ಲಾ ಜನರಿಗೂ ಕರುಣೆ ತೋರಬೇಕು"

ಒಂದು ದಿನ ಸಹಾಬಿಗಳೊಂದಿಗೆ ಇದ್ದಾಗ ಪ್ರವಾದಿ ನುಡಿದರು: "ನಿಮಗೆ ಉತ್ತಮ ವ್ಯಕ್ತಿ ಯಾರು ಮತ್ತು ಕೆಟ್ಟ ವ್ಯಕ್ತಿ ಯಾರು ಎಂದು ತಿಳಿಸಲೇ?"

ಪ್ರವಾದಿರ ಮಾತನ್ನು ಕೇಳಿ ಸಹಾಬಿಗಳು ಮೌನವಹಿಸಿದರು. ಪ್ರವಾದಿ ಮೂರು ಸಲ ಈ ಪ್ರಶ್ನೆಯನ್ನು ಪುನರಾವರ್ತಿಸಿದರು. ಮೂರು ಸಲವೂ ಸಹಾಬಿಗಳು ಮೌನವಹಿಸಿದರು. ನಂತರ ಓರ್ವ ಸಹಾಬಿ, "ಪ್ರವಾದಿಗಳೇ, ಉತ್ತಮ ವ್ಯಕ್ತಿ ಯಾರು, ಕೆಟ್ಟ ವ್ಯಕ್ತಿ ಯಾರು ಎಂದು ನಮಗೆ ತಿಳಿಸಿ" ಎಂದರು. ಪ್ರವಾದಿ, "ಯಾರು ಓರ್ವನಿಂದ ಯಾವುದೇ ಕೇಡಿನ ಬಗ್ಗೆ ಭಯಪಡದೇ ಕೇವಲ ಒಳ್ಳೆಯದನ್ನೇ ನಿರೀಕ್ಷಿಸುತ್ತಾರೋ, ಅವರೇ ನಿಮ್ಮಲ್ಲಿಯ ಅತ್ಯುತ್ತಮರು. ಯಾರಿಂದ ಜನರು ಒಳ್ಳೆಯ ಕಾರ್ಯದ ನಿರೀಕ್ಷೆ ಹೊಂದಿಲ್ಲವೋ ಮತ್ತು ಯಾರ ಕೆಡುಕಿನಿಂದ ಸುರಕ್ಷಿತ ಭಾವನೆವಿರಿಸುವುದಿಲ್ಲವೋ, ಅವರೇ ನಿಮ್ಮಲ್ಲಿಯ ಅತ್ಯಂತ ಕೆಟ್ಟ ವ್ಯಕ್ತಿ" ಎಂದು ಉತ್ತರಿಸಿದರು.

ಪ್ರವಾದಿರ ಮೇಲಿನ ವಚನಗಳು ಎಲ್ಲಾ ಜನರಿಗೂ ಯಾವುದೇ ಭೇದ, ಭಾವವಿಲ್ಲದೆ ಸೇವೆ ಮಾಡಬೇಕೆಂದು ಬೋಧಿಸುತ್ತವೆ. ಯಾವನೇ ವ್ಯಕ್ತಿ, ಯಾವುದೇ ಧರ್ಮದ ಅನುಯಾಯಿ ಇರಲಿ, ಯಾವುದೇ ರಾಷ್ಟ್ರದವನಾಗಿರಲಿ, ಅವನಿಗೆ ಸಹಾಯದ ಅಗತ್ಯವಿದ್ದರೆ, ಅವನಿಗೆ ಸಹಾಯ ನೀಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಸಮಾಜ ಸೇವೆಯನ್ನು ಮಾಡುವಾಗ ಇವನು ನಮ್ಮವ, ಇವನು ಪರಕೀಯ, ಇವನು ನಮ್ಮ ಧರ್ಮದವ, ಇವನು ಪರಧರ್ಮೀಯವ ಎಂಬ ವಿಭಜನೆಗಳು ಇಸ್ಲಾಮಿನ ತತ್ವ, ಸಿದ್ಧಾಂತಗಳಿಗೆ ವಿರುದ್ಧವಾಗಿವೆ.

# ಜನಸೇವೆಯೂ ಆರಾಧನೆಯಾಗಿದೆ

ಮನುಷ್ಯನ ಸೃಷ್ಟಿಯ ಉದ್ದೇಶ ಕೇವಲ ಅಲ್ಲಾಹನ ಆರಾಧನೆ ಮಾಡುವುದಾಗಿದೆ ಎಂದು ಕುರ್‌ಆನ್ ತಿಳಿಸುತ್ತದೆ.

ಅಲ್ಲಾಹನ ಸುಪ್ರೀತಿಗಳಿಸಲು ಆರಾಧನೆಯನ್ನು ಮಾಡಲಾಗುತ್ತದೆ. ಆರಾಧನೆಯು ಭೌತಿಕವೂ, ಸಂಪತ್ತನ್ನೂ ವ್ಯಯಿಸುವ ಮೂಲಕವೂ ಆಗಿರಬಹುದು. ಭೌತಿಕ ಆರಾಧನೆಯಲ್ಲಿ ಕೆಲ ಆಚರಣೆಗಳಿರುತ್ತವೆ. ಮೌಖಿಕ ಉಚ್ಛಾರಣೆಗಳು, ಮತ್ತು ದೇಹದ ಚಲನೆವಿರುತ್ತದೆ. ಇವುಗಳನ್ನು ಆಚರಣೆಗಳೆಂದು ಪರಿಗಣಿಸಬಹುದು. ಜನರ ಸೇವೆಗಾಗಿ ಸಂಪತ್ತನ್ನು ವ್ಯಯಿಸುವುದೂ ಆರಾಧನೆಯಾಗಿದೆ. ಓರ್ವ ವ್ಯಕ್ತಿಗೆ ಸಹಾಯ ಮಾಡುವಾಗ, ಆತನ ಸೇವೆಯ ಮೂಲಕ ಅಲ್ಲಾಹನ ಸಂಪ್ರೀತಿಗಳಿಸುವ ಧ್ಯೇಯ ನಮ್ಮದಾಗಿರಬೇಕು. ಈ ರೀತಿ ಜನ ಸೇವೆಯ ಮೂಲಕವೂ ಮನುಷ್ಯನು ಆತ್ಮ ಸಂತೃಪ್ತಿಯನ್ನು ಪಡೆಯಬಹುದು.

ಇಸ್ಲಾಮಿನಲ್ಲಿ ಜನ ಸೇವೆಯು ಲೌಕಿಕ ಕಾರ್ಯವಾಗಿದ್ದರೂ ಇದೂ ಆರಾಧನೆಯಾಗಿರುವುದು. ಇದನ್ನು ಅರ್ಥ ಮಾಡಲು ನಾವು ಆರಾಧನೆಯ ಪರಿಪೂರ್ಣ ಕಲ್ಪನೆಯನ್ನು ಮಾಡಬೇಕು.

# ಉಪಕಾರ ಸ್ಮರಣೆ

ಉಪಕಾರ ಸ್ಮರಣೆ ಕುರ್‌ಆನಿನ ತಿರುಳಾಗಿದೆ ಮತ್ತು ನೈತಿಕ ವಮೌಲ್ಯಗಳ ಬುನಾದಿಯಾಗಿದೆ. ಕುರ್‌ಆನ್ ಅಲ್ಲಾಹನ ಪುನಃ ಪುನಃ ಉಪಕಾರ ಸ್ಮರಿಸುವಂತೆ ಸತ್ಯವಿಶ್ವಾಸಿಗಳಿಗೆ ಹಿತವಚನ ನೀಡಿದೆ.

> "....... ಈ ಘಟನೆಗಳಲ್ಲಿ ನಿಶ್ಚಯವಾಗಿಯೂ ಪ್ರತಿಯೊಬ್ಬ ಗಹನಶೀಲನಿಗೂ, ಕೃತಜ್ಞನಿಗೂ ದೊಡ್ಡ ನಿದರ್ಶನಗಳಿವೆ." (ಪವಿತ್ರ ಕುರ್‌ಆನ್ 14:5)

> "....... ತನ್ನ ಸಹಾಯದಿಂದ ನಿಮ್ಮನ್ನು ಬಲಪಡಿಸಿದನು ಮತ್ತು ನಿಮಗೆ ಉತ್ತಮ ಜೀವನಾಧಾರ ಒದಗಿಸಿದನು. (ಇದು) ನೀವು ಕೃತಜ್ಞರಾಗಬಹುದೆಂದು." (ಪವಿತ್ರ ಕುರ್‌ಆನ್ 8:6)

> "ಅಲ್ಲಾಹ್ ಮಹಾ ಗುಣಗ್ರಾಹಿಯೂ, ಸರ್ವರ ಸ್ಥಿತಿಗತಿಗಳ ಬಗ್ಗೆ ಪೂರ್ಣಜ್ಞಾನಿಯೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್ 4:147)

ಉಪಕಾರ ಸ್ಮರಣೆ ಅಲ್ಲಾಹನ ಅತ್ಯದ್ಭುತ ಸೃಷ್ಟಿಗಳನ್ನು ನೋಡಿದಾಗ ಹೃದಯದ ಅಂತರಾಳದಿಂದ ಹೊರಹೊಮ್ಮುತ್ತದೆ.

ಅಲ್ಲಾಹ್ ಕುರ್‌ಆನ್‌ನಲ್ಲಿ ಈ ರೀತಿ ಹೇಳಿರುವನು.

> "ಆದುದರಿಂದ ನೀವು ನನ್ನನ್ನು ಸ್ಮರಿಸುತ್ತಲಿರಿ, ನಾನು ನಿಮ್ಮನ್ನು ಸ್ಮರಿಸುವೆನು ಮತ್ತು ನನಗೆ ಕೃತಜ್ಞರಾಗಿರಿ, ಕೃತಘ್ನರಾಗಬೇಡಿರಿ". (ಪವಿತ್ರ ಕುರ್‌ಆನ್ 2:152)

> "...... 'ನನ್ನ ಪ್ರಭೂ ನೀನು ನನಗೂ ನನ್ನ ಮಾತಾಪಿತರಿಗೂ ಕರುಣಿಸಿರುವ ಅನುಗ್ರಹಗಳ ಬಗ್ಗೆ ಕೃತಜ್ಞತೆ ಸಲ್ಲಿಸುವ ಹಾಗೂ ನೀನು ಸಂತೃಪ್ತನಾಗುವಂತಹ ಸತ್ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ನನಗೆ ನೀಡು'....." (ಪವಿತ್ರ ಕುರ್‌ಆನ್ 46:15)

ಉಪಕಾರ ಸ್ಮರಿಸದೆ, ಕೃತಘ್ನತೆ ತೋರುವವರನ್ನು ಖಂಡಿಸಲಾಗಿದೆ.

> "ಅಲ್ಲಾಹನಾದರೋ ಜನರ ಮೇಲೆ ಕೃಪಾಕಟಾಕ್ಷವನ್ನಿರಿಸು ತ್ತಾನೆ. ಆದರೆ ಹೆಚ್ಚಿನವರು ಕೃತಜ್ಞತೆ ತೋರುವುದಿಲ್ಲ."
> (ಪವಿತ್ರ ಕುರ್‌ಆನ್ 10:60)

> "ನಿಶ್ಚಯವಾಗಿಯೂ ನಿಮ್ಮ ಪ್ರಭು ಜನರ ಮೇಲೆ ಮಹಾ ಅನುಗ್ರಹಶಾಲಿ ಆದರೆ ಹೆಚ್ಚಿನವರು ಕೃತಜ್ಞತೆ ತೋರುವುದಿಲ್ಲ."
> (ಪವಿತ್ರ ಕುರ್‌ಆನ್ 27:73)

ಕೃತಜ್ಞತೆ ಮತ್ತು ಕೃತಘ್ನತೆಗಳು ನಾವು ಜನರಿಗೆ ಮಾಡುವ ಸಹಾಯ, ಸೇವೆಯಲ್ಲಿ ಪ್ರಕಟಗೊಳ್ಳುತ್ತವೆ. ಉಪಕಾರ ಸ್ಮರಣೆಯು ಬಾಹ್ಯವು ಆಂತರಿಕವೂ ಆಗಿದೆ. ಇದರರ ಜೀವನವನ್ನು ಉತ್ತಮಗೊಳಿಸಲು ನಾವು ನೆರವಿನ ಹಸ್ತವನ್ನು ಚಾಚಿದಾಗ, ಇದೂ ಉಪಕಾರ ಸ್ಮರಣೆಯಾಗಿರುತ್ತದೆ. ಕುರ್‌ಆನ್ ದಾನಧರ್ಮಕ್ಕೆ, ನಿರ್ಗತಿಕರಿಗೆ, ಅನಾಥರಿಗೆ ಸಹಾಯ ಮಾಡುವುದಕ್ಕೆ ಬಹಳ ಒತ್ತು ನೀಡಿದೆ. ಇತರರಿಗೆ ಸಹಾಯ ಮಾಡುವುದು ಯಾವಾಗಲಾದರೊಮ್ಮೆ ಮಾಡುವಂತಹ ಕಾರ್ಯವಲ್ಲ. ಓರ್ವ ಸತ್ಯವಿಶ್ವಾಸಿ, ಜೀವನ ಪರ್ಯಂತ ಇದನ್ನು ತನ್ನ ಕಾಯಕವನ್ನಾಗಿ ಮಾಡಿಕೊಳ್ಳಬೇಕು.

ಮುಸ್ಲಿಮರು, ಮುಸ್ಲಿಮೇತರರು ಎಂಬ ಭೇದವಿಲ್ಲದೇ, ಇಡಿಯ ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವುದು ಅಲ್ಲಾಹನಿಗೆ ಸಲ್ಲಿಸುವ ಅತ್ಯುತ್ತಮ ಕೃತಜ್ಞತೆಯಾಗಿದೆ.

# 14

# ಹುದೈಬಿಯಾ

## ಶಾಂತಿ ಮೂಲಕ ವಿಜಯ

ಕಂದಕ ಯುದ್ಧದಲ್ಲಿ ಕುರೈಶ್ ಮತ್ತು ಅವರ ಮಿತ್ರ ಪಕ್ಷಗಳ ಮೇಲೆ ಮುಸ್ಲಿಮರ ವಿಜಯವು ಐತಿಹಾಸಿಕವಾಗಿತ್ತು. ಇದು ಅರೇಬಿಯಾ ಪ್ರದೇಶದ ಸಂಪೂರ್ಣ ಚಿತ್ರಣವನ್ನೇ ಬದಲಿಸಿತು. ಅರಬರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮತ್ತು ಅವರ ಅನುಯಾಯಿಗಳ ಅಧಿಕಾರವನ್ನು ಅಂಗೀಕರಿಸಿದರು. ಪರ್ಷಿಯ ಮತ್ತು ರೋಮ್ ಸಾಮ್ರಾಜ್ಯಗಳ ಸಾಮ್ರಾಟರೂ ಸಹ ಮುಹಮ್ಮದ್‌ರನ್ನು ಇಸ್ಲಾಮೀ ಸಾಮ್ರಾಜ್ಯದ ಸಾಮ್ರಾಟರೆಂದು ಪರಿಗಣಿಸಿದರು.

## ರಮಝಾನ್ ಮತ್ತು ಕನಸು

ರಮಝಾನ್ ತಿಂಗಳು ಆರಂಭವಾಗಿತ್ತು. ರಮಝಾನ್ ತಿಂಗಳಿನಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಆರಾಧನೆಯಲ್ಲಿ ಇನ್ನೂ ಹೆಚ್ಚಾಗಿ ತೊಡಗುತ್ತಿದ್ದರು. ರಾತ್ರಿಯ ವೇಳೆ ಹೆಚ್ಚಿನ ಅವಧಿಯನ್ನು ಆರಾಧನೆಯಲ್ಲಿ ಕಳೆಯುತ್ತಿದ್ದರು. ದಾನ ಧರ್ಮಗಳನ್ನು ಹೆಚ್ಚಾಗಿ ಮಾಡುತ್ತಿದ್ದರು. ರಮಝಾನ್ ಅಧ್ಯಾತ್ಮಿಕತೆಯ ಮಾಸವಾಗಿತ್ತು. ರಮಝಾನ್ ತಿಂಗಳಿನಲ್ಲಿ ಪ್ರವಾದಿ ತಮ್ಮ ಮೇಲೆ ಅವತೀರ್ಣಗೊಂಡಿದ್ದ ಕುರ್‌ಆನ್‌ನನ್ನು ದೇವಚರ ಜಿಬ್ರೀಲ್‌ರಿಗೆ ಕೇಳಿಸುತ್ತಿದ್ದರು. ರಾತ್ರಿ 'ಇಶಾ' ನಮಾಝಿನ ಬಳಿಕ ಹೆಚ್ಚುವರಿ ನಮಾಝ್ 'ತರಾವೀಹ್' ನಿರ್ವಹಿಸಲಾಗುತ್ತಿತ್ತು.

ತರಾವೀಹ್ ನಮಾಝ್‌ನಲ್ಲಿ ವಿವಿಧ ಇಸ್ಲಾಮೀ ಕರ್ಮಶಾಸ್ತ್ರಜ್ಞರ ಪ್ರಕಾರ 8–20 ರಕಅತ್ ನಮಾಝ್ ನಿರ್ವಹಿಸಲಾಗುತ್ತಿತ್ತು. ತರಾವೀಹ್ ನಮಾಝ್‌ನಲ್ಲಿ

ಸಂಪೂರ್ಣ ಮಾಸದಲ್ಲಿ ಇಡಿಯ ಕುರ್‌ಆನ್ ಪಠಿಸಲಾಗುತ್ತದೆ. ಹೆಚ್ಚು ಹೆಚ್ಚಾಗಿ ಜನರು ಅಲ್ಲಾಹನಿಗೆ ಪ್ರಾರ್ಥನೆ ಮಾಡುತ್ತಾರೆ.

ಹಗಲಿನಲ್ಲಿ ಮುಸ್ಲಿಮರು ಉಪವಾಸ ವ್ರತವನ್ನು ಆಚರಿಸುತ್ತಾರೆ. ಸೂರ್ಯನ ಕಿರಣಗಳು ಇನ್ನೂ ಹೊರಡದಿರುವ ಸಮಯದಿಂದ ಹಿಡಿದು ಸೂರ್ಯಾಸ್ತಮದ ತನಕ ಜನರು ಅನ್ನ, ಪಾನೀಯಗಳನ್ನು ಲೈಂಗಿಕ ಕ್ರಿಯೆಗಳನ್ನು ತೊರೆಯುತ್ತಾರೆ. ನೈಸರ್ಗಿಕ ಬೇಡಿಕೆಗಳನ್ನು ನಿಯಂತ್ರಿಸುವ ಮೂಲಕ ಚಿತ್ತಕಾಂಕ್ಷೆಗಳ ಮೇಲೆ ನಿಯಂತ್ರಣ ಸಾಧಿಸಲಾಗುತ್ತದೆ. ಹೀಗೆ ರಮಝಾನ್ ತಿಂಗಳಿನಲ್ಲಿ ಆತ್ಮ ಸಂಸ್ಕರಣೆಯ ತರಬೇತಿ ನಡೆಯುತ್ತದೆ!

ಉಪವಾಸ ವ್ರತದ ಆಚರಣೆಯಲ್ಲಿ ಕೇವಲ ಅನ್ನ, ಪಾನೀಯಗಳಿಂದ ದೂರವಿದ್ದರೆ ಸಾಲದು. ಜನರು ಸುಳ್ಳು ಹೇಳುವುದು, ಚಾಡಿ ಹೇಳುವುದು, ವಂಚನೆ ಮಾಡುವುದು ಮೊದಲಾದ ಪಾಪಕಾರ್ಯಗಳಿಂದಲೂ ದೂರವಿರಬೇಕು ಯಾರು ಉಪವಾಸವಿದ್ದೂ, ಸುಳ್ಳು ಹೇಳುವುದನ್ನು, ವಂಚನೆ ಮಾಡುವುದನ್ನು ತೊರೆಯುವುದಿಲ್ಲವೋ, ಅವರಿಗೆ ಉಪವಾಸ ವ್ರತದ ಯಾವ ಪುಣ್ಯಫಲಗಳೂ ದೊರಕುವುದಿಲ್ಲ.

ರಮಝಾನ್ ತಿಂಗಳಿನಲ್ಲಿ ಹೆಚ್ಚು ದಾನಧರ್ಮಗಳನ್ನು ಮಾಡಲು ಉತ್ತೇಜಿಸಿದೆ. ಈ ತಿಂಗಳಿನಲ್ಲಿ ಮುಸ್ಲಿಮರು ಝಕಾತ್, ಫಿತ್ರ್ ಮೊದಲಾದವುಗಳನ್ನು ಸಂಬಂಧಿಕರಿಗೆ, ಬಡಬಗ್ಗರಿಕೆ ಹಂಚುತ್ತಾರೆ. ಫಿತ್ರ್ ಅನ್ನು ರಮಝಾನ್ ತಿಂಗಳ ಕೊನೆಯಲ್ಲಿ ನೀಡಲಾಗುತ್ತದೆ. ಇದು ಬಡ ಜನರೂ ಸಹ ಹಬ್ಬ ಆಚರಿಸಲು ಸಾಧ್ಯವಾಗುವಂತೆ ಮಾಡಲು ಆಗಿದೆ. ಅಲ್ಲಾಹನ ಸಾಮಿಪ್ಯವನ್ನು ದೀನ, ದಲಿತರ ಸಮೀಪ ಇರುವುದೊಂದಿಗೆ, ಅವರ ಸೇವೆ ಮಾಡುವುದರಿಂದ ಹೊಂದಬಹುದಾಗಿದೆ.

ಹಿಜರಿಶಕೆ 6ರಲ್ಲಿ ಒಂದು ರಾತ್ರಿ ಪ್ರವಾದಿ ಒಂದು ಕನಸು ಕಾಣುತ್ತಾರೆ. ಕನಸಿನಲ್ಲಿ ತಮ್ಮ ತಲೆಕೂದಲನ್ನು ತೆಗೆಸಿರುವುದಾಗಿ ಹಾಗೂ ಸಹಾಬಿಗಳ ಒಂದು ದೊಡ್ಡ ತಂಡವೂ ಹಾಗೆಯೇ ಮಾಡಿರುವುದಾಗಿ ಮತ್ತು ಪ್ರವಾದಿ ತಮ್ಮ ಸಂಗಾತಿಗಳ ಜೊತೆ ಕಅಬಾ ಭವನ ಪ್ರವೇಶಿಸಿದುದಾಗಿ ಕಾಣುತ್ತಾರೆ. ಪ್ರವಾದಿಯ ಕನಸುಗಳು ಅಲ್ಲಾಹನ ವತಿಯಿಂದು ಒಂದು ಸಂಜ್ಞೆ ಅಥವಾ ಸಂದೇಶವಾಗಿರುತ್ತದೆ. ಅವು ಸುಳ್ಳಾಗಿರುವುದಿಲ್ಲ.

ಮಾರನೆಯ ದಿನ ಪ್ರವಾದಿ ತಮ್ಮ ಕನಸಿನ ಬಗ್ಗೆ ಸಹಾಬಿಗಳಿಗೆ ತಿಳಿಸುತ್ತಾರೆ. ದುಲ್‌ಕಅದ: ತಿಂಗಳಲ್ಲಿ ಪ್ರವಾದಿ ಉಮ್ರಾ ನಿರ್ವಹಿಸಲಿಕ್ಕಾಗಿ ಮಕ್ಕಾ ತೆರಳಲು ನಿರ್ಧರಿಸುತ್ತಾರೆ. ತಮ್ಮ ಜತೆ ಉಮ್ರಾ ಮಾಡಬಯಸುವವರೆಲ್ಲಾ ಹೊರಡಬೇಕೆಂಬ ಘೋಷಣೆಯನ್ನು ಹೊರಡಿಸುತ್ತಾರೆ.

ದುಲ್‌ಕಅದ: ಯುದ್ಧ ನಿಷಿದ್ಧ ತಿಂಗಳುಗಳ ಪೈಕಿ ಒಂದಾಗಿತ್ತು. ಆದ್ದರಿಂದ ಅರಬ್ ಸಂಪ್ರದಾಯದಂತೆ ಈ ತಿಂಗಳಿನಲ್ಲಿ ರಕ್ತಪಾತದ ಭಯವಿರಲಿಲ್ಲ. ಯುದ್ಧ ನಿಷಿದ್ಧ ತಿಂಗಳುಗಳಲ್ಲಿ ಜನರು ಯಾವ ಭಯವೂ ಇಲ್ಲದೆ, ಎಲ್ಲಿಗೆ ಬೇಕಾದರೂ ನಿರಾತಂಕವಾಗಿ ಪ್ರಯಾಣ ಕೈಗೊಳ್ಳಬಹುದಾಗಿತ್ತು. ವಿಶೇಷವಾಗಿ ಈ ತಿಂಗಳುಗಳಲ್ಲಿ ಕಅಬಾ ಭವನದ ಕಡೆಗೆ ಹೋಗುವವರನ್ನು ಯಾರೂ ತಡೆಯುತ್ತಿರಲಿಲ್ಲ.

ಹಿ.ಶ. 6ರ ದುಲ್‌ಕಅದ್ ತಿಂಗಳ ಒಂದನೆಯ ತಾರೀಕಿನಂದು ಪ್ರವಾದಿ ಸುಮಾರು 1400 ಸಹಾಬಿಗಳ ಜತೆ ಉಮ್ರಾ ನಿರ್ವಹಿಸಲು ಹೊರಡಲು ಅನುವಾಗುತ್ತಾರೆ. ತಮ್ಮ ಪತ್ನಿಯರ ಪೈಕಿ ಉಮ್ಮು ಸಲ್ಮಾರನ್ನು ಜೊತೆಗೆ ಕರೆದೊಯ್ಯುತ್ತಾರೆ. ಪ್ರವಾದಿ ಮತ್ತು ಸಹಾಬಿಗಳು ಆತ್ಮರಕ್ಷಣೆಗಾಗಿ ಪ್ರತಿಯೊಬ್ಬ ಅರಬನೂ ಸದಾ ಜೊತೆಯಲ್ಲೇ ಇರಿಸುತ್ತಿದ್ದಂತಹ ಖಡ್ಗ ಮತ್ತು ಬಿಲ್ಲು ಬಾಣಗಳ ಹೊರತು ಬೇರಾವ ಆಯುಧವನ್ನು ತೆಗೆದುಕೊಳ್ಳಲಿಲ್ಲ. ತಾವು ಕೇವಲ ಕಅಬಾ ಸಂದರ್ಶನಕ್ಕೆ ಹೊರಟವರೆಂಬುದನ್ನು ಕುರೈಶರಿಗೆ ಮನಗಾಣಿಸುವುದು ಅವರ ಉದ್ದೇಶವಾಗಿತ್ತು.

ಮುಂಜಾಗರೂಕತೆಯ ಕ್ರಮವಾಗಿ ಪ್ರವಾದಿ ಬಶೀರ್‌ಬಿನ್ ಸುಫ್ಯಾನ್ ಅಲ್ ಕಅಬಿಯವರನ್ನು ಮೊದಲೇ ಮಕ್ಕಾಗೆ ರವಾನಿಸುತ್ತಾರೆ. ಕುರೈಶರ ಬಗ್ಗೆ ಸರಿಯಾದ ಮಾಹಿತಿ ಸಂಗ್ರಹಿಸುವುದೇ ಅವರ ಹೊಣೆಯಾಗಿತ್ತು. ಸ್ವಲ್ಪ ಸಮಯದಲ್ಲಿಯೇ ಬಶೀರ್ ಬಂದು ಹೀಗೆ ಹೇಳುತ್ತಾರೆ.

"ಪ್ರವಾದಿವರ್ಯರೇ, ಕುರೈಶರಿಗೆ ತಮ್ಮ ಆಗಮನದ ಸುದ್ದಿ ತಲುಪಿದೆ. ಅವರು ಸುತ್ತಮುತ್ತಲಿನ ಎಲ್ಲಾ ಗೋತ್ರಗಳಿಗೂ ತಮ್ಮನ್ನು ತಡೆಯುವಂತೆ ಸೂಚಿಸಿದ್ದಾರೆ. ಕುರೈಶರು ಖಾಲಿದ್‌ಬಿನ್ ವಲೀದ್‌ರ ನೇತೃತ್ವದಲ್ಲಿ ಒಂದು ಸೇನೆಯನ್ನು ರವಾನಿಸಿದ್ದಾರೆ. ಕುರೈಶರು ಎಷ್ಟು ಮಾತ್ರಕ್ಕೂ ಹರಮ್‌ನ ಒಳಗೆ ನಿಮ್ಮನ್ನು ಪ್ರವೇಶಿಸಲು ಬಿಡುವುದಿಲ್ಲವೆಂದು ಶಪಥ ಮಾಡಿದ್ದಾರೆ."

ಪ್ರವಾದಿ ಕುರೈಶರ ಸೇನಾ ತುಕಡಿಯು ಬಿಡಾರ ಹೂಡಿರುವ ಸ್ಥಳವನ್ನು ಬಿಟ್ಟು ಇತರ ಮಾರ್ಗದಿಂದ ಮಕ್ಕಾದ ಕಡೆಗೆ ಪ್ರಯಾಣ ಮಾಡಲು ನಿರ್ಧರಿಸುತ್ತಾರೆ. ಕುರೈಶರು ಬಿಡಾರ ಹೂಡಿರುವ ಸ್ಥಳದಿಂದ ಹಾದು ಹೋದರೆ ಕುರೈಶರೊಂದಿಗೆ ಸಂಘರ್ಷಣೆ ನಿಶ್ಚಿತವಾಗಿತ್ತು. ಯಾತ್ರಾ ತಂಡವು ಅತ್ಯಂತ ಕಠಿಣವಾದ ದಾರಿಯನ್ನು ಕ್ರಮಿಸಿ ಹುದೈಬಿಯಾದ ಹತ್ತಿರವಿರುವ 'ಸನಿಯ ತುಲ್ ಮರಾರ್' ಎಂಬಲ್ಲಿಗೆ ತಲುಪಿದಾಗ, ಪ್ರವಾದಿರ ಒಂಟೆ ಕುಳಿತು ಬಿಡುತ್ತದೆ. ಅದನ್ನು ಎಬ್ಬಿಸುವ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ. ಇದು ಅಲ್ಲಾಹನ ವತಿಯಿಂದ ಇಲ್ಲೇ ತಂಗಬೇಕೆಂಬ ಸೂಚನೆಯಾಗಿದೆ ಎಂದು ಬಗೆದು, ಎಲ್ಲರೂ ಅಲ್ಲೇ ಬಿಡಾರ ಹೂಡುತ್ತಾರೆ.

# ಕುರೈಶರ ಸಂದಿಗ್ಧತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಉಮ್ರಾಃ ನಿರ್ಧಾರದಿಂದ ಕುರೈಶ್ ಅತ್ಯಂತ ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಮುಸ್ಲಿಮರನ್ನು ಉಮ್ರಾಃ ಮಾಡುವುದರಿಂದ ನಿರ್ಬಂಧಿಸಿದರೆ, ಅದಕ್ಕೆ ಸಮರ್ಥನೆಯನ್ನು ಅವರು ನೀಡಬೇಕಾಗಿತ್ತು. ಮುಸ್ಲಿಮರಿಗೆ ಉಮ್ರಾಃ ಮಾಡಲು ಅನುಮತಿಸಿದರೆ, ಇಡಿಯ ಅರಬ್ ಪ್ರದೇಶದಲ್ಲಿ ಮುಸ್ಲಿಮರ ಪ್ರತಿಷ್ಠೆಯು ಹೆಚ್ಚಿ ಕುರೈಶರು ಮುಖಭಂಗವನ್ನು ಎದುರಿಸಬೇಕಾಗುತ್ತಿತ್ತು. ಕುರೈಶರು ಖಾಲಿದ್ ಬಿನ್ ವಲೀದ್‌ರ ನೇತೃತ್ವದಲ್ಲಿ 200 ಯೋಧರನ್ನು ಮುಸ್ಲಿಮರು ಉಮ್ರಃ ನಿರ್ವಹಿಸದಂತೆ ತಡೆಯಲು ರವಾನಿಸುತ್ತಾರೆ.

ಮುಹಮ್ಮದ್‌ರ ಒಂಟೆ ಕಸ್ವಾ ಮಕ್ಕಾದಿಂದ 18 ಕಿ.ಮೀ ದೂರ ಹುದೈಬಿಯಾದ ಮೈದಾನದಲ್ಲಿ ಕುಳಿತಿತ್ತು. ಮುಹಮ್ಮದ್ ಇಲ್ಲಿಯೇ ಬಿಡಾರ ಹೂಡಿ ಕುರೈಶರೊಂದಿಗೆ ಮಾತುಕತೆಗೆ ಸಿದ್ಧತೆ ನಡೆಸುತ್ತಾರೆ.

ಕುರೈಶರು ಮುಹಮ್ಮದ್‌ರ ಮತ್ತೊಂದು ಕ್ರಮದಿಂದ ಆಶ್ಚರ್ಯ ಚಕಿತರಾಗಿದ್ದರು. ಪ್ರವಾದಿ ಈಗ ಇಸ್ಲಾಮೀ ಸಾಮ್ರಾಜ್ಯದ ಸಾಮ್ರಾಟರಾಗಿದ್ದರು. ಹಾಗಿದ್ದರೂ ಪ್ರವಾದಿ ನಿರಾಯುಧರಾಗಿ ಮಕ್ಕಾಕ್ಕೆ ಪ್ರಯಾಣ ಬೆಳೆಸಿದ್ದರು. ಇದರಿಂದಾಗಿ ಅವರು ಅಪಾಯಕ್ಕೆ ಸಿಲುಕ ಬಹುದಾಗಿತ್ತು. ಪ್ರವಾದಿ ಬಯಸಿದ್ದರೆ ಆಯುಧ ರೂಢರಾಗಿ ಮಕ್ಕಾ ಪ್ರಯಾಣ ಬೆಳೆಸಿ ತಮ್ಮ ಶತ್ರುಗಳನ್ನು ಮಣಿಸುವ ಅವಕಾಶವನ್ನು ಬಳಸಿಕೊಳ್ಳಬಹುದಾಗಿತ್ತು. ಪ್ರವಾದಿರ ಕ್ರಮ ಅರಬರ ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಮತ್ತು ಯುದ್ಧಗಳ ಸಂಪ್ರದಾಯಗಳಿಗೆ ತದ್ವಿರುದ್ಧವಾಗಿತ್ತು!

ಮುಹಮ್ಮದ್ ಹೊಸ ಧರ್ಮದ ಕಡೆಗೆ ಆಹ್ವಾನಿಸುತ್ತಿದ್ದರೂ, ಅರಬರ ಸಂಪ್ರದಾಯಗಳನ್ನು ಗೌರವಿಸುತ್ತಿದ್ದರು. ಈಗ ಕುರೈಶರು ಸಂದಿಗ್ಧತೆಗೆ ಸಿಲುಕಿದ್ದರು. ಜನರಿಗೆ ಹಜ್ಜ್ ಮತ್ತು ಉಮ್ರಃ ನಿರ್ವಹಿಸಲು ಮುಕ್ತ ಸ್ವಾತಂತ್ರ್ಯವಿದ್ದು ಈ ಸಂಪ್ರದಾಯವು ತಲೆತಲಾಂತರಗಳಿಂದ ನಡೆದು ಬಂದಿತ್ತು. ಕುರೈಶರು ಒಂದೋ ಈ ಸಂಪ್ರದಾಯವನ್ನು ಗೌರವಿಸುತ್ತಾ ಮುಸ್ಲಿಮರಿಗೆ ಉಮ್ರಾಃ ನಿರ್ವಹಿಸಲು ಅನುಮತಿ ನೀಡಬೇಕಾಗಿತ್ತು. ಆದರೆ ಈ ರೀತಿ ಮಾಡಿದಲ್ಲಿ ಮುಸ್ಲಿಮರ ಪ್ರತಿಷ್ಠೆಯು ಅರಬರ ದೃಷ್ಟಿಯಲ್ಲಿ ಹೆಚ್ಚಿ, ಕುರೈಶರು ಮುಖ ಭಂಗ ಅನುಭವಿಸಬೇಕಾಗುತ್ತಿತ್ತು. ಮುಹಮ್ಮದ್‌ರ ತಂತ್ರವು ಫಲಿಸಿತು!"

# ಸಂಧಾನ ಮಾತುಕತೆಗಳು

ಕುರೈಶರು ಮುಸ್ಲಿಮರಿಗೆ ಉಮ್ರಾ ನಿರ್ವಹಿಸಲು ಸುತರಾಂ ತಯಾರಿರಲಿಲ್ಲ. ಅವರು ಮುಸ್ಲಿಮರ ಬಳಿ ಮಾತುಕತೆಗಾಗಿ ಬುದೈಲ್ ಬಿನ್ ವರಕಾರನ್ನು ರವಾನಿಸಿದರು. ಬುದೈಲ್ ಬಿನ್ ವರಕಾ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಬಳಿ ಹಾಜರಾಗಿ ಅವರ ಆಗಮನದ ಉದ್ದೇಶ ವಿಚಾರಿಸಿದಾಗ, ಪ್ರವಾದಿ "ನಾವು ಕೇವಲ ಕಅಬಾ ಭವನದ ಸಂದರ್ಶನಕ್ಕಾಗಿ ಬಂದಿದ್ದೇವೆ" ಎಂದು ಉತ್ತರಿಸಿದರು. ಬುದೈಲ್ "ಕುರೈಶರು, ನಿಮ್ಮನ್ನು ಮಕ್ಕಾ ನಗರ ಪ್ರವೇಶಿಸಲು ಬಿಡುವುದಿಲ್ಲವೆಂದು ಶಪಥ ಹಾಕಿದ್ದಾರೆ" ಎಂದು ನುಡಿದಾಗ, ಪ್ರವಾದಿ, "ಯಾರು ನಮ್ಮನ್ನು ಕಅಬಾ ದರ್ಶನದಿಂದ ತಡೆಯುತ್ತಾರೋ, ಅವರೊಂದಿಗೆ ಯುದ್ಧ ಮಾಡುವ ಹೊರತು ಬೇರೆ ದಾರಿ ನಮ್ಮ ಮುಂದಿಲ್ಲ" ಎಂದರು. ಕುರೈಶರಿಗೆ ಮುಸ್ಲಿಮರನ್ನು ಕಅಬಾ ದರ್ಶನಕ್ಕೆ ಅನುಮತಿ ನೀಡಲು ಸಮಯಾವಕಾಶ ಬೇಕಿದ್ದಲ್ಲಿ, ತಾವು ಹುದೈಬಿಯಾದಲ್ಲಿ ಇದಕ್ಕಾಗಿ ಕಾಯಲು ಸಿದ್ಧವೆಂದು ಪ್ರವಾದಿ ನುಡಿದರು.

ಬುದೈಲ್ ಕುರೈಶರ ಬಳಿ ಹಿಂತಿರುಗಿ ಮುಸ್ಲಿಮರು ಕೇವಲ ಕಅಬಾದ ದರ್ಶನಕ್ಕೆ ಬಂದಿರುವರು ಎಂದು, ಅವರ ಉದ್ದೇಶ ಯುದ್ಧ ಮಾಡುವುದಲ್ಲವೆಂದು, ಮುಸ್ಲಿಮರಿಗೆ ಕಅಬಾ ದರ್ಶನಕ್ಕೆ ಅನುಮತಿ ನೀಡಬೇಕೆಂದು ಕುರೈಶರಿಗೆ ತಿಳಿಸಿದರು. ಆದರೆ ಕುರೈಶರು ಬುದೈಲ್‌ರ ಮಾತನ್ನು ತಿರಸ್ಕರಿಸಿದರು.

ತರುವಾಯ ಕುರೈಶರು ಉರ್ವ ಬಿನ್ ಮಸ್‌ಊದ್ ಸಕಫಿರನ್ನು ಮುಹಮ್ಮದ್‌ರ ಬಳಿ ಮಾತುಕತೆಗಾಗಿ ಕಳುಹಿಸಿಕೊಡುತ್ತಾರೆ. ಉರ್ವ ಬಿನ್ ಮಸ್‌ಊದ್ ಮುಹಮ್ಮದ್‌ರೊಂದಿಗೆ ಮಾತುಕತೆಗೆ ತೊಡಗಿದರು. ಅರಬರ ಸಂಪ್ರದಾಯದಂತೆ ಮಾತುಕತೆಯ ವೇಳೆ ಉರ್ವ ಆಗಾಗ ಪ್ರವಾದಿರ ಗಡ್ಡವನ್ನು ನೇವರಿಸುತ್ತಾ ಮಾತಾಡುತ್ತಿದ್ದರು. ಇದನ್ನು ಕಂಡು ಪ್ರವಾದಿರ ಅಂಗರಕ್ಷಕರಾಗಿ ನಿಂತಿದ್ದ ಮುಗೀರಾರಿಗೆ ಸಹಿಸಲಾಗಲಿಲ್ಲ. ಇನ್ನೊಮ್ಮೆ ಈ ರೀತಿ ವರ್ತಿಸಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು ಅವರು ಉರ್ವರನ್ನು ಎಚ್ಚರಿಸಿದರು.

ಮುಸ್ಲಿಮರು ಪ್ರವಾದಿರೊಂದಿಗೆ ತೋರುತ್ತಿದ್ದ ಅಗಾಧ ಪ್ರೀತಿಯನ್ನು ಗೌರವವನ್ನು ನೋಡಿ ಉರ್ವ ಬಹಳ ಪ್ರಭಾವಿತರಾದರು. ಅವರು ಕುರೈಶರ ಬಳಿ ಹಿಂತೆರಳಿ ಬುದೈಲ್ ಹೇಳಿದಂತೆ, ಮುಸ್ಲಿಮರಿಗೆ ಕಅಬಾ ದರ್ಶನಕ್ಕೆ ಅನುಮತಿ ನೀಡುವುದು ಶ್ರೇಯಸ್ಕರವೆಂದರು. ಆದರೆ ಕುರೈಶರು ಉರ್ವರ ಮಾತನ್ನೂ ತಿರಸ್ಕರಿಸಿದರು.

ಮುಹಮ್ಮದ್ ಓರ್ವ ಸಂಗಾತಿ ಖರಾಶ್ ಬಿನ್ ಉಮಯ್ಯ ಖುಝಾಈರನ್ನು ಕುರೈಶರ ಬಳಿಗೆ ನಿರ್ಣಾಯಕ ಮಾತುಕತೆಗಾಗಿ ರವಾನಿಸುತ್ತಾರೆ. ಕುರೈಶರು ಖರಾಶ್‌ರವರ

ಒಂಟೆಯನ್ನು ಕೊಂದು ಖಿರಾಶ್‌ರ ಮೇಲೆಯೂ ಧಾಳಿ ಮಾಡುತ್ತಾರೆ. ಆದರೆ ಅಲ್ಲಿ ನೆರೆದಿದ್ದ ವಿಭಿನ್ನ ಗೋತ್ರಗಳ ಜನರು ಮಧ್ಯೆ ಪ್ರವೇಶಿಸಿ ಅವರನ್ನು ತಡೆಯುತ್ತಾರೆ.

ಈ ರೀತಿ ಕುರೈಶರೊಂದಿಗೆ ನಾಲ್ಕು ಸುತ್ತಿನ ಸಂಧಾನ ಮಾತುಕತೆಗಳು ವಿಫಲವಾಗುತ್ತವೆ. ಕುರೈಶರು ತಮ್ಮ ಹಠವಾದಿತನದ ಧೋರಣೆಯನ್ನು ಮುಂದುವರೆಸುತ್ತಲೇ ಹೋಗುತ್ತಾರೆ. ಕೊನೆಯ ಪ್ರಯತ್ನವಾಗಿ ಮುಹಮ್ಮದ್ ಉಸ್ಮಾನ್‌ರನ್ನು ಸಂಧಾನಕ್ಕಾಗಿ ಕುರೈಶರ ಬಳಿಗೆ ಕಳುಹಿಸುತ್ತಾರೆ. ಉಸ್ಮಾನ್ ಮುಹಮ್ಮದ್‌ರ ಅಳಿಯರಾಗಿದ್ದರು. ಅವರಿಗೆ ಮಕ್ಕಾದಲ್ಲಿ ಅನೇಕ ಗೋತ್ರಗಳೊಂದಿಗೆ ಗಾಢವಾದ ಸಂಬಂಧಗಳಿದ್ದವು. ಅವರ ಮೇಲೆ ಕುರೈಶರು ಆಕ್ರಮಣ ಮಾಡಬಹುದೆಂಬ ಭಯವಿರಲಿಲ್ಲ. ಕುರೈಶರು ಅವರನ್ನು ಉದ್ದೇಶಿಸಿ, "ನೀವು ಬೇಕಾದರೆ ಕಅಬಾ ಭವನದ ಸಂದರ್ಶನ ಮಾಡಿ ಹೋಗಬಹುದು. ಆದರೆ ಇತರರನ್ನು ನಗರ ಪ್ರವೇಶಿಸಲು ನಾವು ಬಿಡಲಾರೆವು" ಎಂದರು.

ಉಸ್ಮಾನ್ ಕುರೈಶರ ಈ ಆಹ್ವಾನವನ್ನು ತಿರಸ್ಕರಿಸಿದರು. ಇದನ್ನು ನೋಡಿ ಕುರೈಶರು ಕೆರಳಿ ಉಸ್ಮಾನ್‌ರನ್ನು ಬಂಧಿಸುತ್ತಾರೆ. ಮೂರು ದಿನಗಳು ಕಳೆದರೂ ಉಸ್ಮಾನ್ ಹಿಂತಿರುಗದಿರುವುದನ್ನು ಕಂಡು ಮುಸ್ಲಿಮರು ಆತಂಕಗೊಳ್ಳುತ್ತಾರೆ. ಅಷ್ಟರಲ್ಲಿ ಅವರನ್ನು ಕುರೈಶರು ವಧಿಸಿದ್ದಾರೆ ಎಂಬ ವದಂತಿಯು ಹರಡುತ್ತದೆ.

ಉಸ್ಮಾನ್ ವಧಿಸಲ್ಪಟ್ಟಿರುವರು ಎಂಬ ಸುದ್ದಿಯನ್ನು ಕೇಳಿ ಪ್ರವಾದಿ ಬಹಳ ದುಃಖಿತರಾಗುತ್ತಾರೆ. ಪವಿತ್ರ ತಿಂಗಳಿನಲ್ಲಿ ರಾಯಭಾರಿಯ ಹತ್ಯೆ ಮತ್ತು ಮುಸ್ಲಿಮರಿಗೆ ಉಮ್ರಃ ನಿರ್ವಹಿಸಲು ತಡೆ ಈ ಎಲ್ಲಾ ಕಾರ್ಯಗಳು ಕುರೈಶರಿಂದ ಯುದ್ಧ ಘೋಷಣೆಗೆ ಸಮಾನವಾಗಿದ್ದವು. ಪ್ರವಾದಿ ಈ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾದರು.

## ಬೈಅತ್ ರಿಝ್ವಾನ್

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), ಆ ಸಮಯದಲ್ಲಿ ಒಂದು ಮರದ ನೆರಳಲ್ಲಿ ಕುಳಿತಿದ್ದರು. ಈ ವದಂತಿಯನ್ನು ಕೇಳಿ ಅವರು ಸಹಾಬಿಗಳಿಗೆ ಅಲ್ಲಿ ಬಂದು ಸೇರುವಂತೆ ಆಜ್ಞಾಪಿಸುತ್ತಾರೆ. ಸಹಾಬಿಗಳನ್ನು ಉದ್ದೇಶಿಸಿ ಪ್ರವಾದಿ ಹೀಗೆ ಹೇಳುತ್ತಾರೆ.

"ಈಗ ನಾವು ಕುರೈಶರೊಂದಿಗೆ ಯುದ್ಧ ಮಾಡದೇ, ಇಲ್ಲಿಂದ ಮರಳುವಂತಿಲ್ಲ. ನಾವು ನಮ್ಮ ಶರೀರದಲ್ಲಿ ಪ್ರಾಣವಿರುವ ತನಕ ಹಿಂದಕ್ಕೆ ಸರಿಯಲಾರೆವು ಎಂಬ ಪ್ರತಿಜ್ಞೆಯನ್ನು ಮಾಡಿರಿ."

ಸಹಾಬಿಗಳು ಒಬ್ಬೊಬ್ಬರಾಗಿ ಮುಂದೆ ಬಂದು ಪ್ರವಾದಿರ ಕೈಯಲ್ಲಿ ಕೈಇಟ್ಟು ಪ್ರತಿಜ್ಞೆ ಮಾಡುತ್ತಾರೆ. ಕುರೈಶರೊಂದಿಗೆ ಯುದ್ಧ ನಡೆದರೆ, ಎಲ್ಲಾ ಪರಿಸ್ಥಿತಿಯಲ್ಲಿಯೂ ನಾವೂ ದೃಢಚಿತ್ತರಾಗಿ ನಿಲ್ಲುವೆವೆಂದು ಪ್ರತಿಜ್ಞೆಗೈಯುತ್ತಾರೆ. ಉಸ್ಮಾನ್‌ರ ಪರವಾಗಿ ಮುಹಮ್ಮದ್ ತಮ್ಮ ಎಡಕೈಯನ್ನು ತಮ್ಮ ಬಲಕೈಯಲ್ಲಿ ಇಡುತ್ತಾರೆ. ಸಹಾಬಿಗಳ ಈ ಐತಿಹಾಸಿಕ ಪ್ರತಿಜ್ಞೆಯನ್ನು 'ಬೈ ಅತ್ ರಿಝ್ವಾನ್' ಅರ್ಥಾತ್ ರಿಝ್ವಾನ್ ಪ್ರತಿಜ್ಞೆ ಎನ್ನುತ್ತಾರೆ.

## ನಿಷ್ಠಾವಂತಿಕೆಯ ಪ್ರತಿಜ್ಞೆ

ಮುಸ್ಲಿಮರು ಉಮ್ರಃ ನಿರ್ವಹಿಸಲು ಬಂದಿದ್ದರು. ತಮ್ಮ ಜೊತೆಗೆ ಯಾವುದೇ ಶಸ್ತ್ರಾಸ್ತ್ರವನ್ನು ಅವರು ತಂದಿರಲಿಲ್ಲ. ಈಗ ಕುರೈಶ್‌ರೊಂದಿಗೆ ಯುದ್ಧ ಏರ್ಪಡುವ ಸಂದರ್ಭ ಸೃಷ್ಟಿಯಾಗಿತ್ತು. ಮುಸ್ಲಿಮರು ಇದಕ್ಕೆ ಸಿದ್ಧರಾಗಿ ಬಂದಿರಲಿಲ್ಲ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಕೈಯಲ್ಲಿ ಪ್ರತಿಜ್ಞೆಯ ಅರ್ಥವು ಎಂತಹ ಪರಿಸ್ಥಿತಿಯಲ್ಲಿಯೂ, ಮರಣ ಬಂದರೂ ಸರಿಯೇ, ಯುದ್ಧದಿಂದ ಓಡಿ ಹೋಗಲಾರೆವೆಂದು, ಪ್ರವಾದಿಯವರನ್ನು ಕೈ ಬಿಡಲಾರೆವೆಂದು ಆಗಿತ್ತು. ಆದರೆ ಪರಿಸ್ಥಿತಿಯು ಮುಸ್ಲಿಮರಿಗೆ ಪ್ರತಿಕೂಲವಾಗಿತ್ತು.

ಪ್ರವಾದಿರ ಕೈಯಲ್ಲಿ ಅವರ ಕೊನೆಯ ಅನುಯಾಯಿ ಕೈಯಿಟ್ಟು ಪ್ರತಿಜ್ಞೆ ಮಾಡುತ್ತಿರುವಾಗ, ಆಕಸ್ಮಿಕವಾಗಿ ಉಸ್ಮಾನ್ ಅಲ್ಲಿಗೆ ಆಗಮಿಸಿದರು. ಅವರನ್ನು ನೋಡಿ ಎಲ್ಲರೂ ಸಂತೋಷಗೊಂಡರು. ಕುರೈಶರು ಪವಿತ್ರ ಮಾಸದಲ್ಲಿ ರಾಯಭಾರಿಯನ್ನು ಕೊಲ್ಲುವ ಹಂತಕ್ಕೆ ಹೋಗಿರಲಿಲ್ಲ. ಕುರೈಶರೊಂದಿಗೆ ಯುದ್ಧ ನಡೆಯುವ ಸಂಭವ ಈಗ ಕಂಡು ಬರುತ್ತಿರಲಿಲ್ಲ. ಕುರೈಶರು ಮುಸ್ಲಿಮರೊಂದಿಗೆ ಸಂಧಾನ ಮಾಡಿಕೊಳ್ಳಲು ಅಂತಿಮವಾಗಿ ರಾಯಭಾರಿಯನ್ನಾಗಿ ಸುಹೈಬ್‌ರನ್ನು ಕಳುಹಿಸಿಕೊಡುತ್ತಿರುವರಾಗಿ ಪ್ರವಾದಿರಿಗೆ ತಿಳಿಸಲಾಯಿತು. ಪ್ರವಾದಿ ಕುರೈಶರ ರಾಯಭಾರಿಯನ್ನು ಬರಮಾಡಿಕೊಂಡು, ಅವರ ಪ್ರಸ್ತಾವನೆಯನ್ನು ಪರಿಶೀಲಿಸಲು ನಿರ್ಧರಿಸಿದರು.

ಹುದೈಬಿಯಾದ ಚಿತ್ರಣ ಈಗ ಸಂಪೂರ್ಣ ಬದಲಾಗಿತ್ತು. ಮುಸ್ಲಿಮರು ಕುರೈಶರೊಂದಿಗೆ ಯುದ್ಧ ನಡೆಯಲಿರುವುದೆಂದು ಭಾವಿಸಿ ಪ್ರವಾದಿರೊಂದಿಗೆ ಸರ್ವ ತ್ಯಾಗಗಳಿಗೆ ಸಿದ್ಧರಾಗಿರುವರಾಗಿ ಪ್ರತಿಜ್ಞೆ ಮಾಡಿದ್ದರು. ಪ್ರವಾದಿ ಕುರೈಶ್ ರಾಯಭಾರಿಯೊಂದಿಗೆ ಮಾತುಕತೆ ಪ್ರಾರಂಭಿಸಬೇಕೆನ್ನುವಾಗ, ಯುದ್ಧದ ಸಂಭವವಿರಲಿಲ್ಲ. ಆದುದರಿಂದ ಮುಸ್ಲಿಮರು ಈಗ ಮಾತುಕತೆಗೆ ಶಕ್ತಿಯುತ ಸ್ಥಾನದಲ್ಲಿದ್ದರು. ಮಾತುಕತೆಯ ವೇಳೆ ತಮ್ಮ ಹಕ್ಕನ್ನು ಪ್ರತಿಪಾದಿಸುವ ಸಾಮರ್ಥ್ಯ ಹೊಂದಿದ್ದರು.

ಈ ಕುರಿತು ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ.

> "ವೃಕ್ಷದಡಿಯಲ್ಲಿ ನಿಮ್ಮೊಂದಿಗೆ ಸತ್ಯವಿಶ್ವಾಸಿಗಳು ಆಜ್ಞಾನುಸರಣೆಯ ಕರಾರು ಮಾಡುತ್ತಿದ್ದಾಗ ಅಲ್ಲಾಹನು ಅವರಿಂದ ಸಂತುಷ್ಟನಾದನು. "ಅವರ ಮನಸ್ಸಿನಲ್ಲಿ ಏನಿತ್ತೆಂಬುದು ಅವನಿಗೆ ತಿಳಿದಿತ್ತು. ಆದುದರಿಂದ ಅವನು ಅವರ ಮೇಲೆ ಪ್ರಶಾಂತತೆಯನ್ನು ಇಳಿಸಿದನು, ಪುರಸ್ಕಾರವಾಗಿ ಅವರಿಗೆ ಶೀಘ್ರ ವಿಜಯವನ್ನು ದಯಪಾಲಿಸಿದನು."
> (ಪವಿತ್ರ ಕುರ್‌ಆನ್ 48:18)

ಮುಸ್ಲಿಮರು ತಮ್ಮ ಹಕ್ಕಿನ ಬೇಡಿಕೆಯನ್ನಿಟ್ಟರು. ಇತ್ತೀಚೆಗಿನ ಯುದ್ಧಗಳ ನಂತರ ಅವರ ಪ್ರತಿಷ್ಠೆಯು ತಾರಕಕ್ಕೆ ಏರಿತ್ತು.

ಸಹಾಬಿಗಳು ಪ್ರವಾದಿರೊಂದಿಗೆ ಮಾಡಿದ ಪ್ರತಿಜ್ಞೆಯ ವಿಷಯ ಕುರೈಶರಿಗೆ ತಿಳಿದಾಗ ಅವರಲ್ಲಿ ಭೀತಿ ಆವರಿಸಿತು. ಬದ್ರ್ ಮತ್ತು ಉಹದ್ ಯುದ್ಧಗಳಲ್ಲಿ ಮುಸ್ಲಿಮರು ತೋರಿದ್ದ ಶೌರ್ಯ ಅವರಿಗೆ ತಿಳಿದಿತ್ತು. ಈಗ ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಳ್ಳುವುದೊಂದೇ ಉಳಿದಿರುವ ಮಾರ್ಗವೆಂದು ಅವರಿಗೆ ಮನವರಿಕೆಯಾಯಿತು. ಕರಾರಿನ ನಿಬಂಧನೆಗಳನ್ನು ನಿರ್ಧರಿಸಲಿಕ್ಕಾಗಿ ಸುಹೈಲ್ ಬಿನ್ ಅಮ್ರ್‌ರನ್ನು ತಮ್ಮ ಅಧಿಕೃತ ಪ್ರತಿನಿಧಿಯಾಗಿ ಹುದೈಬಿಯಾಕ್ಕೆ ರವಾನಿಸಿದರು. ಕುರೈಶರ ಮಟ್ಟಿಗೆ ಸುಹೈಲ್ ಅತ್ಯಂತ ಮೇಧಾವಿ, ತೀಕ್ಷ್ಣ ಬುದ್ಧಿಯ ಮತ್ತು ದೂರದೃಷ್ಟಿಯ ಸಂಧಾನಕಾರನಾಗಿದ್ದ.

## ಸೃಷ್ಟಿಕರ್ತ ಮತ್ತು ಸೃಷ್ಟಿಗಳು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹುದೈಬಿಯಾದಲ್ಲಿ ಒಂದು ಮರದ ಅಡಿಯಲ್ಲಿ ತಮ್ಮ ಅನುಯಾಯಿಗಳೊಂದಿಗೆ ಎಂತಹ ಸನ್ನಿವೇಶ ಬಂದರೂ, ತಮ್ಮೊಂದಿಗೆ ನಿಷ್ಠಾವಂತರಾಗಿ ಇರುವ ಬಗ್ಗೆ ಪ್ರತಿಜ್ಞೆ ಮಾಡಿಸಿದ್ದರು. ಪ್ರವಾದಿರ ನಿಧನದ ಕೆಲ ವರ್ಷಗಳ ಬಳಿಕ ಈ ಮರಕ್ಕೆ ಪ್ರಾಮುಖ್ಯತೆ ಬರತೊಡಗಿತು. ಜನರು ಈ ಮರವನ್ನು ಪವಿತ್ರವೆಂದು ಪರಿಗಣಿಸಲಾರಂಭಿಸಿದರು. ಯಾರಿಗಾದರೂ ರೋಗರುಜಿನ ಉಂಟಾದರೆ, ಅವರು ಈ ಮರದ ಅಡಿಯಲ್ಲಿ ಗುಣವಾಗಲು ಕುಳಿತುಕೊಳ್ಳುತ್ತಿದ್ದರು. ಮರದ ಕೆಳಗೆ ಕುಳಿತುಕೊಳ್ಳುವುದರಿಂದ ರೋಗಗಳು ಗುಣವಾಗುವ ವದಂತಿ ಎಲ್ಲಡೆ ಹರಡಲಾರಂಭಿಸಿತು. ಜನರು ಈ ಮರವನ್ನು ಆರಾಧಿಸುವ ಮಟ್ಟಕ್ಕೆ ಪರಿಸ್ಥಿತಿ ಬಂದಿತು. ಈ ಕ್ರಮವು ಇಸ್ಲಾಮಿನ ಏಕೈಕ ದೇವನ ಆರಾಧನೆಯ

ಸಿದ್ಧಾಂತಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾಗಿತ್ತು. ಜನರು ಮರವನ್ನು ಸಹ ದೇವನ ಸಮಾನಂತರವಾಗಿ ಮಾಡಿದ್ದರು. ಆಗ ಉಮರ್ ಖಲೀಫರಾಗಿದ್ದರು. ಉಮರ್‌ರಿಗೆ ಈ ವಿಷಯ ತಿಳಿದಾಗ, ಅವರು ಕೂಡಲೇ ಆ ಮರವನ್ನು ಕಡಿದು ಹಾಕಲು ಆದೇಶಿಸಿದರು. ಉಮರ್ ನುಡಿದರು: "ಜನರು ಸೃಷ್ಟಿಕರ್ತನನ್ನು ಆರಾಧಿಸಬೇಕೇ ಹೊರತು, ಸೃಷ್ಟಿಗಳನ್ನಲ್ಲ".

ಪ್ರವಾದಿರ ಯಾವುದೇ ಕ್ರಮಕ್ಕೆ, ಅವರ ಜೀವನದಲ್ಲಿ ಸಂಭವಿಸಿರುವ ಯಾವುದೇ ಘಟನೆಗೆ ಪಾವಿತ್ರ್ಯತೆ ಕಲ್ಪಿಸಿ, ಅದನ್ನು ಆರಾಧನೆಯ ಮಟ್ಟಕ್ಕೆ ಎತ್ತರಿಸುವುದು ತಪ್ಪು, ಇದಕ್ಕೆ ಇಸ್ಲಾಮಿನಲ್ಲಿ ಯಾವುದೇ ಆಸ್ಪದವಿಲ್ಲವೆಂಬುದನ್ನು ಈ ಘಟನೆ ತೋರಿಸುತ್ತದೆ.

## ಹುದೈಬಿಯಾ ಒಡಂಬಡಿಕೆ

ಕ್ರಿ.ಶಕ 628, ಹಿಜರಿ ಶಕೆ 6ನೇ ವರ್ಷದಲ್ಲಿ ಇಸ್ಲಾಮೀ ಸಾಮ್ರಾಜ್ಯ ಮತ್ತು ಕುರೈಶರ ನಡುವೆ ಒಪ್ಪಂದ ಏರ್ಪಟ್ಟಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕುರೈಶರ ರಾಯಭಾರಿ ಸುಹೈಲ್‌ರನ್ನು ಬರಮಾಡಿಕೊಂಡರು. ಸುಹೈಲ್ ಇನ್ನಿರ್ವರು ವ್ಯಕ್ತಿಗಳು ಮಿಕ್ರಾಝ್ ಮತ್ತು ಹುವೈದ್‌ರೊಂದಿಗೆ ಆಗಮಿಸಿದರು. ಒಪ್ಪಂದದ ಪ್ರತಿಯೊಂದು ಅಂಶವನ್ನು ವಿವರವಾಗಿ ಚರ್ಚಿಸಲಾಯಿತು.

ಸುದೀರ್ಘ ಮಾತುಕತೆಯ ಬಳಿಕ ಸಂಧಾನದ ಈ ಕೆಳಗಿನ ನಿಬಂಧನೆಗಳು ನಿಶ್ಚಯಿಸಲ್ಪಡುತ್ತವೆ

1. ಹತ್ತು ವರ್ಷಗಳವರೆಗೆ ಎರಡೂ ಕಡೆಯವರೊಳಗೆ ಯುದ್ಧ ವಿರಾಮವಿರುವುದು. ಈ ಅವಧಿಯಲ್ಲಿ ಅವರು ಪರಸ್ಪರರ ವಿರುದ್ಧ ಯಾವುದೇ ರಹಸ್ಯ ಅಥವಾ ಬಹಿರಂಗ ಕಾರ್ಯಾಚರಣೆಯನ್ನು ನಡೆಸಲಾರರು.
2. ಈ ಕಾಲಾವಧಿಯಲ್ಲಿ ಕುರೈಶರ ಪೈಕಿ ಯಾರಾದರೂ ತನ್ನ ಸಂರಕ್ಷಕನ ಅನುಮತಿಯಿಲ್ಲದೆ ಓಡಿ ಬಂದು ಮುಹಮ್ಮದ್‌ರ ಜೊತೆ ಸೇರಿಕೊಂಡರೆ, ಆತನನ್ನು ಕುರೈಶರಿಗೆ ಮರಳಿ ಒಪ್ಪಿಸಬೇಕು. ಆದರೆ ಮುಹಮ್ಮದ್‌ರ ಸಂಗಾತಿಗಳ ಪೈಕಿ ಯಾರಾದರೂ ಕುರೈಶರ ಬಳಿಗೆ ಬಂದರೆ ಆತನನ್ನು ಮರಳಿಸಲಾಗದು.
3. ಅರಬ್ ಗೋತ್ರಗಳ ಪೈಕಿ ಪ್ರತಿಯೊಂದು ಗೋತ್ರವೂ ಇತ್ತಂಡಗಳ ಪೈಕಿ ಯಾವ ತಂಡದೊಡನೆ ಬೇಕಾದರೂ ಸೇರಿಕೊಳ್ಳಲು ಸ್ವತಂತ್ರವಾಗಿರುವುದು.
4. ಎರಡೂ ತಂಡದವರು ಪರಸ್ಪರ ಕರಾರು ಉಲ್ಲಂಘನೆ ಅಥವಾ ವಂಚನೆ

ಮಾಡಬಾರದು. ಮನಸ್ಸಿನಲ್ಲಿ ದ್ವೇಷವಿದ್ದರೂ ಅದನ್ನು ಬಹಿರಂಗಗೊಳಿಸಬಾರದು.

5. ಮುಹಮ್ಮದ್ ಈ ವರ್ಷ ಉಮ್ರಾ ನಿರ್ವಹಿಸದೇ ಮರಳಿಹೋಗಬೇಕು. ಮುಂದಿನ ವರ್ಷ ಅವರು ಉಮ್ರಾ ನಿರ್ವಹಿಸಲು ಕೇವಲ ಮೂರು ದಿನಗಳ ಕಾಲ ಮಕ್ಕಾದಲ್ಲಿ ತಂಗಬಹುದು. ತಮ್ಮ ಆತ್ಮರಕ್ಷಣೆಯ ಖಡ್ಗಗಳನ್ನು ಕವಚದೊಳಗಿರಿಸಬೇಕು. ಇತರ ಯಾವುದೇ ಆಯುಧಗಳನ್ನು ತರಬಾರದು. ಈ ಮೂರು ದಿನಗಳಲ್ಲಿ ಯಾವುದೇ ಘರ್ಷಣೆಯುಂಟಾಗದಂತೆ ಮಕ್ಕಾವಾಸಿಗಳು ಮುಹಮ್ಮದ್ ಮತ್ತು ಅನುಯಾಯಿಗಳಿಗೆ ಮಕ್ಕಾ ಪಟ್ಟಣವನ್ನು ಬಿಟ್ಟು ಕೊಡುವರು. ಆದರೆ ಮುಸ್ಲಿಮರು ಮಕ್ಕಾದಿಂದ ಮರಳಿ ಹೋಗುವಾಗ ಅಲ್ಲಿನ ಯಾವನೇ ನಿವಾಸಿಯನ್ನು ತಮ್ಮ ಜೊತೆ ಕರೆದೊಯ್ಯಬಾರದು.

ಒಪ್ಪಂದದ ಶರತ್ತುಗಳು ಲಿಖಿತಗೊಳ್ಳುವ ಹಂತ ತಲುಪಿದಾಗ ಮುಹಮ್ಮದ್ ಅಲಿಯವರೆಗೆ ಬರೆಯಲು ಸೂಚಿಸುತ್ತಾರೆ. ಅವರು ಒಪ್ಪಂದ ಪತ್ರದ ಆರಂಭದಲ್ಲಿ 'ಬಿಸ್ಮಿಲ್ಲಾ ಹಿರ್ರಹ್ಮಾ ನಿರ್ರಹೀಮ್' (ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ) ಎಂದು ಬರೆಯಬಯಸುತ್ತಾರೆ. ಆದರೆ ಸುಹೈಲ್ ಇದಕ್ಕೆ ಆಕ್ಷೇಪವನ್ನು ವ್ಯಕ್ತಪಡಿಸಿ ಅರಬ್ ಸಂಪ್ರದಾಯದಂತೆ 'ಬಿಸ್ಮಿಕ ಅಲ್ಲಾಹುಮ್ಮ' (ಓ ಅಲ್ಲಾಹ್! ನಿನ್ನ ನಾಮದಿಂದ) ಎಂದು ಬರೆಯಲು ತಿಳಿಸುತ್ತಾರೆ. ಮುಹಮ್ಮದ್ ಅಲಿಯವರಿಗೆ ಹಾಗೆಯೇ ಬರೆಯಲು ಆದೇಶಿಸುತ್ತಾರೆ. ಆನಂತರ, ಮುಹಮ್ಮದ್ 'ಅಲ್ಲಾಹನ ಪ್ರವಾದಿಯಾದ ಮುಹಮ್ಮದ್ ಮತ್ತು ಸುಹೈಲ್ ಬಿನ್ ಅಮ್ರ್ ಅವರ ಮಧ್ಯೆ ಆದ ಒಪ್ಪಂದದ ಷರತ್ತುಗಳು" ಎಂದು ಬರೆಯಲು ಹಅಲಿರಿಗೆ ಸೂಚಿಸುತ್ತಾರೆ. ಸುಹೈಲ್ ಅದಕ್ಕೂ ಆಕ್ಷೇಪವೆತ್ತುತ್ತಾರೆ. "ನಾವು ನಿಮ್ಮನ್ನು ಅಲ್ಲಾಹನ ಪ್ರವಾದಿಯೆಂದು ಒಪ್ಪಿಕೊಂಡಿದ್ದರೆ, ಈ ಜಗಳವೇ ಉಂಟಾಗುತ್ತಿರಲಿಲ್ಲ" ಎನ್ನುತ್ತಾರೆ.

ಪ್ರವಾದಿ, ಅಲಿಯವರಿಗೆ 'ಅಬ್ದುಲ್ಲಾರ ಮಗ ಮುಹಮ್ಮದ್ ಮತ್ತು ಅಮ್ರ್‌ನ ಮಗ ಸುಹೈಲ್‌ರ ಮಧ್ಯೆ ಏರ್ಪಟ್ಟ ಒಪ್ಪಂದ' ಎಂದು ಬರೆಯಲು ಆದೇಶಿಸಿದರು. ಅಲಿರಿಗೆ ಪ್ರವಾದಿರ ಮೇಲಿನ ಪ್ರೇಮ ಮತ್ತು ಗೌರವದ ಕಾರಣ, 'ಅಲ್ಲಾಹನ ಪ್ರವಾದಿ' ಪದಗಳ ಮೇಲೆ ಗೆರೆಯನ್ನು ಹಾಕಲು ಒಪ್ಪಲಿಲ್ಲ. ಪ್ರವಾದಿ ಸ್ವತಃ ಈ ಪದಗಳು ಎಲ್ಲಿವೆ ಎಂದು ವಿಚಾರಿಸಿ, ಪದಗಳ ಮೇಲೆ ಗೆರೆಯನ್ನು ಎಳೆದು, ಅಲ್ಲಿ 'ಮುಹಮ್ಮದ್ ಬಿನ್ ಅಬ್ದುಲ್ಲಾ' ಎಂದು ಬರೆಸುತ್ತಾರೆ.

# ಮದೀನಾ ಎರಡು ವೈರಿಗಳ ನಡುವೆ

ಪ್ರಖ್ಯಾತ ಕಾನೂನು ತಜ್ಞ **'ಸರಾಕ್ಷಿ'** 'Sarakhsi' ಹುದೈಬಿಯಾ ಒಪ್ಪಂದದ ಒಂದು ಅಂಶದ ಬಗ್ಗೆ ವಿಶೇಷವಾಗಿ ಗಮನ ಸೆಳೆದಿದ್ದಾರೆ. ಖೈಬರ್ ಮದೀನಾದ ಉತ್ತರದಲ್ಲಿದ್ದು ಮಕ್ಕಾ ಪಟ್ಟಣವು ಮದೀನಾದ ದಕ್ಷಿಣ ಭಾಗದಲ್ಲಿದೆ. ಹೀಗೆ ಮದೀನಾ ಎರಡು ಶತ್ರುಗಳ ನಡುವೆ ಸಿಲುಕಿಕೊಂಡಿತ್ತು. ಖೈಬರ್‌ನ ಯಹೂದಿಗಳು ಮತ್ತು ಮಕ್ಕಾದ ಕುರೈಶರು ಮದೀನಾದ ಮುಸ್ಲಿಮರೊಂದಿಗೆ ಸಂಘರ್ಷಣೆಯಲ್ಲಿದ್ದರು. ಈ ಎರಡೂ ಪಕ್ಷಗಳೂ ಮಿತ್ರರಾಗಿದ್ದರು. ಮುಸ್ಲಿಮರು ಯಾವುದೇ ಪಕ್ಷದವರ ಮೇಲೆ ಆಕ್ರಮಣ ಮಾಡಿದರೆ, ಮತ್ತೊಂದು ಪಕ್ಷ ಅದರ ಸಹಾಯಕ್ಕೆ ನಿರ್ವಾಹವಿಲ್ಲದೇ ಸಹಾಯಕ್ಕೆ ಧಾವಿಸಬೇಕಿತ್ತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಖೈಬರ್ ಮೇಲೆ ಆಕ್ರಮಣ ಮಾಡಲು ಹೊರಟರೆ ದಕ್ಷಿಣದಿಂದ ಕುರೈಶರು ಮದೀನಾದ ಮೇಲೆ ಆಕ್ರಮಣ ಮಾಡುವ ಭಯವಿತ್ತು. ಪ್ರವಾದಿ ಕುರೈಶರ ಮೇಲೆ ಆಕ್ರಮಣ ಮಾಡಲು ಬಯಸಿದರೆ ಖೈಬರ್‌ನ ಯಹೂದಿಗಳು ಮದೀನಾದ ಉತ್ತರ ಭಾಗದಿಂದ ಮದೀನಾದ ಮೇಲೆ ಆಕ್ರಮಣ ಮಾಡುವ ಭಯವಿತ್ತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಓರ್ವ ಚತುರ ಸೇನಾ ನಾಯಕ ಮತ್ತು ರಾಜಕಾರಣಿ ಉಭಯೇತ್ರ ಪಕ್ಷಗಳಲ್ಲಿ, ಒಂದು ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು, ಮತ್ತೊಂದು ಪಕ್ಷದವರನ್ನು ತಟಸ್ಥನನ್ನಾಗಿಸುವ ಏಕೈಕ ಮಾರ್ಗವನ್ನೇ ಅನುಸರಿಸುತ್ತಿದ್ದನು. ಕುರೈಶರೊಂದಿಗೆ ಉದಾರವಾಗಿ ಒಪ್ಪಂದ ಮಾಡಿಕೊಳ್ಳಲು ಈ ಅಂಶವೇ ಕಾರಣವಾಗಿದ್ದಿತು. ಈ ಉಭಯೇತ್ರ ಪಕ್ಷಗಳಲ್ಲಿ, ಯಾವ ಪಕ್ಷದವರೊಡನೆ ಸಂಧಾನ ಮಾಡಿಕೊಳ್ಳಬೇಕು ಎಂಬುದೇ ಪ್ರಮುಖ ನಿರ್ಧಾರವಾಗಿತ್ತು. ಖೈಬರ್‌ನ ಯಹೂದಿಗಳೊಂದಿಗೆ ಸಂಧಾನ ಮಾಡಿಕೊಳ್ಳಬೇಕೇ? ಅಥವಾ ಮಕ್ಕಾದ ಕುರೈಶರೊಂದಿಗೆ ಸಂಧಾನ ಮಾಡಿಕೊಳ್ಳಬೇಕೇ? ಖೈಬರ್‌ನ ಯಹೂದಿಗಳೊಂದಿಗೆ ಸಂಧಾನ ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಏಕೆಂದರೆ ಮತ್ತೊಂದು ಯಹೂದಿ ಗೋತ್ರ ಬನು ನಝೀರ್ ಅನ್ನು ಮದೀನಾದಿಂದ ಹೊರ ಹಾಕಲಾಗಿತ್ತು. ಖೈಬರ್‌ನ ಯಹೂದಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳ ಬಯಸಿದ್ದರೆ, ಅವರು ಬನು ನಝೀರ್ ಗೋತ್ರದವರನ್ನು ವಾಪಸ್ಸು ಕರೆಸಿಕೊಳ್ಳುವ ಷರತ್ತು ಇಡುತ್ತಿದ್ದರು. ಬನು ನಝೀರ್ ಯಹೂದಿಗಳು ಆರ್ಥಿಕವಾಗಿ ಸಶಕ್ತರಾಗಿದ್ದರು. ಯಾವುದೇ ಆರ್ಥಿಕ ಪರಿಹಾರಕ್ಕೆ ಅವರು ಒಪ್ಪುವ ಸಂಭವವಿರಲಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಕುರೈಶರು ಮದೀನಾದ ಮುಸ್ಲಿಮರ ಸಂಬಂಧಿಕ ರಾಗಿದ್ದರು. ಕುರೈಶರು ಮದೀನಾ ಹಿಜ್ರತ್ ಮಾಡಿದವರ ಹತ್ತಿರದ ರಕ್ತ ಸಂಬಂಧಿಗಳಾಗಿದ್ದರು.

ರಕ್ತ ಸಂಬಂಧಿಕರ ಜೊತೆಯಲ್ಲಿ ಮೈತ್ರಿ ಮಾಡಿ ಕೊಳ್ಳುವುದು ಯಹೂದಿಯರೊಂದಿಗೆ ಮೈತ್ರಿ ಮಾಡಿಕೊಳ್ಳುವುದಕ್ಕಿಂತ ಹೆಚ್ಚು ಪ್ರಾಯೋಗಿಕ ವಾಗಿತ್ತು. ಅಲ್ಲದೇ, ಮುಸ್ಲಿಮರೊಂದಿಗೆ ಮೂರು ಯುದ್ಧಗಳಲ್ಲಿ ಸೋತು ಕುರೈಶರು ದುರ್ಬಲರಾಗಿದ್ದರು. ಅವರ ವ್ಯಾಪಾರವು ಮುಸ್ಲಿಮರೊಂದಿಗೆ ಸಂಘರ್ಷದ ಕಾರಣದಿಂದಾಗಿ ಪ್ರಭಾವಿತವಾಗಿತ್ತು.

ಈ ಕಾರಣಗಳಿಂದಾಗಿ ಒಪ್ಪಂದಕ್ಕಾಗಿ ಕುರೈಶರನ್ನು ಒಲಿಸುವುದು ಸುಲಭ ಸಾಧ್ಯವಾಗಿತ್ತು. ವಿವಿಧ ಕಾರಣಗಳಿಗಾಗಿ ಕುರೈಶರೂ ಸಹ ಮುಸ್ಲಿಮರೊಂದಿಗೆ ಶಾಂತಿಯುತ ಸಂಬಂಧ ಹೊಂದಲು ತಯಾರಾಗಿದ್ದರು. ಬರಗಾಲದ ಸಮಯದಲ್ಲಿ ಪ್ರವಾದಿ ಅವರ ನೆರವಿಗೆ ಧಾವಿಸಿ, ಅವರ ಮನವೊಲಿಸುವ ಯತ್ನವನ್ನು ನಡೆಸಿದ್ದರು.

ಪ್ರವಾದಿ ದೂರದೃಷ್ಟಿತ್ವದಿಂದ ಕುರೈಶರ ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡಿದ್ದರು. ಮುಸ್ಲಿಮರ ಕಡೆಯಿಂದ ಕೇವಲ ಒಂದೇ ಒಂದು ಷರತ್ತನ್ನು ಪ್ರವಾದಿ ಕುರೈಶರ ಮುಂದಿರಿಸಿದ್ದರು. "ಲಾ ಇಸ್‌ಲಾಲ್ ವಲಾ ಇಗ್‌ಲಾಲ್" ಇದರ ಅರ್ಥ ಆಯುಧವನ್ನು ಕವಚದಿಂದ ಹೊರತೆಗೆಯಲಾಗು ವುದಿಲ್ಲವೆಂದು, ವಿದ್ರೋಹವನ್ನು ಮಾಡುವುದಿಲ್ಲವೆಂದೂ ಆಗಿತ್ತು.

ಮಕ್ಕಾದ ಕುರೈಶರು ಮತ್ತು ಮದೀನಾದ ಮುಸ್ಲಿಮರು ಪರಸ್ಪರ ಕಾದಾಡುವುದಿಲ್ಲವೆಂದೂ, ಯಾವುದೇ ಕುತಂತ್ರ, ವಿದ್ರೋಹವನ್ನು ಎಸಗುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾರೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಮದೀನಾದ ಮುಸ್ಲಿಮರು ಮೂರನೆಯ ಪಕ್ಷದವರ ಮೇಲೆ ಆಕ್ರಮಣ ಮಾಡಿದರೆ, ಕುರೈಶರು ಈ ಸಂದರ್ಭದಲ್ಲಿ ತಟಸ್ಥ ನಿಲುವು ತಳೆಯುವುದಕ್ಕೆ, ಮತ್ತು ಯಾವುದೇ ವಿದ್ರೋಹವನ್ನು ಮಾಡುವುದಿಲ್ಲವೆಂದು ಒಪ್ಪಿಕೊಂಡಿದ್ದರು.

ಪ್ರವಾದಿ ಕೇವಲ ಇದೊಂದು ಷರತ್ತನ್ನು ಕುರೈಶರ ಮುಂದಿರಿಸಿ, ಕುರೈಶರ ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡರು. 10 ವರ್ಷಗಳ ಕಾಲ ಶಾಂತಿಯ ಷರತ್ತನ್ನು ಒಪ್ಪಿಕೊಂಡರು. ಮದೀನಾದ ಮೂಲಕ ಕುರೈಶರ ವ್ಯಾಪಾರ ತಂಡಗಳು ಹಾದು ಹೋಗಲು ಅನುಮತಿಸಿದರು. ಈಗ ಉಮಾಃ ನಿರ್ವಹಿಸದೇ ಹುದೈಬಿಯಾದಿಂದ ಮದೀನಾ ಹಿಂತಿರುಗುವ ಷರತ್ತಿಗೂ ಸಮ್ಮತಿಸಿದರು. ಪ್ರವಾದಿರ ಅನುಯಾಯಿಗಳು ಈ ಷರತ್ತುಗಳನ್ನು ನೋಡಿ ತೀವ್ರ ನಿರಾಶೆಗೊಂಡಿದ್ದರು.

# ಮುಸ್ಲಿಮರ ತಳಮಳ

ಹುದೈಬಿಯಾ ಒಪ್ಪಂದದ ಷರತ್ತುಗಳು ಮೇಲ್ನೋಟಕ್ಕೆ ಮುಸ್ಲಿಮರ ಪಾಲಿಗೆ ಬಹಳ ಅಪಮಾನಕಾರಿಯಾಗಿ ಕಂಡುಬರುತ್ತಿದ್ದವು. ಆದುದರಿಂದ ಈ ಶರತ್ತುಗಳ ಬಗ್ಗೆ ಮುಸ್ಲಿಮ್ ತಂಡದಲ್ಲಿ ತೀವ್ರತರ ತಳಮಳ ಉಂಟಾಗಿತ್ತು. ಉಮರ್ ಹುದೈಬಿಯಾ ಒಪ್ಪಂದದಿಂದ ಬಹಳ ಕಳವಳಗೊಂಡರು. ಅವರು ಪ್ರವಾದಿರ ಬಳಿಗೆ ಬಂದು 'ತಾವು ಅಲ್ಲಾಹನ ಪ್ರವಾದಿಯಲ್ಲವೆ?', 'ನಾವು ಮುಸ್ಲಿಮರಲ್ಲವೇ?' 'ಧರ್ಮದ ವಿಷಯದಲ್ಲಿ ಈ ಅಪಮಾನವನ್ನು ನಾವು ಏಕೆ ಸಹಿಸಬೇಕು?' ಎಂದು ಪ್ರಶ್ನಿಸುತ್ತಾರೆ.

ಪ್ರವಾದಿ ಮುಹಮ್ಮದ್ ಅತ್ಯಂತ ಸಹನೆಯಿಂದ ಉತ್ತರಿಸುತ್ತಾರೆ.

"ನಾನು ಅಲ್ಲಾಹನ ದಾಸ ಮತ್ತು ಆತನ ಪ್ರವಾದಿಯಾಗಿರುವೆನು. ನಾನು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವಂತಿಲ್ಲ."

ಪ್ರವಾದಿರ ಕುರೈಶ್ ರಾಯಭಾರಿಯೊಂದಿಗೆ ಚರ್ಚೆಯನ್ನು ಆನಂತರ, ಹುದೈಬಿಯಾ ಒಪ್ಪಂದದ ಶರ್ತುಗಳನ್ನು ನೋಡಿ ಸಹಾಬಿಗಳಿಗೆ ಅತೀವ ದುಃಖವಾಯಿತು. ಶರ್ತುಗಳನ್ನು ಒಪ್ಪಿಕೊಳ್ಳುವಲ್ಲಿ ಪ್ರವಾದಿರ ಕ್ರಮ ಅವರಿಗೆ ಅರ್ಥವಾಗಲಿಲ್ಲ. ಪ್ರವಾದಿ ಮುಸ್ಲಿಮರಿಗೆ ಧೈರ್ಯ ಮತ್ತು ಘನತೆಯ ಪಾಠವನ್ನು ಕಲಿಸಿದ್ದರು. ಆದರೆ ಪ್ರವಾದಿ ಇಂತಹ ನ್ಯಾಯಕ್ಕೆ ಅನುಚಿತ ಒಪ್ಪಂದವನ್ನು ಹೇಗೆ ಒಪ್ಪಿಕೊಳ್ಳುತ್ತಿದ್ದಾರೆ ಎಂದು ಅವರು ಕಳವಳಗೊಂಡರು.

ಮುಸ್ಲಿಮರಿಗಾದ ಕಳವಳವನ್ನು ಒಂದು ಘಟನೆಯಿಂದ ಚೆನ್ನಾಗಿ ಅಂದಾಜಿಸಬಹುದಾಗಿದೆ. ಹುದೈಬಿಯಾ ಒಪ್ಪಂದಕ್ಕೆ ಹಸ್ತಾಕ್ಷರ ಮಾಡಿದ ನಂತರ ಪ್ರವಾದಿ ಮದೀನಾ ಮರಳುವ ನಿರ್ಧಾರ ಮಾಡಿ ಸಹಾಬಿಗಳಿಗೆ ತಮ್ಮ ತಮ್ಮ ಪ್ರಾಣಿಗಳನ್ನು ಬಲಿ ನೀಡಲು ಮತ್ತು ಕ್ಷೌರ ಮಾಡಲು ಆಜ್ಞಾಪಿಸುತ್ತಾರೆ. ಆದರೆ ಸಹಾಬಿಗಳು ಹುದೈಬಿಯಾ ಒಪ್ಪಂದದ ಕಾರಣ ತಮ್ಮ ಸ್ಥಾನದಿಂದ ಕದಲದೆ ಕಲ್ಲಿನ ಮೂರ್ತಿಗಳಂತೆ ಕುಳಿತುಬಿಟ್ಟರು. ಪ್ರವಾದಿ ಮೂರು ಬಾರಿ ಆಜ್ಞಾಪಿಸಿದರೂ, ಸಹಾಬಿಗಳು ಪ್ರವಾದಿಯವರ ಆದೇಶವನ್ನು ಪಾಲಿಸಲಿಲ್ಲ. ಅನುಯಾಯಿಗಳ ಈ ವರ್ತನೆಯನ್ನು ನೋಡಿ ಪ್ರವಾದಿ ತೀವ್ರವಾಗಿ ನೊಂದು ತಮ್ಮ ಡೇರೆಗೆ ಮರಳುತ್ತಾರೆ. ಪತ್ನಿ ಉಮ್ಮು ಸಲ್ಮಾರಿಗೆ ಹೇಳುತ್ತಾರೆ.

"ಜನರಿಗೇನಾಗಿದೆ? ನಾನು ಆಜ್ಞಾಪಿಸಿದರೂ ಅವರು ಆದೇಶ ಪಾಲಿಸುತ್ತಿಲ್ಲ."

ಪ್ರಥಮ ಬಾರಿ ಪ್ರವಾದಿಯವರ ಅನುಯಾಯಿಗಳು ಸಾಮೂಹಿಕವಾಗಿ ಪ್ರವಾದಿಯವರ ಆದೇಶವನ್ನು ಪಾಲಿಸಲು ನಿರಾಕರಿಸಿದ್ದರು! ಇದನ್ನು ಕಂಡು ಪ್ರವಾದಿ

ಆಶ್ಚರ್ಯ ಚಕಿತರೂ, ದುಃಖಿತರೂ ಆಗಿದ್ದರು.

ಉಮ್ಮು ಸಲ್ಮಾ ನುಡಿದರು. ಅಲ್ಲಾಹನ ಪ್ರವಾದಿಗಳೇ, ನೀವು ಈ 1500 ಜನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ನೀವು ಆದೇಶಿಸಿದಂತೆ ಅನುಸರಿಸುವಂತೆ ಮಾಡಲು ಸಾಧ್ಯವಿಲ್ಲ. ಅಲ್ಲಾಹನು ನಿಮಗೆ ಆದೇಶಿಸಿರುವಂತೆ, ನಿಮ್ಮ ಕರ್ತವ್ಯವನ್ನು ನಿರ್ವಹಿಸಿರಿ. ತೆರೆದ ಮೈದಾನದಲ್ಲಿ ಉಮ್ರಾಃದ ಆಚರಣೆಗಳನ್ನು ನಿರ್ವಹಿಸಿರಿ.

"ಜನರು ಉಮ್ರಾ ಮಾಡದೇ ಮದೀನಾ ಹಿಂತಿರುಗಿಬೇಕಾಗಿರುವುದರಿಂದ ದುಃಖಿತರಾಗಿ ಈ ರೀತಿ ಮಾಡುತ್ತಿರಬಹುದು. ತಾವು ಈ ಬಗ್ಗೆ ಚಿಂತಿತರಾಗದಿರಿ. ನೀವು ಸ್ವತಃ ಒಂಟೆಯನ್ನು ಬಲಿ ನೀಡಿ. ನೀವು ಮಾಡುತ್ತಿರುವುದನ್ನು ನೋಡಿ ಸಹಾಬಿಗಳೂ ನಿಮ್ಮನ್ನು ಅನುಸರಿಸುವರು."

ಪ್ರವಾದಿರಿಗೆ ಉಮ್ಮುಸಲ್ಮಾರ ಸಲಹೆ ಮೆಚ್ಚುಗೆಯಾಯಿತು. ಕೂಡಲೇ ಪ್ರವಾದಿ ಡೇರೆಯಿಂದ ಹೊರಬಂದು ತಮ್ಮ ಒಂಟೆಯನ್ನು ಬಲಿ ನೀಡಿ ತಲೆ ಕ್ಷೌರ ಮಾಡಿಕೊಂಡರು. ಇದನ್ನು ನೋಡಿ ಎಲ್ಲಾ ಸಹಾಬಿಗಳು ನಿದ್ರೆಯಿಂದ ಎಚ್ಚೆತ್ತವರಂತೆ ಎದ್ದು ಕುರ್ಬಾನಿ ನೀಡಲು ಮತ್ತು ಕ್ಷೌರ ಮಾಡಿಸಲು ಆರಂಭಿಸುತ್ತಾರೆ.

## ಪ್ರವಾದಿ ಮುಹಮ್ಮದ್‌ರ ದೂರದೃಷ್ಟಿತ್ವ

ಸ್ವಲ್ಪ ಕಾಲದಲ್ಲಿಯೇ ಸಹಾಬಿಗಳಿಗೆ, ತಾವು ಪ್ರವಾದಿರ ಚಾಣಾಕ್ಷತನವನ್ನು, ದೂರದೃಷ್ಟಿತ್ವವನ್ನು, ಆಳ ಆಧ್ಯಾತ್ಮಿಕತೆಯನ್ನು, ತರ್ಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗಲಿಲ್ಲವೆಂಬುದು ಮನವರಿಕೆಯಾಯಿತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಒಂಟೆ ಹುದೈಬಿಯಾ ಪ್ರದೇಶದಿಂದ ಮುಂದೆ ಪ್ರಯಾಣ ಬೆಳಸದೇ ಹುದೈಬಿಯಾದಲ್ಲಿಯೇ ಕುಳಿತ ಕೂಡಲೇ, ಮುಸ್ಲಿಮರು ಈ ವರ್ಷ ಹುದೈಬಿಯಾದಿಂದ ಮುಂದಕ್ಕೆ ಪ್ರಯಾಣ ಬೆಳೆಸಲು ಸಾಧ್ಯವಿಲ್ಲವೆಂಬುದು ಅವರಿಗೆ ಸ್ಪಷ್ಟವಾಯಿತು. ಕುರೈಶರೊಂದಿಗೆ ನಾಲ್ಕು ಸುತ್ತಿನ ಮಾತುಕತೆಗಳ ವಿಫಲವಾಗಿ, ಕುರೈಶರ ಹಠಮಾರಿತನವನ್ನು ನೋಡಿ ಪ್ರವಾದಿ ತಾವು ಸಹನೆ ವಹಿಸಬೇಕೆಂಬುದನ್ನು ಅರ್ಥೈಸಿಕೊಂಡರು. ತಾವು ಉಮ್ರಾಃ ನಿರ್ವಹಿಸುತ್ತಿರುವುದಾಗಿ ಕನಸು ಕಂಡಿದ್ದು, ಇದು ನೈಜವಾಗುವುದು ಪ್ರವಾದಿರಿಗೆ ತಿಳಿದಿತ್ತು. ಆದರೆ ಯಾವ ಸಮಯದಲ್ಲಿ ಉಮ್ರಾಃವನ್ನು ನಿರ್ವಹಿಸಬೇಕಾಗಬಹುದು ಎಂಬುದನ್ನು ಕಾದು ನೋಡಬೇಕಿತ್ತು!

ಹುದೈಬಿಯಾದಲ್ಲಿ ಮುಸ್ಲಿಮರು ಪ್ರವಾದಿರ ಕೈಯಲ್ಲಿ ಪ್ರತಿಜ್ಞೆ ಮಾಡಿ ಶತ್ರುಗಳ ವಿರುದ್ಧ ಒಗ್ಗಟ್ಟಿನ ಪ್ರದರ್ಶನವನ್ನು ನೀಡಿದ್ದರು. ಈಗ ಒಪ್ಪಂದದ ಅಂಶಗಳನ್ನು ಸಹನೆಯಿಂದ, ತಾಳ್ಮೆಯಿಂದ ಅವರು ಪಾಲಿಸಬೇಕಾಗಿತ್ತು.

ಕುರೈಶ್‌ರ ರಾಯಭಾರಿ ಸುಹೈಲ್ ಒಪ್ಪಂದವನ್ನು ಬರೆಯುವ ಸಂದರ್ಭದಲ್ಲಿ 'ಬಿಸ್ಮಿಲ್ಲಾ ಹಿರ್ರಹ್ಮಾ ನಿರ್ರಹೀಮ್' ಎಂದು ಬರೆಯಲು ನಿರಾಕರಿಸಿ, 'ಬಿಸ್ಮಿಕ ಅಲ್ಲಾಹುಮ್ಮ' ಎಂದು ಬರೆಯಲು ಒತ್ತಾಯಿಸಿದ್ದರು. ನಂತರ ಅಲ್ಲಾಹನ ಪ್ರವಾದಿಯಾದ ಮುಹಮ್ಮದ್ ಮತ್ತು ಸುಹೈಲ್ ಬಿನ್ ಅಮ್ರ್ ಅವರ ನಡುವೆ ಆದ ಒಪ್ಪಂದದ ಷರತ್ತುಗಳು' ಎಂದು ಬರೆಯಲೂ ಆಕ್ಷೇಪಿಸಿ, 'ಮುಹಮ್ಮದ್ ಬಿನ್ ಅಬ್ದುಲ್ಲಾ ಮತ್ತು ಸುಹೈಲ್ ಬಿನ್ ಅಮ್ರ್'ರ ನಡುವೆ ಏರ್ಪಟ್ಟ ಒಪ್ಪಂದ' ಎಂದು ಬರೆಯಲು ತಿಳಿಸಿದರು. ಪ್ರವಾದಿ ಸುಹೈಲ್ ನುಡಿಯುತ್ತಿದ್ದುದನ್ನು ತಮ್ಮ ದೃಷ್ಟಿಕೋನದಿಂದ ನೋಡದೇ, ಸುಹೈಲ್‌ನ ದೃಷ್ಟಿಕೋನದಿಂದ ನೊಡಿ ಆತನ ದೃಷ್ಟಿಕೋನದಿಂದ ಅದು ಸರಿ ಎಂದು ಅವರಿಗೆ ಅನಿಸಿತು.

ಕುರೈಶರು ಮುಹಮ್ಮದ್‌ರನ್ನು ಪ್ರವಾದಿ ಎಂದು ಅಂಗೀಕರಿಸಿದ್ದರೆ. ಮುಹಮ್ಮದ್‌ರೊಂದಿಗೆ ಸಂಘರ್ಷಕ್ಕೆ ಯಾವುದೇ ಕಾರಣವೇ ಇರುತ್ತಿರಲಿಲ್ಲ! ಆದುದರಿಂದ ಒಪ್ಪಂದದಲ್ಲಿ ಮುಹಮ್ಮದ್ ಅಲ್ಲಾಹನ ಪ್ರವಾದಿ ಎಂದು ಬರೆಯಲು ಆಸ್ಪದವಿರಲಿಲ್ಲ. ಹಾಗೆ ಬರೆದಿದ್ದರೆ ಅದು ಕುರೈಶರ ನಿಲುವಿಗೆ ತದ್ವಿರುದ್ಧವಾಗುತ್ತಿತ್ತು. ಸಹಾಬಿಗಳಿಗೆ ಪ್ರವಾದಿರ ಮೇಲಿನ ಪ್ರೇಮದಿಂದಾಗಿ ಈ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಪ್ರವಾದಿರಿಗೆ ಅವರಿಗಿದ್ದ ದೂರದೃಷ್ಟಿತ್ವದ ಮತ್ತು ಹೊಂದಾಣಿಕೆ ಸ್ವಭಾವದ ಕಾರಣದಿಂದಾಗಿ ಇದು ಸಾಧ್ಯವಾಯಿತು.

ಒಂದು ವಿಷಯವು ನಿರ್ಧಾರಕ್ಕಾಗಿ ಮುಂದೆ ಬಂದಾಗ, ವಸ್ತು ನಿಷ್ಠವಾಗಿ ಅದನ್ನು ವಿಶ್ಲೇಷಿಸಬೇಕೇ ಹೊರತು, ಭಾವನಾತ್ಮಕವಾಗಿ, ಕುರುಡು ಪ್ರೇಮದಿಂದ ವ್ಯವಹರಿಸಬಾರದು. ಮುಸ್ಲಿಮರ ದೃಷ್ಟಿಕೋನದಿಂದ ಪ್ರಸ್ತಾವನೆಯು ಸ್ವೀಕಾರಾರ್ಹವಲ್ಲವೆಂದು ಕಂಡು ಬರುತ್ತಿದ್ದು, ಇದನ್ನೇ ಕುರೈಶರ ದೃಷ್ಟಿಕೋನದಿಂದ ನೋಡಿದಾಗ ಅದು ನ್ಯಾಯೋಚಿತವಾಗಿ ಕಾಣಿಸಿತು. ಮುಸ್ಲಿಮರ ಪ್ರತಿಷ್ಠೆಯನ್ನು, ಗೌರವವನ್ನು ರಕ್ಷಿಸಲಿಕ್ಕಾಗಿ ಕುರೈಶರನ್ನು ಅಪಮಾನಗೊಳಿಸಲು ಸಾಧ್ಯವಿರಲಿಲ್ಲ. ಇದೇ ರೀತಿಯಲ್ಲಿ, ಕಂದಕ ಯುದ್ಧದ ನಂತರ ನಿರ್ಮಾಣಗೊಂಡ ಹೊಸ ಸನ್ನಿವೇಶದ ದುರ್ಲಾಭ ಪಡೆಯುವುದೂ ತರವಾಗಿರಲಿಲ್ಲ. ಈ ವರ್ಷ ಉಮ್ರಾಃ ನಿರ್ವಹಿಸದೇ ಹಿಂತಿರುಗಲು ನಿರ್ಧರಿಸಿದ್ದರಿಂದ ಕುರೈಶರ ಪ್ರತಿಷ್ಠೆಯನ್ನು ರಕ್ಷಿಸಿದಂತಾಯಿತು. ಇದರಿಂದಾಗಿ ದೀರ್ಘಕಾಲದವರೆಗೆ ಅರೇಬಿಯಾದಲ್ಲಿ ಶಾಂತಿ ನೆಲೆಸುವಂತಾಯಿತು. ಅಂತಿಮವಾಗಿ ಈ ಶಾಂತಿ, ಮುಸ್ಲಿಮರಿಗೆ ಅತ್ಯಂತ ಫಲಕಾರಿಯಾಗಿ ಪರಿಣಮಿಸಿತು.

# ಸ್ಪಷ್ಟ ವಿಜಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅಲ್ಲಾಹನಲ್ಲಿ ಅಚಲ ವಿಶ್ವಾಸ, ನಿಷ್ಠುರದಿಂದ ಸತ್ಯದ ಪಾಲನೆ, ಉತ್ಕೃಷ್ಟ ಮಟ್ಟದ ಬುದ್ಧಿವಂತಿಕೆಯಿಂದಾಗಿ, ಹತ್ತು ವರ್ಷಗಳ ಕಾಲ ಶಾಂತಿ ಏರ್ಪಾಡುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಮುಂದಿನ ವರ್ಷ ಕಅಬಃ ಸಂದರ್ಶನವನ್ನು ಅವರು ಮಾಡಬಹುದಿತ್ತು.

ಅನೇಕ ಸಹಾಬಿಗಳಿಗೆ ಹುದೈಬಿಯಾ ಒಪ್ಪಂದದ ದೂರಗಾಮಿ ಪರಿಣಾಮದ ತಿಳುವಳಿಕೆ ಇರಲಿಲ್ಲ. ಅವರು ಹುದೈಬಿಯಾ ಒಪ್ಪಂದದ ತಕ್ಷಣದ ಪರಿಣಾಮದಿಂದ ಪ್ರಭಾವಿತರಾಗಿದ್ದರು. ವಿಶೇಷವಾಗಿ ಉಮರ್. ಅವರು ಹುದೈಬಿಯಾ ಒಪ್ಪಂದವನ್ನು ಮುಸ್ಲಿಮರ ಪಾಲಿಗೆ ಬಹಳ ಅಪಮಾನಕಾರಿಯೆಂದೂ, ಸೋಲೆಂದೂ ಬಗೆದಿದ್ದರು. ಈ ಒಪ್ಪಂದದ ಬಗ್ಗೆ ಪ್ರವಾದಿರನ್ನು ಪ್ರಶ್ನಿಸಿದ್ದರು ಸಹಾ. ಆದರೆ ನಂತರ ತಮ್ಮ ಕೃತ್ಯದ ಬಗ್ಗೆ ಅವರು ಬಹಳ ಪಶ್ಚಾತ್ತಾಪಪಟ್ಟಿದ್ದರು.

ಮದೀನಾ ಹಿಂತಿರುಗುವಾಗ ಮಾರ್ಗದಲ್ಲಿ ಪ್ರವಾದಿ ಉಮರ್‌ರಿಗೆ ಹೇಳಿ ಕಳುಹಿಸಿದರು. ತಮ್ಮ ವರ್ತನೆಯ ಬಗ್ಗೆ ಪ್ರವಾದಿ ತಮ್ಮ ಅಸಮಾಧಾನ ವ್ಯಕ್ತಪಡಿಸಬಹುದೆಂದು ಅಥವಾ ಅಲ್ಲಾಹ್ ತಮ್ಮ ವರ್ತನೆಯನ್ನು ಖಂಡಿಸುತ್ತಾ ಕುರ್‌ಆನಿನ ಸೂಕ್ತವನ್ನು ಅವತೀರ್ಣ ಗೊಳಿಸಿರಬಹುದೆಂದು ಕಳವಳಗೊಂಡರು.

ಪ್ರವಾದಿರನ್ನು ಭೇಟಿ ಮಾಡಿದಾಗ, ಪ್ರವಾದಿರ ಮುಖಾರವಿಂದ ಸಂತೋಷದಿಂದ ಅರಳಿತ್ತು. ಉಮರ್ ಅಲ್ಲಾಹ್ ಈ ಸೂಕ್ತವನ್ನು ಅವತೀರ್ಣಗೊಳಿಸಿದ್ದಾನೆ ಎಂದು ಪ್ರವಾದಿ ನುಡಿದರು.

ಪವಿತ್ರ ಕುರ್‌ಆನ್ ಮುಸ್ಲಿಮರಿಗೆ ಸ್ಪಷ್ಟ ವಿಜಯ ಪ್ರಾಪ್ತವಾಗಿರುವುದಾಗಿ ಘೋಷಿಸಿತು.

> **“**ಸಂದೇಶವಾಹಕರೇ, ನಾವು ನಿಮಗೆ ಸುಸ್ಪಷ್ಟ ವಿಜಯ ಪ್ರದಾನ ಮಾಡಿದೆವು**”** (ಪವಿತ್ರ ಕುರ್‌ಆನ್ 48:1)

ನಂತರ ಹುದೈಬಿಯಾ ಒಪ್ಪಂದದ ಬಗ್ಗೆ ಈ ಸೂಕ್ತ ಅವತೀರ್ಣವಾಯಿತು.

> **“**ವೃಕ್ಷದಡಿಯಲ್ಲಿ ನಿಮ್ಮೊಂದಿಗೆ ಸತ್ಯವಿಶ್ವಾಸಿಗಳು ಆಜ್ಞಾನುಸರಣೆಯ ಕರಾರು ಮಾಡುತ್ತಿದ್ದಾಗ ಅಲ್ಲಾಹನು ಅವರಿಂದ ಸಂತುಷ್ಟನಾದನು. ಅವರ ಮನಸ್ಸಿನಲ್ಲೇನಿತ್ತೆಂಬುದು ಅವನಿಗೆ ತಿಳಿದಿತ್ತು. ಆದುದರಿಂದ ಅವನು ಅವರ ಮೇಲೆ ಪ್ರಶಾಂತತೆಯನ್ನು ಇಳಿಸಿದನು. ಪುರಸ್ಕಾರವಾಗಿ ಅವರಿಗೆ ಶೀಘ್ರ ವಿಜಯವನ್ನು ದಯಪಾಲಿಸಿದನು**”**
> (ಪವಿತ್ರ ಕುರ್‌ಆನ್ 48:18)

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರವರು ಕಂಡಿದ್ದ ಕನಸು ಸತ್ಯವಾಗಿತ್ತು.

> "ನಿಜಕ್ಕೂ ಅಲ್ಲಾಹನು ತನ್ನ ಸಂದೇಶವಾಹಕರಿಗೆ ಸಂಪೂರ್ಣವಾಗಿ ಸತ್ಯಕ್ಕೆ ಅನುಗುಣವಾದ ಕನಸನ್ನೇ ತೋರಿಸಿದ್ದನು. ಅಲ್ಲಾಹನಿಚ್ಛಿಸಿದರೆ, ನೀವು ಖಂಡಿತವಾಗಿಯೂ ಸಂಪೂರ್ಣ ಶಾಂತಿಯೊಂದಿಗೆ ಮಸ್ಜಿದುಲ್ ಹರಾಮನ್ನು ಪ್ರವೇಶಿಸುವಿರಿ. ನಿಮ್ಮ ತಲೆ ಬೋಳಿಸಿಕೊಳ್ಳುವಿರಿ ಮತ್ತು ಕೂದಲು ಕತ್ತರಿಸಿಕೊಳ್ಳುವಿರಿ....." (ಪವಿತ್ರ ಕುರ್‌ಆನ್ 48:27)

ಹುದೈಬಿಯಾ ಒಪ್ಪಂದದ ಬಗ್ಗೆ ಪ್ರವಾದಿರ ಅನುಯಾಯಿಗಳ ಅನಿಸಿಕೆಗೆ ವ್ಯತಿರಿಕ್ತವಾಗಿ ಕುರ್‌ಆನಿನ ಸೂಕ್ತಗಳು ವಿಶ್ಲೇಷಣೆ ನೀಡಿದವು. ಯುದ್ಧಕ್ಕೆ ಸರ್ವವನ್ನು ತ್ಯಾಗ ಮಾಡುವುದಾಗಿ ಅನುಯಾಯಿಗಳು ಮಾಡಿದ್ದ ಪ್ರತಿಜೆ ವಾಸ್ತವವಾಗಿ ಶಾಂತಿಗಾಗಿ ಮಾಡಿದ್ದ ಪ್ರತಿಜ್ಞೆಯಾಗಿತ್ತು ಎಂದು ಕುರ್‌ಆನ್ ಸಾರಿತು. ಹುದೈಬಿಯಾ ಒಪ್ಪಂದದಲ್ಲಿ ಸೋಲಿನ ಛಾಯೆಯನ್ನು ಕಾಣುತ್ತಿದ್ದ ಮುಸ್ಲಿಮರಿಗೆ "ಸ್ಪಷ್ಟ ವಿಜಯವನ್ನು ದಯಪಾಲಿಸಲಾಗಿದೆ" ಎಂದು ತಿಳಿಸಲಾಯಿತು. ಉಮ್ರಾಃ ನಿರ್ವಹಿಸಿದಂತೆ ಪ್ರವಾದಿ ಕನಸು ಕಂಡಿದ್ದರು. ಆದರೆ ಹುದೈಬಿಯಾದಿಂದ ಉಮಾಃ ನಿರ್ವಹಿಸದೇ ಹಿಂತಿರುಗ ಬೇಕಾಯಿತು. "ಅಲ್ಲಾಹ್ ಇಚ್ಛಿಸಿದರೆ, ಖಂಡಿತವಾಗಿಯೂ ಮಸ್ಜಿದುಲ್ ಹರಾಮ್ ಪ್ರವೇಶಿಸುವಿರಿ" ಎಂದು ಘೋಷಿಸಲಾಯಿತು. ಹುದೈಬಿಯಾ ಒಪ್ಪಂದದಿಂದ ಉಂಟಾಗಲಿರುವ ದೂರಗಾಮಿ ಪರಿಣಾಮಗಳನ್ನು, ಬೆಳವಣಿಗೆಗಳನ್ನು, ಮುಸ್ಲಿಮರಿಗೆ ಅಂದಾಜಿಸಲು, ಊಹಿಸಲು ಸಾಧ್ಯವಾಗಿರಲಿಲ್ಲ.

ಹುದೈಬಿಯಾ ಒಪ್ಪಂದ ಅಧ್ಯಾತ್ಮಿಕತೆಯ ಒಂದು ಐತಿಹಾಸಿಕ ಘಟ್ಟವಾಗಿತ್ತು. ಜಾಣತನ ಮತ್ತು ಬುದ್ಧಿವಂತಿಕೆಯ ಪಾಠವನ್ನು ಜಗತ್ತಿಗೆ ಅದು ಸಾರಿತ್ತು. ಎದುರು ಪಕ್ಷದವರ ವಿಚಾರವನ್ನು ಆಲಿಸುವುದು, ನಿರ್ದಿಷ್ಟ ವಿಷಯವನ್ನು ಎದುರು ಪಕ್ಷದ ದೃಷ್ಟಿಕೋನದಿಂದ ನೋಡುವುದು, ಎದುರು ಪಕ್ಷದ ಪ್ರತಿಷ್ಠೆ, ಸ್ವಾಭಿಮಾನವನ್ನು ಗೌರವಿಸುವುದು, ಅದಕ್ಕೆ ಧಕ್ಕೆಯಾಗದಂತೆ ಕ್ರಮ ತೆಗೆದುಕೊಳ್ಳುವುದು, ಈ ಕ್ರಮಗಳನ್ನು ಕೈ ಗೊಳ್ಳುವ ಮೂಲಕ ಪ್ರವಾದಿ "ಜಗತ್ತಿಗೆ ಸರ್ವಕಾಲಿಕ ಅತ್ಯುತ್ತಮ ಮಾದರಿ" ಎಂದು ಸಾಬೀತುಪಡಿಸಿದರು.

ಇಸ್ಲಾಮಿನ ಸಂದೇಶವನ್ನು ದೂರ ದೂರದ ದೇಶಗಳಿಗೆ ಹರಡಲೂ ಅವಕಾಶ ದೊರಕಿತು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಇಸ್ಲಾಮ್ ಸ್ವೀಕರಿಸತೊಡಗಿದರು.

# ಉಮ್ಮೆ ಸಲ್ಮಾರ ಪರಿಹಾರ ಮಾರ್ಗ

ಜೀವನದ ಮತ್ತೊಂದು ರಂಗದಲ್ಲಿಯೂ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಾದರಿಯಾಗಿದ್ದರು. ಹುದೈಬಿಯಾ ಒಪ್ಪಂದದ ನಂತರ ಅನುಯಾಯಿಗಳಿಗೆ ಒಂಟೆಗಳನ್ನು ಬಲಿದಾನ ನೀಡಲು ಮತ್ತು ತಲೆ ಕೂದಲು ತೆಗೆಸಲು ಆದೇಶಿಸಿದರೂ ಅವರು ಆದೇಶದ ಪಾಲನೆ ಮಾಡದಿದ್ದಾಗ ಪ್ರವಾದಿ ತೀವ್ರ ದುಃಖಿತರಾಗಿ ತಮ್ಮ ಪತ್ನಿ ಉಮ್ಮೆ ಸಲ್ಮಾರಲ್ಲಿ ತಮ್ಮ ನೋವನ್ನು ತೋಡಿಕೊಂಡರು. ಉಮ್ಮೆ ಸಲ್ಮಾ ಪ್ರವಾದಿರನ್ನು ಸಮಾಧಾನ ಪಡಿಸಿ, ಅವರಿಗೆ ಪರಿಹಾರ ಮಾರ್ಗವನ್ನು ಸೂಚಿಸಿದರು. ಉಮ್ಮೆ ಸಲ್ಲಾ ರೊಂದಿಗಿನ ಮಾತುಕತೆ, ಉಮ್ಮೆ ಸಲ್ಮಾರ ಪರಿಹಾರ ಸೂಚಿಸುವಿಕೆ, ತಮ್ಮ ಪತ್ನಿಯರೊಂದಿಗಿನ ಪ್ರವಾದಿರ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಖದೀಜಾ ರೊಂದಿಗೆ ನಡೆದುಕೊಳ್ಳುತ್ತಿದ್ದಂತೆ, ಪ್ರವಾದಿ ತಮ್ಮ ಇತರ ಪತ್ನಿಯರೊಂದಿಗೂ ಪ್ರೀತಿಯಿಂದ, ಆತ್ಮೀಯತೆಯಿಂದ, ನಡೆದುಕೊಳ್ಳುತ್ತಿದ್ದರು. ಅವರೊಂದಿಗೆ ಸಮಾಲೋಚನೆ ನಡೆಸುತ್ತಿದ್ದರು, ಅವರ ಸಲಹನೆಯನ್ನು ಪಡೆಯುತ್ತಿದ್ದರು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಸಮುದಾಯದ ಭವಿಷ್ಯವು ಅತ್ಯಂತ ಸೂಕ್ಷ್ಮ ಪರಿಸ್ಥಿತಿಯಲ್ಲಿ ಇದ್ದಾಗ, ಓರ್ವ ಸಾಮಾನ್ಯ ಮನುಷ್ಯನಂತೆ ಪ್ರವಾದಿ ತಮ್ಮ ಪತ್ನಿಯ ಬಳಿ ನೋವನ್ನು, ಕಷ್ಟಗಳನ್ನು ತೋಡಿಕೊಂಡರು. ಈ ಘಟನೆಯು ಎಲ್ಲಾ ಜನರಿಗೂ ಒಂದು ಉತ್ತಮ ಮಾದರಿಯಾಗಿದೆ.

ಉಮ್ಮೆ ಸಲ್ಮಾ ತಮ್ಮ ಬುದ್ಧಿವಂತಿಕೆ, ವ್ಯವಹಾರಜ್ಞಾನದಿಂದಾಗಿ ಪ್ರಖ್ಯಾತರಾಗಿದ್ದರು. ಪ್ರವಾದಿ ಅವರ ಸಲಹೆಗಳನ್ನು ಪಡೆಯುತ್ತಿದ್ದರು ಮತ್ತು ಅವರಿಂದ ಬಹಳಷ್ಟು ಪ್ರಭಾವಿತರಾಗಿದ್ದರು.

ಮುಸ್ಲಿಮರು ಮದೀನಾ ಹಿಂತಿರುಗಿದ ನಂತರ ದಿನನಿತ್ಯದ ಜೀವನ ಎಂದಿನಂತೆ ಸಾಗ ತೊಡಗಿತು. ಆದರೆ ಮೊದಲಿನ ಆತಂಕ ಈಗಿರಲಿಲ್ಲ. ಕುರೈಶರೊಂದಿಗಿನ ಒಪ್ಪಂದದಿಂದಾಗಿ, ಮುಸ್ಲಿಮರಿಗೆ ಈಗ ಇಸ್ಲಾಮೀ ರಾಷ್ಟ್ರವನ್ನು ಭದ್ರ ಬುನಾದಿಯ ಮೇಲೆ ನೆಲೆಯೂರುವತ್ತ ಗಮನ ಹರಿಸಲು ಸಾಧ್ಯವಾಯಿತು.

☆

# ಇಸ್ಲಾಮಿನ ಕಡೆಗೆ ಪ್ರವಾಹೋಪಾದಿಯಲ್ಲಿ

ಅರೇಬಿಯಾದ ನಾಲ್ಕೂ ದಿಕ್ಕುಗಳಲ್ಲಿ ಇಸ್ಲಾಮ್ ಹರಡತೊಡಗಿತು. ಅರೇಬಿಯಾದ ಪ್ರತಿಯೊಂದು ಬುಡಕಟ್ಟು, ಗೋತ್ರಗಳ ಜನರ ಮನಗಳಲ್ಲಿ ಇಸ್ಲಾಮ್ ಪ್ರವೇಶಿಸಿತು.

ಈ ಮೊದಲು ಅನೇಕ ಕಾರಣಗಳಿಂದಾಗಿ ಅನೇಕ ಗೋತ್ರಗಳ ಜನರು ಇಸ್ಲಾಮ್ ಸ್ವೀಕರಿಸಲು ಹಿಂಜರಿಯುತ್ತಿದ್ದರು. ಇಸ್ಲಾಮ್ ಸ್ವೀಕಾರದಿಂದ ಕುರೈಶರಿಂದ ವೈರತ್ವ ಕಟ್ಟಿಕೊಳ್ಳಬೇಕಾಗುತ್ತದೆಂಬ ಭಯ ಅವರಿಗೆ ಇದ್ದಿತು. ಅಲ್ಲದೇ ತಮ್ಮ ಇಸ್ಲಾಮ್ ಸ್ವೀಕಾರದಿಂದಾಗಿ ಕುರೈಶರಿಂದ ಅವರಿಗೆ ದೊರಕುತ್ತಿದ್ದ ಆರ್ಥಿಕ ಲಾಭಕ್ಕೆ ಎಲ್ಲಿ ಸಂಚು ಒದಗುತ್ತದೋ ಎಂದು ಅವರು ಭಯಪಡುತ್ತಿದ್ದರು. ಕುರೈಶರೊಂದಿಗೆ ವೈರತ್ವ ಕಟ್ಟಿಕೊಳ್ಳಲು ಕುರೈಶರನ್ನು ಎದುರು ಹಾಕಿಕೊಳ್ಳಲು ಅವರು ತಯಾರಿರಲಿಲ್ಲ.

ಈಗ ಹುದೈಬಿಯಾ ಒಪ್ಪಂದದಿಂದ ಅವರ ಎಲ್ಲಾ ಶಂಕೆಗಳು ದೂರವಾದವು. ಹುದೈಬಿಯಾ ಒಪ್ಪಂದವು ಅರೇಬಿಯಾದ್ಯಾಂತ ಶಾಂತಿಯನ್ನು ನೆಲೆಸಿತ್ತು. ಈಗ ಇಸ್ಲಾಮ್ ಸ್ವೀಕಾರದಿಂದ ಇತರ ಬುಡಕಟ್ಟು ಜನಾಂಗಗಳ ವೈರತ್ವ ಕಟ್ಟಿಕೊಳ್ಳುವ ಭಯ ಜನರಿಗೆ ಇರಲಿಲ್ಲ. ಕುರೈಶರಿಂದ ಪ್ರತೀಕಾರದ ಭಯ ಈಗಿರಲಿಲ್ಲ. ಈ ಕಾರಣದಿಂದ ಜನರು ತಂಡೋಪ ತಂಡವಾಗಿ ಇಸ್ಲಾಮ್ ಸ್ವೀಕರಿಸಲಾರಂಭಿಸಿದರು.

ಇತರ ಯಾವುದೇ ಕಾರ್ಯಾಚರಣೆಯಲ್ಲಿ ದೊರಕದ ವಿಜಯವು ಮುಸ್ಲಿಮರಿಗೆ ಹುದೈಬಿಯಾ ಒಪ್ಪಂದದಿಂದ ದೊರಕಿತು. ಹುದೈಬಿಯಾ ಒಪ್ಪಂದದ ಎರಡು ವರ್ಷಗಳಲ್ಲಿ ಸಹಸ್ರಾರು ಜನರು ಇಸ್ಲಾಮ್ ಸ್ವೀಕರಿಸಿದರು. ಈಗ ಇಸ್ಲಾಮ್ ಹೊಸ ರಾಜಕೀಯ ಶಕ್ತಿಯಾಗಿ ಮೂಡಿ ಬಂದಿದ್ದರಿಂದ ಈ ಮೊದಲು ಮುಸ್ಲಿಮರೊಂದಿಗೆ ಕೈ ಜೋಡಿಸಬೇಕೇ? ಬೇಡವೇ? ಎಂದು ಮೀನಮೇಷ ಎಣಿಸುತ್ತಿದ್ದವರೂ ಈಗ ಇಸ್ಲಾಮ್ ಸ್ವೀಕರಿಸತೊಡಗಿದರು. ಹುದೈಬಿಯಾ ಒಪ್ಪಂದದ ಸಂದರ್ಭದಲ್ಲಿ ಪ್ರವಾದಿರ

ಜೊತೆಯಲ್ಲಿ 1400 ಸಹಾಬಿಗಳಿದ್ದರು. ಆದರೆ ಹುದೈಬಿಯಾ ಒಪ್ಪಂದದ ಕೇವಲ ಎರಡು ವರ್ಷಗಳ ನಂತರ ಮಕ್ಕಾದ ಮುತ್ತಿಗೆಯ ವೇಳೆಯಲ್ಲಿ ಪ್ರವಾದಿರೊಂದಿಗೆ ಹತ್ತು ಸಾವಿರ ಮುಸ್ಲಿಮ್ ಯೋಧರು ಜೊತೆಯಲ್ಲಿದ್ದರು!

ತಂಡೋಪ ತಂಡವಾಗಿ ಇಸ್ಲಾಮ್ ಸ್ವೀಕರಿಸುತ್ತಿದ್ದ ಜನರಿಗೆ ಇಸ್ಲಾಮಿ ಶಿಕ್ಷಣವನ್ನು ನೀಡುವ, ಅವರಿಗೆ ತರಬೇತಿ ನೀಡುವ ಅವಶ್ಯಕತೆ ಇತ್ತು. ಅನೇಕ ಪ್ರಭಾವೀ ಜನರೂ ಇಸ್ಲಾಮ್ ಸ್ವೀಕರಿಸ ತೊಡಗಿದರು. ಬಹಳಷ್ಟು ಜನರು ಇಸ್ಲಾಮ್ ಸ್ವೀಕರಿಸಿ, ಮದೀನಾದಲ್ಲಿಯೇ ನೆಲೆಸಲಾರಂಭಿಸಿದರು.

☆

# ಹುದೈಬಿಯಾದ ಪಾಠ !

ಹುದೈಬಿಯಾ ಒಪ್ಪಂದವು ಜನರಿಗೆ ಸೂಕ್ಷ್ಮ ಪರಿಸ್ಥಿತಿಗಳಲ್ಲಿ ಸಹನೆ ವಹಿಸುವ ಮತ್ತು ಕೇವಲ ಬಾಹ್ಯವಾಗಿ ತೋರುವ ಅಂಶಗಳಿಂದ ಪ್ರಭಾವಿತರಾಗದೇ, ದೂರದೃಷ್ಟಿತ್ವದಿಂದ ಕಾರ್ಯವನ್ನು ಮಾಡುವ ಪಾಠವನ್ನು ನೀಡಿತು.

ಮುಸ್ಲಿಮರ ಹಿತಾಸಕ್ತಿಗಳಿಗೆ ವಿರುದ್ಧವೆಂದು ತೋರುತ್ತಿದ್ದ ಹುದೈಬಿಯಾ ಒಪ್ಪಂದದಿಂದ ದೊರಕಲಿದ್ದ ಸದವಕಾಶಗಳನ್ನು ಎಲ್ಲಾರೂ ಗ್ರಹಿಸಲು ಸಾಧ್ಯವಿರಲಿಲ್ಲ. ದೂರದೃಷ್ಟಿತ್ವ ಹೊಂದಿದ್ದ ಜನರು ಇದನ್ನು ಗ್ರಹಿಸಿದರು. ರಾಜನೀತಿ ತಂತ್ರದಲ್ಲಿ ಹುದೈಬಿಯಾ ಒಪ್ಪಂದ ಹೊಸಪಾಠವನ್ನು ಕಲಿಸಿತು. ತಮ್ಮ ಅನುಯಾಯಿಗಳಲ್ಲಿ ಸಹನೆ, ತಾಳ್ಮೆ, ಬೆಳೆಸಲು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇದನ್ನು ಬಳಸಿಕೊಂಡರು.

ಹುದೈಬಿಯಾ ಒಪ್ಪಂದದ ಬಗ್ಗೆ ಅಬೂಬಕರ್ ಸಿದ್ದೀಕ್‌ರ ಅಭಿಪ್ರಾಯವನ್ನು ಇಬ್ನ್ ಕಸೀರ್ ದಾಖಲಿಸಿದ್ದಾರೆ. ಹುದೈಬಿಯಾ ಒಪ್ಪಂದವು ಇಸ್ಲಾಮಿನ ಅತ್ಯಂತ ಶ್ರೇಷ್ಠ ವಿಜಯವೆಂದು ಅಬೂಬಕರ್ ಸಿದ್ದೀಕ್ ನುಡಿದಿದ್ದರು. ಹುದೈಬಿಯಾ ಒಪ್ಪಂದದಲ್ಲಿ ಅಡಗಿದ್ದ ರಹಸ್ಯಗಳನ್ನು ಅರಿಯಲು ಮುಸ್ಲಿಮರು ವಿಫಲರಾಗಿದ್ದರು. ಜನರು ಸಾಮಾನ್ಯವಾಗಿ ತತ್‌ಕ್ಷಣದ ಯಶಸ್ಸನ್ನು ಬಯಸುತ್ತಾರೆ. ಯಶಸ್ಸು ಪಡೆಯಲು ಹಾದುಹೋಗಬೇಕಾಗಿರುವ ದೀರ್ಘಕಾಲಿನ ಹಂತಗಳನ್ನು ದಾಟಲು ಅವರು ತಯಾರಿರುವುದಿಲ್ಲ. ಆದರೆ ಅಲ್ಲಾಹ್ ಮುಸ್ಲಿಮರ ಯಶಸ್ಸಿಗಾಗಿ ತನ್ನದೇ ಯೋಜನೆಯನ್ನು ರೂಪಿಸಿದ್ದನು.

☆

# ಇಸ್ಲಾಮೀ ಸಂದೇಶ ಪ್ರಚಾರ

ಹುದೈಬಿಯಾ ಒಪ್ಪಂದದ ಬಳಿಕ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಸಂದೇಶ ಪ್ರಚಾರ ಕಾರ್ಯಕ್ಕೆ ಅನುಕೂಲ ವಾತಾವರಣವು ಒದಗಿಬಂತು. ಅವರು ರಾಜರುಗಳಿಗೆ ಮತ್ತು ಜನ ನಾಯಕರಿಗೆ ಇಸ್ಲಾಮಿಾ ಸಂದೇಶವನ್ನು ಪತ್ರದ ಮುಖಾಂತರ ಕಳುಹಿಸಿದರು.ಈ ಸಂದೇಶ ಪತ್ರಗಳ ಮೇಲೆ 'ಮುಹಮ್ಮದುರ್ರಸೂಲುಲ್ಲಾಹ್' (ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್) ಎಂಬ ಮೊಹರನ್ನು ಒತ್ತಿ ಪತ್ರಗಳನ್ನು ಕಳುಹಿಸಲಾಯಿತು.

ಈ ಸಂದೇಶ ಪತ್ರಗಳ ಪೈಕಿ ಆರು ಪತ್ರಗಳು ಅತ್ಯಂತ ಪ್ರಮುಖವಾಗಿವೆ. ಇವುಗಳನ್ನು ಇಥಿಯೋಪಿಯಾದ ರಾಜ ಅಶ್‌ಹಮ, ರೋಮ್ ಸಾಮ್ರಾಜ್ಯದ ದೊರೆ ಹರ್ಕಲ್ ಕೈಸರ್, ಇರಾನ್‌ನ ದೊರೆ ಖುಸ್ರೂ ಪರ್ವೇಝ್, ಈಜಿಪ್ತ್‌ನ ರಾಜ್ಯಪಾಲ 'ಮಕೂಕಸ್', ಯಮಾಮದ ಅಧಿಪತಿ ಹೌದಾ ಬಿನ್ ಅಲಿ, ಗಸ್ಸಾನ್‌ನ ದೊರೆ ಹಾರಿಸ್ ಬಿನ್ ಅಬೀ ಶಮರ್‌ರಿಗೆ ರವಾನಿಸಲಾಯಿತು.

ಈ ಪತ್ರಗಳ ವಿಷಯವು ಬಹುತೇಕ ಒಂದೇ ಆಗಿತ್ತು. ಪತ್ರದಲ್ಲಿ ಮುಹಮ್ಮದ್ ತಾವು ಅಲ್ಲಾಹನ ಪ್ರವಾದಿಯಾಗಿರುವುದಾಗಿ ತಿಳಿಸುತ್ತಾ, ಅಲ್ಲಾಹನು ಏಕೈಕನಾಗಿರುವುದಾಗಿಯೂ, ಆತನ ಧರ್ಮ ಇಸ್ಲಾಮ್ ಸ್ವೀಕರಿಸಲು ಆಹ್ವಾನ ನೀಡಿದ್ದರು. ಅವರು ನಿರಾಕರಿಸಿದರೆ, ತಮ್ಮ ಜನರನ್ನು ಅಜ್ಞಾನದಲ್ಲಿಡಲು ಅವರೇ ಹೊಣೆಗಾರರೆಂದು ಅವರನ್ನು ಎಚ್ಚರಿಸಲಾಯಿತು.

ರಾಜರು ಮತ್ತು ಜನಪ್ರತಿನಿಧಿಗಳು ಪ್ರವಾದಿರ ಈ ಪತ್ರಗಳಿಗೆ ವಿವಿಧ ರೂಪದಲ್ಲಿ ಪ್ರತಿಕ್ರಿಯಿಸಿದರು. ಇಥಿಯೋಪಿಯಾದ ರಾಜ ನಜ್ಜಾಷಿಯು ಪ್ರವಾದಿರ ಪತ್ರವನ್ನು

ಮುತ್ತಿಕ್ಕಿ, ಕಣ್ಣಿಗೆ ತಾಗಿಸಿದರು. ಸಂತೋಷದಿಂದ ಇಸ್ಲಾಮ್ ಸ್ವೀಕರಿಸಿದರು. ರೋಮ್ ಸಾಮ್ರಾಜ್ಯದ ದೊರೆ ಹರ್ಕಲ್ ಕೈಸರ್ ಪ್ರವಾದಿರ ಪತ್ರವನ್ನು ಓದಿ ಮುಹಮ್ಮದ್‌ರ ಪ್ರವಾದಿತ್ವದ ಬಗ್ಗೆ ನಂಬಿಕೆ ಬಂದಿತಾದರೂ, ಕ್ರೈಸ್ತ ಪಾದ್ರಿಗಳ ಭಯದಿಂದ ಇಸ್ಲಾಮ್ ಸ್ವೀಕರಿಸಲಿಲ್ಲ. ಇರಾನ್‌ನ ದೊರೆ ಖುಸ್ರೊ ಪರ್ವೇಝ್ ಪ್ರವಾದಿರ ಪತ್ರವನ್ನು ನೋಡಿ ಕೆರಳಿ ಕೆಂಡವಾದನು. ಆತನು ದರ್ಪದಿಂದ ಪತ್ರವನ್ನು ಹರಿದು ಹಾಕಿದನು. ಈಜಿಪ್ಟ್‌ನ ರಾಜ್ಯಪಾಲ **'ಮಕೂಕಸ್'** ಪ್ರವಾದಿರ ಪತ್ರಕ್ಕೆ ತನ್ನ ಮೆಚ್ಚುಗೆ ವ್ಯಕ್ತಪಡಿಸುತ್ತಾ ಪ್ರತ್ಯುತ್ತರ ಬರೆದು, ನೂರು ದೀನಾರ್, ಬಟ್ಟೆ-ಬರೆಗಳು ಮತ್ತು ಇತರ ಉಡುಗೊರೆಗಳನ್ನು ಕಳುಹಿಸಿಕೊಟ್ಟನು. ಯಮಾಮದ ಅಧಿಪತಿ ಹೌದಾ ಬಿನ್ ಅಲಿ ಪ್ರವಾದಿರ ಪತ್ರ ಓದಿ ಇಸ್ಲಾಮ್ ಸ್ವೀಕರಿಸಲಿಲ್ಲ. ಗಸ್ಸಾನ್ ದೊರೆ ಹಾರಿಸ್ ಬಿನ್ ಅಬೀ ಶಮರ್, ಪ್ರವಾದಿರ ಪತ್ರವನ್ನೋದಿ ಎಸೆದುಬಿಟ್ಟನು.

ಹುದೈಬಿಯಾ ಒಪ್ಪಂದವು ನೈಜವಾಗಿಯೂ ಒಂದು ಸ್ಪಷ್ಟ ವಿಜಯವಾಗಿತ್ತು. ಜಗತ್ತಿಗೆ ಇಸ್ಲಾಮ್ ಬಗ್ಗೆ ತಿಳಿಯಲು, ಅಧ್ಯಯನ ನಡೆಸಲು, ಇಸ್ಲಾಮ್ ಸ್ವೀಕರಿಸಲು ಒಂದು ದ್ವಾರವಾಗಿತ್ತು. ಇಲ್ಲಿಯವರೆಗೆ ನಿರಂತರ ಯುದ್ಧಗಳಿಂದ ಜನರ ಎಲ್ಲಾ ಶಕ್ತಿ, ಸಾಮರ್ಥ್ಯಗಳು ವ್ಯರ್ಥವಾಗಿದ್ದವು. ಈಗ ಜನರಿಗೆ ಇಸ್ಲಾಮಿನ ಸಂದೇಶದ ಕಡೆಗೆ ಗಮನ ಹರಿಸಲು ಸದವಕಾಶ ದೊರೆಯಿತು.

ಪ್ರವಾದಿ ಇಸ್ಲಾಮಿನ ಸಂದೇಶವನ್ನು ಎಲ್ಲಾ ಕಡೆಗಳಲ್ಲೂ ನೀಡಲಾರಂಭಿಸಿದರು. ಏಕೈಕ ದೇವನ ಆರಾಧನೆಯ ಸಂದೇಶ, ಜನರನ್ನು ಲೌಕಿಕತೆಯಿಂದ ಅಧ್ಯಾತ್ಮಿಕತೆಗೆ, ನೈತಿಕ ಮೌಲ್ಯಗಳ ಕಡೆಗೆ ಆಹ್ವಾನವಾಗಿತ್ತು. ಈಗ ಉಂಟಾಗಿದ್ದ ಶಾಂತಿಯ ಕಾರಣದಿಂದಾಗಿ ಪ್ರಥಮ ಬಾರಿ ವಿವಿಧ ಗೋತ್ರಗಳಿಗೆ ಏಕಾಗ್ರತೆಯಿಂದ ಇಸ್ಲಾಮಿನ ಸಂದೇಶದ ಕಡೆಗೆ ಗಮನ ಹರಿಸಲು ಸಾಧ್ಯವಾಯಿತು. ಅನೇಕ ಜನರು ಇಸ್ಲಾಮನ್ನು ಸ್ವೀಕರಿಸಿದರು. ಇತರರು ಇಸ್ಲಾಮನ್ನು ಸ್ವೀಕರಿಸದಿದ್ದರೂ, ಇಸ್ಲಾಮನ್ನು ಗೌರವಿಸಲಾರಂಭಿಸಿದರು. ಇನ್ನೂ ಕೆಲವರು ಇಸ್ಲಾಮಿನ ಸಂದೇಶವನ್ನು ಅರಿತುಕೊಂಡರು. ಕುರುಡು ದ್ವೇಷದ ಕಾರಣ, ಇಸ್ಲಾಮಿನೊಂದಿಗೆ ಸಂಘರ್ಷವನ್ನು ಮುಂದುವರೆಸಿದರು.

# ಪ್ರವಾದಿ ಮುಹಮ್ಮದ್‌ರ ಕಾಲದಲ್ಲಿ ಭಾರತದ ಮೇಲೆ ಇಸ್ಲಾಮಿನ ಪ್ರಭಾವ

## ಬರ್ಝಾನ್

ಮೂಲ ಭಾರತೀಯನಾಗಿದ್ದ ಬರ್ಝಾನ್, ಬಲೂಚಿಸ್ತಾನ ತೀರದಲ್ಲಿ ರಾಜ್ಯವನ್ನಾಳುತ್ತಿದ್ದನು. ಕ್ರಿ.ಶ. 628ರಲ್ಲಿ ಪರ್ಷಿಯಾದ ದೊರೆಯು ಹತ್ಯೆಯಾದ ಸುದ್ದಿ ಕೇಳಿ ಬರ್ಝಾನ್ ಇಸ್ಲಾಮ್ ಸ್ವೀಕರಿಸಿದನು. ಆತನ ಹೆಚ್ಚಿನ ಸೈನಿಕರು ಭಾರತೀಯರಾಗಿದ್ದು, ಅವರೂ ಇಸ್ಲಾಮ್ ಸ್ವೀಕರಿಸಿರುವರೆಂಬ ವರದಿಗಳಿವೆ.

## ಕನೌಜ್‌ನ ದೊರೆ ಸರ್ಬತಿಕ್

ಕನೌಜ್‌ನ ದೊರೆ ಸರ್ಬತಿಕ್ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರನ್ನು ಮೂರು ಸಲ ಭೇಟಿಯಾಗಿದ್ದರೆಂದು ವರದಿಗಳಿವೆ–ಮಕ್ಕಾದಲ್ಲಿ ಎರಡು ಸಲ ಮತ್ತು ಮದೀನಾದಲ್ಲಿ ಒಂದು ಸಲ. ಇವರೂ ಇಸ್ಲಾಮ್ ಸ್ವೀಕರಿಸಿದರು.

## ಬಾಬಾ ರತನ್

ಇವರು ಪಂಜಾಬ್ ಪ್ರಾಂತ್ಯದ ಭತಿಂದ ಪ್ರದೇಶದ ಸನ್ಯಾಸಿಯಾಗಿದ್ದರು. ಇವರೂ ಸಹ ಪ್ರವಾದಿರನ್ನು ಭೇಟಿ ಮಾಡಿದ್ದರೆಂಬ ವದಂತಿಗಳಿದ್ದು, ಪ್ರವಾದಿರ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದರು.

## ಮಲಬಾರ್ ಪ್ರಾಂತ್ಯದ ದೊರೆ ಸಮ್ರಿ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಚಂದ್ರನನ್ನು ಎರಡು ಹೋಳುಗಳನ್ನಾಗಿಸುವ ಘಟನೆಯನ್ನು ಇವರು ಕಂಡಿದ್ದರು. ಈ ಘಟನೆಯಿಂದ ಪ್ರಭಾವಿತರಾಗಿ ಪ್ರವಾದಿರನ್ನು ಭೇಟಿಯಾಗಿ ಇಸ್ಲಾಮ್ ಸ್ವೀಕರಿಸಿದ್ದರು. ಅವರು ನೀಡಿದ್ದ ನೆರವಿನ ಕಾರಣದಿಂದಾಗಿ ಭಾರತದ ಪಶ್ಚಿಮ ದಂಡೆಯಲ್ಲಿ ಸಹಸ್ರಾರು ಜನರು ಇಸ್ಲಾಮ್ ಸ್ವೀಕರಿಸಲು ಸಾಧ್ಯವಾಯಿತು.

ಅಲ್ವಾರನ ದೊರೆಯೂ ಪ್ರವಾದಿರ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದರೆಂದು ಹೇಳಲಾಗುತ್ತದೆ.

This document was created with the Win2PDF “Print to PDF” printer available at

https://www.win2pdf.com

This version of Win2PDF 10 is for evaluation and non-commercial use only.
Visit https://www.win2pdf.com/trial/ for a 30 day trial license.

This page will not be added after purchasing Win2PDF.

https://www.win2pdf.com/purchase/

# 15

# ಪ್ರವಾದಿ ಮುಹಮ್ಮದ್

(ಅವರ ಮೇಲೆ ಶಾಂತಿ ಇರಲಿ)

# ಮುಸ್ಲಿಮೇತರರೊಂದಿಗೆ

ಇಸ್ಲಾಮ್ ಸಮಾಜದಲ್ಲಿ ಎಲ್ಲಾ ಜನರೊಂದಿಗೆ ಸಹಕಾರ, ಸದ್ಭಾವನೆ, ಸೌಹಾರ್ದವನ್ನು ಬಯಸುತ್ತದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮುಸ್ಲಿಮೇತರರೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಹಾಗೂ ರಾಜಕೀಯ ಸಂಬಂಧಗಳನ್ನು ಹೊಂದಿದ್ದರು. ರಾಷ್ಟ್ರಕ್ಕೆ, ಸಮುದಾಯಕ್ಕೆ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ ಮುಸ್ಲಿಮೇತರರಿಗೆ ಸಹಕಾರವನ್ನು ನೀಡುತ್ತಿದ್ದರು. ಮುಸ್ಲಿಮರು ಮತ್ತು ಮುಸ್ಲಿಮೇತರರೊಂದಿಗೆ ಪ್ರವಾದಿ ಅನುಕಂಪವನ್ನು ತೋರುತ್ತಿದ್ದರು. ಈ ವಿಷಯಕ್ಕೆ ಸಂಬಂಧಿಸಿದ ಅಂಶಗಳ ಬಗ್ಗೆ ಇಸ್ಲಾಮಿ ನಿಲುವನ್ನು ಪರಿಚಯಿಸಲು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

## ಮಕ್ಕಾದ ಮುಸ್ಲಿಮೇತರರೊಂದಿಗಿನ ಸಂಬಂಧ

**ವ್ಯಾಪಾರದಲ್ಲಿ ಮುಸ್ಲಿಮೇತರರ ಪಾಲುದಾರಿಕೆ:** ಪ್ರಾಯಕ್ಕೆ ಬಂದಂದಿನಿಂದ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವ್ಯಾಪಾರದಲ್ಲಿ ತೊಡಗಿದ್ದರು. ಸರಕುಗಳನ್ನು ಸಿರಿಯಾ ಮತ್ತು ಯಮನ್‌ಗೆ ಒಯ್ದು ಮಾರಾಟ ಮಾಡಿ, ಅದರಲ್ಲಿ ಲಾಭಾಂಶವನ್ನು ಪಡೆಯುತ್ತಿದ್ದರು. ಖದೀಜಾರೊಂದಿಗೆ ವಿವಾಹದ ನಂತರ ಅವರೊಂದಿಗೆ ವ್ಯಾಪಾರದಲ್ಲಿ ಜಂಟಿ ಹೂಡಿಕೆಯನ್ನು ಹೊಂದಿದ್ದರು. ಪ್ರವಾದಿತ್ವದ ಹೊಣೆಗಾರಿಕೆಯನ್ನು ವಹಿಸಿದ

ಬಳಿಕ ಅವರಿಗೆ ವ್ಯಾಪಾರದಲ್ಲಿ ತೊಡಗಲು ಬಿಡುವು ದೊರೆಯುತ್ತಿರಲಿಲ್ಲ. ಆದುದರಿಂದ ಅವರು ತಮ್ಮ ಸರಕುಗಳನ್ನು ಕುರೈಶ್ ಮತ್ತು ಕುರೈಶ್‌ಯೇತರ ವ್ಯಾಪಾರಿಗಳಿಗೆ, ಕಮೀಷನ್ ಆಧಾರದ ಮೇಲೆ ನೀಡಿ, ಅವರ ಮುಖಾಂತರ ವ್ಯಾಪಾರ ನಡೆಸುತ್ತಿದ್ದರು. ಈ ರೀತಿ ಅವರ ಆರ್ಥಿಕ ಪರಿಸ್ಥಿತಿಯು ಸುಸ್ಥಿತಿಯಲ್ಲಿತ್ತು. ಇಸ್ಲಾಮನ್ನು ದ್ವೇಷಿಸುತ್ತಿದ್ದ ಅಬೂ ಸುಫ್‌ಯಾನ್‌ರ ಮುಖಾಂತರ ತಮ್ಮ ಸರಕುಗಳನ್ನು ಸಿರಿಯಾ ದೇಶಕ್ಕೆ ಕಳುಹಿಸಿ ಬಹಳಷ್ಟು ಲಾಭಾಂಶವನ್ನು ಪಡೆದಿದ್ದರು. ಅಬೂ ಸುಫ್‌ಯಾನ್ ಇಸ್ಲಾಮ್ ಸ್ವೀಕರಿಸದಿದ್ದರೂ, ಅವರ ಸತ್ಯತೆಯಲ್ಲಿ ಪ್ರವಾದಿರಿಗೆ ಸಂಪೂರ್ಣ ನಂಬಿಕೆ ಇತ್ತು. ಅಬುಸುಫಿಯಾನ್ ಸಹ ಪ್ರವಾದಿರ ಇಸ್ಲಾಮೀ ಚಟುವಟಿಕೆಗಳ ಹೊರತಾಗಿಯೂ ಅವರೊಂದಿಗೆ ವ್ಯಾಪಾರ ಸಂಬಂಧಗಳನ್ನು ಕಡಿದುಕೊಳ್ಳಲಿಲ್ಲ.

ಇಬ್ನ್ ಕಸೀರ್ ಒಂದು ಘಟನೆಯನ್ನು ವರದಿ ಮಾಡಿದ್ದಾರೆ. ಒಮ್ಮೆ ಅಬುಸುಫ್‌ಯಾನ್ ವ್ಯಾಪಾರ ನಿಮಿತ್ತ ಸಿರಿಯಾ ಮತ್ತು ಯಮನ್ ದೇಶಗಳಿಗೆ ತೆರಳಿದರು. ಐದು ತಿಂಗಳುಗಳ ಬಳಿಕ ಅವರು ಮಕ್ಕಾ ಹಿಂತೆರಳಿದರು. ಜನರು ಅವರ ಬಳಿಗೆ ಬಂದು ತಮ್ಮ ತಮ್ಮ ಸರಕುಗಳ ಬಗ್ಗೆ ವಿಚಾರಿಸತೊಡಗಿದರು. ಮುಹಮ್ಮದ್ ಸಹ ಅಬೂ ಸುಫ್‌ಯಾನ್‌ರ ಮನೆಗೆ ತೆರಳಿ ಅವರ ಯೋಗಕ್ಷೇಮವನ್ನು ವಿಚಾರಿಸಿದರು. ಪ್ರಯಾಣದ ಬಗ್ಗೆ ವಿಚಾರಿಸಿದರು. ಆದರೆ ಒಮ್ಮೆಯೂ ಮಾತುಕತೆಯ ವೇಳೆ ತಮ್ಮ ಸರಕುಗಳಿಗೆ ಬಂದ ಲಾಭಾಂಶದ ಬಗ್ಗೆ ವಿಚಾರಿಸಲಿಲ್ಲ. ಅವರು ಹಿಂತೆರಳಿದ ನಂತರ ಅಬುಸುಫ್‌ಯಾನ್, ಪತ್ನಿ ಹಿಂದಗೆ ಉದ್ದೇಶಿಸಿ ಹೇಳಿದರು.

"ಈ ಮನುಷ್ಯನ ಬಗ್ಗೆ ನನಗೆ ವಿಸ್ಮಯವಾಗುತ್ತದೆ. ನನಗೆ ವ್ಯಾಪಾರಕ್ಕಾಗಿ ಸರಕುಗಳನ್ನು ನೀಡಿದ್ದ ಪ್ರತಿಯೋರ್ವ ಕುರೈಶನು ತನ್ನ ಸರಕುಗಳಿಗೆ ಬಂದಿರುವ ಲಾಭದ ಬಗ್ಗೆ ನನ್ನೊಂದಿಗೆ ವಿಚಾರಿಸಿದ್ದಾರೆ. ಅದರೆ ಈ ವ್ಯಕ್ತಿಯು ನನ್ನ ಮನೆಗೆ ಬಂದರೂ, ತನ್ನ ಸರಕುಗಳ ಬಗ್ಗೆ ಚಕಾರವೆತ್ತಲಿಲ್ಲ."

ಸ್ವಲ್ಪ ಸಮಯದ ನಂತರ ಅಬು ಸುಫ್‌ಯಾನ್ ಕಬಾದ ಬಳಿ ತೆರಳಿ ಮುಹಮ್ಮದ್‌ರನ್ನು ಭೇಟಿ ಮಾಡಿ, ಅವರ ಸರಕುಗಳಿಗೆ ಬಂದ ಲಾಭದ ಬಗ್ಗೆ ಪ್ರಸ್ತಾಪಿಸಿ, ಬಂದು ಹಣವನ್ನು ತೆಗೆದುಕೊಂಡು ಹೋಗಲು ತಿಳಿಸಿದರು. ಇದರೊಂದಿಗೆ, ತಮಗೆ ನೀಡಬೇಕಾಗಿದ್ದ ಕಮಿಷನ್ ಮೊತ್ತವನ್ನು ಅವರು ನೀಡಬೇಕಾಗಿಲ್ಲವೆಂದೂ ತಿಳಿಸಿದರು. ಆದರೆ ಅಬೂ ಸುಫ್‌ಯಾನ್‌ರ ಪ್ರಸ್ತಾವನೆಯನ್ನು ಮುಹಮ್ಮದ್ ಒಪ್ಪಲಿಲ್ಲ. ಅಬೂ ಸುಫ್‌ಯಾನ್‌ರ ಕಮಿಷನ್ ಹಣವನ್ನು ನೀಡಿದ ಬಳಿಕವಷ್ಟೇ ಮುಹಮ್ಮದ್ ತಮ್ಮ ಲಾಭಾಂಶವನ್ನು ಅಬೂಸುಫ್‌ಯಾನ್‌ರಿಂದ ಪಡೆದರು! ಅಬೂಸುಫ್‌ಯಾನ್ ವ್ಯಾಪಾರದಲ್ಲಿ ಬಹಳ ಪ್ರಾಮಾಣಿಕರಾಗಿರುವರು ಎಂದು ಪ್ರವಾದಿ ಜನರಿಗೆ ಹೇಳುತ್ತಿದ್ದರು.

## ವಾಣಿಜ್ಯ ಸಂಬಂಧಗಳು

ಸುಭದ್ರ ಆರ್ಥಿಕತೆ ಸ್ವಸ್ಥ ಸಮಾಜದ ಬುನಾದಿಯಾಗಿರುತ್ತದೆ. ಸಂಪತ್ತು ನಾಡಿಗಳಲ್ಲಿ ಹರಿಯುವ ರಕ್ತದಂತೆ. ಜನರು ಆರ್ಥಿಕವಾಗಿ ಬಲವಾಗಿರದಿದ್ದರೆ ಇತರರನ್ನು ಆಶ್ರಯಿಸಬೇಕಾಗುತ್ತದೆ ಹಾಗೂ ಜೀವನದಲ್ಲಿ ಕಷ್ಟಗಳನ್ನು ಎದುರಿಸಬೇಕಾಗುತ್ತದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮತ್ತು ಅವರ ಸಂಗಾತಿಗಳಿಗೆ ಸುಭದ್ರ ಆರ್ಥಿಕತೆಯ ಪ್ರಾಮುಖ್ಯದ ಅರಿವಿತ್ತು. ಈ ಕಾರಣದಿಂದಾಗಿಯೇ ಅವರು ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯರೂಪಕ್ಕೆ ತಂದಿದ್ದರು.

ಅಬೂಸುಫ್‌ಯಾನ್‌ರಲ್ಲದೇ, ಪ್ರವಾದಿ ಇತರ ಕುರೈಶ್ ಮತ್ತು ಅರಬ್ ಬುಡಕಟ್ಟು ನಾಯಕರೊಂದಿಗೆ ವಾಣಿಜ್ಯ ಸಂಬಂಧವನ್ನು ಹೊಂದಿದ್ದರು. ಮುಸ್ಲಿಮೇತರ ವ್ಯಾಪಾರ ಭಾಗಿದಾರರಲ್ಲಿ ಹಕೀಮ್, ಅಬ್ದುಲ್ಲಾ (ಅಬಿಹಂಸರ ಪುತ್ರ), ಅಲ್‌ತೈಮಿ, ಅಲ್ ಸಾಯಿಬ್, ಕೈಸ್ ಮೊದಲಾದವರು ಪ್ರಮುಖ ರಾಗಿದ್ದರು. ಅಲ್ ಬಗ್ದಾದಿ ಮತ್ತು ಇತರ ಲೇಖಕರು ಪ್ರವಾದಿರ ವಾಣಿಜ್ಯ ಸಂಬಂಧಗಳ ಬಗ್ಗೆ ವಿಸ್ತೃತವಾಗಿ ಬರೆದಿದ್ದಾರೆ. 58 ಮುಸ್ಲಿಮ್ ಮತ್ತು ಮುಸ್ಲಿಮೇತರರೊಂದಿಗೆ ಪ್ರವಾದಿ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರೆಂದು ಅಲ್ ಬಗ್ದಾದಿ ಬರೆದಿದ್ದಾರೆ.

ಸಹಾಬಿಗಳಲ್ಲಿ ಅಬ್ದುಲ್ ರೆಹ್ಮಾನ್ ಇಬ್ನ್ ಔಫ್ ಮುಸ್ಲಿಮೇತರರೊಂದಿಗೆ ವ್ಯಾಪಾರ ಪಾಲುದಾರಿಕೆಯನ್ನು ಹೊಂದಿದ್ದರು. ಮಕ್ಕಾದ ದೊಡ್ಡ ವ್ಯಾಪಾರಿ ಉಮಯ್ಯ ಇಬ್ನ್ ಖಲಫ್ ಅವರ ಆಪ್ತ ಸ್ನೇಹಿತ ಮತ್ತು ಪಾಲುದಾರರಾಗಿದ್ದರು. ಅವರು ಇಸ್ಲಾಮಿನ ವೈರಿಯಾಗಿದ್ದರು. ಕುರೈಶ್ ನಾಯಕರಾಗಿದ್ದ ಉತ್ಬಾರ ಪುತ್ರ ವಲೀದ್ ಅಬ್ಬಾಸ್‌ರ ಸ್ನೇಹಿತ ಮತ್ತು ವ್ಯಾಪಾರದಲ್ಲಿ ಪಾಲುದಾರರಾಗಿದ್ದರು. ಅಬ್ಬಾಸ್ ಮತ್ತು ಅಬೂ ಸುಫ್‌ಯಾನ್ ಒಳ್ಳೆಯ ವ್ಯಾಪಾರಿ ಸಂಬಂಧವನ್ನು ಹೊಂದಿದ್ದರು. ಸಾವಿನವರೆಗೂ ಅವರು ಈ ಸಂಬಂಧವನ್ನು ಮುಂದುವರೆಸಿದ್ದರು. ಧಾರ್ಮಿಕ ಭಿನ್ನಾಭಿಪ್ರಾಯಗಳು ಅವರ ಸ್ನೇಹದಲ್ಲಿ ಅಡೆತಡೆಗಳನ್ನು ಒಡ್ಡಿರಲಿಲ್ಲ.

## ವೈವಾಹಿಕ ಸಂಬಂಧಗಳು

ಅಬುಲ್ ಅಲ್ ಆಸ್ ಖದೀಜಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಸೋದರಳಿಯರಾಗಿದ್ದರು. ಇವರ ವಿವಾಹ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪುತ್ರಿ ಝೈನಬ್‌ರೊಂದಿಗೆ ಜರುಗಿತ್ತು. ಇಬ್ನ್ ಹಿಶಾಮ್‌ರ ಪ್ರಕಾರ ಅಜ್ಞಾನದ ಕಾಲದಲ್ಲಿ ಖದೀಜಾ ಈ ಸಂಬಂಧವನ್ನು ನಿರ್ಧರಿಸಿದ್ದರು ಮತ್ತು ಪ್ರವಾದಿ

ಈ ಸಂಬಂಧವನ್ನು ಒಪ್ಪಿದ್ದರು. ಈ ವಿವಾಹ ಇಸ್ಲಾಮಿನ ಪೂರ್ವದಲ್ಲಿ ನಡೆದಿತ್ತು. ಆಗಿನ್ನು ಮುಸ್ಲಿಮರೇತರರೊಂದಿಗೆ ವಿವಾಹ ನಿಷೇಧದ ಕುರ್‌ಆನಿನ ಸೂಕ್ತ ಅವತೀರ್ಣಗೊಂಡಿರಲಿಲ್ಲ.

ಇಬ್ನ್ ಸಅದ್‌ರ ಪ್ರಕಾರ ಆಯಿಷಾ ಮಕ್ಕಾದ ಮುಖಂಡ ಮುಅತಿಮ್‌ರ ಪುತ್ರ ಝುಬೈರ್‌ರನ್ನು ವಿವಾಹವಾಗಬೇಕಿತ್ತು. ಅಬೂತಾಲಿಬ್‌ರ ನಿಧನದ ನಂತರ ಮುಅತಿಮ್ ಮುಹಮ್ಮದ್‌ರಿಗೆ ರಕ್ಷಣೆಯನ್ನು ನೀಡಿದ್ದರು. ಆದರೆ ನಂತರ, ಮುಅತಿಮ್‌ರ ಕುಟುಂಬವು ಆಯಿಷಾ ವಿವಾಹದ ನಂತರ ಎಲ್ಲಿ ತಮ್ಮ ಕುಟುಂಬದಲ್ಲಿ ಇಸ್ಲಾಮಿನ ಪ್ರಚಾರವನ್ನು ಮಾಡುವರೋ ಎಂಬ ಭಯದ ಕಾರಣದಿಂದಾಗಿ ಆಯಿಷಾರ ವಿವಾಹಕ್ಕೆ ತಡೆಯೊಡ್ಡಿದರು. ಈ ಘಟನೆಯೂ ಸಹ ಮುಸ್ಲಿಮ್ ಮತ್ತು ಮುಸ್ಲಿಮೇತರರ ನಡುವಿನ ವೈವಾಹಿಕ ಸಂಬಂಧಗಳ ಕಡೆಗೆ ಬೊಟ್ಟು ಮಾಡುತ್ತದೆ.

## ಮಕ್ಕಾದಲ್ಲಿ ಬಹು ಸಂಖ್ಯಾತ ಕುರೈಶ್ ಮತ್ತು ಅಲ್ಪ ಸಂಖ್ಯಾತ ಮುಸ್ಲಿಮರ ನಡುವೆ ಸಮ್ಮಿಶ್ರ ಸರಕಾರ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಆಗಮನದ ಕಾಲದಲ್ಲಿ ಮಕ್ಕಾದಲ್ಲಿ ಕುರೈಶ್ ಮುಖಂಡರು 12 ಪ್ರಮುಖ ಸಾಮಾಜಿಕ ಮತ್ತು ರಾಜಕೀಯ ಸ್ಥಾನಗಳನ್ನು ಹೊಂದಿದ್ದರು. ಈ ಅಧಿಕಾರವು ವಂಶಪಾರಂಪರ್ಯವಾಗಿ ನಡೆದುಬಂದಿತ್ತು. ನಂತರ ಇವರ ಪೈಕಿ ಕೆಲವರು ಇಸ್ಲಾಮ್ ಸ್ವೀಕರಿಸಿದರು. ಉದಾಹರಣೆಗೆ ಇಸ್ಲಾಮಿನ ಆರಂಭ ಕಾಲದಲ್ಲಿ ಅಬೂಬಕರ್ ಸಿದ್ದೀಕ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಉಮರ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಅಬ್ಬಾಸ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಇಸ್ಲಾಮ್ ಸ್ವೀಕರಿಸಿದರು. ಸ್ವಲ್ಪ ಕಾಲದ ನಂತರ ಉಸ್ಮಾನ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಮತ್ತು ಖಾಲಿದ್ ಇಬ್ನ್ ವಲೀದ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಇಸ್ಲಾಮ್ ಸ್ವೀಕರಿಸಿದರು. ಆದರೆ ಇವರು ಇಸ್ಲಾಮ್ ಸ್ವೀಕಾರದ ನಂತರವೂ ತಾವು ಹೊಂದಿದ್ದ ಸ್ಥಾನಗಳನ್ನು ಬಿಟ್ಟು ಕೊಡಲಿಲ್ಲ. ಕುರೈಶ್ ಮುಖಂಡರೂ ಸಹ ಇಸ್ಲಾಮ್ ಸ್ವೀಕಾರದ ನಂತರ ಮುಸ್ಲಿಮರಿಗೆ ತಮ್ಮ ಸ್ಥಾನಗಳನ್ನು ತ್ಯಜಿಸುವಂತೆ ಒತ್ತಾಯಿಸಲಿಲ್ಲ. ಮದೀನಾ ಹಿಜ್ರತ್ ಮಾಡುವವರೆಗೆ ಇವರು ತಮ್ಮ ತಮ್ಮ ಅಧಿಕಾರಗಳಲ್ಲಿ ಮುಂದುವರೆದಿದ್ದರು. ಈ ರೀತಿ ಮಕ್ಕಾದಲ್ಲಿ ಕುರೈಶ್ ಬಹುಸಂಖ್ಯಾತ ಮತ್ತು ಮುಸ್ಲಿಮ್ ಅಲ್ಪಸಂಖ್ಯಾತ ಸಮ್ಮಿಶ್ರ ಸರ್ಕಾರ ಜಾರಿಯಲ್ಲಿತ್ತು.

ಮುಹಮ್ಮದ್ ಸದಾ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ

ವ್ಯವಹಾರಗಳಲ್ಲಿ ಸ್ನೇಹಪರ, ಸೌಹಾರ್ದಯುತ, ಸಹಕಾರದ ಸಂಬಂಧವನ್ನು ಮುಸ್ಲಿಮೇತರರೊಂದಿಗೆ ಹೊಂದ ಬಯಸುತ್ತಿದ್ದರು. ಕುರೈಶರೂ ಸಹ ತಮ್ಮ ಹಿತಾಸಕ್ತಿಗಳಿಗಾಗಿ ಇದೇ ಧೋರಣೆಯನ್ನು ಹೊಂದಿದ್ದರು.

## ಸಾಮಾಜಿಕ ಸಂಬಂಧಗಳು

## ಪ್ರವಾದಿವರ್ಯರ ಔತಣ ಕೂಟಗಳು

ಇಸ್ಲಾಮಿನ ಸಾರ್ವಜನಿಕ ಪ್ರಚಾರದ ಆದೇಶ ದೊರೆತ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕುರೈಶ್‌ರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಲು ಹಾಗೂ ಅವರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸುವ ಸಲುವಾಗಿ ಔತಣಕೂಟಗಳನ್ನು ಏರ್ಪಡಿಸಿದ್ದರು. ಇದು ಅರಬ್ ಸಂಪ್ರದಾಯವನ್ನು ತೋರ್ಪಡಿಸುತ್ತದೆ. ಇಸ್ಲಾಮ್ ಹರಡಿದಂತೆ ಈ ಸಂಪ್ರದಾಯವು ಮತ್ತಷ್ಟು ಬಲಪಟ್ಟಿತು. ಅಬೂಬಕರ್ ಉಸ್ಮಾನ್, ಝುಬೈರ್, ತಲ್ಹಾ, ಅಬ್ದುಲ್‌ರೆಹ್ಮಾನ್‌ರನ್ನು ಅವರ ಇಸ್ಲಾಮ್ ಸ್ವೀಕಾರದ ಮೊದಲು ಔತಣಕ್ಕೆ ಆಹ್ವಾನಿಸಿದ್ದರು.

## ಗುಲಾಮರ ವಿಮೋಚನೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅನೇಕ ಅಸಹಾಯಕ ಮುಸ್ಲಿಮೇತರ ಗುಲಾಮರ ವಿಮೋಚನೆಗಾಗಿ ಕ್ರಮ ಕೈಗೊಂಡರು. ಪ್ರವಾದಿ ಮುಹಮ್ಮದ್‌ರ ಆದೇಶ ಮತ್ತು ಪ್ರೋತ್ಸಾಹದ ಮೇರೆಗೆ ಅನೇಕ ಸಹಾಬಿಗಳು ತಮ್ಮ ಸಂಪತ್ತನ್ನು ವ್ಯಯಿಸಿ ಗುಲಾಮರನ್ನು ಖರೀದಿಸಿ, ಅವರನ್ನು ಬಿಡುಗಡೆಗೊಳಿಸಿದರು. ಈ ರೀತಿ ಅನೇಕ ಜನರಿಗೆ ಶೋಷಣೆಯಿಂದ ಮುಕ್ತಿ ದೊರೆತು ಸ್ವತಂತ್ರ ಬಾಳುವೆ ಮಾಡುವ ಅವಕಾಶ ದೊರಕಿತು.

ಖದೀಜಾ ತಮ್ಮ ಇಡಿಯ ಸಂಪತ್ತನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿದರು. ಅಬೂಬಕರ್‌ರ ಬಳಿ 40,000 ಕ್ಕಿಂತಲೂ ಹೆಚ್ಚಿನ ದಿರ್‌ಹಮ್‌ಗಳಿದ್ದವು. ತಮ್ಮ ಸಂಪತ್ತಿನ ಹೆಚ್ಚಿನ ಪಾಲನ್ನು ಅವರು ಗುಲಾಮರನ್ನು ಖರೀದಿಸಿ ಬಿಡುಗಡೆಗೊಳಿಸುವಲ್ಲಿ ವಿನಿಯೋಗಿಸಿದರು. ಮದೀನಾ ಹಿಜ್ರತ್‌ನ ವೇಳೆ ಅವರ ಬಳಿ ಕೇವಲ 5000 ದಿರ್‌ಹಮ್‌ಗಳು ಉಳಿದಿದ್ದವು. ಇದನ್ನೂ ಸಹ ಅವರು ಸಮುದಾಯದ ಕ್ಷೇಮಾಭಿವೃದ್ಧಿ ಕಾರ್ಯಗಳಿಗೇ ವಿನಿಯೋಗಿಸಿದರು. ಉಮರ್, ಅಬ್ದುಲ್ ರೆಹ್ಮಾನ್ ಬಿನ್ ಔಫ್, ಅಬ್ದುಲ್ಲಾ ಅಲ್ ನಹ್ಹಾಮ್‌ರವರೂ ಅನೇಕ ಗುಲಾಮರಿಗೆ ವಿಮೋಚನೆ ನೀಡಿದರು. ಅಬ್ದುಲ್ಲಾ ನಹ್ಹಾಮ್ ಎಷ್ಟು ಗುಲಾಮರನ್ನು ಬಿಡುಗಡೆಗೊಳಿಸಿದ್ದರೆಂದರೆ ಹಿಜ್ರತ್‌ನ

ವೇಳೆ ಅವರು ಮದೀನಾ ತೆರಳದಂತೆ ಕುರೈಶರು ತಡೆದಿದ್ದರು. ಅವರು ಮದೀನಾ ಹೊರಟುಹೋದರೆ, ಇಲ್ಲಿ ಮಕ್ಕಾದಲ್ಲಿ ಅವರು ಬಿಡುಗಡೆಗೊಳಿಸಿದ್ದ ಗುಲಾಮರನ್ನು ನೋಡಿಕೊಳ್ಳುವರಾರು? ಎಂಬ ಭಯ ಕುರೈಶರಿಗೆ ವ್ಯಾಪಿಸಿತ್ತು.

## ಮುಸ್ಲಿಮೇತರರೊಂದಿಗೆ ಗೌರವಾದರಗಳು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮುಸ್ಲಿಮೇತರರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದರು. ತಮ್ಮ ಸಂಬಂಧಿಕರೊಂದಿಗೂ, ಇತರ ಕುರೈಶ್ ಮುಖಂಡರು, ಬುಡಕಟ್ಟು ಮುಖಂಡರೊಂದಿಗೆ ಅವರ ಧಾರ್ಮಿಕ ಭಿನ್ನಾಭಿಪ್ರಾಯದ ಹೊರತಾಗಿಯೂ ಅನ್ಯೋನ್ಯವಾಗಿದ್ದರು. ಅಬುತಾಲಿಬ್ ಪ್ರವಾದಿರ ಚಿಕ್ಕಪ್ಪ, ಮುಸ್ಲಿಮೇತರರಾಗಿಯೇ ನಿಧನ ಹೊಂದಿದ್ದರು. ಆದರೆ ಜೀವನ ಪರ್ಯಂತ ಪ್ರವಾದಿರಿಗೆ ರಕ್ಷಣೆ ನೀಡಿ ಅವರಿಗೆ ಬೆಂಗಾವಲಾಗಿ ನಿಂತಿದ್ದರು. ಪ್ರವಾದಿ ತಮ್ಮ ಚಿಕ್ಕಪ್ಪರನ್ನು ಬಹಳ ಪ್ರೀತಿಸುತ್ತಿದ್ದರು. ಅಬೂತಾಲಿಬ್ ಮರಣಶಯ್ಯೆಯಲ್ಲಿದ್ದಾಗ ಅವರು, ಅವರ ಪಕ್ಕದಲ್ಲಿಯೇ ಇದ್ದರು.

ಪ್ರವಾದಿರ ಇನ್ನೋರ್ವ ಚಿಕ್ಕಪ್ಪ ಅಬ್ಬಾಸ್ ಇಸ್ಲಾಮ್ ಸ್ವೀಕಾರದ ಮೊದಲೂ ಪ್ರವಾದಿರಿಗೆ ಅವರ ಕಾರ್ಯಗಳಲ್ಲಿ ನೆರವಾಗುತ್ತಿದ್ದರು, ಸಲಹೆ, ಸೂಚನೆಗಳನ್ನು ನೀಡುತ್ತಿದ್ದರು. ಮುಹಮ್ಮದ್ ಅವರಲ್ಲಿ ಅಪಾರ ನಂಬಿಕೆಯನ್ನು ಇಟ್ಟಿದ್ದರು. ಮದೀನಾದ ನಿಯೋಗಗಳು ಮಕ್ಕಾ ಬಂದು, ಪ್ರವಾದಿ ರೊಂದಿಗೆ ಚರ್ಚಿಸುವಾಗಲೂ ಅಬ್ಬಾಸ್ ಹಾಜರಿದ್ದರು. ಮದೀನಾಕ್ಕೆ ಹಿಜ್ರತ್ ಮಾಡುವ ಅತ್ಯಂತ ರಹಸ್ಯ ವಿಷಯಗಳನ್ನು ಅಬ್ಬಾಸ್‌ರಿಗೆ ತಿಳಿಸಲು ಪ್ರವಾದಿ ಹಿಂಜರಿಯುತ್ತಿರಲಿಲ್ಲ.

## ಪ್ರಾಮಾಣಿಕತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇತರ ಧರ್ಮೀಯರೊಂದಿಗೂ ಪ್ರಾಮಾಣಿಕತೆಯನ್ನು ತೋರುತ್ತಿದ್ದರು. ಮಕ್ಕಾದಲ್ಲಿ ಮುಹಮ್ಮದ್ ಇದ್ದ ಕಾಲದಲ್ಲಿ, ಮುಸ್ಲಿಮರು, ಮುಸ್ಲಿಮೇತರರೂ, ತಮ್ಮ ಅಮೂಲ್ಯ ವಸ್ತುಗಳನ್ನು ಅವರ ಬಳಿ ಇಡುತ್ತಿದ್ದರು.

ಮದೀನಾಕ್ಕೆ ಹಿಜ್ರತ್‌ನ ಸಮಯದಲ್ಲಿ ಮುಹಮ್ಮದ್, ಅಲಿರವರಿಗೆ ತಮ್ಮ ಬಳಿ ಇಡಲಾಗಿದ್ದ ವಸ್ತುಗಳನ್ನು ಅವುಗಳ ಮಾಲಿಕರಿಗೆ ಹಿಂತಿರುಗಿಸುವಂತೆ ಸೂಚಿಸಿದರು.

## ವಿಶ್ವಾಸ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮತ್ತು ಅಬೂಬಕರ್ ಸಿದ್ದೀಕ್ ಮದೀನಾ ಹಿಜ್ರತ್ ಮಾಡಲು ನಿರ್ಧರಿಸಿದಾಗ ಮದೀನಾ ತಲುಪಲು ರಹಸ್ಯ ಮಾರ್ಗವನ್ನು ತೋರಿಸಲು ಓರ್ವ ಮುಸ್ಲಿಮೇತರ ಯುವಕನನ್ನು ನೇಮಿಸಿದ್ದರು. ಈ ಯುವಕನು ನಂಬಿಕಸ್ತೆಗೆ, ವಿಶ್ವಾಸಾರ್ಹತೆಗೆ ಬಹಳ ಹೆಸರು ವಾಸಿಯಾಗಿದ್ದನು. ಪ್ರವಾದಿರನ್ನು ಸೆರೆಹಿಡಿಯಲು ಕುರೈಶರು ಎಲ್ಲೆಡೆ ತಂಡಗಳನ್ನು ನೇಮಿಸಿದ್ದರು.

ಪ್ರವಾದಿರನ್ನು ಸೆರೆಹಿಡಿದವರಿಗೆ 100 ಒಂಟೆಗಳ ಬಹುಮಾನವನ್ನು ಸಹ ಘೋಷಿಸಲಾಗಿತ್ತು. ಈ ಎಲ್ಲಾ ವಿಷಯಗಳ ಅರಿವು ಈ ಯುವಕನಿಗೆ ಇತ್ತು. ಆದರೂ ಈ ಮುಸ್ಲಿಮೇತರ ಯುವಕನು ಆಮಿಷಗಳಿಗೆ ಒಳಗಾಗದೆ ತನ್ನ ಪ್ರಾಣವನ್ನು ಪಣಕ್ಕಿಟ್ಟು ಪ್ರವಾದಿರನ್ನು ಸುರಕ್ಷಿತವಾಗಿ ಮದೀನಾ ತಲುಪುವಂತೆ ಮಾರ್ಗವನ್ನು ತೋರಿಸಿದನು.

## ಆದರ್ಶ

ಮಕ್ಕಾದಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮನೆಯಿಂದ ಹೊರಹೊರಟಾಗ ಹಾದಿಯಲ್ಲಿ ಪ್ರತಿನಿತ್ಯವೂ ಮಹಿಳೆಯೋರ್ವಳು ಪ್ರವಾದಿರ ಮೇಲೆ ಕಸಕಡ್ಡಿಯನ್ನು ಬಿಸಾಡುತ್ತಿದ್ದಳು. ಪ್ರವಾದಿ ಪ್ರತಿಕ್ರಿಯೆ ತೋರದೇ, ಕಸಕಡ್ಡಿಯನ್ನು ತೆಗೆದು ಮುಂದುವರಿಯುತ್ತಿದ್ದರು. ಒಂದು ದಿನ ಮಾಮೂಲಿನಂತೆ ಪ್ರವಾದಿ ಹೊರಹೊರಟಾಗ ಯಾವುದೇ ಕಸಕಡ್ಡಿ ಅವರ ಮೇಲೆ ಬೀಳಲಿಲ್ಲ. ಪ್ರವಾದಿ ಆ ಮಹಿಳೆಯ ಮನೆಗೆ ತೆರಳಿದರು. ಅವರನ್ನು ನೋಡಿ ಮಹಿಳೆ ಅವಕ್ಕಾದಳು. ಅವರ ಆಗಮನದ ಕಾರಣವನ್ನು ಕೇಳಿದಾಗ, ಪ್ರವಾದಿ, ಈ ದಿನ ನನ್ನ ಮೇಲೆ ಕಸ ಬೀಳದ ಕಾರಣ, ಬಹುಶಃ ನಿಮ್ಮ ಆರೋಗ್ಯ ಸರಿ ಇರಲಿಕ್ಕಿಲ್ಲವೆಂದು ಭಾವಿಸಿ, ನಿಮ್ಮ ಯೋಗಕ್ಷೇಮ ವಿಚಾರಿಸಲು ಬಂದೆ" ಎಂದರು. ಮಹಿಳೆ ಪಶ್ಚಾತ್ತಾಪದಿಂದ ಆ ಕೂಡಲೇ ಇಸ್ಲಾಮ್ ಸ್ವೀಕರಿಸಿದಳು.

## ಮಕ್ಕಾ ವಿಜಯದ ಸಂದರ್ಭದಲ್ಲಿ

ಮಕ್ಕಾ ವಿಜಯದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಕ್ಕಾದಲ್ಲಿ ಗಸ್ತು ತಿರುಗಿ ನಿವಾಸಿಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಒಂದು ರಾತ್ರಿ ಹೀಗೆ ಗಸ್ತು ತಿರುಗುವಾಗ ವೃದ್ಧೆಯೋರ್ವಳು ತನ್ನ ಗಂಟು ಮೂಟೆಗಳೊಂದಿಗೆ ಮಕ್ಕಾದಿಂದ ಹೊರಹೊರಟಿದ್ದಳು. ಗಂಟುಮೂಟೆಗಳನ್ನು ಒಯ್ಯಲು

ಅವಳು ಹರಸಾಹಸ ಪಡುತ್ತಿದ್ದಳು. ಇದನ್ನು ನೋಡಿ ಪ್ರವಾದಿ ಆಕೆಯ ಗಂಟುಮೂಟೆಗಳನ್ನು ತಮ್ಮ ಹೆಗಲ ಮೇಲಿರಿಸಿ ಆಕೆಗೆ ನೆರವಾದರು. ದಾರಿಯಲ್ಲಿ ವೃದ್ಧೆಯೊಂದಿಗೆ ನಡೆಯುತ್ತಿದ್ದಾಗ, ಪ್ರವಾದಿ ವೃದ್ಧೆಗೆ, ನಡುರಾತ್ರಿಯಲ್ಲಿ ಮಕ್ಕಾ ಪಟ್ಟಣದ ಹೊರ ಏಕೆ ಹೋಗುತ್ತಿರುವುದಾಗಿ ಪ್ರಶ್ನಿಸಿದರು. ವೃದ್ಧೆಯು, "ಮಕ್ಕಾ ಪಟ್ಟಣವನ್ನು ಮುಹಮ್ಮದ್ ಎನ್ನುವವ ಆಕ್ರಮಿಸಿದ್ದಾನೆ. ನಾನು ಇಸ್ಲಾಮ್ ಧರ್ಮ ಸ್ವೀಕರಿಸಿಲ್ಲ. ಮುಸ್ಲಿಮ್ ಸೇನೆ ನನ್ನನ್ನು ಸೆರೆಹಿಡಿದು ಹಿಂಸಿಸಬಹುದು. ಅವರು ವಿಜಯಿಗಳು. ಮಕ್ಕಾ ಪಟ್ಟಣವನ್ನು ಅವರು ಹಾಳು ಗೆಡಹಬಹುದು. ಇದನ್ನು ಸಹಿಸಲು ನನಗೆ ಸಾಧ್ಯವಿಲ್ಲ" ಎಂದು ಉತ್ತರಿಸಿದಳು. ಮುಹಮ್ಮದ್ ಏನೂ ಉತ್ತರಿಸದೇ, ಮೌನವಾಗಿದ್ದರು. ನಂತರ ವೃದ್ಧೆ ಮಕ್ಕಾ ಪಟ್ಟಣಕ್ಕೆ ಇಂತಹ ದುರ್ಗತಿ ತಂದಿದ್ದಕ್ಕಾಗಿ ಮುಹಮ್ಮದ್‌ರಿಗೆ ಹಿಡಿಶಾಪ ಹಾಕಿದಳು. ಇದೇ ಸಂದರ್ಭದಲ್ಲಿ ತನ್ನ ಗಂಟು ಮೂಟೆಯನ್ನು ಹೊತ್ತುಕೊಂಡು ಸಹಾಯ ಮಾಡಿದುದಕ್ಕಾಗಿ ಮುಹಮ್ಮದ್‌ರಿಗೆ ಕೃತಜ್ಞತೆ ಸಲ್ಲಿಸುತ್ತಾ, "ಅದಿರಲಿ, ನಿನ್ನ ಹೆಸರೇನು" ಎಂದು ಪ್ರಶ್ನಿಸಿದಳು. ಪ್ರವಾದಿ 'ಮುಹಮ್ಮದ್' ಎಂದು ಉತ್ತರಿಸಿದರು.

ಪ್ರವಾದಿರ ಉದಾತ್ತ ವರ್ತನೆಯಿಂದ ಪ್ರಭಾವಿತಳಾದ ವೃದ್ಧೆಯು ಮಕ್ಕಾ ಬಿಟ್ಟು ಹೋಗುವ ವಿಚಾರವನ್ನು ತ್ಯಜಿಸಿ ಇಸ್ಲಾಮ್ ಸ್ವೀಕರಿಸಿದಳು.

# ಮದೀನಾದ ಮುಸ್ಲಿಮೇತರರೊಂದಿಗೆ ಸಂಬಂಧಗಳು

## ಪರಧರ್ಮ ಸಹಿಷ್ಣುತೆ ಮತ್ತು ಶಾಂತಿಯುತ ಸಹಬಾಳ್ವೆ

ಮದೀನಾ ಹಿಜ್ರತ್ ನಂತರ, ಇಸ್ಲಾಮೀ ಸರಕಾರವು ಸುಭದ್ರವಾಗಿ ತಳವೂರಿರುವುದನ್ನು ಖಾತ್ರಿಪಡಿಸಿಕೊಂಡ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಗಮನವನ್ನು ಇತರ ಧರ್ಮೀಯರೊಂದಿಗೆ ಮತ್ತು ಮದೀನಾದ ಸುತ್ತಮುತ್ತಲಿನ ಬುಡಕಟ್ಟು ಜನಾಂಗಗಳೊಂದಿಗೆ ಉತ್ತಮಪಡಿಸುವತ್ತ ಹರಿಸಿದರು.

ಭೌಗೋಳಿಕವಾಗಿ ಯಹೂದಿಯರು ಮದೀನಾ ಮತ್ತು ಅದರ ಸುತ್ತುಮುತ್ತಲಿನಲ್ಲಿ ಮುಸ್ಲಿಮರಿಗೆ ಅತ್ಯಂತ ಸನಿಹವಾಗಿದ್ದರು. ಪ್ರವಾದಿ ಯಹೂದಿಯರೊಂದಿಗೆ ಒಪ್ಪಂದವನ್ನು ಮಾಡಿಕೊಂಡರು. ಕರಾರಿನ ಅಂಶಗಳಲ್ಲಿ ಯಹೂದಿಯರಿಗೆ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಪ್ರವಾದಿ ಜನರ ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತಿದ್ದರು. ಪ್ರವಾದಿರ ಸೇವೆಯಲ್ಲಿ ಓರ್ವ ಯಹೂದಿ ಬಾಲಕನಿದ್ದ. ಪ್ರವಾದಿರ ಸೇವೆಯಲ್ಲಿ ಅನೇಕ ವರ್ಷಗಳನ್ನು ಆತನು ಕಳೆದಿದ್ದನು. ಆದರೆ ಎಂದೂ ಪ್ರವಾದಿ ಆತನನ್ನು ಇಸ್ಲಾಮ್ ಧರ್ಮ ಸ್ವೀಕರಿಸುವಂತೆ ಒತ್ತಾಯಿಸಿರಲಿಲ್ಲ. ಒಂದು ದಿನ ಆತನು ರೋಗಗ್ರಸ್ತನಾಗಿ ಮರಣ ಶಯ್ಯೆಯಲ್ಲಿದ್ದ.

ಪ್ರವಾದಿ ಬಾಲಕನ ಪಕ್ಕದಲ್ಲಿ ಕುಳಿತು ಪ್ರೀತಿಯಿಂದ ಆತನ ಹಣೆಯನ್ನು ನೇವೇರಿಸುತ್ತಾ ಆತನಿಗೆ ಇಸ್ಲಾಮ್ ಸ್ವೀಕರಿಸುವಂತೆ ತಿಳಿಸಿದರು.

ಬಾಲಕನು ಪ್ರಶ್ನಾಪೂರ್ವಕವಾಗಿ ತನ್ನ ತಂದೆಯತ್ತ ದೃಷ್ಟಿ ಹಾಯಿಸಿದನು. ಬಾಲಕನ ತಂದೆಯು, ಬಾಲಕನಿಗೆ "ಮುಹಮ್ಮದ್ ಹೇಳುವಂತೆ ಮಾಡು" ಎಂದರು. ಬಾಲಕನು ತಂದೆ ತಿಳಿಸಿದಂತೆ ಪವಿತ್ರ ಕಲಿಮಃ ವಚನಗಳನ್ನು ಪಠಿಸಿದನು. ಸ್ವಲ್ಪ ಸಮಯದ ನಂತರ ಬಾಲಕನು ಮೃತಪಟ್ಟನು.

ಮದೀನಾದ ಕ್ರೈಸ್ತರೊಂದಿಗೂ ಪ್ರವಾದಿ ಉತ್ತಮ ಬಾಂಧವ್ಯವನ್ನು ಹೊಂದಿದ್ದರು.

ಪ್ರವಾದಿರ ಪತ್ನಿ ಆಯಿಷಾ ತಮ್ಮ ಸಹೋದರ ಸಂಬಂಧಿ, ಉರ್ವರಿಗೆ ಈ ರೀತಿ ನುಡಿದಿರುವರಾಗಿ ವರದಿಯಾಗಿದೆ.

"ಪ್ರವಾದಿರ ನೆರೆಹೊರೆಯವರಲ್ಲಿ ಕೆಲ ಕ್ರೈಸ್ತರಿದ್ದರು. ಇವರ ಬಳಿ ಹಾಲು ನೀಡುವ ಆಕಳುಗಳು ಇದ್ದವು. ಅವರು ಆಗಾಗ್ಗೆ ನಮಗೆ ಹಾಲನ್ನು ಕಳುಹಿಸಿಕೊಡುತ್ತಿದ್ದರು".

# ವಿಶ್ವಾಸದ ಬುನಾದಿಯ ಮೇಲೆ ಸಂಬಂಧಗಳು

ಮುಸ್ಲಿಮೇತರರ ಮೇಲೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿಶ್ವಾಸವನ್ನಿಡುತ್ತಿದ್ದರು ಮತ್ತು ವಿಶ್ವಾಸದ ಆಧಾರದ ಮೇಲೆ ಸಂಬಂಧಗಳನ್ನು ಬೆಳೆಸುತ್ತಿದ್ದರು. ಧಾಮಿಕ ಶ್ರದ್ಧೆಯ ಆಧಾರದ ಮೇಲೆ ಪ್ರವಾದಿ ಸಂಬಂಧಗಳನ್ನು ಬೆಳೆಸುತ್ತಿರಲಿಲ್ಲ. ಇಥಿಯೋಪಿಯಾದ ರಾಜ ನಜ್ಜಾಶಿ ಕ್ರೈಸ್ತ ಧರ್ಮಕ್ಕೆ ಸೇರಿದವನಾಗಿದ್ದ. ಆದರೂ ಪ್ರವಾದಿ ಮುಸ್ಲಿಮರಿಗೆ ಇಥಿಯೋಪಿಯಾದಲ್ಲಿ ಆಶ್ರಯ ಪಡೆಯುವಂತೆ ಸೂಚಿಸಿದ್ದರು. ನಜ್ಜಾಶಿ ಪರಧರ್ಮ ಸಹಿಷ್ಣುವಾಗಿರುವನೆಂಬುದು ಪ್ರವಾದಿರಿಗೆ ತಿಳಿದಿತ್ತು.

ಪ್ರವಾದಿರ ಈ ಕ್ರಮವನ್ನೇ ಮುಸ್ಲಿಮರೂ ಅನುಕರಿಸಿದರು. ಅತ್ಯಂತ ಸಂಧಿಗ್ಧ ಮತ್ತು ಸೂಕ್ಷ್ಮ ಪರಿಸ್ಥಿತಿಗಳಲ್ಲೂ ಮುಸ್ಲಿಮೇತರರ ಸಹಾಯವನ್ನು ಪಡೆಯಲು, ಅವರ ಮೇಲೆ ನಂಬಿಕೆ ಇಡಲು ಮುಸ್ಲಿಮರು ಹಿಂದು ಮುಂದು ನೋಡುತ್ತಿರಲಿಲ್ಲ.

ಉಮ್ಮೆ ಸಲಾಮಃ ತಮ್ಮ ಪತಿಯಿಂದ ಬೇರ್ಪಟ್ಟು ಮಕ್ಕಾದಲ್ಲಿಯೇ ಉಳಿದುಕೊಂಡಿದ್ದರು. ನಂತರ ಪುನಃ ಪತಿಯನ್ನು ಸೇರಲಿಕ್ಕಾಗಿ ಮದೀನಾ ಪ್ರಯಾಣ ಬೆಳೆಸಲಿಚ್ಛಿಸಿದರು. ಆದರೆ ಅವರು ಏಕಾಂಗಿಯಾಗಿದ್ದರು. ಆಗ ಉಸ್ಮಾನ್ ಬಿನ್ ತಲ್ಹ ಅವರ ಬೆಂಗಾವಲಾಗಿ ಮದೀನಾ ಪ್ರಯಾಣಿಸಲು ಮುಂದೆ ಬಂದರು. ಉಸ್ಮಾನ್ ಬಿನ್ ತಲ್ಹ ಆಗಿನ್ನೂ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಉಮ್ಮೆ ಸಲಾಮಃ ಉಸ್ಮಾನ್ ಬಿನ್ ತಲ್ಹರ ರಕ್ಷಣೆಯಲ್ಲಿ ಸುರಕ್ಷಿತವಾಗಿ ಮದೀನಾ ತಲುಪಿದರು. ಉಮ್ಮೆ ಸಲಾಮಃ ಈ ಘಟನೆಯನ್ನು ಸದಾ ಸ್ಮರಿಸುತ್ತಿದ್ದರು.

> **"**ಧರ್ಮದ ವಿಷಯದಲ್ಲಿ ನಿಮ್ಮೊಡನೆ ಯುದ್ಧ ಮಾಡಿರದ ಹಾಗೂ ನಿಮ್ಮನ್ನು ನಿಮ್ಮ ಮನೆಗಳಿಂದ ಹೊರ ಹಾಕಿದವರೊಂದಿಗೆ ಸೌಜನ್ಯ ಹಾಗೂ ನ್ಯಾಯದೊಂದಿಗೆ ವರ್ತಿಸುವುದರಿಂದ ಅಲ್ಲಾಹನು ನಿಮ್ಮನ್ನು ತಡೆಯುವುದಿಲ್ಲ. ಅಲ್ಲಾಹನು ನ್ಯಾಯಪಾಲನೆ ಮಾಡುವವರನ್ನು ಪ್ರೀತಿಸುತ್ತಾನೆ. ನೀವು ಧರ್ಮದ ವಿಷಯದಲ್ಲಿ ನಿಮ್ಮ ವಿರುದ್ಧ ಯುದ್ಧ ಮಾಡಿರುವ ಹಾಗೂ ನಿಮ್ಮನ್ನು ನಿಮ್ಮ ಮನೆಗಳಿಂದ ಹೊರಹಾಕಿರುವ ಮತ್ತು ನಿಮ್ಮನ್ನು ಹೊರ ಹಾಕುವ ವಿಷಯದಲ್ಲಿ ಪರಸ್ಪರ ಸಹಕರಿಸಿರುವ ಜನರೊಂದಿಗೆ ಸ್ನೇಹ ಬೆಳೆಸುವುದರಿಂದ ಮಾತ್ರ ಅಲ್ಲಾಹನು ನಿಮ್ಮನ್ನು ತಡೆಯುತ್ತಾನೆ. ಅವರೊಂದಿಗೆ ಸ್ನೇಹ ಬೆಳೆಸುವವರೇ ಅಕ್ರಮಿಗಳು**"**
>
> (ಪವಿತ್ರ ಕುರ್‌ಆನ್ 60:8–9)

ಕುರ್‌ಆನಿನ ಈ ಆದೇಶವನ್ನು ಸಂಕಷ್ಟಗಳಿರಲಿ, ವಿದ್ರೋಹವಿರಲಿ, ಅಥವಾ ಯುದ್ಧವಿರಲಿ ಎಲ್ಲಾ ಸಂದರ್ಭಗಳಲ್ಲೂ ಪಾಲಿಸಬೇಕಾಗಿತ್ತು. ಯಾರನ್ನೂ ಧರ್ಮ ಸ್ವೀಕರಿಸುವಂತೆ ಒತ್ತಾಯಿಸಲಾಗುತ್ತಿರಲಿಲ್ಲ. ಭಿನ್ನಾಭಿಪ್ರಾಯಗಳನ್ನು ಸಹಿಸಲಾಗುತ್ತಿತ್ತು. ಎಲ್ಲಾ ಜನರೊಂದಿಗೂ ನ್ಯಾಯೋಚಿತವಾಗಿ ವರ್ತಿಸಲಾಗುತ್ತಿತ್ತು. ಇದು ಕುರ್‌ಆನಿನ ಮುಖ್ಯ ಬೋಧನೆಯಾಗಿದ್ದು ಪ್ರವಾದಿರ ಪ್ರಮುಖ ಕಾರ್ಯವೂ ಇದುವೇ ಆಗಿತ್ತು. ಯುದ್ಧಕ್ಕೆ ಸಂಬಂಧಿಸಿದ ಕುರ್‌ಆನಿನ ಸೂಕ್ತಗಳನ್ನು ಅವುಗಳ ಅವತೀರ್ಣದ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಯುದ್ಧದ ಸಮಯದಲ್ಲಿ ಅವತೀರ್ಣವಾದ ಸೂಕ್ತಗಳನ್ನು ಸಂಪೂರ್ಣ ಕುರ್‌ಆನಿನ ಬೋಧನೆ ಇದುವೇ ಆಗಿದೆ ಎಂದು ವ್ಯಾಖ್ಯಾನಿಸಬಾರದು.

## ಅನುಕಂಪ

ಧರ್ಮದ ಆಧಾರದ ಮೇಲೆ ಯಾರೊಂದಿಗೂ ತಾರತಮ್ಯವನ್ನು ಮಾಡಲಾಗುತ್ತಿರಲಿಲ್ಲ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯಹೂದಿಯರೊಂದಿಗೂ ಸೌಹಾರ್ದಯುತ ಸಂಬಂಧವನ್ನು ಹೊಂದಿದ್ದರು. ಪ್ರವಾದಿರ ನೆರೆಹೊರೆಯರಲ್ಲಿ ಕೆಲ ಯಹೂದಿ ಕುಟುಂಬಗಳಿದ್ದು, ಪ್ರವಾದಿ ಅವರನ್ನು ಭೇಟಿ ಮಾಡುತ್ತಿದ್ದರು. ಮದೀನಾದಲ್ಲಿ 'ಬನು ಆರಿನ್' ಎಂಬ ಗೋತ್ರವಿತ್ತು. ಅವರ ಬಗ್ಗೆ ಪ್ರವಾದಿರಿಗೆ ಅಭಿಮಾನವಿದ್ದು, ಪ್ರತಿ ವರ್ಷ ಅವರಿಗೆ ನಿಗದಿತ ಮೊತ್ತ ಪಾವತಿಸಲಾಗುತ್ತಿತ್ತು.

## ಹೃದಯವಂತಿಕೆ, ನಂಬಿಕೆ ಮತ್ತು ವಿಧೇಯತೆ

ಮುಸ್ಲಿಮರು ಬದ್ರ್ ಯುದ್ಧದಲ್ಲಿ ಗೆದ್ದ ನಂತರ ಕುರೈಶ್ ಮುಖಂಡರು ಇಥಿಯೋಪಿಯಾದಿಂದ ಮುಸ್ಲಿಮರನ್ನು ಹೊರ ಹಾಕುವಂತೆ ರಾಜನ ಮನವೊಲಿಸಲಿಕ್ಕಾಗಿ ಮತ್ತೊಂದು ನಿಯೋಗವನ್ನು ಕಳುಹಿಸಿದರು. ಅವರ ಈ ತಂತ್ರವನ್ನು ಅಸಫಲಗೊಳಿಸಲು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಓರ್ವ ಮುಸ್ಲಿಮೇತರ ಅಮ್ರ್ ಬಿನ್ ಉಮಯ್ಯರನ್ನು ತಮ್ಮ ರಾಯಭಾರಿಯಾಗಿ ದೊರೆ ನಜ್ಜಾಶಿಯ ಬಳಿ ಕಳುಹಿಸಿದರು. ಅಮ್ರ್ ಬಿನ್ ಉಮಯ್ಯ ಕುರೈಶರ ತಂತ್ರ ಫಲಿಸದಂತೆ ಮಾಡುವಲ್ಲಿ ಯಶಸ್ವಿಯಾದರು.

☆

# ಮುಸ್ಲಿಮ್ ಸೇನೆಗೆ ಮುಸ್ಲಿಮೇತರರ ನೆರವು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರಾಜ್ಯದ ರಕ್ಷಣೆಯ ವಿಷಯದಲ್ಲಿ ಸದಾ ಜಾಗರೂಕರಾಗಿರುತ್ತಿದ್ದರು. ಯಾವುದೇ ಅಚಾತುರ್ಯಕ್ಕೆ ಅವರು ಆಸ್ಪದ ನೀಡುತ್ತಿರಲಿಲ್ಲ.

ಹುನೈನ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮ್ ಸೇನೆಯಲ್ಲಿ 12,000 ಸೈನಿಕರಿದ್ದರೂ ಪ್ರವಾದಿ ಒರ್ವ ಮುಸ್ಲಿಮೇತರ ಸಫ್ವಾನ್ ಬಿನ್ ಉಮಯ್ಯರಿಂದ ಕೆಲ ಆಯುಧಗಳನ್ನು ಸಾಲದ ರೂಪದಲ್ಲಿ ಪಡೆದಿದ್ದರು.

## ಸಫ್ವಾನ್ ಮತ್ತು ಸುಹೈಲ್ ಪರಾಕ್ರಮ

ಹುನೈನ್ ಯುದ್ಧದಲ್ಲಿ ಈರ್ವರು ಮುಸ್ಲಿಮೇತರರು ಸಫ್ವಾನ್ ಮತ್ತು ಸುಹೈಲ್ ಮುಸ್ಲಿಮ್ ಸೇನೆಯ ಜೊತೆಗೂಡಿ ಹೋರಾಡಿದ್ದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರ ಪರಾಕ್ರಮವನ್ನು ಮೆಚ್ಚಿ ಅವರನ್ನು ಗೌರವಿಸಿದರು. ಸೊತ್ತಿನಲ್ಲಿ ಅವರಿಗೆ ಬೆಲೆಬಾಳುವ ವಸ್ತುಗಳನ್ನು ನೀಡಿದರು.

## ಮುಸ್ಲಿಮೇತರ ಮಾರ್ಗದರ್ಶಿ

ಉಹದ್ ಯುದ್ಧದ ಸಂದರ್ಭದಲ್ಲಿ ಕುರೈಶ್ ಸೇನೆಗೆ ತಿಳಿಯದಂತೆ ರಹಸ್ಯವಾಗಿ ಉಹದ್ ತಲುಪಲು ಒರ್ವ ಮುಸ್ಲಿಮೇತರ ಮಾರ್ಗದರ್ಶಿಯು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಸಹಾಯ ಮಾಡಿದ್ದನು.

☆

# ಸದ್ವರ್ತನೆ ಮತ್ತು ಸಹನೆ

ದಯೆ ಮತ್ತು ಕರುಣೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಬೋಧನೆಯ ಪ್ರಮುಖ ಅಂಶಗಳಾಗಿದ್ದವು. "ಅಲ್ಲಾಹ್ ಕರುಣಾಳು ಆಗಿದ್ದು, ಪ್ರತಿಯೊಂದರಲ್ಲಿ ಆತನು ಕರುಣೆಯನ್ನು ಬಯಸುತ್ತಾನೆ" ಎಂದು ಅವರು ನುಡಿಯುತ್ತಿದ್ದರು.

ಪ್ರವಾದಿ ತಮ್ಮ ಒರ್ವ ಅನುಯಾಯಿಗೆ ಈ ರೀತಿ ಹೇಳಿದ್ದರು:

"ಅಲ್ಲಾಹ್ ಮೆಚ್ಚುವ ಎರಡು ಗುಣಗಳು ನಿನ್ನಲ್ಲಿವೆ. 'ಸದ್ವರ್ತನೆ' ಮತ್ತು 'ಸಹನೆ'.

ಪ್ರವಾದಿ ಸಹನೆ ತಾಳ್ಮೆಯ ಉತ್ಕೃಷ್ಟ ನಮೂನೆಗಳನ್ನು ನಮಗೆ ನೀಡಿದ್ದಾರೆ. ಒಮ್ಮೆ ಮಸ್ಜಿದ್ ನಬವಿಯಲ್ಲಿ ಹಳ್ಳಿಗ ನೋರ್ವನು ಬಂದು ಮೂತ್ರ ಮಾಡಲಾರಂಭಿಸಿದನು. ಇದನ್ನು ನೋಡಿ ಸಹಾಬಿಗಳಿಗೆ ಸಿಟ್ಟು ಬಂದು ಅವನನ್ನು ಹೊಡೆಯಲು ಉದ್ಯುಕ್ತರಾದರು. ಪ್ರವಾದಿ ಅವರನ್ನು ತಡೆದು ಹಳ್ಳಿಗನು ಮೂತ್ರವನ್ನು ಪೂರ್ಣವಾಗಿ ಮಾಡುವವರೆಗೆ ಕಾದು ನಿಂತರು. ನಂತರ ತಮ್ಮ ಬೊಗಸೆಯಲ್ಲಿ ನೀರು ತುಂಬಿ ಹಳ್ಳಿಗನು ಮೂತ್ರ ಮಾಡಿದ್ದ ಸ್ಥಳದಲ್ಲಿ ಹಾಯಿಸಿದರು. ನಂತರ ಹಳ್ಳಿಗನನ್ನು ಉದ್ದೇಶಿಸಿ "ಇದು ಆರಾಧನೆ ಮಾಡುವ ಸ್ಥಳ. ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು" ಎಂದು ಸೌಮ್ಯವಾಗಿ ತಿಳಿ ಹೇಳಿದರು.

ಹಳ್ಳಿಗನು ತೆರಳಿದ ನಂತರ, ಸಹಾಬಿಗಳನ್ನು ಉದ್ದೇಶಿಸಿ ಪ್ರವಾದಿ ನುಡಿದರು. "ನಿಮಗೆ ವಿಷಯಗಳನ್ನು ಸರಳಗೊಳಿಸಲು ಕಳುಹಿಸಿಕೊಡಲಾಗಿದೆ. ನಿಮಗೆ ವಿಷಯಗಳನ್ನು ಕಷ್ಟದಾಯಕಗೊಳಿಸಲು ಕಳುಹಿಸಲಾಗಿಲ್ಲ."

☆

# ಧರ್ಮದಲ್ಲಿ ಒತ್ತಾಯವಿಲ್ಲ

"ಧರ್ಮದಲ್ಲಿ ಒತ್ತಾಯವಿಲ್ಲ" (2:256) ಎಂದು ಕುರಾನ್ ಸ್ಪಷ್ಟವಾಗಿ ಹೇಳುತ್ತದೆ. ಜನರನ್ನು ಇಸ್ಲಾಮಿನೆಡೆಗೆ ಒತ್ತಾಯ ಪೂರ್ವಕವಲ್ಲ, ಪ್ರೀತಿಯಿಂದ ಆಹ್ವಾನಿಸಬೇಕೆಂದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರಿಗೆ ತಿಳಿಸಲಾಯಿತು.

> "ಓ ಪೈಗಂಬರರೇ, ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ"
> (ಪವಿತ್ರ ಕುರ್‌ಆನ್ 16:125)

ಯಮನ್ ದೇಶದಿಂದ 14 ಕ್ರೈಸ್ತ ವಿದ್ವಾಂಸರು ಇಸ್ಲಾಮಿನ ಬಗ್ಗೆ ಅರಿಯಲು ಪ್ರವಾದಿ ಬಳಿ ಬಂದರು. ಪ್ರವಾದಿ ಕ್ರೈಸ್ತ ವಿದ್ವಾಂಸರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸಿದರು. ಪ್ರವಾದಿ, ಇಸ್ಲಾವಮ್ ಧರ್ಮವು ಕ್ರೈಸ್ತ ಧರ್ಮದ ಮುಂದುವರಿಕೆಯಾಗಿರುವುದೆಂದೂ, ಪ್ರವಾದಿ ಈಸಾ (ಅವರ ಮೇಲೆ ಶಾಂತಿ ಇರಲಿ) (ಯೇಸು ಕ್ರಿಸ್ತರು) ಸಹ ಓರ್ವ ಪ್ರವಾದಿಯಾಗಿದ್ದರೆಂದು ತಿಳಿಸಿದರು.

ಮುಹಮ್ಮದ್ ಕ್ರೈಸ್ತ ನಿಯೋಗಕ್ಕೆ ಏಕೈಕ ದೇವವಾದ ಅಲ್ಲಾಹನನ್ನು ಆರಾಧಿಸಲು, ಇಸ್ಲಾಮನ್ನು ಧರ್ಮದ ರೂಪದಲ್ಲಿ ಹಾಗೂ ಪವಿತ್ರ ಕುರ್‌ಆನ್‌ನನ್ನು ಅಂತಿಮ ದಿವ್ಯವಾಣಿಯೆಂದು ಸ್ವೀಕರಿಸಲು ತಿಳಿಸಿದರು.

ಕ್ರೈಸ್ತ ವಿದ್ವಾಂಸರು ಪ್ರವಾದಿರ ಮಾತುಗಳನ್ನು ಆಲಿಸಿದರು. ನಂತರ ತಮ್ಮ ವಾದವನ್ನು ಮಂಡಿಸಿದರು. ಅವರು ಪ್ರವಾದಿರ ಇಸ್ಲಾಮಿನ ಆಹ್ವಾನವನ್ನು ತಿರಸ್ಕರಿಸಿದರು. ಮದೀನಾದಿಂದ ಹಿಂತಿರುಗುವ ಮೊದಲು ಮಸ್ಜಿದ್ ನಬವಿಯಲ್ಲಿ ನಿಯೋಗವು

ಆರಾಧನೆಯನ್ನು ಮಾಡಬಯಸಿತು. ಸಹಾಬಿಗಳು ಇದನ್ನು ವಿರೋಧಿಸಿದರು. ಆದರೆ ಪ್ರವಾದಿ ಅವರಿಗೆ ಮಸೀದಿಯಲ್ಲಿ ಆರಾಧನೆಯನ್ನು ನಿರ್ವಹಿಸಲು ಅನುಮತಿ ನೀಡಿದರು.

ಕ್ರೈಸ್ತ ವಿದ್ವಾಂಸರು ಪ್ರವಾದಿರಿಗೆ, ಇಸ್ಲಾಮಿನ ಬಗ್ಗೆ ತಿಳಿದುಕೊಳ್ಳಲು, ಅವರ ಸಂದೇಹಗಳನ್ನು ನಿವಾರಿಸಲು ಮತ್ತು ಸಂದರ್ಭ ಉದ್ಭವಿಸಿದಲ್ಲಿ ಅವರ ವ್ಯವಹಾರಗಳ ಬಗ್ಗೆ ನ್ಯಾಯ ನೀಡಲು ಯಾರನ್ನಾದರೂ ರಾಯಭಾರಿಯಾಗಿ ಕಳುಹಿಸಿಕೊಡಬೇಕೆಂದು ಕೋರಿದರು. ಪ್ರವಾದಿ ಅಬೂ ಉಬೈದ:ರನ್ನು ಕ್ರೈಸ್ತ ವಿದ್ವಾಂಸರೊಂದಿಗೆ ಕಳುಹಿಸಿಕೊಟ್ಟರು.

ಕ್ರೈಸ್ತರ ನಿಯೋಗವು ಮದೀನಾಕ್ಕೆ ಬಂದು ಪ್ರವಾದಿ ರೊಂದಿಗೆ ಚರ್ಚಿಸಿ ಮಸೀದಿಯಲ್ಲಿ ಆರಾಧನೆ ಮಾಡಿ ಇಸ್ಲಾಮ್ ಸ್ವೀಕರಿಸದೇ ಹಿಂತಿರುಗಿತ್ತು. ಇಸ್ಲಾಮ್ ಸ್ವೀಕರಿಸುವಂತೆ ಅವರ ಮೇಲೆ ಯಾವ ಒತ್ತಡವನ್ನೂ ಪ್ರವಾದಿ ಹಾಕಿರಲಿಲ್ಲ. ಇಸ್ಲಾಮಿನ ಆರಂಭಿಕ ಕಾಲದ ಮುಸ್ಲಿಮರು ಪ್ರವಾದಿರ ಈ ಧೋರಣೆಯನ್ನು ಮರೆಯಲಿಲ್ಲ. ಇಸ್ಲಾಮ್ ಸಹನೆಯನ್ನು ಮೀರಿ, ಇತರರ ಘನತೆಯನ್ನು ಪರಿಗಣಿಸಲು ತನ್ನ ಅನುಯಾಯಿಗಳಿಗೆ ಆದೇಶಿಸುತ್ತದೆ. "ಧರ್ಮದಲ್ಲಿ ಒತ್ತಾಯವಿಲ್ಲ" ಎಂಬ ಕುರ್‌ಆನಿನ ಬೋಧನೆಯನ್ನು ಈ ಘಟನೆಯು ಸಾಬೀತುಪಡಿಸುತ್ತದೆ.

# ಪರಧರ್ಮ ಸಹಿಷ್ಣುತೆ

ಅಲ್ಲಾಹ್ ಕುರ್‌ಆನ್‌ನಲ್ಲಿ ಈ ರೀತಿ ಹೇಳಿರುವನು.

"(ಓ ಮುಸಲ್ಮಾನರೇ), ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುವರೋ ಅವರನ್ನು ತೆಗಳ ಬೇಡಿರಿ. ಇದರಿಂದ ಅವರು ಶಿರ್ಕ್‌ಗಿಂತಲೂ ಮುಂದುವರಿದು ಅಜ್ಞಾನದಿಂದ ಅಲ್ಲಾಹನನ್ನು ತೆಗಳ ತೊಡಗುವರು........." (ಪವಿತ್ರ ಕುರ್‌ಆನ್ 6:108)

ಇತರ ಧರ್ಮೀಯರ ಬಗ್ಗೆ ಮಾತಾಡುವಾಗ, ಅವರ ಧರ್ಮಗಳ ಬಗ್ಗೆ ಚರ್ಚಿಸುವಾಗ ಸೌಮ್ಯ ಭಾಷೆಯನ್ನು ಬಳಸಬೇಕೆಂದು ಪ್ರವಾದಿ ಆದೇಶಿಸಿದ್ದರು. ಇತರ ಧರ್ಮೀಯರು ಆರಾಧಿಸುವ ವಸ್ತುಗಳನ್ನು, ಅವರ ಧಾರ್ಮಿಕ ಗ್ರಂಥಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಬಾರದೆಂದು ಪ್ರವಾದಿ ಮುಹಮ್ಮದ್ ಬೋಧಿಸಿದ್ದರು. ಈ ರೀತಿ ಮಾಡಿದರೆ, ಇತರ ಧರ್ಮೀಯರೂ ಸಹ ಅಲ್ಲಾಹನ ಬಗ್ಗೆ ಕೆಟ್ಟ ಮಾತುಗಳನ್ನು ಹೇಳುವ ಸಂಭವವಿರುತ್ತದೆ.

ಇತರ ಧರ್ಮೀಯರ ಬಗ್ಗೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಿಗೆ ಇದ್ದ ಗೌರವವನ್ನು ಮತ್ತು ಅವರ ದೃಷ್ಟಿಕೋನವನ್ನು ಈ ಘಟನೆಯು ಎತ್ತಿ ತೋರಿಸುತ್ತದೆ.

ಖೈಬರ್ ಯುದ್ಧದ ನಂತರ ಕೆಲ ಸಹಾಬಿಗಳು ಸಮರಾರ್ಜಿತ ಸೊತ್ತಿನೊಂದಿಗೆ ಯಹೂದಿಯರ ಧಾರ್ಮಿಕ ಗ್ರಂಥ 'ತೌರಾತ್'ನ ಪ್ರತಿಗಳನ್ನು ಒಯ್ದಿರುವುದನ್ನು ಯಹೂದಿಯರು ಗಮನಿಸಿ ಪ್ರವಾದಿರಿಗೆ ಮುಸ್ಲಿಮರ ಈ ಕ್ರಮಕ್ಕೆ ಪ್ರತಿಭಟಿಸಿದರು. ಇದನ್ನು ಕೇಳಿ ಪ್ರವಾದಿ ಕೋಪೋದ್ರೇಕರಾಗಿ ಕೂಡಲೇ ಯಹೂದಿಯರ ಧಾರ್ಮಿಕ ಗ್ರಂಥದ ಪ್ರತಿಗಳನ್ನು ಹಿಂತಿರುಗಿಸಲು ಆದೇಶಿಸಿದರು. ಇಷ್ಟೇ ಅಲ್ಲ, ಪ್ರವಾದಿ ಮುಸ್ಲಿಮರ ಈ ಪ್ರಮಾದಕ್ಕಾಗಿ ಯಹೂದಿಯರ ಬಳಿ ಕ್ಷಮೆಯನ್ನು ಕೋರಿದರು.

ಡಾ॥ ಇಸ್ರೇಲ್ ವೆಲ್‌ಫೆನ್ಸನ್ 'Dr. Israel Welphenson' ಖ್ಯಾತ ಯಹೂದಿ ವಿದ್ವಾಂಸರು, ಈ ಘಟನೆಯ ಬಗ್ಗೆ ಚರ್ಚಿಸುತ್ತಾ ಪ್ರವಾದಿರು ಇತರ ಧರ್ಮೀಯರಿಗೆ ತೋರುತ್ತಿದ್ದ ಗೌರವಾದರಗಳನ್ನು ಶ್ಲಾಘಿಸಿದ್ದಾರೆ. ಕ್ರಿ.ಪೂ. 70 ರಲ್ಲಿ ರೋಮನ್ನರು ಜರೂಸಲೇಂ ಅನ್ನು ಆಕ್ರಮಿಸಿದ ಸಂದರ್ಭದಲ್ಲಿ ಯಹೂದಿಯರ ಧರ್ಮಗ್ರಂಥದ ಪ್ರತಿಗಳನ್ನು ಬೆಂಕಿಗೆ ಆಹುತಿ ಮಾಡಿದ್ದರು ಮತ್ತು ಕಾಲಿನಿಂದ ತುಳಿದಿದ್ದರು. ಇದೇ ರೀತಿ ಧರ್ಮಾಂಧ ಕ್ರೈಸ್ತರು ಸ್ಪೇನಿನ ಯಹೂದಿಯರನ್ನು ಮರ್ದಿಸುತ್ತಾ ಅವರ ಧರ್ಮಗ್ರಂಥದ ಪ್ರತಿಗಳನ್ನು ಸುಟ್ಟಿದ್ದರು. ಆದರೆ ಪ್ರವಾದಿ ಯಹೂದಿಯರೊಂದಿಗೆ ವರ್ತಿಸಿದ ಘಟನೆಯು ಇಸ್ಲಾಮಿನ ಪರಧರ್ಮ ಸಹಿಷ್ಣುತೆಗೆ, ಇತರ ಧರ್ಮೀಯರಿಗೆ ತೋರುವ ಗೌರವಾದರಗಳಿಗೆ ಹಿಡಿದ ಕನ್ನಡಿಯಾಗಿದೆ.

☆

# ಘೋರ ಪಾಪ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮದೀನಾದಲ್ಲಿ ನೆಲೆಗೊಂಡ ಬಳಿಕ, ಅಲ್ಲಿಯ ನಿವಾಸಿಗಳಿಗೆ ಇಸ್ಲಾಮ್ ಸ್ವೀಕರಿಸುವಂತೆ ಒತ್ತಾಯಿಸಲಿಲ್ಲ. ಜನರೊಂದಿಗೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ವ್ಯವಹರಿಸುವುದಾಗಿ ಪ್ರವಾದಿ ಘೋಷಿಸಿದರು. ಆದರೆ ಕಾಲ ಕಳೆದಂತೆ ಮತ್ತು ಸಂಘರ್ಷಗಳು ಉಂಟಾದಾಗ ಯಹೂದಿಯರ ವಂಚನೆಯ ಕಾರಣದಿಂದಾಗಿ ಯಹೂದಿ ಗೋತ್ರಗಳೊಂದಿಗೆ ಮುಸ್ಲಿಮರ ಸಂಬಂಧಗಳು ಬಿಗಡಾಯಿಸಿದವು.

ಯಹೂದಿಯರ ಕಪಟತೆ, ವಂಚನೆ, ವಿಶ್ವಾಸ ದ್ರೋಹದ ಕಾರಣಗಳಿಂದಾಗಿ ಯಹೂದಿಯರೊಂದಿಗೆ ಸಂಘರ್ಷಣೆ ತಾರಕಕ್ಕೆ ಏರಿದ್ದಾಗ ಒಂದು ಘಟನೆ ನಡೆಯಿತು. ಮುಸ್ಲಿಮನೋರ್ವನು ಕಳ್ಳತನ ಮಾಡಿ, ಈ ಕೃತ್ಯವನ್ನು ಯಹೂದಿಯನು ಮಾಡಿರುವನೆಂದು ಸುಳ್ಳು ನುಡಿದನು. ಯಹೂದಿರೊಂದಿಗೆ ಸಂಬಂಧಗಳು ಹಳಸಿದ್ದರಿಂದ ತನ್ನ ಮಾತನ್ನು ಮುಸ್ಲಿಮರು ಸುಲಭವಾಗಿ ನಂಬುವರೆಂದು ಆತನು ಬಗೆದನು.

ಪ್ರವಾದಿರಿಗೆ ನಡೆದ ಘಟನೆಯ ವರದಿ ಮಾಡಲಾದಾಗ, ಪ್ರವಾದಿ ಘಟನೆಯ ವಿಚಾರಣೆಗೆ ಆದೇಶಿಸಿದರು. ವಿಚಾರಣೆ ನಡೆದಾಗ, ಮುಸ್ಲಿಮನು ಕಳ್ಳತನ ಮಾಡಿರುವುದು ಮತ್ತು ಯಹೂದಿಯನ ಮೇಲೆ ಸುಳ್ಳು ಆರೋಪ ಹೊರಿಸಿರುವುದು ಸಾಬೀತಾಯಿತು.

"ಮುಸ್ಲಿಮನ ಈ ಕೃತ್ಯವನ್ನು ಖಂಡಿಸುತ್ತಾ ಕುರ್‌ಆನಿನ ಎಂಟು ಸೂಕ್ತಗಳು ಅವತೀರ್ಣಗೊಂಡವು." (ಪವಿತ್ರ ಕುರ್‌ಆನ್ 4:108–116)

"…. ಆತ್ಮವಂಚನೆ ಮಾಡುವವರನ್ನು ನೀವು ಸಮರ್ಥಿಸಬೇಡಿರಿ. ನಿಶ್ಚಯವಾಗಿಯೂ ವಿಶ್ವಾಸ ಘಾತಕ ಮತ್ತು ಪಾಪ ಕರ್ಮಿಗಳಾದವರು ಅಲ್ಲಾಹನಿಗೆ

ಮೆಚ್ಚುಗೆಯವರಲ್ಲ. ಇವರು ತಮ್ಮ ಚಟುವಟಿಕೆಗಳನ್ನು ಜನರಿಗೆ ತಿಳಿಯದಂತೆ ಅಡಗಿಸಿ ಬಿಡಬಲ್ಲರು. ಆದರೆ ಅಲ್ಲಾಹನಿಗೆ ತಿಳಿಯದಂತೆ ಅಡಗಿಸಲಾರರು. ಇವರು ರಾತ್ರಿ ಕಾಲದಲ್ಲಿ ಅವಿತುಕೊಂಡು ಅವನ ಇಚ್ಛೆಗೆ ವಿರುದ್ಧ ಗೂಢಾಲೋಚನೆ ನಡೆಸುತ್ತಿರುವಾಗಲೂ ಆತನು ಇವರ ಸಂಗಡವೇ ಇರುತ್ತಾನೆ. ಇವರ ಸಕಲ ಕರ್ಮಗಳನ್ನು ಅಲ್ಲಾಹ್ ಆವರಿಸಿಕೊಂಡಿರುತ್ತಾನೆ".

ಅಲ್ಲಾಹ್ ಕುರ್‌ಆನ್‌ನಲ್ಲಿ ಈ ರೀತಿ ಹೇಳಿರುವನು:

> "ಇನ್ನು ಯಾರಾದರೂ ಅಪರಾಧ ಅಥವಾ ಪಾಪಕಾರ್ಯವೆಸಗಿ ಅದರ ಆರೋಪವನ್ನು ಇನ್ನೊಬ್ಬ ನಿರಪರಾಧಿಯ ಮೇಲೆ ಹೊರಿಸಿದರೆ, ಅವನು ಅತಿ ದೊಡ್ಡ ಸುಳ್ಳಾರೋಪಣೆ ಮತ್ತು ಸುವ್ಯಕ್ತ ಪಾತಕದ ಹೊರೆ ಹೊತ್ತುಕೊಂಡನು."
> (ಪವಿತ್ರ ಕುರ್‌ಆನ್ 4:112 )

ಯುದ್ಧದ ಅಥವಾ ಸಂಘರ್ಷಣೆಯ ಕಾರಣದಿಂದ ಉಂಟಾಗುವ ದ್ವೇಷ ಅಥವಾ ಮನಸ್ತಾಪ ಇಸ್ಲಾಮೀ ತತ್ವಗಳಿಗೆ ವ್ಯತಿರಿಕ್ತವಾಗಿ ನಡೆಯಲು ಕಾರಣವಾಗಬಾರದೆಂದು ಇಸ್ಲಾಮ್ ತಿಳಿಸುತ್ತದೆ.

> "ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ ನ್ಯಾಯದ ಸಾಕ್ಷ್ಯ ವಹಿಸುವವರೂ ಆಗಿರಿ. ಒಂದು ವರ್ಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ಕೆರಳಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿರುತ್ತದೆ. ಅಲ್ಲಾಹನಿಗೆ ಭಯಪಡಿರಿ. ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹ್ ಚೆನ್ನಾಗಿ ಅರಿಯುವವನಾಗಿದ್ದಾನೆ"
> (ಪವಿತ್ರ ಕುರ್‌ಆನ್ 5:8)

ಮೇಲಿನಂತೆ ನ್ಯಾಯವನ್ನು ಪಾಲಿಸಲು ಜಗತ್ತು ಧೈರ್ಯ ತೋರುವುದೇ? ಈ ರೀತಿ ನ್ಯಾಯವನ್ನು ಪಾಲಿಸಿದಲ್ಲಿ, ಮರ್ದನಕ್ಕೆ, ಶೋಷಣೆಗೆ ತುತ್ತಾಗಿರುವ ಅನೇಕ ಅಮಾಯಕ ಜನರಿಗೆ ನ್ಯಾಯ ದೊರೆಯುವಲ್ಲಿ ಸಂಶಯವಿಲ್ಲ!

☆

# ಕುರ್‌ಆನ್ ಮತ್ತು ಪರಧರ್ಮ ಸಹಿಷ್ಣುತೆ

ಕುರ್‌ಆನ್ ಪರಧರ್ಮ ಸಹಿಷ್ಣುತೆಗೆ ಬಹಳ ಒತ್ತು ನೀಡುತ್ತದೆ. ಪರಧರ್ಮೀಯರೊಂದಿಗೆ ಸಹೋದರತೆ, ಪ್ರೀತಿಯೊಂದಿಗೆ ವರ್ತಿಸಬೇಕೆಂದು ಕುರ್‌ಆನ್ ಆದೇಶಿಸುತ್ತದೆ. ವಿವಿಧ ಧರ್ಮಗಳು ಆಚರಣೆಗಳು ನಂಬಿಕೆಗಳು ಭಿನ್ನವಾಗಿದ್ದರೂ ಎಲ್ಲಾ ಧರ್ಮಗಳು ಒಳಿತನ್ನು, ನೈತಿಕ ಮೌಲ್ಯಗಳನ್ನು, ಉತ್ತಮ ನಡವಳಿಕೆಯನ್ನು ಬೋಧಿಸುತ್ತಿದ್ದು, ಇವುಗಳ ಆಧಾರದ ಮೇಲೆ ಎಲ್ಲಾ ಧರ್ಮೀಯರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಬೇಕೆಂದು ಒಳಿತಿನ ಕಾರ್ಯಗಳಲ್ಲಿ ಸಹಕರಿಸಬೇಕೆಂದು ಕುರ್‌ಆನ್ ಆದೇಶಿಸುತ್ತದೆ. ವಿವಿಧ ಧರ್ಮಗಳಲ್ಲಿ ವ್ಯತ್ಯಾಸಗಳು ಇದ್ದರೂ, ಪರಸ್ಪರ ಸೌಹಾರ್ದಯುತ ಸಂಬಂಧಗಳನ್ನು ಹೊಂದಬೇಕಾಗಿರುವುದು ಜನರ ಎದುರಿಗಿರುವ ಸವಾಲಾಗಿದೆ.

ಇತರ ಧರ್ಮಗಳ ಬಗ್ಗೆ ಕುರ್‌ಆನ್ ತಳೆದಿರುವ ನಿಲುವು ಬಹಳ ಪ್ರಾಯೋಗಿಕವಾಗಿದೆ. ಶ್ರೇಷ್ಠತೆಯ ಭಾವವನ್ನು ಕುರ್‌ಆನ್ ತೋರುವುದಿಲ್ಲ. ಧರ್ಮೀಯರ ನಡುವೆ ಭಿನ್ನಾಭಿಪ್ರಾಯಗಳವಿರುವುದು ಸ್ವಾಭಾವಿಕವಾಗಿದ್ದು, ಈ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪರಸ್ಪರರೊಂದಿಗೆ ಸಹಕರಿಸಬೇಕೆಂದು ಕುರ್‌ಆನ್ ತಿಳಿಸುತ್ತದೆ.

> ಓ ಪೈಗಂಬರರೇ, ಹೇಳಿರಿ, "ಓ ಗ್ರಂಥದವರೇ, ನಿಮ್ಮ ಮತ್ತು ನಮ್ಮೊಳಗೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ".
> (ಪವಿತ್ರ ಕುರ್‌ಆನ್ 3:64)

ವಿವಿಧ ಧರ್ಮೀಯರ ನಡುವೆ ಸೌಹಾರ್ದತೆ ಸ್ಥಾಪಿಸಲು ಕುರ್‌ಆನ್ ಮಾರ್ಗದರ್ಶನ ಸೂತ್ರಗಳನ್ನು ನೀಡಿದೆ.

ಪ್ರಥಮವಾಗಿ ಧರ್ಮಗಳ ಅನುಯಾಯಿಗಳು ಮೂಲಭೂತವಾದಿಗಳಾಗ ಬಾರದೆಂದು ಕುರ್‌ಆನ್ ತಿಳಿಸುತ್ತದೆ.

> "ಓ ಗ್ರಂಥದವರೇ, ನಿಮ್ಮ ಧರ್ಮದಲ್ಲಿ ನೀವು ಹದಮೀರ ಬೇಡಿರಿ, ಸತ್ಯದ ಹೊರತು ಇನ್ನೇನನ್ನೂ ಅಲ್ಲಾಹನ ಮೇಲೆ ಹೊರಿಸಬೇಡಿರಿ". (ಪವಿತ್ರ ಕುರ್‌ಆನ್ 4:171)

ಎರಡನೆಯದಾಗಿ, ಪರಸ್ಪರರು ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ಕುರ್‌ಆನ್ ಹೇಳುತ್ತದೆ. ಸೃಷ್ಟಿಕರ್ತನ ಬಗ್ಗೆ ಚರ್ಚಿಸುವಾಗ ಸಂಯಮದಿಂದ (ಕುರ್‌ಆನ್ 16:25) ಮತ್ತು ಉತ್ತಮ ಮಾತುಗಳನ್ನೇ ಆಡಬೇಕೆಂದು (ಕುರ್‌ಆನ್ 17:53) ಆದೇಶಿಸುತ್ತದೆ.

ಮೂರನೆಯದಾಗಿ,

> "ಇತರರ ನಂಬಿಕೆಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಬಾರದೆಂದು ಕುರ್‌ಆನ್ ಹೇಳುತ್ತದೆ. ಬಹು ದೇವರಾಧಕರಾಗಿದ್ದರೂ ಸರಿಯೇ, ಅವರ ಬಗ್ಗೆ ಲಘುವಾಗಿ ಕೆಟ್ಟ ರೀತಿಯಲ್ಲಿ ಮಾತಾಡಬಾರದೆಂದು ಕುರ್‌ಆನ್ ತಿಳಿಸುತ್ತದೆ."
> (ಪವಿತ್ರ ಕುರ್‌ಆನ್ 6:108)

ಧರ್ಮದ ಅನುಯಾಯಿಗಳು ಅಹಂಕಾರ ತೋರ್ಪಡಿಸಬಾರದೆಂದೂ, ವಿನಯತೆಯಿಂದ ನಡೆದುಕೊಳ್ಳಬೇಕೆಂದು ಕುರ್‌ಆನ್ ತಿಳಿಸುತ್ತದೆ. (ಕುರ್‌ಆನ್ 25:63) ಇತರರೊಂದಿಗೆ ಗೌರವ ಭಾವದೊಂದಿಗೆ ವರ್ತಿಸಬೇಕೆಂದು, ಸೌಮ್ಯವಾಗಿ, ನಯವಾಗಿ ಚರ್ಚಿಸಬೇಕೆಂದು ಕುರ್‌ಆನ್ ತಿಳಿಸುತ್ತದೆ.

ಪ್ರತಿರೋಧಿ ಹಠಮಾರಿತನ ತೋರಿದರೆ ಸತ್ಯ ವಿಶ್ವಾಸಿ ವಾಗ್ವಾದದಲ್ಲಿ ತೊಡಗದೇ ಚರ್ಚೆಯನ್ನು ಸೌಮ್ಯ ರೀತಿಯಲ್ಲಿ ಕೊನೆಗೊಳಿಸಬೇಕೆಂದು ಕುರ್‌ಆನ್ ಆದೇಶಿಸುತ್ತದೆ.

> "ಹೇಳಿಬಿಡಿರಿ, ಸತ್ಯ ನಿಷೇಧಿಗಳೇ, ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ".
> (ಪವಿತ್ರ ಕುರ್‌ಆನ್ 109:1–6)

ಇಸ್ಲಾಮಿನ ಬಗ್ಗೆ, ಪ್ರವಾದಿರ ಬಗ್ಗೆ ಪ್ರಚೋದನಾಕಾರಿ ಮಾತುಗಳು, ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸುವ ಮೂಲಕ ಕೆಲ ಶಕ್ತಿಗಳು ಮುಸ್ಲಿಮರ ಭಾವನೆಗಳನ್ನು ಘಾಸಿಗೊಳಿಸಿ ಅವರನ್ನು ಕೆರಳಿಸಲು ಪ್ರಯತ್ನಿಸಿದಾಗ, ಅವರ ಕುತಂತ್ರಗಳಿಗೆ ಗುರಿಯಾಗಿದೆ, ಸಹನೆ, ತಾಳ್ಮೆಯಿಂದ ಇರಬೇಕೆಂದು ಕುರ್‌ಆನ್ ನುಡಿಯುತ್ತದೆ.

> "ಓ ಪೈಗಂಬರರೇ, ನೀವು ಭೂ ನಿವಾಸಿಗಳಲ್ಲಿ ಹೆಚ್ಚಿನವರ ಹೇಳಿಕೆಯಂತೆ ನಡೆದರೆ ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿ ಬಿಡುವರು. ಅವರಂತು ಕೇವಲ ಗುಮಾನಿಯನ್ನು ಅನುಸರಿಸಿ ಊಹಾಪೋಹಗಳ ಪ್ರಕಾರ ವರ್ತಿಸುತ್ತಾರೆ". (ಪವಿತ್ರ ಕುರ್‌ಆನ್ 6:116)

# 16

# ಖೈಬರ್

ಮದೀನಾ ನಗರದಿಂದ ಮೂರು ಮೈಲಿ ದೂರದಲ್ಲಿ ಉತ್ತರ ದಿಕ್ಕಿನಲ್ಲಿ ಖೈಬರ್ ಎಂಬ ಪ್ರದೇಶವಿದೆ. ಯಹೂದಿಗಳನ್ನು ಫೆಲೆಸ್ತೀನ್‌ದಿಂದ ಹೊರಹಾಕಿದ ನಂತರ ಅವರು ಇಲ್ಲಿ ಬಂದು ನೆಲೆಸಿದ್ದರು. ಖೈಬರ್ ಅವರ ಮುಖ್ಯ ವಾಸಸ್ಥಳವಾಗಿತ್ತು. ಅವರು ವಾಸಿಸುತ್ತಿದ್ದ ಇತರ ಪ್ರದೇಶಗಳೆಂದರೆ ಫಿದಕ್, ವಾದಿಲ್‌ಕುರಾ ಮತ್ತು ತೀಮಾ, ಆದರೆ ಅವರ ಶಕ್ತಿ ಕೇಂದ್ರವು ಖೈಬರ್ ಪ್ರದೇಶವೇ ಆಗಿದ್ದಿತು.

ಬೈಬರ್‌ನಲ್ಲಿದ್ದ ಯಹೂದಿಗಳು, ಬನುಕೈನುಕಾ, ಬನು ನಝೀರ್ ಮತ್ತು ಬನು ಕುರೈಝಾ ಗೋತ್ರಗಳ ಯಹೂದಿಯರೊಂದಿಗೆ ಸೇರಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರನ್ನು ವಿರೋಧಿಸುತ್ತಿದ್ದರು ಮತ್ತು ಮುಸ್ಲಿಮರನ್ನು ಮುಗಿಸಲು ಸಂಚು ಹೂಡುತ್ತಿದ್ದರು.

ಮದೀನಾದ ಮೇಲೆ ಆಕ್ರಮಣ ಮಾಡುವಂತೆ ಬೈಬರ್‌ನ ಯಹೂದಿಗಳು ಮಕ್ಕಾದ ಕುರೈಶರ ಬಳಿಗೆ, ಹತ್‌ಫಾನ್, ಹವಾಝ್ಯೂನ್ ಗೋತ್ರಗಳ ಬಳಿಗೆ ವಿಶೇಷ ದೂತರನ್ನು ರವಾನಿಸಿದರು. ಮದೀನಾದ ಮೇಲೆ ಆಕ್ರಮಣ ಮಾಡಲು ಅವರಿಗೆ ಆರ್ಥಿಕ ಸಹಾಯವನ್ನು ಸಹ ನೀಡಿದರು.

ಕಂದಕ ಯುದ್ಧದ ಸಮಯದಲ್ಲಿಯೂ ಖೈಬರ್‌ನ ಯಹೂದಿಗಳು ಮುಸ್ಲಿಮರ ವಿರುದ್ಧ ಕುತಂತ್ರವನ್ನು ರೂಪಿಸಿದ್ದರು. ಪ್ರವಾದಿರ ಪ್ರಾಣಕ್ಕೂ ಅವರು ಸಂಚಕಾರ ತಂದಿದ್ದರು. ಆದುದರಿಂದ ಹುದೈಬಿಯಾದಿಂದ ಹಿಂತಿರುಗಿದ ಹದಿನೈದು ದಿನಗಳೊಳಗೆ ಪ್ರವಾದಿ ಖೈಬರ್‌ನ ಯಹೂದಿಗಳ ಮೇಲೆ ಕ್ರಮವನ್ನು ಕೈಗೊಳ್ಳಲು ನಿರ್ಧರಿಸಿದರು. ಹುದೈಬಿಯಾದ ಒಪ್ಪಂದದ ನಂತರ ಕುರೈಶರೊಂದಿಗೆ ಶಾಂತಿ ಸ್ಥಾಪನೆಯಾಗಿತ್ತು. ಪ್ರವಾದಿ ಈಗ ನಿರಾತಂಕವಾಗಿ ಖೈಬರ್‌ನ ಯುಹೂದಿಗಳೊಂದಿಗೆ

ವ್ಯವಹರಿಸಬಹುದಾಗಿತ್ತು.

ಶಾಂತಿಯುತ ಒಪ್ಪಂದ ಮಾಡಿಕೊಳ್ಳಲಿಕ್ಕಾಗಿ ಪ್ರವಾದಿ ಖೈಬರ್‌ಗೆ ಅನೇಕ ದೂತರನ್ನು ರವಾನಿಸಿದರು. ಆದರೆ ಇದಾವುದೂ ಫಲಕಾರಿಯಾಗಲಿಲ್ಲ.

ಮುಹಮ್ಮದ್‌ರಿಗೆ ಯಹೂದಿಗಳ ಯುದ್ಧ ಸಿದ್ಧತೆಯ ಕುರಿತು ಸುಳಿವು ದೊರೆತಾಗ ಶತ್ರುಗಳನ್ನು ಅವರ ನೆಲದಲ್ಲೇ ಸದೆ ಬಡಿಯುವ ನಿರ್ಧಾರ ತೆಗೆದುಕೊಳ್ಳುತ್ತಾ ಹಿ.ಶ. 7ರ ಮೊಹರಂ ತಿಂಗಳಲ್ಲಿ, 1600 ಯೋಧರೊಂದಿಗೆ ಖೈಬರ್ ಕಡೆಗೆ ಪ್ರಯಾಣ ಹೊರಡುತ್ತಾರೆ. ನಾಲ್ಕು ದಿನಗಳ ಪ್ರಯಾಣದ ಬಳಿಕ ಖೈಬರ್ ಮತ್ತು ಗತ್‌ಫಾನ್‌ನ ಪ್ರದೇಶವನ್ನು ತಲುಪುತ್ತಾರೆ. ಪ್ರವಾದಿರ ಯುದ್ಧ ತಂತ್ರದ ಮೇರೆಗೆ, ಈ ಎರಡು ಪ್ರದೇಶಗಳ ಮಧ್ಯೆ ಸೇನೆಯು ಠಿಕಾಣೆ ಹೂಡುತ್ತದೆ. ಇದರಿಂದಾಗಿ ಗತ್‌ಫಾನ್‌ರವರು ಖೈಬರ್‌ನ ಬೆಂಬಲಕ್ಕೆ ಹೊರಡಲು ಹಿಂಜರಿದರು.

ಖೈಬರ್‌ನಲ್ಲಿ ಯಹೂದಿಯರ ಅನೇಕ ಕೋಟೆಗಳಿದ್ದವು. ಆ ಪೈಕಿ ಆರು ಕೋಟೆಗಳು ಪ್ರಖ್ಯಾತವಾಗಿದ್ದವು. ಮುಸ್ಲಿಮ್ ಯೋಧರು ತಾಯಿಮ್, ಝುಬೈಲ್ ಮತ್ತು ಶಅಬ್ ಕೋಟೆಗಳನ್ನು ಸುತ್ತುವರಿಯುತ್ತಾರೆ. ಸತತ ಪ್ರಯತ್ನದ ನಂತರ ಮುಸ್ಲಿಮ್ ಸೇನೆ ತಾಯಿಮ್ ಮತ್ತು ನಝಾತ್ ಕೋಟೆಗಳನ್ನು ಜಯಿಸುತ್ತದೆ. ಅನಂತರ ಒಂದೆರಡು ದಿನಗಳಲ್ಲಿ ಶಕ್ ಮತ್ತು ಶಅಬ್‌ನ ಕೋಟೆಗಳೂ ವಶವಾಗುತ್ತವೆ. ಕಮೂಶ್ ಎಂಬ ಕೋಟೆಯು ಅತ್ಯಂತ ಭದ್ರವಾಗಿತ್ತು. 20 ದಿನಗಳ ಮುತ್ತಿಗೆಯ ನಂತರವೂ ಈ ಕೋಟೆಯು ಮುಸ್ಲಿಮರ ವಶವಾಗಿರಲಿಲ್ಲ. ಕೊನೆಗೆ ಅಲಿರ ನೇತೃತ್ವದಲ್ಲಿ ಕೋಟೆಯು ಮುಸ್ಲಿಮರ ವಶವಾಯಿತು. ಖೈಬರ್ ನಂತರ 'ಫಿದಕ್', 'ವಾದಿಯುಲ್ ಕುರಾ' ಮತ್ತು 'ತೀಮಾ'ದ ಯಹೂದಿಗಳು ಮುಸ್ಲಿಮರೊಂದಿಗೆ ಶಾಂತಿಯ ಒಪ್ಪಂದ ಮಾಡಿಕೊಳ್ಳುತ್ತಾರೆ.

## ಒಪ್ಪಂದ ಹಾಗೂ ವಿದ್ರೋಹ

ಅವರ ಮನವಿಯ ಮೇರೆಗೆ ಮುಸ್ಲಿಮರ ವಶವಾಗಿದ್ದ ಅವರ ಕೃಷಿ ಭೂಮಿಯನ್ನು ಅವರಿಗೆ ಹಿಂದಿರುಗಿಸಲಾಗುತ್ತದೆ. ಈ ರೀತಿ ಮದೀನಾದ ಪರಿಸರದಲ್ಲಿ ಯಹೂದಿಗಳ ಪ್ರಭಾವವು ಶಾಶ್ವತವಾಗಿ ಅಳಿಯುತ್ತದೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರೊಂದಿಗೆ ಒಪ್ಪಂದದ ನಂತರ ಖೈಬರ್‌ನ ಯಹೂದಿಗಳು ಒಂದು ಔತಣಕೂಟವನ್ನು ಏರ್ಪಡಿಸಿ ಪ್ರವಾದಿರನ್ನು ಆಮಂತ್ರಿಸುತ್ತಾರೆ. ಊಟದಲ್ಲಿ ಕುರಿಯ ಮಾಂಸವನ್ನು ಬಡಿಸಲಾಗುತ್ತದೆ. ಆದರೆ ಮಾಂಸದಲ್ಲಿ ವಿಷ ಮಿಶ್ರಣ ಮಾಡಲಾಗಿರುತ್ತದೆ. ಪ್ರವಾದಿ ಮಾಂಸದ ತುಂಡನ್ನು ಬಾಯಿಯಲ್ಲಿ ಇಟ್ಟಾಗ, ಮಾಂಸದ ವಿಚಿತ್ರ ರುಚಿಯನ್ನು

ನೋಡಿ, ಉಗಿದು ಬಿಡುತ್ತಾರೆ. ಆದರೆ ಅವರ ಅನುಯಾಯಿ ಬಿಷರ್ ಮಾಂಸವನ್ನು ಸೇವಿಸಿ ನಿಧನ ಹೊಂದುತ್ತಾರೆ. ಅಡುಗೆಯವಳನ್ನು ಕರೆದು ವಿಚಾರಿಸಿದಾಗ, ಅವಳು ಮಾಂಸದಲ್ಲಿ ವಿಷ ಮಿಶ್ರಣ ಮಾಡಿರುವುದನ್ನು ಒಪ್ಪಿಕೊಳ್ಳುತ್ತಾಳೆ. ಆದರೆ ಅವಳು ಒಂದು ಸಬೂಬನ್ನು ನೀಡುತ್ತಾಳೆ. ವಿಷ ಮಿಶ್ರಿತ ಊಟದ ಬಗ್ಗೆ ಪ್ರವಾದಿಗಳಿಗೆ ತಿಳಿದು ಬರುವುದೆಂದೂ, ಇತರರಿಗೆ ಅದು ತಿಳಿದು ಬರುವುದಿಲ್ಲದ ಕಾರಣ ತಾನು ಅಡುಗೆಯಲ್ಲಿ ವಿಷ ಮಿಶ್ರಣ ಮಾಡಿರುವುದಾಗಿ ತಿಳಿಸುತ್ತಾಳೆ.

ಆರಂಭದಲ್ಲಿ ಪ್ರವಾದಿ ಅವಳ ಈ ಕೃತ್ಯವನ್ನು ಕ್ಷಮಿಸಿದ್ದರು. ಆದರೆ ಅವರ ಅನುಯಾಯಿ ಬಿಷರ್ ನಿಧನ ಹೊಂದಿದಾಗ ಅವಳನ್ನು ಕೊಲ್ಲುವಂತೆ ಆಜ್ಞಾಪಿಸುತ್ತಾರೆ. ಯಹೂದಿಯರ ಈ ಕುಕೃತ್ಯದಿಂದ ಮುಸ್ಲಿಮರು ಕೋಪಗೊಂಡು ಯಹೂದಿಯರೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಿ, ಅವರ ಮೇಲೆ ಸೇನಾ ಕಾರ್ಯಾಚರಣೆಯನ್ನು ನಡೆಸಬೇಕೆಂದು ಪ್ರವಾದಿರನ್ನು ಆಗ್ರಹಿಸುತ್ತಾರೆ. ಆದರೆ ಪ್ರವಾದಿ ಯಹೂದಿಯರನ್ನು ಕ್ಷಮಿಸುತ್ತಾರೆ ಮತ್ತು ಯಹೂದಿಯರೊಂದಿಗಿನ ಒಪ್ಪಂದವನ್ನು ಮಾನ್ಯ ಮಾಡುತ್ತಾರೆ.

## ಸಫಿಯ್ಯಾರ ವಿವಾಹ

ಖೈಬರ್ ಯುದ್ಧದಲ್ಲಿ ಸೆರೆ ಸಿಕ್ಕಿದವರಲ್ಲಿ ಬನು ನಝೀರ್ ಮತ್ತು ಬನು ಕುರೈಝ ಗೋತ್ರಗಳ ಮುಖಂಡರಾಗಿದ್ದ ಹುವೆಯ್‌ರ ಪುತ್ರಿ ಸಫಿಯ್ಯಾ ಸಹ ಇದ್ದರು. ಸಫಿಯ್ಯಾರಿಗೆ ಮುಸ್ಲಿಮರ ಬಗ್ಗೆ ದ್ವೇಷವಿರಲಿಲ್ಲ. ಅವರು ಇಸ್ಲಾಮಿನ ಬಗ್ಗೆ ತೆರೆದ ಮನಸ್ಸು ಹೊಂದಿದ್ದರು. ಇದನ್ನು ಅರಿತಿದ್ದ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಫಿಯ್ಯಾರನ್ನು ವಿವಾಹವಾದರು. ಆಕಾಲದಲ್ಲಿ ಯುದ್ಧದಲ್ಲಿ ಜಯಶೀಲರಾದ ರಾಜರು ಸೋತರಾಜರ ಪುತ್ರಿಯನ್ನು ವಿವಾಹವಾಗುವ ಸಂಪ್ರದಾಯವಿತ್ತು.

ಭಾಗಶಃ ಇದು ಸೋತ ರಾಜರ ಮನಸ್ಸನ್ನು ಗೆಲ್ಲುವ ಕಾರಣಕ್ಕಾಗಿಯೂ, ಅವರ ಪ್ರತಿಷ್ಠೆಯನ್ನು ರಕ್ಷಿಸುವ ಕಾರಣಕ್ಕಾಗಿಯೂ ಆಗಿತ್ತು.

ಕ್ರಿ.ಶ. 628, ಹಿ.ಶ. 7ರಲ್ಲಿ ಇಸ್ಲಾಮ್ ಐತಿಹಾಸಿಕ ಘಟ್ಟವನ್ನು ತಲುಪಿತ್ತು. ಮದೀನಾದ ಉತ್ತರ ಭಾಗದಲ್ಲಿದ್ದ ಎಲ್ಲಾ ಯಹೂದಿಯರ ಕೋಟೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಪ್ರವಾದಿ ಈ ಭಾಗದ ಕೊನೆಯ ಶತ್ರುವನ್ನು ತಟಸ್ಥಗೊಳಿಸಿದ್ದರು. ಅರೇಬಿಯಾ ಪ್ರದೇಶದಾದ್ಯಂತ ಈಗ ಶಾಂತಿ ನೆಲೆಸಿತ್ತು. ಮದೀನಾದ ಉತ್ತರ ಭಾಗದಿಂದ ಈಗ ಆಕ್ರಮಣದ ಯಾವ ಭಯವೂ ಇರಲಿಲ್ಲ. ಮದೀನಾದ ಸುತ್ತಮುತ್ತಲಿನ ಗೋತ್ರಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದ್ದರಿಂದ, ಮುಸ್ಲಿಮರು

ಈಗ ನಿಶ್ಚಿಂತರಾಗಿ ಸುರಕ್ಷಿತ ಭಾವನೆಯಿಂದ ಜೀವನ ಮಾಡಲು ಸಾಧ್ಯವಾಯಿತು.

ಪ್ರವಾದಿರ ವಿವಾಹಗಳೂ ಈ ಬೆಳವಣಿಗೆಡೆಗೆ ಕಾರಣವಾಗಿದ್ದವು. ಪ್ರವಾದಿರ ಪತ್ನಿಯಂದಿರು, ವಿವಿಧ ಗೋತ್ರಗಳಿಂದ ಬಂದಿದ್ದು, ಆ ಗೋತ್ರಗಳೆಲ್ಲವೂ ವಿವಾಹದ ಕಾರಣದಿಂದಾಗಿ ಪ್ರವಾದಿರ ರಕ್ತ ಸಂಬಂಧಿಯಾಗಿ ಮಾರ್ಪಟ್ಟಿದ್ದವು. ಹಿಜ್ರತ್‌ನ ಎಂಟು ವರ್ಷಗಳ ಅವಧಿಯಲ್ಲಿ ಮುಸ್ಲಿಮರು ಮದೀನಾ ನಗರದಲ್ಲಿ ಭದ್ರವಾಗಿ ತಳವೂರಿದ್ದಲ್ಲದೇ, ಪ್ರಶ್ನಾತೀತ ಸ್ಥಾನಮಾನವನ್ನು ಹೊಂದುವಲ್ಲಿ ಸಫಲರಾಗಿದ್ದರು.

# 17

## ಉಮ್ರಾ : ನಿರ್ವಹಣೆ

ಹುದೈಬಿಯಾ ಒಪ್ಪಂದ ಮಾಡಿಕೊಂಡ ನಂತರ ಸರಿಯಾಗಿ ಒಂದು ವರ್ಷದ ಅವಧಿ ಸಂದಿದೆ. ಒಪ್ಪಂದದಂತೆ ಉಮ್ರಾಃ ನಿರ್ವಹಿಸಲಿಕ್ಕಾಗಿ ಮುಸ್ಲಿಮರಿಗೆ ಮಕ್ಕಾ ತೆರಳುವ ಸಮಯ ಸನ್ನಿಹಿತವಾಗಿದೆ. ಎರಡು ಸಾವಿರ ಸತ್ಯ ವಿಶ್ವಾಸಿಗಳು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರೊಂದಿಗೆ ಉಮ್ರಾಃ ನಿರ್ವಹಿಸಲು ಹೊರಟಿದ್ದಾರೆ. ಇವರಲ್ಲಿ ಅಬೂ ಹುರೈರಾ ಸಹ ಇದ್ದರು. ಅಬೂ ಹುರೈರಾ ಇತ್ತೀಚೆಗಷ್ಟೇ ಇಸ್ಲಾಮ್ ಸ್ವೀಕರಿಸಿದ್ದರು. ಅವರು ಅಹಲೆ ಅಸ್ಸುಫಃ ರವರಾಗಿದ್ದರು ಮತ್ತು ಕಡು ಬಡವರಾಗಿದ್ದರು. ಅಬೂ ಹುರೈರಾ ರವರಿಂದ ಹೆಚ್ಚಿನ ಪ್ರವಾದಿ ವಚನಗಳು ಉಲ್ಲೇಖಿತವಾಗಿದ್ದು, ಈ ಕಾರಣದಿಂದ ಅವರು ಬಹಳ ಪ್ರಖ್ಯಾತರಾಗಿರುವರು. ಇವರಿಗೆ ಬೆಕ್ಕುಗಳೆಂದರೆ ಬಹಳ ಇಷ್ಟವಿದ್ದುದರಿಂದ, ಇವರನ್ನು 'ಬೆಕ್ಕುಗಳ ತಂದೆ' ಎಂದು ಕರೆಯಲಾಗುತ್ತಿತ್ತು.

ಯಾತ್ರಾರ್ಥಿಗಳು ಮಕ್ಕಾದ ಸರಹದ್ದು ತಲುಪಿ, ಮಕ್ಕಾ ನಿವಾಸಿಗಳು ಕಅಬಾದ ಸುತ್ತಮುತ್ತಲಿಂದ ದೂರ ಸರಿಯುವವರೆಗೆ ಕಾದು ನಿಂತರು. ಮುಸ್ಲಿಮರೆಲ್ಲರೂ ಇಹ್ರಾಮ್ ಧರಿಸಿದ್ದರು. ಮಕ್ಕಾ ನಿವಾಸಿಗಳು ಮಕ್ಕಾ ತೆರವುಗೊಳಿಸಿ ಮಕ್ಕಾದ ಸುತ್ತ ಮುತ್ತಲಿದ್ದ ಬೆಟ್ಟ ಗುಡ್ಡಗಳತ್ತ ತೆರಳಿದರು.

ಪ್ರವಾದಿ ಕಅಬಾದ ಸುತ್ತ ತವಾಫ್ ನಿರ್ವಹಿಸಿ, ಸಫಾ ಮತ್ತು ಮರ್ವಾದ ನಡುವೆ ನಡೆಯನ್ನು ಪೂರ್ಣಗೊಳಿಸಿದರು. ನಂತರ ಒಂಟೆಯನ್ನು ಬಲಿ ನೀಡಿ, ತಮ್ಮ ತಲೆಯ ಕೂದಲನ್ನು ತೆಗೆಸಿಕೊಂಡರು. ಈ ರೀತಿ ಪ್ರವಾದಿ ಉಮ್ರಾಃ ನಿರ್ವಹಿಸಿದರು. ಸಹಾಬಿಗಳೂ ಪ್ರವಾದಿರ ಕ್ರಮವನ್ನು ಅನುಸರಿಸಿದರು. ಪ್ರವಾದಿ ಕಅಬಾದೊಳಗೆ ಪ್ರವೇಶಿಸ ಬಯಸಿದರು. ಆದರೆ ಕುರೈಶರು ಇದು ಒಡಂಬಡಿಕೆಯಲ್ಲಿ ಇಲ್ಲ ಎಂದು ಸಬೂಬು ನೀಡಿ ಅವರನ್ನು ತಡೆದರು. ಪ್ರವಾದಿ ಪ್ರತಿರೋಧ ವ್ಯಕ್ತಪಡಿಸಲಿಲ್ಲ. ಮಕ್ಕಾದಲ್ಲಿ ಇರುವವರೆಗೆ ಪ್ರವಾದಿ ತಮ್ಮ ಸಮಯವನ್ನು ಹರಮ್‌ನಲ್ಲಿಯೇ ಕಳೆದರು. ಬಿಲಾಲ್ ತಮ್ಮ ಸುಂದರ ಕಂಠದಲ್ಲಿ ಅಝಾನ್ ಕರೆ

ನೀಡುತ್ತಿದ್ದರು. ಈ ಅಝಾನ್ ಕರೆ ಮಕ್ಕಾದ ಎಲ್ಲಾ ದಿಕ್ಕುಗಳಲ್ಲಿಯೂ ಮಾರ್ದನಿಸುತ್ತಿತ್ತು. ಮುಸ್ಲಿಮರ ಶಿಸ್ತು, ಸರಳತೆ, ಅವರ ಆರಾಧನಾ ಕ್ರಮಗಳನ್ನು ದೂರದಿಂದಲೇ ವೀಕ್ಷಿಸುತ್ತಿದ್ದ ಕುರೈಶರು ಪ್ರಭಾವಿತರಾಗದೇ ಇರಲಿಲ್ಲ. ಇದೇ ಸಮಯದಲ್ಲಿ ಪ್ರವಾದಿರ ಚಿಕ್ಕಪ್ಪ ಅಬ್ಬಾಸ್ ಇಸ್ಲಾಮ್ ಸ್ವೀಕರಿಸಿದರು.

## ಅಂತರ್ ಜ್ಯೋತಿ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಉಮ್ರಃ ನಿರ್ವಹಿಸಿ ಮದೀನಾ ಹಿಂತೆರಳಿದ ಸ್ವಲ್ಪ ಕಾಲದಲ್ಲಿ ಉಸ್ಮಾನ್ ಬಿನ್ ತಲ್ಹ, ಖಾಲಿದ್ ಬಿನ್ ವಲೀದ್, ಅಮ್ರ್ ಬಿನ್ ಅಲ್ ಆಸ್ ಒಟ್ಟಾಗಿ ಮದೀನಾಕ್ಕೆ ಬಂದು ಇಸ್ಲಾಮ್ ಸ್ವೀಕರಿಸಿದರು. ಈ ಮೂವರೂ ದೀರ್ಘಕಾಲದಿಂದ ಪ್ರವಾದಿರನ್ನು ವಿರೋಧಿಸುತ್ತಾ ಬಂದಿದ್ದರು. ಮೂವರೂ ಪರಾಕ್ರಮಿಗಳಾಗಿದ್ದರು. ಸಹಾಬಿಗಳಿಗೆ ಇವರ ಶಕ್ತಿ, ಸಾಮರ್ಥ್ಯಗಳ ಅರಿವು ಇದ್ದಿತು. ಈ ಮೂವರ ಇಸ್ಲಾಮ್ ಸ್ವೀಕರಿಸಿದ ಕ್ಷಣದಿಂದಲೇ ಈ ಮೊದಲು ಅವರು ಕೈಗೊಂಡಿದ್ದ ಇಸ್ಲಾಮ್ ವಿರೋಧಿ ಚಟುವಟಿಕೆಗಳನ್ನು ಮುಸ್ಲಿಮರು ಮರೆತರು.

ಪ್ರವಾದಿ ಮತ್ತು ಅವರ ಸಂದೇಶವನ್ನು ಈ ಮೂವರು 20 ವರ್ಷಗಳಿಂದ ವಿರೋಧಿಸುತ್ತಾ ಬಂದಿದ್ದರು. ಇಸ್ಲಾಮ್ ಸ್ವೀಕಾರದ ನಂತರ ಇವರಲ್ಲಿ ಮಹತ್ ಕ್ರಾಂತಿ ಉಂಟಾಗಿತ್ತು. ಕಡು ವೈರಿಗಳ ಮನಃ ಪರಿವರ್ತಿಸುವ ಶಕ್ತಿ ಇಸ್ಲಾಮ್‌ಗಿದೆ. ದೀರ್ಘಕಾಲದ ಇಸ್ಲಾಮಿನ ಶತ್ರುಗಳೂ, ಇಸ್ಲಾಮ್ ಸ್ವೀಕಾರದ ನಂತರ ದೀರ್ಘಕಾಲದ ಮುಸ್ಲಿಮರಿಗಿಂತ ಹೆಚ್ಚು ದೇವ ಭಯ ಉಳ್ಳವರಾಗಿರಬಹುದು ಮತ್ತು ಅಲ್ಲಾಹನಿಗೆ ಹೆಚ್ಚು ನಿಕಟರಾಗಿರಬಹುದು. ಈ ಕಾರಣದಿಂದಲೇ ಒಬ್ಬರ ವ್ಯಕ್ತಿತ್ವದ ಬಗ್ಗೆ ಟೀಕೆ ಮಾಡುವುದು ಅಪವಾದವಾಗುತ್ತದೆ.

## ಸಿರಿಯಾ ಮೇಲಿನ ಆಕ್ರಮಣ

ಕೆಲ ತಿಂಗಳಗಳ ಬಳಿಕ, ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮದೀನಾದ ಉತ್ತರ ಭಾಗದಲ್ಲಿ ಸಿರಿಯಾದ ಕಡೆಗೆ ವ್ಯಾಪಾರಕ್ಕೆ ತೆರಳುವ ಮಾರ್ಗದಲ್ಲಿ ಮುಸ್ಲಿಮರು ಸುರಕ್ಷಿತವಾಗಿ ಪ್ರಯಾಣ ಬೆಳೆಸಲು ಅನುವಾಗಲು 15 ಅನುಯಾಯಿಗಳನ್ನು ಕಳುಹಿಸಿದರು. 14 ಅನುಯಾಯಿಗಳು ವಧಿಸಲ್ಪಟ್ಟರು. ಬುಸ್ರಾಕ್ಕೆ ಕಳುಹಿಸಲಾಗಿದ್ದ ಮತ್ತೋರ್ವ ರಾಯಭಾರಿಯನ್ನು ಘಸ್ಸಾನ್ ಬುಡಕಟ್ಟಿನವರು ಕೊಲೆ ಮಾಡಿದರು. ರಾಯಭಾರಿಗಳ ಕೊಲೆಯು ಅತ್ಯಂತ ಹೀನ ಕಾರ್ಯವಾಗಿತ್ತು ಮತ್ತು ಇದು ಯುದ್ಧದ ಘೋಷಣೆಯಾಗಿತ್ತು.

ಪ್ರವಾದಿ ರಾಯಭಾರಿಗಳ ಹತ್ಯೆಯ ಪ್ರತೀಕಾರವನ್ನು ಪಡೆಯ ಬಯಸಿದರು. ಮೂರು ಸಾವಿರ ಮುಸ್ಲಿಮ್ ಯೋಧರನ್ನು ಝೈದ್ ಬಿನ್ ಹಾರಿಸ್‌ರ ಅಧಿಪತ್ಯದಲ್ಲಿ ರವಾನಿಸಿದರು. ಝೈದ್‌ರನ್ನು ಸೇನಾಧಿಪತಿಯಾಗಿ ನೇಮಿಸಿದ ಪ್ರವಾದಿರ ಕ್ರಮ ಅನೇಕರನ್ನು ಆಶ್ಚರ್ಯಚಕಿತರನ್ನಾಗಿಸಿತು. ಸೇನೆಯು ತೆರಳುವ ಮುಂಚೆ ಪ್ರವಾದಿ, ರಣರಂಗದಲ್ಲಿ ಝೈದ್ ಹುತಾತ್ಮರಾದರೆ, ಅವರ ನಂತರ ಜಾಫರ್‌ರನ್ನು ಸೇನಾಧಿಪತಿಯಾಗಿ ನೇಮಿಸಬೇಕೆಂದು, ಜಾಫರ್ ಸಹ ಹುತಾತ್ಮರಾದರೆ ಅಬ್ದುಲ್ಲಾ ಬಿನ್ ರವಾಹರನ್ನು ಸೇನಾಧಿಪತಿಯಾಗಿ ನೇಮಿಸಬೇಕೆಂದೂ, ಅವರೂ ಯುದ್ಧದಲ್ಲಿ ಹುತಾತ್ಮರಾದರೆ ಸಮಾಲೋಚನೆಯ ಬಳಿಕ ಮುಸ್ಲಿಮ್ ಸೇನೆ ತಮ್ಮ ಸೇನಾಧಿಪತಿಯನ್ನು ನೇಮಿಸಬೇಕೆಂದು ಆದೇಶಿಸಿದರು.

ಪ್ರವಾದಿರ ಜೀವನದ ಅತ್ಯಂತ ಭಯಾನಕ ಮತ್ತು ಕ್ಲಿಷ್ಟ ಯುದ್ಧ ಸಿರಿಯಾದ ಯುದ್ಧವಾಗಿತ್ತು. ಇದು ಸಿರಿಯಾದ ಸರಹದ್ದಿನಲ್ಲಿ 'ಮುತಾ' ಎಂಬ ಸ್ಥಳದಲ್ಲಿ ಕ್ರಿ.ಶ. 629ರಂದು ನಡೆಯಿತು.

ಮುಸ್ಲಿಮ್ ಸೇನೆ ಸಿರಿಯಾದ ಸರಹದ್ದು ತಲುಪಿದಾಗ, ಅನೇಕ ಬುಡಕಟ್ಟಿನವರು ಸಿರಿಯಾ ಸೇನೆಯೊಂದಿಗೆ ಕೈ ಜೋಡಿಸಿರುವ ವಿಷಯ ತಿಳಿಯಿತು. ಇದರ ಜೊತೆಗೆ ರೋಮ್‌ನ ಸಾಮ್ರಾಟನೂ ಸಿರಿಯಾದ ಸಹಾಯಕ್ಕೆ ಸೇನೆಯನ್ನು ರವಾನಿಸಿದ್ದನು. ಈ ರೀತಿ ಸುಮಾರು ಒಂದು ಲಕ್ಷ ಶತ್ರು ಸೇನೆ, ಮೂರು ಸಾವಿರ ಮುಸ್ಲಿಮ್ ಸೇನೆಯನ್ನು ಎದುರಿಸಿತು.

ಬೃಹತ್ ಶತ್ರು ಸೇನೆಯನ್ನು ಕಂಡ ಝೈದ್ ಬಿನ್ ಹಾರಿಸ್, ವೈರಿಗಳ ಮೇಲೆ ಆಕಸ್ಮಿಕವಾಗಿ ಆಕ್ರಮಣ ಮಾಡುವಂತೆ ಆದೇಶಿಸಿದರು. ಶತ್ರುಸೇನೆಯನ್ನು ಕಕ್ಕಾಬಿಕ್ಕಿಯನ್ನಾಗಿಸುವುದು ಅವರ ಉದ್ದೇಶವಾಗಿತ್ತು. ಆದರೆ ಸ್ವಲ್ಪ ಸಮಯದಲ್ಲಿಯೇ ವೈರಿಗಳ ಸೇನೆಯು ಸಾವರಿಸಿಕೊಂಡಿತು. ಭಯಂಕರ ಯುದ್ಧವು ಆರಂಭಗೊಂಡಿತು. ಶತ್ರುಗಳು ಅಪಾರ ಸಂಖ್ಯೆಯಲ್ಲಿದ್ದರಿಂದ, ಅವರು ಯುದ್ಧದಲ್ಲಿ ಮೇಲುಗೈ ಹೊಂದಿದ್ದರು. ರಣರಂಗದಲ್ಲಿ ಝೈದ್ ಹುತಾತ್ಮರಾದರು. ನಂತರ ಜಾಫರ್, ಮತ್ತು ಅವರ ನಂತರ ಅಬ್ದುಲ್ಲಾ ಬಿನ್ ರವಾಹ ಹುತಾತ್ಮರಾದರು. ಮುಸ್ಲಿಮ್ ಸೈನಿಕರು ಸಮಾಲೋಚನೆ ನಡೆಸಿ ಖಾಲಿದ್ ಬಿನ್ ವಲೀದ್‌ನ್ನು ಸೇನಾಧಿಪತಿಯಾಗಿ ನೇಮಿಸಿದರು. ಖಾಲಿದ್ ಬಿನ್ ವಲೀದ್ ಮುಸ್ಲಿಮ್ ಸೇನೆಯನ್ನು ಪುನಃ ಒಗ್ಗೂಡಿಸಿ ಶತ್ರುಸೇನೆಯ ಆಕ್ರಮಣದಿಂದ ಮುಸ್ಲಿಮ್ ಸೇನೆಯನ್ನು ರಕ್ಷಿಸಿ, ರಣರಂಗದಿಂದ ಹಿಂದಕ್ಕೆ ಸರಿದರು. ಮುಸ್ಲಿಮ್ ಸೇನೆಯಲ್ಲಿ ಎಂಟು ಸೈನಿಕರು ಹತ್ಯೆಯಾಗಿದ್ದರು. ಆದರೆ ಮುಸ್ಲಿಮ್ ಸೇನೆ ಯುದ್ಧದಿಂದ ಹಿಂದಕ್ಕೆ ಸರಿಯಲೇಬೇಕಾಗಿತ್ತು. ಈ ರೀತಿ ಘೋರ ನರಮೇಧದಿಂದ ಮುಸ್ಲಿಮ್ ಸೇನೆಯನ್ನು ಅವರು ರಕ್ಷಿಸಿದರು.

# ಮುಹಮ್ಮದ್‌ರ ದುಃಖ

ಮುತಾದಲ್ಲಿ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಇತ್ತ ಮದೀನಾದಲ್ಲಿಯೇ ಉಳಿದುಕೊಂಡಿದ್ದ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಅನುಯಾಯಿಗಳು, ಪ್ರವಾದಿ ರೊಂದಿಗೆ ಒಂದು ವಿಚಿತ್ರ ಅನುಭವವನ್ನು ಪಡೆದರು. ಪ್ರವಾದಿರಿಗೆ ಕಂಡು ಬರುತ್ತಿದ್ದ ಕನಸುಗಳು, ದೃಶ್ಯಗಳು ನೈಜವಾಗುವುದು ಅನುಯಾಯಿಗಳಿಗೆ ತಿಳಿದ ವಿಷಯವೇ ಆಗಿತ್ತು. ಪ್ರವಾದಿರಿಗೆ ದಿವ್ಯವಾಣಿ ಅವತೀರ್ಣವಾಗುತ್ತಿತ್ತು. ಅದನ್ನು ಅನುಯಾಯಿಗಳು ಅನುಸರಿಸುತ್ತಿದ್ದರು. ಈ ರೀತಿ ಪ್ರವಾದಿರ ವಿಶೇಷ ಅನುಭವಗಳನ್ನು, ಅವರ ಅನುಯಾಯಿಗಳು ಅರಿತ್ತಿದ್ದರು.

ಒಂದು ದಿನ ಪ್ರವಾದಿ ಮುಹಮ್ಮದ್ ಅನುಯಾಯಿಗಳ ಬಳಿ ಬಂದು 'ಮುತಾ' ಯುದ್ಧದ ವೃತ್ತಾಂತವನ್ನು ಅವರಿಗೆ ತಿಳಿಸಿದರು. ರಣರಂಗದಿಂದ ಯಾವನೇ ರಾಯಭಾರಿಯು ಬಂದಿರಲಿಲ್ಲ. ಯಾರೂ ರಣರಂಗದ ಬಗ್ಗೆ ಮಾಹಿತಿಯನ್ನು ತಂದಿರಲಿಲ್ಲ.

ಮುಸ್ಲಿಮ್ ಸೇನೆಯು ಸಹಸ್ರಾರು ಮೈಲು ದೂರದಲ್ಲಿದ್ದರೂ, ಮದೀನಾದಲ್ಲಿದ್ದ ಪ್ರವಾದಿರಿಗೆ ರಣರಂಗದಲ್ಲಿ ನಡೆಯುತ್ತಿದ್ದ ಎಲ್ಲಾ ಘಟನಾವಳಿಗಳು ತಿಳಿದು ಬರುತ್ತಿದ್ದವು. ಪ್ರವಾದಿ ದುಃಖದಿಂದ ಜನರಿಗೆ ಝೈದ್ ಹಾರಿಸ್, ಜಾಫರ್ ಹಾಗೂ ಅಬ್ದುಲ್ಲಾ ಬಿನ್ ರವಾಹರ ಹುತಾತ್ಮತೆಯ ವಾರ್ತೆಯನ್ನು ನೀಡಿದರು. ತಮ್ಮ ಕಣ್ಣ ಮುಂದೆಯೇ ಯುದ್ಧ ನಡೆದಂತೆ, ಯುದ್ಧದ ವಿವರಗಳನ್ನು ಜನರಿಗೆ ನೀಡಿದರು. ಖಾಲಿದ್ ಬಿನ್ ವಲೀದ್ ಪರಾಕ್ರಮವನ್ನು ಹೊಗಳಿ, ಅವರಿಗೆ 'ಸೈಫುಲ್ಲಾ' (ಅಲ್ಲಾಹನ ಖಡ್ಗ) ಎಂಬ ಬಿರುದನ್ನು ನೀಡಿದರು.

ಪ್ರವಾದಿ ಜಾಫರ್‌ರ ಮನೆಗೆ ತೆರಳಿ ಅವರ ಮಡದಿ ಅಸ್ಮಾರಿಗೆ ಜಾಫರ್‌ರ ಹುತಾತ್ಮತೆಯ ವಾರ್ತೆಯನ್ನು ನೀಡಿ ಅವರನ್ನು ಸ್ವಾಂತನಗೊಳಿಸಿದರು. ನಂತರ ಝೈದ್ ಬಿನ್ ಹಾರಿಸ್‌ರ ಮನೆಗೆ ತೆರಳಿ ಕುಟುಂಬಕ್ಕೆ ದುಃಖದ ವಾರ್ತೆಯನ್ನು ತಿಳಿಸಿದರು. ಝೈದ್‌ರನ್ನು ಪ್ರವಾದಿ ಸ್ವಂತ ಮಗನಂತೆ ಪ್ರೀತಿಸುತ್ತಿದ್ದರು. ಝೈದ್‌ರ ಮನೆಯಿಂದ ಹೊರ ಬರುವಾಗ ಝೈದ್‌ರ ಕಿರಿಯ ಮಗಳು ಓಡಿ ಬಂದು ಪ್ರವಾದಿರನ್ನು ಅಪ್ಪಿಕೊಂಡಳು. ಪ್ರವಾದಿ ದುಃಖ ತಾಳಲಾರದೇ ಕಣ್ಣೀರು ಸುರಿಸಿದರು.

ಹ ಸಆದ್ ಬಿನ್ ಉಬಾದ್ಧ ಪ್ರವಾದಿ ಕಣ್ಣೀರು ಹರಿಸುತ್ತಿರುವುದನ್ನು ನೋಡಿ, "ಪ್ರವಾದಿಗಳೇ, ತಾವೂ ಕಣ್ಣೀರು ಸುರಿಸುವುದೇ?" ಎಂದು ಆಶ್ಚರ್ಯ ಚಕಿತರಾಗಿ ಪ್ರಶ್ನಿಸಿದರು. ಇದಕ್ಕೆ ಪ್ರವಾದಿ, "ನನ್ನ ಆಪ್ತರು ಅಗಲಿರುವುದಕ್ಕಾಗಿ" ಎಂದು ಉತ್ತರಿಸಿದರು.

ಪ್ರವಾದಿ ತಮ್ಮ ಸಂಗಾತಿಗಳಿಗೆ ಇತರರನ್ನು ಪ್ರೀತಿಸಲು, ಮತ್ತು ದುಃಖದ ಸಮಯದಲ್ಲಿ ದುಃಖವನ್ನು ಪ್ರಕಟಿಸಲು ಕಲಿಸಿದರು.

ಮುಸ್ಲಿಮ್ ಸೇನೆಯು ಮದೀನಾ ಹಿಂತಿರುಗಿದಾಗ ಪ್ರವಾದಿ ನುಡಿದಿರುವಂತೆ ಘಟನೆಗಳು ನಡೆದಿರುವುದು ಜನರ ಗಮನಕ್ಕೆ ಬಂತು. ಜನರಿಗೆ ಮುಹಮ್ಮದ್ ಪ್ರವಾದಿಯಾಗಿರುವುದಕ್ಕೆ ಮತ್ತಷ್ಟು ಪುರಾವೆ ದೊರಕಿತು. ಪ್ರವಾದಿ ದೂರದೃಷ್ಟಿತ್ವ ಹೊಂದಿದವರಾಗಿದ್ದರು, ಬುದ್ಧಿವಂತರಾಗಿದ್ದರು, ಚತುರರಾಗಿದ್ದರು. ಪ್ರವಾದಿಯೆಂಬ ನೆಲೆಯಲ್ಲಿ ವಿಶೇಷ ಗುಣಗಳನ್ನು ಹೊಂದಿದ್ದರು. ಆದಾಗ್ಯೂ, ತಮ್ಮ ಆಪ್ತರು ನಿಧನ ಹೊಂದಿದಾಗ ಜನ ಸಾಮಾನ್ಯರಂತೆ ಅಶ್ರುಧಾರೆಯನ್ನು ಹರಿಸಿದ್ದರು.

ಮದೀನಾದ ಉತ್ತರ ಭಾಗದಲ್ಲಿ ಪರಿಸ್ಥಿತಿಯು ಸೂಕ್ಷ್ಮವಾಗಿತ್ತು. ಅಲ್ಲಿಯ ಸುತ್ತಮುತ್ತಲಿನ ಗೋತ್ರಗಳು ಮುತಾ ಯುದ್ಧದಲ್ಲಿ ಮುಸ್ಲಿಮರ ಸೋಲಿನಿಂದ ಪ್ರೇರಿತರಾಗಿ, ಈ ಸಂದರ್ಭದಲ್ಲಿ ಅವರಿಗೆ ದೊರೆತಿದ್ದ ಅವಕಾಶವನ್ನು ಬಳಸಿಕೊಳ್ಳ ಬಯಸಿದರು. ಕೆಲ ಗೋತ್ರಗಳು ಮದೀನಾದ ಮೇಲೆ ಆಕ್ರಮಣ ಮಾಡ ಬಯಸಿವೆ ಎಂಬ ರಹಸ್ಯ ಮಾಹಿತಿ ಪ್ರವಾದಿರಿಗೆ ದೊರಕಿತು. ಪ್ರವಾದಿ ಅಮ್ರ್ ಅಧಿಪತ್ಯದಲ್ಲಿ ಸೇವಾ ತುಕಡಿಗಳನ್ನು ರವಾನಿಸಿದರು. ಈ ತುಕಡಿಯು ಸಿರಿಯಾ ದೇಶವನ್ನು ತಲುಪಿ, ಅಲ್ಲಿಯ ಗೋತ್ರಗಳೊಂದಿಗೆ ಈ ಮೊದಲು ಮಾಡಿಕೊಂಡಿದ್ದ ಒಪ್ಪಂದಗಳನ್ನು ಸುದೃಢಗೊಳಿಸಿಕೊಂಡಿತು, ಮತ್ತು ಇನ್ನೂ ಕೆಲ ಹೊಸ ಗೋತ್ರಗಳೊಂದಿಗೂ ಒಪ್ಪಂದಗಳನ್ನು ಮಾಡಿಕೊಂಡಿತು. ಈ ರೀತಿ ಮದೀನಾದ ಉತ್ತರ ಭಾಗದ ಪ್ರದೇಶವು ಮದೀನಾದ ರಕ್ಷಣೆಯ ದೃಷ್ಟಿಯಿಂದ ಸುರಕ್ಷಿತವಾಯಿತು.

ಸ್ವಲ್ಪ ಸಮಯದ ಬಳಿಕ ಪ್ರವಾದಿ ಸಿರಿಯಾ ದೇಶದ ಕಡೆಗೆ ಪುನಃ ಸೇನಾ ತುಕಡಿಗಳನ್ನು ಕಳುಹಿಸಿ, ಮುಸ್ಲಿಮರ ವ್ಯಾಪಾರಕ್ಕಾಗಿ ಮಾರ್ಗಗಳನ್ನು ಸುಗಮಗೊಳಿಸಿದರು.

## ಮುರಿದ ಹುದೈಬಿಯಾ ಒಪ್ಪಂದ

ಹುದೈಬಿಯಾ ಒಪ್ಪಂದದ ಪ್ರಕಾರ, ಉಭಯ ಪಕ್ಷಗಳ ಮೈತ್ರಿ ಕೂಟಗಳ ಮೇಲೆ ಆಕ್ರಮಣವಾದರೆ, ಅದರ ಪ್ರತೀಕಾರವನ್ನು ಪಡೆಯುವ ಹಕ್ಕು ಎರಡೂ ಪಕ್ಷದವರಿಗೆ ಇದ್ದಿತು. ಹುದೈಬಿಯಾ ಸಂಧಿಯ ವೇಳೆ ಕುಝಾ ಗೋತ್ರವು ಮುಸ್ಲಿಮರ ಜೊತೆ ಮೈತ್ರಿ ಮಾಡಿಕೊಂಡಿತ್ತು. ಅವರ ಹಳೆಯ ವೈರಿಗಳಾದ ಬನುಬಕರ್ ಗೋತ್ರದವರು ಕುರೈಶರೊಂದಿಗೆ ಮೈತ್ರಿ ಮಾಡಿಕೊಂಡಿದ್ದರು.

ಒಂದು ದಿನ ಕಪಟದಿಂದ ಬನು ಬಕರ್ ಗೋತ್ರದವರು ಕುಝಾ ಗೋತ್ರದವರ

ಮೇಲೆ ಆಕ್ರಮಣ ಮಾಡಿ ಅವರ ಕೆಲವು ವ್ಯಕ್ತಿಗಳನ್ನು ಹತ್ಯೆ ಮಾಡಿದರು. ಕುಝಾ ಗೋತ್ರದವರು ಕೂಡಲೇ ವಿಷಯವನ್ನು ಪ್ರವಾದಿರ ಗಮನಕ್ಕೆ ತಂದರು. ಇದು ಹುದೈಬಿಯಾ ಒಪ್ಪಂದದ ಉಲ್ಲಂಘನೆಯಾಗಿತ್ತು. ಪ್ರವಾದಿ ಈ ಕೃತ್ಯವನ್ನು ಎಸಗಿದವರನ್ನು ಶಿಕ್ಷಿಸಲು ನಿರ್ಧರಿಸಿದರು.

ಈ ಮೊದಲೂ ಕುರೈಶ್ ಮತ್ತು ಅವರ ಮಿತ್ರ ಪಕ್ಷಗಳಿಂದ ಹುದೈಬಿಯಾ ಒಪ್ಪಂದಕ್ಕೆ ವಿರುದ್ಧವಾಗಿ ಅನೇಕ ಕ್ರಮಗಳು ನಡೆದಿದ್ದವು. ಆದರೆ ಈಗ ನಡೆದ ಘಟನೆಯು ಮಿತಿ ಮೀರಿತ್ತು. ಪ್ರವಾದಿ ಕುರೈಶರ ಬಳಿ ದೂತನನ್ನು ರವಾನಿಸಿ ಅವರ ಮುಂದೆ ಮೂರು ಷರತ್ತುಗಳನ್ನು ಇಡುತ್ತಾರೆ.

1. ಹತ್ಯೆಗೀಡಾದವರಿಗೆ ಸೂಕ್ತ ಪರಿಹಾರ ಧನ ನೀಡಬೇಕು.
2. ಕುರೈಶರು ಬನುಬಕರ್ ಗೋತ್ರದವರಿಂದ ಬೆಂಬಲ ಹಿಂತೆಗೆದುಕೊಳ್ಳಬೇಕು.
3. ಹುದೈಬಿಯಾ ಸಂಧಿಯು ಕೊನೆಗೊಂಡಿದೆ ಎಂದು ಸ್ಪಷ್ಟವಾಗಿ ಘೋಷಿಸಬೇಕು.

ಕುರೈಶರು ಹುದೈಬಿಯಾ ಸಂಧಿಯನ್ನು ಮುರಿಯುವ ಘೋಷಣೆಯನ್ನು ಮಾಡುತ್ತಾರೆ. ಸ್ವಲ್ಪ ಕಾಲದಲ್ಲಿಯೇ ಕುರೈಶರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹುದೈಬಿಯಾ ಒಪ್ಪಂದವನ್ನು ನವೀಕರಿಸಲು ಅಬೂ ಸುಫ್‌ಯಾನ್‌ರನ್ನು ಮದೀನಾಕ್ಕೆ ದೌಡಾಯಿಸುತ್ತಾರೆ. ಈ ಘಟನೆಯಿಂದ ಕುರೈಶ್ ಆತಂಕಕ್ಕೆ ಒಳಗಾಗುತ್ತಾರೆ. ಪರಿಸ್ಥಿತಿಯು ವಿಕೋಪಕ್ಕೆ ತಿರುಗಿರುವುದನ್ನು ಮನಗಂಡ ಕುರೈಶರು ತಮ್ಮ ಪ್ರಭಾವೀ ನಾಯಕ ಅಬು ಸುಫ್‌ಯಾನ್‌ರನ್ನು ಪ್ರವಾದಿರಿಗೆ ರಮಿಸಲು, ಬನು ಬಕರ್ ಗೋತ್ರದ ಕೃತ್ಯಕ್ಕಾಗಿ ಯಾವುದೇ ಪ್ರತೀಕಾರದ ಕ್ರಮವೆಸಗದಂತೆ ಮನವೊಲಿಸಲು ಮದೀನಾ ಕಳುಹಿಸುತ್ತಾರೆ. ಹುದೈಬಿಯಾ ಒಪ್ಪಂದವಾದಾಗಿನಿಂದ ಕುರೈಶರು ಒಪ್ಪಂದವನ್ನು ಉಲ್ಲಂಘಿಸುತ್ತಲೇ ಬಂದಿದ್ದರು. ಅವರು ಇತರ ಗೋತ್ರದವರನ್ನು ಮುಸ್ಲಿಮರ ಮೇಲೆ ಆಕ್ರಮಣ ಮಾಡುವಂತೆ ಪ್ರಚೋದಿಸುತ್ತಿದ್ದರು. ಮದೀನಾ ತಲುಪಿದ ಅಬೂ ಸುಫ್‌ಯಾನ ಮೊದಲು ತಮ್ಮ ಪುತ್ರಿ ಉಮ್ಮೆ ಹಬೀಬಾಃರ ಬೆಂಬಲವನ್ನು ಆನಂತರ ಅಲಿರ ಬೆಂಬಲವನ್ನು ಪಡೆಯಲು ಪ್ರಯತ್ನಿಸಿ ವಿಫಲರಾಗುತ್ತಾರೆ. ನಂತರ ಪ್ರವಾದಿರ ಮುಂದೆ ಒಪ್ಪಂದವನ್ನು ನವೀಕರಿಸುವ ಪ್ರಸ್ತಾವನೆಯನ್ನು ಇಡುತ್ತಾರೆ. ಆದರೆ ಪ್ರವಾದಿ ಅಬೂ ಸುಫ್‌ಯಾನ್‌ರ ಮಾತಿಗೆ ಯಾವುದೇ ಪ್ರತಿಕ್ರಿಯೆ ನೀಡದೇ ಮೌನ ವಹಿಸುತ್ತಾರೆ.

# ಮಕ್ಕಾ ವಿಜಯ

ಕೆಲ ವಾರಗಳು ಕಳೆದ ಬಳಿಕ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮುಸ್ಲಿಮ್ ಸೇನೆಗೆ ಯುದ್ಧಕ್ಕೆ ಹೊರಡಲು ಸಿದ್ಧರಾಗುವ ಆದೇಶ ನೀಡುತ್ತಾರೆ. ಆದರೆ ಪ್ರವಾದಿ ಯಾರ ಮೇಲೆ ಯುದ್ಧಕ್ಕೆ ಹೊರಡಲಾಗುತ್ತಿದೆ ಎಂಬುದನ್ನು ರಹಸ್ಯವಾಗಿಡುತ್ತಾರೆ. ಕೆಲವೇ ಬೆರಳಣಿಕೆಯಷ್ಟು ಸಹಾಬಿಗಳಿಗೆ ಮಾತ್ರ ಯುದ್ಧದ ಸಿದ್ಧತೆಯ ಗುರಿಯ ವಿಷಯ ತಿಳಿದಿರುತ್ತದೆ.

ಇತರ ಜನರು ಬಹುಶಃ ಸಿರಿಯಾ, ತಾಯಿಫ್ ಅಥವಾ ಹವಾಝಿನ್‌ರ ಮೇಲೆ ಆಕ್ರಮಣ ಮಾಡಬಹುದೆಂದು ಭಾವಿಸಿದರು.

ರಮಝಾನ್ ತಿಂಗಳಿನಲ್ಲಿ ಸೇನೆಯು ಮದೀನಾದಿಂದ ಹೊರಡುತ್ತದೆ. ಪ್ರಯಾಣದಲ್ಲಿ ಉಪವಾಸ ವ್ರತವನ್ನು ಆಚರಿಸಬೇಕೇ? ಅಥವಾ ಇಲ್ಲವೇ? ಎಂಬುದನ್ನು ನಿರ್ಧರಿಸಲು ವೈಯಕ್ತಿಕವಾಗಿ ಸಹಾಬಿಗಳಿಗೇ ಬಿಡಲಾಗುತ್ತದೆ. ಪ್ರವಾದಿ ಸ್ವತಃ 'ಮರ್ ಅಝ್ಝಹಾನ್' ಎಂಬ ಸ್ಥಳ ತಲುಪುವವರೆಗೆ ಉಪವಾಸವನ್ನು ಆಚರಿಸುತ್ತಾರೆ. ನಂತರ ಇಲ್ಲಿಂದ ಯಾರೂ ಉಪವಾಸ ವ್ರತವನ್ನು ಆಚರಿಸಬಾರದು ಎಂದು ಆದೇಶಿಸುತ್ತಾರೆ.

ಮರ್‌ಅಝ್ಝಹಾನ್ ಸ್ಥಳವು ನಾಲ್ಕು ರಸ್ತೆಗಳು ಕೂಡುವ ಸ್ಥಳದಲ್ಲಿತ್ತು. ಅವರ ಪ್ರಯಾಣದ ಗುರಿ ನಜ್ದ್, ತಾಯಿಫ್ ಅಥವಾ ಮಕ್ಕಾವಾಗಬಹುದಿತ್ತು. ಮರ್‌ಅಝ್ಝಹಾನ್ ಸ್ಥಳದಲ್ಲಿ ಠಿಕಾಣಿ ಹೂಡಲಾಯಿತು. ಪ್ರವಾದಿ ಪ್ರತಿಯೋರ್ವ ಸೈನಿಕನಿಗೂ ಪಂಜನ್ನು ಹೊತ್ತಿಸಲು ಆದೇಶಿಸಿದರು. ಈ ರೀತಿ ಹತ್ತು ಸಾವಿರ ಪಂಜು ಹೊತ್ತಿಸಲಾಯಿತು. ಶತ್ರು ಸೇನೆಗೆ ಮುಸ್ಲಿಮರ ಪ್ರಬಲ ಶಕ್ತಿಯ ಅರಿವು ಹಾಗೂ ಮುಸ್ಲಿಮರ ಅಪಾರ ಸೇನೆ ತಮ್ಮ ಮೇಲೆ ಆಕ್ರಮಣ ಮಾಡಲು ಬರುತ್ತಿದೆ ಎಂಬ ಭಾವನೆಯನ್ನು ಅವರಲ್ಲಿ ಉಂಟು ಮಾಡುವುದು ಪ್ರವಾದಿರ ಉದ್ದೇಶವಾಗಿತ್ತು.

ಕುರೈಶ್ ಮುಖಂಡರು ಸಮಾಲೋಚನೆಯ ಬಳಿಕ ಪ್ರವಾದಿರ ಬಳಿ ಮಾತುಕತೆಗಾಗಿ ರಾಯಭಾರಿಯನ್ನು ಕಳುಹಿಸಲು ನಿರ್ಧರಿಸುತ್ತಾರೆ.

# ಅಬೂ ಸುಫ್‌ಯಾನ್‌ರ ಇಸ್ಲಾಮ್ ಸ್ವೀಕಾರ

ಕುರೈಶರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರೊಂದಿಗೆ ಮಾತುಕತೆಗಾಗಿ ಅಬೂ ಸುಫ್‌ಯಾನ್, ಹಕೀಮ್ ಬಿನ್ ಹಿಝಾಮ್, ಮತ್ತು ಬುದೈಲ್ ಬಿನ್ ವರಕಾರನ್ನು ಕಳುಹಿಸುತ್ತಾರೆ. ದೀರ್ಘ ಮಾತುಕತೆಯ ನಂತರವೂ ಪ್ರವಾದಿರ ಮನವೊಲಿಸಲು ಅವರು ವಿಫಲರಾಗುತ್ತಾರೆ.

ಹಕೀಮ್ ಬಿನ್ ಹಿಝಾಮ್ ಮತ್ತು ಬುದೈಲ್ ಬಿನ್ ವರಕಾ ಇಸ್ಲಾಮ್ ಸ್ವೀಕರಿಸುತ್ತಾರೆ. ಅಬೂ ಸುಫ್‌ಯಾನ್ "ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ" ಎಂದು ಹೇಳಲು ಒಪ್ಪಿಕೊಂಡರೂ, "ಮುಹಮ್ಮದ್ ಅಲ್ಲಾಹನ ಸಂದೇಶ ವಾಹಕರಾಗಿದ್ದಾರೆ" ಎಂದು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಇದಕ್ಕಾಗಿ ತಮಗೆ ಸ್ವಲ್ಪ ಸಮಯಾವಕಾಶ ನೀಡಬೇಕೆಂದು ತಿಳಿಸಿದರು. ರಾತ್ರಿಯನ್ನು ಮುಸ್ಲಿಮರ ಪಾಳೆಯದಲ್ಲಿಯೇ ಕಳೆದರು. ಇಡಿಯ ರಾತ್ರಿ ಮುಸ್ಲಿಮರ ಶಿಸ್ತು ಬದ್ಧ ವರ್ತನೆಯನ್ನು ಮುಸ್ಲಿಮರು ಪ್ರವಾದಿರಿಗೆ ತೋರುತ್ತಿದ್ದ ಪ್ರೇಮವನ್ನು ಗಮನಿಸಿದರು. ಮಾರನೆಯ ದಿನ ಇಸ್ಲಾಮನ್ನು ಸ್ವೀಕರಿಸುವುದಾಗಿ ಘೋಷಿಸಿದರು.

ಪ್ರವಾದಿರಿಗೆ ಅಬು ಸುಫ್‌ಯಾನ್‌ರ ಈ ಮನಪರಿವರ್ತನೆ ದುರ್ಬಲವೆಂದು ತಿಳಿದಿತ್ತು. ಆದುದರಿಂದ ಪ್ರವಾದಿ, ಅಬ್ಬಾಸ್‌ರನ್ನು ಅಬು ಸುಫ್‌ಯಾನ್‌ರೊಂದಿಗೆ ಕಣಿವೆಯ ಕೊನೆಯ ಭಾಗಕ್ಕೆ ತೆರಳಿ, ಅಬುಸುಫ್‌ಯಾನ್ ಮುಸ್ಲಿಮ್ ಸೇನೆ ಮಕ್ಕಾಕ್ಕೆ ಹೊರಡುವುದನ್ನು ನೋಡುವಂತೆ ತಿಳಿಸಿದರು. ಮುಸ್ಲಿಮ್ ಸೇನೆ ಶಿಸ್ತು ಬದ್ಧವಾಗಿ ತೆರಳುತ್ತಿರುವುದನ್ನು ಕಂಡು ಅಬು ಸುಫ್‌ಯಾನ್ ಪ್ರಭಾವಿತರಾದರು.

ಅಬ್ಬಾಸ್ ಪ್ರವಾದಿರಿಗೆ ನುಡಿದರು.

"ಪ್ರವಾದಿಗಳೇ ಅಬೂ ಸುಫ್‌ಯಾನ್ ಬಹಳ ಸ್ವಾಭಿಮಾನಿ. ಅವರ ಸ್ಥಾನಮಾನಕ್ಕೆ ಅರ್ಹವಾಗಿರುವಂತೆ ಏನಾದರೂ ವಿಶೇಷ ಘೋಷಣೆಯನ್ನು ಅವರಿಗಾಗಿ ಮಾಡಿ" ಪ್ರವಾದಿ ಹೇಳಿದರು: "ಮಕ್ಕಾ ಪ್ರವೇಶಿಸುವಾಗ ಹೀಗೆ ಘೋಷಣೆ ಮಾಡಿರಿ. ಯಾರು ಅಬು ಸುಫ್‌ಯಾನ್‌ರ ಮನೆಯನ್ನು ಪ್ರವೇಶಿಸುತ್ತಾರೋ ಅವರಿಗೆ ಅಭಯ ನೀಡಲಾಗುವುದು. ಯಾರು ತನ್ನ ಮನೆಯ ಬಾಗಿಲನ್ನು ಮುಚ್ಚಿಕೊಳ್ಳುತ್ತಾನೋ ಅವನಿಗೆ ಅಭಯ ನೀಡಲಾಗುವುದು ಮತ್ತು ಯಾರು ಮಸ್ಜಿದುಲ್ ಹರಾಮ್ ಪ್ರವೇಶಿಸುತ್ತಾರೋ ಅವರಿಗೂ ಅಭಯ ನೀಡಲಾಗುವುದು."

ಮುಸ್ಲಿಮ್ ಸೇನೆ ಮಕ್ಕಾ ತಲುಪುವ ಮೊದಲೇ, ಅಬುಸುಫ್‌ಯಾನ್ ಮಕ್ಕಾ ತಲುಪಿ, ಎಲ್ಲಾ ಜನರಿಗೆ, ಪ್ರವಾದಿರ ಮುಂದೆ ಶರಣಾಗತರಾಗ ಬೇಕೆಂದು, ಪ್ರವಾದಿರ ವಿಶಿಷ್ಟ ಸೇನೆಯನ್ನು ಎದುರಿಸಬಾರದೆಂದು ತಿಳಿಸುತ್ತಾರೆ. ಅಬು ಸುಫ್‌ಯಾನ್‌ರ ಮಾತಿಗೆ ಅವರ ಪತ್ನಿ ಹಿಂದೆ ಅವರನ್ನು ಹುಚ್ಚನೆಂದು, ಹೇಡಿಯೆಂದೂ ಮೂದಲಿಸುತ್ತಾಳೆ. ಕುರೈಶರ ಇತರ ನಾಯಕರು ಇಕ್ರಿಮಃ ಬಿನ್ ಅಬು ಜಹಲ್ ಮೊದಲಾದವರೂ ಸಹ ಅಬು ಸುಫ್‌ಯಾನ್‌ರನ್ನು ಅವರ ಕ್ರಮಕ್ಕಾಗಿ ಹೀಯಾಳಿಸುತ್ತಾರೆ.

ಪ್ರವಾದಿ ಅಬು ಸುಫ್‌ಯಾನ್‌ರನ್ನು, ಅವರು ಇಸ್ಲಾಮ್ ಸ್ವೀಕರಿಸಿದಕ್ಕಾಗಿ ಅವರನ್ನು ತಮ್ಮ ಮಿತ್ರನನ್ನಾಗಿಸಿರಲಿಲ್ಲ. ಪ್ರವಾದಿ ಅಬು ಸುಫ್‌ಯಾನ್‌ರ ಗುಣಗಳನ್ನು,

ನಡವಳಿಕೆಯನ್ನು ಗಮನಿಸಿದ್ದರು. ಅಬು ಸುಫ್ಯಾನ್ ಅಲ್ಲಾಹ್‌ನಲ್ಲಿ ವಿಶ್ವಾಸವಿರಿಸಿದ್ದರೂ, ಮುಹಮ್ಮದ್‌ರನ್ನು ಅಲ್ಲಾಹನ ಪ್ರವಾದಿಯೆಂದು ಅಂಗೀಕರಿಸಲು ಸಮಯಾವಕಾಶವನ್ನು ಕೋರಿದ್ದರು. ಅಬುಸುಫ್ಯಾನ್ ದೀರ್ಘಕಾಲದವರೆಗೆ ಮುಹಮ್ಮದ್‌ರನ್ನು ವಿರೋಧಿಸಿದ್ದರು. ಮುಹಮ್ಮದ್‌ರನ್ನು ತಮ್ಮ ಅಂತಸ್ತಿಗೆ ಸಮಾನರೆಂದು ಭಾವಿಸುತ್ತಿದ್ದುದರಿಂದ, ಅವರಿಗೆ ವಿಶೇಷ ಸ್ಥಾನ ನೀಡಲು ಸಿದ್ಧರಿರಲಿಲ್ಲ.

ಪ್ರವಾದಿ, ಅಬು ಸುಫ್ಯಾನ್‌ರ ಮನೋಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದರು. ಆದುದರಿಂದ ಪ್ರವಾದಿ ಇಸ್ಲಾಮ್ ಸ್ವೀಕರಿಸುವಂತೆ ಅಬೂ ಸುಫ್ಯಾನ್‌ರನ್ನು ಆತುರಪಡಿಸಲಿಲ್ಲ. ಅವರಿಗೆ ಯೋಚಿಸಲು, ಗಮನಿಸಲು ಕಾಲಾವಕಾಶವನ್ನು ನೀಡಿದರು. ಅಬು ಸುಫ್ಯಾನ್ ಇಸ್ಲಾಮ್ ಸ್ವೀಕರಿಸಿದ ನಂತರವೂ, ಸಮಾಜದಲ್ಲಿ ಖ್ಯಾತಿಗೆ, ಸ್ಥಾನಮಾನಕ್ಕೆ ಹಂಬಲಿಸುತ್ತಿದ್ದರೆಂಬುದನ್ನು ಪ್ರವಾದಿ ತಿಳಿದಿದ್ದರು. ಮುಸ್ಲಿಮ್ ಸೇನೆ ಮಕ್ಕಾಕ್ಕೆ ರವಾನೆಯಾಗುತ್ತಿದ್ದ ಚಿತ್ರಣವನ್ನು ಗಮನಿಸುವಂತೆ ಅಬು ಸುಫ್ಯಾನ್‌ರಿಗೆ ತಿಳಿಸಿದಾಗ, ಪ್ರವಾದಿ ಈ ಅಂಶವನ್ನು ಗಮನದಲ್ಲಿರಿಸಿದ್ದರು. ಈ ಕಾರಣದಿಂದಲೇ ಪ್ರವಾದಿ, ಮಕ್ಕಾ ಆಕ್ರಮಣದ ಸಂದರ್ಭದಲ್ಲಿ ಅಬುಸುಫ್ಯಾನ್‌ರಿಗೆ ವಿಶೇಷ ಪಾತ್ರವನ್ನು ನೀಡಿದ್ದರು.

ಪ್ರವಾದಿ ಎಲ್ಲಾ ಜನರೊಂದಿಗೂ ನ್ಯಾಯೋಚಿತವಾಗಿ ವರ್ತಿಸುತ್ತಿದ್ದರು. ಆದರೆ ಪ್ರತಿಯೋರ್ವ ವ್ಯಕ್ತಿಯ ಗುಣಗಳನ್ನು, ಸ್ವಭಾವವನ್ನು ಪರಿಗಣಿಸುತ್ತಿದ್ದರು ಮತ್ತು ಅದಕ್ಕಾಗಿ ಅವಕಾಶ ನೀಡುತ್ತಿದ್ದರು. ಯಾರ ಪ್ರತಿಷ್ಠೆಗೂ, ಯಾರ ಘನತೆ ಗೌರವಕ್ಕೂ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸುತ್ತಿದ್ದರು.

## 18

# ಮಹಾನ್ ವಿಜಯ

ಕ್ರಿ.ಶ. 630 (ಹಿ.ಶ.8) ರಮಝಾನ್ ತಿಂಗಳ 10ನೇ ದಿನದಂದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಕ್ಕಾದ ಮೇಲೆ ವಿಜಯವನ್ನು ಸಾಧಿಸಿದರು. ಮಕ್ಕಾ ವಿಜಯವನ್ನು ಮಹಾನ್ ವಿಜಯವೆಂದು ಬಣ್ಣಿಸಲಾಗುತ್ತದೆ. ಪ್ರವಾದಿ ಮದೀನಾ ಮತ್ತು ಸುತ್ತಮುತ್ತಲಿನ ಪ್ರದೇಶಗಳ 3000 ಮುಸ್ಲಿಮ್ ಸೈನಿಕರೊಂದಿಗೆ ಮಕ್ಕಾದ ಮೇಲೆ ಆಕ್ರಮಣ ಮಾಡಲು ಹೊರಟಿದ್ದರು. ದಾರಿಯಲ್ಲಿ ಇತರ ಗೋತ್ರಗಳ ಯೋಧರು ಸೇರಿಕೊಂಡು ಸೇನೆ 10000 ಸಂಖ್ಯೆಗೆ ಬೆಳೆದಿತ್ತು. ಮಕ್ಕಾದ ಸರಹದ್ದು ತಲುಪಿದಾಗ, ಪ್ರವಾದಿ ಸೈನ್ಯವನ್ನು ವಿವಿಧ ತುಕಡಿಗಳಲ್ಲಿ ವಿಂಗಡಿಸಿ, ಮಕ್ಕಾ ಪಟ್ಟಣವನ್ನು ಸುತ್ತುವರೆಯುವಂತೆ ಆದೇಶಿಸಿದ್ದರು.

ಮುಸ್ಲಿಮ್ ಸೇನೆ ಮಕ್ಕಾ ಪ್ರವೇಶಿಸುವಾಗ 'ಕದಾ' ಎಂಬ ಸ್ಥಳದಿಂದ ಹಾದುಹೋಗುತ್ತಿತ್ತು. ಅಬ್ಬಾಸ್ ಅಬೂ ಸುಫ್‌ಯಾನ್‌ರಿಗೆ ಇಲ್ಲಿಂದ ಹಾದು ಹೋಗುತ್ತಿದ್ದ ಪ್ರತಿಯೊಂದು ಗೋತ್ರದ ಬಗ್ಗೆ ವಿವರಗಳನ್ನು ನೀಡಿದರು. ಪ್ರತಿಯೊಂದು ಗೋತ್ರವೂ ಧ್ವಜವನ್ನು ಹಿಡಿದಿತ್ತು. ಸಅದ್ ಅಬೂ ಸುಫ್‌ಯಾನ್‌ರ ಬಳಿಯಿಂದ ಹಾದುಹೋಗುತ್ತಿದ್ದಾಗ, ಕುರೈಶರು ದೀರ್ಘಾವಧಿಯಿಂದ ನೀಡಿದ್ದ ನಿರಂತರ ಕಿರುಕುಳದ ನೆನಪುಗಳು ಅವರಿಗೆ ಮರುಕಳಿಸಿದವು. ಅವರು ಕೂಗಿ ಹೇಳಿದರು: "ಈ ದಿನವು ಪ್ರತೀಕಾರದ ದಿನವಾಗಿದೆ. ಇಂದು ಕಅಬಾದ ಪಾವಿತ್ರತೆ ನಮಗಾಗಿ ಇರುವುದು'.

ಪ್ರವಾದಿ ಇದನ್ನು ಕೇಳಿದಾಗ ಅವರ ಮುಖಾರವಿಂದ ಕೋಪದಿಂದ ವಿವರ್ಣವಾಯಿತು. ಅವರು ಸಅದ್ ರಿಂದ ಧ್ವಜವನ್ನು ಹಿಂದಕ್ಕೆ ಪಡೆಯುವಂದೆ ಆದೇಶಿಸಿ ಈ ರೀತಿ ಘೋಷಿಸಿದರು.

"ಈ ದಿನವು ಕಅಬಾದ ಮಹಾನತೆಯ, ಶ್ರೇಷ್ಠತೆಯ ಮತ್ತು ಔದಾರ್ಯದ ದಿನವಾಗಿದೆ".

ಕೆಲ ಕುರೈಶ್ ತಂಡಗಳು ಸುಹೈಲ್, ಇಕ್ರಿಮಾಃ ಮತ್ತು ಸಫ್ವಾನ್‌ರ ನೇತೃತ್ವದಲ್ಲಿ ಮುಸ್ಲಿಮ್ ಸೇನೆಯನ್ನು ವಿರೋಧಿಸಲು ಪ್ರಯತ್ನಿಸಿದವು. ಅಲ್ಪಕಾಲದ ಪ್ರತಿರೋಧದ ನಂತರ ಅವರಿಗೆ ಮುಸ್ಲಿಮ್ ಸೇನೆಯನ್ನು ವಿರೋಧಿಸುವುದು ಅರ್ಥಹೀನವೆಂದು ಅರಿವಾಯಿತು. ಸುಹೈಲ್ ತಮ್ಮ ಮನೆಯಲ್ಲಿ ರಕ್ಷಣೆಯನ್ನು ಪಡೆದರು. ಇಕ್ರಿಮಾಃ ಮತ್ತು ಸಫ್ವಾನ್ ಮಕ್ಕಾದಿಂದ ಪಲಾಯನ ಗೈದರು.

ಮಕ್ಕಾದ ಮೇಲೆ ಆಕ್ರಮಣದ ದಿನದಂದು ಯಾರ ಮೇಲೂ ಕೈ ಎತ್ತಬಾರದೆಂದು, ಯಾವುದೇ ಕಾದಾಟ ನಡೆಯಬಾರದೆಂದು ಪ್ರವಾದಿ ಆದೇಶಿಸಿದ್ದರು.

ಎಂಟು ವರ್ಷಗಳ ಹಿಂದೆ ಪ್ರವಾದಿ, ಅಬೂಬಕರ್ ಸಿದ್ದೀಕ್ ರೊಂದಿಗೆ ರಾತ್ರಿಯ ವೇಳೆಯಲ್ಲಿ ಮಕ್ಕಾದಿಂದ ಮದೀನಾ ಹಿಜ್ರತ್ ಮಾಡಿದ್ದರು. ಈಗ ಎಂಟು ವರ್ಷಗಳ ನಂತರ ಬೃಹತ್ ಸೇನೆಯೊಂದಿಗೆ ವಿಜಯಿಯಾಗಿ ಮಕ್ಕಾ ಪ್ರವೇಶಿಸಿದ್ದರು. ಆದರೆ ವಿಜಯದ ದರ್ಪದ ಲವಲೇಶವೂ ಅವರ ಮುಖದಲ್ಲಿ ತೋರಲಿಲ್ಲ. ಮಕ್ಕಾ ಪ್ರವೇಶಿಸುತ್ತಿದ್ದಾಗ ಪ್ರವಾದಿ ಒಂಟೆಯ ಮೇಲೆ ಅಲ್ಲಾಹನಿಗೆ ಕೃತಜ್ಞತೆಯ ರೂಪದಲ್ಲಿ ಬಾಗಿದ್ದರು ಮತ್ತು ಕುರ್‌ಆನಿನ ಈ ಸೂಕ್ತಗಳನ್ನು ಅವರು ಪಠಿಸುತ್ತಿದ್ದರು.

> "ಸಂದೇಶವಾಹಕರೇ, ನಾವು ನಿಮಗೆ ಸುಸ್ಪಷ್ಟ ವಿಜಯ ಪ್ರದಾನ ಮಾಡಿದೆವು. ಅಲ್ಲಾಹನು ನಿಮ್ಮ ಹಿಂದಿನ ಹಾಗೂ ಮುಂದಿನ ಎಲ್ಲಾ ತಪ್ಪುಗಳನ್ನು ಕ್ಷಮಿಸಲಿಕ್ಕಾಗಿ, ನಿಮ್ಮ ಮೇಲೆ ತನ್ನ ಅನುಗ್ರಹವನ್ನು ಪರಿಪೂರ್ಣಗೊಳಿಸಲಿಕ್ಕಾಗಿ, ನಿಮಗೆ ಸನ್ಮಾರ್ಗವನ್ನು ತೋರಿಸಲಿಕ್ಕಾಗಿ ಮತ್ತು ನಿಮಗೆ ಪ್ರಚಂಡ ವಿಜಯವನ್ನು ನೀಡಲಿಕ್ಕಾಗಿ. ಅವನೇ, ಸತ್ಯ ವಿಶ್ವಾಸಿಗಳ ಹೃದಯಗಳಲ್ಲಿ ಪ್ರಶಾಂತತೆಯನ್ನು ಇಳಿಸಿದವನು".
> (ಪವಿತ್ರ ಕುರ್‌ಆನ್ 48:1–4)

ಕಅಬಾದ ಮುಂದೆ ನಿಂತು ಪ್ರವಾದಿ ಕಅಬಾದ ಕೀಲಿ ಕೈ ಹೊಂದಿದ್ದ ಉಸ್ಮಾನ್ ಬಿನ್ ತಲ್ಹಾರನ್ನು ಕರೆಸಿ ಕಅಬಾದ ಬಾಗಿಲನ್ನು ತೆರೆಸಿದರು. ಮುಹಮ್ಮದ್ ಕಅಬಾದ ಒಳಗೆ ಪ್ರವೇಶಿಸಿದರು. ಅಲ್ಲಿ 360 ವಿಗ್ರಹಗಳಿದ್ದವು. ಗೋಡೆಯ ಮೇಲೆ ಇಬ್ರಾಹೀಮ್ ಮತ್ತು ಇಸ್ಮಾಈಲ್ (ಅವರ ಮೇಲೆ ಶಾಂತಿ ಇರಲಿ)ರ ಚಿತ್ರಗಳಿದ್ದವು. ಪ್ರವಾದಿರ ಕೈಯಲ್ಲಿ ಬಿಲ್ಲು ಇತ್ತು. ಬಿಲ್ಲಿನ ತುದಿಯಿಂದ ಮುಹಮ್ಮದ್ ಒಂದೊಂದಾಗಿ ವಿಗ್ರಹಗಳನ್ನು ಕೆಡವಿದರು. ಜೊತೆಗೆ ಪವಿತ್ರ ಕುರ್ ಆನಿನ ಈ ಸೂಕ್ತವನ್ನು ಪಠಿಸಿದರು.

> "ಸತ್ಯ ಬಂದು ಬಿಟ್ಟಿತು. ಮಿಥ್ಯ ಅಳಿದು ಹೋಯಿತು. ಮಿಥ್ಯ ಅಳಿದು ಹೋಗುವಂತಹದ್ದೇ" ಎಂದು ಘೋಷಿಸಿರಿ"
> (ಪವಿತ್ರ ಕುರ್‌ಆನ್ 17:81)

ಗೋಡೆಯ ಮೇಲೆ ಬಿಡಿಸಿದ್ದ ಚಿತ್ರ ಗಳನ್ನು ಅಳಿಸಿ ಹಾಕಲಾಯಿತು. ಈ ರೀತಿ ನಿಜಾರ್ಥದಲ್ಲಿ ಕಅಬಾ ಭವನವು ಪವಿತ್ರವಾಯಿತು. ಕಲ್ಲು, ಮರಗಳಿಂದ ನಿರ್ಮಿತವಾದ ಈ ವಿಗ್ರಹಗಳಿಗೆ ಲಾಭ–ನಷ್ಟಗಳನ್ನು ಉಂಟು ಮಾಡುವ ಯಾವ ಶಕ್ತಿಯೂ ಇಲ್ಲವೆಂಬ ವಾಸ್ತವಿಕತೆ ಈಗ ಕುರೈಶರಿಗೆ ಮನವರಿಕೆಯಾಯಿತು. ಈ ವಿಗ್ರಹಗಳು ತಮ್ಮ ರಕ್ಷಣೆಯನ್ನೇ ಮಾಡಿಕೊಳ್ಳಲು ಶಕ್ತವಲ್ಲವೆಂಬ ಸತ್ಯ ಅವರಿಗೆ ತಿಳಿಯಿತು.

> "ವಿಶ್ವದ ಯಾವ ವಸ್ತುವೂ ಅವನನ್ನು ಹೋಲುವುದಿಲ್ಲ. ಅವನು ಎಲ್ಲವನ್ನು ಆಲಿಸುವವನೂ ವೀಕ್ಷಿಸುವವನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್ 42:12)

ಮೂರ್ತಿಗಳ ಮಾಲಿನ್ಯದಿಂದ ಮುಕ್ತವಾದ ಕಅಬಾ ಭವನದೊಳಗೆ ಪ್ರವಾದಿ ನಮಾಝ್ ನಿರ್ವಹಿಸುತ್ತಾರೆ.

ಕಅಬಾದ ಒಳಗಿನಿಂದ ಮೂರ್ತಿಗಳನ್ನು ತೆಗೆಯುವ ಪ್ರವಾದಿರ ಕ್ರಮ, ಅವರು ಇಲ್ಲಿಯವರೆಗೂ ಕೈಗೊಂಡಿದ್ದ ಮಸೀದಿ ನಿರ್ಮಾಣ ಕಾರ್ಯದ ತದ್ವಿರುದ್ಧವಾಗಿತ್ತು ಎಂಬುದು ಮೇಲ್ನೋಟಕ್ಕೆ ಭಾಸವಾಗುತ್ತಿತ್ತು. ಆದರೆ ವಾಸ್ತವಿಕವಾಗಿ ಇದು ಹಾಗಿರಲಿಲ್ಲ. ಪ್ರವಾದಿ ಪವಿತ್ರ ಕಅಬಾದ ಒಳಗಿನಿಂದ ಮೂರ್ತಿಗಳನ್ನು ತೆಗಿಸಿ ಪವಿತ್ರ ಕಬಾವನ್ನು ಏಕೈಕ ಆರಾಧ್ಯನಾದ ಅಲ್ಲಾಹನ ಆರಾಧನೆಗೆ ಸೀಮಿತಗೊಳಿಸಿದ್ದರು. ಶತಮಾನಗಳಿಂದ ಕಅಬಾದ ಒಳಗಡೆ ಮೂರ್ತಿಗಳನ್ನು ಇರಿಸಿ ಸತ್ಯ ಸಂದೇಶವನ್ನು ವಿಕೃತಗೊಳಿಸಲಾಗಿತ್ತು.

ಕಅಬಾದ ಹೊರಗೆ ಕುರೈಶರು ನೆರೆದಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಮುಹಮ್ಮದ್ ನಮಾಝ್ ಮುಗಿಸಿ, ಕಅಬಾದ ಹೊರಬಂದು ನುಡಿದರು.

"ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ. ಅವನು ಏಕಮೇವಾದ್ವಿತೀಯನು. ಯಾರೂ ಅವನಿಗೆ ಸಹಭಾಗಿಗಳಿಲ್ಲ. ಅವನು ತನ್ನ ವಚನವನ್ನು ಪೂರ್ಣಗೊಳಿಸಿರುವನು. ತನ್ನ ದಾಸನಿಗೆ ನೆರವಾದನು. ಅವನೊಬ್ಬನೇ ಎಲ್ಲಾ ವಿರೋಧಿ ಬಣಗಳನ್ನು ಮುರಿದನು".

ತರುವಾಯ ಸೂರಃ ಅಲ್ ಹುಜುರಾತ್‌ನ ಈ ಸೂಕ್ತಗಳನ್ನು ಪಠಿಸುತ್ತಾರೆ.

> "ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನು, ಗೋತ್ರಗಳನ್ನು ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು

ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹ್ ಸರ್ವಜ್ಞನೂ, ವಿವರ ಪೂರ್ಣನೂ ಆಗಿರುತ್ತಾನೆ".(ಪವಿತ್ರ ಕುರ್‌ಆನ್ 49:13)

ಅನಂತರ ಕುರೈಶರನ್ನು ಉದ್ದೇಶಿಸಿ ಈ ರೀತಿ ವಿಚಾರಿಸುತ್ತಾರೆ: "ನಾನು ನಿಮ್ಮೊಂದಿಗೆ ಹೇಗೆ ವರ್ತಿಸಲಿರುವೆನು?"

ಕೆಲಕ್ಷಣದ ಮೌನದ ಬಳಿಕ ಎಲ್ಲರೂ ಏಕಕಂಠದಿಂದ ಹೇಳುತ್ತಾರೆ: "ನಿಮ್ಮಿಂದ ನಾವು ಕೇವಲ ಒಳಿತನ್ನೇ ನಿರೀಕ್ಷಿಸುತ್ತೇವೆ".

ಪ್ರವಾದಿ ಸ್ವಲ್ಪ ಮುಗುಳ್ನಗುತ್ತಾರೆ. ಅನಂತರ ಹೇಳುತ್ತಾರೆ. "ಇಂದು ನಾನು ಪ್ರವಾದಿ ಯೂಸುಫರು ತಮ್ಮ ಸೋದರರಿಗೆ ಹೇಳಿದುದನ್ನೇ ಹೇಳುತ್ತೇನೆ, ನಿಮ್ಮ ಮೇಲೆ ಇಂದು ಯಾವ ಅಪವಾದವೂ ಇಲ್ಲ. ಹೋಗಿ ನೀವಿಂದು ಸ್ವತಂತ್ರರಾಗಿರುವಿರಿ".

ಪ್ರವಾದಿ ಘೋಷಿಸಿದರು. ಇಂದು ನೀವೆಲ್ಲರೂ ಸ್ವತಂತ್ರರಾಗಿರುವಿರಿ.

ಪ್ರವಾದಿ ತಮ್ಮನ್ನು ಭೇಟಿ ಮಾಡಿದ ಎಲ್ಲಾ ಸ್ತ್ರೀ ಪುರುಷರಿಗೆ ಕ್ಷಮಾದಾನ ನೀಡಿದರು.

## ಸಾರ್ವತ್ರಿಕ ಕ್ಷಮಾದಾನ

ಮಕ್ಕಾ ವಿಜಯದ ದಿನ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇತರ ರಾಜರು, ಸಾಮ್ರಾಟರು ಮಾಡುವಂತೆ ಡೊಳ್ಳ, ನಗಾರಿ ಬಾರಿಸುತ್ತಾ, ಘೋಷಣೆಗಳನ್ನು ಕೂಗುತ್ತಾ ಮಕ್ಕಾ ಪ್ರವೇಶಿಸಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಪ್ರವಾದಿ ಅಲ್ಲಾಹನನ್ನು ಸ್ಮರಿಸುತ್ತಾ, ಮಕ್ಕಾ ಪ್ರವೇಶಿಸಿದ್ದರು. ಪ್ರವಾದಿ ಎಷ್ಟು ವಿನಮ್ರತೆಯನ್ನು ತೋರಿದರೆಂದರೆ, ಅವರ ಹಣೆಯು ಒಂಟೆಯ ಬೆನ್ನನ್ನು ತಾಗುತ್ತಿತ್ತು.

## ಅತ್ತಬ್

ಮಕ್ಕಾ ಪ್ರವೇಶಿಸಿದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಕಅಬಾದ ಛಾವಣಿಯ ಮೇಲೆ ನಿಂತು 'ಅಝಾನ್' ನೀಡುವಂತೆ ಬಿಲಾಲ್‌ರಿಗೆ ಅಪ್ಪಣೆ ನೀಡುತ್ತಾರೆ. ಬಿಲಾಲ್ ಕಅಬಾದ ಛಾವಣಿಯ ಮೇಲೆ ನಿಂತು 'ಅಝಾನ್' ನೀಡುವುದನ್ನು ನೋಡಿ, ಇಸ್ಲಾಮಿನ ಕಡು ವೈರಿ ಅತ್ತಬ್ ಬಿನ್ ಅಸಿದ್, ತಮ್ಮ ಪಕ್ಕದಲ್ಲಿ ಅಸೀನರಾಗಿದ್ದ ಗೆಳೆಯ ಹಾರಿಸ್‌ರ ಕಿವಿಯಲ್ಲಿ ಪಿಸುಗುಟ್ಟುತ್ತಾರೆ.

"ಸಧ್ಯ ಈ ಕರಿಯ ಕತ್ತೆಯು ಪವಿತ್ರ ಕಅಬಾದ ಛಾವಣಿಯ ಮೇಲೆ ನಿಂತು ಅರಚುವುದನ್ನು ನೋಡಲು ನನ್ನ ತಂದೆ ಜೀವಂತವಾಗಿಲ್ಲ".

ನಂತರ ಪ್ರವಾದಿ ನಮಾಝ್ ನಿರ್ವಹಿಸಿದರು. ನಮಾಝ್ ಮುಗಿಸಿ ನೆರೆದಿದ್ದ

ಜನರನ್ನು ಉದ್ದೇಶಿಸಿ, 20 ವರ್ಷಗಳ ಕಾಲ ಜನರು ಅವರಿಗೆ ನೀಡಿದ್ದ ಕಿರುಕುಳವನ್ನು, ಚಿತ್ರ ಹಿಂಸೆಯನ್ನು ಅವರಿಗೆ ಜ್ಞಾಪಿಸಿದರು. ಪ್ರವಾದಿ ಇಚ್ಛಿಸಿದ್ದರೆ, ಈ ಎಲ್ಲಾ ಜನರನ್ನು ಖಡ್ಗಕ್ಕೆ ಬಲಿ ನೀಡಬಹುದಾಗಿತ್ತು. ಮಕ್ಕಾ ಪಟ್ಟಣ ಈಗ ಅವರ ವಶದಲ್ಲಿತ್ತು. ಅವರು ತಮ್ಮ ಕೃತ್ಯಗಳಿಂದ ಈ ಶಿಕ್ಷೆಗೆ ಅರ್ಹರೂ ಆಗಿದ್ದರು. ಕುರೈಶರು ಮದೀನಾಕ್ಕೆ ವಲಸೆ ಹೋಗಿದ್ದ ಮುಸ್ಲಿಮರ ಸೊತ್ತುವಿತ್ತಗಳನ್ನು ಸ್ವಾಧೀನ ಪಡಿಸಿದ್ದರು. ಆದುದರಿಂದ ಪ್ರವಾದಿ ಸಹ ಕುರೈಶರ ಸೊತ್ತುವಿತ್ತಗಳನ್ನು ಸ್ವಾಧೀನಪಡಿಸಿಕೊಳ್ಳಬಹುದಿತ್ತು ಅಥವಾ ಕನಿಷ್ಠ ಪಕ್ಷ ಮುಸ್ಲಿಮರ ಆಸ್ತಿಯನ್ನು ಕುರೈಶರಿಂದ ಹಿಂಪಡೆದು ಮುಸ್ಲಿಮರಿಗೆ ಮರಳಿಸಬಹುದಾಗಿತ್ತು. ಆದರೆ ಇದಾವುದನ್ನೂ ಪ್ರವಾದಿ ಮಾಡಲಿಲ್ಲ. ಅವರು ಕೇವಲ ಒಂದು ವಾಕ್ಯವನ್ನು ಘೋಷಿಸಿದರು!

"ನಿಮ್ಮ ಮೇಲೆ ಇಂದು ಯಾವ ಅಪವಾದವೂ ಇಲ್ಲ. ಹೋಗಿ, ನೀವಿಂದು ಸ್ವತಂತ್ರರಾಗಿರುವಿರಿ"

ಪ್ರವಾದಿ ತೋರಿದ ಕರುಣೆ, ಅವರ ಶತ್ರುಗಳನ್ನೇ ದಿಗ್ಮೂಢಗೊಳಿಸಿತ್ತು. ಅನೇಕರು ಪ್ರವಾದಿರನ್ನು ಉಗ್ರವಾಗಿ ವಿರೋಧಿಸಿದ್ದರು, ಅವರನ್ನು ಅಪಮಾನಿಸಿದ್ದರು, ಅವರ ಕುಟುಂಬದ ಸದಸ್ಯರನ್ನು ಹತ್ಯೆ ಮಾಡಿದ್ದರು, ಅವರ ಅನುಯಾಯಿಗಳ ಹತ್ಯೆ ಮಾಡಿದ್ದರು. ಪ್ರವಾದಿ ಇವರೆಲ್ಲರನ್ನೂ ಕ್ಷಮಿಸಿದ್ದರು.

ಬಿಲಾಲ್ ರನ್ನು ಈಗಷ್ಟೇ ಬೈಯ್ಯುತ್ತಿದ್ದ ಅತ್ತಬ್ ಬಿನ್ ಅಸಿದ್, ಪ್ರವಾದಿರ ಘೋಷಣೆಯನ್ನು ಕೇಳಿ, ಕೂಡಲೇ ಎದ್ದು ಪ್ರವಾದಿರಿಗೆ,

"ನಾನು ಅತ್ತಬ್ ಬಿನ್ ಅಸೀದ್ ನಿಮ್ಮ ಶತ್ರು. ಅಲ್ಲಾನಲ್ಲದೇ ಅನ್ಯ ಆರಾಧ್ಯನಿಲ್ಲವೆಂದೂ, ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿರುವರೆಂದು ಸಾಕ್ಷ್ಯವಹಿಸುತ್ತೇನೆ" ಎಂದರು.

## ಸಫ್ವಾನ್

ಇವರು ಸಫ್ವಾನ್ ಬಿನ್ ಉಮಯ್ಯ. ಸ್ವತಃ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರನ್ನು ಹಿಂಸಿಸಿದ್ದರು. ಇತರರನ್ನು ಅದಕ್ಕಾಗಿ ಪ್ರೇರೇಪಿಸಿದ್ದರು. ಅವರು ಮಕ್ಕಾ ವಿಜಯದ ನಂತರ ರಹಸ್ಯವಾಗಿ ಪಲಾಯನ ಮಾಡಿ ಜಿದ್ದಾ ಪಟ್ಟಣ ತಲುಪುತ್ತಾರೆ. ಅವರ ಚಿಕ್ಕಪ್ಪನ ಪುತ್ರ ಉಮೈರ್ ಬಿನ್ ವಹಬ್ ಪ್ರವಾದಿರ ಬಳಿ ಹೋಗಿ, "ಪ್ರವಾದಿ ವರ್ಯರೇ, ಸಫ್ವಾನ್ ತನ್ನ ಗೋತ್ರದ ಸರದಾರರಾಗಿದ್ದಾರೆ. ಅವರು ಇಲ್ಲಿಂದ ಓಡಿ ಹೋಗಿ ಸಮುದ್ರ ಪಾಲಾಗ ಬಯಸುತ್ತಾರೆ. ಆದ್ದರಿಂದ ಅವರನ್ನು ಕ್ಷಮಿಸಿ ಅಭಯ ನೀಡಬೇಕೆಂದು ಕೋರುತ್ತೇನೆ" ಎಂದು ನಿವೇದಿಸುತ್ತಾರೆ. ಪ್ರವಾದಿ ಅವರಿಗೆ ಅಭಯ ನೀಡಿರುವುದಾಗಿ ತಿಳಿಸುತ್ತಾರೆ.

ಉಮೈರ್: "ನನಗೆ ಏನಾದರೂ ಚಿಹ್ನೆಯನ್ನು ನೀಡಿರಿ. ಅದನ್ನು ಅವರಿಗೆ ತೋರಿಸಿ ತಮ್ಮ ಅಭಯದ ಭರವಸೆ ನೀಡುವೆನು. ಅನ್ಯಥಾ ಅವರು ನನ್ನ ಮಾತನ್ನು ನಂಬಲಾರರು".

ಪ್ರವಾದಿ ಚಿಹ್ನೆಯ ರೂಪದಲ್ಲಿ ತಮ್ಮ ಶಿರವಸ್ತ್ರವನ್ನು ಅವರಿಗೆ ನೀಡುತ್ತಾರೆ. ಮುಹಮ್ಮದ್‌ರ ಮುಂದೆ ಹಾಜರಾಗಿ ಸಫ್ವಾನ್ ಈ ರೀತಿ ಹೇಳುತ್ತಾರೆ.

"ತಾವು ನನಗೆ ಅಭಯ ದಯಪಾಲಿಸಿರುವುದಾಗಿ ಉಮೈರ್ ಹೇಳುತ್ತಿದ್ದಾನೆ. ಇದು ನಿಜವೇ?" ಪ್ರವಾದಿ : ಹೌದು ನಿಜ.

ಸಫ್ವಾನ್ ಪ್ರವಾದಿರಿಗೆ ಇಸ್ಲಾಮಿನ ಬಗ್ಗೆ ಯಾವುದಾದರೂ ನಿರ್ಧಾರಕ್ಕೆ ಬರಲು ಎರಡು ತಿಂಗಳ ಕಾಲಾವಕಾಶ ಕೇಳುತ್ತಾರೆ. ಇದಕ್ಕೆ ಉತ್ತರವಾಗಿ ಪ್ರವಾದಿ ಅವರಿಗೆ ನಾಲ್ಕು ತಿಂಗಳ ಕಾಲಾವಧಿ ನೀಡುತ್ತಾರೆ.

## ಇಕ್ರಿಮಾ

ಇವರು ಇಕ್ರಿಮಾ ಬಿನ್ ಅಬೂ ಜಹಲ್. ಇಸ್ಲಾಮ್ ಧರ್ಮದ ಅತಿ ದೊಡ್ಡ ಶತ್ರು ಅಬೂ ಜಹಲ್‌ನ ಪುತ್ರ. ಮಕ್ಕಾ ವಿಜಯದ ನಂತರ ಭಯ ಭೀತರಾಗಿ ಯಮನ್ ಕಡೆಗೆ ಪಲಾಯನ ಮಾಡುತ್ತಾರೆ. ಅವರ ಪತ್ನಿ ಉಮ್ಮು ಹಕೀಮ್ ಮುಸ್ಲಿಮ್ ಆಗಿದ್ದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಲ್ಲಿ ತಮ್ಮ ಪತಿಯ ಅಭಯಕ್ಕಾಗಿ ಯಾಚಿಸುತ್ತಾರೆ. ಪ್ರವಾದಿ  ಯಾವ ಅಳುಕೂ ಇಲ್ಲದೇ ಅವರ ಮನವಿಯನ್ನು ಸ್ವೀಕರಿಸುತ್ತಾರೆ.

ಇಕ್ರಿಮಾ ಬರುತ್ತಿರುವುದನ್ನು ನೋಡಿ ಪ್ರವಾದಿ ತಮ್ಮ ಅನುಯಾಯಿಗಳಿಗೆ ನುಡಿದರು:

"ಇಕ್ರಿಮಾ ಬಿನ್ ಅಬೂ ಜಹಲ್ ಇಸ್ಲಾಮ್ ಸ್ವೀಕರಿಸಲು ಬರುತ್ತಿದ್ದಾರೆ. ಅವರ ತಂದೆಯನ್ನು ತೆಗಳ ಬೇಡಿ. ನಿಧನ ಹೊಂದಿದವರನ್ನು ತೆಗಳಿದರೆ, ಅದು ನಿಧನ ಹೊಂದಿದವರನ್ನು ತಲುಪುವುದಿಲ್ಲ, ಜೀವಂತವಿರುವವರಿಗೆ ಮಾತ್ರ ಅದರಿಂದ ನೋವಾಗುತ್ತದೆ".

ಇಕ್ರಿಮಾ ಹತ್ತಿರ ಬಂದಾಗ, ಪ್ರವಾದಿ ಸಂತೋಷದಿಂದ ಎದ್ದು ರಭಸದಿಂದ ಇಕ್ರಿಮಾರ ಕಡೆಗೆ ಧಾವಿಸಿ,

"ಓ ಸವಾರನೇ, ನಿನ್ನ ಆಗಮನ ಶುಭವಾಗಲಿ" ಎಂದು ನುಡಿದರು.

ಪ್ರವಾದಿರ ರಭಸದ ನಡೆಯಿಂದ ಅವರ ಶಾಲು ನೆಲದ ಮೇಲೆ ಬಿದ್ದಿತು.

ಪ್ರವಾದಿ ತಮ್ಮ ಅನುಯಾಯಿಗಳಿಗೆ ಕೇವಲ ಕ್ಷಮಿಸಲಿಕ್ಕೆ ಅಷ್ಟೇ ಅಲ್ಲ, ಇತರರು ಮಾಡಿದ ತಪ್ಪಿಗೆ ಬೇರೆಯವರನ್ನು ಹೊಣೆಗಾರರನ್ನಾಗಿಸುವುದು ತಪ್ಪು ಎಂದು

ಬೋಧಿಸಿದರು.

> ಸನ್ಮಾರ್ಗ ಸ್ವೀಕರಿಸಿಕೊಳ್ಳುವವನ ಸನ್ಮಾರ್ಗವು ಅವನಿಗೇ ಒಳಿತಾಗಿದೆ ಮತ್ತು ಪಥ ಭ್ರಷ್ಟನ ಪಥ ಭ್ರಷ್ಟತೆಯ ವಿಪತ್ತು ಅವನ ಮೇಲೆಯೇ ಬೀಳುತ್ತದೆ. ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆಯನ್ನು ಹೊರಲಾರನು". (ಪವಿತ್ರ ಕುರ್‌ಆನ್ 17:15)

ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಗೆ ವಿಜಯವು ದೊರಕಿದಾಗ, ಅವರು ಘನತೆ, ಗಾಂಭೀರ್ಯದಿಂದ ವರ್ತಿಸುವರು ಎಂದು ಕುರ್‌ಆನ್ ತಿಳಿಸಿತ್ತು.

> "ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರಧಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ನೀಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು". (ಪವಿತ್ರ ಕುರ್‌ಆನ್ 22:41)

## ಹಿಬಾರ್

ಇದು ಹಿಬಾರ್ ಬಿನ್ ಅಲ್ ಅಸ್ವದ್. ಪ್ರವಾದಿ ಪುತ್ರಿ ಝೈನಬ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಮದೀನಾದ ಕಡೆಗೆ ವಲಸೆ ಹೊರಟಾಗ ಈಟಿಯಿಂದ ಹೊಡೆದು ಒಂಟೆಯ ಮೇಲಿಂದ ನೆಲಕ್ಕುರುಳಿಸಿದ್ದರು. ಆಗ ಝೈನಬ್ ಗರ್ಭವತಿಯಾಗಿದ್ದು ಬಿದ್ದ ಏಟಿನಿಂದ ಗರ್ಭಪಾತವಾಗಿ ತೀವ್ರ ಕಾಯಿಲೆಗೆ ಒಳಗಾಗಿದ್ದರು. ಅದೇ ಕಾಯಿಲೆಯಿಂದ ಅವರು ನಿಧನ ಹೊಂದಿದ್ದರು. ಮಕ್ಕಾ ವಿಜಯದ ದಿನ ಅವರಿಗೆ ಮರಣ ದಂಡನೆ ವಿಧಿಸಲಾಗುತ್ತದೆ. ಅವರು ಭಯಭೀತರಾಗಿ ಮಕ್ಕಾದಲ್ಲಿ ಭೂಗತರಾಗುತ್ತಾರೆ. ಒಂದು ದಿನ ಪಶ್ಚಾತ್ತಾಪ ಪಟ್ಟು ಪ್ರವಾದಿರ ಬಳಿ ಹಾಜರಾಗುತ್ತಾರೆ. ತಮ್ಮ ಅತಿರೇಕಗಳಿಗಾಗಿ ಕ್ಷಮೆಯಾಚಿಸುತ್ತಾರೆ. ಲೋಕಾನುಗ್ರಹಿಯಾದ ಪ್ರವಾದಿ ಆ ಕಠಿಣ ಹೃದಯಿಯನ್ನು ಕ್ಷಮಿಸಿ ಬಿಡುತ್ತಾರೆ. ಹಿಬಾರ್ ಬಿನ್ ಅಲ್ ಅಸ್ವದ್ ಇಸ್ಲಾಮ್ ಸ್ವೀಕರಿಸುತ್ತಾರೆ. ಅವರ ಬಗ್ಗೆ ಯಾವುದೇ ಆಕ್ಷೇಪಾರ್ಹ ಮಾತು ಹೇಳಬಾರದೆಂದು ಪ್ರವಾದಿ ಘೋಷಣೆ ಹೊರಡಿಸುತ್ತಾರೆ.

## ಕಅಬ್

ಇವರು ಕಅಬ್ ಬಿನ್ ಝುಬೈರ್ ಪ್ರಖ್ಯಾತ ಕವಿ. ತಮ್ಮ ಜೀವನದ ಬಹುಪಾಲನ್ನು ಮುಹಮ್ಮದ್‌ರನ್ನು ಲೇವಡಿ ಮಾಡುತ್ತಾ, ನಿಂದಿಸುತ್ತಾ ಕಳೆದಿದ್ದರು. ಮಕ್ಕಾ ವಿಜಯದ ನಂತರ ಅವರಿಗೆ ಮರಣ ದಂಡನೆ ವಿಧಿಸಲಾಗಿತ್ತು. ಅವರೂ ಭೂಗತರಾಗಿದ್ದರು.

ಕೆಲಕಾಲದ ಬಳಿಕ ತಮ್ಮ ಸೋದರರ ವಿನಂತಿಯಂತೆ ಇಸ್ಲಾಮ್ ಸ್ವೀಕರಿಸಿ ಮದೀನಾ ತಲುಪುತ್ತಾರೆ. ಪ್ರವಾದಿ ಅವರನ್ನು ಕ್ಷಮಿಸುತ್ತಾರೆ.

## ವಹ್‌ಶೀ

ಇದು ವಹ್‌ಶೀ ಬಿನ್ ಹರಬ್. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಪ್ರೀತಿಯ ಚಿಕ್ಕಪ್ಪ ಹಂಝ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ಕೊಂದವರು. ಮಕ್ಕಾ ವಿಜಯದ ಬಳಿಕ ಅವರಿಗೂ ಮರಣ ದಂಡನೆ ವಿಧಿಸಲಾಗಿತ್ತು. ಜೀವ ಭಯದಿಂದ ತಾಯಿಫ್‌ಗೆ ಪಲಾಯನ ಮಾಡಿದ್ದರು. ತಾಯಿಫ್‌ನ ಜನರು ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸಲು ಮದೀನಾ ಕಡೆ ಹೊರಟಾಗ ವಹ್‌ಶೀ ಬಿನ್ ಹರಬ್ ಅವರ ಜೊತೆ ಸೇರಿಕೊಂಡರು. ತನ್ನ ಚಿಕ್ಕಪ್ಪನ ಕೊಲೆಗಾರನನ್ನು ಕಂಡು ಪ್ರವಾದಿರ ಕಣ್ಣುಗಳು ಚಿಕ್ಕಪ್ಪನ ನೆನಪಿನಿಂದ ತೇವಗೊಳ್ಳುತ್ತವೆ. ಆದರೂ ವಹ್‌ಶೀಯನ್ನು ಕ್ಷಮಿಸುತ್ತಾ, ಹೀಗೆ ಹೇಳುತ್ತಾರೆ. "ನೀನು ನನ್ನ ಮುಂದೆ ಮಾತ್ರ ಬರಬೇಡ. ನಿನ್ನನ್ನು ಕಂಡರೆ ನನಗೆ ನನ್ನ ಚಿಕ್ಕಪ್ಪನ ನೆನಪಾಗುತ್ತದೆ".

## ಉತ್ಬಾ ಮತ್ತು ಮುಅತಬ್

ಇವರು ಉತ್ಬಾ ಮತ್ತು ಮುಅತಬ್, ಇಸ್ಲಾಮಿನ ಮಹಾ ಶತ್ರು ಅಬೂ ಲಹಬ್‌ನ ಪುತ್ರರು. ಅವರು ತಮ್ಮ ತಂದೆಯ ಆದೇಶದಂತೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪುತ್ರಿಯರಾದ ರುಬಿಯ್ಯಾ ಮತ್ತು ಉಮ್ಮು ಕುಲ್ಸೂಮ್‌ರನ್ನು ವಿಚ್ಛೇದನಗೊಳಿಸಿದ್ದರು. ಮಕ್ಕಾ ವಿಜಯದ ನಂತರ ಹೆದರಿ ಅಡಗಿ ಕುಳಿತುಕೊಳ್ಳುತ್ತಾರೆ. ಆದರೆ ಪ್ರವಾದಿ ಅವರನ್ನು ಕರೆಸಿ, ಅವರಿಬ್ಬರನ್ನೂ ಕ್ಷಮಿಸಿ ಅಭಯ ನೀಡುತ್ತಾರೆ. ಅವರೂ ಇಸ್ಲಾಮ್ ಸ್ವೀಕಾರ ಮಾಡಿಕೊಳ್ಳುತ್ತಾರೆ.

## ಹಿಂದ

### ಅಬೂ ಸುಫ್‌ಯಾನ್‌ರ ಪತ್ನಿ ಹಿಂದಳ ಇಸ್ಲಾಮ್ ಸ್ವೀಕಾರ

ಬದ್ರ್ ಯುದ್ಧದಲ್ಲಿ ಹಿಂದಳ ಪುತ್ರ, ಸಹೋದರ ಮತ್ತು ಚಿಕ್ಕಪ್ಪ ಮುಸ್ಲಿಮ್ ಸೇನೆಯ ಕೈಯಲ್ಲಿ ಹತ್ಯೆಯಾಗಿದ್ದರು. ಇದರ ಪ್ರತೀಕಾರ ಪಡೆಯಲಿಕ್ಕಾಗಿ ಹಿಂದ ದ್ವೇಷದ ಜ್ವಾಲೆಯಲ್ಲಿ ಬೇಯುತ್ತಿದ್ದಳು. ಉಹದ್ ಯುದ್ಧದಲ್ಲಿ ಹಂಝ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ವಧಿಸಲು ವಹ್‌ಷಿರನ್ನು ಹಿಂದ ನೇಮಿಸಿದಳು. ಹಂಝರನ್ನು ವಧಿಸಿದರೆ ವಹ್‌ಷಿಯನ್ನು ಸ್ವತಂತ್ರಗೊಳಿಸುವುದಾಗಿಯೂ, ಬಹಳಷ್ಟು ಉಡುಗೊರೆಗಳನ್ನು

ನೀಡುವ ಆಮಿಷನನ್ನು ಹಿಂದ ಒಡ್ಡಿದರು. ವಹಷಿ ಹಂಝರನ್ನು ಹತ್ಯೆಗೈದಾಗ, ಹಿಂದ ಹಂಝರ ಹೊಟ್ಟೆಯನ್ನು ಬಗೆದು ಕರುಳುಗಳನನು ಹೊರತೆಗೆದು ಜಗಿದಿದ್ದಳು. ಈ ರೀತಿ ಹಿಂದ ತನ್ನ ಪ್ರತೀಕಾರವನ್ನು ಪಡೆದಿದ್ದಳು!

"ಇಲ್ಲಿಯವರೆಗೆ ನೀವು ನಮ್ಮನ್ನು ವಂಚಿಸಿದ್ದೀರಿ. ಈಗ ನನಗೆ ತಿಳಿಯಿತು. ನಿಮಗೆ ಸಹಾಯ ಮಾಡುವ, ರಕ್ಷಿಸುವ ಯಾವ ಶಕ್ತಿಯೂ ನಿಮ್ಮ ಬಳಿ ಇಲ್ಲ" ವೆನ್ನುತ್ತ ಒಂದು ಕಟ್ಟಿಗೆಯನ್ನು ತೆಗೆದುಕೊಂಡು ಮನೆಯಲ್ಲಿದ್ದ ಎಲ್ಲಾ ವಿಗ್ರಹಗಳನ್ನು ಪುಡಿ ಪುಡಿ ಮಾಡುತ್ತಾಳೆ.

ಉಹದ್ ಯುದ್ಧದಲ್ಲಿ ಹಂಝರ ಮೃತದೇಹದೊಂದಿಗೆ ತಾನು ಮಾಡಿದ ಕುಕೃತ್ಯಕ್ಕಾಗಿ ಮುಹಮ್ಮದ್ ತನ್ನನ್ನು ಶಿಕ್ಷಿಸಬಹುದೆಂಬ ಭಯ ಹಿಂದಗೆ ವ್ಯಾಪಿಸಿತು. ಹಿಂದ ಮುಖದ ಮೇಲೆ ಚಾದರವನ್ನು ಹಾಕಿಕೊಂಡು ಇತರ ಮಹಿಳೆಯರ ಗುಂಪಿನಲ್ಲಿ ಗುಟ್ಟಾಗಿ ಪ್ರವಾದಿರ ಎದುರು ಹಾಜರಾಗಿ ಇಸ್ಲಾಮ್ ಸ್ವೀಕರಿಸುತ್ತಾಳೆ.

ಪ್ರವಾದಿ ಮಹಿಳೆಯರನ್ನು ಉದ್ದೇಶಿಸಿ, "ಏಕೈಕ ಆರಾಧ್ಯ ಅಲ್ಲಾಹನ ಆರಾಧನೆ ಮಾಡುವ, ವಿಗ್ರಹಗಳನ್ನು ತ್ಯಜಿಸದೇ ಇರುವ, ಬಹುದೇವಾರಾಧನೆ ಮಾಡದಿರುವ ಪ್ರತಿಜ್ಞೆ ಮಾಡಿರಿ"ಎಂದು ನುಡಿಯುತ್ತಾರೆ.

ಹಿಂದ ಉಚ್ಚ ಸ್ವರದಲ್ಲಿ, "ನಾವು ಇಲ್ಲಿಯವರೆಗೆ ಮೋಸಗೊಂಡಿದ್ದೆವು. ಈ ವಿಗ್ರಹಗಳಿಗೆ ಸಹಾಯವನ್ನು ಮಾಡುವ, ರಕ್ಷಿಸುವ ಸಾಮರ್ಥ್ಯವಿಲ್ಲವೆಂಬುದು ನಮಗೆ ಈಗ ಮನದಟ್ಟಾಗಿದೆ." ನಾವು ಏಕೈಕ ಆರಾಧ್ಯ ಅಲ್ಲಾಹನಲ್ಲಿ ವಿಶ್ವಾಸವಿರಿಸುತ್ತೇವೆ ಮತ್ತು ನೀವು ಅಲ್ಲಾಹನ ಅಂತಿಮ ಪ್ರವಾದಿಯಾಗಿರುವವೆಂದು ಒಪ್ಪಿಕೊಳ್ಳುತ್ತೇನೆ" ಎನ್ನುತ್ತಾರೆ.

ಪ್ರವಾದಿ ಮಕ್ಕಾ ವಿಜಯದ ನಂತರ ಯಾರ ಮೇಲೂ ಪ್ರತೀಕಾರವೆಸಗಲಿಲ್ಲ. 13 ವರ್ಷಗಳ ಕುರೈಶರ ಹಿಂಸೆಯನ್ನು, ದೌರ್ಜನ್ಯವನ್ನು ಕಡೆಗಣಿಸಿ ಎಲ್ಲಾ ಜನರಿಗೂ ಸಾರ್ವತ್ರಿಕ ಕ್ಷಮಾದಾನವನ್ನು ನೀಡಿದರು. ಮಕ್ಕಾದ ಮೇಲೆ ವಿಜಯ ಸಾಧಿಸಿದಾಗಲೂ ದರ್ಪ, ಅಹಂಕಾರ ತೋರಿರಲಿಲ್ಲ. ವಿಜಯವನ್ನು ದಯಪಾಲಿಸುವುದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆಯಿಂದ ಅವರ ಶಿರಬಾಗಿತ್ತು. ಅಲ್ಲಾಹನಿಗೆ ಸ್ತುತಿ ಸ್ತೋತ್ರಗಳನ್ನು ನಿರಂತರ ಸಲ್ಲಿಸುತ್ತಿದ್ದರು. ಜಗತ್ತು ಎಂದೂ ಕಂಡರಿಯದ ಕರುಣೆಯನ್ನು ಪ್ರವಾದಿ ಮಕ್ಕಾ ವಿಜಯದ ದಿನದಂದು ತೋರ್ಪಡಿಸಿದ್ದರು.

☆

# ಸಮರ್ಥ ನಾಯಕತ್ವ

ಆಕ್ರಮಣಕಾರರು ಸಾಮಾನ್ಯವಾಗಿ ಕ್ರೂರಿಗಳಾಗಿರುತ್ತಾರೆ. ಆದರೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ನಡೆದುಕೊಂಡರು.

ಕುರೈಶರು ಎರಡು ದಶಕಗಳಿಗಿಂತಲೂ ಹೆಚ್ಚಿನ ಅವಧಿಗೆ ಪ್ರವಾದಿ ಮತ್ತು ಅವರ ಸಂದೇಶವನ್ನು ವಿರೋಧಿಸಿದ್ದರು. ಪ್ರವಾದಿರನ್ನು ಹೀಯಾಳಿಸಲಾಯಿತು. ಅವರ ಸಂಗಾತಿಗಳಿಗೆ ಚಿತ್ರ ಹಿಂಸೆ ನೀಡಲಾಗಿತ್ತು. ಪ್ರವಾದಿ ಮತ್ತು ಅವರ ಸಂಗಾತಿಗಳ ಕೊಲೆಯ ಪ್ರಯತ್ನ ನಡೆದಿತ್ತು. ಮೂರು ವರ್ಷಗಳವರೆಗೆ ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿತ್ತು. ಕುರೈಶರು ಇಸ್ಲಾಮನ್ನು ಅಳಿಸಲು ಎಲ್ಲಾ ಕುತಂತ್ರಗಳನ್ನು ಪ್ರಯೋಗಿಸಿದ್ದರು. ಆದರೆ ಮೂರು ಯುದ್ಧಗಳು ಮತ್ತು ಮಕ್ಕಾದ ವಿಜಯದ ನಂತರ ಕುರೈಶರು ಅಂತಿಮವಾಗಿ ಸೋಲನ್ನಪ್ಪಿದ್ದರು.

ಮುಸ್ಲಿಮರ ಮೇಲೆ ಎಸೆಗಲಾಗಿದ್ದ ದೌರ್ಜನ್ಯಗಳಿಗೆ ಪ್ರತೀಕಾರ ಪಡೆಯುವ ಸುವರ್ಣ ಅವಕಾಶ ಪ್ರವಾದಿರಿಗೆ ಲಭಿಸಿತ್ತು. ಆದರೆ ಪ್ರವಾದಿ ಎಲ್ಲಾರಿಗೂ ಸಾರ್ವತ್ರಿಕ ಕ್ಷಮಾದಾನ ನೀಡಿದ್ದರು. ಮುಸ್ಲಿಮರು ಮದೀನಾ ವಲಸೆ ಹೋಗಿದ್ದ ಸಂದರ್ಭದಲ್ಲಿ ಕುರೈಶರು ಅವರ ಆಸ್ತಿ, ಪಾಸ್ತಿಗಳನ್ನು ಆಕ್ರಮಿಸಿಕೊಂಡಿದ್ದರು. ಪ್ರವಾದಿ ಕುರೈಶರಿಗೆ ಈ ಸ್ವತ್ತಗಳನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಳ್ಳಲು ಬಿಟ್ಟರು. ಇಷ್ಟೇ ಅಲ್ಲ, ಕುರೈಶರು ಕಅಬಾದ ನಿರ್ವಹಣೆಯ, ಹಜ್‌ನ ವೇಳೆಯಲ್ಲಿ ಹೊಂದುತ್ತಿದ್ದ ವಿವಿಧ ಹೊಣೆಗಾರಿಕೆಗಳನ್ನು ಮುಂದುವರಿಸಲು ಪ್ರವಾದಿ ರಿಯಾಯಿತಿ ನೀಡಿದರು.

ಮಕ್ಕಾದ ವಿಜಯದ ನಂತರ ಪ್ರವಾದಿ ಶಾಂತಿಯ ಮತ್ತು ಕ್ಷಮೆಯ ಧೋರಣೆಯನ್ನು ಅನುಸರಿಸಿದರು. ಔದಾರ್ಯ ತೋರುವುದರಿಂದ ಆಗತಾನೇ ಮಕ್ಕಾದಲ್ಲಿ ಸ್ಥಾಪಿತವಾಗಿದ್ದ ಇಸ್ಲಾಮೀ ಸರಕಾರಕ್ಕೆ ಭದ್ರತೆ ದೊರಕುವುದೆಂದು ಅವರು

ತಿಳಿದಿದ್ದರು. ಕುರೈಶರನ್ನು ಶಿಕ್ಷಿಸಿ, ಅವರ ಮೇಲೆ ದಬ್ಬಾಳಿಕೆ ನಡೆಸಿದ್ದರೆ, ಪ್ರತೀಕಾರದ ಆವೃತ್ತಿ ಮುಂದುವರೆಯುತ್ತಿತ್ತು. ಅವರು ಜನರ ಹೃದಯಗಳಲ್ಲಿ ಪರಿವರ್ತನೆಯನ್ನು ಬಯಸಿದ್ದರು. ಇದು ಕುರೈಶರ ಹಿಂದಿನ ತಪ್ಪುಗಳನ್ನು ಕ್ಷಮಿಸುವುದರಿಂದ ಮಾತ್ರ ಸಾಧ್ಯವಿತ್ತು.

ಕುರೈಶರು ಮಕ್ಕಾದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿದವರಾಗಿದ್ದರು. ಅವರು ಚುರುಕು ಬುದ್ಧಿ ಉಳ್ಳವರೂ, ವ್ಯವಹಾರ ಚತುರರೂ, ಸಾಮರ್ಥ್ಯವುಳ್ಳ ಜನರಾಗಿದ್ದರು. ಆಡಳಿತ ನಡೆಸಿದ ಅನುಭವ ಅವರಿಗೆ ಇದ್ದಿತು. ಅವರ ಶ್ರೇಷ್ಠತೆಯನ್ನು ಸುತ್ತಮುತ್ತಲಿನ, ಮತ್ತು ದೂರದೇಶಗಳ ಜನರೂ ಅಂಗೀಕರಿಸಿದ್ದರು. ಪ್ರವಾದಿ ಕುರೈಶರ ಈ ಗುಣಗಳನ್ನು ಅರಿತಿದ್ದರು. ಅವರನ್ನು ಮೂಲೆಗುಂಪಾಗಿಸುವುದಕ್ಕಿಂತ, ಅವರ ಸಾಮರ್ಥ್ಯಗಳನ್ನು ಸಮಾಜದ ಬದಲಾವಣೆಯಲ್ಲಿ ಸಮರ್ಥವಾಗಿ ಬಳಸಿಕೊಳ್ಳ ಬಹುದಾಗಿತ್ತು. ಅರೇಬಿಯಾ ಪ್ರದೇಶದಲ್ಲಿ ನಾಯಕತ್ವ ವಹಿಸಲು ಅವರು ಅತ್ಯಂತ ಸಮರ್ಥರಾಗಿರುವೆಂಬ ಅರಿವು ಪ್ರವಾದಿರಿಗೆ ಇದ್ದಿತು. ಇಲ್ಲಿಯವರೆಗೂ ಕುರೈಶರು ಅಜ್ಞಾನ ಕಾಲದ ನಂಬಿಕೆಗಳನ್ನು, ಆಚರಣೆಗಳನ್ನು ರಕ್ಷಿಸಲು ಹೋರಾಡಿದ್ದರು. ಅವರ ಘನತೆ, ಗೌರವಗಳನ್ನು ಕಾಪಾಡಿದಲ್ಲಿ, ಇಸ್ಲಾಮಿನ ರಕ್ಷಣೆಗಾಗಿ ಮತ್ತು ಇಸ್ಲಾಮಿನ ಸಂದೇಶವನ್ನು ದೂರ ದೂರದವರೆಗೂ ಹರಡಲು ಅವರು ತಮ್ಮ ಸಾಮರ್ಥ್ಯಗಳನ್ನು ಬಳಸುವವರಾಗಿದ್ದರು.

ಇಸ್ಲಾಮಿನ ಬುನಾದಿ ಸತ್ಯ ವಿಶ್ವಾಸ, ಮತ್ತು ದೇವ ಭಯವಾಗಿದ್ದರೂ ಇಸ್ಲಾಮಿ ನಾಯಕರಿಗೆ ದೂರದೃಷ್ಟಿತ್ವ, ವ್ಯವಹಾರ ಜ್ಞಾನ, ಚತುರತೆ ಮತ್ತು ಆಡಳಿತದ ಅನುಭವದ ಅಗತ್ಯತೆ ಇತ್ತು. ಕುರೈಶರನ್ನು ಅಪಮಾನಿಸಿ, ಅವರನ್ನು ಸದೆ ಬಡಿದಿದ್ದರೆ ಅವರು ಯಾವ ಪ್ರಯೋಜನಕ್ಕೂ ಬರುತ್ತಿರಲಿಲ್ಲ. ಮಕ್ಕಾದ ವಿಜಯದ ದಿನ ಪ್ರವಾದಿ ತೋರಿದ ಔದಾರ್ಯ ಕುರೈಶರ ಹೃದಯಗಳಲ್ಲಿ ಇಸ್ಲಾಮ್ ಪ್ರವೇಶಿಸುವಂತೆ ಮಾಡಿತ್ತು. ಪ್ರವಾದಿರ ಕ್ರಮ ಇಸ್ಲಾಮಿನ ಕಡು ವೈರಿಗಳನ್ನು ಇಸ್ಲಾಮಿನ ಪರಮ ಮಿತ್ರರನ್ನಾಗಿಸಿತು.

# ಓ ಅಲ್ಲಾಹ್! ನಾನು ನಿರ್ದೋಷಿಯಾಗಿದ್ದೇನೆ

ಮಕ್ಕಾ ವಿಜಯದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಕ್ಕಾದಲ್ಲಿ 19 ದಿನಗಳವರೆಗೆ ತಂಗಿದ್ದರು. ಮದೀನಾ ಹಿಂತೆರಳುವ ಮೊದಲು ಮಕ್ಕಾದ ಸುತ್ತಮುತ್ತ ರಕ್ಷಣೆಯನ್ನು ಭದ್ರಗೊಳಿಸಲಿಕ್ಕಾಗಿ ಪ್ರವಾದಿ ಸೇನಾ ತುಕಡಿಗಳನ್ನು ರವಾನಿಸಿದರು. ಖಾಲಿದ್ ಬಿನ್ ವಲೀದ್‌ರನ್ನೂ ಇಂತಹದೇ ಒಂದು ತುಕಡಿಯ ನಾಯಕರಾಗಿ ಮಾಡಿ ಬನೂ ಜಾದಿಮಾಃ ಗೋತ್ರದ ಬಳಿಗೆ ರವಾನಿಸಲಾಗಿತ್ತು. ಖಾಲಿದ್ ಬಿನ್ ವಲೀದ್, ಅಬ್ದುರ್ ರೆಹ್ಮಾನ್ ಬಿನ್ ಔಫ್‌ರ ಸಲಹೆಯ ಹೊರತಾಗಿಯೂ ಕೆಲ ಕೈದಿಗಳನ್ನು ವಧಿಸಿದರು. ಅಬ್ದುಲ್ ರೆಹ್ಮಾನ್ ಬಿನ್ ಔಫ್‌ರು ಖಾಲಿದ್‌ರಿಗೆ, "ನೀವು ಕೈದಿಗಳನ್ನು ವಧಿಸುತ್ತಿರುವುದು ಅಲ್ಲಾಹನಿಗಾಗಿ ಅಲ್ಲ. ಇತರ ಕಾರಣಗಳಿಗಾಗಿ" ಎಂದು ಹೇಳಿದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಿಗೆ ಈ ಘಟನೆಯ ವರದಿ ತಲುಪಿದಾಗ ಬಹಳ ಕೋಪಗೊಂಡರು. ವಧಿಸಲ್ಪಟ್ಟ ಕೈದಿಗಳ ಪರವಾಗಿ ರಕ್ತ ಪರಿಹಾರವನ್ನು ನೀಡಲು ಪ್ರವಾದಿ ನಿರ್ಧರಿಸಿದರು. ಖಾಲಿದ್ ಬಿನ್ ವಲೀದ್‌ರ ಕ್ರಮವನ್ನು ಖಂಡಿಸಿದರು. ಇಸ್ಲಾಮಿನ ಹೆಸರಿನಲ್ಲಿ ಅಮಾಯಕ ಜನರ ಹತ್ಯೆ ಮಾಡುವುದು, ಜನರಲ್ಲಿ ಭಯ ಹುಟ್ಟಿಸುವುದು ಮೊದಲಾದ ಕಾರ್ಯಗಳು ಎಂದಿಗೂ ಸಮರ್ಥನೀಯವಲ್ಲ ಎಂದರು.

ಜನರು ಸಹಸ್ರಾರು ಸಂಖ್ಯೆಯಲ್ಲಿ ಇಸ್ಲಾಮ್ ಸ್ವೀಕರಿಸತೊಡಗಿದರು. ಈ ಜನರ ಧಾರ್ಮಿಕ ತರಬೇತಿಗೆ ಪ್ರವಾದಿ ಮೊದಲ ಪ್ರಾಶಸ್ತ್ಯ ನೀಡಿದರು ಅವರಿಗೆ ಇಸ್ಲಾಮಿನ ಮೂಲಭೂತತತ್ವಗಳನ್ನು ಪರಿಚಯಿಸಬೇಕಾಗಿತ್ತು.

ಮಕ್ಕಾ ಮತ್ತು ಮದೀನಾದ ಮುಸ್ಲಿಮರ ತರಬೇತಿ ಕಷ್ಟಕರ ಕೆಲಸವಾಗಿತ್ತು. ಇದಕ್ಕೆ ಸಮಯಾವಕಾಶವೂ ಬೇಕಾಗಿತ್ತು. ವರ್ಷಾನುವರ್ಷಗಳಿಂದ ರೂಢಿಸಿಕೊಂಡಿದ್ದ ನಡವಳಿಕೆಗಳು ಮತ್ತು ಭಾವನೆಗಳು ಇಸ್ಲಾಮಿನ ಬೋಧನೆಗಳಿಗೆ ವಿರುದ್ಧವಾಗಿ ಅವರಲ್ಲಿ ಕಂಡು ಬರುತ್ತಿದ್ದವು. ಇದಲ್ಲದೇ ಮಕ್ಕಾದಲ್ಲಿ ಜನರು ಗುಂಪು, ಗುಂಪುಗಳಲ್ಲಿ ಇಸ್ಲಾಮ್ ಸ್ವೀಕರಿಸುತ್ತಿದ್ದರು. ಇವರ ಧಾರ್ಮಿಕ ತರಬೇತಿ ಶಿಕ್ಷಣಕ್ಕಾಗಿ ವ್ಯವಸ್ಥೆ ಮಾಡಬೇಕಾಗಿತ್ತು. ಪ್ರವಾದಿ ಮಆಝ್ ಬಿನ್ ಜಬಲ್‌ರಿಗೆ ಈ ಬಗ್ಗೆ ಆದ್ಯತೆ ನೀಡಲು ಸೂಚಿಸಿದರು. ನವ ಮುಸ್ಲಿಮರಿಗೆ ಇಸ್ಲಾಮಿ ಬೋಧನೆಗಳನ್ನು, ತತ್ವಗಳನ್ನು ಕಲಿಸಬೇಕಾಗಿತ್ತು. ಇಸ್ಲಾಮ್ ವಿರೋಧದ ಎದುರು ಮುಸ್ಲಿಮರನ್ನು ಒಗ್ಗೂಡಿಸುವುದು ಸುಲಭದ ಕೆಲಸವಾಗಿತ್ತು. ಆದರೆ ಸತ್ಯ ವಿಶ್ವಾಸ, ಪ್ರೀತಿ, ಪ್ರೇಮ, ಗೌರವ ಮೊದಲಾದವುಗಳ ಆಧಾರದ ಮೇಲೆ ಐಕ್ಯತೆ ಸಾಧಿಸುವುದು ಕಷ್ಟಕರ ಕಾರ್ಯವಾಗಿತ್ತು.

# ಅತ್ಯುತ್ತಮ ಸುಧಾರಕ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸ್ತ್ರೀ, ಪುರುಷರಿಬ್ಬರಿಗೂ ವಾಕ್ ಸ್ವಾತಂತ್ರ್ಯವನ್ನು ನೀಡಿದ್ದರು. ಸ್ವತಂತ್ರವಾಗಿ ಯೋಚಿಸಲಿಕ್ಕೆ ಮತ್ತು ತಮಗೆ ಸರಿ ಅನಿಸಿದುದನ್ನು ನಿರ್ಭಯದಿಂದ ವ್ಯಕ್ತಪಡಿಸುವ ತರಬೇತಿಯನ್ನು ನೀಡಿದ್ದರು.

ಪ್ರವಾದಿತ್ವದ ಹೊಣೆಗಾರಿಕೆಯಲ್ಲಿ ಜನರ ಸಂಸ್ಕರಣೆಯೂ ಸೇರಿದೆ. ಪ್ರವಾದಿ ಈ ಹೊಣೆಗಾರಿಕೆಯನ್ನು ಅತ್ಯುತ್ತಮ ರೀತಿಯಲ್ಲಿ ನಿಭಾಯಿಸಿದ್ದರು. ಪ್ರವಾದಿ ತಮ್ಮ ಅನುಯಾಯಿಗಳ ಜೀವನದ ಎಲ್ಲಾ ರಂಗಗಳಲ್ಲಿಯೂ ಬದಲಾವಣೆ ತಂದಿದ್ದರು. ತಮ್ಮ ಅನುಯಾಯಿಗಳಲ್ಲಿ ಪರಿವರ್ತನೆ ತಂದು ಅವರನ್ನು ಭೂಮಿಯ ಮೇಲೆ ಅತ್ಯುತ್ತಮ ಮಾದರಿಯನ್ನಾಗಿಸಿದ್ದರು. ಮುಹಮ್ಮದ್‌ರ ಶೈಲಿಯು ವಿಶಿಷ್ಟವಾದದ್ದು, ಅನುಸರಣಾ ಯೋಗ್ಯವೂ ಮತ್ತು ಮನುಷ್ಯ ಸ್ವಭಾವಕ್ಕೆ ತಕ್ಕುದಾಗಿತ್ತು.

# ರಾಜರು ಮತ್ತು ಜನ ಸಾಮಾನ್ಯರೊಂದಿಗೆ ಏಕ ಸ್ವರೂಪದ ವರ್ತನೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮನ್ನು ಭೇಟಿ ಮಾಡಲು ಬರುತ್ತಿದ್ದ ವಿವಿಧ ದೇಶಗಳ ರಾಜರು, ಕುಲೀನ ಮನೆತನಗಳ ಜನರು, ಜನಸಾಮಾನ್ಯರೊಂದಿಗೆ ಏಕಸ್ವರೂಪದ ವರ್ತನೆಯನ್ನು ತೋರುತ್ತಿದ್ದರು. ಪರ್ಷಿಯನ್, ರೋಮನ್, ಗ್ರೀಕ್, ಈಜಿಪ್ಟ್, ಸುಡಾನ್, ಇಥಿಯೋಪಿಯಾ ಮೊದಲಾದ ದೇಶದ ಜನರು, ಪ್ರತಿನಿಧಿಗಳೊಂದಿಗೆ ಪ್ರವಾದಿ ಸಮಾನವಾಗಿ ನಡೆದುಕೊಳ್ಳುತ್ತಿದ್ದರು. ಸಲ್ಮಾನ್ ಫಾರ್ಸಿ, ಸುಹೈಬ್ ರೂಮಿ, ಉಸ್ಮಾನ್ ನಜ್ದ, ಜಂದಾಲ್‌ನ ರಾಜ, ಹಾಮಿರ್‌ನ ಸಾಮ್ರಾಟ ಯಮನ್‌ನ ಮುಖ್ಯ ಅರ್ಚಕ, ಎಲ್ಲಾರೊಂದಿಗೆ ಪ್ರವಾದಿ ಸರಿಸಮಾನ

ಧೋರಣೆಯನ್ನು ಹೊಂದಿದ್ದರು. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬುನಾದಿಗಳ ಮೇಲೆ ಯಾವುದೇ ರೀತಿಯ ತಾರತಮ್ಯವನ್ನು ಅವರು ತೋರುತ್ತಿರಲಿಲ್ಲ. ಅವರ ಸಭೆಗಳಲ್ಲಿ ಯಾರೇ ಬಂದರೂ, ಸಮಾನವಾಗಿ ಪ್ರೀತಿಯಿಂದ ವರ್ತಿಸುತ್ತಿದ್ದರು.

## ನೈರ್ಮಲ್ಯವು ಅರ್ಧ ವಿಶ್ವಾಸವಾಗಿದೆ

ಆಯಿಷಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ.

“ಇಸ್ಲಾಮ್ ಧರ್ಮವು ನೈರ್ಮಲ್ಯದ ಬುನಾದಿಯ ಮೇಲೆ ನೆಲೆ ನಿಂತಿದೆ.”

ಪ್ರವಾದಿ ಸದಾ ಪರಿಶುದ್ಧರಾಗಿರುತ್ತಿದ್ದರು ಮತ್ತು ಪರಿಶುದ್ಧತೆಯನ್ನು ಇಷ್ಟಪಡುತ್ತಿದ್ದರು. ತಮ್ಮ ಸಂಗಾತಿಗಳನ್ನು ಸ್ವಚ್ಛತೆ, ಶುಭ್ರತೆ ಪಾಲಿಸುವಂತೆ ಉಪದೇಶಿಸುತ್ತಿದ್ದರು.

ಅಬ್ದುಲ್ಲಾ ಬಿನ್ ಉಮರ್ ವರದಿ ಮಾಡಿರುವರು: ‘ನಾನು ಪ್ರವಾದಿರಲ್ಲಿ ವಿಚಾರಿಸಿದೆ; ಓ ಪ್ರವಾದಿಗಳೇ! ನಾನು ಉತ್ತಮ ಉಡುಪುಗಳನ್ನು ಧರಿಸಿದರೆ ಅದು ಆಡಂಬರದ ಮತ್ತು ಅಹಂಕಾರದ ಪ್ರತೀಕವಾಗುವುದೇ?

ಪ್ರವಾದಿ ಉತ್ತರಿಸಿದರು: “ಉತ್ತಮ ಉಡುಪು ಧರಿಸುವುದರಿಂದ ಅಲ್ಲಾಹನು ನೀಡಿರುವ ಅನುಗ್ರಹಗಳನ್ನು ಪ್ರಕಟಿಸಿದಂತಾಗಿ, ಅಲ್ಲಾಹ್ ಇದರಿಂದ ಸುಪ್ರೀತನಾಗುತ್ತಾನೆ”.

ಅಬ್ದುಲ್ಲಾ ಬಿನ್ ಉಮರ್ ಪ್ರವಾದಿ ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ:

“ನಮಾಝ್ ನಿರ್ವಹಿಸುವಾಗ ಅತ್ಯುತ್ತಮ ಉಡುಪು ಧರಿಸಿರಿ. ಅಲ್ಲಾಹನ ಎದುರು ಅತ್ಯುತ್ತಮ ಉಡುಪಿನಲ್ಲಿ ಹಾಜರಾಗಲು ಅಲ್ಲಾಹ್ ಹೆಚ್ಚು ಅರ್ಹನಾಗಿದ್ದಾನೆ”.

ಮೇಲಿನ ಪ್ರವಾದಿ ವಚನಗಳಿಂದ, ಉತ್ತಮ ಪೋಷಾಕುಗಳನ್ನು ಧರಿಸುವುದರಿಂದ ಆಡಂಬರ ವ್ಯಕ್ತವಾಗದೇ ಅಲ್ಲಾಹನ ಅನುಗ್ರಹಗಳನ್ನು ಪ್ರಕಟಿಸಿದಂತಾಗುತ್ತದೆ ಎಂಬುದು ತಿಳಿದು ಬರುತ್ತದೆ. ಇದು ಅಹಂಕಾರದ ಪ್ರತೀಕವೂ ಅಲ್ಲ. ಇತರರ ಹಕ್ಕುಗಳನ್ನು ದಮನಿಸುವುದು, ಇತರ ಜನರನ್ನು ಹೀನಾಯವಾಗಿ ಕಾಣುವುದು ಅಹಂಕಾರದ ದ್ಯೋತಕವಾಗಿದೆ.

# ಅಲ್ಲಾಹ್ ಸುಂದರನಾಗಿದ್ದು ಸೌಂದರ್ಯವನ್ನು ಇಷ್ಟಪಡುತ್ತಾನೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು:

"ಅಲ್ಲಾಹ್ ಸುಂದರನಾಗಿದ್ದು, ಸೌಂದರ್ಯವನ್ನು ಇಷ್ಟಪಡುತ್ತಾನೆ".

ನಮ್ಮ ಕಾರ್ಯಗಳಿಂದ ನಾವು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸುಂದರತೆಯನ್ನು ಪಸರಿಸಬೇಕು.

# ಸಭೆಗಳಲ್ಲಿ

ಪ್ರವಾದಿ ಮುಹಮ್ಮದ್‌ರ ಸಭೆಗಳಲ್ಲಿ ಯಾರಾದರೂ ಪ್ರಶ್ನೆಯನ್ನು ಕೇಳಿದರೆ, ಪ್ರಶ್ನಿಸಿದಾತನು ಸಂತೃಪ್ತಿ ಹೊಂದುವವರೆಗೆ, ಪ್ರವಾದಿ ಇತರರ ಪ್ರಶ್ನೆಗಳನ್ನು ಉತ್ತರಿಸುತ್ತಿರಲಿಲ್ಲ. ಒಮ್ಮೆ ಒಂದು ಸಭೆಯಲ್ಲಿ ಪ್ರವಾದಿ ಪ್ರವಚನವನ್ನು ನೀಡುತ್ತಿದ್ದರು. ಸಭೆಯ ಶಿಷ್ಟಾಚಾರ ಅರಿಯದ ಅರಬಿಯೋರ್ವನು ಸಭೆಗೆ ಆಗಮಿಸಿ "ಪ್ರಳಯದ ದಿನ ಎಂದು ಸಂಭವಿಸುವುದು?" ಎಂದು ಪ್ರಶ್ನಿಸಿದನು. ಪ್ರವಾದಿ ಪ್ರವಚನ ಪೂರ್ಣಗೊಳಿಸಿದ ನಂತರ, ಯಾರು ಪ್ರಶ್ನೆಯನ್ನು ಕೇಳಿದುದು ಎಂದು ವಿಚಾರಿಸಿದರು. ಅರಬಿಯವನು, ಪ್ರವಾದಿಗಳೇ ನಾನು ಇಲ್ಲಿದ್ದೇನೆ ಎಂದನು. ಪ್ರವಾದಿ ಅವನನ್ನು ಉದ್ದೇಶಿಸಿ ನುಡಿದರು.

"ಜನರು ಯಾವಾಗ ನಂಬಿಕೆಯನ್ನು ಕಳೆದುಕೊಳ್ಳುವರೋ ಅಂದು ಪ್ರಳಯ ಸಂಭವಿಸುವುದು" ಎಂದರು. ಅರಬಿಯವನು "ನಂಬಿಕೆಯನ್ನು ಜನರು ಹೇಗೆ ಕಳೆದುಕೊಳ್ಳುವರು? ಎಂದು ಪ್ರಶ್ನಿಸಿದನು. ಪ್ರವಾದಿ "ಸರ್ಕಾರವು ಅಸಮರ್ಥ ಆಡಳಿತಗಾರರ ಕೈಯಲ್ಲಿ ಬಂದಾಗ" ಎಂದು ಉತ್ತರಿಸಿದರು. ಪ್ರವಾದಿ ಮುಂದುವರೆದು, "ಜನರ ಚಾರಿತ್ರ್ಯಕ್ಕೆ ಅನುಗುಣವಾಗಿ ಆಡಳಿತಗಾರರಿರುತ್ತಾರೆ" ಎಂದರು.

# ಬಡವರು ಮತ್ತು ಶ್ರೀಮಂತರು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಬಡ ಜನರಿಗೆ ಸಂಪಾದನೆಯ ಮಾರ್ಗವಾಗಿ ಕೋಳಿ ಸಾಕಣಿಕೆಯನ್ನು ಮತ್ತು ಶ್ರೀಮಂತ ಜನರಿಗೆ ಕುರಿ, ಆಡು ಮತ್ತು ಒಂಟೆ ಸಾಕಾಣಿಕೆ ಮಾಡುವಂತೆ ಉಪದೇಶಿಸುತ್ತಿದ್ದರು. ಮತ್ತೊಂದು ಅರ್ಥದಲ್ಲಿ ಇದು ಶ್ರೀಮಂತ ವರ್ಗಕ್ಕೆ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಹೆಚ್ಚು ಬಂಡವಾಳದ ಅವಶ್ಯಕತೆವಿರುವ ವ್ಯಾಪಾರಗಳನ್ನು ಕೈಗೊಳ್ಳಲು ಸೂಚನೆ ಇದ್ದು, ಬಡವರು ಸುಲಭವಾಗಿ

ಕೈಗೊಳ್ಳಬಹುದಾದ ಕಸುಬುಗಳಿಗೆ ಶ್ರೀಮಂತ ವರ್ಗ ಕೈ ಹಾಕಬಾರದೆಂಬ ಸೂಚ್ಯ ಸೂಚನೆಯಾಗಿತ್ತು. ಶ್ರೀಮಂತ ಜನರು ಸಣ್ಣ ಕಸುಬುಗಳಿಗೆ ಕೈ ಹಾಕಿದರೆ ಬಡ ಜನರಿಗೆ ಸಂಪಾದನೆಗೆ ಯಾವುದೇ ಮಾರ್ಗೋಪಾಯಗಳು ಇಲ್ಲದಂತಾಗುತ್ತದೆ ಎಂದು ಪ್ರವಾದಿರ ಇಂಗಿತವಾಗಿತ್ತು.

ಸಮಾಜದ ಸ್ವಸ್ತ ಪ್ರಗತಿಗಾಗಿ, ಆರೋಗ್ಯಕರ ಬೆಳವಣಿಗಾಗಿ, ವಿವಿಧ ಜನರ ನಡುವೆ ಸಮಾನತೆಯನ್ನು ಕಾಪಾಡುವುದು ಅವಶ್ಯಕ. ಸಮಾಜದ ಸ್ಥಿತಿವಂತರು, ಎಲ್ಲಾ ಸಂಪನ್ಮೂಲಗಳನ್ನು ತಮ್ಮ ಹತೋಟಿಯಲ್ಲಿಯೇ ಇಟ್ಟುಕೊಂಡರೆ, ಸಣ್ಣ ಉದ್ದಿಮೆಗಳನ್ನು ತಮ್ಮದಾಗಿಸಿಕೊಂಡರೆ, ಸಣ್ಣ ಉದ್ದಿಮೆದಾರರಿಗೆ ಜೀವನ ಸಾಗಿಸುವುದೇ ದುರ್ಲಭವಾಗುತ್ತದೆ. ಇದು ಸಮಾಜದಲ್ಲಿ ಅಶಾಂತಿಗೆ ಕಾರಣವಾಗಿ ವರ್ಗ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ.

## ದುರಾಸೆ

ನೆಮ್ಮದಿ ಮತ್ತು ಸಂತೋಷಕ್ಕೆ ಕೀಲಿಕೈ ಸಂತೃಪ್ತಿಯಾಗಿದೆ. ದುರಾಸೆಯಿಂದ ಮನುಷ್ಯನು ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ.

ಹೆಚ್ಚಿನ ಜನರು ಸಂಪತ್ತು ಅರ್ಜಿಸುವುದರಿಂದ ಸುಖ, ಸಂತೋಷ ಸಿಗುವುದೆಂದು ಭಾವಿಸುತ್ತಾರೆ. ಸಂಪತ್ತು ಮನುಷ್ಯನಿಗೆ ಭೋಗ ಸಾಮಾಗ್ರಿಗಳನ್ನು ನೀಡಬಹುದೇ ವಿನಃ ನೆಮ್ಮದಿ ಮತ್ತು ಸಂತೋಷವನ್ನಲ್ಲ. ದುರಾಸೆಗೆ ಯಾವುದೇ ಇತಿಮಿತಿಗಳಿರುವುದಿಲ್ಲ. ಸಂಪಾದನೆ ಹೆಚ್ಚಾದಷ್ಟೂ ದುರಾಸೆಯೂ ಹೆಚ್ಚಾಗುತ್ತದೆ. ಪ್ರವಾದಿ ನುಡಿದಿರುವರು.

**"**ಆದಮನ ಸಂತತಿಗೆ ಒಂದು ಬೆಟ್ಟದಷ್ಟು ಬಂಗಾರವನ್ನು ನೀಡಿದರೆ, ಆತನು ಎರಡು ಬೆಟ್ಟಗಳಷ್ಟು ಬಂಗಾರವನ್ನು ಬಯಸುವನು. ಕೇವಲ ಮಣ್ಣು ಮಾತ್ರ ಮನುಷ್ಯನ ಬಾಯಿಯನ್ನು ತುಂಬಬಲ್ಲದು, ಯಾರು ಅಲ್ಲಾಹನತ್ತ ಮರಳುವರೋ ಅಲ್ಲಾಹ್ ಆತನನ್ನು ಕ್ಷಮಿಸುವನು**"**.

ಮನುಷ್ಯನು ಸದಾ ಸುಖಸಂಪತ್ತನ್ನು ಗಳಿಸುವ, ಯತ್ನದಲ್ಲಿ ನಿರತನಾಗಿರುತ್ತಾನೆ. ಹೆಚ್ಚೆಚ್ಚು ಸಂಪತ್ತನ್ನು ಹೊಂದುವ ಅಭಿಲಾಷೆಯು ಮನುಷ್ಯನ ಪ್ರಕೃತಿಯಲ್ಲಿ ಹಾಸುಹೊಕ್ಕಿದೆ. ಸುಖಲೋಲೋಪತೆಯ ಸಾಧನಗಳನ್ನು ಹೊಂದುವ ಅವಕಾಶಗಳಿಗೆ ಕಾಯುತ್ತಿರುತ್ತಾನೆ. ಇದಕ್ಕೆ ಯಾವುದೇ ಇತಿಮಿತಿಗಳಿಲ್ಲ. ತನ್ನ ಕನಸುಗಳನ್ನು ನನಸಾಗಿಸಲು ಸರ್ವ ಪ್ರಯತ್ನಗಳನ್ನು ನಡೆಸುತ್ತಾನೆ. ಈ ಯತ್ನದಲ್ಲಿ ಮನುಷ್ಯನು ನೈತಿಕ ಮೇರೆಗಳನ್ನು ಮೀರುತ್ತಾನೆ.

ಲೌಕಿಕ ವ್ಯಾಮೋಹವು ಮನುಷ್ಯನನ್ನು ಪರಲೋಕದ ಚಿಂತನೆಯಿಂದ ದೂರಗೊಳಿಸುತ್ತದೆ. ಪರಲೋಕದಲ್ಲಿ ಯಶಸ್ಸನ್ನು ಗಳಿಸುವ ಧ್ಯೇಯವನ್ನು ನಾವು ಎಂದಿಗೂ ಕಡೆಗಣಿಸಬಾರದು.

ಇಹಲೋಕದ ವ್ಯಾಮೋಹದಲ್ಲಿ ಪರಲೋಕವನ್ನು ಕಡೆಗಣಿಸಬಾರದೆಂದು ಕುರ್‌ಆನ್ ಉಪದೇಶಿಸುತ್ತದೆ.

> "ನಿಮ್ಮನ್ನು ನಮಗೆ ನಿಕಟಗೊಳಿಸುವ ಸಾಧನ ನಿಮ್ಮ ಸಂಪತ್ತಾಗಲೀ ನಿಮ್ಮ ಸಂತಾನವಾಗಲೀ ಅಲ್ಲ. ಯಾರು ಸತ್ಯ ವಿಶ್ವಾಸ ಸ್ವೀಕರಿಸಿ, ಸತ್ಕರ್ಮವೆಸಗುವರೋ ಅವರು ಇದಕ್ಕೆ ಹೊರತಾಗಿರುವರು. ಅವರಿಗೆ ಅವರ ಕರ್ಮದ ಇಮ್ಮಡಿ ಪ್ರತಿಫಲವಿದೆ ಮತ್ತು ಅತ್ಯುನ್ನತ ಭವನಗಳಲ್ಲಿ ನಿಶ್ಚಿಂತರಾಗಿರುವರು". (ಪವಿತ್ರ ಕುರ್‌ಆನ್ 34:37)

## ಭ್ರಷ್ಟಾಚಾರ

ಮನುಷ್ಯನ ದುರಾಸೆ ಇತರರ ಸಂಪತ್ತನ್ನು ಹಕ್ಕನ್ನು ಕಬಳಿಸಲು ಪ್ರೇರೇಪಿಸುತ್ತದೆ. ಹೆಚ್ಚು ಪಡೆಯುವ ಆಸೆಯಿಂದ ಮನುಷ್ಯ ಅನೈತಿಕ, ಅಕ್ರಮ ಮಾರ್ಗಗಳನ್ನು ಅನುಸರಿಸುತ್ತಾನೆ. ಇದು ಸಮಾಜದ ಶಾಂತಿಯನ್ನು ಕದಡುತ್ತದೆ. ಭ್ರಷ್ಟಾಚಾರಕ್ಕೂ ಇದು ಎಡೆ ಮಾಡಿಕೊಡುತ್ತದೆ.

ಪ್ರವಾದಿ ಅನೈತಿಕ ಮಾರ್ಗಗಳಿಂದ ಸಂಪಾದನೆ ಮಾಡುವುದರಿಂದ ಜನರನ್ನು ತಡೆದಿದ್ದರು. ಒಮ್ಮೆ ಓರ್ವ ವ್ಯಕ್ತಿಯನ್ನು ಪ್ರವಾದಿ ಜನರಿಂದ ಝಕಾತ್ ವಸೂಲು ಮಾಡಲು ಕಳುಹಿಸಿದ್ದರು. ವ್ಯಕ್ತಿಯು ತನ್ನ ಕಾರ್ಯವನ್ನು ಪೂರ್ಣಗೊಳಿಸಿ, ಪ್ರವಾದಿರಿಗೆ, "ಈ ವಸ್ತುಗಳನ್ನು ಝಕಾತ್ ರೂಪದಲ್ಲಿ ನೀಡಲಾಗಿದೆ ಮತ್ತು ಈ ವಸ್ತುಗಳು ನನಗೆ ಉಡುಗೊರೆಯ ರೂಪದಲ್ಲಿ ದೊರಕಿವೆ" ಎಂದರು. ಪ್ರವಾದಿರಿಗೆ ವ್ಯಕ್ತಿಗೆ ದೊರಕಿರುವ ವಸ್ತುಗಳಲ್ಲಿ ಭ್ರಷ್ಟಾಚಾರದ ವಾಸನೆ ಬಂದಿತು. ಪ್ರವಾದಿ ನಂತರ ಜನರನ್ನು ಉದ್ದೇಶಿಸಿ ಪ್ರವಚನ ನೀಡುತ್ತಾ "ಓರ್ವ ವ್ಯಕ್ತಿ ಝಕಾತ್ ಸಂಗ್ರಹಿಸಲು ತೆರಳಿ, ಈ ವಸ್ತುಗಳು ಝಕಾತ್ ರೂಪದಲ್ಲಿ ನೀಡಲ್ಪಟ್ಟಿವೆ ಮತ್ತು ಈ ವಸ್ತುಗಳು ನನಗೆ ಉಡುಗೊರೆಯ ರೂಪದಲ್ಲಿ ನೀಡಲ್ಪಟ್ಟಿವೆ ಎಂದು ಹೇಳುತ್ತಾನೆ. ಈ ವ್ಯಕ್ತಿ ಮನೆಯಲ್ಲಿ ಕುಳಿತು, ಜನರು ಉಡುಗೊರೆ ನೀಡುತ್ತಾರೋ ಎಂದು ನೋಡಲಿ" ಎಂದರು.

# ಭಯೋತ್ಪಾದನೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು:

**"**ಅಲ್ಲಾಹನು ಹಿಂಸೆ ಮತ್ತು ಇತರ ಕಾರ್ಯಗಳಿಗೆ ನೀಡದಿರುವುದನ್ನು ಶಾಂತ ರೀತಿಯ ಕಾರ್ಯಗಳಿಗೆ ನೀಡುತ್ತಾನೆ**"**.

ಪ್ರವಾದಿ ಈ ಮಾತನ್ನೂ ಹೇಳಿರುವರು:

**"**ಪ್ರಳಯದ ಕಾಲದ ಸನಿಹದಲ್ಲಿ ವಿವರಣೆ ನೀಡಲಾಗದ ಕೊಲೆಗಳು ಅಧಿಕವಾಗುವುವು. ಹತ್ಯೆ ಮಾಡುವವನಿಗೆ ತನ್ನ ಬಲಿಪಶು ಯಾರು ಎಂದು ತಿಳಿದಿರುವುದಿಲ್ಲ. ಹತ್ಯೆಯಾದವನಿಗೆ ತನ್ನನ್ನು ಯಾರು ಮತ್ತು ಏಕೆ ಹತ್ಯೆ ಮಾಡಿದರು ಎಂಬುದರ ಅರಿವಿರುವುದಿಲ್ಲ**"**.

ಇಂದು ಸಹಸ್ರಾರು ನಿರಪರಾಧಿ ಜನರು ದೇಶ, ವಿದೇಶಗಳಲ್ಲಿ ಭಯೋತ್ಪಾದನಾ ಕೃತ್ಯಗಳಲ್ಲಿ, ಮಿಲಿಟರಿ, ಪೊಲೀಸ್ ಕಾರ್ಯಾಚರಣೆಯಲ್ಲಿ ಹತರಾಗುತ್ತಿದ್ದಾರೆ. ಕೆಲ ದೇಶಗಳು ಇತರ ದೇಶಗಳ ಮೇಲೆ ಹಾಕಿರುವ ಮುತ್ತಿಗೆಗಳ ಕಾರಣ, ನಿರ್ಬಂಧಗಳಿಂದ ಅನೇಕ ಮಕ್ಕಳು, ನಿರಪರಾಧಿ ಜನರು ಸಾವನ್ನಪ್ಪುತ್ತಿದ್ದಾರೆ.

ಅಮಾಯಕ ಜನರು ತಮ್ಮನ್ನು ಯಾರು? ಮತ್ತು ಯಾವ ಕಾರಣಕ್ಕಾಗಿ ಹತ್ಯೆ ಮಾಡಲಾಗಿದೆ? ಎಂಬುದನ್ನು ಅರಿತಿಲ್ಲ. ಇದರಂತೆ, ಹಂತಕರಿಗೂ ತಾವು ಯಾರನ್ನು ಹತ್ಯೆ ಮಾಡುತ್ತಿದ್ದೇವೆ? ಎಂಬುದು ತಿಳಿದಿರುವುದಿಲ್ಲ. ಹಲವು ವೇಳೆ ಹಂತಕರಿಗೂ, ಹತ್ಯೆಗೆ ಒಳಗಾದವರಿಗೂ ದ್ವೇಷವಿರುವುದಿಲ್ಲ.

# 19

# ಹುನೈನ್ ಯುದ್ಧ

ಹವಾಝಿನ್ ಗೋತ್ರದ ಸರದಾರ ಮಾಲಿಕ್ ಬಿನ್ ಔಫ್ ಮೂವತ್ತು ವರ್ಷದ ಯುವಕ. ಅತ್ಯಂತ ಉತ್ಸಾಹಿ ಯುವಕ. ಅವನ ಸುತ್ತಮುತ್ತ ಸಕೀಫ್, ನಸ್ರ್, ಜಸ್ಮ್, ಸಅದ್ ಬಿನ್ ಬಕರ್ ಮತ್ತು ಹಿಲಾಲ್ ಗೋತ್ರಗಳ ಹಿರಿಯನಾಯಕರು ನೆರೆದಿದ್ದಾರೆ. ಮಾಲಿಕ್ ಬಿನ್ ಔಫ್ ಸಭಿಕರನ್ನು ಉದ್ದೇಶಿಸಿ ಹೀಗೆ ಹೇಳುತ್ತಾನೆ:

"ಮುಸ್ಲಿಮರು ಮಕ್ಕಾವನ್ನು ಜಯಿಸಿರುವ ವಿಷಯ ನಿಮಗೆಲ್ಲರಿಗೂ ತಿಳಿದಿದೆ. ಖಂಡಿತವಾಗಿಯೂ ಮುಸ್ಲಿಮರು ನಮ್ಮ ಮೇಲೆ ಆಕ್ರಮಣ ಮಾಡಲಿರುವರು. ಆದ್ದರಿಂದ ನಾವು ಉಳಿಯಬೇಕಾದರೆ ಅವರು ಆಕ್ರಮಣ ಮಾಡುವುದಕ್ಕಿಂತ ಮುಂಚೆಯೇ ನಾವು ಅವರ ಮೇಲೆ ಧಾಳಿ ಮಾಡಬೇಕು. ನಾವು ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಮಾತ್ರವಲ್ಲ ಕುರೈಶರ ಎಲ್ಲಾ ಸೊತ್ತು, ಸಂಪತ್ತುಗಳನ್ನು ವಶಪಡಿಸಿಕೊಳ್ಳಬಹುದು. ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಇದು ಉತ್ತಮ ಅವಕಾಶ. ಈಗ ಅವರು ಮದೀನಾದಿಂದ ನೂರಾರು ಮೈಲಿ ದೂರದಲ್ಲಿರುವರು. ಈ ಅವಕಾಶವನ್ನು ನಾವು ಕಳೆದುಕೊಂಡರೆ ಮತ್ತೆ ಯಾವಾಗಲೂ ನಾವು ಪರಿತಪಿಸುತ್ತಿರಬೇಕಾದೀತು.

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಬೇಹುಗಾರ ಅಬ್ದುಲ್ಲಾ ಬಿನ್ ಹದ್ದಾದ್ ಅಸ್ಲಮೀ ಈ ಮಾಹಿತಿಯನ್ನು ಪ್ರವಾದಿರಿಗೆ ನೀಡುತ್ತಾರೆ. ಮಕ್ಕಾದಲ್ಲಿ ರಕ್ತಪಾತವಾದರೆ ಮಕ್ಕಾ ಪಟ್ಟಣದ ಪಾವಿತ್ರ್ಯಕ್ಕೆ ಭಂಗವಾಗುತ್ತದೆಂದು ಪ್ರವಾದಿ ಶತ್ರು ಸೇನೆಯನ್ನು ಕಾಯದೇ ಕೂಡಲೇ ಹೊರಟು ಅವರ ಮೇಲೆ ದಿಢೀರ್ ಧಾಳಿ ಮಾಡಲು ನಿರ್ಧರಿಸುತ್ತಾರೆ.

ಹಿ.ಶ. 8ರ ಶವ್ವಾಲ್ ತಿಂಗಳ 6 ನೇ ದಿನ ಮುಸ್ಲಿಮ್ ಸೇನೆ ಔತಾಸ್ ಕಡೆಗೆ ಹೊರಡುತ್ತದೆ. ಹತ್ತು ಸಾವಿರ ಮುಹಾಜಿರ್ ಮತ್ತು ಅನ್ಸಾರ್‌ಗಳನ್ನೊಳ ಗೊಂಡ ಈ

ಸೇನೆಯಲ್ಲಿ ಸಲೀಮ್ ಗೋತ್ರದವರು ಮತ್ತು ಸ್ವತಂತ್ರ ಗೊಳಿಸಲ್ಪಟ್ಟ ಮುಸ್ಲಿಮೇತರ ಗುಲಾಮರು ಎರಡು ಸಾವಿರ ಸಂಖ್ಯೆಯಲ್ಲಿದ್ದರು. ಶವ್ವಾಲ್ 10 ರಂದು ಸೇನೆ ಔತಾಸ್ ತಲುಪುತ್ತದೆ. ತಮ್ಮ ಈ ಸಂಖ್ಯಾ ಬಲವನ್ನು ಕಂಡು ಸೈನಿಕರಲ್ಲಿ ಓರ್ವನು ಹೀಗೆ ಹೇಳುತ್ತಾನೆ.

"ನಮ್ಮನ್ನು ಸೋಲಿಸಲು ನಾವೇನೂ ಈಗ ಕಡಿಮೆ ಸಂಖ್ಯೆಯಲ್ಲಿಲ್ಲ".

ಮುಸ್ಲಿಮ್ ಸೇನೆಯು ಹೊರಟ ವಿಷಯ ಮಾತ್ರವಲ್ಲ ಅದು ಬರುತ್ತಿರುವ ದಾರಿಯೂ ಶತ್ರು ಸೇನೆಗೆ ತಿಳಿದು ಬಿಡುತ್ತದೆ. ದಾರಿಯಲ್ಲಿ ಅವರು ತಮ್ಮ ಬಿಲ್ಲುಗಾರರನ್ನು ಅಡಗು ದಾಣಗಳಲ್ಲಿ ಕುಳ್ಳಿರಿಸಿದ್ದರು. ಮುಸ್ಲಿಮರ ಮುಂಚೂಣಿಯ ಸೇನೆಯು ನಿಶ್ಚಿಂತೆಯಿಂದ ಮುಂದುವರೆಯುತ್ತಿರುತ್ತದೆ. ಅಷ್ಟರಲ್ಲಿ ಶತ್ರು ಸೇನೆಯ ಬಿಲ್ಲುಗಾರರು ಅವರ ಮೇಲೆ ನಾಲ್ಕೂ ಕಡೆಗಳಿಂದ ಬಾಣಗಳ ಮಳೆಗೆರೆಯುತ್ತಾರೆ. ಇದರಿಂದ ಅವರಲ್ಲಿಯ ಮಕ್ಕಾದ ಸ್ವತಂತ್ರಗೊಂಡ ಗುಲಾಮರು ದಿಕ್ಕು ಪಾಲಾಗಿ ಓಟಕ್ಕೀಳುತ್ತಾರೆ. ಅವರ ಈ ದಿಗ್ಭ್ರಮೆಯು ಇಡೀ ಸೇನೆಯ ಶಿಸ್ತು ಮತ್ತು ವ್ಯವಸ್ಥೆಯನ್ನು ಹಾಳುಗೆಡಹುತ್ತದೆ. ಪ್ರವಾದಿ ಒಂದು ಕಡೆ ಒಂಟಿಯಾಗಿ ಬಿಡುತ್ತಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಪ್ರವಾದಿ ಅಸಾಮಾನ್ಯ ಶೌರ್ಯ ಮತ್ತು ಸ್ಥೈರ್ಯವನ್ನು ಪ್ರದರ್ಶಿಸುತ್ತಾರೆ. ಅವರು ತಮ್ಮ ಸವಾರಿಯಿಂದ ಇಳಿದು ಸಂಗಾತಿಗಳನ್ನು ಅತ್ಯಂತ ಘನ ಗಾಂಭೀರ್ಯದೊಂದಿಗೆ ಕರೆಯುತ್ತಾರೆ.

"ನಿಸ್ಸಂಶಯವಾಗಿ ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ನಾನು ಅಬ್ದುಲ್ ಮುತ್ತಲಿಬರ ಸಂತತಿಯಾಗಿರುವೆನು".

ಪ್ರವಾದಿ ತಮ್ಮ ಚಿಕ್ಕಪ್ಪ ಅಬ್ಬಾಸ್‌ರನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ.

"ಅಬ್ಬಾಸರೇ, ಜೋರಾಗಿ ಕರೆಯಿರಿ. ಓ ಅನ್ಸಾರ್‌ಗಳೇ! ಓ ಸಮ್ರಾದ ಸಂಗಾತಿಗಳೇ, ಓ ಮುಹಾಜಿರ್‌ಗಳೇ! ಓ ಹುದೈಬಿಯಾದಲ್ಲಿ ವೃಕ್ಷದ ಕೆಳಗೆ ಪ್ರತಿಜ್ಞೆ ಮಾಡಿದವರೇ!"

ಅಬ್ಬಾಸ್ ಈ ರೀತಿ ಕರೆದುದೇ ತಡೆ, ಹಿಂಜರಿಯುತ್ತಿದ್ದ ಸೇನೆಯು ಪುನಃ ಪ್ರವಾದಿರ ಸುತ್ತ ಒಗ್ಗೂಡಿತು. ಶತ್ರುಗಳ ಮೇಲೆ ಮುಗಿಬಿದ್ದರು. ಈ ಆಕಸ್ಮಿಕ ಪ್ರತ್ಯಾಕ್ರಮಣವನ್ನು ಕಂಡ ಶತ್ರುಸೇನೆಯು ಗೊಂದಲಗೊಂಡು ದಿಕ್ಕು ಪಾಲಾಗಿ ಓಟಕ್ಕಿತ್ತಿತ್ತು. ಕೆಲವೇ ಕ್ಷಣಗಳಲ್ಲಿ ಶತ್ರು ಸೇನೆಯು ರಣರಂಗದಲ್ಲಿ ಮಹಿಳೆಯರು, ಮಕ್ಕಳು, ಒಂಟೆ, ಆಡುಗಳನ್ನು ಬಿಟ್ಟು ಪಲಾಯನಗೈದಿತು.

ಹುನೈನ್ ಯುದ್ಧದಲ್ಲಿ ಮುಸ್ಲಿಮರಿಗೆ ತಮ್ಮ ಸೇನೆಯ ಸಂಖ್ಯಾ ಬಲದ ಮೇಲೆ ದರ್ಪ ಉಂಟಾಯಿತು. ಬೃಹತ್ ಸೇನೆವಿದ್ದರೂ, ಮುಸ್ಲಿಮ್ ಸೇನೆ ಹಿಮ್ಮೆಟ್ಟ ಬೇಕಾಯಿತು. ಕುರ್‌ಆನ್ ಈ ಘಟನೆಯನ್ನು ಈ ರೀತಿ ವಿಮರ್ಶಿಸಿತು.

> "ಅಲ್ಲಾಹ್ ಇದಕ್ಕಿಂತ ಮುಂಚೆ ಅನೇಕ ಸಂದರ್ಭಗಳಲ್ಲಿ ನಿಮಗೆ ಸಹಾಯ ಮಾಡಿರುತ್ತಾನೆ. ಇದೀಗ ಹುನೈನ್ ಯುದ್ಧದ ದಿನ (ಅವನ ನೆರವಿನ ವೈಖರಿಯನ್ನು ನೀವು ಕಂಡಿರುತ್ತೀರಿ) ಅಂದು ನಿಮಗೆ ಸಂಖ್ಯಾ ಬಲದ ಜಂಬವಿತ್ತು. ಆದರೆ ಅದು ನಿಮಗೇನೂ ಫಲ ಕೊಡಲಿಲ್ಲ. ಭೂಮಿಯು ವಿಶಾಲವಿದ್ದೂ ನಿಮ್ಮ ಮಟ್ಟಿಗೆ ಸಂಕುಚಿತವಾಗಿ ಬಿಟ್ಟಿತು ಮತ್ತು ನೀವು ಬೆನ್ನು ತಿರುಗಿಸಿ ಓಟ ಕಿತ್ತಿರಿ. ಅನಂತರ ಅಲ್ಲಾಹನು ತನ್ನ ಪ್ರಶಾಂತತೆಯನ್ನು ತನ್ನ ರಸೂಲರ ಮೇಲೂ, ಸತ್ಯ ವಿಶ್ವಾಸಿಗಳ ಮೇಲೂ ಇಳಿಸಿದನು ಮತ್ತು ನಿಮಗೆ ಕಾಣದಂತಹ ಸೈನ್ಯವನ್ನು ಇಳಿಸಿ ಸತ್ಯ ನಿಷೇಧಿಗಳನ್ನು ಶಿಕ್ಷಿಸಿದನು".
> (ಪವಿತ್ರ ಕುರ್‌ಆನ್ 9:25–26)

## ಸಮರಾರ್ಜಿತ ಸೊತ್ತು

ಹುನೈನ್ ಯುದ್ಧದಲ್ಲಿ ಸೆರೆ ಸಿಕ್ಕಿದ ಹವಾಝಿನ್ ಮಹಿಳೆಯರು ಮತ್ತು ಮಕ್ಕಳನ್ನು ಒಂದು ವಿಶಾಲವಾದ ಆವರಣದಲ್ಲಿಡಲಾಗಿತ್ತು. ಅಲ್ಲಿ ಅವರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸೆರೆಯಾಳುಗಳು ಸರಿಯಾದ ಉಡುಪುಗಳನ್ನು ಧರಿಸಿರಲಿಲ್ಲ. ಇದನ್ನು ನೋಡಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಮಾರರ್ಜಿತ ಸೊತ್ತಿನಿಂದ ಬಟ್ಟೆಗಳನ್ನು ಖರೀದಿಸಿ ಇವರಿಗೆ ನೀಡಲು ಆದೇಶಿಸಿದರು.

ಹುನೈನ್ ಕಣಿವೆಯಲ್ಲಿ ಎಲ್ಲೆಲ್ಲೂ ಸಮರಾರ್ಜಿತ ಸೊತ್ತಿನ ರಾಶಿ ಬಿದ್ದಿತ್ತು. ಸಮರಾರ್ಜಿತ ಸೊತ್ತಿನಲ್ಲಿ 6 ಸಾವಿರ ಮಹಿಳೆಯರು ಮತ್ತು ಮಕ್ಕಳು, 1,60,000 ದಿರ್ಹಮ್ (ಬೆಳ್ಳಿ ನಾಣ್ಯ), 40 ಸಾವಿರ ಆಡು–ಕುರಿಗಳು ಮತ್ತು 20 ಸಾವಿರ ಒಂಟೆಗಳಿದ್ದವು.

ಪ್ರವಾದಿ ಸಮರಾರ್ಜಿತ ಸೊತ್ತನ್ನು ಸೈನಿಕರಲ್ಲಿ ವಿತರಿಸುತ್ತಾರೆ. ಈ ವಿತರಣೆಯಲ್ಲಿ ಪ್ರವಾದಿ ಆಗತಾನೇ ಮಕ್ಕಾ ವಿಜಯದ ವೇಳೆ ಇಸ್ಲಾಮ್ ಸ್ವೀಕರಿಸಿದವರಿಗೂ ಧಾರಾಳ ಸೊತ್ತು ನೀಡುತ್ತಾರೆ. ಅಬೂ ಸುಫ್‌ಯಾನ್, ಹಕೀಮ್ ಬಿನ್ ಹಿಝಾಮ್, ನದ್ರ್ ಬಿನ್ ಹಾರಿಸ್, ಸಫ್ವಾನ್ ಬಿನ್ ಉಮಯ್ಯ, ಅಕ್ರಅ್ ಬಿನ್ ಹಾರೀಸ್ ಮೊದಲಾದ ಕುರೈಶ್ ಗಣ್ಯರು ಪ್ರವಾದಿರಿಂದ ಸಮರಾರ್ಜಿತ ಸೊತ್ತಿನಲ್ಲಿ ಗಣನೀಯ ಪಾಲನ್ನು ಗಳಿಸುತ್ತಾರೆ. ಎರಡು ದಶಕಗಳ ತನಕ ಪ್ರವಾದಿ ರನ್ನು ಬೈಯ್ಯುತ್ತಿದ್ದ, ಸುಳ್ಳುಗಾರನೆಂದು ಹೇಳುತ್ತಿದ್ದ, ಲೇವಡಿ ಮಾಡುತ್ತಿದ್ದ, ಶಾರೀರಿಕ ಹಿಂಸೆ ನೀಡಿದ್ದ, ಅಬೂ ತಾಲಿಬ್ ಕಣಿವೆಯಲ್ಲಿ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದ, ಕೊಲೆಯ ಸಂಚು ಹೂಡಿದ್ದ,

ಮನೆಯಿಂದ ಹೊರಹಾಕಿದ್ದ, ದೇಶ ಭ್ರಷ್ಟಗೊಳಿಸಿದ್ದ ವೈರಿಗಳ ಪಾಲಿಗೂ ಪ್ರವಾದಿರ ಔದಾರ್ಯದ ಬಾಗಿಲು ಮುಕ್ತವಾಗಿತ್ತು. ಪ್ರವಾದಿ ಮಕ್ಕಾದ ನವಮುಸ್ಲಿಮರಿಗೆ ಸಮರಾರ್ಜಿತ ಸೊತ್ತಿನಲ್ಲಿ ಪಾಲು ನೀಡಿದುದು ಅವರ ಸತ್ಯ ವಿಶ್ವಾಸವನ್ನು ಮತ್ತಷ್ಟು ಸುದೃಢಗೊಳಿಸಲಿಕ್ಕಾಗಿಯೂ ಇತ್ತು.

ಸಮರಾರ್ಜಿತ ಸೊತ್ತನ್ನು ಮತಾಂತರಗೊಳಿಸಲು ಬಳಸಲಾಗಿರಲಿಲ್ಲ. ನವ ಮುಸ್ಲಿಮರ ವಿಶ್ವಾಸವನ್ನು ಸುದೃಢಗೊಳಿಸಲಿಕ್ಕಾಗಿ ಸಮರಾರ್ಜಿತ ಸೊತ್ತನ್ನು ಬಳಸಲಾಗಿತ್ತು. ಸಫ್ವಾನ್ ಮತ್ತು ಸುಹೈಲ್ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಅದಾಗ್ಯೂ ಹುನೈನ್ ಯುದ್ಧದಲ್ಲಿ ಮುಸ್ಲಿಮ್ ಸೇನೆಯೊಂದಿಗೆ ಸೇರಿ ಅವರು ಹೋರಾಡಿದ್ದರು. ಪ್ರವಾದಿ ಅವರಿಗೂ ಸಮರಾರ್ಜಿತ ಸೊತ್ತಿನಲ್ಲಿ ಪಾಲು ನೀಡಿದರು. ಮಕ್ಕಾ ವಿಜಯದ ಸಂದರ್ಭದಲ್ಲಿ ಪ್ರವಾದಿ ತೋರಿದ ಕರುಣೆ, ನಂತರ ಯುದ್ಧದ ವೇಳೆ ಅವರು ಮೆರೆದ ಪರಾಕ್ರಮ, ಯುದ್ಧದ ನಂತರ ಪ್ರವಾದಿ ತೋರಿದ ಧಾರಾಳತನದಿಂದ ಜನರಿಗೆ ಅವರು ನಿಜಕ್ಕೂ ಪ್ರವಾದಿಯಾಗಿದ್ದಾರೆ ಎಂದು ಮನವರಿಕೆಯಾಯಿತು. ಅಬು ಸುಫ್‌ಯಾನ್‌ರ ಸ್ವಭಾವದ ಪರಿಚಯವಿದ್ದುದರಿಂದ ಪ್ರವಾದಿ ಅವರಿಗೆ ವಿಶೇಷ ಸ್ಥಾನಮಾನ ನೀಡಿದ್ದರು.

## ನೀಡುವ ಕೈ ಬೇಡುವ ಕೈಗಿಂತ ಉತ್ತಮ

ಹಕೀಮ್‌ರಿಗೆ ಸಮರಾರ್ಜಿತ ಸೊತ್ತಿನಲ್ಲಿ ಗಣನೀಯ ಪ್ರಮಾಣ ದೊರಕಿದ್ದರಿಂದ ಅವರು ಸ್ವಲ್ಪ ಅಹಂಕಾರದ ಪ್ರದರ್ಶನ ಮಾಡಿದ್ದರು. ಅವರಿಗೆ ಸಂಪತ್ತು ದೊರಕಿದ್ದರಿಂದ ಬಹಳ ಸಂತುಷ್ಟರಾಗಿದ್ದರು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅವರಿಗೆ ಈ ಸಂದರ್ಭದಲ್ಲಿ ಬುದ್ಧಿವಾದ ಮಾಡಿದರು: **"**ನೀಡುವ ಕೈ, ಬೇಡುವ ಕೈಗಿಂತ ಉತ್ತಮ**"**.

ಯಾರು ತಮ್ಮ ಸಂಪತ್ತಿನಲ್ಲಿ ಬಡ ಬಗ್ಗರಿಗೆ ಸಹಾಯ ಮಾಡುತ್ತಾರೋ, ಅಂತಹ ಜನರ ಸ್ಥಾನಮಾನವು ಕೇವಲ ಇತರರಿಂದ ಬೇಡುವ ಜನರ ಸ್ಥಾನಮಾನಕ್ಕಿಂತ ಶ್ರೇಷ್ಠವಾದುದು**"** ಎಂದರು. ಪ್ರವಾದಿ ಹಕೀಮ್‌ರಿಗೆ ತಮ್ಮ ಪಾಲಿನಿಂದ ಸ್ವಲ್ಪ ಭಾಗವನ್ನು ತಮ್ಮ ಕುಟುಂಬದ ಸದಸ್ಯರಿಗೆ, ಮತ್ತು ಅವರ ಅವಲಂಬಿತರಿಗೆ ನೀಡಲು ಸೂಚಿಸಿದರು. ಹಕೀಮ್‌ರಿಗೆ ಸ್ವಲ್ಪ ಗಾಂಭೀರ್ಯತೆಯಿಂದ ಸ್ವೀಕರಿಸಲು ತಿಳಿಸಿದರು.

> **"**ಯಾರು ತಮ್ಮ ಸೊತ್ತಿನಲ್ಲಿ ಬಡಜನರಿಗೆ, ನೀಡುತ್ತಾರೋ ಆ ಜನರ ಸ್ಥಾನವು ಇತರರಿಂದ ಬೇಡುವ ಜನರ ಸ್ಥಾನಮಾನಕ್ಕಿಂತ ಉನ್ನತವಾಗಿರುತ್ತದೆ' ಎಂದು ಉಪದೇಶಿಸಿದರು.**"**

# ಅನ್ಸಾರ್‌ರ ಆತಂಕ

ಸಮರಾರ್ಜಿತ ಸೊತ್ತಿನಲ್ಲಿ ಹೆಚ್ಚಿನ ಪಾಲು ಮಕ್ಕಾದ ಕುರೈಶರಲ್ಲಿ ಹಂಚಿಕೆಯಾಗಿರುವುದನ್ನು ನೋಡಿ ಅನ್ಸಾರ್‌ರಲ್ಲಿ ಆತಂಕ ಮತ್ತು ಅಸೂಯೆ ಮೂಡಿತು. ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸೂಕ್ಷ್ಮ ಪರಿಸ್ಥಿತಿಯಲ್ಲಿ ಇದ್ದಾಗ ಮದೀನಾದ ಅನ್ಸಾರ್ ಅವರಿಗೆ ಆಶ್ರಯ ನೀಡಿದ್ದು ಈಗ ಮಕ್ಕಾ ವಿಜಯದ ನಂತರ ಮುಹಮ್ಮದ್, ತಮ್ಮ ಗೋತ್ರದವರಿಗೆ, ಬಂಧು ಬಳಗದವರಿಗೆ ಸಮರಾರ್ಜಿತ ಸೊತ್ತಿನ ಬಹುಪಾಲನ್ನು ನೀಡುತ್ತಿದ್ದಾರೆ ಎಂದು ಕೆಲ ಅನ್ಸಾರರು ಆಕ್ಷೇಪಿಸಿದರು. ಈ ಸಂಬಂಧ ಪ್ರವಾದಿರ ಬಳಿ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಲು ಸಅದ್‌ರನ್ನು ರವಾನಿಸಿದರು. ಪ್ರವಾದಿ ಸಅದ್‌ರ ಮಾತನ್ನು ಆಲಿಸಿ ಮದೀನಾದ ಎಲ್ಲಾ ಅನ್ಸಾರ್‌ರನ್ನು ಒಂದು ಕಡೆ ಸಭೆ ಸೇರಿಸಲು ಸೂಚಿಸಿದರು.

ನಂತರ ಸಭೆಯನ್ನು ಉದ್ದೇಶಿಸಿ ಪ್ರವಾದಿ, ತಾವು ಒಬ್ಬಂಟಿಗ ರಾಗಿದ್ದಾಗ ಮತ್ತು ಸಂಧಿಗ್ಧ ಪರಿಸ್ಥಿತಿಯಲ್ಲಿ ಇದ್ದಾಗ ಅನ್ಸಾರರು ತಮಗೆ ಮತ್ತು ಮಕ್ಕಾದ ಮುಸ್ಲಿಮರಿಗೆ ಆಶ್ರಯ, ನೆರವು ನೀಡಿದ್ದು ಇದಾವುದನ್ನೂ ತಾವು ಮರೆತಿಲ್ಲವೆಂದೂ, ಇದಕ್ಕಾಗಿ ಸದಾ ಅನ್ಸಾರ್‌ರಿಗೆ ಕೃತಜ್ಞರಾಗಿರುವರೆಂದು ತಿಳಿಸಿದರು. ಮಕ್ಕಾದ ಕುರೈಶರು ಈಗಷ್ಟೇ ತಾನೆ ಇಸ್ಲಾಮ್ ಸ್ವೀಕರಿಸಿದ್ದು, ಸಮರಾರ್ಜಿತ ಸೊತ್ತಿನಲ್ಲಿ ಅವರಿಗೆ ಪಾಲು ನೀಡಿದ್ದು, ಇಸ್ಲಾಮಿನಲ್ಲಿ ಅವರು ಸುದೃಢವಾಗಿ ನಿಲ್ಲುವ ಕಾರಣಕ್ಕಾಗಿಯೇ ಹೊರತು ಮತ್ತಾವ ಉದ್ದೇಶದಿಂದಲ್ಲವೆಂದು ನುಡಿದರು. ತಮಗೆ ಅನ್ಸಾರರ ಬಗ್ಗೆ ಇರುವ ಪ್ರೇಮವನ್ನು ಅವರಿಗೆ ನೀಡಲಾಗಿರುವ ಸಮರಾರ್ಜಿತ ಸೊತ್ತಿನ ಪಾಲಿನ ಪ್ರಮಾಣದಿಂದ ಅಳೆಯಬಾರದೆಂದೂ, ಮಕ್ಕಾ ಈಗ ವಶವಾಗಿದ್ದರೂ, ಮಕ್ಕಾ ಪಟ್ಟಣದ ಬಗ್ಗೆ ತಮಗೆ ಅಗಾಧ ಪ್ರೇಮವಿದ್ದರೂ, ತಾವು ಮದೀನಾದಲ್ಲಿಯೇ ತಮ್ಮ ವಾಸವನ್ನು ಮುಂದುವರೆಸಲು ನಿರ್ಧರಿಸಿರುವುದಾಗಿಯೂ ತಿಳಿಸಿದರು.

"ಕುರೈಶರು ಸಮರಾರ್ಜಿತ ಸೊತ್ತಿನೊಂದಿಗೆ ತೆರಳುತ್ತಿರುವಾಗ, ಮದೀನಾದ ಅನ್ಸಾರರು ಸ್ವತಃ ಪ್ರವಾದಿಯೊಂದಿಗೆ ತೆರಳುತ್ತಿರುವುದು ಹೆಚ್ಚು ಮೌಲ್ಯವಾದುದಲ್ಲವೇ?" ಎಂದು ತಿಳಿಹೇಳಿದರು.

ಮುಂದುವರೆದು ಪ್ರವಾದಿ, ಎಲ್ಲಾ ಜನರು ಒಂದು ಮಾರ್ಗವನ್ನು ಅನುಸರಿಸಿ, ಅನ್ಸಾರರು ಮತ್ತೊಂದು ಮಾರ್ಗವನ್ನು ಅನುಸರಿಸಿದರೆ, ತಾವು ಅನ್ಸಾರರ ಮಾರ್ಗವನ್ನೇ ಆರಿಸುವುದಾಗಿ ತಿಳಿಸಿದರು. ಪ್ರವಾದಿರ ಮಾತುಗಳನ್ನು ಕೇಳಿ ಅನ್ಸಾರ್‌ರಿಗೆ ತಮ್ಮ ತಪ್ಪಿನ ಅರಿವಾಗಿ ಕಣ್ಣೀರು ಹರಿಸಿದರು.

☆

# ಪ್ರಳಯ

ಪ್ರಳಯದ ಹಂತಗಳು ಯಾವಾಗ ಸಂಭವಿಸಬಹುದೆಂದು ಹೇಳಲಿಕ್ಕಾಗದು. ಅದರ ಜ್ಞಾನವನ್ನು ಕೇವಲ ಅಲ್ಲಾಹ್ ಮಾತ್ರಬಲ್ಲನು. ಆದರೂ ವಿವೇಚಿಸುವವನು ಪ್ರಳಯದ ಆಗಮನವನ್ನು ಊಹಿಸಬಹುದು. ವಿಜ್ಞಾನಿಗಳು ವೈಜ್ಞಾನಿಕ ಸಂಶೋಧನೆಗಳಿಂದ, ವೀಕ್ಷಣೆಗಳಿಂದ, ಆಧ್ಯಾತ್ಮಿಕ ವ್ಯಕ್ತಿಗಳು ತಮ್ಮ ಅಂತರ್ದೃಷ್ಟಿಯಿಂದ ಇದನ್ನು ಕಂಡುಕೊಳ್ಳುತ್ತಾರೆ. ಆದರೆ ಜನಸಾಮಾನ್ಯನು ಇದನ್ನು ಹೇಗೆ ಕಂಡುಕೊಳ್ಳಬೇಕು? ಜನಸಾಮಾನ್ಯನೂ ಪ್ರಳಯದ ಆಗಮನವನ್ನು ತಿಳಿಯುವಂತಾಗಬೇಕು. ಅಲ್ಲಾನ ಅಂತಿಮ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಪ್ರಳಯಕಾಲದ ಹಂತಗಳ, ಅದರ ಸಂಕೇತಗಳ ಬಗ್ಗೆ ವಿವರಗಳನ್ನು ನೀಡಿದ್ದಾರೆ. ಇದನ್ನು ಸಾಮಾನ್ಯ ಮನುಷ್ಯನು ಸುಲಭವಾಗಿ ತಿಳಿಯಬಲ್ಲನು. ನಾವು ಇದರಿಂದ ಎಚ್ಚೆತ್ತುಕೊಳ್ಳುತ್ತೇವೆಯೋ ಅಥವಾ ನಿರ್ಲಕ್ಷಿಸಿ ನಮ್ಮನ್ನು ನಾವೇ ವಿನಾಶದ ಕೂಪದಲ್ಲಿ ದೂಡಿಕೊಳ್ಳುತ್ತೇವೆಯೋ ಎಂಬುದರ ಬಗ್ಗೆ ನಾವು ಎಚ್ಚರವಹಿಸಬೇಕು.

ಪ್ರಳಯವು ಸನ್ನಿಹಿತವಾದಾಗ ಜಗತ್ತಿನ ಪರಿಸ್ಥಿತಿಯನ್ನು ವಿವರಿಸುವ ಪ್ರವಾದಿರ ವಚನಗಳನ್ನು ಕೆಳಗೆ ನೀಡಿದ್ದೇನೆ. ಈ ಪ್ರವಾದಿ ವಚನಗಳು ಸ್ವಯಂ ವೇದ್ಯವಾಗಿವೆ. ಪ್ರವಾದಿರ ವಚನಗಳನ್ನು ಗಮನಿಸಿದರೆ ಪ್ರಳಯದ ಕಾಲವು ಸನ್ನಿಹಿತವಾಗಿರುವುದು ಸ್ಪಷ್ಟವಾಗುತ್ತದೆ.

ಪ್ರವಾದಿರ ಆಪ್ತ ಸಂಗಾತಿಗಳಾಗಿದ್ದ ಇಬ್ನ್ಅಬ್ಬಾಸ್ ಮತ್ತು ಅಬೂ ಹುರೈರಃ, ಪ್ರವಾದಿ ಪ್ರಳಯದ ಆಗಮನದ ಸಂಕೇತಗಳನ್ನು ಈ ಕೆಳಗಿನ ವಚನಗಳಲ್ಲಿ ನೀಡಿದ್ದಾರೆ ಎಂದು ವರದಿ ಮಾಡಿದ್ದಾರೆ.

- ಮನುಷ್ಯನ ರಕ್ತಕ್ಕೆ ಯಾವುದೇ ಬೆಲೆ ಇರುವುದಿಲ್ಲ.

- ಕಾನೂನು ಉಲ್ಲಂಘಿಸುವವರು, ಅತಿಕ್ರಮಿಸುವವರು ನಾಯಕರಾಗುವರು.
- ಬುಡಕಟ್ಟುಗಳ ಅತ್ಯಂತ ಕೆಟ್ಟ ವ್ಯಕ್ತಿ ಅದರ ನಾಯಕನಾಗುವನು.
- ಸಮುದಾಯದ ಅತ್ಯಂತ ಅನರ್ಹ ವ್ಯಕ್ತಿ ಸಮುದಾಯದ ನಾಯಕನಾಗುವನು.
- ಪಾಪಗಳನ್ನು ಹಗುರವಾಗಿ ಪರಿಗಣಿಸಲಾಗುವುದು.
- ಲೈಂಗಿಕ ಸುಖಗಳನ್ನು ಪ್ರಾಣಿಗಳಂತೆ ಹಿಂಬಾಲಿಸಲಾಗುವುದು.
- ಪುರುಷರು ಪುರುಷರೊಂದಿಗೆ ಮತ್ತು ಸ್ತ್ರೀಯರು ಸ್ತ್ರೀಯರೊಂದಿಗೆ ಕಾಮತೃಷೆಯನ್ನು ನೀಗಿಸಿಕೊಳ್ಳುವರು.
- ಹಾಡುವ ಹುಡುಗಿಯರು ಮತ್ತು ತಂತಿ ವಾದ್ಯ ಉಪಕರಣಗಳು ಕಾಣ ಸಿಗುವುವು. (ಆಧುನಿಕ ಗಿಟಾರ್ ಮತ್ತು ಪಾಪ್ ಗಾಯನ)
- ಹೆಚ್ಚಿನ ಮಹಿಳೆಯರು ಹಾಡುಗಾರಿಕೆಯನ್ನು ತೊಡಗುವರು.
- ಶರಾಬು ಸೇವನೆಯಲ್ಲಿ ಹೆಚ್ಚಳ.
- ಬಡ್ಡಿಯ ವ್ಯಾಪಕತೆ.
- ಸುಳ್ಳು ಹೇಳುವ ಅಗತ್ಯತೆಯ ಪರಿಸ್ಥಿತಿ ಸೃಷ್ಟಿಯಾಗುವುದು.
- ಸತ್ಯವನ್ನು ಸುಳ್ಳಿನಿಂದ ಪ್ರತ್ಯೇಕಿಸುವುದು ಕಷ್ಟಕರವಾಗುವುದು.
- ಮಕ್ಕಳು ಹೆತ್ತವರಿಗೆ ಅವಿಧೇಯರಾಗುವರು.
- ಮಕ್ಕಳು ಸ್ನೇಹಿತರನ್ನು ಆಪ್ತರನ್ನಾಗಿಸುವರು ಮತ್ತು ಹೆತ್ತವರನ್ನು ದೂರ ಮಾಡುವರು.
- ಸ್ನೇಹಿತರು ಪರಸ್ಪರರನ್ನು ಪೀಡಿಸುವರು.
- ಜನರು ಆರಾಧನೆಗಳನ್ನು ಕಡೆಗಣಿಸುವರು.
- ಜ್ಞಾನವನ್ನು ಧಾರ್ಮಿಕ ಕಾರಣಗಳಿಗಲ್ಲ, ಇತರ ಕಾರಣಗಳಿಗಾಗಿ ಅರ್ಜಿಸಲಾಗುವುದು.
- ಮಳೆ ಸಕಾಲದಲ್ಲಿ ಆಗದ ಕಾರಣ ಮಳೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ.
- ಭೂಕಂಪನದಲ್ಲಿ ಹೆಚ್ಚಳವಾಗುವುದು.
- ಎತ್ತರವಾದ ಕಟ್ಟಡಗಳನ್ನು ನಿರ್ಮಿಸುವಲ್ಲಿ ಜನರು ಸ್ಪರ್ಧಿಸುವರು.
- ಓರ್ವ ವ್ಯಕ್ತಿಯು ಹಾನಿಯನ್ನು ಉಂಟು ಮಾಡಬಹುದೆಂಬ ಭಯದಿಂದ ಆತನನ್ನು ಸನ್ಮಾನಿಸಲಾಗುವುದು.

- ಪ್ರಳಯಕಾಲ ಸನ್ನಿಹಿತವಾದಾಗ ಮುಸ್ಲಿಮ್ ಸಮುದಾಯದ ದುರ್ಬಲರ ಮೇಲೆ ಪಾಶ್ಚಾತ್ಯ ಜನರು ಬಂದು ಅಧಿಪತ್ಯ ನಡೆಸುವರು.

ಪ್ರವಾದಿ, ಪ್ರಳಯ ಕಾಲ ಹತ್ತಿರ ಬಂದಾಗ, ಈ ಕೆಳಗಿನ ಘಟನೆಗಳನ್ನು ಗಮನಿಸಿರಿ ಎಂದು ಎಚ್ಚರಿಸಿರುವರು.

"ಬಿರುಗಾಳಿ, ಭೂಕಂಪನಗಳು, ಆಕಾರ ಬದಲಾವಣೆ, ಆನೆಕಲ್ಲಿನ ಮಳೆ ಮೊದಲಾದ ಚಿಹ್ನೆಗಳು ಮಣಿಸರದ ದಾರ ತುಂಡಾಗಿ ಮಣಿಗಳು ಒಂದರ ಹಿಂದೆ ಒಂದು ಉರುಳುವಂತೆ ಸಂಭವಿಸುವವು.

ಅನಸ್ ಪ್ರವಾದಿ ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ: "ಪ್ರಳಯದ ಸಮಯದಲ್ಲಿ ಸಮಯವು ಬಹಳ ವೇಗವಾಗಿ ಕಳೆಯುವುದು ಒಂದು ವರ್ಷವು ಒಂದು ತಿಂಗಳಿನಂತೆ, ಒಂದು ತಿಂಗಳು ಒಂದು ವಾರದಂತೆ, ಒಂದು ವಾರವು ಒಂದು ದಿನದಂತೆ ಮತ್ತು ಒಂದು ದಿನವು ಒಂದು ಗಂಟೆಯಂತೆ ಹಾಗೂ ಒಂದು ಗಂಟೆಯು ಬೆಂಕಿಯ ಸ್ಫೋಟದಂತೆ ಕಂಡುಬರುವುದು."

ಈಗಿನ ಹೆಚ್ಚಿನ ಜನರ ಬಿಡುವಿಲ್ಲದ ಜೀವನ ಇದಕ್ಕೆ ನಿದರ್ಶನವಾಗಿದೆ. ವಾಹನ ಸಂಚಾರದಲ್ಲಿ ಆಗಿರುವ ಬೆಳವಣಿಗೆಗಳು ವಿಶ್ವವನ್ನು ಸಂಕುಚಿತಗೊಳಿಸಿವೆ. ತಿಂಗಳುಗಳನ್ನು ದಿನಗಳಾಗಿ, ದಿನಗಳನ್ನು ಗಂಟೆಗಳಾಗಿ ಮತ್ತು ಗಂಟೆಗಳನ್ನು ನಿಮಿಷಗಳಾಗಿ ಪರಿವರ್ತಿಸಿವೆ. ಜನರು ತಮ್ಮ ಕೃತ್ಯಗಳ ಪರಿಣಾಮವನ್ನು ಕೂಡಲೇ ಕಾಣುತ್ತಿದ್ದಾರೆ.

ಅನಸ್ ಪ್ರವಾದಿ ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ.

"ಪ್ರಳಯ ಕಾಲ ಸನ್ನಿಹಿತವಾದಾಗ ಜ್ಞಾನವು ವಿರಳವಾಗಿ ಜಗತ್ತಿನಾದ್ಯಂತ ಅಜ್ಞಾನವು ವ್ಯಾಪಿಸುವುದು. ವ್ಯಭಿಚಾರವು ಸರ್ವೇ ಸಾಮಾನ್ಯವಾಗಿರುವುದು. ಶರಾಬು ಸೇವನೆಯು ಭಾರಿ ಪ್ರಮಾಣದಲ್ಲಿ ನಡೆಯುವುದು."

ಈಗ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಾಮಾನಗಳನ್ನು ಗಮನಿಸಿದರೆ ಶರಾಬುಸೇವನೆ ಮತ್ತು ಲೈಂಗಿಕ ಸ್ವಚ್ಛಂದತೆ ವ್ಯಾಪಕವಾಗಿರುವುದು ಕಾಣುತ್ತಿದ್ದೇವೆ. ಪ್ರವಾದಿ ಮುಹಮ್ಮದ್ ಪ್ರಳಯ ಕಾಲದ ಬಗ್ಗೆ ನುಡಿದಿರುವ ಭವಿಷ್ಯದ ನುಡಿಗಳು ಈಗಾಗಲೇ ಸಂಭವಿಸುತ್ತಿರುವುದನ್ನು ನಾವು ಗಮನಿಸಬಹುದು.

ಅಬ್ದುಲ್ಲಾಹ್ ಬಿನ್ ಸಲಾಮ್ ಪ್ರವಾದಿರನ್ನು ಪ್ರಳಯದ ಗಳಿಗೆಯ ಪ್ರಥಮ ಚಿಹ್ನೆಯ ಕುರಿತು ವಿಚಾರಿಸಿದಾಗ, ಪ್ರವಾದಿ ಈ ರೀತಿ ನುಡಿದರು:

“ಪ್ರಳಯದ ಗಳಿಗೆಯ ಪ್ರಥಮ ಚಿಹ್ನೆ ಬೆಂಕಿಯಾಗಿರುವುದು. ಈ ಬೆಂಕಿಯು ಜನರನ್ನು ಪೂರ್ವದಿಂದ ಪಶ್ಚಿಮಕ್ಕೆ ಓಡಿಸುವುದು.”

ಮುಹಮ್ಮದ್ ಅಸದ್ (1900–1992) (ಈ ಮೊದಲು Leopold weiss) ಅವರು ಆಸ್ಟ್ರೀಯಾದ ಯಹೂದಿಯಾಗಿದ್ದು ನಂತರ ಇಸ್ಲಾಮ್ ಸ್ವೀಕಾರ ಮಾಡಿದರು. ಮುಹಮ್ಮದ್ ಅಸದ್, 20ನೇ ಶತಮಾನದ ಖ್ಯಾತ ಪತ್ರಕರ್ತ, ರಾಯಭಾರಿ, ಸಮಾಜಸುಧಾರಕ, ರಾಜಕೀಯ ವಿಶ್ಲೇಷಕ ಮತ್ತು ವಿದ್ವಾಂಸರಾಗಿದ್ದರು. ಪ್ರವಾದಿರ ಮೇಲಿನ ವಚನದ ಬಗ್ಗೆ ಅವರು ಈ ರೀತಿ ಟಿಪ್ಪಣಿ ಮಾಡಿದ್ದರು:

“ಇದೊಂದು ಸಮಾಜದ ಅನಾಹುತದ ಕಡೆಗೆ ಪ್ರವಾದಿ ಮಾಡಿರುವ ಸಾಂಕೇತಿಕ ವಿವರಣೆಯಾಗಿದೆ. ಈ ಅನಾಹುತವು ಪೂರ್ವಾತ್ಯ ರಾಷ್ಟ್ರಗಳ ಸಾಂಸ್ಕೃತಿಕ ನೆಲೆಗಟ್ಟನ್ನು ನಾಶಮಾಡಿ ಜನರನ್ನು ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯ ಕಡೆಗೆ ತಳ್ಳುತ್ತದೆ. ಇದನ್ನು ಬೆಂಕಿ ಎಂದು ವಿವರಿಸಲಾಗಿದೆ. ಏಕೆಂದರೆ, ಬೆಂಕಿಯಂತೆ ಪಾಶ್ಚಾತ್ಯ ಸಂಸ್ಕೃತಿಯು ಪೌರಾತ್ಯ ರಾಷ್ಟ್ರಗಳ ಅಳಿದುಳಿರುವ ಸಾಂಸ್ಕೃತಿಕ ಶಕ್ತಿಯನ್ನು ನಾಶಗೊಳಿಸಿ ಅವರ ಗತ ಜೀವನವನ್ನು ವರ್ತಮಾನಕಾಲದೊಂದಿಗೆ ಸಂಬಂಧವನ್ನು ಹೊಂದಿರದಂತಹ ಒಂದು ಜಡ ಇತಿಹಾಸವನ್ನಾಗಿಸುತ್ತದೆ.”

ಪ್ರವಾದಿ ನುಡಿದಿರುವ ಪ್ರಳಯ ಕಾಲದ ಮತ್ತೊಂದು ಚಿಹ್ನೆ ಯಾವುದೇ ಮುನ್ಸೂಚನೆ ಇಲ್ಲದೇ ಉಂಟಾಗುವ ಹಠಾತ್ ಸಾವುಗಳು.

ಪ್ರವಾದಿ ನುಡಿದಿರುವರು:

“ಪ್ರಳಯದ ಕಾಲದಲ್ಲಿ ಯಾವುದೇ ವಿವರಣೆವಿರದ ಕೊಲೆಗಳು ಸರ್ವೇ ಸಾಮಾನ್ಯವಾಗಿರುವುದು. ಕೊಲೆಗಾರನಿಗೆ ಕೊಲೆಯಾದ ವ್ಯಕ್ತಿಯ ಗುರುತಿರುವುದಿಲ್ಲ ಮತ್ತು ಕೊಲೆಯಾದ ವ್ಯಕ್ತಿಗೆ ತಾನು ಏಕೆ ಕೊಲೆ ಮಾಡಲ್ಪಟ್ಟಿದ್ದೇನೆ ಅಥವಾ ಯಾರು ನನ್ನನ್ನು ಕೊಲೆ ಮಾಡಿರುವರೆಂಬ ಅರಿವು ಇರುವುದಿಲ್ಲ.”

14 ಶತಮಾನಗಳ ಹಿಂದೆಯೇ ಪ್ರವಾದಿ ಮುಹಮ್ಮದ್ ಜಗತ್ತು ಇಂದು ಎದುರಿಸುತ್ತಿರುವ ದುರಂತ ಪರಿಸ್ಥಿತಿಯ ಮುನ್ಸೂಚನೆ ನೀಡಿದ್ದರು. ಸಹಸ್ರಾರು ನಿರಪರಾಧಿ ಜನರು ಭಯೋತ್ಪಾದಕರ ಆಕ್ರಮಣಗಳಲ್ಲಿ, ಶತ್ರುದೇಶಗಳ ಕಾರ್ಯಾಚರಣೆಯಲ್ಲಿ, ಇತರ ದೇಶಗಳು ಮಾಡಿರುವ ದಿಗ್ಬಂಧನದ ಕಾರಣದಿಂದ ಸಾವನ್ನಪ್ಪುತ್ತಿದ್ದಾರೆ. ಜನರಿಗೆ ತಮ್ಮನ್ನು ಏಕೆ ಕೊಲ್ಲಲಾಗುತ್ತಿದೆಯೆಂದ ಅರಿವಿಲ್ಲ. ಇದರಂತೆ, ಕೊಲ್ಲುವವರಿಗೂ, ತಾವು ಏಕೆ ಕೊಲ್ಲುತ್ತಿರುವರೆಂಬ ಬಗ್ಗೆ ತಿಳುವಳಿಕೆ ಇಲ್ಲ ಮತ್ತು ಕೊಲ್ಲಲ್ಪಡುತ್ತಿರುವ ಜನರ ಬಗ್ಗೆ ಅವರಿಗೆ ಅರಿವೂ ಇಲ್ಲ. ಕೊಲ್ಲಲ್ಪಡುವ ಜನರಿಗೆ ಕೊಲೆಗಡುಕರೊಂದಿಗೆ ವೈಯಕ್ತಿಕ ದ್ವೇಷವೂ ಇರಲಿಕ್ಕಿಲ್ಲ.

ಪ್ರಳಯ ಕಾಲದ ಕುರಿತು ಕುರ್‌ಆನ್ ಪ್ರವಾದಿ ನೀಡಿರುವ ಮುನ್ಸೂಚನೆಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ 14 ಶತಮಾನಗಳ ಹಿಂದೆಯೇ ನುಡಿದಿರುವ ಮಾತುಗಳು ಸತ್ಯವಾಗಿ ಗೋಚರಿಸುತ್ತಿವೆ. ಈ ಆಧುನಿಕ ಜಗತ್ತಿನ ಪ್ರಕ್ಷುಬ್ಧತೆ, ಭಯೋತ್ಪಾದನೆ, ಸಮಾಜವನ್ನು ವಿವಿಧ ಗುಂಪುಗಳಲ್ಲಿ ಒಡೆಯುವ ಪ್ರವೃತ್ತಿ, ಅರಾಜಕತೆ, ಕೊಲೆಗಳು ವ್ಯಭಿಚಾರ ಮತ್ತು ಶರಾಬು ಪ್ರಳಯವು ಯಾವುದೇ ಸಮಯದಲ್ಲಿ ಸಂಭವಿಸುವ ಸೂಚನೆ ನೀಡುತ್ತಿವೆ.

ಈ ಎಲ್ಲಾ ಬೆಳವಣಿಗೆಗಳು ಪ್ರಳಯದ ಗಳಿಗೆಯು ದೂರವಿಲ್ಲವೆಂಬ ಎಚ್ಚರಿಕೆಯನ್ನು ಜನರಿಗೆ ನೀಡುತ್ತಿವೆ. ಅಂತ್ಯಕಾಲವು ಸನ್ನಿಹಿತವಾಗಿದೆ. ಇದನ್ನು ಅರಿತು ಪರಲೋಕದ ಶಿಕ್ಷೆಯಿಂದ ಪಾರಾಗಲು ಪ್ರಯತ್ನಿಸಬೇಕು. ಸಂಭವಿಸಲಿರುವ ಪ್ರಳಯವನ್ನು ತಡೆಯಲು ನಮಗೆ ಸಾಧ್ಯವಿಲ್ಲ. ಆದರೆ ನಮ್ಮನ್ನು ನಾವು ಬದಲಾಯಿಸಿ ಪ್ರಳಯಕಾಲದ ಶಿಕ್ಷೆಯಿಂದ ಪಾರಾಗಲು ಖಂಡಿತ ಸಾಧ್ಯವಿದೆ. ಪ್ರವಾದಿ ನುಡಿದಿರುವರು:

**"**ನಮ್ಮ ಸಂಕಲ್ಪಗಳಿಗೆ ಅನುಗುಣವಾಗಿ ನಮ್ಮ ಕರ್ಮಗಳನ್ನು ತೀರ್ಮಾನಿಸಲಾಗುವುದು.**"**

ಕನಿಷ್ಠ ಪಕ್ಷ ನಾವು ಉತ್ತಮ ಸಂಕಲ್ಪಗಳನ್ನಾದರೂ ಹೊಂದೋಣ.

☆

# ಪ್ರವಾದಿ ಮುಹಮ್ಮದ್‌ರ ಬೋಧನೆ

ಖಾಲಿದ್ ಬಿನ್ ವಲೀದ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಈ ರೀತಿ ನುಡಿದಿರುವರಾಗಿ ವರದಿ ಮಾಡಿರುವರು.

ಒಮ್ಮೆ ಓರ್ವ ಗ್ರಾಮೀಣ ಅರಬೀಯನು ಪ್ರವಾದಿರ ಬಳಿ ಬಂದು ಈ ರೀತಿ ನುಡಿದನು:

"ಪ್ರವಾದಿವರ್ಯರೇ, ನಾನು ತಮ್ಮ ಬಳಿ ಕೆಲ ಪ್ರಶ್ನೆಗಳನ್ನು ಕೇಳಲು ಬಂದಿದ್ದೇನೆ"

ಪ್ರವಾದಿ ನುಡಿದರು: "ನಿಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿ"

ಗ್ರಾಮಸ್ಥ: "ನಾನು ಎಲ್ಲರಿಗಿಂತ ಹೆಚ್ಚು ವಿದ್ವತ್ ಪೂರ್ಣನಾಗ ಬಯಸುತ್ತೇನೆ".

ಪ್ರವಾದಿ : "ಅಲ್ಲಾಹನನ್ನು ಭಯಪಡು, ನೀನು ಎಲ್ಲರಿಗಿಂತ ಹೆಚ್ಚು ವಿದ್ವತ್ ಪೂರ್ಣನಾಗುವೆ".

ಗ್ರಾಮಸ್ಥ: "ನಾನು ಎಲ್ಲರಿಗಿಂತ ಹೆಚ್ಚು ಶ್ರೀಮಂತನಾಗಬಯಸುವೆ"

ಪ್ರವಾದಿ : "ನಿನ್ನ ಬಳಿ ಇರುವುದರಲ್ಲಿ ಸಂತೃಪ್ತನಾಗು. ನೀನು ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ವ್ಯಕ್ತಿಯಾಗುವೆ".

ಗ್ರಾಮಸ್ಥ : "ನಾನು ಎಲ್ಲರಿಗಿಂತ ಹೆಚ್ಚು ನ್ಯಾಯವಂತನಾಗಬಯಸುವೆ"

ಪ್ರವಾದಿ : ನೀನು ಬಯಸುವುದನ್ನೇ ಇತರರಿಗೂ ಬಯಸು. ಆಗ ನೀನು ಎಲ್ಲರಿಗಿಂತ ಹೆಚ್ಚು ನ್ಯಾಯವಂತನಾಗುವೆ.

ಗ್ರಾಮಸ್ಥ : "ನಾನು ಎಲ್ಲ ಜನರಲ್ಲಿ ಅತ್ಯುತ್ತಮನಾಗಬಯಸುವೆ".

ಪ್ರವಾದಿ : "ನೀನು ಇತರರಿಗೆ ಒಳಿತನ್ನು ಮಾಡು. ಆಗ ನೀನು ಜನರಲ್ಲಿ ಅತ್ಯುತ್ತಮನಾಗುವೆ."

ಗ್ರಾಮಸ್ಥ: "ನಾನು ಎಲ್ಲ ಜನರಲ್ಲಿ ಅತ್ಯಂತ ಬಲಶಾಲಿಯಾಗಬಯಸುವೆ".

ಪ್ರವಾದಿ : "ಅಲ್ಲಾಹನಲ್ಲಿ ನಂಬಿಕೆಯಿಡು. ಆಗ ನೀನು ಜನರಲ್ಲಿ ಅತ್ಯಂತ ಬಲಶಾಲಿಯಾಗುವೆ".

ಗ್ರಾಮಸ್ಥ: "ನಾನು ಅಲ್ಲಾಹನಿಗೆ ಅತಿ ಹೆಚ್ಚು ಪ್ರೀತಿಗೆ ಪಾತ್ರನಾಗಬಯಸುವೆ".

ಪ್ರವಾದಿ : "ಅತಿ ಹೆಚ್ಚು ಅಲ್ಲಾಹನ ಪ್ರಶಂಸೆ ಮಾಡು. ಆಗ ನೀನು ಅಲ್ಲಾಹನಿಗೆ ಅತಿ ಹೆಚ್ಚು ಪ್ರೀತಿಗೆ ಪಾತ್ರನಾಗುವೆ".

ಗ್ರಾಮಸ್ಥ: "ನಾನು ನನ್ನ ವಿಶ್ವಾಸವನ್ನು ಪರಿಪೂರ್ಣಗೊಳಿಸಬಯಸುವೆ".

ಪ್ರವಾದಿ : "ನಿನ್ನ ನಡತೆ ಉತ್ತಮವಾಗಿದ್ದರೆ ನೀನು ನಿನ್ನ ವಿಶ್ವಾಸವನ್ನು ಪರಿಪೂರ್ಣಗೊಳಿಸುವೆ".

ಗ್ರಾಮಸ್ಥ : "ನಾನು ಸಜ್ಜನರಲ್ಲಾಗ ಬಯಸುವೆ".

ಪ್ರವಾದಿ : "ಅಲ್ಲಾಹನನ್ನು ಪ್ರತ್ಯಕ್ಷ ಕಾಣುತ್ತಿರುವಂತೆ ಭಯಪಡು. ನೀನು ಅಲ್ಲಾಹನನ್ನು ಕಣ್ಣಾರೆ ಕಾಣದಿದ್ದರೂ, ಅಲ್ಲಾಹ್ ನಿನ್ನನ್ನು ನೋಡುತ್ತಿರುವುದೆಂಬುದನ್ನು ನೆನಪಿಡು. ಈ ರೀತಿ ನೀನು ಸಜ್ಜನರಲ್ಲಾಗುವೆ".

ಗ್ರಾಮಸ್ಥ : "ನಾನು ಅಲ್ಲಾಹನಿಗೆ ವಿಧೇಯನಾಗ ಬಯಸುವೆ".

ಪ್ರವಾದಿ : "ನೀನು ಅಲ್ಲಾಹನ ಆದೇಶಗಳನ್ನು ಅನುಸರಿಸಿದರೆ ಅಲ್ಲಾಹನಿಗೆ ವಿಧೇಯನಾಗುವೆ".

ಗ್ರಾಮಸ್ಥ: "ನನ್ನಲ್ಲಿ ಸಮೃದ್ಧಿ ಉಂಟಾಗಬೇಕೆಂದು ಬಯಸುತ್ತೇನೆ".

ಪ್ರವಾದಿ : "ನೀನು ಪರಿಶುದ್ಧನಾಗಿದ್ದರೆ, ಅಲ್ಲಾಹ್ ನಿನ್ನಲ್ಲಿ ಸಮೃದ್ಧಿ ಉಂಟು ಮಾಡುವನು.

ಗ್ರಾಮಸ್ಥ: "ನನ್ನನ್ನು ಅಲ್ಲಾಹ್ ಮತ್ತು ಆತನ ಪ್ರವಾದಿ ಪ್ರೀತಿಸಬೇಕೆಂದು ಬಯಸುತ್ತೇನೆ".

ಪ್ರವಾದಿ : ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿ ಪ್ರೀತಿಸುವುದನ್ನೇ ನೀನೂ ಪ್ರೀತಿಸಿದರೆ, ನೀನು ಅವರ ಪ್ರೀತಿ ಪಾತ್ರರಲ್ಲಾಗುವೆ".

ಗ್ರಾಮಸ್ಥ: "ನಿರ್ಣಾಯಕ ದಿನದಂದು ಅಲ್ಲಾಹನ ಕ್ರೋಧದಿಂದ ನಾನು ರಕ್ಷಣೆ ಪಡೆಯಬಯಸುವೆ?"

ಪ್ರವಾದಿ : "ನಿನ್ನ ಸಂಗಾತಿಗಳೊಂದಿಗೆ ನೀನು ಸಂಯಮದಿಂದ ವರ್ತಿಸಿದರೆ ನಿರ್ಣಾಯಕ ದಿನದಂದು ಅಲ್ಲಾಹನ ಕ್ರೋಧದಿಂದ ನೀನು ರಕ್ಷಿಸಲ್ಪಡುವೆ.

ಗ್ರಾಮಸ್ಥ: "ನಿರ್ಣಾಯಕ ದಿನದಂದು ಅಲ್ಲಾಹ್ ನನ್ನನ್ನು ಅಪಮಾನಗೊಳಿಸಬಾರದೆಂದು ನಾನು ಬಯಸುತ್ತೇನೆ".

ಪ್ರವಾದಿ : "ನಿನ್ನ ಪಾತಿವ್ರತೆಯನ್ನು ಸಂರಕ್ಷಿಸಿಕೊಂಡರೆ ನಿರ್ಣಾಯಕ ದಿನದಂದು ಅಲ್ಲಾಹ್ ನಿನ್ನನ್ನು ಅಪಮಾನಗೊಳಿಸುವುದಿಲ್ಲ.

ಗ್ರಾಮಸ್ಥ: "ನಿರ್ಣಾಯಕ ದಿನದಂದು ಅಲ್ಲಾಹನ ರಕ್ಷಣೆಯನ್ನು ನಾನು ಬಯಸುತ್ತೇನೆ".

ಪ್ರವಾದಿ : "ನಿನ್ನ ಸಹಪಾಟಿಗಳ ದೋಷಗಳನ್ನು ಜನರ ಮುಂದೆ ಬಹಿರಂಗಪಡಿಸಬೇಡ. ಆಗ ನಿರ್ಣಾಯಕ ದಿನದಂದು ಅಲ್ಲಾಹ್ ನಿನ್ನ ದೋಷಗಳನ್ನು ಮರೆಮಾಡುವನು".

ಗ್ರಾಮಸ್ಥ: "ಅಲ್ಲಾಹನ ದೃಷ್ಟಿಯಲ್ಲಿ ಅತ್ಯುತ್ತಮ ಕಾರ್ಯಗಳಾವುವು?"

ಪ್ರವಾದಿ : ಉತ್ತಮ ನಡವಳಿಕೆ, ವಿನಮ್ರತೆ ಮತ್ತು ಸಹನೆ".

ಗ್ರಾಮಸ್ಥ: "ಅಲ್ಲಾಹನ ದೃಷ್ಟಿಯಲ್ಲಿ ಕೆಟ್ಟ ಕಾರ್ಯಗಳಾವುವು?"

ಪ್ರವಾದಿ : "ಮುಂಗೋಪ ಮತ್ತು ಜಿಪುಣತೆ".

ನೈರ್ಮಲ್ಯ ಅರ್ಧ ವಿಶ್ವಾಸವಾಗಿದೆ

ಪ್ರವಾದಿ ಮುಹಮ್ಮದ್ ನುಡಿದಿರುವರು.

20

# ಪ್ರವಾದಿ ಮುಹಮ್ಮದ್‌ರ ಮದೀನಾ ಪ್ರೇಮ

ಮಕ್ಕಾ ವಿಜಯದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮಕ್ಕಾದಲ್ಲಿ ಎರಡು ವಾರಗಳ ಕಾಲ ತಂಗಿದ್ದರು. ನಂತರ ಮದೀನಾ ಹಿಂತಿರುಗಲು ಅವರು ನಿಶ್ಚಯಿಸಿದರು. ಪ್ರವಾದಿ ಉಮ್ರಃ ನಿರ್ವಹಿಸಿ ಮದೀನಾ ತೆರಳಿದರು. ಪ್ರವಾದಿ ಕುರೈಶರ ಕಿರುಕುಳದ ಕಾರಣದಿಂದಾಗಿ ಮದೀನಾದಲ್ಲಿ ಆಶ್ರಯ ಪಡೆದಿದ್ದರು.

ಮದೀನಾದ ರೀತಿ, ರಿವಾಜುಗಳು, ಅಲ್ಲಿಯ ನಿವಾಸಿಗಳ ನಡವಳಿಕೆ ಮಕ್ಕಾದ ಜನತೆಗಿಂತ ಭಿನ್ನವಾಗಿದ್ದರೂ, ಪ್ರವಾದಿರ ಹೃದಯ ಈಗ ಮದೀನಾ ಬಯಸುತ್ತಿತ್ತು. ಈ ಮೊದಲು ಪ್ರವಾದಿ ಮಕ್ಕದಲ್ಲಿ 50 ವರ್ಷಗಳನ್ನು ಕಳೆದಿದ್ದರು. ಪ್ರವಾದಿ ಮದೀನಾ ನಿವಾಸಿಗಳನ್ನು ಬಹಳ ಪ್ರೀತಿಸುತ್ತಿದ್ದರು. ಈ ಪ್ರೀತಿಯು ಗೋತ್ರ ಸಂಬಂಧಗಳನ್ನು, ಗೋತ್ರದ ಮೇಲಿನ ಪ್ರೇಮವನ್ನು, ಸಂಸ್ಕೃತಿಗಳನ್ನು ಮೀರಿತ್ತು.

ದಿನಗಳೆದಂತೆ ಇಸ್ಲಾಮ್ ಸ್ವೀಕರಿಸುವವರ ಸಂಖ್ಯೆಯಲ್ಲಿ ಹೆಚ್ಚಳವಾಗ ತೊಡಗಿತು. ಪ್ರವಾದಿ ಈ ನವ ಮುಸ್ಲಿಮರ ತರಬೇತಿಗಾಗಿ ಗಮನಕೊಡಬೇಕಾಗಿತ್ತು. ಈ ಕಾರ್ಯಕ್ಕಾಗಿ ಕೆಲ ಸಹಾಬಿಗಳನ್ನು ಪ್ರವಾದಿ ನಿಯೋಜಿಸಿದರು.

ಅಲ್ಲಲ್ಲಿ ಇನ್ನೂ ಮುಸ್ಲಿಮ್ ಸೈನ್ಯದೊಂದಿಗೆ ಇತರ ಗೋತ್ರಗಳ ಸಂಘರ್ಷಣೆ ನಡೆಯುತ್ತಿತ್ತು. ಅವರನ್ನು ಸದೆ ಬಡಿಯಲಿಕ್ಕಾಗಿ ಪ್ರವಾದಿ ಸೇನಾ ತಂಡಗಳನ್ನು ರವಾನಿಸುತ್ತಿದ್ದರು.

# ಮದೀನಾ: ಮಾದರಿ ನಗರ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮದೀನಾ ಹಿಜ್ರತ್ ಮಾಡಿದ ನಂತರ ಇಸ್ಲಾಮಿ ಸರಕಾರದ ಭದ್ರ ಬುನಾದಿಯ ವ್ಯವಸ್ಥೆ ಮಾಡತೊಡಗಿದರು. ಆದರೆ ಈ ಕಾರ್ಯ ಅಷ್ಟು ಸುಲಭವಾಗಿರಲಿಲ್ಲ. ಏಕೆಂದರೆ ಈ ಮೊದಲು ಮದೀನಾ ಒಳಗೊಂಡಂತೆ ಅರೇಬಿಯಾ ಪ್ರದೇಶದಲ್ಲಿ ಸರ್ಕಾರ, ಆಡಳಿತದ ಹೆಸರೇ ಇರಲಿಲ್ಲ. ಪ್ರವಾದಿ ಮದೀನಾದಲ್ಲಿ ಸರ್ಕಾರದ ಸ್ಥಾಪನೆ ಶೂನ್ಯದಿಂದ ಪ್ರಾರಂಭಿಸಬೇಕಿತ್ತು. ಕಾನೂನಿನ ಹೆಸರನ್ನೇ ಕೇಳಿರದ ಜನರಿಗೆ ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳುವಂತೆ ಮಾಡುವುದು ಬಹಳ ಕಷ್ಟಕರವಾಗಿತ್ತು. ಜನರು ತಲೆಮಾರುಗಳಿಂದ ನಡೆದುಕೊಳ್ಳುತ್ತಿದ್ದ ರೀತಿ ರಿವಾಜುಗಳನ್ನು ತೊರೆದು ಈಗ ಇಸ್ಲಾಮಿ ಕಾನೂನುಗಳಂತೆ ನಡೆದುಕೊಳ್ಳಬೇಕಿತ್ತು.

ಮದೀನಾದಲ್ಲಿ ಆಡಳಿತ ಸಂಸ್ಥೆಗಳಾದ ನ್ಯಾಯಾಂಗ, ಖಜಾನೆ, ಶಿಕ್ಷಣ ವ್ಯವಸ್ಥೆ, ಮೊದಲಾದವುಗಳು ಅಸ್ತಿತ್ವದಲ್ಲಿರಲಿಲ್ಲ. ಸಂಘಟನೆಯನ್ನು, ಆಡಳಿತವನ್ನು ಕಂಡರಿಯದ ಸಮಾಜದಲ್ಲಿ, ಪ್ರವಾದಿ ಸಾಮಾಜಿಕ ಸಂಘಟನೆಯ ಕಾರ್ಯವನ್ನು ಆರಂಭಿಸಿದರು. ಜೀವನದ ಮತ್ತು ಅಭಿವೃದ್ಧಿಯ ಯಾವುದೇ ರಂಗವನ್ನು ಅವರು ಬಿಡಲಿಲ್ಲ. ಕಾನೂನುಗಳನ್ನು, ನಿಯಮಗಳನ್ನು ರೂಪಿಸುವುದು ಹಳೆಯ ಸಂಪ್ರದಾಯಗಳನ್ನು ತೊಡೆದು ಹಾಕುವುದು, ಮದೀನಾ ಜನತೆಗೆ ಹೊಸ ರೂಪಿತ ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳುವಂತೆ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಅರೇಬಿಯಾ ಪ್ರದೇಶ ಎರಡು ಮಿಲಿಯ ಕಾಲದಿಂದ ಅಂಧಕಾರದಲ್ಲಿ ಮುಳುಗಿದ್ದು, ಪ್ರವಾದಿ ಮದೀನಾ ನಗರವನ್ನು ಇಡಿಯ ಅರೇಬಿಯಾದಲ್ಲಿ ಒಂದು ಮಾದರಿ, ಮಾರ್ಗದರ್ಶಕ ನಗರವನ್ನಾಗಿಸಿದರು. 1500 ವರ್ಷಗಳ ಹಿಂದೆ ಪ್ರವಾದಿ ಕೈಗೊಂಡ ಸುಧಾರಣಾ ಕ್ರಮಗಳ ಮೇಲೆ ಒಂದು ನೋಟವನ್ನು ಹರಿಸಿದರೂ, ಅವರು ಅವರ ಕಾಲಕ್ಕಿಂತ ಬಹಳ ಮುಂದೆ ಇದ್ದಿದು ಸ್ಪಷ್ಟವಾಗುತ್ತದೆ. 'ಭವಿಷ್ಯ'ದಲ್ಲಿ ಮಧ್ಯ ಪೂರ್ವ ರಾಷ್ಟ್ರಗಳಲ್ಲಿ ಇಸ್ಲಾಮಿ ನಾಗರಿಕತೆಗೆ ಪ್ರವಾದಿ ಭದ್ರ ಬುನಾದಿಯನ್ನು ಹಾಕಿದರು.

ಪ್ರವಾದಿ ಮೊಟ್ಟ ಮೊದಲು ಮದೀನಾದಲ್ಲಿ ಮಸ್ಜಿದ್ ನಬವಿ ನಿರ್ಮಿಸಿದರು. ಮಸ್ಜಿದ್ ನಬವಿ ಎಲ್ಲಾ ಚಟುವಟಿಕೆಗಳ ಕೇಂದ್ರವಾಗಿತ್ತು. ಪ್ರವಾದಿರ ಮನೆ ಈ ಮಸೀದಿಗೆ ಅಂಟಿಕೊಂಡಿತ್ತು. ಈ ಮಸೀದಿಯಲ್ಲಿಯೇ ಜಮಾಅತ್ ನೊಂದಿಗೆ ನಮಾಝ್ ನಿರ್ವಹಿಸಲಾಗುತ್ತಿತ್ತು. ಈ ಮಸೀದಿ ಸಮುದಾಯ ಕೇಂದ್ರವೂ ಆಗಿದ್ದಿತು. ಸರ್ಕಾರದ ಕೇಂದ್ರ ಸ್ಥಾನವೂ ಆಗಿತ್ತು. ಜ್ಞಾನಾರ್ಜನೆಯ ಕೇಂದ್ರ, ಸಂದರ್ಭಕ್ಕೆ ಅನುಸಾರವಾಗಿ ಚಿಕಿತ್ಸಾ ಕೇಂದ್ರ, ಪುನರ್ವಸತಿ ಕೇಂದ್ರವಾಗಿತ್ತು ಈ ಮಸೀದಿಯು ಬೆಳೆಯುತ್ತಿದ್ದ ಮದೀನಾ ನಗರದ ಕೇಂದ್ರ ಸ್ಥಳದಲ್ಲಿದ್ದುದರಿಂದ ಎಲ್ಲಾರಿಗೂ ಇಲ್ಲಿ ಆಗಮಿಸಲು ಸುಲಭವಾಗಿತ್ತು. ವಿವಿಧ ಗೋತ್ರಗಳ ಜನರು, ವಿವಿಧ

ಭಾಷೆಗಳನ್ನಾಡುವವರು, ವಿವಿಧ ಸಂಪ್ರದಾಯಗಳನ್ನಾಚರಿಸುವವರು ಇಲ್ಲಿ ಸೇರುತ್ತಿದ್ದರಿಂದ ಇದು ಸಾಮಾಜಿಕ ಐಕ್ಯತೆಯ ಕೇಂದ್ರವಾಗಿತ್ತು. ಹೊರ ಊರಿನಿಂದ ಬರುತ್ತಿದ್ದ ಜನರು, ತಂಡಗಳು ಮಸೀದಿಯ ಸುತ್ತಮುತ್ತ ತಂಗುತ್ತಿದ್ದರು. ಸಹಾಯ ಬೇಡುವವರು, ಸಹಾಯ ನೀಡುವವರು ಇಲ್ಲಿಯೇ ಓಡಾಡುತ್ತಿರುತ್ತಿದ್ದರು.

## ಇತಿಹಾಸದಲ್ಲಿ ರಾಷ್ಟ್ರದ ಪ್ರಥಮ ಲಿಖಿತ ಸಂವಿಧಾನ

ಮದೀನ ಆಗಮಿಸಿದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇಸ್ಲಾಮಿ ರಾಜ್ಯದ ಸಂವಿಧಾನವನ್ನು ರೂಪಿಸಿದರು. ಇದು ಇತಿಹಾಸದಲ್ಲಿಯೇ ಪ್ರಥಮವಾಗಿ ಲಿಖಿತ ರೂಪದ ಸಂವಿಧಾನವಾಗಿತ್ತು. ಈ ಸಂವಿಧಾನದಲ್ಲಿ ಮುಸ್ಲಿಮರು, ಯಹೂದಿಯರು, ಕ್ರೈಸ್ತರು, ಬುಡಕಟ್ಟು ಜನರು ಒಳಗೊಂಡಂತೆ ಎಲ್ಲಾ ಜನರ ಹಕ್ಕು ಬಾಧ್ಯತೆಗಳನ್ನು ವಿಸ್ತಾರವಾಗಿ ತಿಳಿಸಲಾಗಿತ್ತು.

## ವಿದ್ಯಾರ್ಜನೆಗೆ ಪ್ರಾಮುಖ್ಯತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿದ್ಯಾರ್ಜನೆಗೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದರು. ವಿದ್ಯಾರ್ಜನೆಯು ಪ್ರತಿಯೋರ್ವ ಮುಸ್ಲಿಮ್‌ಗೆ ಕಡ್ಡಾಯವಾಗಿದೆಯೆಂದು ಪ್ರವಾದಿ ಘೋಷಿಸಿದ್ದರು. ಜ್ಞಾನಾರ್ಜನೆಯು ಆರಾಧನೆಗೆ ಸಮವೆಂದು ತಿಳಿಸಿದ ಪ್ರವಾದಿ, ದೀರ್ಘಕಾಲದ ಆರಾಧನೆಗಿಂತ ಜ್ಞಾನಾರ್ಜನೆಗಾಗಿ ಕಳೆಯುವ ಅಲ್ಪ ಸಮಯವು ಹೆಚ್ಚು ಉನ್ನತವಾದುದೆಂದು ಘೋಷಿಸಿದ್ದರು. ಧರ್ಮದ ಜ್ಞಾನವನ್ನು ಹೊಂದಿರುವ ವ್ಯಕ್ತಿ ಇತರೆಲ್ಲರಿಗಿಂತ ಶ್ರೇಷ್ಠ ಎಂದು ನುಡಿದಿದ್ದರು. ಜ್ಞಾನಾರ್ಜನೆ ಮಾಡುವ ವ್ಯಕ್ತಿಗೆ ದೇವಚರರೂ ಸಹ ತಮ್ಮ ರೆಕ್ಕೆಗಳನ್ನು ಹರಡುತ್ತಾರೆ ಎಂದಿದ್ದರು. ಜ್ಞಾನಿಗಳು ಪ್ರವಾದಿಗಳ ಸಂಗಾತಿಗಳಾಗಿದ್ದು, ಪ್ರವಾದಿಗಳು ಜ್ಞಾನವನ್ನು ಗಳಿಸಿದ್ದರೇ ವಿನಃ ಸಂಪತ್ತನ್ನಲ್ಲ ಎಂದು ನುಡಿದಿದ್ದರು.

## ಇಸ್ಲಾಮಿನ ಪ್ರಥಮ ವಿಶ್ವವಿದ್ಯಾಲಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಎಲ್ಲಾ ಜನರಿಗೂ ಶಿಕ್ಷಣ ದೊರಕಬೇಕೆಂಬ ಅಭಿಲಾಷೆಯನ್ನು ಹೊಂದಿದ್ದರು. ಅಸ್ಸುಫಃದಲ್ಲಿ ವಿವಿಧ ಪ್ರದೇಶಗಳಿಂದ ಬಂದಿದ್ದ ಜನರಿದ್ದರು. ಈ ಜನರು ವಿವಿಧ ಕೆಲಸಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಇವರಲ್ಲಿ ಓದು ಬರಹ ಬಲ್ಲ ಜನರಿಗೆ, ಪ್ರವಾದಿ, ಇತರ ಜನರಿಗೆ ಓದು ಬರಹ ಕಲಿಸುವ ಜವಾಬ್ದಾರಿ ನೀಡಿದರು. ಇಸ್ಲಾಮಿನ ಬಗ್ಗೆ ಹೆಚ್ಚಿನ ಜ್ಞಾನವುಳ್ಳವರಿಗೆ, ನವ ಮುಸ್ಲಿಮರಿಗೆ ಇಸ್ಲಾಮಿ ಶಿಕ್ಷಣವನ್ನು ನೀಡುವ

ಜವಾಬ್ದಾರಿಯನ್ನು ನೀಡಿದರು. ಇನ್ನೂ ಕೆಲವರನ್ನು ಸುತ್ತಮುತ್ತಲ ಪ್ರದೇಶಗಳಿಗೆ ರವಾನಿಸಿ, ಅಲ್ಲಿಯ ಜನರಿಗೆ ಇಸ್ಲಾಮಿ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಯಿತು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಜ್ಞಾನಾರ್ಜನೆಗೆ ಆರಂಭದಿಂದಲೂ ಬಹಳ ಒತ್ತು ನೀಡಿದ್ದರು. ಮಸ್ಜಿದ್‌ನಬವಿಯ ಭಾಗವಾಗಿದ್ದ ಅಸ್ಸುಫಃ ಇಸ್ಲಾಮಿ ಜ್ಞಾನಾರ್ಜನೆಯ ಕೇಂದ್ರ ಸ್ಥಾನವಾಗಿತ್ತು. ಇಲ್ಲಿ ಜನರಿಗೆ ಇಸ್ಲಾಮಿನ ಬಗ್ಗೆ ಶಿಕ್ಷಣವನ್ನು ನೀಡಲಾಗುತ್ತಿತ್ತು. ಇಸ್ಲಾಮ್ ಸ್ವೀಕರಿಸುತ್ತಿದ್ದ ಗೋತ್ರಗಳ ಬಳಿಗೆ ಇಲ್ಲಿಂದ ನಿಯೋಗಗಳನ್ನು ರವಾನಿಸಿ ಇಸ್ಲಾಮಿನ ತರಬೇತಿಯನ್ನು ನೀಡಲಾಗುತ್ತಿತ್ತು.

ಅಸ್ಸುಫಃ ಹಗಲಿನಲ್ಲಿ ವಿದ್ಯಾರ್ಜನೆಯ ಕೇಂದ್ರವೂ, ರಾತ್ರಿಯಲ್ಲಿ ನವ ಮುಸ್ಲಿಮರ ತಂಗುದಾಣವೂ ಆಗಿತ್ತು. ವಾಸ್ತವದಲ್ಲಿ ಅಸ್ಸುಫಃ ಇಸ್ಲಾಮಿನ ವಸತಿ ವಿಶ್ವವಿದ್ಯಾಲಯವಾಗಿತ್ತು. ಮುಆಝ್ ಬಿನ್ ಜಬಲ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಇದರ ಮುಖ್ಯ ನಿರ್ವಾಹಕರಾಗಿದ್ದರು. ಮುಆಝ್ ಇಸ್ಲಾಮಿಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ್ದರು.

ಅಸ್ಸುಫಃದ ನಂತರ ಇತರ ಶಾಲೆಗಳನ್ನು ಸ್ಥಾಪಿಸಲಾಯಿತು. ಇಸ್ಲಾಮಿ ವಿದ್ವಾಂಸ ಬಾಲಧುರಿರ ಪ್ರಕಾರ ಮದೀನಾದಲ್ಲಿ ಮಸೀದಿಗೆ ತಾಗಿಕೊಂಡು 9 ಶಾಲೆಗಳಿದ್ದವು.

ಪ್ರವಾದಿ ಮುಹಮ್ಮದ್ ತಮ್ಮ ಸಂಗಾತಿಗಳನ್ನು ನವ ಮುಸ್ಲಿಮರ ತರಬೇತಿಗಾಗಿ ದೂರದೂರದ ಪ್ರದೇಶಗಳಿಗೂ ರವಾನಿಸಿದರು. ಅಮ್ರ್ ಬಿನ್ ಹಝ್ಮ್ ಯಮನ್‌ನ ಗವರ್ನರ್ ಆಗಿ ನೇಮಕಗೊಂಡಾಗ, ಆಡಳಿತದ ಜೊತೆಗೆ ಜನರಿಗೆ ಶಿಕ್ಷಣ ನೀಡುವ ಕರ್ತವ್ಯವನ್ನೂ ಅವರು ನಿಭಾಯಿಸಬೇಕಿತ್ತು.

## ಮಹಿಳೆಯರಿಗೆ ಶಿಕ್ಷಣ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಜ್ಞಾನಾರ್ಜನೆಯಲ್ಲಿ ಪುರುಷರು ಮತ್ತು ಮಹಿಳೆಯರಲ್ಲಿ ತಾರತಮ್ಯ ಮಾಡಲಿಲ್ಲ. ಕುರ್‌ಆನಿನ ಆಯತ್‌ಗಳು ಅವತೀರ್ಣಗೊಂಡಾಗ ಪ್ರವಾದಿ ಮೊದಲು ಪುರುಷರ ಸಭೆಯಲ್ಲಿ ಅವುಗಳನ್ನು ಪಠಿಸುತ್ತಿದ್ದರು. ನಂತರ ಮಹಿಳೆಯರ ಸಭೆಯಲ್ಲಿ ಪಠಿಸುತ್ತಿದ್ದರು. ವಾರದಲ್ಲಿ ಒಂದು ದಿನವನ್ನು ಮಹಿಳೆಯರ ಶಿಕ್ಷಣಕ್ಕಾಗಿ ಮೀಸಲಿರಿಸಿದ್ದರು. ಮಹಿಳೆಯರು ಎಲ್ಲಾ ತರಹದ ಪ್ರಶ್ನೆಗಳನ್ನು ಪ್ರವಾದಿರಿಗೆ ಕೇಳುತ್ತಿದ್ದರು. ಪ್ರವಾದಿ ಈ ಎಲ್ಲಾ ಪ್ರಶ್ನೆಗಳನ್ನು ಶಾಂತ ರೀತಿಯಲ್ಲಿ ಉತ್ತರಿಸುತ್ತಿದ್ದರು.

ಅನ್ಸಾರ್ ಮಹಿಳೆಯರು ಜ್ಞಾನಾರ್ಜನೆಗಾಗಿ ತೋರುತ್ತಿದ್ದ ಉತ್ಸುಕತೆಗಾಗಿ ಆಯಿಷಾ

ಅವರನ್ನು ಹೊಗಳುತ್ತಿದ್ದರು. ಪ್ರವಾದಿರ ಕಾಲದಲ್ಲಿ ಕೆಲಮಹಿಳೆಯರು ಕುರ್‌ಆನ್ ಕಂಠಪಾಠ ಮಾಡಿದ್ದರು. ಇನ್ನು ಕೆಲ ಮಹಿಳೆಯರು ಕುರ್‌ಆನಿನಲ್ಲಿ ಪ್ರಸ್ತಾಪವಾಗಿರುವ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಅನೇಕ ಮಹಿಳೆಯರು ಹದೀಸ್‌ಗಳನ್ನು ಕಲಿತು ಅವುಗಳನ್ನು ವರದಿ ಮಾಡುತ್ತಿದ್ದರು. ಕೆಲ ಮಹಿಳೆಯರು ಪುರುಷರಂತೆ ಅಧಿಕಾರಯುಕ್ತವಾಗಿ ಫತ್ವಾ ನೀಡುತ್ತಿದ್ದರು. ಓರ್ವ ಮಹಿಳೆ ಉಮ್ಮುಲ್ ಫದ್ಲ್ ಕರೀಮಾ ತಮ್ಮ ಮನೆಯಲ್ಲಿ ಶಾಲೆಯನ್ನು ನಡೆಸುತ್ತಿದ್ದರು.

## ಸೆಕ್ರೆಟರಿಯಟ್

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ 50 ಅನುಯಾಯಿಗಳು ಪ್ರವಾದಿರ ಬರಹಗಾರರಾಗಿದ್ದರು ಎಂದು ಇತಿಹಾಸಕಾರರು ದಾಖಲಿಸಿದ್ದಾರೆ. ಇದರಲ್ಲಿ ಕೆಲವರು ಕುರ್‌ಆನಿನ ಸೂಕ್ತಗಳು ಅವತೀರ್ಣಗೊಳ್ಳುತ್ತಿರುವಂತೆ ಅವುಗಳನ್ನು ಬರೆಯುತ್ತಿದ್ದರು. ಇನ್ನು ಕೆಲವರು ಪ್ರವಾದಿರ ಪರವಾಗಿ ವಿವಿಧ ದೇಶಗಳ ರಾಜರುಗಳಿಗೆ, ರಾಜ್ಯಪಾಲರಿಗೆ ಅಧಿಕೃತ ಪತ್ರಗಳನ್ನು ಬರೆಯುತ್ತಿದ್ದರು. ಇನ್ನಿತರರು ಝಕಾತ್ ಮತ್ತು ಇತರ ಲೆಕ್ಕಾಚಾರವನ್ನು ಇಡುತ್ತಿದ್ದರು.

## ಅಧಿಕೃತ ಮೊಹರು ಮತ್ತು ಪತ್ರಗಳು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇತರ ರಾಜರುಗಳಿಗೆ, ರಾಜ್ಯಪಾಲರಿಗೆ ಬರೆದ ಪತ್ರಗಳು ಒಪ್ಪಂದಗಳು, ಅಧಿಕಾರಿಗಳಿಗೆ ನೀಡಿದ ಸೂಚನೆಗಳು ಮೊದಲಾದ 400 ದಾಖಲೆಗಳನ್ನು ಸುರಕ್ಷಿತವಾಗಿಡಲಾಗಿದೆ.

ಪತ್ರಗಳನ್ನು "ಅಲ್ಲಾಹನ ನಾಮದಿಂದ"ಎಂದು ಬರೆದು ಪ್ರಾರಂಭಿಸಲಾಗುತ್ತಿತ್ತು. ನಂತರ ಪತ್ರವನ್ನು ಯಾರಿಂದ ಬರೆಯಲಾಗಿದೆ ಮತ್ತು ಯಾರಿಗೆ ಬರೆಯಲಾಗಿದೆ ಅವರ ವಿಳಾಸವಿರುತ್ತಿತ್ತು. ಪತ್ರದ ಕೊನೆಯಲ್ಲಿ ಪ್ರವಾದಿರ ಅಧಿಕೃತ ಮೊಹರನ್ನು ಹಾಕಲಾಗುತ್ತಿತ್ತು. ಅದರಲ್ಲಿ 'ಮುಹಮ್ಮದ್', 'ಅಲ್ಲಾಹನ ಪ್ರವಾದಿ'ಎಂದು ಬರೆಯಲಾಗಿತ್ತು.

## ಕಾರ್ಯದರ್ಶಿಗಳು ಮತು ವಿದೇಶಿ ಭಾಷೆ ಕಲಿಯುವಿಕೆ

ಅಬ್ದುಲ್ಲಾ ಬಿನ್ ಉಮರ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ವಿಶೇಷ ಕಾರ್ಯದರ್ಶಿ, ಅನಸ್ ಕಾರ್ಯದರ್ಶಿ, ಝೈದ್ ಬಿನ್ ಸಾಬಿತ್ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಝೈದ್ ಬಹಳ ಬುದ್ಧಿವಂತರಾಗಿದ್ದರು. ಪ್ರವಾದಿ ಅವರಿಗೆ ಯಹೂದಿಯರ ಹಿಬ್ರೂ ಭಾಷೆ

ಕಲಿಯುವಂತೆ ಆದೇಶಿಸಿದಾಗ ಅಲ್ಪ ಕಾಲದಲ್ಲಿಯೇ ಅದನ್ನು ಕಲಿತರು. ನಂತರ ಪ್ರವಾದಿ ಅವರಿಗೆ ಸಿರಿಯಾ ಭಾಷೆ ಕಲಿಯಲು ತಿಳಿಸಿದಾಗ, ಅವರು ಅದನ್ನು ಕಲಿತರು. ಝೈದ್ ರನ್ನು 'ಕುರ್‌ಆನಿನ ಸೂಕ್ತಗಳನ್ನು ಬರೆಯುವವರು' ಎಂದು ಕರೆಯಲಾಗುತ್ತಿತ್ತು.

ಪ್ರವಾದಿ ತಮ್ಮ ಕಾಲದಲ್ಲಿಯೇ ಕುರ್‌ಆನ್‌ನನ್ನು ಗ್ರಂಥರೂಪದಲ್ಲಿ ರಚಿಸಲು ಒಂದು ಸಮಿತಿಯನ್ನು ರಚಿಸಿದ್ದರು. ಅಬೂಬಕರ್ ಸಿದ್ದೀಕ್, ಉಮರ್, ಝೈದ್, ಉಸ್ಮಾನ್, ಅಲಿ ಈ ಸಮಿತಿಯ ಸದಸ್ಯರಾಗಿದ್ದರು ಮತ್ತು ಝೈದ್ ಈ ಸಮಿತಿಯ ಅಧ್ಯಕ್ಷರಾಗಿದ್ದರು.

## ಜನಗಣತಿ

ಮದೀನಾ ಆಗಮಿಸಿದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನಗರದ ಜನಗಣತಿಯನ್ನು ಮಾಡಿಸಿದ್ದರು. ಜನಗಣತಿಯಂತೆ ಮದೀನಾದ ಒಟ್ಟು ಜನಸಂಖ್ಯೆ 10,000 ಇದ್ದು, ಮುಸ್ಲಿಮರ ಜನಸಂಖ್ಯೆ 500 ಇದ್ದಿತು.

ಮದೀನಾದಲ್ಲಿ ಇಸ್ಲಾಮಿನ ಆಗಮನದ ಮೊದಲು, ಯಹೂದಿಯರು ಜನಸಂಖ್ಯೆ ಗಣತಿಯನ್ನು ಮತ್ತು ಜನಸಂಖ್ಯೆಯ ಅಧ್ಯಯನವನ್ನು ಪಾಪವೆಂದು, ಸೃಷ್ಟಿಕರ್ತನ ಉದ್ದೇಶದಲ್ಲಿ ಹಸ್ತಕ್ಷೇಪವೆಂದು ನುಡಿಯುತ್ತಿದ್ದರು.

## ನಗರ ಆಡಳಿತ

ಮದೀನಾ ನಗರದ ಆಡಳಿತಕ್ಕಾಗಿ ಒಂದು ವ್ಯವಸ್ಥೆಯನ್ನು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರೂಪಿಸಿದರು. ಇದಕ್ಕೆ 'ಬಲಾದಿಯ' ಎಂದು ಹೆಸರಿಸಲಾಯಿತು. ಅರಬಿ ಭಾಷೆಯಲ್ಲಿ ನಗರಕ್ಕೆ 'ಬಲದ್' ಎನ್ನುತ್ತಾರೆ.

## ನಗರದ ಯೋಜನೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮನೆಗಳನ್ನು ನಿರ್ಮಿಸಲು ನಿರ್ದಿಷ್ಟ ನಿಯಮಗಳನ್ನು ರೂಪಿಸಿದರು. ಮನೆಗಳನ್ನು ನಿರ್ಮಿಸುವಾಗ ಚರಂಡಿ ವ್ಯವಸ್ಥೆ ಕಡ್ಡಾಯವಾಗಿ ಮಾಡಬೇಕಿತ್ತು. ಬಡಾವಣೆಗಳ ದಾರಿಯ ಅಗಲ ಇಂತಿಷ್ಟೇ ಇರಬೇಕೆಂದು ನಿಯಮ ರೂಪಿಸಲಾಗಿತ್ತು. ಮುಖ್ಯರಸ್ತೆಗಳು ಎಷ್ಟು ಅಗಲವಿರುತ್ತಿತ್ತೆಂದರೆ ಎರಡು ಒಂಟೆಗಳು ಸಾಮಾನು ಹೇರಿಕೊಂಡು ಸಲೀಸಾಗಿ ಸಾಗಬಹುದಿತ್ತು. ರಸ್ತೆಯ ಬದಿಗಳಲ್ಲಿ ದಾರಿಹೋಕರಿಗೆ ಅನುಕೂಲವಾಗಲೆಂದು ಮರಗಳನ್ನು ನೆಡಲು ಪ್ರವಾದಿ ಆಜ್ಞಾಪಿಸಿದ್ದರು.

## ವಸತಿ

ಮಸ್ಜಿದ್‌ನಬವಿಯ ಪ್ರಾಮುಖ್ಯತೆಯಿಂದಾಗಿ, ದೂರದೃಷ್ಟಿಯಿಂದ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), ಮಸೀದಿಯ ಸುತ್ತಮುತ್ತ ಮನೆಗಳನ್ನು, ಕೊಠಡಿಗಳನ್ನು ನಿರ್ದಿಷ್ಟ ಕುಟುಂಬಗಳಿಗೆ, ನಿರ್ದಿಷ್ಟ ಉದ್ದೇಶಗಳಿಗಾಗಿ ನೀಡಿದರು. ಜನರ ಏಕಾಂತತೆಯನ್ನು ಕಾಪಾಡಲಿಕ್ಕಾಗಿ ಮನೆಯ ಸುತ್ತ ಗೋಡೆ ನಿರ್ಮಿಸಲು ಪ್ರವಾದಿ ಆದೇಶಿಸಿದ್ದರು.

ಇಸ್ಲಾಮ್ ಅವಿಭಾಜಿತ ಕುಟುಂಬಗಳನ್ನು ಉತ್ತೇಜಿಸುವುದಿಲ್ಲ. ಪತಿ ಪತ್ನಿ ಮತ್ತು ಮಕ್ಕಳಿರುವ "ಅಣು ಕುಟುಂಬಗಳನ್ನು" ಇಸ್ಲಾಮ್ ಉತ್ತೇಜಿಸುತ್ತದೆ. ನವ ವಿವಾಹಿತರಿಗೆ ಪ್ರತ್ಯೇಕ ವಸತಿ ಕಲ್ಪಿಸಬೇಕೆಂದು ಪ್ರವಾದಿ ಆದೇಶಿಸಿದ್ದರು. ಈ ರೀತಿ ಪತಿ, ಪತ್ನಿಯರ ಸುತ್ತ ಒಂದು ಹೊಸ ಕುಟುಂಬದ ರಚನೆಯಾಗಲು ಉದ್ದೇಶಿಸಲಾಗಿತ್ತು. ಪ್ರತಿಯೊಂದು ಕುಟುಂಬಕ್ಕೆ ಪ್ರತ್ಯೇಕ ವಸತಿ, ಒಂದು ಸವಾರಿ ಇರಬೇಕೆಂದು ಬಯಸಿದ್ದರೆಂದು ವರದಿ ಮಾಡಲಾಗಿದೆ.

## ನೀರು ಸರಬರಾಜು

ಸಾರ್ವಜನಿಕ ನೀರು ಸರಬರಾಜಿನ ಕಲ್ಪನೆ ಆಗ ಇರಲಿಲ್ಲ. ಇಡಿಯ ಮದೀನಾ ನಗರದಲ್ಲಿ ಕುಡಿಯುವ ನೀರಿಗಾಗಿ ಒಂದೇ ಬಾವಿ ಇತ್ತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇದನ್ನು ಅದರ ಮಾಲಿಕನಿಂದ ಖರೀದಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ದಾನವಾಗಿ ನೀಡುವಂತೆ ಮುಸ್ಲಿಮರಿಗೆ ಮನವಿ ಮಾಡಿದರು. ಉಸ್ಮಾನ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಬಾವಿಯನ್ನು ಖರೀದಿಸಿ, ದಾನ ಮಾಡಿದರು.

ಪ್ರವಾದಿ ಬಾವಿಗಳನ್ನು ತೋಡಿಸಿ, ಸಾರ್ವಜನಿಕರ ಉಪಯೋಗಕ್ಕಾಗಿ ಅವುಗಳನ್ನು ದಾನ ಮಾಡುವುದನ್ನು ಉತ್ತೇಜಿಸುತ್ತಿದ್ದರು.

ಪ್ರವಾದಿರ ಅನುಯಾಯಿ ಸಅದ್ ಬಿನ್ ಇಬಾದ್ಹ್‌ರ ತಾಯಿ ನಿಧನ ಹೊಂದಿದಾಗ, ಅವರು, ಅವರ ತಾಯಿಯ ಪರವಾಗಿ ಪುಣ್ಯ ಕಾರ್ಯವನ್ನು ಮಾಡಬಯಸಿದರು. ಯಾವ ಕಾರ್ಯವನ್ನು ಮಾಡಬೇಕೆಂದು ಸಅದ್ ಬಿನ್ ಇಬಾದ್ಹ್:, ಪ್ರವಾದಿರನ್ನು ವಿಚಾರಿಸಿದಾಗ, ಪ್ರವಾದಿ ಅವರಿಗೆ ಬಾವಿಯನ್ನು ತೋಡಿಸಿ, ಸಾರ್ವಜನಿಕರ ಉಪಯೋಗಕ್ಕಾಗಿ ದಾನ ಮಾಡುವಂತೆ ಸಲಹೆ ನೀಡಿದರು. ಸಅದ್ ಬಿನ್ ಇಬಾದ್ಹ್‌ ಅದೇ ರೀತಿ ಕ್ರಮ ಕೈಗೊಂಡರು.

ನಗರಗಳನ್ನು ನದಿಗಳ ಸುತ್ತ ನಿರ್ಮಿಸಲಾಗಿತ್ತು. ನೀರನ್ನು ನದಿಯ ಮೇಲ್ಭಾಗದಿಂದ

ಪಡೆಯಲಾಗುತ್ತಿತ್ತು ಮತ್ತು ಬಳಕೆಯಾದ ನೀರನ್ನು ನಗರದ ಹೊರವಲಯದಲ್ಲಿ ನದಿಯ ಕೆಳಭಾಗದಲ್ಲಿ ಹರಿಯಬಿಡಲಾಗುತ್ತಿತ್ತು. ನದಿಯ ನೀರನ್ನು ಕಲುಷಿತಗೊಳಿಸುವ ಎಲ್ಲಾ ಕಾರ್ಯಗಳನ್ನು ಶರೀಅತ್ ಮುಖಾಂತರ ನಿಷೇಧಿಸಲಾಗಿತ್ತು. ಪ್ರತಿಯೊಂದು ನಗರಕ್ಕೆ ಸರಹದ್ದುಗಳಿರುತ್ತಿದ್ದವು. ನದಿಯಲ್ಲಿ ಹರಿಯುವ ನೀರಿನ ಪ್ರಮಾಣಕ್ಕೆ ಅಧಿಕವಾಗಿ ಜನಸಂಖ್ಯೆ ಬೆಳೆಯದಂತೆ ಕ್ರಮವಹಿಸಲಾಗಿತ್ತು.

## ಪರಂಪರ ಸಂರಕ್ಷಣೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಾಸ್ತುಶಾಸ್ತ್ರವನ್ನು ಮತ್ತು ಪರಂಪರೆಯ ಸಂರಕ್ಷಣೆಗಾಗಿ ಕ್ರಮವಹಿಸಿದ್ದರು. ಮನೆಗಳನ್ನು ಕಟ್ಟುವಾಗ ಹಳೆಯ ಕೋಟೆಗಳನ್ನು, ಗೋಡೆಗಳನ್ನು ಕೆಡವಬಾರದೆಂದು ಆಜ್ಞಾಪಿಸಿದ್ದರು. ಮನೆಯ ಒಳಗೂ, ಮನೆಯ ಸುತ್ತಮುತ್ತಲೂ ಗಿಡಗಳನ್ನು ಬೆಳೆಸಲು ಉತ್ತೇಜಿಸುತ್ತಿದ್ದರು. ಪ್ರಳಯ ದಿನವು ಸಮೀಪಿಸಿದ್ದು, ಒಬ್ಬರ ಬಳಿ ಖರ್ಜೂರದ ಸಸಿ ಇದ್ದರೆ, ಆ ಸಸಿಯನ್ನು ನೆಡಬೇಕೆಂದು ಪ್ರವಾದಿ ತಿಳಿಸಿರುವುದಾಗಿ ವರದಿ ಮಾಡಲಾಗಿದೆ. ಇದರಿಂದ ಪರಿಸರ ಸಂರಕ್ಷಣೆಗೆ ಪ್ರವಾದಿ ಎಷ್ಟು ಕಾಳಜಿ ವಹಿಸುತ್ತಿದ್ದರೆಂಬುದು ತಿಳಿದು ಬರುತ್ತದೆ.

## ಅತಿಥಿ ಗೃಹಗಳು

ಮದೀನಾ ನಗರವು ಅಧಿಕಾರದ ಕೇಂದ್ರವಾಗಿ ಹೊರಹೊಮ್ಮಿದಂತೆ, ಆಡಳಿತದ, ವಾಣಿಜ್ಯ ಮತ್ತು ವ್ಯಾಪಾರ ಮತ್ತು ಜ್ಞಾನಾರ್ಜನೆಯ ಕೇಂದ್ರವೂ ಆಗಿ ಬೆಳೆಯತೊಡಗಿತು. ಮದೀನಾ ನಗರವು ಉತ್ತರದಲ್ಲಿ ಸಿರಿಯಾ ಮತ್ತು ಫೆಲೆಸ್ತೀನ್, ದಕ್ಷಿಣದಲ್ಲಿ ಯಮನ್‌ನ ನಡುವೆ ಇತ್ತು. ಪ್ರಯಾಣಿಕರು ಮದೀನಾದಲ್ಲಿ ತಂಗಿ, ಆಹಾರ ಸಾಮಗ್ರಿಗಳನ್ನು, ಜಾನುವಾರುಗಳಿಗೆ ಮೇವನ್ನು ಖರೀದಿಸುತ್ತಿದ್ದರು. ದೂರದೂರದ ಪ್ರದೇಶಗಳಿಂದ ಹೊಸ ಇಸ್ಲಾಮಿ ಸಾಮ್ರಾಜ್ಯದೊಂದಿಗೆ ಸಂಬಂಧಗಳನ್ನು ಬೆಳೆಸುವ ಉದ್ದೇಶದಿಂದ ನಿಯೋಗಗಳೂ ಬರುತ್ತಿದ್ದವು. ಈ ಜನರಿಗೆ ತಂಗಲಿಕ್ಕಾಗಿ ಪ್ರವಾದಿ ಅತಿಥಿ ಗೃಹಗಳನ್ನು ಸ್ಥಾಪಿಸಿದರು. ಆರಂಭದಲ್ಲಿ ಮಸ್ಜಿದ್‌ನಬವಿಯ ಬಳಿಯಲ್ಲಿದ್ದ ಖಾಸಗಿ ಮನೆಗಳಲ್ಲಿ ಜನರಿಗೆ ತಂಗಲಿಕ್ಕಾಗಿ ವ್ಯವಸ್ಥೆ ಮಾಡಲಾಗುತ್ತಿತ್ತು. ಏಕಕಾಲದಲ್ಲಿ ಸುಮಾರು 200 ನಿಯೋಗಗಳು ಮದೀನಾದಲ್ಲಿ ತಂಗುತ್ತಿದ್ದವು ಎಂದು ವರದಿ ಮಾಡಲಾಗಿದೆ.

## ಆಸ್ಪತ್ರೆಗಳು

ಇಸ್ಲಾಮಿನ ಆಗಮನದ ಮೊದಲು ಸಾರ್ವಜನಿಕ ಆಸ್ಪತ್ರೆಗಳ ಕಲ್ಪನೆ ಜನರಲ್ಲಿ ಇರಲಿಲ್ಲ. ಜನರು ಸ್ವತಃ ರೋಗರುಜಿನಗಳಿಗೆ ಮದ್ದನ್ನು ನೀಡುತ್ತಿದ್ದರು. ಇಸ್ಲಾಮಿನ ಆಗಮನದ ನಂತರ ಸಮಾಜ ಸೇವೆಯ ಕಲ್ಪನೆಯ ಕಾರಣದಿಂದಾಗಿ ಸಾರ್ವಜನಿಕ ಆಸ್ಪತ್ರೆಗಳು ಅಸ್ತಿತ್ವಕ್ಕೆ ಬಂದವು. ವೈದ್ಯಕೀಯ ಕ್ಯಾಂಪ್‌ಗಳನ್ನು ಏರ್ಪಡಿಸುವಲ್ಲಿ, ಸಾರ್ವಜನಿಕ ಆಸ್ಪತ್ರೆಗಳನ್ನು ಸ್ಥಾಪಿಸುವಲ್ಲಿ ಇಸ್ಲಾಮ್ ಪ್ರಮುಖ ಪಾತ್ರವನ್ನು ನಿರ್ವಹಿಸಿದೆ.

ಪ್ರವಾದಿರ ಓರ್ವ ಅನುಯಾಯಿ ರಾಫಿದ ಮಸ್ಜಿದ್ ನಬವಿಯ ಪಕ್ಕದಲ್ಲಿಯೇ ಯುದ್ಧದಲ್ಲಿ ಗಾಯಗೊಂಡ ಸೈನಿಕರ ಶುಶ್ರೂಷೆಗಾಗಿ ಒಂದು ಡೇರೆಯನ್ನು ಹಾಕಿದ್ದರು. ಸಅದ್ ಬಿನ್ ಮಅಝ್ ಕಂದಕ ಯುದ್ಧದಲ್ಲಿ ಗಾಯಗೊಂಡಾಗ, ಪ್ರವಾದಿ ಅವರಿಗೆ ನೋಡಲು ಅನುವಾಗಲು, ಈ ಡೇರೆಯಲ್ಲಿಯೇ ಚಿಕಿತ್ಸೆ ಪಡೆಯುವಂತೆ ಸೂಚಿಸಿದ್ದರು. ವೈದ್ಯಕೀಯ ಶಿಬಿರ ಗಳನ್ನು, ಆಸ್ಪತ್ರೆಗಳನ್ನು ಸ್ಥಾಪಿಸುವಲ್ಲಿ ಇಸ್ಲಾಮ್ ಮಹತ್ತರ ಪಾತ್ರವಹಿಸಿದೆ.

ಒಂದು ಯುದ್ಧದಲ್ಲಿ ಉಮ್ಮೆ ಸುಲೈಮ್ ಮತು ನುಸೈಬ್ಬ ಯುದ್ಧದಲ್ಲಿ ಗಾಯಗೊಂಡ ಸೈನಿಕರ ಶುಶ್ರೂಷೆ ಗೈದಿದ್ದರು. ಇಸ್ಲಾಮಿ ಇತಿಹಾಸದಲ್ಲಿ ಇವರು ಪ್ರಥಮ ದಾಯಾದಿಗಳಾಗಿದ್ದರು.

## ತಜ್ಞ ವೈದ್ಯರಿಂದ ಚಿಕಿತ್ಸೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಕಾಲದಲ್ಲಿ ವೈದ್ಯರು ಲಭ್ಯವಿದ್ದರು. ಒಮ್ಮೆ ಪ್ರವಾದಿರ ಓರ್ವ ಸಂಗಾತಿ ರೋಗಗ್ರಸ್ತರಾದರು. ಪ್ರವಾದಿ ವೈದ್ಯರ ಬಗ್ಗೆ ವಿಚಾರಿಸಿದರು. ಇಬ್ಬರು ವೈದ್ಯರ ಬಗ್ಗೆ ಪ್ರಸ್ತಾಪಿಸಲಾಯಿತು. ಪ್ರವಾದಿ, ಈ ಇಬ್ಬರಲ್ಲಿ ಯಾರು ಉತ್ತಮರೋ, ಅವರ ಬಳಿ ಚಿಕಿತ್ಸೆ ಪಡೆಯುವಂತೆ ಸಹಾಬಿಗೆ ಸೂಚಿಸಿದರು.

ಪ್ರವಾದಿರ ಕಾಲದಲ್ಲಿ ಔಷಧಿಗಳ ಮಹತ್ವದ ಬಗ್ಗೆ ಜನರಿಗೆ ಅರಿವು ಇದ್ದಿತು. ಪ್ರವಾದಿ ಸ್ವತಃ ಅನೇಕ ಔಷಧಿಗಳನ್ನು ಸೂಚಿಸಿದ್ದರು ಎಂದು ವರದಿಗಳಿಂದ ತಿಳಿದು ಬರುತ್ತದೆ. ಇಸ್ಲಾಮ್ ವೈದ್ಯಶಾಸ್ತ್ರದ ಉಗಮಕ್ಕೆ ಬಹಳಷ್ಟು ಕಾಣಿಕೆ ನೀಡಿದೆ.

## ಮದೀನಾದ ಮಾರುಕಟ್ಟೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮದೀನಾದಲ್ಲಿ ನಿಯಂತ್ರಿತ ಮಾರುಕಟ್ಟೆಯನ್ನು ಸ್ಥಾಪಿಸಿದ್ದರು. ಇದಕ್ಕೆ 'ಅಸ್ವಾಕ್' ಎಂದು ಕರೆಯುತ್ತಿದ್ದರು. ಇದು

ಮಸ್ಜಿದ್‌ನಬವಿಯ ಹತ್ತಿರದಲ್ಲಿಯೇ ಇದ್ದಿತು. ಈ ಮಾರುಕಟ್ಟೆಯು ಸುಮಾರು 500 ಮೀ ಉದ್ದ ಮತ್ತು 100 ಮೀ ಅಗಲವಿತ್ತು. ಆಗಿನ ಅವಶ್ಯಕತೆಗಿಂತ ಈ ಮಾರುಕಟ್ಟೆಯು ದೊಡ್ಡದಾಗಿತ್ತು. ಮಾರುಕಟ್ಟೆಯ ಸ್ಥಾಪನೆಯೂ ಪ್ರವಾದಿರ ದೂರದೃಷ್ಟಿತ್ವಕ್ಕೆ ಒಂದು ನಿದರ್ಶನವಾಗಿದೆ. ಮದೀನಾ ನಗರವು ಆಗ ವೇಗವಾಗಿ ಬೆಳೆಯುತ್ತಿದ್ದ ನಗರವಾಗಿದ್ದು, ದೂರ ಪ್ರದೇಶಗಳಿಂದಲೂ ಜನರು ಅದರ ಕಡೆಗೆ ಆಕರ್ಷಿತರಾಗುತ್ತಿದ್ದರು.

## ನಿಯಮಗಳು

ಮುಹಮ್ಮದ್ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರಿಗೆ ಇಡಿಯ ಮಾನವಕುಲಕ್ಕೆ ಮಾರ್ಗದರ್ಶನ ಮಾಡುವ, ಸುಧಾರಿಸುವ ಹೊಣೆಗಾರಿಕೆಯನ್ನು ನೀಡಲಾಗಿತ್ತು ಇದು ಭೌತಿಕ ಜೀವನ ಹಾಗೂ ಅಧ್ಯಾತ್ಮಿಕ ಜೀವನ ಎರಡನ್ನು ಒಳಗೊಂಡಿತ್ತು. ಈ ಹೊಣೆಗಾರಿಕೆಯನ್ನು ಕುರ್‌ಆನಿನ ಬೋಧನೆಗಳ ಹಿನ್ನೆಲೆಯಲ್ಲಿ ನಿರ್ವಹಿಸುವಂತೆ ಮುಹಮ್ಮದ್‌ರಿಗೆ ಅಲ್ಲಾಹ್ ಆಜ್ಞಾಪಿಸಿದ್ದನು. ಕುರ್‌ಆನಿನ ಮತ್ತು ಪ್ರವಾದಿರ ಬೋಧನೆಗಳು ಸಾರ್ವಕಾಲಿಕವಾಗಿದ್ದವು ಮತ್ತು ಮನುಷ್ಯ ಜೀವನದ ಎಲ್ಲಾ ರಂಗಗಳಿಗೂ ಅನ್ವಯಿಸುತ್ತಿದ್ದವು. ಮುಹಮ್ಮದ್ ಇಡಿಯ ಜಗತ್ತಿಗೆ ಅನ್ವಯವಾಗುವಂತಹ ಸಿದ್ಧಾಂತವನ್ನು ನೀಡಿದರು. ಇದಕ್ಕೆ ಪೂರಕ ಕಾನೂನುಗಳನ್ನು, ನಿಯಮಗಳನ್ನು ಪ್ರವಾದಿ ರೂಪಿಸಿದರು. ಈ ನಿಯಮಗಳನ್ನು ಕಾನೂನುಗಳು ಎಲ್ಲರೂ ಅನುಸರಿಸಲು ಯೋಗ್ಯವಾಗಿವೆ. ಪ್ರವಾದಿರವರು ನೀಡಿರುವ ನಿಯಮಗಳು, ಕೈಗೊಂಡ ಕ್ರಮಗಳು ಇಂತಿವೆ.

- ತೂಕ ಮತ್ತು ಅಳತೆಯನ್ನು ಶ್ರೇಣಿ ಬದ್ಧಗೊಳಿಸಲಾಯಿತು.
- ಬೆಲೆಗಳನ್ನು ನಿಯಮಗಳಿಗೆ ಒಳಪಡಿಸಲಾಯಿತು.
- ವ್ಯಾಪಾರದಲ್ಲಿ ಏಕಸ್ವಾಮ್ಯತೆಯನ್ನು ನಿಷೇಧಿಸಲಾಯಿತು.
- ವಸ್ತುಗಳ, ಆಹಾರ ಸಾಮಗ್ರಿಗಳ ಅಕ್ರಮ ದಾಸ್ತಾನನ್ನು ನಿಷೇಧಿಸಲಾಯಿತು.
- ಬಡ್ಡಿಯನ್ನು ನಿಷೇಧಿಸಲಾಯಿತು.
- ಶರಾಬಿನ ಸೇವನೆಯನ್ನು, ಮಾರಾಟವನ್ನು ನಿಷೇಧಿಸಲಾಯಿತು.
- ಜೂಜನ್ನು ನಿಷೇಧಿಸಲಾಯಿತು.
- ವೇಶ್ಯವಾಟಿಕೆಯನ್ನು ನಿಷೇಧಿಸಲಾಯಿತು.

ಒಮ್ಮೆ ಮಾರುಕಟ್ಟೆಯಲ್ಲಿ ಒಂದು ಧಾನ್ಯಗಳ ರಾಶಿಯ ಒಳಗಡೆ ಪ್ರವಾದಿ ಕೈ ಹಾಕಿದರು. ಒಳಭಾಗದಲ್ಲಿ ಧಾನ್ಯಗಳು ಒದ್ದೆಯಾಗಿರುವುದು ಕಂಡು ಬಂತು.

"ಒದ್ದೆ ಧಾನ್ಯಗಳನ್ನು ಧಾನ್ಯದ ರಾಶಿಯ ಹೊರಭಾಗದಲ್ಲಿ ಏಕೆ ಹಾಕಲಿಲ್ಲ?"

ವೆಂದು ಪ್ರವಾದಿ ವ್ಯಾಪಾರಿಯನ್ನು ಪ್ರಶ್ನಿಸಿದರು.

"ವ್ಯಾಪಾರದಲ್ಲಿ ಮೋಸ ಮಾಡುವವರು ನಮ್ಮವರಲ್ಲ" ಎಂದು ಪ್ರವಾದಿ ನುಡಿದರು. ಮಾರುಕಟ್ಟೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವಂತೆ ತಿಳಿಸುತ್ತಿದ್ದರು.

## ಸ್ತ್ರೀ ಮತ್ತು ಪುರುಷ ಪರಿವೀಕ್ಷಣಾಕಾರರು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸ್ತ್ರೀ, ಪುರುಷ ಪರಿವೀಕ್ಷಣಕಾರರನ್ನು ಮತ್ತು ತೆರಿಗೆ ವಸೂಲು ಮಾಡುವವರನ್ನು ನೇಮಿಸಿದ್ದರು. ಪುರುಷರಲ್ಲಿ ಸಈದ್ ಬಿನ್ ಅಲ್ ಆಸ್, ಅಬ್ದುಲ್ಲಾ ಬಿನ್ ಸಈದ್ ಮತ್ತು ಉಮರ್ ಪ್ರಮುಖರಾಗಿದ್ದರು. ಮಹಿಳೆಯರಲ್ಲಿ ಸಮ್ರಾ ಬಿಂತ್ ಮಹ್ರಬಾ, ಶಿಫಾ ಬಿಂತ್ ಅಬ್ದುಲ್ಲಾ ಪ್ರಮುಖರು. ಶಿಫಾ ಮದೀನಾ ಮಾರುಕಟ್ಟೆಯ ಸೀಮಾ ಸುಂಕ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದರು.

## ಸ್ತ್ರೀ ಮತ್ತು ಪುರುಷ ವ್ಯಾಪಾರಿಗಳು

ಅಬೂಬಕರ್ ಸಿದ್ದೀಕ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಉಸ್ಮಾನ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಅಬ್ದುಲ್ ರೆಹ್ಮಾನ್ ಬಿನ್ ಔಫ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಖ್ಯಾತ ಬಟ್ಟೆ ವ್ಯಾಪಾರಿಗಳಾಗಿದ್ದರು. ಉಮರ್ ಮುಸುಕಿನ ಜೋಳದ ವ್ಯಾಪಾರಿಯಾಗಿದ್ದರು. ಪ್ರವಾದಿರ ಇತರ ಸಂಗಾತಿಗಳು ಬಟ್ಟೆ ನೇಯುವ, ತೋಟಗಾರಿಕೆ, ಬಡಗಿ, ಬಟ್ಟೆ ಹೊಲೆಯುವುದು ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಮಹಿಳಾ ವ್ಯಾಪಾರಸ್ಥೆಯರಲ್ಲಿ ಅಸ್ಮಾ ಬಿಂತ್ ಮಹ್ರಬಾ, ಖೌಲಃ ಬಿಂತ್ ಸುಐಬ್ ಮತ್ತು ಉಮ್ಮೆ ಸೈಬ್ ಹೆಸರುವಾಸಿಯಾಗಿದ್ದರು.

ಕುರ್‌ಆನ್ ವ್ಯಾಪಾರಕ್ಕೆ ಒತ್ತು ನೀಡಿದೆ.

> "ನಮಾಝ್ ಮುಗಿದ ಬಳಿಕ ಭೂಮಿಯ ಮೇಲೆ ಚದುರಿ ಬಿಡಿರಿ ಮತ್ತು ಅಲ್ಲಾಹನ ಅನುಗ್ರಹವನ್ನರಸಿರಿ"
> (ಪವಿತ್ರ ಕುರ್‌ಆನ್, 62:10)
>
> "ವಸ್ತುತಃ ಅಲ್ಲಾಹನು ವ್ಯಾಪಾರವನ್ನು ಹಲಾಲ್ (ಧರ್ಮ ಸಮ್ಮತ), ಗೊಳಿಸಿರುತ್ತಾನೆ ಮತ್ತು ಬಡ್ಡಿಯನ್ನು ಹರಾಮ್ (ನಿಷಿದ್ಧ) ಗೊಳಿಸಿರುತ್ತಾನೆ" (ಪವಿತ್ರ ಕುರ್‌ಆನ್, 2:275)

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ವ್ಯಾಪಾರದಲ್ಲಿ ತೋರಿದ್ದ, ಸತ್ಯತೆ, ಪ್ರಾಮಾಣಿಕತೆ, ನಿಷ್ಠೆಗಳಿಂದಾಗಿ ಪ್ರಖ್ಯಾತರಾಗಿದ್ದರು. ಪ್ರವಾದಿ

ವ್ಯಾಪಾರಕ್ಕೆ ಸಂಬಂಧಿಸಿದಂತೆ ಈ ರೀತಿ ನುಡಿದಿರುವರು.

- ಧರ್ಮಬದ್ಧ ರೀತಿಯಲ್ಲಿ ಜೀವನೋಪಾಯಕ್ಕಾಗಿ ಶ್ರಮಿಸುವುದು ಕಡ್ಡಾಯವಾಗಿದೆ.
- ಸತ್ಯವಂತ ಮತ್ತು ಪ್ರಾಮಾಣಿಕ ವ್ಯಾಪಾರಿ ನಿರ್ಣಾಯಕ ದಿನದಂದು ಪ್ರವಾದಿಗಳು ಮತ್ತು ಹುತಾತ್ಮರೊಂದಿಗೆ ಇರುವನು.
- ಖರೀದಿಸುವಾಗ, ಮಾರುವಾಗ ಮತ್ತು ಬೇಡಿಕೆಯನ್ನು ಮಾಡುವಾಗ ಮೃದು ಧೋರಣೆಯನ್ನು ತೋರುವ ವ್ಯಕ್ತಿಗೆ ಅಲ್ಲಾಹ್ ಕರುಣೆ ತೋರುತ್ತಾನೆ.
- ರಾಷ್ಟ್ರವು ಯುದ್ಧಕ್ಕಿಂತ ಪ್ರವರ್ಧ ವ್ಯಾಪಾರದಿಂದ ಲಾಭ ಹೊಂದುತ್ತದೆ.
- ವ್ಯಾಪಾರದಲ್ಲಿ ವಂಚನೆ ಮಾಡುವ ವ್ಯಾಪಾರಿಗಳು ಕಾಲಾವಧಿಯಲ್ಲಿ ನಷ್ಟ ಹೊಂದುವರು.

ಯಾರೊಂದಿಗಾದರೂ ವ್ಯಾಪಾರದ ಬಗ್ಗೆ ಮಾತುಕತೆಯಾದರೆ, ಅದನ್ನು ಲಿಖಿತ ರೂಪದಲ್ಲಿಡಬೇಕೆಂದು ಪ್ರವಾದಿ ನುಡಿದಿರುವರು. ವಿಶೇಷವಾಗಿ ಹಣಕಾಸಿನ ವ್ಯವಹಾರವನ್ನು ಲಿಖಿತ ರೂಪದಲ್ಲಿಡಲು ಕುರ್‌ಆನ್ ಆದೇಶಿಸಿದೆ.

> "ಓ ಸತ್ಯ ವಿಶ್ವಾಸಿಗಳೇ, ನೀವು ಅವಧಿಯನ್ನು ನಿಶ್ಚಯಿಸಿಕೊಂಡು ಪರಸ್ಪರ ಸಾಲದ ಲೇವಾದೇವಿ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ.... ಇಬ್ಬರನ್ನು ಸಾಕ್ಷಿಯಾಗಿರಿಸಿಕೊಳ್ಳಬೇಕು" (ಪವಿತ್ರ ಕುರ್‌ಆನ್ 2:282)

ಇಸ್ಲಾಮಿನಲ್ಲಿ ಒಪ್ಪಂದಗಳಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಅವು ವಿವಾಹದ ಒಪ್ಪಂದವಾಗಿರಬಹುದು, ಸಾಮಾಜಿಕ ಒಪ್ಪಂದವಾಗಿರಬಹುದು ಅಥವಾ ವ್ಯಾಪಾರ ಸಂಬಂಧಿತ ಒಪ್ಪಂದವಾಗಿರಬಹುದು, ಅಥವಾ ಯುದ್ಧ ಸಂಬಂಧಿತ ಒಪ್ಪಂದಗಳಾಗಿರಬಹುದು.

> "ವಚನವನ್ನು ಪಾಲಿಸಿರಿ, ನಿಶ್ಚಯವಾಗಿಯೂ ವಚನದ ಕುರಿತು ನಿಮ್ಮನ್ನು ಪ್ರಶ್ನಿಸಲಾಗುವುದು." (ಪವಿತ್ರ ಕುರ್‌ಆನ್ 17:34)

ಮುಸ್ಲಿಮರು ತಾವು ಮಾಡಿರುವ ಒಪ್ಪಂದಗಳಿಗೆ ಬದ್ಧರಾಗಿರಬೇಕೆಂದು ಪ್ರವಾದಿ ಆದೇಶಿಸಿರುವರು.

# ವಿದೇಶಿ ವಿನಿಮಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿದೇಶಿ ವಿನಿಮಯವನ್ನು ಪ್ರಾರಂಭಿಸುವುದರಲ್ಲಿ ಮೊಟ್ಟ ಮೊದಲಿಗರಾಗಿದ್ದರು. ನಂತರ ಮುಸ್ಲಿಮ್ ರಾಜರು ಅಂತರರಾಷ್ಟ್ರೀಯ ವ್ಯಾಪಾರಕ್ಕಾಗಿ 'ಸಕ್ಕಾ' (ವಚನಬದ್ಧ ಪತ್ರ) ವನ್ನು ಜಾರಿಗೆ ತಂದರು. ನಂತರ ಈ 'ಸಕ್ಕಾ'ವು 'ಚೆಕ್' ರೂಪ ಪಡೆಯಿತು.

# ಸೇನಾ ಪಡೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸೇನಾಪಡೆಯನ್ನು ಸದಾ ಸನ್ನದ್ಧರಾಗಿಡುತ್ತಿದ್ದರು. ಅಸಹಾಯಕ ಮತ್ತು ಆರ್ಥಿಕವಾಗಿ ದುರ್ಬಲ ಯೋಧರಿಗೆ ಸರ್ಕಾರದಿಂದ ಧನಸಹಾಯ ನೀಡಲಾಗುತ್ತಿತ್ತು.

# ಸೇನಾ ತರಬೇತಿ

ಸೇನಾ ತರಬೇತಿ ಕಡ್ಡಾಯವಾಗಿತ್ತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯುದ್ಧದ ತರಬೇತಿಗಾಗಿ ವಿವಿಧ ಯೋಜನೆಗಳನ್ನು ರೂಪಿಸಿದ್ದರು. ಅವರು ಜನರಿಗೆ ವ್ಯಾಯಾಮದ ಮೂಲಕ ದೈಹಿಕವಾಗಿ ಸಿದ್ಧರಾಗಿರಲು ಸೂಚಿಸುತ್ತಿದ್ದರು. ಇದಲ್ಲದೆ ಬಿಲ್ಲು ಬಾಣದ ಸ್ಪಧೆ, ಕುದುರೆ, ಒಂಟೆಗಳ ಓಟದ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಈ ಸ್ಪರ್ಧೆಗಳನ್ನು 'ಅಲ್‌ಸಿಬಾಕ್' ಎಂಬ ಮೈದಾನದಲ್ಲಿ ನಡೆಸಲಾಗುತ್ತಿತ್ತು. ಬಿಲ್ಲು ವಿದ್ಯೆಯನ್ನು ಕಲಿಯುವಂತೆ ಪ್ರವಾದಿ ಪ್ರೋತ್ಸಾಹಿಸುತ್ತಿದ್ದರು. ಈ ಸ್ಪರ್ಧೆಗಳು ನಡೆಯುವಾಗ ಪ್ರವಾದಿ ಖುದ್ದು ಹಾಜರಿದ್ದು, ವೀಕ್ಷಿಸುತ್ತಿದ್ದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಗುತ್ತಿತ್ತು. ಮದೀನಾದ ಉತ್ತರ ಭಾಗದಲ್ಲಿ ಮಸ್ಜಿದ್ ಅಲ್ ಸಿಬಾಕ್ ಇಂದಿಗೂ ಇದೆ. 'ಅಲ್ ಸಿಬಾಕ್'ನ ಅರ್ಥ ಸ್ಪರ್ಧೆಯಲ್ಲಿ ಗೆಲ್ಲುವುದಾಗಿದೆ.

ಸರ್ಕಾರದ ಮೇಲ್ನೋಟದಲ್ಲಿ ಆಯುಧಗಳನ್ನು, ಯುದ್ಧಕ್ಕೆ ಸವಾರಿಗಳನ್ನು ಖರೀದಿಸಲಾಗುತ್ತಿತ್ತು. ಜಾನುವಾರುಗಳ ನಿರ್ವಹಣೆ ಸರ್ಕಾರದ ಖರ್ಚಿನಲ್ಲಿ ಮಾಡಲಾಗುತ್ತಿತ್ತು.

# ರಹಸ್ಯ ಮಾಹಿತಿ ಸಂಗ್ರಹಣೆ

ಮದೀನಾ ಪುಟ್ಟ ಇಸ್ಲಾಮೀ ರಾಷ್ಟ್ರವಾಗಿತ್ತು ಮತ್ತು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅದರ ಪ್ರಥಮ ನಾಯಕರಾಗಿದ್ದರು. ಮದೀನಾ ನಗರದ ಸುತ್ತಲೂ ಶತ್ರುಗಳು ಜಮಾಯಿಸಿದ್ದರು. ಶತ್ರುಗಳು ಈ ಇಸ್ಲಾಮಿ ರಾಷ್ಟ್ರ ಭದ್ರಗೊಳ್ಳುವ ಮೊದಲೇ ಅದರ ನಿರ್ನಾಮವನ್ನು ಮಾಡ ಬಯಸಿದ್ದರು.

ಪ್ರವಾದಿ ಶತ್ರುಗಳ ಚಲನವಲನಗಳ ಮೇಲೆ ನಿಗಾ ಇಡಲು ಅವರ ಶಕ್ತಿ, ಸಾಮರ್ಥ್ಯಗಳ ಬಗ್ಗೆ ಮಾಹಿತಿ ಪಡೆಯಲು ಗುಪ್ತಚರರನ್ನು ನೇಮಿಸಿದ್ದರು. ಶತ್ರುಗಳ ಬಗ್ಗೆ ರಹಸ್ಯ ಮಾಹಿತಿ ಪಡೆಯಲು ವಿವಿಧ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಇದಕ್ಕಾಗಿ ವೀಕ್ಷಣಾ ನೆಲೆಗಳನ್ನು ಸ್ಥಾಪಿಸಿದ್ದರು. ಗುಪ್ತಚರರು ಮತ್ತು ಪಹರೆಯವರು ರಹಸ್ಯ ಪದಗಳನ್ನು, ಸಂಜ್ಞೆಗಳನ್ನು ಉಪಯೋಗಿಸುತ್ತಿದ್ದರು.

ಪಹರೆಯ ವ್ಯವಸ್ಥೆಯಿಂದಾಗಿ ಮದೀನಾದ ಸುತ್ತಮುತ್ತ ನಡೆಯುತ್ತಿದ್ದ ಬೆಳವಣಿಗೆಗಳ ಬಗ್ಗೆ ಮಾಹಿತಿ ಪ್ರವಾದಿರಿಗೆ ಕೂಡಲೇ ದೊರಕುತ್ತಿತ್ತು.

# ಬೈತುಲ್ ಮಾಲ್

ಸರ್ಕಾರವನ್ನು ನಡೆಸಲು, ಜನರ ಅಭಿವೃದ್ಧಿಗಾಗಿ ಮತ್ತು ಸಮಾಜದ ದುರ್ಬಲರಿಗೆ, ನಿರ್ಗತಿಕರಿಗೆ ಸಹಾಯ ಮಾಡಲು ಸರ್ಕಾರದ ಖಜಾನೆ "ಬೈತುಲ್ ಮಾಲ್" ಸ್ಥಾಪಿಸಲಾಗಿತ್ತು. ಬೈತುಲ್ ಮಾಲ್‌ನ ಮುಖ್ಯ ಆದಾಯ "ಝಕಾತ್" ನಿಂದ ಆಗಿತ್ತು. ಝಕಾತ್ ಸ್ವ ಇಚ್ಛೆಯಿಂದ ನೀಡುವ ತೆರಿಗೆಯಾಗಿತ್ತು. ಇದನ್ನು ನಿರ್ದಿಷ್ಟ ಪ್ರಮಾಣದ ಸಂಪತ್ತನ್ನು ಹೊಂದಿದವರು ನೀಡಬೇಕಾಗಿತ್ತು. ಸಂಪತ್ತು ಹೊಂದಿರುವವರು 2.5% ವ್ಯವಸಾಯ ಉತ್ಪನ್ನಗಳಲ್ಲಿ 10% ಝಕಾತ್ ರೂಪದಲ್ಲಿ ನೀಡಬೇಕಿತ್ತು. ಕಬ್ಬಿಣ, ಚಿನ್ನ ಮೊದಲಾದ ಗಣಿಗಳನ್ನು ಹೊಂದಿರುವವರು ಸಹಾ ಝಕಾತ್ ನೀಡಬೇಕಿತ್ತು.

ಝಕಾತ್ ಸಂಗ್ರಹಿಸಲು ಜನರನ್ನು ನೇಮಿಸಲಾಗಿತ್ತು. ಆರಂಭದಲ್ಲಿ ದೂರದ ಪ್ರದೇಶಗಳಿಗೆ ಮದೀನಾದಿಂದ ಜನರನ್ನು ಕಳುಹಿಸಲಾಗುತ್ತಿತ್ತು. ನಂತರ ಝಕಾತ್ ಸಂಗ್ರಹಿಸಲು ಸ್ಥಾನೀಯ ಸಂಗ್ರಹಕಾರರನ್ನು ನೇಮಿಸಲಾಯಿತು.

ತಬೂಕ್ ಯುದ್ಧದ ಸಂದರ್ಭದಲ್ಲಿ ಹಣದ ತೀವ್ರ ಅವಶ್ಯಕತೆ ಉಂಟಾಯಿತು. ಪ್ರವಾದಿ ಯುದ್ಧಕ್ಕಾಗಿ ವಿಶೇಷ ನಿಧಿಯನ್ನು ಸ್ಥಾಪಿಸಿ ಅದಕ್ಕೆ ದೇಣಿಗೆ ನೀಡುವಂತೆ ಸಾರ್ವಜನಿಕವಾಗಿ ಮನವಿ ಮಾಡಿದರು. ಪ್ರವಾದಿ ತಮ್ಮ ಅನುಯಾಯಿಗಳಿಗೆ 'ಝಕಾತ್' ಮುಂಗಡ ನೀಡಲು ತಿಳಿಸಿದರು. ಈ ರೀತಿ ಪ್ರಥಮ ಬಾರಿಗೆ ಮುಂಗಡ ಝಕಾತ್ ಸಂಗ್ರಹಿಸಲಾಗಿತ್ತು.

ಬಿಲಾಲ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಹಣಕಾಸಿನ ವ್ಯವಹಾರದ ಮೇಲ್ವಿಚಾರಕರಾಗಿದ್ದರು. ಅವರು ಅಝಾನ್ ಕರೆಯನ್ನು ನೀಡುತ್ತಿದ್ದರು. ಮಸ್ಜಿದ್‌ನಬವಿಯ ಒಂದು ಕೊಠಡಿ ಖಜಾನೆಯಾಗಿತ್ತು. ಇದರಲ್ಲಿ ಹಣವನ್ನು, ಲೆಕ್ಕಪತ್ರಗಳನ್ನು, ಇತರ ದಾಖಲೆಗಳನ್ನು ಸಂಗ್ರಹಿಸಿಡಲಾಗುತ್ತಿತ್ತು.

## ಮಾಸಾಶನ

ಇಸ್ಲಾಮಿ ರಾಜ್ಯದ ನಿರ್ಗತಿಕರಿಗೆ, ವಿಧವೆಯರಿಗೆ, ರಾಜ್ಯದ ಬೊಕ್ಕಸದಿಂದ ಮಾಸಾಶನಗಳನ್ನು ನೀಡಲಾಗುತ್ತಿತ್ತು. ಅಸ್ವಾಭಾವಿಕವಾಗಿ ಮರಣ ಹೊಂದುವವರಿಗೆ ಪರಿಹಾರ ಧನವನ್ನು ನೀಡಲಾಗುತ್ತಿತ್ತು.

## ವಿದೇಶಿ ವ್ಯವಹಾರ

9ನೇ ಹಿಜರಿ ಶಕೆಯಲ್ಲಿಯೇ ಇಸ್ಲಾಮಿ ರಾಜ್ಯ ಎಷ್ಟು ಪ್ರಬಲವಾಗಿತ್ತೆಂದರೆ 38 ಪ್ರಾಂತ್ಯಗಳ ರಾಜರು, ಪಂಗಡಗಳ ನಾಯಕರು, ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದ್ದರು. ವಿವಿಧ ಕ್ರೈಸ್ತ ಮತ್ತು ಯಹೂದಿ ಗೋತ್ರಗಳೂ ಸಹ ಪ್ರವಾದಿರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು.

## ರಾಯಭಾರಿಗಳು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿದೇಶಗಳಿಗೆ ರಾಯಭಾರಿಗಳನ್ನು ನೇಮಿಸಿದ್ದರು. ಈ ಹುದ್ದೆಗೆ ಮುಸ್ಲಿಮೇತರರನ್ನು ಸಹ ಅವರ ಸಾಮರ್ಥ್ಯ ಕಾರಣದಿಂದಾಗಿ ಪರಿಗಣಿಸಲಾಗುತ್ತಿತ್ತು. ಉದಾಹರಣೆಗೆ ಇಥಿಯೋಪಿಯಾಕ್ಕೆ ಅಮ್ರ್ ಬಿನ್ ಉಮಯ್ಯರನ್ನು ರಾಯಭಾರಿಯಾಗಿ ಕಳುಹಿಸಲಾಗಿತ್ತು.

# ನ್ಯಾಯದ ವ್ಯವಸ್ಥೆ

ಜನರ ನಡುವೆ ವ್ಯಾಜ್ಯಗಳು ಉಂಟಾದಲ್ಲಿ, ಅದನ್ನು ಪರಿಹರಿಸಲು ನ್ಯಾಯಾಂಗ ಅಸ್ತಿತ್ವದಲ್ಲಿತ್ತು. ಆರಂಭದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಇದ್ದು, ಜನರು ತಮ್ಮ ಗೋತ್ರಗಳ ನಾಯಕರ ಬಳಿಗೆ ನ್ಯಾಯಕ್ಕಾಗಿ ತೆರಳುತ್ತಿದ್ದರು. ಅವರ ನ್ಯಾಯದಿಂದ ಜನ ಸಂತೃಪ್ತರಾಗದಿದ್ದಲ್ಲಿ, ಅಂತಿಮ ತೀರ್ಪಿಗಾಗಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಬಳಿಗೆ ಹೋಗುತ್ತಿದ್ದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಜನಾಂಗದ, ಗೋತ್ರಗಳ ವ್ಯತ್ಯಾಸವನ್ನು ಪರಿಗಣಿಸದೆ ನ್ಯಾಯವನ್ನು ನೀಡುತ್ತಿದ್ದರು.

> **"**ಓ ಸತ್ಯ ವಿಶ್ವಾಸಿಗಳೇ, ನೀವು ನ್ಯಾಯದ ಧ್ವಜ ವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿರದ್ದರೂ ಸರಿಯೆ– ಕಕ್ಷಿಯು ಧನಿಕನಿರಲಿ ಅಥವಾ ಬಡವನಿರಲಿ, ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿರುತ್ತಾನೆ. ಆದುದರಿಂದ ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯ ಪರಿಪಾಲನೆಯಿಂದ ಸರಿಯಬೇಡಿರಿ**"**.(ಪವಿತ್ರ ಕುರ್‌ಆನ್ 4:135)

ಪ್ರವಾದಿ ಪ್ರತಿಯೊಂದು ವ್ಯಾಜ್ಯವನ್ನು ಅದರ ಅರ್ಹತೆಯ ಆಧಾರದಲ್ಲಿ ಪರಿಗಣಿಸಿ, ತೀರ್ಪನ್ನು ನೀಡುತ್ತಿದ್ದರು. ಪ್ರವಾದಿರ ತೀರ್ಪುಗಳಲ್ಲಿ, ಅವರ ಸತ್ಯತೆ, ದೂರದೃಷ್ಟಿತ್ವ ಮತ್ತು ನಿಷ್ಪಕ್ಷಪಾತ ಎದ್ದು ಕಾಣುತ್ತಿತ್ತು.

ಅಬ್ದುಲ್ಲಾ ಬಿನ್ ಸೆಹಿ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ಖೈಬರ್‌ಗೆ ಯಹೂದಿಯರಿಂದ ಅವರ ಉತ್ಪನ್ನದಲ್ಲಿ ಮುಸ್ಲಿಮರ ಪಾಲನ್ನು ಪಡೆಯಲು ಕಳುಹಿಸಲಾಗಿತ್ತು. ಅಲ್ಲಿ ಅವರ ಹತ್ಯೆ ಮಾಡಲಾಯಿತು. ಅವರ ಸಹೋದರ ಸಂಬಂಧಿ ಮುಹೀಸಃ ಪ್ರವಾದಿರ ಬಳಿ ತೆರಳಿ ಯಹೂದಿಯರ ವಿರುದ್ಧ ಪ್ರತೀಕಾರ ಕೈಗೊಳ್ಳಬೇಕೆಂದು ವಿನಂತಿಸಿದರು. ಪ್ರವಾದಿ "ಯಹೂದಿಯರು ಅಬ್ದುಲ್ಲಾ ಬಿನ್ ಸೆಹಿರ ಹತ್ಯೆಯನ್ನು ಮಾಡಿರುವುದಾಗಿ ನೀನು ಪ್ರಮಾಣ ಮಾಡಿ ಹೇಳುತ್ತೀಯಾ" ಎಂದು ಪ್ರಶ್ನಿಸಿದರು. ಅದಕ್ಕೆ ಮುಹೀಸಃ, ತಾನು ಯಹೂದಿಯರು ಹತ್ಯೆ ಮಾಡುವುದನ್ನು ಕಣ್ಣಾರೆ ಕಾಣಲಿಲ್ಲವೆಂದರು. ಪ್ರವಾದಿ,"ಯಹೂದಿಯರಿಂದ ಪ್ರಮಾಣ ಪಡೆಯಬೇಕೆ"ಂದರು. ಅದಕ್ಕೆ ಮುಹೀಸಃ "ನಾವು ಯಹೂದಿಯರನ್ನು ನಂಬುವುದು ಹೇಗೆ? ಅವರು ನೂರು ಸಲ ಬೇಕಾದರೂ ಸುಳ್ಳು ಪ್ರಮಾಣವನ್ನು ಮಾಡಲು ಹೇಸುವುದಿಲ್ಲ"ವೆಂದರು. ಖೈಬರ್‌ನಲ್ಲಿ ಕೇವಲ ಯಹೂದಿಯರೇ ವಾಸಿಸುತ್ತಿದ್ದು, ಅವರೇ ಅಬ್ದುಲ್ಲಾರ ಹತ್ಯೆ ಮಾಡಿರುವುದು ಸ್ಪಷ್ಟವಾಗಿತ್ತು. ಆದರೂ ಪ್ರವಾದಿ, ಸಾಕ್ಷಿಗಳಿಲ್ಲದ ಕಾರಣ ಯಹೂದಿಯರ ವಿರುದ್ಧ ಯಾವುದೇ ಕ್ರಮವಹಿಸಲಿಲ್ಲ ಮತ್ತು ಖಜಾನೆಯಿಂದ ಮುಹೀಸಃರಿಗೆ ರಕ್ತ ಪರಿಹಾರವನ್ನು ಕೊಡಿಸಿದರು.

ಮಖ್ಸೂಮ ಗೋತ್ರದ ಮಹಿಳೆಯೋರ್ವಳು ಕಳ್ಳತನ ಮಾಡುವಾಗ ಸಿಕ್ಕಿ ಬಿದ್ದಿದ್ದಳು. ಇಸ್ಲಾಮಿ ಕಾನೂನಿನ ಪ್ರಕಾರ ಹಸ್ತಗಳನ್ನು ಕಡಿಯುವ ಶಿಕ್ಷೆಯನ್ನು ಆಕೆಗೆ ವಿಧಿಸಬೇಕಾಗಿತ್ತು. ಆಕೆಯ ಗೋತ್ರದವರಿಗೆ ಇದು ಮುಜುಗರದ ವಿಷಯವಾಗಿತ್ತು. ಮಹಿಳೆಗೆ ಈ ಶಿಕ್ಷೆ ನೀಡದಂತೆ ಪ್ರವಾದಿರ ಮೇಲೆ ಪ್ರಭಾವ ಬೀರಲು ಅವರು ನಿರ್ಧರಿಸಿದರು. ಈ ಕಾರ್ಯಕ್ಕಾಗಿ ಉಸಾಮ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ಪ್ರವಾದಿರ ಬಳಿ ಕಳುಹಿಸಿಕೊಟ್ಟರು. ಉಸಾಮರ ಮಾತನ್ನು ಆಲಿಸಿದ ಕೂಡಲೇ ಪ್ರವಾದಿರ ಮುಖ ಕೋಪದಿಂದ ಕೆಂಪಾಯಿತು. ಪ್ರವಾದಿ ಉಸಾಮರನ್ನು ಉದ್ದೇಶಿಸಿ ನುಡಿದರು.

"ಹಿಂದಿನ ಸಮುದಾಯಗಳು ಅವರ ಸಮಾಜದಲ್ಲಿದ್ದ ಬಡವರು, ನಿರ್ಗತಿಕರ ಮೇಲೆ ಶಿಕ್ಷೆಯನ್ನು ಜಾರಿಗೊಳಿಸುತ್ತಿದ್ದರು ಮತ್ತು ಸಿರಿವಂತ ವರ್ಗದವರ ಮೇಲೆ ಜಾರಿಗೊಳಿಸುತ್ತಿರಲಿಲ್ಲ. ಈ ಕಾರಣಕ್ಕಾಗಿ ಅಲ್ಲಾಹ್ ಅವರನ್ನು ನಿರ್ನಾಮ ಗೊಳಿಸಿದನು. ಅಲ್ಲಾಹನಾಣೆ ! ನನ್ನ ಮಗಳು ಫಾತಿಮಾ ಕಳ್ಳತನ ಮಾಡಿದ್ದರೆ, ಅವಳಿಗೂ ನಾನು ಇದೇ ಶಿಕ್ಷೆಯನ್ನು ನೀಡುತ್ತಿದ್ದೆ".

ಒಂದು ಸಂದರ್ಭದಲ್ಲಿ ಪ್ರವಾದಿ ಮಸೀದಿಯಲ್ಲಿ ಪ್ರವಚನ ನೀಡುತ್ತಿದ್ದರು. ಪ್ರವಚನದ ನಡುವೆ ಓರ್ವ ಅನ್ಸಾರಿ ಎದ್ದು ನಿಂತು, "ಪ್ರವಾದಿವರ್ಯರೇ, ಬನು ತಲಬ್ಬ ಗೋತ್ರದವರ ಪೂರ್ವಜರು ನಮ್ಮ ಕುಟುಂಬದ ಸದಸ್ಯರೋರ್ವರ ಹತ್ಯೆ

ಮಾಡಿದ್ದರು. ಆದುದರಿಂದ ಈ ಗೋತ್ರದ ಓರ್ವ ವ್ಯಕ್ತಿಯನ್ನು ಹತ್ಯೆಗೈಯ ಬೇಕು" ಎಂದರು.

ಆಗ ಮಸೀದಿಯಲ್ಲಿ ಬನು ತಲಬ್ಬ ಗೋತ್ರದವರು ಉಪಸ್ಥಿತರಿದ್ದರು. ಇದಕ್ಕೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), "ತಂದೆ ಮಾಡಿದ ತಪ್ಪಿಗೆ ಮಗನಿಗೆ ಶಿಕ್ಷೆ ವಿಧಿಸಲಾಗುವುದಿಲ್ಲ" ಎಂದು ಉತ್ತರಿಸಿದರು.

ಒಮ್ಮೆ ಬನು ಕುರೈಝ ಗೋತ್ರದ ಯಹೂದಿಯನ್ನು ಬನು ನಝೀರ್ ಗೋತ್ರದ ಯಹೂದಿ ಹತ್ಯೆ ಗೈದನು. ಪ್ರವಾದಿ ಈ ವ್ಯಾಜ್ಯದಲ್ಲಿ ತೌರಾತ್‌ನ ನಿಯಮದಂತೆ ತೀರ್ಪನ್ನು ನೀಡಿದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು:

**"**ನ್ಯಾಯಾಧೀಶರಲ್ಲಿ ಮೂರು ವಿಧದವರಿದ್ದಾರೆ. ಎರಡು ವಿಧದ ನ್ಯಾಯಾಧೀಶರು ನರಕ ವಾಸಿಗಳು ಮತ್ತು ಒಂದು ವಿಧದ ನ್ಯಾಯಾಧೀಶರು ಸ್ವರ್ಗ ವಾಸಿಗಳು. ಯಾರು ಸತ್ಯವನ್ನು ಮನಗಂಡು ಅದರಂತೆ ತೀರ್ಪನ್ನು ನೀಡುತ್ತಾರೋ, ಅವರು ಸ್ವರ್ಗ ಪ್ರವೇಶಿಸುವರು. ಯಾರು ಸತ್ಯವನ್ನು ಮನಗಂಡರೂ ಅನ್ಯಾಯದ ತೀರ್ಪನ್ನು ನೀಡುತ್ತಾರೋ ಇಂತಹ ನ್ಯಾಯಾಧೀಶರು ನರಕ ಪ್ರವೇಶಿಸುವರು. ಯಾವ ನ್ಯಾಯಾಧೀಶರು ಅಜ್ಞಾನದಿಂದ ತೀರ್ಪನ್ನು ನೀಡುತ್ತಾರೋ ಅವರೂ ನರಕವನ್ನು ಪ್ರವೇಶಿಸುವರು."

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು:

"ನ್ಯಾಯಾಧೀಶ ಕೋಪದಲ್ಲಿರುವಾಗ ತೀರ್ಪನ್ನು ನೀಡಬಾರದು"

☆

## ಕಾನೂನಿನ ಎದುರು ಎಲ್ಲರೂ ಸಮಾನರು

ಇಸ್ಲಾಮಿ ಕಾನೂನಿನ ಎದುರು ರಾಜನಿರಲಿ ಅಥವಾ ಸಾಮಾನ್ಯ ಪ್ರಜೆ ಇರಲಿ ಇಬ್ಬರೂ ಸಮಾನರು. ಒಮ್ಮೆ ಖಲೀಫ ಅಲಿ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ತಮ್ಮ ಯುದ್ಧದ ಕವಚವನ್ನು ಕಳೆದುಕೊಂಡರು. ಸ್ವಲ್ಪ ದಿನಗಳ ನಂತರ, ಅದು ಓರ್ವ ಕ್ರೈಸ್ತನ ಬಳಿ ಇರುವುದು ತಿಳಿದು ಬಂತು. ಅದನ್ನು ಮರಳಿಸಲು ತಿಳಿಸಿದಾಗ ಅದು ತನ್ನದೆಂದು ಹೇಳಿ ಕ್ರೈಸ್ತನು ಮರಳಿಸಲು ನಿರಾಕರಿಸಿದನು. ಖಲೀಫ ಅಲಿ ನ್ಯಾಯಾಲಯದಲ್ಲಿ ಕ್ರೈಸ್ತನ ವಿರುದ್ಧ ದಾವೆ ಹೂಡಿದರು. ನ್ಯಾಯಾಧೀಶರು, ಖಲೀಫ ಮತ್ತು ಕ್ರೈಸ್ತನಿಗೆ ನ್ಯಾಯಾಲಯದಲ್ಲಿ ಹಾಜರಾಗಲು ಆದೇಶಿಸಿದರು. ಕ್ರೈಸ್ತನನ್ನು ವಿಚಾರಿಸಲಾಗಿ, ಆತನು ಯುದ್ಧ ಕವಚ ತನ್ನದೆಂದು ತಿಳಿಸಿದನು. ನ್ಯಾಯಾಧೀಶರು, ಅಲಿರಿಗೆ, ಯುದ್ಧ ಕವಚ ಅವರದೆಂದು ಹೇಳಲು ಅವರ ಬಳಿ ಪುರಾವೆ ಏನಾದರೂ ಇದೆಯೇ? ಎಂದು ಪ್ರಶ್ನಿಸಿದರು. ಅದಕ್ಕೆ ಅಲಿ, "ತಮ್ಮ ಬಳಿ ಸಾಕ್ಷಿ ಏನೂ ಇಲ್ಲವೆಂದು" ಉತ್ತರಿಸಿದರು. ನ್ಯಾಯಾಧೀಶರು ಕ್ರೈಸ್ತನ ಪರವಾಗಿ ತೀರ್ಪು ನೀಡಿದರು. ಇಸ್ಲಾಮಿನ ಸಮಾನತೆ, ನ್ಯಾಯಾಧೀಶರ ದಿಟ್ಟತನ, ಖಲೀಫರ ಸರಳತೆಯಿಂದ ಪ್ರಭಾವಿತನಾಗಿ ಕ್ರೈಸ್ತನು ಕೂಡಲೇ ಇಸ್ಲಾಮ್ ಸ್ವೀಕರಿಸಿದನು. ಕ್ರೈಸ್ತನು ನುಡಿದನು: "ಇದು ಪ್ರವಾದಿಗಳ ನ್ಯಾಯದಂತಿದೆ. ಆಡಳಿತಗಾರ ನನ್ನನ್ನು ತನ್ನ ಅಧೀನದಲ್ಲಿರುವ ನ್ಯಾಯಾಧೀಶನ ಮುಂದೆ ಮಂಡಿಸುತ್ತಾನೆ ಮತ್ತು ನ್ಯಾಯಧೀಶನು, ಆಡಳಿತಗಾರನ ವಿರುದ್ಧ ತೀರ್ಪನ್ನು ನೀಡುತ್ತಾನೆ!"

ಇಸ್ಲಾಮಿನಲ್ಲಿ ನ್ಯಾಯಾಂಗವು ಆಡಳಿತಾಂಗದಿಂದ ಸ್ವತಂತ್ರವಾಗಿದೆ. ನ್ಯಾಯಧೀಶರು ಇಸ್ಲಾಮಿ ಕಾನೂನಿನಂತೆ ತೀರ್ಪು ನೀಡಬೇಕಾಗಿದ್ದು, ಅವರು ಕೇವಲ ಅಲ್ಲಾಹನಿಗೆ ಉತ್ತರ ನೀಡಬೇಕಿರುತ್ತದೆ. ರಾಜರಿಗೋ ಅಥವಾ ಖಲೀಫರಿಗೆ ಅಲ್ಲ.

ಸಿರಿಯಾದ ಒಂದು ಪಂಗಡದ ರಾಜರಾಗಿದ್ದ ಜಬಲ ಅಲ್ ಗಸ್ಸಾನಿ ಇಸ್ಲಾಮ್ ಸ್ವೀಕರಿಸಿ ಸ್ವಲ್ಪ ಕಾಲವಷ್ಟೇ ಆಗಿತ್ತು. ಅವರು ಕಅಬಾದ ತವಾಫ್ ಮಾಡುತ್ತಿದ್ದಾಗ, ಆಕಸ್ಮಿಕವಾಗಿ ಅವರ ಮೇಲುಡುಪು ಓರ್ವ ಅರಬಿಯ ಕಾಲ ಕೆಳಗೆ ಬಂತು. ಇದರಿಂದ ಜಬಲ ಅಲ್‌ಗಸ್ಸಾನಿಗೆ ಕೋಪ ಬಂದು, ಅರಬಿಯನ ಕೆನ್ನೆಗೆ ಹೊಡೆದರು. ಅರಬಿಯು ಖಲೀಫ ಉಮರ್‌ಗೆ ದೂರು ನೀಡಿದನು. ಉಮರ್ ವಿಚಾರಣೆ ನಡೆಸಿ, ಜಬಲ ಅಲ್‌ಗಸ್ಸಾನಿಗೆ ಕ್ಷಮೆಯಾಚಿಸುವಂತೆ ಆಜ್ಞಾಪಿಸಿದರು. ಆತನು, ತಾನು ರಾಜನಾಗಿದ್ದು, ಸಾಮಾನ್ಯ ಪ್ರಜೆಗೆ ಕ್ಷಮೆ ಏಕೆ ಯಾಚಿಸಬೇಕೆಂದು ಪ್ರಶ್ನಿಸಿದನು. ಉಮರ್ "ಇಸ್ಲಾಮ್ ನಿನ್ನನ್ನು ಮತ್ತು ಸಾಮಾನ್ಯ ಪ್ರಜೆಯನ್ನು ಸಮಾನಗೊಳಿಸಿದೆ ದೈವಭಕ್ತಿ ಮತ್ತು ಒಳಿತಿನ ಕಾರ್ಯಗಳನ್ನು ಹೊರತುಪಡಿಸಿ" ಎಂದು ಉತ್ತರಿಸಿದರು.

☆

# ಆಟ, ವಿನೋದಗಳು

ಮನುಷ್ಯನ ಜೀವನಕ್ಕೆ ಆಟ, ವಿನೋದಗಳು ಅತ್ಯಗತ್ಯವಾಗಿವೆ. ಆಟ ವಿನೋದಗಳು ಮನುಷ್ಯನ ದಣಿವನ್ನು ದೂರ ಮಾಡುತ್ತವೆ. ಅವನಲ್ಲಿ ಉತ್ಸಾಹವನ್ನು, ಹುರುಪನ್ನು ತುಂಬುತ್ತವೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಸಂಗಾತಿಗಳಿಗೆ ಆಟ, ವಿನೋದಕ್ಕಾಗಿ ಅನುಮತಿ ನೀಡುತ್ತಿದ್ದರು ಮತ್ತು ಅನೇಕ ಸಂದರ್ಭಗಳಲ್ಲಿ ಅವರ ಜೊತೆಯಲ್ಲಿ ಆಟ, ವಿನೋದಗಳಲ್ಲಿ ಭಾಗಿಯಾಗಿರುತ್ತಿದ್ದರು. ಪ್ರವಾದಿ ಸಂಗಾತಿಗಳೊಡನೆ ಉದ್ಯಾನಕ್ಕೆ ತೆರಳುತ್ತಿದ್ದರು. ಅಲ್ಲಿ ವಿವಿಧ ವಿಷಯಗಳ ಬಗ್ಗೆ ಅವರೊಂದಿಗೆ ಮಾತುಕತೆಯಾಡುತ್ತಿದ್ದರು. ಈಜುವ ಸ್ಪರ್ಧೆ, ಓಟದ ಸ್ಪರ್ಧೆ ಬಿಲ್ಲು – ಬಾಣದ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಪ್ರವಾದಿ ಈ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು.

ಸಡಗರ ಸಂಭ್ರಮದ ಸಂದರ್ಭಗಳಲ್ಲಿ ಪ್ರವಾದಿ ನಗಾರಿಯನ್ನು ಬಾರಿಸುತ್ತಿದ್ದರು. ಈ ನಗಾರಿಯು ಒಂದು ಕಡೆಯಲ್ಲಿ ತೆರೆದಿರುತ್ತಿತ್ತು. ಒಮ್ಮೆ ಹಬ್ಬದ ದಿನ ಇರ್ವರು ಬಾಲೆಯರು ಆಯಿಷಾರ ಬಳಿಯಲ್ಲಿ ಹಾಡುತ್ತಿದ್ದರು. ಇದನ್ನು ನೋಡಿ ಅಬೂಬಕರ್(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಹುಡುಗಿಯರನ್ನು ಗದರಿಸಿದರು. ಪ್ರವಾದಿ ಮಧ್ಯೆ ಪ್ರವೇಶಿಸಿ ಹುಡುಗಿಯರಿಗೆ ಹಾಡು ಮುಂದುವರೆಸಲು ಅನುಮತಿಸಿದರು. ಆಯಿಷಾರೊಂದಿಗೆ ಇರುತ್ತಿದ್ದ ಓರ್ವ ಅನ್ಸಾರ್ ಹುಡುಗಿಯ ವಿವಾಹದ ಸಂದರ್ಭದಲ್ಲಿ, ಕೆಲ ಹುಡುಗಿಯರು ಜೊತೆಗೂಡಿ ಹಾಡ ತೊಡಗಿದಾಗ, ಜೊತೆಯಲ್ಲಿ ವಾದ್ಯಗಳನ್ನು ನುಡಿಸಲಾಯಿತು. ಪ್ರವಾದಿ ಈ ಹುಡುಗಿಯರಿಗೆ ಹಾಡು ಹಾಡಲು ಮತ್ತು ವಾದ್ಯಗಳನ್ನು ನುಡಿಸಲು ಅನುಮತಿಸಿದರು. ಹಾಡನ್ನು ಹಾಡಬಲ್ಲ ಹುಡುಗಿಯನ್ನು ವಿವಾಹವಾಗುತ್ತಿದ್ದ ಹುಡುಗಿಯೊಂದಿಗೆ ಕಳುಹಿಸಿ ಕೊಡಲು ಪ್ರವಾದಿ ತಿಳಿಸಿದರು.

ಒಂದು ಸಲ ಹಬ್ಬದ ಸಂದರ್ಭದಲ್ಲಿ ಇಥಿಯೋಪಿಯಾದಿಂದ ಆಗಮಿಸಿದ್ದ ತಂಡವೊಂದು ಪ್ರವಾದಿರ ನಿವಾಸದ ಬಳಿ ವಿವಿಧ ಆಟಗಳನ್ನು ಪ್ರದರ್ಶಿಸ ತೊಡಗಿತು. ಆಯಿಷಾರಿಗೆ ಈ ಆಟಗಳನ್ನು ನೋಡುವ ಬಯಕೆಯಾಯಿತು. ಪ್ರವಾದಿ ಬಾಗಿಲ ಬಳಿ ಅಡ್ಡವಾಗಿ ನಿಂತರು. ಅವರ ಹಿಂಬದಿಯಲ್ಲಿ ಆಯಿಷಾ ನಿಂತುಕೊಂಡು ವಿನೋದ ಪ್ರದರ್ಶನವನ್ನು ವೀಕ್ಷಿಸಿದರು.

ಮತ್ತೊಂದು ಸಂದರ್ಭದಲ್ಲಿ ಪ್ರವಾದಿ ಮತ್ತು ಆಯಿಷಾ ಓಟದ ಸ್ಪರ್ಧೆಯನ್ನು ನಡೆಸಿದರು. ಆಯಿಷಾ ಓಟದಲ್ಲಿ ಪ್ರವಾದಿರನ್ನು ಸೋಲಿಸಿದರು. ಸ್ವಲ್ಪ ಕಾಲದ ಬಳಿಕ ಇನ್ನೊಮ್ಮೆ ನಡೆದ ಓಟದ ಸ್ಪರ್ಧೆಯಲ್ಲಿ ಪ್ರವಾದಿ ಆಯಿಷಾರನ್ನು ಸೋಲಿಸಿದರು. ಆಗ ಪ್ರವಾದಿ ಹೇಳಿದರು.

**"ಆಯಿಷಾ, ನೀನು ಈ ಮೊದಲು ನನ್ನನ್ನು ಸೋಲಿಸಿದ್ದ ಸೇಡನ್ನು ನಾನು ಈಗ ತೀರಿಸಿಕೊಂಡೆ!"**

## ಅಂತರಂಗದ ಮಾತು

ಮದೀನಾದ ಉತ್ತರ ಭಾಗದಲ್ಲಿದ ಕೆಲ ಗೋತ್ರಗಳು ಫದಕ್ ನೀರಿನ ಝರಿಯ ಬಳಿ ಕೆಲಸ ಮಾಡುತ್ತಿದ್ದ ಯಹೂದಿ ಬೇಸಾಯಗಾರರ ಮೇಲೆ ಆಗಿಂದಾಗ್ಗೆ ಆಕ್ರಮಣ ಮಾಡುತ್ತಿದ್ದರು. ಈ ಪ್ರದೇಶವು ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತ್ತು. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇವರ ಕಿರುಕುಳವನ್ನು ತಡೆಯಲು 30 ಯೋಧರ ತಂಡವನ್ನು ರವಾನಿಸಿದರು. ಆದರೆ ಈ ಗೋತ್ರದ ಜನರು ತಂಡದ ಮೇಲೆ ಆಕ್ರಮಣ ಮಾಡಿ 30 ಯೋಧರನ್ನೂ ಹತ್ಯೆಗೈದರು. ಪ್ರವಾದಿ ಇವರನ್ನು ಸದೆ ಬಡಿಯಲಿಕ್ಕಾಗಿ 200 ಸೈನಿಕರ ತಂಡವನ್ನು ರವಾನಿಸಿದರು. ಈ ತಂಡದಲ್ಲಿ 17 ವರ್ಷ ವಯಸ್ಸಿನ ಝೈದ್ ಬಿನ್ ಹಾರಿಸ್‌ರ ಪುತ್ರ ಉಸಾಮ ಸಹ ಇದ್ದರು.

ಫದಕ್ ನೀರಿನ ಝರಿಯ ಮೇಲೆ ನಿಯಂತ್ರಣ ಸಾಧಿಸಲು, ಅಲ್ಲಿಯ ಸಂಪತ್ತನ್ನು ಹೊಂದುವ ಉದ್ದೇಶದಿಂದ ಅನೇಕ ಗೋತ್ರಗಳು ಮುಸ್ಲಿಮರ ವಿರುದ್ಧ ಹೋರಾಡಲು ಜೊತೆಗೂಡಿದ್ದರು.

ಎರಡೂ ತಂಡಗಳ ನಡುವೆ ಘೋರ ಕಾಳಗ ನಡೆಯಿತು. ಅಂತಿಮವಾಗಿ ಮುಸ್ಲಿಮ್ ಸೇನೆಯ ಮೇಲುಗೈಯಾಯಿತು. ಸಂಘರ್ಷಣೆಯ ಸಮಯದಲ್ಲಿ ವೈರಿ ತಂಡದ ಯೋಧನೊಬ್ಬನು ಉಸಾಮರನ್ನು ಅವರ ಕಿರಿಯ ವಯಸ್ಸಿನ ಕಾರಣದಿಂದಾಗಿ ಅವರನ್ನು ಅಣಕಿಸಿದನು. ಉಸಾಮರಿಗೆ ಕೋಪ ಉಕ್ಕಿ ಬಂತು. ಅವರು ಕೋಪದಿಂದ ಯೋಧನನ್ನು ಬೆನ್ನಟ್ಟಿದರು. ಸ್ವಲ್ಪ ದೂರ ಹಿಂಬಾಲಿಸಿ ಅವನನ್ನು ಹಿಡಿದು

ಘಾಸಿಗೊಳಿಸಿದರು. ಯೋಧನು "ಅಲ್ಲಾಹನಲ್ಲದೇ, ಅನ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ" ಎಂದು ಕೂಗಿದನು. ಆದರೆ ಉಸಾಮ ಆತನ ಮಾತನ್ನು ನಿರ್ಲಕ್ಷಿಸಿ, ಆತನನ್ನು ಹತ್ಯೆಗೈದರು. ತಮ್ಮ ತಂಡ ಹಿಂತಿರುಗಿದ ಬಳಿಕ ನಡೆದ ಘಟನೆಯನ್ನು ತಂಡದ ಸದಸ್ಯರಿಗೆ ತಿಳಿಸಿದರು. ತಂಡದವರು ಉಸಾಮರ ಕ್ರಮಕ್ಕೆ ದಿಗ್ಭ್ರಮೆ ವ್ಯಕ್ತಪಡಿಸಿದರು. ಉಸಾಮರಿಗೆ ತಮ್ಮ ತಪ್ಪಿನ ಅರಿವಾಯಿತು.

ಮುಸ್ಲಿಮ್ ತಂಡವು ಮದೀನಾ ಹಿಂತಿರುಗಿದಾಗ ಪ್ರವಾದಿ ತಂಡವನ್ನು ಹಾರ್ದಿಕವಾಗಿ ಬರಮಾಡಿಕೊಂಡರು. ಉಸಾಮ ನಡೆದ ವೃತ್ತಾಂತವನ್ನು ಪ್ರವಾದಿರಿಗೆ ತಿಳಿಸಿದಾಗ, ಪ್ರವಾದಿ ಕೋಪಗೊಂಡು, "ಉಸಾಮ, ಆ ವ್ಯಕ್ತಿಯು ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲವೆಂದು ಸಾಕ್ಷ್ಯ ವಹಿಸಿದ ಬಳಿಕವೂ ಆತನ ಹತ್ಯೆಗೈದೆಯಾ?" ಎಂದು ಪ್ರಶ್ನಿಸಿದರು. ಉಸಾಮ "ಪ್ರವಾದಿವರ್ಯರೇ, ಆ ವ್ಯಕ್ತಿ ಕೇವಲ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದ ಕಲಿಮಃ ಪಠಿಸಿದ್ದಾನೆ" ಎಂದರು. ಇದಕ್ಕೆ ಪ್ರವಾದಿ "ಆ ವ್ಯಕ್ತಿಯು ಸತ್ಯವನ್ನು ನುಡಿಯುತ್ತಿದ್ದಾನೆಯೋ, ಅಥವಾ ಸುಳ್ಳನ್ನು ನುಡಿಯುತ್ತಿದ್ದಾನೆಯೋ ಎಂದು ನೀನು ಅವನ ಹೃದಯವನ್ನು ತೆರೆದು ನೋಡಿದ್ದೀಯಾ?" ಎಂದರು. ಪ್ರವಾದಿ ಮಾತುಗಳನ್ನು ಕೇಳಿ ಉಸಾಮರಿಗೆ ಬಹಳ ದುಃಖವೂ, ಪಶ್ಚಾತ್ತಾಪವೂ ಆಯಿತು. ತಮ್ಮ ತಪ್ಪಿಗೆ ಕ್ಷಮೆ ದೊರಕದೇ ಇರುವ ಬಗ್ಗೆ ಅವರಿಗೆ ಭಯವೂ ಆಯಿತು. ಅಂತಿಮವಾಗಿ ಪ್ರವಾದಿ ಅವರ ತಪ್ಪನ್ನು ಕ್ಷಮಿಸಿದರು. ಯುದ್ಧವಿರಲಿ, ಶಾಂತಿವಿರಲಿ, ಜನರೊಂದಿಗೆ ಹೇಗೆ ವರ್ತಿಸಬೇಕೆಂದು ಪ್ರವಾದಿ ಯುವ ಉಸಾಮರಿಗೆ ಬುದ್ಧಿವಾದ ಹೇಳಿದರು.

ಶತ್ರು ಯೋಧನು ಪವಿತ್ರ ಕಲಿಮಃ ಉಚ್ಚರಿಸಿದ ಬಳಿಕ ಉಸಾಮ ಆತನನ್ನು ವಧಿಸಬಾರದಿತ್ತು. ಆತನು ಸತ್ಯವನ್ನು ನುಡಿದಿದ್ದರೆ, ಆತನು ರಕ್ಷಣೆಗೆ ಅರ್ಹನಾಗಿದ್ದನು. ಆತನು ಸುಳ್ಳನ್ನು ನುಡಿದಿದ್ದರೂ. ಆತನ ಮಾತುಗಳು ಆತನ ಕ್ಷಮೆಯ ಬೇಡಿಕೆಯದಾಗಿದ್ದವು. ಈ ಬಗ್ಗೆ ಕುರ್‌ಆನ್ ಈಗಾಗಲೇ ಮುಸ್ಲಿಮರಿಗೆ ಈ ರೀತಿ ಆದೇಶಿಸಿತ್ತು.

> " ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನ ಮಾರ್ಗದಲ್ಲಿ ಜಿಹಾದ್‌ಗೆ ನಡೆದಾಗ ಮಿತ್ರ ಮತ್ತು ಶತ್ರುಗಳಲ್ಲಿ ಬೇಧವರಿಯಿರಿ ಮತ್ತು ನಿಮ್ಮನ್ನು ಮುಂದಾಗಿ ಅಭಿವಂದಿಸಿದವನಿಗೆ ತಕ್ಷಣ, 'ನೀನು ಸತ್ಯ ವಿಶ್ವಾಸಿಯಲ್ಲ' ಎನ್ನ ಬೇಡಿರಿ."
> (ಪವಿತ್ರ ಕುರ್‌ಆನ್ 4:94)

ಉಸಾಮ ಭವಿಷ್ಯದಲ್ಲಿ ಇಂತಹ ಪ್ರಮಾದ ಮತ್ತೊಂದೂ ಮರುಕಳಿಸದಂತೆ

ಎಚ್ಚರ ವಹಿಸುವುದಾಗಿ ತಮ್ಮಷ್ಟಕ್ಕೇ ಪ್ರತಿಜ್ಞೆಗೈದರು. ಈ ಘಟನೆ ನಡೆದ ಮೂರು ವರ್ಷಗಳ ಬಳಿಕ ಪ್ರವಾದಿ ಮರಣ ಶಯ್ಯೆಯಲ್ಲಿದ್ದಾಗ, ಇಸ್ಲಾಮಿ ಯುದ್ಧದ ನೈತಿಕ ಮೇರೆಗಳ ಬಗ್ಗೆ ಸಲಹೆಗಳನ್ನು ಮತ್ತು ಬೋಧನೆಗಳನ್ನು ಉಸಾಮರಿಗೆ ವಹಿಸಿದ್ದರು ಎಂಬುದನ್ನು ಸ್ಮರಿಸಬೇಕಿದೆ.

ವೈರಿ ಸೇನೆಯ ಯೋಧನು ಮರಣವು ಸನ್ನಿಹಿತವಾಗಿರುವುದನ್ನು ನೋಡಿ ಕ್ಷಮೆಗಾಗಿ ಯಾಚಿಸಿದ್ದನು. ಆದರೆ ಉಸಾಮ, ಯೋಧನು ಅವರಿಗೆ ಅಣಕಿಸಿದ್ದರಿಂದ, ಇದನ್ನು ಪ್ರತಿಷ್ಠೆಯನ್ನಾಗಿಸಿ, ಇಸ್ಲಾಮ್ ಪೂರ್ವ ಅರಬ್ ಸಂಪ್ರದಾಯದಂತೆ ಅವನ ಮೇಲೆ ಪ್ರತೀಕಾರ ಪಡೆಯಲಿಕ್ಕಾಗಿ ಅವನ ಹತ್ಯೆ ಮಾಡಿದ್ದರು. ಇಸ್ಲಾಮ್ ಸ್ವೀಕಾರದ ನಂತರ ಉಸಾಮರ ನಡವಳಿಕೆಯಲ್ಲಿ ಪರಿವರ್ತನೆಯಾಗಬೇಕಿತ್ತು.

ಯೋಧನ ಮನಃಪರಿವರ್ತನೆಗೆ ಏನೇ ಕಾರಣಗಳಿದ್ದರೂ, ಉಸಾಮರ ಕ್ರಮವನ್ನು, ಅವರ ವಿಚಾರಧಾರೆಯನ್ನು ಸಮರ್ಥಿಸಲು ಸಾಧ್ಯವಿರಲಿಲ್ಲ. ತಮ್ಮ ಕೃತ್ಯಕ್ಕಾಗಿ ಉಸಾಮ ಪಶ್ಚಾತ್ತಾಪಪಟ್ಟರು. ಮನುಷ್ಯರ ಹೃದಯದಲ್ಲಿ ಯಾವ ವಿಚಾರ, ಯಾವ ಭಾವನೆಗಳು ಅಡಗಿವೆ ಎಂಬುದನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲ. ಯಾವನೇ ವ್ಯಕ್ತಿಯ ವರ್ತನೆ ಸಂಶಯಾಸ್ಪದವಾಗಿದ್ದರೆ, ಅಂತಹ ವ್ಯಕ್ತಿಗಳ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುವಾಗ ಪ್ರವಾದಿ ಬಹಳ ಜಾಗರೂಕತೆ ವಹಿಸುತ್ತಿದ್ದರು. ಮದೀನಾದಲ್ಲಿ ತಮ್ಮ ಸುತ್ತಲು ಅನೇಕ ಕಪಟ ವಿಶ್ವಾಸಿಗಳಿರುವುದು ಪ್ರವಾದಿರಿಗೆ ತಿಳಿದ ವಿಷಯವೇ ಆಗಿತ್ತು. ಆದರೆ ಪ್ರವಾದಿ ಅವರ ವಿರುದ್ಧ ಯಾವುದೇ ನಿರ್ದಿಷ್ಟ ಕ್ರಮಕೈಗೊಳ್ಳಲಿಲ್ಲ. ಅವರ ಬಗ್ಗೆ ಪ್ರವಾದಿ ಜಾಗರೂಕರಾಗಿದ್ದರು. ಅವರ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದರು. ಆದರೆ ಪ್ರವಾದಿ ಅವರ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿಲ್ಲ.

## ಕಅಬ್

ಮದೀನಾ ಹಿಂತಿರುಗಿದ ನಂತರ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ತಮ್ಮ ಸಂದೇಶ ಪ್ರಚಾರ ಕಾರ್ಯವನ್ನು, ಇಸ್ಲಾಮಿ ಸಾಮ್ರಾಜ್ಯದ ಕಾರ್ಯಭಾರವನ್ನು ಮುಂದುವರೆಸಿದ್ದರು. ಒಂದು ದಿನ ಕಅಬ್ ಬಿನ್ ಝುಹೈರ್‌ರನ್ನು ನೋಡಿ ಆಶ್ಚರ್ಯ ಚಕಿತರಾದರು. ಕಅಬ್ ಬಿನ್ ಝುಹೈರ್ ಪ್ರಖ್ಯಾತ ಕವಿಯಾಗಿದ್ದರು. ಬಹಳ ಸುಶ್ರಾವ್ಯವಾಗಿ ಕವನಗಳನ್ನು ಪಠಿಸುತ್ತಿದ್ದರು. ಕಅಬ್ ಬಿನ್ ಝುಹೈರ್ ಪ್ರವಾದಿರನ್ನು ತೀವ್ರವಾಗಿ ದ್ವೇಷಿಸುತ್ತಿದ್ದರು. ತಮ್ಮ ಸಾಮರ್ಥ್ಯಗಳನ್ನು ಪ್ರವಾದಿರನ್ನು ಮೂದಲಿಸಲು, ನಿಂದಿಸಲು ಬಳಸುತ್ತಿದ್ದರು.

ಕಅಬ್ ಬಿನ್ ಝುಹೈರ್ ಕೆಲ ದಿನಗಳಿಂದ ಮದೀನಾದಲ್ಲಿ ತಮ್ಮ ಸ್ನೇಹಿತರ ಮನೆಯಲ್ಲಿ ರಹಸ್ಯವಾಗಿ ಅಡಗಿದ್ದರು. ಮದೀನಾದಲ್ಲಿ ಅವರ ವಾಸ ಅತ್ಯಂತ

ಅಪಾಯಕಾರಿಯಾಗಿತ್ತು. ಅವರ ಕೃತ್ಯಗಳಿಂದಾಗಿ ಮುಸ್ಲಿಮರು ಅವರನ್ನು ದ್ವೇಷಿಸುತ್ತಿದ್ದರು. ಮುಸ್ಲಿಮರ ಕಣ್ಣಿಗೆ ಅವರು ಕಾಣಿಸಿದ್ದರೆ, ಅವರ ಹತ್ಯೆಯಾಗುವುದು ನಿಶ್ಚಿತವಾಗಿತ್ತು. ಕಅಬ್ ಬಿನ್ ಝುಹೈರ್‌ರಿಗೆ ಪ್ರವಾದಿ ಅವರ ಮುಂದೆ ಶರಣಾಗತರಾಗುತ್ತಿದ್ದ ಜನರನ್ನು ಕ್ಷಮಿಸುತ್ತಿದ್ದ ವಿಷಯ ತಿಳಿಯಿತು ಒಂದು ದಿನ ಫಝುರ್ ನಮಾಝಿನ ಬಳಿಕ ಕಅಬ್ ಬಿನ್ ಝುಹೈರ್ ಪ್ರವಾದಿರ ಮುಂದೆ ಹಾಜರಾಗಿ, **"ಕಅಬ್ ನಿಮ್ಮ ಬಳಿ ಬಂದರೆ, ಅವರನ್ನು ಕ್ಷಮಿಸುವಿರಾ?"** ಎಂದು ಪ್ರಶ್ನಿಸಿದರು. ಪ್ರವಾದಿ, ತಾವು ಕ್ಷಮಿಸುವುದಾಗಿ ತಿಳಿಸಿದರು. ಆಗ ಕಅಬ್ **"ನಾನು ಕಅಬ್ ಆಗಿರುವೆನು"** ಎಂದರು. ಅವರನ್ನು ನೋಡಿದ ಓರ್ವ ಅನ್ಸಾರ್, ಅವರನ್ನು ಕೊಲ್ಲಲು ಧಾವಿಸಿದರು. ಪ್ರವಾದಿ ಅವರನ್ನು ತಡೆದು, ಕಅಬ್ ತಮ್ಮ ಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು ಬಂದಿರುವರೆಂದು, ಈಗ ಅವರು ಮೊದಲಿನ ಕಅಬ್ ಅಲ್ಲವೆಂದು ತಿಳಿಸಿದರು.

ಕಅಬ್ ಬಿನ್ ಝುಹೈರ್ ಪ್ರವಾದಿರ ಮುಂದೆ, ಪ್ರವಾದಿರ ಬಗ್ಗೆ ಪ್ರೀತಿ, ಗೌರವಗಳನ್ನು ತೋರುವ, ಅವರಿಂದ ಕ್ಷಮೆ ಬೇಡುವ ಕವನಗಳನ್ನು ಪಠಿಸಿದರು. ಅವರ ಕವನಗಳಿಂದ ಪ್ರವಾದಿ ಬಹಳ ಪ್ರಭಾವಿತರಾದರು. ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಾ ಪ್ರವಾದಿ, ತಮ್ಮ ಶಾಲನ್ನು ಕಅಬ್‌ರಿಗೆ ಹೊದಿಸಿದರು.

ಪ್ರವಾದಿ ಉತ್ತಮ ಕವನ, ಕವಿತೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಸುಶ್ರಾವ್ಯವಾಗಿ ಕವನ ಪಠಿಸುವವರನ್ನು ಪ್ರಶಂಸಿಸುತ್ತಿದ್ದರು ಮತ್ತು ಪ್ರೋತ್ಸಾಹಿಸುತ್ತಿದ್ದರು. ಸೌಂದರ್ಯವನ್ನು ವರ್ಣಿಸುವ, ಅಲ್ಲಾಹನ ಅನುಗ್ರಹಗಳನ್ನು ವರ್ಣಿಸುವ, ಅಲ್ಲಾನಿಗೆ ಕೃತಜ್ಞತೆ ಸಲ್ಲಿಸುವ ಕವನ, ಕವಿತೆಗಳನ್ನು ಪ್ರವಾದಿ ಇಷ್ಟ ಪಡುತ್ತಿದ್ದರು. ಪ್ರವಾದಿ ಸಹ ಕೆಲವೇ ಪದಗಳಲ್ಲಿ ಸಂದೇಶವನ್ನು ತಲುಪಿಸುವ, ಜನರಿಗೆ ಮನವರಿಕೆ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು.

## ತಬೂಕ್ ಯುದ್ಧ

ಮದೀನಾದಿಂದ ಸುಮಾರು 500 ಮೈಲು ಉತ್ತರಕ್ಕೆ ತಬೂಕ್ ಪಟ್ಟಣವಿದೆ. ರೋಮನ್ ಸಾಮ್ರಾಜ್ಯಕ್ಕೆ ಒಳಪಟ್ಟ ಈ ನಗರದ ಪರಿಸರದಲ್ಲಿ ಮುಸ್ಲಿಮರಿಂದ ಯುದ್ಧದ ಪ್ರತಿಕಾರ ಪಡೆಯಲಿಕ್ಕಾಗಿ ಗಸ್ಸಾನಿಗಳ ಸೇನಾ ತುಕಡಿಗಳು ಮತ್ತು ಕೈಸರನ ಸೇನೆಗಳು ಒಟ್ಟುಗೂಡುತ್ತಿವೆ. ಈ ಸೇನೆಯಲ್ಲಿ ಲಹಮ್ ಮತ್ತು ಗಸ್ಸಾನ್‌ನ ಎಲ್ಲಾ, ಅರಬ್ ಗೋತ್ರಗಳು ಶಾಮಿಲಾಗಿದ್ದು, ಅವರ ಮುಂಚೂಣಿಯ ಪಡೆಯು 'ಬಲ್ಕಾ' ದ ವರೆಗೆ ತಲುಪಿದೆಯೆಂದು ತಿಳಿದು ಬರುತ್ತದೆ. ಆಗ ಅರೇಬಿಯಾದಲ್ಲಿ ತೀವ್ರ ಬರಗಾಲವಿತ್ತು. ಆದುದರಿಂದ ಅರಬರನ್ನು ಸದೆಬಡಿಯಲು ಇದು ಸೂಕ್ತ

ಸಂದರ್ಭವೆಂದು ಬಗೆದು ಹಿರ್ಕಲ್ ತನ್ನ 40 ಸಾವಿರ ಸೈನಿಕರನ್ನು ರವಾನಿಸಿದ್ದಾನೆ.

ಮದೀನಾದ ಉತ್ತರ ಭಾಗದಲ್ಲಿ ಪರಿಸ್ಥಿತಿಯು ಎಷ್ಟು ಗಂಭೀರವಾಗಿತ್ತೆಂದರೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಪ್ರಥಮ ಬಾರಿಗೆ ಯಾರ ವಿರುದ್ಧ ಯುದ್ಧ ಮಾಡಲು ತಯಾರಿ ನಡೆಸಲಾಗುತ್ತಿದೆ ಎಂಬುದನ್ನು ಸಾರ್ವಜನಿಕವಾಗಿ ಘೋಷಿಸಿದ್ದರು. ಮುಸ್ಲಿಮ್ ಸೇನೆಗೆ ಮದೀನಾದ ಉತ್ತರ ಭಾಗಕ್ಕೆ ಪ್ರಯಾಣಿಸಿ, ಶತ್ರು ಸೈನಿಕರನ್ನು ತಡೆಯಬೇಕಾಗಿತ್ತು. ಅವಶ್ಯಕತೆ ಉದ್ಭವಿಸಿದಲ್ಲಿ, ಶತ್ರುಗಳ ಪ್ರದೇಶಕ್ಕೆ ತೆರಳಿ ಅವರ ಮೇಲೆ ಆಕ್ರಮಣ ಮಾಡಬೇಕಾಗಿತ್ತು.

ಹವಾಮಾನವು ತೀವ್ರ ಪ್ರತಿಕೂಲವಾಗಿತ್ತು. ಸುಡುಬಿಸಿಲು!

ಮುಹಮ್ಮದ್ ತಮ್ಮ ಗುಪ್ತಚರರ ಮೂಲಕ ಈ ಸುದ್ದಿಯನ್ನು ದೃಢಪಡಿಸಿಕೊಂಡಿದ್ದಾರೆ. ಯುದ್ಧದ ಸಿದ್ಧತೆಗಳಿಗಾಗಿ ನೆರವಾಗಲು ಸಾರ್ವತ್ರಿಕ ವಿಜ್ಞಾಪನೆ ಹೊರಡಿಸಲಾಗಿದೆ. ಉಮರ್ ತಮ್ಮ ಎಲ್ಲಾ ಸಂಪತ್ತಿನ ಅರ್ಧ ಭಾಗವನ್ನು ನೀಡಿದ್ದಾರೆ. ಅಬೂಬಕರ್ ಸಿದ್ದೀಕ್ ತಮ್ಮ ಎಲ್ಲಾ ಸಂಪತ್ತನ್ನು ಧಾರೆ ಎರೆದಿದ್ದಾರೆ. ಉಸ್ಮಾನ್ ಅರ್ಧ ಸೇನೆಗೆ ಸವಾರಿಯ ವ್ಯವಸ್ಥೆ ಮಾಡಿರುವರು.

ಲಭ್ಯವಿದ್ದ ಎಲ್ಲಾ ಸವಾರಿಗಳನ್ನು ಕಲೆಹಾಕಲಾಯಿತು. ಆದರೆ ಇದು ಎಲ್ಲಾ ಸೈನಿಕರ ಅವಶ್ಯಕತೆಯನ್ನು ಪೂರೈಸಲು ಸಾಕಾಗುತ್ತಿರಲಿಲ್ಲ. ಈ ಕಾರಣದಿಂದ ಪ್ರವಾದಿ ಯುದ್ಧದಲ್ಲಿ ಭಾಗವಹಿಸಲು ಕೆಲ ಮುಸ್ಲಿಮರ ಮನವಿಯನ್ನು ತಿರಸ್ಕರಿಸಬೇಕಾಯಿತು. ಪರಿಸ್ಥಿತಿಯ ವಿಷಮತೆಯನ್ನು ಅರಿತಿದ್ದ ಮುಸ್ಲಿಮರು, ತಮ್ಮ ಮನವಿ ತಿರಸ್ಕೃತಗೊಂಡಾಗ ದುಃಖದಿಂದ ಕಣ್ಣೀರು ಹರಿಸಿದರು. ಶತ್ರು ಸೇನೆಯ ಶಕ್ತಿಯನ್ನು ನೋಡಿದರೆ ಇಸ್ಲಾಮಿ ಸಾಮ್ರಾಜ್ಯದ ಭವಿಷ್ಯವೇ ತೂಗುಯ್ಯಾಲೆಯಲ್ಲಿದ್ದಂತೆ ಭಾಸವಾಗುತ್ತಿತ್ತು.

ಕ್ರಿ.ಶ. 630ರಂದು 9ನೇ ಹಿಜರಿ ಶಕೆಯಲ್ಲಿ 30 ಸಾವಿರ ಮುಸ್ಲಿಮ್ ಯೋಧರು, 10 ಸಾವಿರ ಕುದುರೆ ಮತ್ತು ಒಂಟೆಗಳೊಂದಿಗೆ ತಬೂಕ್‌ಗೆ ರವಾನೆಯಾಗುತ್ತದೆ. ಅರೇಬಿಯಾದ ಇತಿಹಾಸದಲ್ಲಿ ಇಂದಿನ ತನಕ ಅಷ್ಟು ದೊಡ್ಡ ಸೈನ್ಯ ಜಮಾವಣೆಯಾಗಿರಲಿಲ್ಲ. ಸೇನೆಯ ದಂಡ ನಾಯಕತ್ವವನ್ನು ಸ್ವತಃ ಪ್ರವಾದಿ ವಹಿಸಿದ್ದರು. ಉರಿ ಬಿಸಿಲು, ಬರದ ಬೇಗೆ. ಖರ್ಜೂರ ಹಣ್ಣಾಗುವ ಕಾಲ! ಇಂತಹ ಪರಿಸ್ಥಿತಿಯಲ್ಲಿ ಇಸ್ಲಾಮಿ ಸೇನೆ ಮುನ್ನೂರು ಮೈಲು ಪ್ರಯಾಣ ಮಾಡಿ ಜರ್ಫ್ ಎಂಬಲ್ಲಿ ಬಿಡಾರ ಹೂಡುತ್ತದೆ. ಅಲ್ಲಿಂದ ಹೊರಟು ತಬೂಕ್ ತಲುಪಿ 20 ದಿನಗಳ ಕಾಲ ಅಲ್ಲಿ ತಂಗುತ್ತದೆ. ಆದರೆ ಗಸ್ಸಾನಿಗಳಿಗೆ ಆಕ್ರಮಣ ಮಾಡುವ ಧೈರ್ಯ ಬರುವುದಿಲ್ಲ. ಕೈಸರ್‌ನ ಸೇನೆಯು ಎಲ್ಲೂ ಕಾಣಸಿಗುವುದಿಲ್ಲ. ಅವರೆಲ್ಲರಿಗೂ ಭಯಭೀತಿ ಆವರಿಸಿದೆ.

"ಮುಸ್ಲಿಮರು ನಿರ್ಭೀತಿಯಿಂದ ನೂರಾರು ಮೈಲಿ ದೂರದ ನಮ್ಮ ಗಡಿಗಳಿಗೆ ಬಂದು ಎಷ್ಟು ಧೈರ್ಯದಿಂದ ತಂಗಿರುವರು! ಜೀವನ ಮರಣಗಳು ಅವರ ಮಟ್ಟಿಗೆ ಒಂದು ಆಟ ವಿನೋದದಂತಿದೆ" ಎಂದು ಶತ್ರು ಸೇನೆಯು ಯೋಚಿಸುತ್ತದೆ.

ಶತ್ರು ಸೇನೆಗೆ ರಣರಂಗದಲ್ಲಿ ಮುಸ್ಲಿಮ್ ಸೇನೆಯನ್ನು ಎದುರಿಸುವ ಧೈರ್ಯ ಬರುವುದಿಲ್ಲ. ಮುಹಮ್ಮದ್‌ರ ಧೈರ್ಯದ ಈ ಕ್ರಮವು ಮುಸ್ಲಿಮರಿಗೆ ಬಹಳ ಫಲಕಾರಿಯಾಯಿತು. ರಾಜಕೀಯವಾಗಿ ಮುಸ್ಲಿಮರು ವಿಜಯವನ್ನು ಸಾಧಿಸಿದರು. ಅರಬ್ ಪ್ರದೇಶದಲ್ಲಿ ಅವರ ಪ್ರತಿಷ್ಠೆಯು ಬೆಳೆಯಿತು. ಸುತ್ತ ಮುತ್ತಲಿನ ಅನೇಕ ಗೋತ್ರಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಮದೀನಾದ ಮೇಲೆ ಆಕ್ರಮಣ ಮಾಡಬೇಕೆಂದು ಬಯಕೆಯನ್ನು ಹೊಂದಿದ್ದ ಕೆಲ ಗೋತ್ರಗಳ ಆಸೆ, ಆಕಾಂಕ್ಷೆಗಳ ಮೇಲೆ ಮುಸ್ಲಿಮ್ ಸೈನ್ಯದ ಧೈರ್ಯ, ಸ್ಥೈರ್ಯಗಳು, ತಣ್ಣೀರೆರೆಚಿದವು.

ತಬೂಕ್ ಯಾತ್ರೆಯು ಬಹಳ ಕಷ್ಟದಾಯಕವಾಗಿತ್ತು. ಆದರೆ ಈ ಯಾತ್ರೆಯ ಬಹಳಷ್ಟು ಪ್ರಯೋಜನಗಳಾದವು. ಬೃಹತ್ ಮುಸ್ಲಿಮ್ ಸೇನೆಯ ಪ್ರಭಾವ ಸುತ್ತಮುತ್ತಲಿನ ಪ್ರದೇಶದ ಮೇಲಾಯಿತು. ದೂರ ದೂರದ ಪ್ರದೇಶಗಳಿಂದ ಜನರ ನಿಯೋಗಗಳು ಬಂದು ಇಸ್ಲಾಮ್ ಸ್ವೀಕರಿಸಿದವು. ತಬೂಕ್‌ನಲ್ಲಿ ಕ್ರೈಸ್ತರು ಮತ್ತು ಯಹೂದಿಗಳು ಪ್ರವಾದಿರೊಂದಿಗೆ ಒಪ್ಪಂದ ಮಾಡಿಕೊಂಡು, ಜಿಝಿಯಾ ನೀಡಲು ಒಪ್ಪಿಕೊಂಡರು.

ತಬೂಕ್‌ನಿಂದ ಪ್ರವಾದಿ ಖಾಲಿದ್ ಬಿನ್ ವಲೀದ್‌ರನ್ನು ಇರಾಕ್ ಮತ್ತು ಸಿರಿಯಾ ಪ್ರದೇಶಗಳ ಮಾರ್ಗಗಳಲ್ಲಿ, ಅಲ್ಲಿಯ ವಿವಿಧ ಗೋತ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ರವಾನಿಸಿದರು. ಈ ಎಲ್ಲಾ ಕಾರ್ಯಾಚರಣೆಗಳು ಅತ್ಯಂತ ಯಶಸ್ವಿಯಾದವು. ಇದರ ನಂತರ ಪ್ರವಾದಿ ಮದೀನಾ ಹಿಂತಿರುಗಿದರು.

## ನಿಯೋಗಗಳು

ಒಂಭತ್ತನೇ ಹಿಜರಿ ಶಕೆಯನ್ನು ನಿಯೋಗಗಳ ವರ್ಷವೆಂದು ಕರೆಯಲಾಗುತ್ತದೆ. ಮುಸ್ಲಿಮರ ಶಕ್ತಿ ಮತ್ತು ಪ್ರಾಬಲ್ಯವನ್ನು ಕಂಡು ಪ್ರಭಾವಿತರಾಗಿ ದೂರದೂರದಿಂದ ನಿಯೋಗಗಳು ಬಂದು ಪ್ರವಾದಿರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾರಂಭಿಸಿದವು. ಬನು ತಾಕಿಫ್ ಗೋತ್ರದವರು ಮೊದಲು ಒಪ್ಪಂದವನ್ನು ಮಾಡಿಕೊಂಡರು.

ಹವಾಝಿನ್ ಗೋತ್ರದ ನಾಯಕ ಮಲಿಕ್ ಬನು ತಾಕಿಫ್ ಗೋತ್ರದ ಮೇಲೆ ಎಂತಹ ದಿಗ್ಬಂದನವನ್ನು ಹೇರಿದ್ದನೆಂದರೆ ಬನು ತಾಕಿಫ್ ಗೋತ್ರಕ್ಕೆ ಸುತ್ತಮುತ್ತಲಿನ ಗೋತ್ರಗಳೊಂದಿಗೆ ಮೈತ್ರಿ ಒಪ್ಪಂದಗಳನ್ನು ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ. ಬನು ತಾಕಿಫ್ ಗೋತ್ರದ ಸುತ್ತಮುತ್ತಲಿನ ಬುಡಕಟ್ಟುಗಳು ಈಗಾಗಲೇ ಇಸ್ಲಾಮ್ ಸ್ವೀಕರಿಸಿದ್ದವು

ಅಥವಾ ಮುಸ್ಲಿಮರೊಂದಿಗೆ ಮೈತ್ರಿ ಮಾಡಿಕೊಂಡಿದ್ದವು. ಬನು ತಾಕಿಫ್ ಗೋತ್ರ ಇಸ್ಲಾಮ್ ಸ್ವೀಕರಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿತು. ಆದರೆ ಅದರೊಂದಿಗೆ ಕೆಲ ಷರತ್ತುಗಳನ್ನು ವಿಧಿಸಬಯಸಿತು. ಅವರು ಅವರ ಆರಾಧ್ಯ 'ಲಾತ್'ನ ಆರಾಧನೆಯನ್ನು ಮುಂದುವರೆಸಬಯಸಿದರು ಮತ್ತು ನಮಾಝ್ ನಿರ್ವಹಿಸುವುದರಿಂದ ವಿನಾಯತಿಯನ್ನು ನೀಡುವಂತೆ ಮನವಿ ಮಾಡಿದರು. ಆದರೆ ಪ್ರವಾದಿ ಬನು ತಾಕಿಫ್‌ರ ಷರತ್ತುಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಏಕೈಕ ದೇವನಾದ ಅಲ್ಲಾಹನ ಆರಾಧನೆ ಇಸ್ಲಾಮಿನ ಬುನಾದಿಯಾಗಿದ್ದು, ಇದರ ಬಗ್ಗೆ ಯಾವುದೇ ಬಗೆಯ ಕೊಡುಕೊಳ್ಳುವಿಕೆಗೆ ಅವರು ತಯಾರಿರಲಿಲ್ಲ. ನಮಾಝ್ ನಿರ್ವಹಿಸುವುದು ಇಸ್ಲಾಮಿನ ಕಡ್ಡಾಯ ವಿಧಿಯಾಗಿದ್ದು, ಇದರ ಬಗ್ಗೆ ವಿನಾಯತಿ ನೀಡುವ ಪ್ರಶ್ನೆಯೇ ಇರಲಿಲ್ಲ. ಅಂತಿಮವಾಗಿ ಬನು ತಾಕಿಫ್ ಗೋತ್ರ ಪ್ರವಾದಿರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು.

ಯಹೂದಿಯರ ಮತ್ತು ಕ್ರೈಸ್ತರ ನಿಯೋಗಗಳೂ ಪ್ರವಾದಿ ಬಳಿಗೆ ಬಂದವು. ಇಸ್ಲಾಮ್ ಸ್ವೀಕರಿಸುವಂತೆ ಪ್ರವಾದಿ ಇವರಿಗೆ ಒತ್ತಾಯ ಮಾಡಲಿಲ್ಲ. ಇವರು ಜಿಝಿಯಾ ಕೊಡಲು ಒಪ್ಪಿಕೊಂಡರು. ಇದಕ್ಕೆ ಬದಲಾಗಿ ಮುಸ್ಲಿಮ್ ಸೇನೆ ಅವರ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿತು. ಅರೇಬಿಯಾ ಪ್ರದೇಶದಾದ್ಯಂತ ಸಂದೇಶವು ಸ್ಪಷ್ಟವಾಗಿತ್ತು. ಯಾವ ಯಾವ ಗೋತ್ರಗಳು ಇಸ್ಲಾಮ್ ಸ್ವೀಕಾರ ಮಾಡ ಬಯಸುವವೋ, ಅವರು ತಮ್ಮ ವಿವಿಧ ಮೂರ್ತಿಗಳು ದೇವಿ, ದೇವತೆಗಳ ಆರಾಧನೆಯನ್ನು ತ್ಯಜಿಸಿ, ಏಕೈಕ ಅಲ್ಲಾಹನ ಆರಾಧನೆಯನ್ನು ಮಾಡಬೇಕಾಗಿತ್ತು. ಈ ವಿಷಯದಲ್ಲಿ ಯಾವುದೇ ರಿಯಾಯಿತಿಗೆ ಅವಕಾಶವಿರಲಿಲ್ಲ. ಇಸ್ಲಾಮಿನ ಇತರ ಬೇಡಿಕೆಗಳನ್ನು ಅವರು ಪೂರೈಸಬೇಕಾಗಿತ್ತು. ಯಾವ ಗೋತ್ರಗಳು, ತಮ್ಮ ಧಾರ್ಮಿಕ ವಿಶ್ವಾಸವನ್ನು ಆಚರಣೆಯನ್ನು ಮುಂದುವರೆಸಬಯಸಿದ್ದವೋ, ಅವರು ಅವರ ರಕ್ಷಣೆಗಾಗಿ ಮುಸ್ಲಿಮ್ ಸರ್ಕಾರಕ್ಕೆ ಜಿಝಿಯಾ ಪಾವತಿಸಬೇಕಾಗಿತ್ತು. ಈ ಎರಡು ಪ್ರಸ್ತಾವನೆಗಳಲ್ಲಿ ಯಾವುದೇ ಪ್ರಸ್ತಾವನೆಯನ್ನು ಸ್ವೀಕರಿಸಲು ಗೋತ್ರಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು.

☆

# ಮಾನವ ಹಕ್ಕುಗಳು

ಪಾಶ್ಚಾತ್ಯರು, ಜಗತ್ತಿಗೆ ಮಾನವ ಹಕ್ಕುಗಳ ಪರಿಚಯ ಮೊದಲ ಬಾರಿಗೆ ಬ್ರಿಟನ್ನಿನ **'**ಮಾಗ್ನಕರ್ತ**'**ದಿಂದ ವಾಯಿತೆಂದು ಹೇಳಿಕೊಳ್ಳುತ್ತಾರೆ. ಆದರೆ ಮಾಗ್ನಕರ್ತದ 600 ವರ್ಷಗಳ ಮೊದಲೇ ಇಸ್ಲಾಮ್ ಮಾನವ ಹಕ್ಕುಗಳ ಸಮಗ್ರ ಸಂಹಿತೆಯನ್ನು ಜಗತ್ತಿಗೆ ನೀಡಿತ್ತು. ಇದರಲ್ಲಿ ವರ್ಗ, ವರ್ಣ, ಜನಾಂಗ, ಭಾಷೆ ಮೊದಲಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ಮಾಡಿರಲಿಲ್ಲ.

ವ್ಯಕ್ತಿಯ ಮೇಲ್ಮೆಯನ್ನು ಆತನ ನಡವಳಿಕೆಯ ಆಧಾರದ ಮೇಲೆ ನಿರ್ಧರಿಸಬೇಕೆಂಬ ಮಾನದಂಡವನ್ನು ಕುರ್‌ಆನ್ ನೀಡಿತು:

> **"**ಜನರೇ, ನಾವು ನಿಮ್ಮನ್ನು ಓರ್ವ ಸ್ತ್ರೀ ಪುರುಷರಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನು, ಗೋತ್ರಗಳನ್ನು ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹ್ ಸರ್ವಜ್ಞನೂ, ವಿವರ ಪೂರ್ಣನೂ ಆಗಿರುತ್ತಾನೆ**"**. (ಪವಿತ್ರ ಕುರ್‌ಆನ್ 49:13)

ಕುರ್‌ಆನಿನ ಈ ಸೂಕ್ತವು ಎಲ್ಲಾ ಮನುಷ್ಯರನ್ನು ಅಭಿಸಂಬೋಧಿಸುತ್ತದೆ. ಇದು ಕೇವಲ ಮುಸ್ಲಿಮರಿಗೆ ಉದ್ದೇಶಿಸಿರುವುದಿಲ್ಲ.

ಕುರ್‌ಆನಿನ ಈ ಸೂಕ್ತವು, ಮಾನವ ಕುಲದ ಸಮಾನತೆಯನ್ನು ಸಾರುತ್ತದೆ.

ಎಲ್ಲಾ ಜನರೂ ಒಂದೇ ತಂದೆ, ತಾಯಿಯ ಸಂತತಿಯೆಂದೂ, ವಿವಿಧ ಜನಾಂಗಗಳು ಮತ್ತು ಗೋತ್ರಗಳನ್ನು ಕೇವಲ ಪರಸ್ಪರ ಪರಿಚಯಪಟ್ಟು ಕೊಳ್ಳಲಿಕ್ಕಾಗಿ ಮಾತ್ರ ಸೃಷ್ಟಿಸಲಾಯಿತೆಂದು ತಿಳಿಸುತ್ತದೆ.

ಸಮಸ್ತ ಮಾನವ ಕುಲ ಒಂದೇ ಕುಟುಂಬಕ್ಕೆ ಸೇರಿದ್ದು, ಈ ಬಗ್ಗೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) "ಅಲ್ಲಾಹನೇ, ಎಲ್ಲಾ ಜನರು ಪರಸ್ಪರ ಸಹೋದರರಾಗಿರುವರೆಂದು ನಾನು ಸಾಕ್ಷ್ಯ ವಹಿಸುತ್ತೇನೆ" ಎಂದು ನುಡಿದಿದ್ದರು. ಇದರ ಉದಾಹರಣೆಯನ್ನು ಪ್ರವಾದಿ  ಜೀವನದಲ್ಲಿ ನಾವು ಕಾಣುತ್ತೇವೆ. ಒಮ್ಮೆ ಪ್ರವಾದಿ ತಮ್ಮ ಸಂಗಾತಿಗಳೊಂದಿಗೆ ಕುಳಿತಿದ್ದರು. ಒಂದು ಶವ ಯಾತ್ರೆಯು ಅಲ್ಲಿಂದ ಹಾದುಹೋಯಿತು. ಪ್ರವಾದಿ ಶವದ ಗೌರವಾರ್ಥ ಎದ್ದುನಿಂತರು. ಸಂಗಾತಿಗಳು, ಪ್ರವಾದಿವರ್ಯರೇ, ಈ ಶವವು ಯಹೂದಿಯದಾಗಿದೆ ಎಂದರು. ಅದಕ್ಕೆ ಪ್ರವಾದಿ, ಯಹೂದಿಯು ಮನುಷ್ಯನಲ್ಲವೇ? ಎಂದು ಪ್ರಶ್ನಿಸಿದರು.

ಇಸ್ಲಾಮ್ ಮಾನವನಿಗೆ ನೀಡುವ ಮೌಲ್ಯವನ್ನು ಕುರ್‌ಆನಿನ ಆ ಸೂಕ್ತದಿಂದ ನಾವು ತಿಳಿಯಬಹುದು.

> "............. ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ"
> (ಪವಿತ್ರ ಕುರ್‌ಆನ್ 5:32)

ಅರಫಾ ಮೈದಾನದಲ್ಲಿ ತಮ್ಮ ವಿದಾಯ ಭಾಷಣದಲ್ಲಿ ಪ್ರವಾದಿ ಮುಹಮ್ಮದ್ ಈ ರೀತಿ ಘೋಷಿಸಿದ್ದರು.

"ಜನರೇ! ನಿಮ್ಮೆಲ್ಲರ ಸೃಷ್ಟಿಕರ್ತನು ಏಕೈಕನಾಗಿದ್ದಾನೆ. ನೀವೆಲ್ಲರೂ ಆದಮರ ಸಂತತಿಗಳಾಗಿದ್ದು, ಆದಮರನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಅರಬನಿಗೆ ಅರಬೇತರನ ಮೇಲೆ, ಬಿಳಿಯನಿಗೆ ಕರಿಯನ ಮೇಲೆ ಯಾವುದೇ ಶ್ರೇಷ್ಠತೆ ಇಲ್ಲ ದೇವಭಯದ ಹೊರತು. ನಿಮ್ಮಲ್ಲಿ ಅತ್ಯಧಿಕ ದೇವಭಯವುಳ್ಳವನೇ ನಿಮ್ಮಲ್ಲಿ ಶ್ರೇಷ್ಠನು".

☆

# ಕುರ್‌ಆನ್ ಮತ್ತು ಮಾನವ ಘನತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಒಂದು ಪರಿಪೂರ್ಣ ಮಾನವ ಹಕ್ಕುಗಳ ಸನ್ನದನ್ನು ಲೋಕಕ್ಕೆ ನೀಡಿದ್ದಾರೆ. ಈ ಹಕ್ಕುಗಳು ಇಸ್ಲಾಮೀ ಸಂವಿಧಾನದ ಕಡ್ಡಾಯ ಭಾಗವಾಗಿವೆ. ಈ ಸನ್ನದಿನ ಕೆಲ ಪ್ರಮುಖ ಅಂಶಗಳು ಈ ರೀತಿ ಇವೆ:

1. ಜನಾಂಗೀಯ, ವರ್ಗ, ವರ್ಣ, ಭಾಷೆ, ಜಾತಿ ಮೊದಲಾದ ವಿಭಿನ್ನತೆಗಳ ಹೊರತಾಗಿಯೂ ಎಲ್ಲಾ ಮನುಷ್ಯರಲ್ಲಿ ಐಕ್ಯತೆ, ಸಮಾನತೆ ಮತ್ತು ಸಹೋದರತೆ. ಇಸ್ಲಾಮೀ ಮಾನವ ಹಕ್ಕುಗಳ ಇದು ಜೀವಾಳವಾಗಿದೆ.

2. ಇಸ್ಲಾಮಿ ಜೀವನ ಮಾನವೀಯತೆಯೊಂದಿಗೆ ಗಾಢ ಸಂಬಂಧವನ್ನು ಹೊಂದಿದೆ. ಜೀವಿಸುವ ಹಕ್ಕಿಗೆ ಇಸ್ಲಾಮ್ ಕೊಡುವ ಪ್ರಾಮುಖ್ಯತೆಯಿಂದ ಇದು ವ್ಯಕ್ತವಾಗುತ್ತದೆ. ಗುಲಾಮರನ್ನು ವಿಮೋಚನೆಗೊಳಿಸುವ ಮೂಲಕ ಅವರೊಂದಿಗೆ ಪ್ರೀತಿ, ಅನುಕಂಪ ತೋರುವ ಮೂಲಕ ಪ್ರವಾದಿ ಉತ್ತಮ ಉದಾಹರಣೆಯನ್ನು ನೀಡಿದ್ದಾರೆ. ಪ್ರವಾದಿ ಹೆಣ್ಣು ಶಿಶು ಹತ್ಯೆಯನ್ನು ನಿಷೇಧಿಸಿದರು. ಪರಸ್ಪರ ಸಂಬಂಧಗಳಲ್ಲಿ ವಿಶ್ವಾಸ, ಕರುಣೆ ತೋರಲು ಒತ್ತಾಯ ನೀಡಿದರು. ಯುದ್ಧದಲ್ಲೂ ಪ್ರವಾದಿ ಮಾನವ ಹಕ್ಕುಗಳ, ನೈತಿಕ ಮೌಲ್ಯಗಳ ಉಲ್ಲಂಘನೆಯಾಗದಂತೆ ಜಾಗ್ರತೆ ವಹಿಸಿದರು.

3. ಇಸ್ಲಾಮಿ ಮಾನವೀಯ ಹಕ್ಕುಗಳಲ್ಲಿ ಸಮಾನತೆ ಪ್ರಮುಖ ಸ್ಥಾನವನ್ನು ಪಡೆದಿದೆ. ಇಸ್ಲಾಮಿ ಸಾಮ್ರಾಜ್ಯದಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕುಗಳಿವೆ. ಪ್ರತಿಯೋರ್ವ ವ್ಯಕ್ತಿ, ಮುಸ್ಲಿಮನಿರಲಿ, ಮುಸ್ಲಿಮೇತರನಿರಲಿ, ನ್ಯಾಯದ, ಜೀವನೋಪಾಯದ, ರಾಜಕೀಯದಲ್ಲಿ ಭಾಗವಹಿಸುವ ಹಕ್ಕುಗಳನ್ನು ಹೊಂದಿದ್ದಾನೆ. ಇದರಂತೆ, ನಾಗರೀಕ ಹಕ್ಕುಗಳನ್ನೂ ಪ್ರತಿಯೋರ್ವನು ಹೊಂದಿರುವನು. ಇಸ್ಲಾಮೀ ಸಾಮ್ರಾಜ್ಯದ ವಿಶೇಷತೆ ಏನೆಂದರೆ ಇಸ್ಲಾಮೀ

ಸಾಮ್ರಾಜ್ಯದ ಕಾನೂನಿನ ಪರಿಮಿಧಿಯೊಳಗೇ ಇರುತ್ತಾನೆ. ಇಸ್ಲಾಮೀ ರಾಷ್ಟ್ರದ ನಾಯಕನೆಂಬ ಕಾರಣದಿಂದ ಆತನಿಗೆ ಯಾವ ವಿನಾಯಿತಿ ದೊರೆಯುವುದಿಲ್ಲ. ಆತನಿಗೆ ಯಾವ ವಿಶೇಷ ಸವಲತ್ತುಗಳನ್ನೂ ನೀಡಲಾಗುವುದಿಲ್ಲ.

4. ಪರಧರ್ಮ ಸಹಿಷ್ಣುತೆ ಮತ್ತು ವಿವಿಧ ಸಂಪ್ರದಾಯಗಳ ಆಚರಣೆಗೆ ಆಸ್ಪದ – ಇವು ಇತ್ತೀಚಿಗಿನವರೆಗೂ ಪಾಶ್ಚಾತ್ಯ ಸಮಾಜದಲ್ಲಿ ಕಂಡು ಬಂದಿರಲಿಲ್ಲ. ಆದರೆ ಪ್ರವಾದಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳು 1400 ವರ್ಷಗಳ ಹಿಂದೆಯ ಸಹಿಷ್ಣುತೆಯನ್ನು, ಸೌಹಾರ್ದತೆಯನ್ನು ಪಾಲಿಸಿದ್ದರು. ಇಸ್ಲಾಮೀ ಸಾಮ್ರಾಜ್ಯದಲ್ಲಿ ಮುಸ್ಲಿಮರು, ಯಹೂದಿಗಳು, ಕ್ರೈಸ್ತರು, ವಿವಿಧ ಬುಡಕಟ್ಟುಗಳ ಜನರು, ಮೊದಲಾದವರು ಶಾಂತಿಯುತ, ಸೌಹಾರ್ದಯುತ ಜೀವನವನ್ನು ನಡೆಸುತ್ತಿದ್ದರು. ಎಲ್ಲಾ ಜನರಿಗೂ ಧಾರ್ಮಿಕ, ಸಾಂಸ್ಕೃತಿಕ ಮತ್ತು ನ್ಯಾಯದ ಸ್ವಾಯತ್ತೆಯನ್ನು ನೀಡಲಾಗಿತ್ತು. ಯಹೂದಿಯರ ಮತ್ತು ಕ್ರೈಸ್ತರ ಅನನ್ಯತೆಯನ್ನು ರಕ್ಷಿಸುವ ಹೊಣೆ ಇಸ್ಲಾಮೀ ಸರಕಾರದ ಮೇಲಿತ್ತು. ಕೆಲಹವೊಮ್ಮೆ ಇಸ್ಲಾಮೀ ಸರ್ಕಾರ ಅವರ ರಕ್ಷಣೆಯನ್ನು ಮಾಡುವ ಪಾತ್ರವನ್ನು ವಹಿಸುತ್ತಿತ್ತು.

5. ಕುರ್‌ಆನ್ ಪ್ರತಿಪಾದಿಸಿರುವ ಮಾನವ ಹಕ್ಕುಗಳು ಅದು ಪ್ರತಿಪಾದಿಸುವ ಧರ್ಮದ ಬುನಾದಿಗಳಾಗಿವೆ. ಧಾರ್ಮಿಕ ಸಹಿಷ್ಣುತೆಯ ಆಧಾರದ ಮೇಲೆ ಬಹುಧರ್ಮೀಯ ಸಮಾಜದ ನಿರ್ಮಾಣಕ್ಕೆ ಅದು ಒತ್ತು ನೀಡುತ್ತದೆ.

6. ಇಸ್ಲಾಮಿ ಸಾಮ್ರಾಜ್ಯದಲ್ಲಿ ಎಲ್ಲಾ ಧರ್ಮೀಯರಿಗೂ ಅವರವರ ಧರ್ಮಗಳನ್ನು ಆಚರಿಸುವ, ಅವರ ಸಂಪ್ರದಾಯಗಳಂತೆ ನಡೆದುಕೊಳ್ಳುವ ಹಕ್ಕು.

7. ಇಸ್ಲಾಮಿ ರಾಷ್ಟ್ರದಲ್ಲಿ ಅಲ್ಪ ಸಂಖ್ಯಾತರ ಹಕ್ಕುಗಳು ರಕ್ಷಿಸಲ್ಪಟ್ಟಿವೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದಿರುವರು.

"ಯಾರು ಇಸ್ಲಾಮಿ ರಾಷ್ಟ್ರದಲ್ಲಿ ಮುಸ್ಲಿಮೇತರ ಪ್ರಜೆಗಳನ್ನು ದಮನಿಸುವರೋ, ನಿರ್ಣಾಯಕ ದಿನದಂದು ನಾನು ಅವರ ಪರವಾಗಿ ವಕಾಲತ್ತು ವಹಿಸುವೆನು".

8. ಮಹಿಳೆಯರಿಗೆ ಸಮಾನತೆ ಮತ್ತು ಘನತೆಯ ಹಕ್ಕು. ಪ್ರತಿಯೋರ್ವ ಮಹಿಳೆ ಶಿಕ್ಷಣಕ್ಕೆ, ಆಸ್ತಿಯನ್ನು ಹೊಂದಲು, ವಿವಾಹದ ವಿಷಯದಲ್ಲಿ ನಿರ್ಧರಿಸಲು, ಮತ್ತು ವಾರೀಸು ಹಕ್ಕನ್ನು ಹೊಂದಿರುವಳು.

ಪ್ರವಾದಿ ನಜ್ರಾನ್‌ನ ಕ್ರೈಸ್ತರಿಗೆ ಈ ಕೆಳಗಿನಂತೆ ಹಕ್ಕುಗಳ ಸನ್ನದು ನೀಡಿದ್ದರು.

- ಅವರ ಪ್ರಾಣ, ಧರ್ಮ, ಸೊತ್ತು ವಿತ್ತಗಳ ರಕ್ಷಣೆಯ ಹಕ್ಕು
- ಅವರ ವಾಣಿಜ್ಯ ಚಟುವಟಿಕೆಗಳ ರಕ್ಷಣೆಯ ಹಕ್ಕು

– ಅವರ ಧರ್ಮಾಚರಣೆಯಲ್ಲಿ, ಅವರ ಧಾರ್ಮಿಕ ಆಚರಣೆಯಲ್ಲಿ ಹಸ್ತಕ್ಷೇಪ ಮಾಡದಿರುವ ಹಕ್ಕು

– ಅವರ ಪ್ರದೇಶದಲ್ಲಿ ಮುಸ್ಲಿಮ್ ಸೇನೆ ಪ್ರವೇಶಿಸದಿರುವ – ಭರವಸೆ

– ದಶಾಂಶ ತೆರಿಗೆಯನ್ನು ಪಾವತಿಸುವುದರಿಂದ ವಿನಾಯತಿ.

ಕುರ್‌ಆನ್‌ನಲ್ಲಿ ಇನ್ನೂ ಅನೇಕ ಮಾನವ ಹಕ್ಕುಗಳ ಬಗ್ಗೆ ಪ್ರಸ್ತಾಪನೆಗಳನ್ನು ನಾವು ಕಾಣಬಹುದು.

ಉದಾಹರಣೆಗೆ ಕುರ್‌ಆನಿನ ಅಧ್ಯಾಯ 17, 33ನೇ ಆಯತ್‌ನಲ್ಲಿ "ಅಲ್ಲಾಹ್ ಪವಿತ್ರಗೊಳಿಸಿರುವ ಮಾನವ ಪ್ರಾಣವನ್ನು ಹರಣಗೊಳಿಸಬೇಡಿ" ಎಂದಿದೆ. ಇದನ್ನು, "ಪ್ರತಿಯೋರ್ವರಿಗೂ ಪ್ರಾಣದ, ಸ್ವಾತಂತ್ರ್ಯದ ಮತ್ತು ಸುರಕ್ಷತೆಯ ಹಕ್ಕಿದೆ" ಎಂದು ವ್ಯಾಖ್ಯಾನಿಸಬಹುದು (ಮಾನವ ಹಕ್ಕುಗಳು ಪರಿಚ್ಛೇದತೆ–3).

"ಜನರ ನಡುವೆ ತೀರ್ಮಾನಿಸುವಾಗ ನ್ಯಾಯದಿಂದ ತೀರ್ಮಾನಿಸಿ" ಎಂದು ಕುರ್‌ಆನ್ ತಿಳಿಸುತ್ತದೆ. (ಪವಿತ್ರ ಕುರ್‌ಆನ್ 4:58). "ಎಲ್ಲಾ ಜನರೂ ಕಾನೂನಿನ ಎದುರು ಸಮಾನರು, ಎಲ್ಲರಿಗೂ ಕಾನೂನಿನ ಹಕ್ಕಿದೆ" ಎಂಬ ಅರ್ಥವನ್ನು ಕುರ್‌ಆನಿನ ಈ ಆಯತ್ ಒಳಗೊಂಡಿದೆ. (ಮಾನವ ಹಕ್ಕುಗಳು ಪರಿಚ್ಛೇದ : 6,7)

ಕುರ್‌ಆನ್‌ನಿನ ಆಯತ್, "ಒಬ್ಬರ ಸ್ವತ್ತನ್ನು ಕಬಳಿಸಬೇಡಿ" (ಕುರ್‌ಆನ್ 2:188) "ಪ್ರತಿಯೋರ್ವರಿಗೂ ಸ್ವತ್ತನ್ನು ಹೊಂದುವ ಹಕ್ಕು ಇದ್ದು, ಯಾರನ್ನೂ ಅವರ ಸೊತ್ತಿನಿಂದ ವಂಚಿತರನ್ನಾಗಿಸಬಾರದು" ಎಂಬುದನ್ನು ಒಳಗೊಂಡಿದೆ. (ಮಾನವ ಹಕ್ಕುಗಳು ಪರಿಚ್ಛೇದ 17)

ಕುರ್‌ಆನಿನ ಆದೇಶಗಳಾದ "ಇತರರ ಪರಿಹಾಸ್ಯ ಮಾಡಬಾರದು, ನಿಂದಿಸಬಾರದು, ಮತ್ತು ಅಡ್ಡ ಹೆಸರಿನಿಂದ ಕರೆಯಬಾರದು, ಚಾಡಿ ಹೇಳಬಾರದು (ಕುರ್‌ಆನ್ 49:11, 12) ಇತರರ ಮೇಲೆ ಬೇಹುಗಾರಿಕೆ ಮಾಡಬಾರದು (ಕುರ್‌ಆನ್ 49:12) ಅನುಮತಿ ಇಲ್ಲದೇ, ಇತರರ ಮನೆಯನ್ನು ಪ್ರವೇಶಿಸಬಾರದು" (ಕುರ್‌ಆನ್ 24:27) 'ಇತರರ ಏಕಾಂತತೆ, ಗೋಪ್ಯತೆಯಲ್ಲಿ ಹಸ್ತಕ್ಷೇಪ' ಮಾಡಬಾರದು, ಒಬ್ಬರ ಘನತೆ, ಗೌರವದ ಮೇಲೆ ಆಕ್ರಮಣ ಮಾಡಬಾರದು, ಪ್ರತಿಯೊಬ್ಬರಿಗೂ ಇಂತಹ ಹಸ್ತಕ್ಷೇಪ, ಆಕ್ರಮಣಗಳ ವಿರುದ್ಧ ಕಾನೂನಿನ ರಕ್ಷಣೆ ಪಡೆಯುವ ಹಕ್ಕಿದೆ' ಎಂಬ ಅರ್ಥವನ್ನು ಒಳಗೊಂಡಿದೆ. (ಮಾನವ ಹಕ್ಕುಗಳು ಪರಿಚ್ಛೇದ 12)

ಸಮುದಾಯಗಳನ್ನು, ಜನರನ್ನು ಅವರ ವಾಸಸ್ಥಳದಿಂದ ಒಕ್ಕಲೆಬ್ಬಿಸುವುದನ್ನು ಕುರ್‌ಆನ್ ನಿಷೇಧಿಸಿದೆ. ನಿರಾಶ್ರಿತರಿಗೆ, ಆಶ್ರಯ ಬೇಡುವವರಿಗೆ ನೆರವನ್ನು ನೀಡಬೇಕು

ಎಂದು ಕುರ್‌ಆನ್ ಆದೇಶಿಸುತ್ತದೆ. (ಮಾನವ ಹಕ್ಕುಗಳು 17).

ವಿಶ್ವಸಂಸ್ಥೆ ಘೋಷಿಸಿರುವ ಮಾನವ ಹಕ್ಕುಗಳಲ್ಲಿ, ಹೆಚ್ಚಿನ ಹಕ್ಕುಗಳನ್ನು ಕುರ್‌ಆನ್ 14 ಶತಮಾನಗಳ ಹಿಂದೆಯೇ ನೀಡಿತ್ತೆಂಬುದನ್ನು ಇಲ್ಲಿ ನಾವು ಗಮನಿಸಬೇಕು. ಕುರ್‌ಆನ್ ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದೆ. "ಸಮಾಜದ ಬಡವರು ನಿರ್ಗತಿಕರಿಗೆ ಊಟದ, ಬಟ್ಟೆ ಬರೆಯ, ಆಶ್ರಯದ ಹಕ್ಕಿದೆ" ಎಂದು ಕುರ್‌ಆನ್ ಘೋಷಿಸಿದೆ.

ಜನರಿಗೆ ವೈಯಕ್ತಿಕವಾಗಿ ಹಾಗೂ ಸಾಮುದಾಯಿಕವಾಗಿ ಅತ್ಯಾವಶ್ಯಕ ವಸ್ತುಗಳ ಮೇಲೆ ಹಕ್ಕಿದೆ ಎಂದು ಕುರ್‌ಆನ್ ತಿಳಿಸುತ್ತದೆ.

> "ಅಲ್ಲಾಹನ ಅನುಗ್ರಹಗಳನ್ನು ಮಿತಿಗೊಳಿಸಬಾರದು"
> (ಪವಿತ್ರ ಕುರ್‌ಆನ್ 17:20)

ಕುರ್‌ಆನ್ ಪ್ರತಿಪಾದಿಸುವ ಮಾನವ ಹಕ್ಕುಗಳು ಮತ್ತು ವಿಶ್ವಸಂಸ್ಥೆ ಪ್ರತಿಪಾದಿಸುವ ಮಾನವ ಹಕ್ಕುಗಳ ನಡುವೆ ಇರುವ ವ್ಯತ್ಯಾಸವೆಂದರೆ ಕುರ್‌ಆನ್ 'ಹಕ್ಕುಗಳ' ಜೊತೆಗೆ ಹೊಣೆಗಾರಿಕೆಯನ್ನು ವಹಿಸುತ್ತದೆ. ಮಾನವ ಕುಲಕ್ಕೆ ಜೀವಿಸುವ ಹಕ್ಕಿದೆ. ಆದರೆ ಪ್ರಕೃತಿಯನ್ನು ಸಂರಕ್ಷಿಸಿದಾಗ ಮಾತ್ರ ಈ ಹಕ್ಕನ್ನು ಪ್ರತಿಪಾದಿಸಬಹುದು.

ಪಾಶ್ಚಾತ್ಯರು, ವೈಯಕ್ತಿಕ ಹಕ್ಕುಗಳಿಗೆ ಮಾತ್ರ ಮಹತ್ವ ನೀಡುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಕುರಾನ್, ಸಾಮುದಾಯಿಕ ಮತ್ತು ಸಾಮೂಹಿಕ ಹಕ್ಕುಗಳಿಗೆ ಒತ್ತು ನೀಡುತ್ತದೆ ಪಾಶ್ಚಾತ್ಯರು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಒತ್ತು ನೀಡಿದರೆ, ಕುರ್‌ಆನ್ ಜನರ 'ಅಸ್ತಿತ್ವ'ಕ್ಕೆ ಒತ್ತು ನೀಡುತ್ತದೆ ವ್ಯಕ್ತಿಗೆ, ಆತನ ಸಂಪೂರ್ಣ ಸಾಮರ್ಥ್ಯ ಸಾಧಿಸಲು ಅನುವಾಗುವಂತಹ ಪರಿಸರವನ್ನು ರೂಪಿಸಬೇಕು. ಕುರ್‌ಆನ್ ಕೇವಲ ಮಾನವ ಹಕ್ಕುಗಳ ಬಗ್ಗೆ ಅಷ್ಟೇ ಅಲ್ಲ, 'ಮಾನವೀಯತೆ'ಯ ಬಗ್ಗೆ ಒತ್ತು ನೀಡುತ್ತದೆ.

✯

# ಮಾನವ ಕುಲದ ಸಮಾನತೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ವಿಶ್ವ ಭಾತೃತ್ವ ಮತ್ತು ಮಾನವ ಕುಲದ ಸಮಾನತೆಯನ್ನು ಸಾರಿದರು. ಇತರ ಧರ್ಮಗಳೂ ಈ ತತ್ವವನ್ನು ಬೋಧಿಸಿದ್ದರೂ, ಪ್ರವಾದಿ ಇದನ್ನು ಪ್ರಾಯೋಗಿಕವಾಗಿ ಅಳವಡಿಸಿ ಅದರ ಆಧಾರದ ಮೇಲೆ ಸಮಾಜವನ್ನು ನಿರ್ಮಿಸಿದ್ದರು.

ಪ್ರವಾದಿ ಬೋಧಿಸಿರುವ 'ವಿಶ್ವ ಸಹೋದರತೆ' ಮತ್ತು 'ಮಾನವ ಕುಲದ ಸಮಾನತೆಯ' ತತ್ವಗಳು ಮಾನವತೆಯ ಉತ್ಥಾನಕ್ಕಾಗಿ ಪ್ರವಾದಿ ನೀಡಿರುವ ಅತ್ಯಮೂಲ್ಯ ಕೊಡುಗೆಯಾಗಿದೆ. ಬಹುಶಃ ಅಂತರರಾಷ್ಟ್ರೀಯ ಸಮುದಾಯವು ಎಚ್ಚರಗೊಂಡರೆ, ಜನಾಂಗೀಯ ಬೇಧ ಭಾವಗಳು ದೂರವಾಗಿ ಸಹೋದರ ಭಾವನೆಗಳು ಸಮಾಜದಲ್ಲಿ ಸುದೃಢವಾಗಬಹುದು.

## ಸಮಾನತೆ

ಭಾರತದ ಕೋಗಿಲೆ ಎಂದು ಪ್ರಖ್ಯಾತರಾಗಿದ್ದ ಸರೋಜಿನಿ ನಾಯ್ಡು ಹೇಳಿದ್ದರು : "ಇಸ್ಲಾಮ್ ಧರ್ಮವು ಪ್ರಜಾಸತ್ತೆಯನ್ನು ಪ್ರಚಾರ ಮಾಡಿ ಅದರಂತೆ ಆಚರಣೆ ಮಾಡಿರುವ ಮೊದಲ ಧರ್ಮವಾಗಿದೆ. ಮಸೀದಿಯಲ್ಲಿ ಆಝಾನ್ ಕರೆ ನೀಡಲಾದಾಗ, ದಿನಕ್ಕೆ ಐದು ಸಲ ಪ್ರಜಾಸತ್ತೆ ಆಚರಣೆಗೆ ಬರುತ್ತದೆ. ರಾಜ ಮತ್ತು ಜನ ಸಾಮಾನ್ಯ ಇಬ್ಬರೂ ಪಕ್ಕದಲ್ಲಿ ನಿಂತು 'ಅಲ್ಲಾಹನೇ ಶ್ರೇಷ್ಠನು' ಎಂದು ಘೋಷಿಸುತ್ತಾರೆ. ಮುಂದುವರೆದು ಸರೋಜಿನಿ ನಾಯ್ಡು, ಈ ಕ್ರಮವು ಒಂದೇ ಕ್ಷಣದಲ್ಲಿ ವಿವಿಧ ಜನರನ್ನು ಸಹೋದರರನ್ನಾಗಿ ಪರಿವರ್ತಿಸುತ್ತದೆ ಎಂದಿರುವರು.

ಇಂಗ್ಲೆಂಡ್‌ನಲ್ಲಿ ಓರ್ವ ಈಜಿಪ್ಷನವ, ಓರ್ವ ಭಾರತೀಯ, ಓರ್ವ

ನೈಜೇರಿಯಾದವ ಮತ್ತು ಓರ್ವ ತುರ್ಕಿ ದೇಶದವ ಪರಸ್ಪರ ಭೇಟಿ ಮಾಡಿದರೆ ಅವರಿಗೆ ತಾವು ವಿಭಿನ್ನ ದೇಶದವರು ಎಂಬ ಸಮಸ್ಯೆ ಕಾಡುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತಾವೆಲ್ಲರೂ ಸತ್ಯ ವಿಶ್ವಾಸಿಗಳು (ಮುಸ್ಲಿಮರು) ಎಂಬ ಭಾವನೆಯೇ ಅಲ್ಲಿ ಪ್ರಧಾನವಾಗಿರುತ್ತದೆ.

## ಹಜ್ಜ್ ಒಂದು ಜ್ವಲಂತ ನಿದರ್ಶನ

ಪ್ರತಿ ವರ್ಷ ಹಜ್ಜ್ ಸಂದರ್ಭದಲ್ಲಿ ಇಡಿಯ ಜಗತ್ತು ವಿಶ್ವಭಾತೃತ್ವ ಮತ್ತು ಸಮಾನತೆಯನ್ನು ಕಾಣುತ್ತದೆ. ಯುರೋಪಿಯನ್ನರು, ಅಮೇರಿಕಾ ದೇಶದವರು, ಚೀನಾ, ಜಪಾನ್, ರಷ್ಯಾ ಮೊದಲಾದ ದೇಶದವರು ಉಚ್ಚ, ನೀಚತೆಯ ವ್ಯತ್ಯಾಸವಿಲ್ಲದೆ, ವರ್ಣದ, ವರ್ಗದ, ಭಾಷೆಯ ಭೇದವಿಲ್ಲದೇ ಎಲ್ಲರೂ ಎರಡು ತುಂಡು ಬಿಳಿ ಬಟ್ಟೆಯ ತುಂಡುಗಳನ್ನು ಹೊದ್ದು, ಅಲ್ಲಾಹನೇ ನಾನು ಹಾಜರಿದ್ದೇನೆ, ಅಲ್ಲಾಹನೇ ನಾನು ಹಾಜರಿದ್ದೇನೆ ಎಂದು ಘೋಷಿಸುತ್ತಾರೆ.

ಒಂದು ತುಂಡು ಬಟ್ಟೆಯನ್ನು ಸೊಂಟದ ಸುತ್ತ, ಸುತ್ತಿರುತ್ತಾರೆ. ಬಡವ, ಬಲ್ಲಿದ, ಉಚ್ಚ – ನೀಚ ಎಂಬ ಯಾವ ವ್ಯತ್ಯಾಸವೂ ಅಲ್ಲಿರುವುದಿಲ್ಲ. ಸಮಾನವಾಗಿ ಎಲ್ಲರೂ ಒಂದೇ ಬಟ್ಟೆಯನ್ನು ಧರಿಸಿರುತ್ತಾರೆ.

ಪ್ರೊ. ಹರ್ಗೋಂಜಿ (Prof. Hurgronje) ರವರ ಅಭಿಪ್ರಾಯದಂತೆ, ಇಸ್ಲಾಮಿನ ಪ್ರವಾದಿಯು ಸ್ಥಾಪಿಸಿದ "ಸರ್ವರಾಷ್ಟ್ರಗಳ ಐಕ್ಯ ಮಂಡಳಿ" (ಲೀಗ್ ಆಫ್ ನೇಷನ್ಸ್) (Leage of Nation) ಯು ಇತರ ರಾಷ್ಟ್ರಗಳಿಗೆ ಮಾರ್ಗ ದರ್ಶಕವಾಗಬಲ್ಲ ರೀತಿಯಲ್ಲಿ ಜಾಗತಿಕ ಐಕ್ಯ ಮತ್ತು ಮಾನವೀಯ ಭಾತೃತ್ವದ ತತ್ವವನ್ನು ಅಂತರರಾಷ್ಟ್ರೀಯ ಬುನಾದಿಯಲ್ಲಿ ಕಾರ್ಯಗತಗೊಳಿಸಿತು. 'ಲೀಗ್ ಆಫ್ ನೇಶನ್ಸ್'ನ ಸಾಕ್ಷಾತ್ಕಾರದಲ್ಲಿ ಇಸ್ಲಾಮ್ ನೀಡಿದ ಕೊಡುಗೆಗೆ ಪರ್ಯಾಯವನ್ನು ಸೂಚಿಸಲು ಜಗತ್ತಿನ ಯಾವ ರಾಷ್ಟ್ರಕ್ಕೂ ಖಂಡಿತ ಸಾಧ್ಯವಿಲ್ಲ.

☆

# ಯುವಕರಿಗೆ ಪ್ರೋತ್ಸಾಹ

11ನೇ ಹಿಜರಿ ಶಕೆಯಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಸಿರಿಯಾ ಮತ್ತ ಫೆಲೆಸ್ತೀನ್ ದೇಶಗಳ ಹತ್ತಿರ ಒಂದು ಸೇನಾ ಕಾರ್ಯಾಚರಣೆಗಾಗಿ 3000 ಸೈನಿಕರನ್ನು ಒಳಗೊಂಡ ಸೇನಾ ತಂಡವನ್ನು ರವಾನಿಸಬಯಸಿದರು. ಕೆಲ ವರ್ಷಗಳ ಹಿಂದೆ ಇದೇ ಪ್ರದೇಶದಲ್ಲಿ ಪ್ರವಾದಿರ ಅನುಯಾಯಿಗಳಾದ ಜಾಫರ್, ಅಬ್ದುಲ್ಲಾ ಮತ್ತು ಝೈದ್ ಬಿನ್ ಹಾರಿಸ್ ಹುತಾತ್ಮರಾಗಿದ್ದರು. ಸೇನಾ ತಂಡದ ನಾಯಕತ್ವವನ್ನು ಪ್ರವಾದಿ ಉಸಾಮ ಬಿನ್ ಝೈದ್‌ರಿಗೆ ವಹಿಸಿದರು. ಆಗ ಉಸಾಮರ ವಯಸ್ಸು ಕೇವಲ 20 ವರ್ಷ ಆಗಿತ್ತು. ಸೇನೆಯಲ್ಲಿ ಉಮರ್ ಅಬೂ ಬಕರ್ ಸಿದ್ದಿಕ್, ಉಸ್ಮಾನ್ ರಂತಹ ಹಿರಿಯ, ಅನುಭವಿ ಸಹಾಬಿಗಳು ಇದ್ದರು. ಈ ಕಾರಣದಿಂದ ಕೆಲ ಸಹಾಬಿಗಳು ಉಸಾಮರನ್ನು ಸೇನಾಧಿಪತಿಯಾಗಿ ನೇಮಿಸುವುದಕ್ಕೆ ಆಕ್ಷೇಪ ವ್ಯಕ್ತ ಪಡಿಸಿದರು. ಪ್ರವಾದಿ ಉಸಾಮ ಈ ಜವಾಬ್ದಾರಿಗೆ ಸಂಪೂರ್ಣ ಅರ್ಹರಿರುವುದಾಗಿ ತಿಳಿಸಿ, ವಿವಾದಕ್ಕೆ ತೆರೆ ಎಳೆದರು.

ಈ ಮೊದಲು ಪ್ರವಾದಿ ಝೈದ್ ಬಿನ್ ಹಾರಿಸ್‌ರನ್ನು ಸೇನಾಧಿಪತಿಯಾಗಿ ನೇಮಿಸಿದ್ದಾಗಲೂ ಕೆಲ ಜನರು ಆಕ್ಷೇಪ ವ್ಯಕ್ತಪಡಿಸಿದ್ದರು. ಝೈದ್ ಸ್ವತಂತ್ರಗೊಂಡ ಗುಲಾಮರಾಗಿದ್ದರು. ಈ ಕಾರಣದಿಂದ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಉಸಾಮರ ಸೇನಾಧಿಪತಿಯಾಗಿ ನೇಮಕದ ವಿರೋಧಕ್ಕೆ ಅವರು ಗುಲಾಮನ ಪುತ್ರ ಮತ್ತು ಚಿಕ್ಕ ಪ್ರಾಯದವರು ಎಂಬ ಅಂಶ ಕಾರಣವಾಗಿತ್ತು. ಆದರೆ ಪ್ರವಾದಿ ಒಂದು ಹುದ್ದೆಗೆ ಅರ್ಹತೆ ಇದ್ದರೆ, ಅದಕ್ಕೆ ವ್ಯಕ್ತಿಯು ಗುಲಾಮನಾಗಿರು ವನೋ, ಕುಲೀನ ವರ್ಗಕ್ಕೆ ಸೇರಿದವನೋ, ಅನುಭವಿಯೋ, ಕಿರಿಯ ಪ್ರಾಯದವನೋ ಎಂಬುದು ಗಣನೆಗೆ ಬರುವುದಿಲ್ಲ ಎಂದು ನುಡಿದರು.

ಸಮಾಜದ ಕಡು ಬಡವರಿಗೂ ಉನ್ನತ ಹುದ್ದೆಯನ್ನು ಅಲಂಕರಿಸುವ

ಅವಕಾಶವನ್ನು ನೀಡುವ ಮೂಲಕ, ಯುವಕರ ಮೇಲೆ ನಂಬಿಕೆ ಇಡುವ ಮೂಲಕ, ಅವರ ಕೌಶಲ್ಯಗಳನ್ನು ಪ್ರಕಟಿಸಲು, ಬೆಳೆಸಲು ಅವಕಾಶ ನೀಡಬೇಕೆಂದು ಪ್ರವಾದಿ ಬೋಧಿಸಿದರು.

ಇದು ಹಿರಿಯ ಅನುಯಾಯಿಗಳಿಗೆ ಒಂದು ತರಬೇತಿಯೂ ಆಗಿತ್ತು. ಅವರು ತಮ್ಮ ಹಿರಿತನ, ಅನುಭವದ ಹೊರತಾಗಿಯೂ, ನಾಯಕನ ಅಪ್ಪಣೆಯ ಮೇರೆಗೆ ಕಿರಿಯ ಪ್ರಾಯದವನನನ್ನು ಅನುಸರಿಸಬೇಕಾಗಿತ್ತು. ಇಂತಹ ಯುವಕ, ಅವರ ಪುತ್ರನ ಪ್ರಾಯದವನೂ ಆಗಿದ್ದಿರಬಹುದು. ವಯಸ್ಸು ಹೆಚ್ಚಾದಂತೆ ಮನುಷ್ಯನ ಶಕ್ತಿ, ಸಾಮರ್ಥ್ಯಗಳು ಕುಂದುತ್ತವೆ. ಹಿರಿಯ ಅನುಯಾಯಿಗಳು, ತಮ್ಮ ವಯಸ್ಸಿನ ಕಾರಣದಿಂದಾಗಿ, ಉದಯೋನ್ಮುಖ ಯುವಕರಿಗೆ ಅವಕಾಶ ಮಾಡಿಕೊಡಬೇಕೆಂಬ ಸೂಚ್ಯ ಸೂಚನೆಯೂ ಇದಾಗಿತ್ತು.

☆

# ಇಸ್ಲಾಮಿ ಯುದ್ಧದ ನೀತಿಶಾಸ್ತ್ರಗಳು

ಉಸಾಮ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಸೇನೆಯೊಂದಿಗೆ ಹೊರಡಬೇಕೆನ್ನುವಷ್ಟರಲ್ಲಿ ಪ್ರವಾದಿರ ಆರೋಗ್ಯ ತೀರಾ ಹದಗೆಟ್ಟಿತು. ಇದರಿಂದಾಗಿ ಮದೀನಾದ ಹೊರವಲಯದಲ್ಲಿ ಉಸಾಮ ಸೇನೆಯೊಂದಿಗೆ ಕಾಯ ಬೇಕಾಗಿ ಬಂತು. ಈ ನಡುವೆ ಪ್ರವಾದಿ ನಿಧನಹೊಂದಿದರು. ಅಬೂಬಕರ್ ಸಿದ್ದೀಕ್ ಖಲೀಫಾರಾಗಿ ನೇಮಿಸಲ್ಪಟ್ಟರು. ಪ್ರವಾದಿರ ಇಚ್ಛೆಯಂತೆ ಉಸಾಮರನ್ನು ಸೇನಾಧಿಪತಿಯಾಗಿ ಮುಂದುವರೆಸಿ, ಸೇನಾ ಕಾರ್ಯಾಚರಣೆಗೆ ಕಳುಹಿಸಿಕೊಟ್ಟರು. ಉಸಾಮರನ್ನು ಬೀಳ್ಕೊಡುತ್ತಾ, ಅಬೂಬಕರ್ ಸಿದ್ದೀಕ್ ಪ್ರವಾದಿರ ಬೋಧನೆಯಂತೆ, ಉಸಾಮರಿಗೆ ಈ ರೀತಿ ಉಪದೇಶಿಸಿದರು. ಈ ಉಪದೇಶವು ಯುದ್ಧಕ್ಕೆ ಸಂಬಂಧಿಸಿದಂತೆ ಇಸ್ಲಾಮಿ ನಿಲುವನ್ನು, ಇಸ್ಲಾಮಿನ ಯುದ್ಧದ ನೀತಿಶಾಸ್ತ್ರಗಳನ್ನು ಬಿಂಬಿಸುತ್ತದೆ.

"ಯುದ್ಧ ಮಾಡುವಾಗ ಎಂದೂ ಸತ್ಯದ ಹಾದಿಯನ್ನು ತೊರೆಯಬೇಡ. ಅಕ್ರಮ ಕಾರ್ಯಗಳನ್ನು ಮಾಡಬೇಡ. ರಣರಂಗದಲ್ಲಿ ಮಹಿಳೆಯರನ್ನು, ಮಕ್ಕಳನ್ನು, ವಯೋವೃದ್ಧರನ್ನು ಹತ್ಯೆ ಮಾಡಬೇಡ. ಜನರ ಮನೆ ಮಠಗಳನ್ನು ಹಾನಿಗೊಳಿಸುವ, ತೋಟಗಳಿಗೆ, ಹೊಲಗದ್ದೆಗಳಿಗೆ ಬೆಂಕಿ ಇಡುವ, ಫಲಭರಿತ ಗಿಡ ಮರಗಳನ್ನು ಕಡಿಯುವ ಕಾರ್ಯಗಳನ್ನು ಮಾಡಬೇಡ. ಜಾನುವಾರುಗಳನ್ನು ವಿನಾಕಾರಣ ಕೊಲ್ಲಬೇಡ. ಸನ್ಯಾಸಿಗಳನ್ನು, ಧರ್ಮಗುರುಗಳನ್ನು ಹತ್ಯೆ ಮಾಡಬೇಡ."

ಈ ಬೋಧನೆಗಳು ಅತ್ಯಗತ್ಯವಾಗಿದ್ದವು. ಪ್ರವಾದಿ ವಿವಿಧ ಸನ್ನಿವೇಶಗಳಲ್ಲಿ, ಸಂದರ್ಭಗಳಲ್ಲಿ ಯುದ್ಧಕ್ಕೆ ಸಂಬಂಧಿಸಿದಂತೆ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರಾಣಿಗಳ ರಕ್ಷಣೆಗೆ ಸಂಬಂಧಿಸಿದಂತೆ ನೀಡಿದ್ದ ಸೂಚನೆಗಳ ಆದೇಶಗಳ ಹಿನ್ನೆಲೆಯಲ್ಲಿ ಅಬೂಬಕರ್ ಸಿದ್ದೀಕ್, ಉಸಾಮ ಬಿನ್ ಝೈದ್‌ರಿಗೆ ಉಪದೇಶವನ್ನು ನೀಡಿದ್ದರು.

☆

# ಜಿಹಾದ್‌ನ ವಿಧಗಳು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಅಲ್ಲಾಹನ ಮಾರ್ಗದಲ್ಲಿ 'ಜಿಹಾದ್' ಎಂಬ ಹೊಸ ಪದದ ಬಳಕೆ ಮಾಡಿ 'ಯುದ್ಧ' ಪದಕ್ಕೆ ಹೊಸ ಆಯಾಮವನ್ನು ನೀಡಿದರು. ಜಿಹಾದ್ ಎಂದರೆ ಸ್ವಾರ್ಥಕ್ಕೆ, ಪ್ರತಿಷ್ಠೆಗೆ ಅಥವಾ ಸಿರಿಸಂಪತ್ತನ್ನು ಗಳಿಸಲು ಅಥವಾ ಇತರ ಜನಾಂಗೀಯರ ಮೇಲೆ ದೌರ್ಜನ್ಯ ನಡೆಸಲು ಮಾಡುವ ಹೋರಾಟವಲ್ಲ.

ಪಾಶ್ಚಾತ್ಯರು ಜಿಹಾದ್ ಪದವನ್ನು ಹಿಂಸೆ, ಮತ್ತು ದೌರ್ಜನ್ಯಕ್ಕೆ ಸಮಾನಂತರವಾಗಿ ಬಳಸುತ್ತಾರೆ. ಜಿಹಾದ್ ಪದದ ಅರ್ಥ 'ಹೋರಾಟ ಮಾಡುವುದು' ಪ್ರಯತ್ನಪಡುವುದಾಗಿದೆ. ಜಿಹಾದ್‌ವೆಂದರೆ ಕೇವಲ ಯುದ್ಧ ಮಾಡುವುದೆಂದಲ್ಲ. ಇದು ಅದರ ಸೀಮಿತ ಅರ್ಥವಷ್ಟೇ. ಒಳಿತಿನ ಸಂಸ್ಥಾಪನೆಗಾಗಿ ಹೋರಾಟ ಮಾಡುವುದು, ಸಮಾಜದಿಂದ ಅನ್ಯಾಯವನ್ನು, ದೌರ್ಜನ್ಯವನ್ನು, ಕೆಡುಕನ್ನು ಉಚ್ಚಾಟಿಸಲು ಶ್ರಮಿಸುವುದು ಜಿಹಾದ್‌ನ ಅರ್ಥವಾಗಿರುವುದು. ಈ ಹೋರಾಟವು ಅಧ್ಯಾತ್ಮಿಕವೂ, ಸಾಮಾಜಿಕವೂ, ಆರ್ಥಿಕವೂ ಮತ್ತು ರಾಜಕೀಯವೂ ಆಗಿದೆ.

'ಜಿಹಾದ್'ಗೆ ವಿಶಾಲಾರ್ಥವಿದ್ದು, ಕುರ್‌ಆನ್‌ನಲ್ಲಿ ಇದರ ವಿವಿಧ ಪಾರ್ಶ್ವಗಳ ಪ್ರಸ್ತಾಪ ಮಾಡಲಾಗಿದೆ.

## ಕುರ್‌ಆನ್ ಮೂಲಕ ಜಿಹಾದ್

"ನಿರಾಕರಿಸುವವರನ್ನು ಅನುಸರಿಸಬೇಡಿರಿ. ಕುರ್‌ಆನ್‌ನೊಂದಿಗೆ ಅವರ ವಿರುದ್ಧ ಉಗ್ರ ಹೋರಾಟ ನಡೆಸಿರಿ". ಅಂದರೆ, ಸತ್ಯ ನಿಷೇಧಿಗಳ ವಿರುದ್ಧ ಸತ್ಯದೊಂದಿಗೆ, ಸಾಕ್ಷ್ಯಗಳೊಂದಿಗೆ ಹೋರಾಡುವುದಾಗಿದೆ".

## ಆತ್ಮ ಸಂಸ್ಕರಣೆಗಾಗಿ ಜಿಹಾದ್

ಆತ್ಮವನ್ನು ಸಂಸ್ಕರಿಸುವುದಕ್ಕಾಗಿ, ಆತ್ಮವನ್ನು ಒಳಿತಿನ ಕಡೆವಾಲುವಂತೆ ಮಾಡಲು, ಕೆಡುಕಿನಿಂದ ರಕ್ಷಿಸಲು ಪ್ರಯತ್ನಿಸುವುದು.

> "ನನ್ನ ಚಿತ್ತವು ನಿರ್ದೋಷಿಯೆಂದು ನಾನೇನೂ ಹೇಳಿಕೊಳ್ಳುವುದಿಲ್ಲ. ನನ್ನ ಪ್ರಭುವಿನ ಕೃಪೆಯಿಲ್ಲದೆ ಹೋದರೆ ಚಿತ್ತವಂತು ಕೇಡಿನ ಕಡೆಗೇ ಪ್ರೇರೇಪಿಸುತ್ತದೆ".
> (ಪವಿತ್ರ ಕುರ್‌ಆನ್ 12:53)

## ಸಂಪತ್ತಿನ ಮೂಲಕ ಜಿಹಾದ್

ಇದರ ಅರ್ಥ ಸಂಪತ್ತನ್ನು ದಾನಧರ್ಮಗಳಲ್ಲಿ ಒಳಿತಿನ ಕಾರ್ಯಗಳಲ್ಲಿ ಜನೋಪಯೋಗಿ ಕಾರ್ಯಗಳಲ್ಲಿ ವಿನಿಯೋಗಿಸುವುದಾಗಿದೆ.

> "......ಮತ್ತು ನಿಮ್ಮ ಸಂಪತ್ತುಗಳಿಂದಲೂ ಜೀವಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ನೀವು ಅರಿಯುವವರಾಗಿದ್ದರೆ, ನಿಮ್ಮ ಪಾಲಿಗೆ ಇದೇ ಉತ್ತಮವಾಗಿದೆ". (ಪವಿತ್ರ ಕುರ್‌ಆನ್ 61:11)

## ವೈಯಕ್ತಿಕ ಜಿಹಾದ್

ಓರ್ವ ಸತ್ಯ ವಿಶ್ವಾಸಿ ನಡೆಸುವ ಸಂದೇಶ ಪ್ರಚಾರ, ಮಾಡುವ ಬೋಧನೆಗಳು ಒಳಿತಿನ ಕಾರ್ಯಗಳನ್ನು ಇದು ಒಳಗೊಂಡಿದೆ. ಏಕೈಕವಾದ ಅಲ್ಲಾಹನಲ್ಲಿ ವಿಶ್ವಾಸವಿಡಲು, ನೈತಿಕ ಮೌಲ್ಯಗಳನ್ನು ಹರಡಲು, ಮಾಡುವ ಪ್ರಯತ್ನಗಳು ಜಿಹಾದ್ ಅರ್ಥದ ವ್ಯಾಪ್ತಿಯಲ್ಲಿ ಬರುತ್ತವೆ.

ಅಲ್ಲಾಹ್ ಈ ರೀತಿ ಆದೇಶಿಸಿರುವನು:

> "ಓ ಪೈಗಂಬರರೇ, ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ".
> (ಪವಿತ್ರ ಕುರ್‌ಆನ್ 16:125)

## ಸಾಮಾಜಿಕ ಪರಿವರ್ತನೆಗೆ ಜಿಹಾದ್

ಅನ್ಯಾಯವನ್ನು, ಇಸ್ಲಾಮ್ ಕಡುವಾಗಿ ವಿರೋಧಿಸುತ್ತದೆ. ಓರ್ವ ವ್ಯಕ್ತಿಯು ಧರ್ಮವನ್ನು ವಿರೋಧಿಸುತ್ತಿದ್ದರೂ ಆತನಿಗೆ ಅನ್ಯಾಯವೆಸಗುವಂತಿಲ್ಲ.

> "ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ ನ್ಯಾಯದ ಸಾಕ್ಷ್ಯ ವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ". (ಪವಿತ್ರ ಕುರ್‌ಆನ್ 5:8)

ಜಿಹಾದ್ ಹೆಸರಿನಲ್ಲಿ ಇಸ್ಲಾಮ್ ಸಾಮಾಜಿಕ ಪರಿವರ್ತನೆಗೆ, ಅಜ್ಞಾನವನ್ನು ಮೂಢ ನಂಬಿಕೆಗಳನ್ನು ಅಳಿಸಲು, ಬಡತನ ನಿರ್ಮೂಲನೆಗೆ, ಜನಾಂಗೀಯ ಭೇದ ಭಾವ ಅಳಿಸಲು ಹೋರಾಡಲು ಕರೆ ನೀಡುತ್ತದೆ. ಜಿಹಾದ್‌ನ ಮುಖ್ಯ ಧ್ಯೇಯೋದ್ದೇಶಗಳಲ್ಲಿ ಸಮಾಜದ ಅಲ್ಪ ಸಂಖ್ಯಾತರ ದುರ್ಬಲ ವರ್ಗದವರ ಹಕ್ಕುಗಳ ಸಂರಕ್ಷಣೆಯೂ ಸೇರಿದೆ.

ಯಾವುದೇ ರಾಷ್ಟ್ರ ಅಥವಾ ಜನಾಂಗದ ಮೇಲಿನ ದ್ವೇಷ, ಅವರ ಮೇಲೆ ಆಕ್ರಮಣ ಮಾಡಲು, ದೌರ್ಜನ್ಯವೆಸಗಲು, ಅವರ ಹಕ್ಕುಗಳನ್ನು ದಮನಿಸಲು ಕಾರಣವಾಗಬಾರದು ಎಂದು ಇಸ್ಲಾಮ್ ಆದೇಶಿಸುತ್ತದೆ.

ಅಬೂದರ್ ಗಿಫ್ಫಾರಿ ಪ್ರವಾದಿ ಮುಹಮ್ಮದ್ ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ.

ಅಲ್ಲಾಹ್ ನುಡಿದಿರುವನು "ಓ ನನ್ನ ದಾಸರೇ, ದೌರ್ಜನ್ಯವನ್ನು ನಾನು ನನ್ನ ಮೇಲೆ ನಿಷಿದ್ಧಗೊಳಿಸಿದ್ದೇನೆ ಮತ್ತು ನಿಮ್ಮ ಮೇಲೂ ನಿಷಿದ್ಧಗೊಳಿಸಿದ್ದೇನೆ. ಆದುದರಿಂದ ಒಬ್ಬರು ಇನ್ನೊಬ್ಬರ ಮೇಲೆ ದೌರ್ಜನ್ಯವೆಸಗದಿರಿ...'

## ದೌರ್ಜನ್ಯ ಮತ್ತು ಆಕ್ರಮಣದ ವಿರುದ್ಧ ಜಿಹಾದ್

ಅಂತಿಮವಾಗಿ ದೌರ್ಜನ್ಯ ಮತ್ತು ಆಕ್ರಮಣದ ವಿರುದ್ಧ ಜಿಹಾದ್ ಬಗ್ಗೆ ಕುರ್‌ಆನ್, ಈ ರೀತಿ ಆದೇಶಿಸುತ್ತದೆ:

> " ಓ ನಮ್ಮ ಪ್ರಭು, ಅಕ್ರಮಿಗಳು ವಾಸಿಸುವ ಈ ನಾಡಿನಿಂದ ನಮ್ಮನ್ನು ಹೊರತೆಗೆ, ನೀನು ನಿನ್ನ, ಕಡೆಯಿಂದ ನಮ್ಮಗೊಬ್ಬ ಮೇಲ್ವಿಚಾರಕವನ್ನು ಮತ್ತು ಒಬ್ಬ ಸಹಾಯಕನನ್ನು ನಿಯೋಜಿಸು

> ಎಂದು ಮೊರೆಯಿಡುತ್ತಿರುವ ಮರ್ದನಕ್ಕೊಳಗಾದ ಪುರುಷರು ಸ್ತ್ರೀಯರು ಮತ್ತು ಮಕ್ಕಳಿಗಾಗಿ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡದಿರಲು ಕಾರಣವೇನು? ಸತ್ಯ ವಿಶ್ವಾಸ ಕೈಕೊಂಡವರು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ." (ಪವಿತ್ರ ಕುರ್‌ಆನ್ 4:75)

ಓರ್ವ ನಿರಂಕುಶ ಪ್ರಭುವಿನ ಎದುರು ನಿಂತು ಸತ್ಯವನ್ನು ನುಡಿಯುವುದು ಅತ್ಯುನ್ನತ ಮಟ್ಟದ ಜಿಹಾದ್‌ವಾಗಿದೆ. ಕೆಡುಕಿನ ಕಾರ್ಯವನ್ನು ಮಾಡುವುದರಿಂದ ತನ್ನನ್ನು ತಾನು ತಡೆಯುವುದೂ ಅತ್ಯುನ್ನತ ಮಟ್ಟದ ಜಿಹಾದ್‌ನಲ್ಲಿ ಒಂದಾಗಿದೆ ಇಸ್ಲಾಮಿನ ವಿರುದ್ಧ ಅಥವಾ ಇಸ್ಲಾಮೀ ರಾಷ್ಟ್ರದ ವಿರುದ್ಧ ವೈರಿಯು ಆಕ್ರಮಣ ಮಾಡಿದರೆ ಆತನ ವಿರುದ್ಧ ಶಸ್ತ್ರಾಸ್ತ್ರಗಳೊಂದಿಗೆ ಹೋರಾಡುವುದೂ ಜಿಹಾದ್‌ವಾಗಿದೆ. ಆದರೆ ಆಕ್ರಮಣವಾದಾಗ ಜಿಹಾದ್‌ನ ಆಜ್ಞೆಯನ್ನು ಇಸ್ಲಾಮಿ ವಿದ್ವಾಂಸರ ಸಮಿತಿ ಅಥವಾ ಇಸ್ಲಾಮಿ ರಾಷ್ಟ್ರದ ನಾಯಕ ನೀಡಬೇಕು.

ಮೇಲೆ ನೀಡಿರುವ ವಿವರಣೆಗಳಿಂದ 'ಜಿಹಾದ್'ಗೆ ವಿಶಾಲಾರ್ಥವಿರುವುದು ಸುವ್ಯಕ್ತವಾಗುತ್ತದೆ. ಸಮಾಜದಲ್ಲಿ ದೌರ್ಜನ್ಯ ಉಂಟಾದಾಗ, ರಾಷ್ಟ್ರದ ಮೇಲೆ ಆಕ್ರಮಣವಾದಾಗ, ಕೆಲ, ಹಕ್ಕುಗಳ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳ ಮೂಲಕ ಹೋರಾಟ ಅವಶ್ಯವಾಗುತ್ತದೆ. ಇಸ್ಲಾಮಿನಲ್ಲಿ ಶಸ್ತ್ರಾಸ್ತ್ರಗಳ ಮೂಲಕ ಹೋರಾಟವು ಇಸ್ಲಾಮಿ ವ್ಯವಸ್ಥೆಯ ಅಂಗವಾಗಿದೆ.

ಎಲ್ಲಾ ರೀತಿಯ ಶಾಂತಿಯ ಪ್ರಯತ್ನಗಳೂ, ಮಾತುಕತೆಗಳು ವಿಫಲವಾದಾಗ ಮಾತ್ರ ಇಸ್ಲಾಮ್ ಯುದ್ಧಕ್ಕೆ ಅನುಮತಿಯನ್ನು ನೀಡುತ್ತದೆ. ಯುದ್ಧವು ಕೊನೆಯ ಮಾರ್ಗೋಪಾಯವಾಗಿದೆ. ಯುದ್ಧದ ಮೂಲಕ ಜಿಹಾದ್ ಅನ್ನು ಜನರನ್ನು ಮತಾಂತರಗೊಳಿಸಲು, ಇತರ ದೇಶಗಳ ಮೇಲೆ ಆಕ್ರಮಣ ಮಾಡಿ ಸ್ವಾಧೀನಪಡಿಸಿಕೊಳ್ಳಲು, ಸಂಪತ್ತನ್ನು ಕೊಳ್ಳೆ ಹೊಡೆಯಲು ಮಾಡಲಾಗುವುದಿಲ್ಲ. ಶಸ್ತ್ರಾಸ್ತ್ರಗಳ ಮೂಲಕ ಜಿಹಾದ್‌ಅನ್ನು ವ್ಯಕ್ತಿಯ ಪ್ರಾಣದ, ಸೊತ್ತು ವಿತ್ತದ, ಘನತೆಯ, ಸ್ವಾತಂತ್ರ್ಯದ ರಕ್ಷಣೆಗಾಗಿ, ಇತರರ ಮೇಲಿನ ದೌರ್ಜನ್ಯ ಮತ್ತು ಅನ್ಯಾಯವನ್ನು ತಡೆಯಲು ಕೈಗೊಳ್ಳಲಾಗುತ್ತದೆ.

ಇಸ್ಲಾಮಿ ಇತಿಹಾಸದ ಅಧ್ಯಯನ ನಡೆಸಿದವರಿಗೆ, ಇಸ್ಲಾಮಿ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಸೇರಿದ ರಾಷ್ಟ್ರಗಳೆಲ್ಲವೂ ದೌರ್ಜನ್ಯಕ್ಕೆ ತುತ್ತಾಗಿದ್ದುದು ಸ್ಪಷ್ಟವಾಗುತ್ತದೆ. ಇಸ್ಲಾಮೀ ಸೇನೆ ಈಜಿಪ್ಟ್, ಪರ್ಷಿಯಾ ಮತ್ತು ರೋಮನರ ಮೇಲೆ ಜಿಹಾದ್ ಘೋಷಿಸಿದಾಗ, ಈ ಸಾಮ್ರಾಜ್ಯಗಳ ಜನತೆ ಇಸ್ಲಾಮಿ ಸೇನೆಯನ್ನು ಎದುರಿಸಲಿಲ್ಲ.

ಜನರು ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸಿದರು. ಅವರ ಪಾಲಿಗೆ ಇಸ್ಲಾಮ್ ಶತಮಾನಗಳ ಶೋಷಣೆಗಳಿಂದ ವಿಮುಕ್ತಿಯಾಗಿತ್ತು!

ಇದು ಇಸ್ಲಾಮಿ ಜಿಹಾದ್ ನಡೆದು ಬಂದ ದಾರಿಯಾಗಿದೆ. ಇದನ್ನು ಪಾಶ್ಚಾತ್ಯ ರಾಷ್ಟ್ರಗಳ ಆಕ್ರಮಣದೊಂದಿಗೆ ಹೋಲಿಸಿದಾಗ, ಪಾಶ್ಚಾತ್ಯ ರಾಷ್ಟ್ರಗಳು ಎಸಗಿರುವ ದೌರ್ಜನ್ಯಗಳು, ಮಾರಣ ಹೋಮಗಳು ನಮಗೆ ಸ್ಪಷ್ಟವಾಗುತ್ತವೆ. ಇಂದಿಗೂ ಪಾಶ್ಚಾತ್ಯ ರಾಷ್ಟ್ರಗಳ, ಜಾಗತಿಕ ಶಾಂತಿ, ಸುರಕ್ಷತೆಯ ನೆಪವೊಡ್ಡಿ ಇತರ ದೇಶಗಳ ಮೇಲೆ ಆಕ್ರಮಣ ಮಾಡಿ ಅವುಗಳನ್ನು ಧ್ವಂಸ ಮಾಡುತ್ತಿವೆ.

ಈ ಜನರ ಕೃತ್ಯಗಳ ಬಗ್ಗೆ ಕುರ್‌ಆನ್ ಹೀಗೆ ಹೇಳುತ್ತದೆ.

> **"**ಭೂಮಿಯ ಮೇಲೆ ಕ್ಷೋಭೆಯನ್ನುಂಟು, ಮಾಡದಿರಿ ಎಂದು ಅವರೊಡನೆ ಹೇಳಿದಾಗಲೆಲ್ಲಾ ಅವರು, 'ನಾವು ಸುಧಾರಕರು ಮಾತ್ರ' ಎಂದು ಹೇಳುತ್ತಾರೆ. ಜಾಗ್ರತೆ! ವಾಸ್ತವದಲ್ಲಿ ಅವರೇ ಗೊಂದಲಕಾರಿಗಳು. ಆದರೆ ಅವರಿಗೆ ಬೋಧವಿರುವುದಿಲ್ಲ**"**.
> (ಪವಿತ್ರ ಕುರ್‌ಆನ್ 2:11–12)

## 21

# ಇಸ್ಲಾಮಿ ಯುದ್ಧದ ಕಲ್ಪನೆ

ಇಸ್ಲಾಮಿನ ಆಗಮನದ ಮೊದಲು ಯುದ್ಧಗಳೆಂದರೆ ಕೇವಲ ದೊಂಬಿ, ಲೂಟಿ, ದರೋಡೆಗಳಾಗಿರುತ್ತಿದ್ದವು. ಈ ಯುದ್ಧಗಳಲ್ಲಿ ಸೊತ್ತು, ವಿತ್ತಗಳನ್ನು, ತೋಟಗಳನ್ನು, ಮನೆ, ಮಠಗಳನ್ನು, ಇಡಿಯ ಹಳ್ಳಿ, ಪಟ್ಟಣಗಳನ್ನು ನಾಶಪಡಿಸಲಾಗುತ್ತಿತ್ತು. ಮಹಿಳೆಯರ ಮೇಲೆ ಅತ್ಯಾಚಾರ ನಡೆಸಲಾಗುತ್ತಿತ್ತು. ಮಕ್ಕಳು, ಸ್ತ್ರೀ, ಪುರುಷರು, ವಯೋವೃದ್ಧರ ಸಾಮೂಹಿಕ ಹತ್ಯೆ ನಡೆಯುತ್ತಿತ್ತು. ಯುದ್ಧದಲ್ಲಿ ಶತ್ರುಗಳ ಧಾರ್ಮಿಕ ಕೇಂದ್ರಗಳನ್ನು, ಆರಾಧನಾಲಯಗಳನ್ನು, ಐತಿಹಾಸಿಕ ವಸ್ತು, ಸ್ಮಾರಕಗಳನ್ನು ಧ್ವಂಸಗೊಳಿಸಲಾಗುತ್ತಿತ್ತು. ಆಗಿನ ಯುದ್ಧಗಳಿಗೆ ಯಾವುದೇ ನೈತಿಕ ಮೇರೆಗಳಿರಲಿಲ್ಲ.

ಇಸ್ಲಾಮಿ ಯುದ್ಧಗಳ ಸ್ವರೂಪ ಇದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಇಸ್ಲಾಮಿ ಯುದ್ಧಗಳನ್ನು ಮನುಷ್ಯರನ್ನು ದೌರ್ಜನ್ಯ, ದಬ್ಬಾಳಿಕೆಯಿಂದ ವಿಮೋಚನೆಗೊಳಿಸಲು ಮಾಡಲಾಗುತ್ತದೆ. ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯುದ್ಧದ ಕಲ್ಪನೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದರು.

ಪ್ರವಾದಿ ಯುದ್ಧದ ಸಂದರ್ಭದಲ್ಲಿ ಪಾಲಿಸಬೇಕಾದ ನೈತಿಕ ಮೇರೆಗಳ ಕಡೆಗೆ ಜನರ ಗಮನವನ್ನು ಸೆಳೆದರು. ಪ್ರಥಮವಾಗಿ, ಪ್ರವಾದಿ ಇಸ್ಲಾಮೀ ಯುದ್ಧದ ಕಲ್ಪನೆಯ ಬಗ್ಗೆ ವಿಶ್ಲೇಷಣೆ ನೀಡಿದರು.

## ಜಿಹಾದ್

### ಅಲ್ಲಾಹನ ಮಾರ್ಗದಲ್ಲಿ ಹೋರಾಟ

ಈ ನವೀನ ಇಸ್ಲಾಮಿ ಯುದ್ಧದ ಕಲ್ಪನೆಯು ಯುದ್ಧದ ನೈತಿಕ ಮೇರೆಗಳನ್ನು, ಉಭಯ ಪಕ್ಷಗಳ ಹಕ್ಕು – ಬಾಧ್ಯತೆಗಳನ್ನು, ಕಾದಾಳು ಮತ್ತು ಜನಸಾಮಾನ್ಯನ

ನಡುವೆ ವ್ಯತ್ಯಾಸವನ್ನು, ರಾಯಭಾರಿಗಳ ಹಕ್ಕುಗಳು, ಕೈದಿಗಳ ಹಕ್ಕುಗಳು, ಸೋತ ದೇಶದ ಜನರ ಹಕ್ಕುಗಳಿಗೆ ಸಂಬಂಧಿಸಿದಂತೆ ಸವಿಸ್ತಾರವಾದ ನಿಯಮಗಳನ್ನು ಹೊಂದಿದೆ. ಮುಸ್ಲಿಮನಿರಲಿ ಅಥವಾ ಮುಸ್ಲಿಮೇತರನಿರಲಿ, ಮನುಷ್ಯನ ಜೀವಕ್ಕೆ ಬಹಳ ಪ್ರಾಮುಖ್ಯತೆಯನ್ನು ಇಸ್ಲಾಮ್ ನೀಡುತ್ತದೆ.

ಇಸ್ಲಾಮ್ ಮಾನವನ ಜೀವನಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ನೀಡುತ್ತದೆಯೆಂದರೆ ಕುರ್‌ಆನ್ ಈ ರೀತಿ ಆದೇಶಿಸಿತು.

> "ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ."(ಪವಿತ್ರ ಕುರ್‌ಆನ್ 5:32)

ಕುರ್‌ಆನಿನ ಈ ಆದೇಶದ ಮೇರೆಗೆ, ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಯುದ್ಧಗಳನ್ನು ಸ್ವಾರ್ಥತೆ, ಸಾಮ್ರಾಜ್ಯವನ್ನು ವಿಸ್ತರಿಸುವ ಬಯಕೆ, ಇತರ ದೇಶಗಳನ್ನು ನಾಶಗೊಳಿಸುವ ಹಂಬಲ ಮೊದಲಾದವುಗಳಿಂದ ಮುಕ್ತಗೊಳಿಸಿದರು.

ಪ್ರತಿಯೋರ್ವ ಪ್ರವಾದಿ ಅವರ ಕಾಲದ, ಅವರ ಸಮಾಜದ ಬೇಡಿಕೆಗಳಿಗೆ ಅನುಗುಣವಾಗಿ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಿದ್ದರು. ಆದುದರಿಂದ ಓರ್ವ ಪ್ರವಾದಿಯ ಕಾರ್ಯಶೈಲಿಯನ್ನು ಮತ್ತೋರ್ವ ಪ್ರವಾದಿಯ ಕಾರ್ಯ ಶೈಲಿಯೊಂದಿಗೆ ತುಲನೆ ಮಾಡಲು ಬರುವುದಿಲ್ಲ.

ಕುರ್‌ಆನ್ ಇದನ್ನು ನಿಷೇಧಿಸಿದೆ. ಪ್ರವಾದಿ ಯೇಸುಕ್ರಿಸ್ತರು ಯಾವುದೇ ಯುದ್ಧಗಳನ್ನು ಮಾಡಿರಲಿಲ್ಲವೆಂಬುದು ನಿಜ. ಆದರೆ ಪ್ರವಾದಿ ಯೇಸು ಕ್ರಿಸ್ತರಿಗೆ ಯಾವುದೇ ಯುದ್ಧ ಮಾಡುವ ಅಗತ್ಯತೆವಿರಲಿಲ್ಲ. ನಾವು ಈ ಮೊದಲು ನೋಡಿರುವಂತೆ, ಪ್ರವಾದಿ ಮುಹಮ್ಮದ್‌ರಿಗೆ ಸ್ವರಕ್ಷಣೆಗಾಗಿ ಯುದ್ಧ ಮಾಡಬೇಕಾದ ಅನಿವಾರ್ಯತೆ ಉಂಟಾಗಿತ್ತು.

ಮುಹಮ್ಮದ್‌ರಿಗೆ ಪ್ರವಾದಿತ್ವ ಪ್ರಾಪ್ತವಾದಾಗ, ಅವರು ಇಸ್ಲಾಮಿನ ಸಂದೇಶವನ್ನು ಜನಸಾಮಾನ್ಯರಿಗೆ ನೀಡಲಾರಂಭಿಸಿದರು. ಆದರೆ ಕುರೈಶರು ಪ್ರವಾದಿರನ್ನು ವಿರೋಧಿಸಿದರು. ಮುಸ್ಲಿಮರ ಮೇಲೆ ನಿರಂತರ ಅನೇಕ ವರ್ಷಗಳವರೆಗೆ ದೌರ್ಜನ್ಯ ನಡೆಸಿದರು. ಅವರ ಸೊತ್ತು ವಿತ್ತಗಳನ್ನು ವಶಪಡಿಸಿಕೊಂಡು, ಮಕ್ಕಾ ಪಟ್ಟಣ ತ್ಯಜಿಸುವಂತೆ ನಿರ್ಬಂಧಿಸಿದರು. ಮುಸ್ಲಿಮರು ಮದೀನಾ ವಲಸೆ ಹೋದನಂತರವೂ

ಕುರೈಶರ ಕಿರುಕುಳ ತಪ್ಪಲಿಲ್ಲ. ಮುಸ್ಲಿಮರನ್ನು ಮದೀನಾದಿಂದ ಹೊರಹಾಕುವಂತೆ ಅಲ್ಲಿಯ ಜನರಿಗೆ ಎತ್ತಿ ಕಟ್ಟಿದ್ದರು. ಮದೀನಾದ ಸುತ್ತಮುತ್ತಲಿನ ಗೋತ್ರಗಳಿಗೆ ಮದೀನಾ ಮೇಲೆ ಆಕ್ರಮಣ ಮಾಡಲು ಪ್ರೇರೇಪಿಸಿದರು. ಪ್ರವಾದಿರಿಗೆ ಕುರೈಶರ ಈ ಕೃತ್ಯಗಳಿಗೆ ಪ್ರತಿರೋಧ ಮಾಡದೇ ಗತ್ಯಂತರವಿರಲಿಲ್ಲ.

ಕುರೈಶರು ಮುಹಮ್ಮದ್‌ರ ಹತ್ಯೆ ಮಾಡುವಂತೆಯೂ ತಿಳಿಸಿದ್ದರು. ಕುರೈಶರ ಆದೇಶದಂತೆ ನಡೆದುಕೊಳ್ಳದಿದ್ದಲ್ಲಿ, ಮದೀನಾದ ಜನರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳುವ ಬೆದರಿಕೆಯನ್ನು ಹಾಕಿದ್ದರು. ಕುರೈಶ್ ನಾಯಕರು ಅಬ್ದುಲ್ಲಾ ಬಿನ್ ಉಬೈ – ಕಪಟ ವಿಶ್ವಾಸಿಗಳ ನಾಯಕನಿಗೆ ಪತ್ರ ಬರೆದು

"ನೀವು ನಮ್ಮ ಆಕ್ರಮಿಗೆ ರಕ್ಷಣೆ ನೀಡಿದ್ದು, ನೀವು ಅವನನ್ನು ಮದೀನಾದಿಂದ ಹೊರಹಾಕಬೇಕು, ಅಥವಾ ಆತನನ್ನು ಕೊಲ್ಲಬೇಕು. ಈ ರೀತಿ ಮಾಡಿದದ್ದರೆ ಮುಹಮ್ಮದ್‌ರ ಜೊತೆಯಲ್ಲಿ ನಿಮ್ಮನ್ನು ವಧಿಸಲಾಗುವುದು" ಎಂದು ಎಚ್ಚರಿಸಿದರು. ಪ್ರವಾದಿರಿಗೆ ಒಂದೋ ಕುರೈಶರ ಪಿತೂರಿಗೆ ಗುರಿಯಾಗಿ ಪ್ರಾಣವನ್ನು ಕಳೆದುಕೊಳ್ಳಬೇಕಿತ್ತು, ಅಥವಾ ಪ್ರಾಣ ರಕ್ಷಣೆಗಾಗಿ ಕುರೈಶರೊಂದಿಗೆ ಹೋರಾಟ ನಡೆಸಬೇಕಿತ್ತು. ಪ್ರವಾದಿ ಎರಡನೆಯ ಮಾರ್ಗವನ್ನು ಅನುಸರಿಸಿದರು.

ಈ ರೀತಿ ಪ್ರವಾದಿರ ಮೇಲೆ ಯುದ್ಧವನ್ನು ಶತ್ರುಗಳು ಹೇರಿದ್ದರು. ಪ್ರವಾದಿರಿಗೆ ಯುದ್ಧದ ಬಯಕೆವಿರಲಿಲ್ಲ. ಆದುದರಿಂದ ಪ್ರವಾದಿ ಮಾಡಿದ ಯುದ್ಧಗಳನ್ನು ಇತಿಹಾಸದ ಹಿನ್ನೆಲೆಯಲ್ಲಿ ನೋಡಬೇಕಿದೆ. ಈ ಯುದ್ಧಗಳು ನಿಸ್ಸಂಶಯವಾಗಿ ಧಾರ್ಮಿಕ ಯುದ್ಧಗಳಾಗಿದ್ದವು. ಇಸ್ಲಾಮ್ ಧರ್ಮದ ರಕ್ಷಣೆಗಾಗಿ ಪ್ರವಾದಿರಿಗೆ, ಯುದ್ಧ ಮಾಡುವ ಅನಿವಾರ್ಯತೆವೊದಗಿತ್ತು. ಇಸ್ಲಾಮ್ ಧರ್ಮದ ಮೇಲೆ ನಿರಂತರ ಆಕ್ರಮಣಗಳು ನಡೆಯುತ್ತಿದ್ದವು.

ಒಂದು ಸಾಮ್ರಾಜ್ಯದ ಮೇಲೆ ಯುದ್ಧದ ಕರಿ ನೆರಳು ಆವರಿಸಿದ್ದರೆ, ಆ ಸಾಮ್ರಾಜ್ಯದ ನಾಯಕನು ಅದನ್ನು ಕಡೆಗಣಿಸಲು ಬರುತ್ತದೆಯೇ? ಮುಹಮ್ಮದ್‌ರಿಗೆ ಪ್ರವಾದಿಯೆಂಬ ನೆಲೆಯಲ್ಲಿ ಈ ರೀತಿ ವರ್ತಿಸಲು ಖಂಡಿತ ಆಸ್ಪದವಿರಲಿಲ್ಲ. ಮುಹಮ್ಮದ್ ಓರ್ವ ಪ್ರವಾದಿಯಾಗಿದ್ದು, ಪ್ರಳಯ ಕಾಲದವರೆಗೂ ಬರುವ ಪೀಳಿಗೆಗಳಿಗಾಗಿ ಅವರು ಮಾದರಿಯನ್ನು ನೀಡಬೇಕಾಗಿತ್ತು.

ಮುಹಮ್ಮದ್ ಒಂದು ನಿಯಮದಂತೆ ಯುದ್ಧವನ್ನು ಮಾಡಲಿಲ್ಲ. ಯುದ್ಧಗಳನ್ನು ಕಡೆಗಣಿಸಲೂ ಸಹ ಬರುವುದಿಲ್ಲ. ಓರ್ವ ಧಾರ್ಮಿಕ ನಾಯಕ ಓರ್ವ ಸುಧಾರಕನೆಂಬ ನೆಲೆಯಲ್ಲಿ ಯುದ್ಧದ ಕ್ರೌರ್ಯತೆಯನ್ನು ಕಡಿಮೆ ಮಾಡಬಹುದು. ಮುಹಮ್ಮದ್ ಅಲ್ಲಾಹನ ಆದೇಶದಂತೆ, ಮಾನವ ಪ್ರಾಣದ ಹರಣವನ್ನು ಕನಿಷ್ಠ ಗೊಳಿಸಲು, ಶಾಂತಿಯನ್ನು ಉತ್ತೇಜಿಸಲು, ಯುದ್ಧಕ್ಕೆ ಮಾನವೀಯತೆಯ ಸ್ಪರ್ಶ ನೀಡಲು ಯುದ್ಧ

ನಿಯಮಗಳನ್ನು ರೂಪಿಸಿದರು.

ಮುಹಮ್ಮದ್ ಅಲ್ಪ ಸೇನೆಯನ್ನು ಚಾಕಕತ್ಯೆಯಿಂದ ಉಪಯೋಗಿಸುವ ಮೂಲಕ ಬೃಹತ್ ಸೇನೆಗಳ ವಿರುದ್ಧ ವಿಜಯವನ್ನು ಸಾಧಿಸಿದರು.

7–8 ವರ್ಷಗಳ ಅವಧಿಯಲ್ಲಿ ಮುಹಮ್ಮದ್ ಶತ್ರುಗಳನ್ನು ಸಂಪೂರ್ಣವಾಗಿ ಸೋಲಿಸಿ, ಅವರ ನೆಲೆಯೇ ಇಲ್ಲದಂತೆ ಮಾಡಿದರು. ತಮ್ಮ ಜೀವಿತಾವಧಿಯಲ್ಲಿ ಮುಹಮ್ಮದ್ ಒಟ್ಟು 28 ಯುದ್ಧಗಳನ್ನು, 39 ಸೇನಾ ಕಾರ್ಯಾಚರಣೆಗಳನ್ನು ನಡೆಸಿದ್ದರು. ಈ ಸಂಘರ್ಷಗಳಲ್ಲಿ 255 ಮುಸ್ಲಿಮ್ ಸೈನಿಕರು ಹತರಾಗಿದ್ದರೆ, ಶತ್ರುಗಳ 759 ಸೈನಿಕರು ಕೊಲ್ಲಲ್ಪಟ್ಟಿದ್ದರು. 6564 ಖೈದಿಗಳು ಮುಸ್ಲಿಮರ ವಶಕ್ಕೆ ಬಂದಿದ್ದರು. ಅವರಲ್ಲಿ ಇಬ್ಬರನ್ನು ಹೊರತುಪಡಿಸಿ, ಉಳಿದವರನ್ನು ಬಿಡುಗಡೆಗೊಳಿಸಲಾಗಿತ್ತು. ಕೇವಲ ಇಷ್ಟು ಸೀಮಿತ ಅವಧಿಯಲ್ಲಿ, ಸೀಮಿತ ಯೋಧರ ಹತ್ಯೆಯ ನಂತರ, ಮುಹಮ್ಮದ್ ಇಡಿಯ ಅರೇಬಿಯಾ ಪ್ರದೇಶದಲ್ಲಿ ದಬ್ಬಾಳಿಕೆ, ದೌರ್ಜನ್ಯವನ್ನು ಕೊನೆಗೊಳಿಸಿ, ಶಾಂತಿ, ಸತ್ಯತೆ ನೆಲೆಸುವಂತೆ ಮಾಡಿದ್ದರು. ಕೆಡಕುಗಳ, ದೌರ್ಜನ್ಯದ, ಬರ್ಬರತೆಯ ಆಡಳಿತ ಕೊನೆಗೊಂಡು ಒಳಿತಿನ, ನ್ಯಾಯದ, ಆಡಳಿತ ಅಸ್ತಿತ್ವಕ್ಕೆ ಬಂದಿತು. ಅಲ್ಪಸೇನೆಯ ಸಹಾಯದಿಂದ ಗರಿಷ್ಠ ಪರಿಣಾಮಗಳನ್ನು ಪಡೆಯುವಂತೆ ಮಾಡಿದುದು ಪ್ರವಾದಿರ ಪವಾಡವೇ ಆಗಿದೆ!

ಖ್ಯಾತ ಇತಿಹಾಸಕಾರ ಎಚ್. ಲಾಮೆನ್ಸ್ H.Lammen ಈ ರೀತಿ ಹೇಳಿದ್ದಾರೆ :

“ಮಧ್ಯಕಾಲೀನ ಸಮಯದಲ್ಲಿ ಯುದ್ಧಗಳು ಸಹಸ್ರಾರು ಜನರನ್ನು ಬಲಿ ತೆಗೆದುಕೊಳ್ಳುತ್ತಿದ್ದಾಗ 1014ರ ಸಂಖ್ಯೆ ಪ್ರವಾದಿರ ಸಂಯಮ, ಕರುಣೆ ಮತ್ತು ಮನುಷ್ಯ ಜೀವದ ಬಗ್ಗೆ ಕಾಳಜಿಯನ್ನು ತೋರಿಸುತ್ತದೆ.”

ಈ ಕಾರಣದಿಂದ ಮುಹಮ್ಮದ್‌ರನ್ನು ಯೋಧನೆಂದು ಕರೆಯಲಾಗುವುದಿಲ್ಲ. ಅವರು ಪ್ರತಿಯೊಂದು ಜೀವವನ್ನು ಪವಿತ್ರವೆಂದು ಬಗೆದಿದ್ದರು. ನ್ಯಾಯದ ಕಾರಣಕ್ಕಾಗಿಯಲ್ಲದೇ, ರಕ್ತ ಹರಿಸುವುದನ್ನು ಅವರು ಇಷ್ಟ ಪಡುತ್ತಿರಲಿಲ್ಲ. ಅವರ ಜೀವನ ಶಾಂತಿಯ ಸಂಸ್ಥಾಪನೆಗಾಗಿ ಮುಡುಪಾಗಿತ್ತು.

ಮುಹಮ್ಮದ್ ತಂದಿರುವ ಕ್ರಾಂತಿಯನ್ನು ಕೇವಲ ಯುದ್ಧಗಳ ಮೂಲಕವೇ ತಂದ ಕ್ರಾಂತಿಗಳೊಂದಿಗೆ ತುಲನೆ ಮಾಡಿನೋಡಿ. ದೊಡ್ಡ ಯುದ್ಧಗಳು ವರ್ಷಾನುಗಟ್ಟಲೆ ನಡೆದವು. ಈ ಯುದ್ಧಗಳಲ್ಲಿ ಲಕ್ಷಗಟ್ಟಲೆ ಜನರು ಹತರಾದರು. ಈ ಕ್ರಾಂತಿಗಳಲ್ಲಿ ಹತರಾದ ಜನರ ಸಂಖ್ಯೆ ಬೃಹತ್ ಪ್ರಮಾಣದಲ್ಲಿದೆ.

ಹಿಂದೂ ಧಾರ್ಮಿಕ ಗ್ರಂಥಗಳ ಪ್ರಕಾರ ಯುದ್ಧವು ಕೊನೆಯ ಆಯ್ಕೆಯಾಗಿರುತ್ತದೆ. ಆದರೆ ಯುದ್ಧದ ಸಂದರ್ಭ ಬಂದಾಗ ಪ್ರತಿಯೋರ್ವ ಸೈನಿಕನು ಯುದ್ಧವನ್ನು

ಧಾರ್ಮಿಕ ಕರ್ತವ್ಯವೆಂದು ಬಗೆದು ಮಾಡಬೇಕು. ಕುರುಕ್ಷೇತ್ರದಲ್ಲಿ ಸುಮಾರು 40 ಲಕ್ಷ ಸೈನಿಕರು ಹತರಾದರೆಂದು ಹೇಳಲಾಗುತ್ತದೆ. ಈ ಯುದ್ಧವು 18 ದಿನಗಳವರೆಗೆ ನಡೆದಿತ್ತು. ಅಂದರೆ ದಿನಂಪ್ರತಿ ಸುಮಾರು ಎರಡು ಲಕ್ಷ 20 ಸಾವಿರ ಸೈನಿಕರು ಹತರಾಗಿದ್ದರು! ಆಗಿನ ಕಾಲದಲ್ಲಿ ಸಾಮೂಹಿಕ ಹತ್ಯೆಗೈಯುವ ಯುದ್ಧದ ಸಾಮಾಗ್ರಿಗಳೂ ಇರಲಿಲ್ಲ. ಕೇವಲ ಬಿಲ್ಲು, ಬಾಣ, ಖಡ್ಗ ಮೊದಲಾದ ಆಯುಧಗಳಿಂದ ಇಂತಹ ಬೃಹತ್ ಸಂಖ್ಯೆಯಲ್ಲಿ ಉಭಯ ಪಕ್ಷಗಳಲ್ಲಿ ಸೈನಿಕರು ಕೊಲ್ಲಲ್ಪಟ್ಟಿದ್ದರು.

# 20ನೆಯ ಶತಮಾನ

## ಅತ್ಯಂತ ಹಿಂಸಾತ್ಮಕ ಶತಮಾನ

ನೊಬಲ್ ಪ್ರಶಸ್ತಿ ವಿಜೇತ ವಿಲಿಯಮ್ ಗೋಲ್ಡಿಂಗ್ 20ನೇ ಶತಮಾನವನ್ನು **"**ಮಾನವ ಇತಿಹಾಸದಲ್ಲಿ ಅತ್ಯಂತ ಹಿಂಸಾತ್ಮಕ ಶತಮಾನ**"** ಎಂದು ನುಡಿದಿದ್ದಾರೆ.

ಮಾನವ ಇತಿಹಾಸದ ಉದ್ದಕ್ಕೂ ನಾವು ಯುದ್ಧಗಳ ಸರಮಾಲೆಯನ್ನು ಕಾಣುತ್ತೇವೆ. ಆದರೆ ಮಾನವ ಇತಿಹಾಸದಲ್ಲಿ 20ನೇಯ ಶತಮಾನದಷ್ಟು ಹಿಂಸಾತ್ಮಕ ಶತಮಾನ ಮತ್ತೊಂದು ಗತಿಸಿಲ್ಲ. ಈ ಶತಮಾನದಲ್ಲಿ ಎರಡು ಜಾಗತಿಕ ಯುದ್ಧಗಳು, ಅನೇಕ ಕ್ರಾಂತಿಗಳು ಮತ್ತು ಇತರ ಯುದ್ಧಗಳು ನಡೆದಿವೆ.

ಝಡ್. ಬ್ರೆಝಿಝಿನ್ಸಿ Z. Brzezinski ತಮ್ಮ ಗ್ರಂಥ **'**ಔಟ್ ಆಫ್ ಕಂಟ್ರೋಲ್: ಗ್ಲೋಬಲ್ ಟರ್‌ಮಾಯಿಲ್ ಆನ್‌ದ ಈವ್ ಆಫ್‌ದ ಟೊಂಬಿ ಫಸ್ಟ್ ಸೆಂಚುರಿ**'** "Out of control: Global Turmoil on the Eve of the Twenty first Century" ನಲ್ಲಿ 20ನೇ ಶತಮಾನದಲ್ಲಿ, ಯುದ್ಧಗಳ, ನರಮೇಧ, ಜನರ ವಲಸೆ ಹೋಗುವಿಕೆ, ಮನುಷ್ಯ ಸೃಷ್ಟಿಸಿದ ದುರಂತ ಮೊದಲಾದ ಕಾರಣಗಳಿದಂದಾಗಿ ಸುಮಾರು 18 ಕೋಟಿ 70 ಲಕ್ಷ ಜನರು ಸಾವನ್ನಪ್ಪಿದ್ದಾರೆ ಎಂದು ಬರೆದಿದ್ದಾರೆ ಲಾರ್ಡ್ ಮಾರ್ಟಿನ್ ರೀಸ್, 'ಬ್ರಿಟೀಷ್ ರಾಯಲ್ ಸೊಸೈಟಿ**'** ಯ ಅಧ್ಯಕ್ಷರು ತಮ್ಮ ವೈಚಾರಿಕ ಗ್ರಂಥ **"**ಅವರ್ ಫೈನಲ್ ಸೆಂಚುರಿ? ವಿಲ್ ದ ಹ್ಯೂಮನ್ ರೇಸ್ ಸರ್ವೈಕವ್ ದ 21 ಸೆಂಚುರಿ**"** "Our final century? Will the human race survive the 21st century" ನಲ್ಲಿ,

**"**ಮಾನವ ಕುಲ ಇತಿಹಾಸದಲ್ಲಿ ಪ್ರಥಮ ಬಾರಿ ಇಡಿಯ ಮಾನವ ಜನಾಂಗವನ್ನೇ ನಾಶಪಡಿಸಲು ಸಾಧ್ಯವಾಗುವಂತಹ ಸಾಮರ್ಥ್ಯವನ್ನು ಹೊಂದಿದ್ದು, ಮಾನವ ಜನಾಂಗ

ಶಾಶ್ವತವಾಗಿ ಹಿನ್ನಡೆ ಅನುಭವಿಸಬೇಕಾಗುತ್ತದೆ" ಎಂದಿರುವರು.

ಅಣ್ವಸ್ತ್ರಗಳು, ರಸಾಯನಿಕ ಮತ್ತು ಜೈವಿಕ ಅಸ್ತ್ರಗಳನ್ನು ಯಾವುದೇ ನಿಯಂತ್ರಣವಿಲ್ಲದೇ ತಯಾರಿಸಲಾಗುತ್ತಿದೆ. ಅಮೇರಿಕಾ ದೇಶವೊಂದೇ ಜಾಗತಿಕ ಶಸ್ತ್ರಾಸ್ತ್ರ ಬೇಡಿಕೆಯ 60% ಭಾಗವನ್ನು ಸರಬರಾಜು ಮಾಡುತ್ತಿದೆ. ಅಮೇರಿಕಾದ ಮಾಜಿ ಅಧ್ಯಕ್ಷರಾದ ಜಿಮ್ಮಿ ಕಾರ್ಟರ್‌ರವರು ಮೇ 2008ರಲ್ಲಿ ಅಮೇರಿಕ 12,000 ಕ್ಕಿಂತಲೂ ಹೆಚ್ಚಿನ ಅಣ್ವಸ್ತ್ರಗಳನ್ನು ಹೊಂದಿದೆ ಎಂದು ಹೇಳಿದ್ದು. ರಷ್ಯಾ ದೇಶವೂ ಸರಿಸುಮಾರು ಅಷ್ಟೇ ಅಣ್ವಸ್ತ್ರಗಳನ್ನು ಹೊಂದಿದೆ. ಬ್ರಿಟನ್ ಮತ್ತು ಫ್ರಾನ್ಸ್ ನೂರಾರು ಅಣ್ವಸ್ತ್ರಗಳನ್ನು ಹೊಂದಿವೆ. ಇಸ್ರೇಲ್ ದೇಶವು 150 ಅಣ್ವಸ್ತ್ರಗಳನ್ನು ಹೊಂದಿದೆ ಎಂದು ಜಿಮ್ಮಿ ಕಾರ್ಟರ್ ಹೇಳಿದ್ದರು. ಆದರೆ ಇಸ್ರೇಲ್ ದೇಶವು ತನ್ನ ಬಳಿ ಅಣ್ವಸ್ತ್ರಗಳಿವೆ ಎಂದು ಹೇಳಿಕೊಂಡಿಲ್ಲ. ಅಮೇರಿಕ, ಇತರ ದೇಶಗಳ ಬಳಿ ಇರುವ ಅಣ್ವಸ್ತ್ರಗಳ ಬಗ್ಗೆ, ಇತರ ದೇಶಗಳ ಅಣ್ವಸ್ತ್ರಗಳನ್ನು ಹೊಂದುವ ಬಯಕೆಯ ಬಗ್ಗೆ ಪ್ರಲಾಪ ಮಾಡುತ್ತದೆ. ಆದರೆ ತನ್ನ ಬಳಿ ರಾಶಿ, ರಾಶಿ ಇರುವ ಅಣ್ವಸ್ತ್ರಗಳ ಬಗ್ಗೆ ಚಕಾರವೆತ್ತುವುದಿಲ್ಲ.

- ಪ್ರಥಮ ಜಾಗತಿಕ ಯುದ್ಧದಲ್ಲಿ ಒಂದು ಕೋಟಿ ಜನರು ಹತರಾದರು, 2 ಕೋಟಿ 10 ಲಕ್ಷ ಜನರು ಗಾಯಗೊಂಡರು ಮತ್ತು ಎಪ್ಪತ್ತೇಳು ಲಕ್ಷ ಜನರು ಕಾಣೆಯಾದರು ಅಥವಾ ಬಂಧಿಸಲ್ಪಟ್ಟರು.

- ಎರಡನೇ ಜಾಗತಿಕ ಯುದ್ಧದಲ್ಲಿ 1 ಕೋಟಿ ಜನರು ಹತರಾದರು ಮತ್ತು ಇದಕ್ಕಿಂತ ಹೆಚ್ಚಿನ ಜನರು ಗಾಯಗೊಂಡರು. ಅನೇಕರು ನಿರಾಶ್ರಿತ ಜೀವನ ನಡೆಸಬೇಕಾಯಿತು.

- ಎರಡನೇ ಜಾಗತಿಕ ಯುದ್ಧದ ಅಂತಿಮ ಹಂತದಲ್ಲಿ ಅಮೇರಿಕ ದೇಶವು ಜಪಾನಿನ ಹಿರೋಶಿಮ ಮತ್ತು ನಾಗಸಾಕಿ ಪಟ್ಟಣಗಳ ಮೇಲೆ ಅಣು ಅಸ್ತ್ರಗಳನ್ನು ಪ್ರಯೋಗಿಸಿತು. ಇದರಲ್ಲಿ ಎರಡು ಲಕ್ಷ ನಿರಪರಾಧಿ ಜನರು ಹತರಾದರು.

- ರಷ್ಯಾದ ಕ್ರಾಂತಿಯಲ್ಲಿ 13 ಲಕ್ಷ ಜನರು ಕೊಲ್ಲಲ್ಪಟ್ಟರು.

- ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ 2 ಲಕ್ಷ 40 ಸಾವಿರ ಜನರು ಹತರಾದರು.

- ಚೀನಾದ ಕ್ರಾಂತಿಯಲ್ಲಿ 14–20 ಲಕ್ಷ ಜನರು ಹತ್ಯೆಗೀಡಾದರು.

- ಇಟಲಿಯ ಮುಸ್ಸಲೋನಿ ಉತ್ತರ ಆಫ್ರಿಕಾದ ಮುಸ್ಲಿಮ್ ದೇಶಗಳಾದ ಅಲ್ಜಿರಿಯಾ, ಟುನೀಷಿಯಾ, ಲಿಬಿಯಾ ದೇಶಗಳ ಮೇಲೆ ಆಕ್ರಮಣ ಮಾಡಿ ನಾಲ್ಕು ಲಕ್ಷಗಳಿಗಿಂತ ಹೆಚ್ಚಿನ ಮುಸ್ಲಿಮರನ್ನು ಕೊಂದನು.

- ರಷ್ಯಾದ ಅಂತರ್ಯುದ್ಧದಲ್ಲಿ ಸೋವಿಯತ್ ನಾಯಕ ಸ್ಟಾಲಿನ್ ಎರಡು

ಕೋಟಿ ಜನರನ್ನು ಹತ್ಯೆ ಮಾಡಿದನು. ಇದರಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರು.

- ಹಿಟ್ಲರ್ ಒಂದು ಕೋಟಿ ಜನರ ಹತ್ಯೆಗೆ ಕಾರಣನಾಗಿದ್ದನು. ಎರಡನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ 60 ಲಕ್ಷ ಯಹೂದಿಯರು ಹತರಾಗಿದ್ದರು ಎಂದು ಅಂದಾಜಿಸಲಾಗಿದೆ.

- ಬೋಸ್ನಿಯ ಹರ್ಝೆಗೋವಿನ ಯುದ್ಧದಲ್ಲಿ ಎರಡು ಲಕ್ಷ ನಿರಪರಾಧಿ ಮುಸ್ಲಿಮರು ಕೊಲ್ಲಲ್ಪಟ್ಟರು. ಭಯೋತ್ಪಾದನೆಯ ವಿರುದ್ಧ ಯುದ್ಧದ ಹೆಸರಿನಲ್ಲಿ ಮತ್ತು ವಿವಿಧ ಹಿತಾಸಕ್ತಿಗಳಿಗಾಗಿ ಯುದ್ಧಗಳು ನಡೆಯುತ್ತಲೇ ಇವೆ.

## ತುಲನೆ

ಈ ಹಿಂದೆ ತಿಳಿಸಿರುವಂತೆ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಎರಡೂ ಪಕ್ಷಗಳು ಸೇರಿ ಮೃತ ಪಟ್ಟ ಸೈನಿಕರ ಸಂಖ್ಯೆ 1014 ವಾಗಿತ್ತು. ಯುದ್ಧದಲ್ಲಿ ಪಾಲುಗೊಂಡ ಸೈನಿಕರಿಗೆ ಹತರಾದವರ ಸಂಖ್ಯೆಯನ್ನು ತುಲನೆ ಮಾಡಿದರೆ 1.5% ವಾಗುತ್ತದೆ. ಈ ಯುದ್ಧಗಳಲ್ಲಿ, ಹೆಚ್ಚಿನ ವೇಳೆ ಪ್ರವಾದಿ ವಿಜಯಿಗಳಾಗಿದ್ದರು ಎಂಬುದನ್ನು ಪರಿಗಣಿಸಿದರೆ ಪ್ರವಾದಿರನ್ನು ಕ್ರೂರಿ, ಕರುಣೆ, ಮಾನವೀಯತೆವಿಲ್ಲದ ದಂಡನಾಯಕರೊಂದಿಗೆ ಶಾಮೀಲುಗೊಳಿಸಲು ಸಾಧ್ಯವಿಲ್ಲವೆಂಬುದನ್ನು ಮನಗಾಣಬೇಕು.

ಪ್ರವಾದಿ ನಡೆಸಿದ ಯುದ್ಧಗಳಲ್ಲಿ ಮೃತ ಪಟ್ಟಿದವರ ಸಂಖ್ಯೆಯನ್ನು ಇತರ ಯುದ್ಧಗಳಲ್ಲಿ ಮೃತ ಪಟ್ಟವರ ಸಂಖ್ಯೆಯೊಂದಿಗೆ ತುಲನೆ ಮಾಡಿ ನೋಡಿ. ಎರಡನೆ ಜಾಗತಿಕ ಯುದ್ಧವೊಂದರಲ್ಲೇ, ಯುದ್ಧದಲ್ಲಿ ಪಾಲುಗೊಂಡ ಸೈನಿಕರಿಗೆ, ಹತರಾದವರ ಸಂಖ್ಯೆಯನ್ನು ತುಲನೆ ಮಾಡಿದರೆ 571% ವಾಗುತ್ತದೆ. ಅಂದರೆ ಯುದ್ಧದಲ್ಲಿ ಪಾಲುಗೊಂಡವರ ಸಂಖ್ಯೆ ಒಂದು ಕೋಟಿ ಆರು ಲಕ್ಷದಷ್ಟಿದ್ದರೂ, ಯುದ್ಧದಿಂದಾಗಿ ಹತ್ಯೆಯಾದವರ ಸಂಖ್ಯೆ, ಐದು ಕೋಟಿ ನಲವತ್ತೆಂಟು ಲಕ್ಷ ಆಗಿತ್ತು.

ಇಸ್ಲಾಮಿನ ಶತ್ರುಗಳು ಮತ್ತು ಪೂರ್ವಗ್ರಹ ಪೀಡಿತ ಜನರು ಮುಹಮ್ಮದ್‌ರನ್ನು ಯುದ್ಧ ಪ್ರೇಮಿ ಮತ್ತು ರಕ್ತದಾಹಿ ಎಂಬಂತೆ ಬಿಂಬಿಸ ಬಯಸುತ್ತಾರೆ. ಯುದ್ಧ ಮಾಡುವುದೇ ಅವರ ಮುಖ್ಯ ಕಾಯಕವಾಗಿತ್ತು ಎಂಬಂತೆ ಚಿತ್ರಿಸುತ್ತಾರೆ. ಮುಹಮ್ಮದ್ ಮದೀನಾದಲ್ಲಿ ಕಳೆದ 10 ವರ್ಷಗಳಲ್ಲಿ ಕೇವಲ 795 ದಿನಗಳನ್ನು ಯುದ್ಧಗಳಲ್ಲಿ, ಸೇನಾ ಕಾರ್ಯಾಚರಣೆಗಳಲ್ಲಿ ಕಳೆದಿದ್ದರು. ಉಳಿದ ದಿನಗಳನ್ನು ಅನಾಗರಿಕ ಜನರ ತರಬೇತಿಯಲ್ಲಿ ವ್ಯಯಿಸಿದ್ದರು.

ಈ ಐತಿಹಾಸಿಕ ಸತ್ಯವನ್ನು ಪೂರ್ವಗ್ರಹ ಪೀಡಿತ ಜೀವನ ಚರಿತ್ರೆಕಾರರು,

ಕಡೆಗಣಿಸುತ್ತಾರೆ.

ಮುಸ್ಲಿಮರನ್ನು ಮೂಲಭೂತವಾದಿಗಳು ಮತ್ತು ಭಯೋತ್ಪಾದಕರೆಂದು ಕೆಲ ಪೂರ್ವಗ್ರಹ ಪೀಡಿತರು ಕರೆಯುತ್ತಾರೆ. ಪ್ರವಾದಿ ಶತ್ರುಗಳಿಗೆ ಕೇವಲ ಎರಡು ಆಯ್ಕೆಗಳು – ಒಂದು ಖಡ್ಗ ಮತ್ತೊಂದು ಕುರ್‌ಆನ್ ನೀಡುತ್ತಿದ್ದರೆಂದು ಹೇಳಲಾಗುತ್ತದೆ.

ಪ್ರಖ್ಯಾತ ಇತಿಹಾಸಕಾರ ಸರ್ ಥಾಮಸ್ ಅರ್ನಾಲ್ಡ್ ತಮ್ಮ ಗ್ರಂಥ "ದ ಪ್ರೀಚಿಂಗ್ ಆಫ್ ಇಸ್ಲಾಮ್" ನಲ್ಲಿ "ಇಸ್ಲಾಮ್ ಖಡ್ಗದಿಂದಲ್ಲ, ಕುರ್‌ಆನಿನ ಬೋಧನೆಗಳು ಮತ್ತು ಮುಹಮ್ಮದ್‌ರ ನಡವಳಿಕೆಯ ಕಾರಣದಿಂದ ಹರಡಿತು" ಎಂದು ತಿಳಿಸಿದ್ದಾರೆ.

ಜಗತ್ತಿನಲ್ಲಿ ಮುಹಮ್ಮದ್‌ರಂತೆ ಯಾವನಾದರೂ ದಂಡನಾಯಕನು ಯುದ್ಧದಲ್ಲಿ ಔದಾರ್ಯದಿಂದ ವರ್ತಿಸಿದ್ದಾನೆಯೇ?

ಯುದ್ಧದಲ್ಲಿ ವಿಜಯ ಸಾಧಿಸಿದ ನಂತರ ಯಾರಾದರೂ ಕರುಣೆಯನ್ನು, ಕ್ಷಮೆಯನ್ನು ತೋರಿದ್ದಾರೆಯೇ? ಯಾರಾದರೂ ಕನಿಷ್ಠ ಪ್ರಾಣ ಹಾನಿಯ ನಂತರ ಗರಿಷ್ಠ ಯಶಸ್ಸನ್ನು ಸಾಧಿಸಿದ್ದಾರೆಯೇ?

"ಮುಹಮ್ಮದ್ ರಂತೆ ಅಲ್ಪ ಕಾಲದಲ್ಲಿ ವಿಶಾಲ ಪ್ರದೇಶದಲ್ಲಿ ಶಾಂತಿಯನ್ನು, ಸುವ್ಯವಸ್ಥೆಯನ್ನು ಸ್ಥಾಪಿಸಿದ್ದಾರೆಯೇ? ಯಾವನಾದರೂ ದಂಡನಾಯಕನು ಮುಹಮ್ಮದ್‌ರಂತೆ ಅನುಸರಣೆಗೆ ಅರ್ಹವಾದ ಪರಂಪರೆಯನ್ನು ಬಿಟ್ಟಿದ್ದಾನೆಯೇ?"

ಪ್ರವಾದಿ ಮುಹಮ್ಮದ್‌ರನ್ನು ಸೀಮಿತ ಅರ್ಥದಲ್ಲಿ ಕೇವಲ ಧರ್ಮ ಸಂಸ್ಥಾಪಕರು ಎಂದು ಕರೆಯುವುದು ದುಃಖದ ವಿಷಯವಾಗಿದೆ. ಜೀವನದ ಎಲ್ಲಾ ರಂಗಗಳಲ್ಲಿ ಅವರ ಪ್ರಭಾವವನ್ನು ಕಡೆಗಣಿಸಲಾಗಿದೆ. ಅವರು ಮಾನವ ಲೋಕಕ್ಕೆ ಅನೇಕ ಶಾಶ್ವತ ಕೊಡುಗೆಗಳನ್ನು ನೀಡಿದ್ದು, ಇಡಿಯ ಮಾನವ ಲೋಕಕ್ಕೆ ಅನುಗ್ರಹವಾಗಿದ್ದರು ಎಂಬುದನ್ನು ಜ್ಞಾಪಿಸಬೇಕು. ಪ್ರವಾದಿರ ಕೊಡುಗೆಗಳನ್ನು ಕಂಡುಕೊಳ್ಳುವ ಮೂಲಕ, ಅದನ್ನು ಜಗತ್ತಿಗೆ ಪರಿಚಯಿಸುವ ಮೂಲಕ ನಾವು ಅವರಿಗೆ ಸಂದಬೇಕಾದ ಕೃತಜ್ಞತೆಯನ್ನು ಸಲ್ಲಿಸಬಹುದು.

ಅಮೇರಿಕಾದ ಖ್ಯಾತ ಲೇಖಕ, ಇತಿಹಾಸಕಾರ ಮತ್ತು ಜೀವನ ವೃತ್ತಾಂತಕಾರ ವಾಷಿಂಗ್‌ಟನ್ ಇರ್ವಿಂಗ್, ತಮ್ಮ ಪುಸ್ತಕ "ಲೈಫ್ ಆಫ್ ಮಹೋಮೆಟ್" ನಲ್ಲಿ "ಸ್ವಾರ್ಥ ಉದ್ದೇಶಕ್ಕಾಗಿ ಯುದ್ಧಗಳನ್ನು ನಡೆಸಿದ್ದರೆ ಕಂಡು ಬರುತ್ತಿದ್ದ ಅಹಂಕಾರ ಮತ್ತು ಒಣ ಪ್ರತಿಷ್ಠೆಗಳು ಮುಹಮ್ಮದ್‌ರ ಯುದ್ಧಗಳಲ್ಲಿ ಕಂಡು ಬರಲಿಲ್ಲ. ಅವರು ಅಧಿಕಾರದ ಅತ್ಯುನ್ನತ ಅವಧಿಯಲ್ಲೂ ಅಧಿಕಾರವಿಲ್ಲದಾಗಿನ ಅದೇ ಸರಳತೆ ಮತ್ತು ನಡವಳಿಕೆಯನ್ನು ತೋರ್ಪಡಿಸಿದ್ದರು" ಎಂದಿದ್ದಾರೆ.

ಅಮೇರಿಕಾದ ಪ್ರಖ್ಯಾತ ಇತಿಹಾಸಕಾರ 'ಎಚ್. ಲ್ಯಾಮೆನ್ಸ್' H.Lammens ಹೇಳುತ್ತಾರೆ.

"ಮಕ್ಕಾದ ವಿಜಯದ ಸಂದರ್ಭದಲ್ಲಿ ಮುಹಮ್ಮದ್, ಅಧಿಕಾರದ, ಶಕ್ತಿಯ ಉತ್ತುಂಗತೆಯಲ್ಲಿದ್ದರೂ, ಸರಳತೆಯಿಂದ ನಡೆದುಕೊಂಡಿದ್ದರು. ಮಕ್ಕಾ ಮತ್ತು ಅದರ ಜನತೆ ಅವರ ಪಾದದಡಿಯಲ್ಲಿದ್ದರು. ಕುರೈಶರು ಒಬ್ಬೊಬ್ಬರಾಗಿ ಬಂದು ಅಭಯವನ್ನು, ರಕ್ಷಣೆಯನ್ನು ಬೇಡುತ್ತಿದ್ದರು. ಈ ಸಂದರ್ಭದಲ್ಲಿ ಓರ್ವ ವಯೋವೃದ್ಧ ಕಂಪಿಸುತ್ತಾ ಪ್ರವಾದಿರ ಬಳಿ ಬಂದನು.

ಅವನನ್ನು ಉದ್ದೇಶಿಸಿ ಪ್ರವಾದಿ ನುಡಿದರು:

> "ಹೆದರಬೇಡ. ನಾನು ರಾಜನಲ್ಲ. ನಿನ್ನಂತೆಯೇ ಸಾಮಾನ್ಯ ಮನುಷ್ಯ. ನೀನು ತಿನ್ನುವ ವಸ್ತುಗಳನ್ನೇ ನಾನೂ ತಿನ್ನುತ್ತೇನೆ. ನಿನ್ನ ಮೇಲೆ ಪ್ರಕಾಶ ಬೀರುವ ಸೂರ್ಯನೇ, ನನ್ನ ಮೇಲೂ ಪ್ರಕಾಶ ಬೀರುವುದು".

ಪ್ರವಾದಿ ನಿಧನ ಹೊಂದಿದಾಗ, 30 ಲಕ್ಷ ಚದರ ಮೈಲಿ ಪ್ರದೇಶದ ಆಡಳಿತಗಾರರಾಗಿದ್ದರು. ಮದೀನಾದಲ್ಲಿ ಹತ್ತು ವರ್ಷಗಳವರೆಗೆ ಅವರು ಜೀವಿಸಿದ್ದು ಪ್ರತಿನಿತ್ಯ 845 ಚದರ ಮೈಲು ಭೂಪ್ರದೇಶ ಇಸ್ಲಾಮಿ ಸಾಮ್ರಾಜ್ಯದ ಅಡಿಯಲ್ಲಿ ಬರುತ್ತಿತ್ತು. ಅಧಿಕಾರದ ಉತ್ತುಂಗತೆಯಲ್ಲಿ ಪ್ರವಾದಿ ನಿಧನ ಹೊಂದಿದಾಗ, ಅವರ ಕೊಠಡಿಯಲ್ಲಿ ಚಿಮಣಿ ಉರಿಸಲು ಎಣ್ಣೆಯೂ ಇರಲಿಲ್ಲ !

22

# ಪ್ರವಾದಿರ ಮುಹಮ್ಮದ್‌ರ ವಿವಾಹಗಳು

# ಏಕಪತ್ನಿತ್ವ ಮತ್ತು ಬಹುಪತ್ನಿತ್ವ

ಬಹುಪತ್ನಿತ್ವವೆಂದರೆ ಒಂದಕ್ಕಿಂತ ಹೆಚ್ಚಿನ ಪತ್ನಿಯರನ್ನು ಹೊಂದುವುದು. ಒಂದು ಪತ್ನಿಯನ್ನು ಹೊಂದಿದ್ದರೆ, ಇದಕ್ಕೆ ಏಕ ಪತ್ನಿತ್ವವೆನ್ನುತ್ತಾರೆ.

## ಪಾಶ್ಚಾತ್ಯರ ಟೀಕೆ

ಪಾಶ್ಚಾತ್ಯ ಲೇಖಕರು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಮೇಲೆ ಅವರ ವಿವಾಹಗಳಿಗೆ ಸಂಬಂಧಿಸಿದಂತೆ ಟೀಕೆ ಮಾಡುತ್ತಾರೆ. ಆದರೆ ಪ್ರವಾದಿರ ವಿವಾಹಗಳ ಕುರಿತು ಸತ್ಯಾಸತ್ಯತೆಯನ್ನು ಅರಿಯುವ ಗೋಜಿಗೆ ಅವರು ಹೋಗುವುದಿಲ್ಲ. ಪ್ರವಾದಿರ ಬಹು ವಿವಾಹಗಳಿಗಿದ್ದ ಐತಿಹಾಸಿಕ ಕಾರಣಗಳು, ಈ ವಿವಾಹಗಳ ಹಿಂದೆ ಪ್ರವಾದಿರ ಉದ್ದೇಶ, ಸಂದರ್ಭ ಮೊದಲಾದವುಗಳನ್ನು ಪರಿಶೀಲಿಸದೇ ಅವರು ಪ್ರವಾದಿರ ವ್ಯಕ್ತಿತ್ವದ ಬಗ್ಗೆ ಟೀಕಾಸ್ತ್ರಗಳನ್ನು ಪ್ರಯೋಗಿಸುತ್ತಾರೆ.

ಪ್ರವಾದಿರನ್ನು ಹೀಯಾಳಿಸುವವರ ಪಟ್ಟಿಯು ದೀರ್ಘವಾಗಿದೆ. ಪಾಶ್ಚಾತ್ಯ ದೇಶಗಳ ಕೆಲ ಹೆಸರಾಂತ ವ್ಯಕ್ತಿಗಳು ಈ ಪಟ್ಟಿಯಲ್ಲಿದ್ದಾರೆ. ಆದರೆ ಪ್ರವಾದಿ ಮತ್ತು ಇಸ್ಲಾಮ್ ಧರ್ಮ ಇವರ ಆಕ್ರಮಣವನ್ನು ಅಸಫಲಗೊಳಿಸುವಲ್ಲಿ ಯಶಸ್ವಿಯಾಗಿದೆ. ಕಳೆದ 1426 ವರ್ಷಗಳಲ್ಲಿ ಇತರ ಧರ್ಮಗಳಿಗಿಂತ, ಇಸ್ಲಾಮಿನೆಡೆಗೆ ಹೆಚ್ಚು ಜನರು ಆಕರ್ಷಿತರಾಗಿದ್ದಾರೆ. ಇಸ್ಲಾಮ್ ಒತ್ತಡಕ್ಕೆ ಒಳಗಾದಷ್ಟು, ಹೆಚ್ಚು ಶಕ್ತಿಯುತವಾಗಿ ಹೊರಹೊಮ್ಮಿದೆ.

ಏಕಪತ್ನಿತ್ವದ ವಾದ ತೀರ ಇತ್ತೀಚಿನದುದಾಗಿದೆ. ಮಧ್ಯಕಾಲೀನ ಸಮಯದಲ್ಲಿ

ಬಹುಪತ್ನಿತ್ವವು ಜಗತ್ತಿನಾದ್ಯಂತ ಸರ್ವೇ ಸಾಮಾನ್ಯವಾಗಿತ್ತು. ಜನರು ಪ್ರತಿಷ್ಠೆಯ ಪ್ರತೀಕವಾಗಿ ಹೆಚ್ಚು ಹೆಚ್ಚು ಸಂಖ್ಯೆಯ ಮಹಿಳೆಯರನ್ನು ವಿವಾಹವಾಗುತ್ತಿದ್ದರು. ಏಸುಕ್ರಿಸ್ತರನ್ನು ಹೊರತು ಪಡಿಸಿದರೆ, ಹೆಚ್ಚಿನ ಪ್ರವಾದಿಗಳು ಬಹು ಪತ್ನಿಯರನ್ನು ಹೊಂದಿದ್ದರು.

ಸಂತರು, ಋಷಿ–ಮುನಿಗಳು ಸಹಾ ಉಪಪತ್ನಿಯರನ್ನು ಇಟ್ಟುಕೊಂಡಿದ್ದರು. ಅರೇಬಿಯಾದಲ್ಲಿ ಮಹಿಳೆಯರನ್ನು ಬಹಳ ಕಡೆಯದಾಗಿ ನಡೆದುಕೊಳ್ಳಲಾಗುತ್ತಿತ್ತು. ನೆಪಮಾತ್ರಕ್ಕೆ ವಿವಾಹಗಳನ್ನು ಏರ್ಪಡಿಸಲಾಗುತ್ತಿತ್ತು. ವಿವಾಹ ವಿಚ್ಛೇದನಗಳು ಸರ್ವೇ ಸಾಮಾನ್ಯವಾಗಿದ್ದವು.

ಪಾಶ್ಚಾತ್ಯ ಸಮಾಜದಲ್ಲಿ ಲೈಂಗಿಕ ಅರಾಜಕತೆ ರಾರಾಜಿಸುತ್ತಿದೆ. ಇಂದಿಗೂ ಬಹುತೇಕ ದೇಶಗಳ ಮುಸ್ಲಿಮೇತರರಲ್ಲಿ ಬಹು ಪತ್ನಿತ್ವವು ವಿವಿಧ ರೂಪದಲ್ಲಿ ಆಚರಿಸಲ್ಪಡುತ್ತಿದೆ. ಕೆಲ ಸಂಬಂಧಗಳು ಕಾನೂನು ಬದ್ಧವಾಗಿದ್ದರೆ, ಇನ್ನು ಕೆಲವು ಕಾನೂನು ಬಾಹಿರವಾಗಿವೆ. ಕೆಲ ಸಂಬಂಧಗಳು ಬಹಿರಂಗಗೊಂಡಿದ್ದರೆ ಇನ್ನು ಕೆಲವು ರಹಸ್ಯವಾಗಿವೆ. ಪಾಶ್ಚಾತ್ಯ ದೇಶಗಳಲ್ಲಿ ಅನೈತಿಕ ಸಂಬಂಧಗಳು, ಅಪರಿಚಿತ, ಪರಿಚಿತ ಮಹಿಳೆಯರೊಂದಿಗೆ ಓಡಾಟ, ಒಡನಾಟ ಸಾಮಾನ್ಯ ವಿಷಯವಾಗಿದೆ. ಏಕಪತ್ನಿತ್ವ ವಾದಿಗಳು ಬಯಸಲಿ, ಬಯಸದಿರಲಿ, ಅನಧಿಕೃತ ಮತ್ತು ಕಾನೂನು ಬಾಹಿರ ಬಹುಪತ್ನಿತ್ವದ ಆಚರಣೆ ಎಲ್ಲೆಡೆ ಜಾರಿಯಲ್ಲಿದೆ.

## ಯಹೂದಿ ಧರ್ಮದಲ್ಲಿ

ಯಹೂದಿ ಮತ್ತು ಕ್ರೈಸ್ತ ಧರ್ಮಗ್ರಂಥಗಳು, ಪುರಾತನ ಕಾಲದಲ್ಲಿ ಯಹೂದಿಯರು ಬಹು ಪತ್ನಿಯರನ್ನು ಹೊಂದಿರುತ್ತಿದ್ದರೆಂದು, ಕೆಲ ಯಹೂದಿಯರು ನೂರಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರೆಂದು ತಿಳಿಸುತ್ತವೆ. ತಲ್ಮೂದ್ ಮತ್ತು ತೌರಾತ್ ಕಾನೂನುಗಳು ಬಹುಪತ್ನಿತ್ವವನ್ನು ಉತ್ತೇಜಿಸಿದ್ದವು. ಯಹೂದಿಯರ ಹೆಚ್ಚಿನ ಪ್ರವಾದಿಗಳು ಬಹುಪತ್ನಿಯರನ್ನು ಹೊಂದಿದ್ದರು. ವಿಕಿಪೀಡಿಯಾದ ಪ್ರಕಾರ, ಪ್ರವಾದಿ ಇಬ್ರಾಹಿಮ್ (ಅವರ ಮೇಲೆ ಶಾಂತಿ ಇರಲಿ) ಇಬ್ಬರು ಪತ್ನಿಯರನ್ನು, ಪ್ರವಾದಿ ಸುಲೈಮಾನ್ (ಅವರ ಮೇಲೆ ಶಾಂತಿ ಇರಲಿ) 700 ಪತ್ನಿಯರನ್ನು, ಮತ್ತು 300 ಉಪಪತ್ನಿಯರನ್ನು, ಪ್ರವಾದಿ ಯಾಕೂಬ್ (ಅವರ ಮೇಲೆ ಶಾಂತಿ ಇರಲಿ) ನಾಲ್ವರು ಪತ್ನಿಯರನ್ನು, ಪ್ರವಾದಿ ದಾವೂದ್ (ಅವರ ಮೇಲೆ ಶಾಂತಿ ಇರಲಿ) ಎಂಟು ಪತ್ನಿಯರನ್ನು ಮತ್ತು ಪ್ರವಾದಿ ಮೂಸಾ (ಅವರ ಮೇಲೆ ಶಾಂತಿ ಇರಲಿ) ನಾಲ್ವರು ಪತ್ನಿಯರನ್ನು ಹೊಂದಿದ್ದರು. ಎನ್‌ಸೈಕ್ಲೋಪೀಡಿಯಾ ಬೈಬ್ಲಿಕಾದ ಪ್ರಕಾರ, ಸಾಮಾನ್ಯ ಯಹೂದಿ ನಾಲ್ವರು ಮಹಿಳೆಯರನ್ನು ಮತ್ತು ರಾಜನು ಹದಿನೆಂಟು ಮಹಿಳೆಯರನ್ನು ವಿವಾಹವಾಗಬಹುದಿತ್ತು.

ಯಹೂದಿಯರಲ್ಲಿ ಬಹುಪತ್ನಿತ್ವದ ಸಂಪ್ರದಾಯ ರಾಬಿ ಹೆರ್ಶೊಮ್ ಬಿನ್ ಯಹೂದ (ಕ್ರಿ.ಶ. 960–1030) ಇದರ ವಿರುದ್ಧ ಆದೇಶ ಹೊರಡಿಸುವವರೆಗೆ ಮುಂದುವರೆಯಿತು. ಯಹೂದಿಯರ ಕೆಲ ಪಂಗಡಗಳು ಈ ಸಂಪ್ರದಾಯವನ್ನು ತೀರ ಇತ್ತೀಚಿನವರೆಗೆ ಅಂದರೆ 1950ರ ತನಕ ಇಸ್ರೇಲಿನ ಮುಖ್ಯ ಧರ್ಮಾಧಿಕಾರಿ ಬಹುಪತ್ನಿತ್ವವನ್ನು ನಿಷೇಧಿಸುವವರೆಗೆ ಈ ಸಂಪ್ರದಾಯವನ್ನು ಮುಂದುವರೆಸಿದ್ದರು.

ಯಹೂದಿ ಧರ್ಮವು ಸದಾಕಾಲ ಏಕಪತ್ನಿತ್ವ ಪದ್ಧತಿಯನ್ನು ಅನುಸರಿಸಿದೆ ಎಂದು, ಬಹುಪತ್ನಿತ್ವ ವನ್ನು ಅದು ವಿರೋಧಿಸಿತ್ತೆಂದೂ ಹೇಳುವುದು ಸರಿಯಲ್ಲ. ಇಂದಿಗೂ ಯಹೂದಿ ಧರ್ಮವು ಬಹುಪತ್ನಿತ್ವವನ್ನು ವಿರೋಧಿಸುತ್ತಿಲ್ಲ. ಯಹೂದಿ ವಿದ್ವಾಂಸ **'ಎಸ್.ಡಿ. ಗೊಯಿಟಿನ್'** S.D.Goitien, ಬಹುಪತ್ನಿತ್ವವನ್ನು ಆಚರಿಸುವ ವಲಸೆಗಾರರು ಇಸ್ರೇಲಿ ವಸತಿ, ಅಧಿಕಾರಿಗಳಿಗೆ ಬಹಳ ಕಷ್ಟವನ್ನು, ಮುಜುಗರವನ್ನು ಉಂಟುಮಾಡುತ್ತಿರುವರೆಂದು ತಿಳಿಸಿದ್ದಾರೆ. (ಗ್ರಂಥ ಜ್ಯೂಸ್ ಆಂಡ್ ಅರಬ್ಸ್, Jews and Arabs).

## ಕ್ರೈಸ್ತ ಧರ್ಮದಲ್ಲಿ

ಏಸುಕ್ರಿಸ್ತರ ಕಾಲದಲ್ಲಿ ಜನರು ಸಾಮಾನ್ಯವಾಗಿ ಬಹುಪತ್ನಿತ್ವ ಸಂಪ್ರದಾಯವನ್ನು ಆಚರಿಸುತ್ತಿದ್ದರು. ಪ್ರವಾದಿ ಏಸು ಕ್ರಿಸ್ತರು (ಅವರ ಮೇಲೆ ಶಾಂತಿ ಇರಲಿ) ಬಹುಪತ್ನಿತ್ವವನ್ನು ವಿರೋಧಿಸಿರುವುದು ಕಂಡು ಬರುವುದಿಲ್ಲ. ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಬಹುಪತ್ನಿತ್ವವನ್ನು ಸ್ವೀಕರಿಸಲಾಗಿತ್ತು. ಬಹುಶಃ ಈ ಕಾರಣದಿಂದ ಬೈಬಲ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪವಿಲ್ಲ. ಬೈಬಲ್ ಬಹುಪತ್ನಿತ್ವವನ್ನು ನಿಷೇಧಿಸುವುದಿಲ್ಲ, ನಿಯಂತ್ರಿಸುವುದಿಲ್ಲ ಮತ್ತು ಮಿತಿಗೊಳಿಸುವುದಿಲ್ಲ. ಈ ಸಂಬಂಧ ಬೈಬಲ್‌ನ ಕಾಲದ ಪ್ರವಾದಿಗಳ, ರಾಜರ ಮತ್ತು ಕುಲದ ಅಧಿಪತಿಗಳ ಕತೆಗಳು ಬಹಳ ವಿಸ್ಮಯಕಾರಿಯಾಗಿವೆ.

ಅನೇಕ ಕ್ರೈಸ್ತ ರಾಜರು ಒಂದಕ್ಕಿಂತ ಹೆಚ್ಚಿನ ವಿವಾಹವನ್ನು ಮಾಡಿಕೊಂಡಿದ್ದ ಉದಾಹರಣೆಗಳಿವೆ. ಫೆಡ್ರಿಕ್ ವಿಲ್‌ಹೆಲ್ಮ್ II ಮತ್ತು ಫಿಲಿಪ್ ಚರ್ಚ್ ಮತ್ತು ಸ್ವತಃ ಸೇಂಟ್ ಲೂಥರ್‌ರ ಅನುಮತಿಯೊಂದಿಗೆ ಒಂದಕ್ಕಿಂತ ಹೆಚ್ಚು ವಿವಾಹವಾಗಿದ್ದರು. ಕಡಿಮೆ ಜನಸಂಖ್ಯೆಯ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ 1650ರ ನುರೆಂಬರ್ಗ್ ಸಮ್ಮೇಳನವು ಜನರಿಗೆ ಒಂದಕ್ಕಿಂತ ಹೆಚ್ಚಿನ ವಿವಾಹ ಮಾಡಿಕೊಳ್ಳಲು ಅನುಮತಿ ನೀಡಿತ್ತು.

17ನೇ ಶತಮಾನದ ತನಕ ಕ್ರೈಸ್ತ ಚರ್ಚು ಬಹುಪತ್ನಿತ್ವದ ಆಚರಣೆಯನ್ನು ಅನುಮೋದಿಸಿತ್ತು. ಮಾರ್‌ಮೋನ್ಸ್ (ಲೇಟರ್‌ಡೇ ಸೇಂಟ್ಸ್, ಚರ್ಚ್ ಆಫ್‌ದ ಜೀಸಸ್ ಕ್ರೈಸ್ಟ್) ಬಹುಪತ್ನಿತ್ವವನ್ನು ಅನುಮತಿಸಿದೆ ಮತ್ತು ಆಚರಿಸಿದೆ.

ಬಹುಪತ್ನಿತ್ವ ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಕಾನೂನುಬದ್ಧವಾಗಿ ಆಚರಣೆಯಲ್ಲಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಯಹೂದಿ ಧರ್ಮದ ಪ್ರವಾದಿಗಳು ಬಹುಪತ್ನಿತ್ವವನ್ನು ಅನುಸರಿಸುತ್ತಿದ್ದರು ಮತ್ತು ಯೇಸುಕ್ರಿಸ್ತರು ಇದನ್ನು ವಿರೋಧಿಸುತ್ತಿರಲಿಲ್ಲ.

ಕ್ರೈಸ್ತ ಧರ್ಮದಲ್ಲಿ ಅನೇಕ ಬದಲಾವಣೆಗಳು ಉಂಟಾಗುತ್ತಿದ್ದ ಕಾಲದಲ್ಲಿ ಪಾಲ್, ಇದರಲ್ಲಿ ಏಕಪತ್ನಿತ್ವವನ್ನು ಆಚರಣೆಗೆ ತಂದನು. ಇದು ಚರ್ಚನ್ನು ಗ್ರೀಕ್ – ರೋಮನ್ ಸಂಸ್ಕೃತಿಗೆ ಅನುಗುಣವಾಗಿ ಮಾಡುವ ಸಲುವಾಗಿ ಆಗಿದ್ದಿತು. ಗ್ರೀಕ್ – ರೋಮನ್ ಸಂಸ್ಕೃತಿಯಲ್ಲಿ ಜನರು ಏಕಪತ್ನಿತ್ವವನ್ನು ಅನುಸರಿಸುತ್ತಿದ್ದರು. ಆದರೆ ಅವರ ಬಳಿ ಅನೇಕ ಗುಲಾಮರಿದ್ದು, ಇವರನ್ನು ಅವರು ಉಪಯೋಗಿಸಿಕೊಳ್ಳಬಹುದಾಗಿತ್ತು. ಅಂದರೆ ಅವರಲ್ಲಿ ಮಿತಿ ಇಲ್ಲದ ಬಹುಪತ್ನಿತ್ವ ಆಚರಣೆಯಲ್ಲಿತ್ತು ಎಂದಾಯಿತು.

ಆರಂಭ ಕಾಲದ ಕ್ರೈಸ್ತರಲ್ಲಿ, "ಮಹಿಳೆಯರು ಪಾಪಗಳಿಂದ ತುಂಬಿರುವರೆಂದು". ಈ ಕಾರಣದಿಂದಾಗಿ ಪುರುಷರು ವಿವಾಹವನ್ನು ಮಾಡಿಕೊಳ್ಳಬಾರದೆಂಬ ವಿಚಾರಧಾರೆ ಪ್ರಚಲಿತವಿತ್ತು. ಆದರೆ ಈ ರೀತಿ ಅನುಸರಣೆ ಮಾಡಿದಲ್ಲಿ ಮಾನವ ಪೀಳಿಗೆಯು ಬೆಳೆಯುವುದಿಲ್ಲವೆಂದು ಅರಿತು, ಕೊನೆಗೆ, "ಏಕಪತ್ನಿತ್ವ"ವನ್ನು ಆಚರಣೆಗೆ ತರಲಾಯಿತು.

## ಹಿಂದೂ ಧರ್ಮದಲ್ಲಿ

ಪುರಾತನ ಕಾಲದಲ್ಲಿ ಹಿಂದೂ ಧರ್ಮದಲ್ಲಿ ಬಹುಪತ್ನಿತ್ವ ಪದ್ಧತಿಗೆ ಅನುಮೋದನೆಯಷ್ಟೇ ಅಲ್ಲ, ಅದರ ಆಚರಣೆಯೂ ಸಾಮಾನ್ಯವಾಗಿತ್ತು. ಅನೇಕ ರಾಜರು ಮತ್ತು ಇತರರು ಬಹುಪತ್ನಿಯರನ್ನು ಹೊಂದಿದ್ದರು. ಶ್ರೀರಾಮರ ತಂದೆ ದಶರಥರಿಗೆ ಮೂವರು ಪತ್ನಿಯರು ಇದ್ದರು. ಕೌಶಲ್ಯ, ಸುಮಿತ್ರ ಮತ್ತು ಕೈಕೇಯಿ. ಶ್ರೀಕೃಷ್ಣ 16,100 ಪತ್ನಿಯರನ್ನು ಹೊಂದಿದ್ದರು. ರಾಧ, ರುಕ್ಮಿಣಿ, ಸತ್ಯಭಾಮ, ಜಾಂಬವತಿ, ಸತ್ಯ, ಭದ್ರ, ಮಿತ್ರವಿಂದ ಮೊದಲಾದವರು ಇವರಲ್ಲಿ ಪ್ರಮುಖರು.

ಹಿಂದೂ ಧಾರ್ಮಿಕ ಗ್ರಂಥಗಳಾದ ವೇದ, ರಾಮಾಯಣ, ಮಹಾಭಾರತ, ಗೀತೆ ಪತ್ನಿಯರ ಸಂಖ್ಯೆಗೆ ಮಿತಿ ಹೇರುವುದಿಲ್ಲ. ಈ ಗ್ರಂಥಗಳ ಪ್ರಕಾರ ಮನುಷ್ಯ ತನಗೆ ಇಷ್ಟವಿರುವ ಸಂಖ್ಯೆಯ ಮಹಿಳೆಯರನ್ನು ವಿವಾಹವಾಗಬಹುದು. 1955ರಲ್ಲಿ ಹಿಂದೂ ವಿವಾಹ ಕಾಯ್ದೆ ಜಾರಿಗೆ ಬಂದ ನಂತರವಷ್ಟೇ ಹಿಂದೂ ಧರ್ಮದಲ್ಲಿ ಬಹು ಪತ್ನಿತ್ವವನ್ನು ನಿಷೇಧಿಸಲಾಯಿತು. ಹಿಂದೂ ಧಾರ್ಮಿಕ ಗ್ರಂಥಗಳು ಬಹುಪತ್ನಿತ್ವವನ್ನು ನಿಷೇಧಿಸುವುದಿಲ್ಲ. ಭಾರತದ ಕಾನೂನು ಇದನ್ನು ನಿಷೇಧಿಸುತ್ತದೆ ಅಷ್ಟೇ.

# ಪಾಶ್ಚಾತ್ಯ ಸಮಾಜದಲ್ಲಿ

ಪಾಶ್ಚಾತ್ಯ ಸಮಾಜದಲ್ಲಿ ಪುರುಷನಿಗೆ ತನ್ನ ಪತ್ನಿಯ ಬಗ್ಗೆ ಜಿಗುಪ್ಸೆ ಉಂಟಾದಾಗ, ಆಕೆಯನ್ನು ತೊರೆಯುತ್ತಾನೆ, ನಂತರ ಪರಸ್ತ್ರೀಯರೊಂದಿಗೆ ಅನೈತಿಕ ಸಂಬಂಧವನ್ನು ಹೊಂದುತ್ತಾನೆ. ಪಾಶ್ಚಾತ್ಯ ಸಮಾಜದಲ್ಲಿ ಮೂರು ವಿಧದ ಬಹುಪತ್ನಿತ್ವ ಆಚರಣೆಯನ್ನು ಕಾಣಬಹುದು. (1) ನಿರಂತರ ವಿವಾಹ ಮತ್ತು ವಿಚ್ಛೇದನ (2) ವಿವಾಹಿತ ಪುರುಷ ಒಂದಕ್ಕಿಂತ ಹೆಚ್ಚಿನ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದುವುದು (3) ಅವಿವಾಹಿತ ಪುರುಷ ಅನೇಕ ಉಪಪತ್ನಿಯರನ್ನು ಹೊಂದುವುದು.

ಪಾಶ್ಚಾತ್ಯ ಸಮಾಜವು ಒಪ್ಪಿಕೊಳ್ಳದಿದ್ದರೂ, ಅದು ಬಹುಪತ್ನಿತ್ವ ಆಚರಿಸುವ ಸಮಾಜವಾಗಿದೆ. ಡಾ॥ ಅನ್ನಿಬೆಸೆಂಟ್‌ರ ಮಾತಿನಲ್ಲಿ

"ಪಾಶ್ಚಾತ್ಯ ಸಮಾಜದಲ್ಲಿ ತೋರುವಿಕೆಯ ಏಕಪತ್ನಿತ್ವ ಆಚರಣೆಯಲ್ಲಿದೆ. ವಾಸ್ತವಿಕವಾಗಿ, ಇದರಲ್ಲಿ ಹೊಣೆಗಾರಿಕೆ ಇಲ್ಲದ ಬಹುಪತ್ನಿತ್ವ ಅನುಸರಿಸಲಾಗುತ್ತದೆ. ಜಿಗುಪ್ಸೆ ಉಂಟಾದಾಗ ಉಪಪತ್ನಿಯರನ್ನು ಕೈ ಬಿಡಲಾಗುತ್ತದೆ. ಹಂತ ಹಂತವಾಗಿ ಇಂತಹ ಮಹಿಳೆಯರು ಬೀದಿಯ ಹೆಣ್ಣಾಗುತ್ತಾರೆ. ಬಹುಪತ್ನಿತ್ವ ಸಂಪ್ರದಾಯದಲ್ಲಿ ಬಹುಪತ್ನಿಯರಿಗೆ ಇರುವ ರಕ್ಷಣೆ ಇವರಿಗೆ ಇರುವುದಿಲ್ಲ. ರಾತ್ರಿಯ ವೇಳೆ ಬೀದಿಗಳಲ್ಲಿ ಕಾಯುವ ಸ್ತ್ರೀಯರನ್ನು ಗಮನಿಸಿದಾಗ, ಇಸ್ಲಾಮಿನ ಬಹುಪತ್ನಿತ್ವ ಆಚರಣೆಗೆ ಪಾಶ್ಚಾತ್ಯರ ಟೀಕೆಗೆ ಯಾವುದೇ ಆಧಾರವಿಲ್ಲವೆಂಬುದು ನಿಚ್ಚಳವಾಗುತ್ತದೆ. ಬೀದಿಯಲ್ಲಿ ಯಾವುದೇ ರಕ್ಷಣೆ ಇಲ್ಲದೆ, ಅನೈತಿಕ ಮಗುವಿನೊಂದಿಗೆ ಜೀವಿಸುವುದಕ್ಕಿಂತ ವಿವಾಹಿತ ಪುರುಷನ ರಕ್ಷಣೆಯಲ್ಲಿ ಗೌರವದೊಂದಿಗೆ ಬಹುಪತ್ನಿಯರಾಗಿ ಬಾಳುವುದು ಮಹಿಳೆಯರಿಗೆ ಹೆಚ್ಚು ಶ್ರೇಯಸ್ಕರವಾಗಿದೆ."

ಪಾಶ್ಚಾತ್ಯ ಸಮಾಜ ಸ್ತ್ರೀ, ಪುರುಷರ ನಡುವೆ ಮುಕ್ತ ಲೈಂಗಿಕ ಸಂಬಂಧವನ್ನು ಅನುಮತಿಸುತ್ತದೆ. ಇದರಿಂದಾಗಿ ಅನೇಕ 'ತಂದೆ' ಇಲ್ಲದ ಜಾರ ಸಂತಾನ ಉಂಟಾಗಿದೆ. ಸಣ್ಣ ಪ್ರಾಯದ ಅನೇಕ ಅವಿವಾಹಿತ ತಾಯಂದಿರು ಸೃಷ್ಟಿಯಾಗಿ ಸಮಾಜಕ್ಕೆ ಹೊರೆಯಾಗಿ ಪರಿಣಮಿಸಿದ್ದಾರೆ.

ಕೆಲ ಪಾಶ್ಚಾತ್ಯ ಚಿಂತಕರು ಏಕಪತ್ನಿತ್ವ ಪದ್ಧತಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತದೆ ಎಂದು ಪ್ರತಿಪಾದಿಸುತ್ತಾರೆ. ಈ ಜನರು ವಾಸ್ತವಿಕವಾಗಿ ಮಹಿಳೆಯರ ಹಕ್ಕುಗಳ ಬಗ್ಗೆ ನೈಜ ಕಾಳಜಿಯನ್ನು ಹೊಂದಿದ್ದಾರೆಯೇ? ಅವರ ಸಮಾಜಗಳಲ್ಲಿಯೇ ಹೆಣ್ಣಿನ ಮೇಲೆ ದೌರ್ಜನ್ಯ, ಶೋಷಣೆ ನಡೆಯುತ್ತಿದ್ದು, ಈ ಶೋಷಣೆಯಿಂದ ರಕ್ಷಣೆ ಪಡೆಯಲು ಮತ್ತು ತಮ್ಮ ಹಕ್ಕುಗಳಿಂದಾಗಿ ಈ ಸಮಾಜಗಳಲ್ಲಿ ಮಹಿಳೆಯರಿಂದ ಚಳುವಳಿಗಳು ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ.

ವಾಸ್ತವಿಕ ಸಂಗತಿ ಏನೆಂದರೆ, ಪಾಶ್ಚಾತ್ಯ ಸಮಾಜಗಳಲ್ಲಿ ಏಕಪತ್ನಿತ್ವ ಪದ್ಧತಿ ಪುರುಷರ ಪರವಾಗಿದ್ದು, ಅವರಿಗೆ ಇತರ ಸ್ತ್ರೀಯರೊಂದಿಗೆ ಚಲ್ಲಾಟ ವಾಡಲು ಅವಕಾಶ ನೀಡುತ್ತಿದೆ. ಸುಲಭ ಗರ್ಭ ನಿರೋಧಕ ವಿಧಾನಗಳು ಮತ್ತು ಸುಲಭವಾಗಿ ಲಭ್ಯ ಗರ್ಭ ಪಾತ ಸೌಲಭ್ಯಗಳು ಮಹಿಳೆಗೆ ಅನೈತಿಕ ಕಾಮಕ್ಕೆ ದ್ವಾರವನ್ನು ತೆರೆದಿದೆ. ಆಕೆಯು ಇವುಗಳ ಅಡ್ಡ ಪರಿಣಾಮಗಳನ್ನು ಎದುರಿಸುತ್ತಿದ್ದಾಳೆ. ಆದರೆ ಪುರುಷನು ಈ ಎಲ್ಲಾ 'ತೊಂದರೆ' ಗಳಿಂದ ನಿಶ್ಚಿಂತನಾಗಿದ್ದಾನೆ. ಪುರುಷನು ಏಕಪತ್ನಿತ್ವ ಪದ್ಧತಿಯಿಂದ ಲಾಭ ಪಡೆಯುತ್ತಿದ್ದು, ಹೆಣ್ಣು ಈ ಪದ್ಧತಿಯ ಕಾರಣದಿಂದಾಗಿ ಶೋಷಣೆಗೆ ಒಳಗಾಗಿದ್ದಾಳೆ. ಪುರುಷ ಪ್ರಧಾನ ಪಾಶ್ಚಾತ್ಯ ಸಮಾಜ ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸುತ್ತಿದ್ದಾನೆ. ಏಕೆಂದರೆ ಬಹುಪತ್ನಿತ್ವದ ಕಾರಣದಿಂದ ಅದರ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗುತ್ತದೆ.

## ಇಸ್ಲಾಮ್ ಧರ್ಮದಲ್ಲಿ

ಕೆಲ ಪೂರ್ವಗ್ರಹ ಪೀಡಿತ ಜನರು ಮುಸ್ಲಿಮರು ಕಾಮಾಸಕ್ತರೆಂದೂ ಈ ಕಾರಣದಿಂದ ಅನೇಕ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುತ್ತಾರೆಂದು ಪ್ರಚಾರ ಮಾಡುತ್ತಾರೆ. ಜನರು ಬಟ್ಟೆ ಬದಲಾಯಿಸಿದಂತೆ ಮುಸ್ಲಿಮರು ಸ್ತ್ರೀಯರನ್ನು ಬದಲಾಯಿಸುತ್ತಾರೆ ಎಂದು ಆಪಾದಿಸುತ್ತಾರೆ. ಇದಕ್ಕೆ ಪೂರಕವಾಗಿ ಮಾಧ್ಯಮಗಳು ವರ್ತಿಸುತ್ತಿವೆ.

ಕೆಲ ಮುಸ್ಲಿಮ್ ರಾಜರು ಮತ್ತು ಕೆಲ ಬೆರಳಣಿಕೆಯಷ್ಟು ಜನರು ಇಸ್ಲಾಮಿ ಬೋಧನೆಯಂತೆ ನಡೆದುಕೊಳ್ಳದೇ, ಧರ್ಮಕ್ಕೆ ಮಸಿ ಬಳಿಯುವ ಕಾರ್ಯ ಮಾಡಿದ್ದಾರೆ. ಆದರೆ ಈ ಜನರ ಕೃತ್ಯಗಳಿಗೆ ಇಸ್ಲಾಮ್ ಧರ್ಮವನ್ನು ಹೀಯಾಳಿಸುವುದು ತರವಲ್ಲ.

ಮೇಲಿನ ಕಾರಣಗಳಿಂದಾಗಿ ಜಗತ್ತಿನ ಹೆಚ್ಚಿನ ಜನರು ವಿವಾಹಕ್ಕೆ ಸಂಬಂಧಿಸಿದಂತೆ ಇಸ್ಲಾಮಿನ ಬೋಧನೆಗಳನ್ನು ಅರಿಯದಂತಾಗಿದ್ದಾರೆ. ಜನರ ತಪ್ಪು ಕಲ್ಪನೆಯನ್ನು ನೀಗಿಸಲಿಕ್ಕಾಗಿ ಈ ಪುಸ್ತಕದಲ್ಲಿ ಒಂದು ಕಿರು ಪ್ರಯತ್ನವನ್ನು ಮಾಡಲಾಗಿದೆ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಆಗಮನ ಕಾಲದಲ್ಲಿ ಅರೇಬಿಯಾದಲ್ಲಿ ಬಹುಪತ್ನಿತ್ವ ಆಚರಣೆಯು ಜನ ಜೀವನದಲ್ಲಿ ಮತ್ತು ಸಮಾಜದಲ್ಲಿ ಹಾಸುಹೊಕ್ಕಾಗಿತ್ತು. ಪವಿತ್ರ ಕುರ್‌ಆನ್ ಈ ಪದ್ಧತಿಯನ್ನು ಕಡೆಗಣಿಸಲಿಲ್ಲ ಮತ್ತು ಇದೇ ಸಮಯದಲ್ಲಿ ಅನಿಯಂತ್ರಿತವಾಗಿ ಮುಂದುವರೆಯಲೂ ಬಿಡಲಿಲ್ಲ.

ಅನಿಯಂತ್ರಿತ ಬಹುಪತ್ನಿತ್ವ ಪದ್ಧತಿಯ ದುಷ್ಪರಿಣಾಮಗಳನ್ನು ಕುರ್‌ಆನ್ ಕಡೆಗಣಿಸಲಿಲ್ಲ. ಸಮಾಜದ ಇತರ ಕೆಡಕುಗಳನ್ನು ತೊಡೆದು ಹಾಕಲು ಆದೇಶಗಳನ್ನು ನೀಡಿದಂತೆ, ಅನಿಯಂತ್ರಿತ ಬಹುಪತ್ನಿತ್ವ ಪದ್ಧತಿಯನ್ನು ನಿಯಂತ್ರಿಸಲು, ಅದನ್ನು

ಸರಿದಾರಿಗೆ ತರಲು ಕುರ್‌ಆನ್ ಮಾರ್ಗದರ್ಶನವನ್ನು ನೀಡಿತು.

> "....ಸ್ತ್ರೀಯರಲ್ಲಿ ನೀವು ಮೆಚ್ಚಿದ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ. ಆದರೆ ಅವರೊಂದಿಗೆ ನ್ಯಾಯ ಪಾಲಿಸಲಾರಿರೆಂಬ ಆಶಂಕೆ ನಿಮಗಿದ್ದರೆ ಒಬ್ಬ ಸ್ತ್ರೀಯನ್ನು ಮಾತ್ರ ವಿವಾಹವಾಗಿರಿ"(ಪವಿತ್ರ ಕುರ್‌ಆನ್ 4:3)

ಏಕೈಕ ಸ್ತ್ರೀಯೊಂದಿಗೆ ವಿವಾಹವಾಗಿ ಎಂದು ಆದೇಶಿಸುವ ಧಾರ್ಮಿಕ ಗ್ರಂಥ ಕೇವಲ ಕುರ್‌ಆನ್ ಮಾತ್ರವಾಗಿದೆ.

ಕುರ್‌ಆನಿನ ಈ ಸೂಕ್ತದ ಅವತೀರ್ಣದ ಮೊದಲು, ಅರೇಬಿಯಾದಲ್ಲಿ ಬಹುಪತ್ನಿಯರ ಸಂಖ್ಯೆಗೆ ಯಾವುದೇ ಮಿತಿ ಇರಲಿಲ್ಲ. ಕುರ್‌ಆನ್ ಬಹುಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ಸೀಮಿತಗೊಳಿಸಿದೆ. ಅದೂ ಹಲವು ಷರತ್ತುಗಳೊಂದಿಗೆ. ವ್ಯಕ್ತಿ ತನ್ನ ಎಲ್ಲಾ ಪತ್ನಿಯರೊಂದಿಗೆ ಸಮಾನವಾಗಿ ವರ್ತಿಸಬೇಕು. ಪ್ರೀತಿಯ ವಿಷಯದಲ್ಲೂ ಸಹ ! ಆದರೆ ಎಲ್ಲಾ ಪತ್ನಿಯರೊಂದಿಗೆ ಸಮಾನವಾಗಿ ವರ್ತಿಸುವುದು ಕಷ್ಟ ಸಾಧ್ಯವೆಂದು ಕುರ್‌ಆನ್ ಸ್ಪಷ್ಟ ಪಡಿಸುತ್ತದೆ.

> "ಪತ್ನಿಯರ ನಡುವೆ ಸರ್ವ ಸಂಪೂರ್ಣ ನ್ಯಾಯಪಾಲಿಸಲು ನಿಮ್ಮಿಂದ ಸಾಧ್ಯವಾಗದು, ನೀವು ಇಚ್ಛಿಸಿದರೂ ಅದು ನಿಮ್ಮಿಂದ ಸಾಧ್ಯವಾಗದು. ಆದುದರಿಂದ ಒಬ್ಬ ಪತ್ನಿಯತ್ತ ಜೋತಾಡಿ ಕೊಂಡಿರುವಂತೆ ಬಿಟ್ಟು ಇನ್ನೊಬ್ಬಳ ಕಡೆಗೇ ವಾಲಿ ಬಿಡಬೇಡಿರಿ" (ಪವಿತ್ರ ಕುರ್‌ಆನ್ 4:129)

ಕುರ್‌ಆನಿನ ಈ ಸೂಕ್ತವು ಪತ್ನಿಯರೊಂದಿಗೆ ನ್ಯಾಯೋಚಿತವಾಗಿ ವರ್ತಿಸಲು ಆದೇಶಿಸುತ್ತದೆ.

ಆದರೆ ವಿಶೇಷ ಸಂದರ್ಭಗಳಲ್ಲಿ ಇಸ್ಲಾಮ್ ಬಹುಪತ್ನಿತ್ವಕ್ಕೆ ಅನುಮತಿ ನೀಡುತ್ತದೆ. ಈ ಸಂದರ್ಭಗಳು ಈ ರೀತಿ ಇವೆ:

1. ಪತ್ನಿಯು ಬಂಜೆಯಾಗಿದ್ದು ಆಕೆಗೆ ಮಕ್ಕಳಾಗದಿದ್ದಲ್ಲಿ ಮತ್ತು ಪತಿಗೆ ಮಕ್ಕಳ ಬಯಕೆ ಇದ್ದಲ್ಲಿ. ಈ ಸಂದರ್ಭದಲ್ಲಿ ಬಂಜೆ ಪತ್ನಿಗೆ ವಿಚ್ಛೇದನ ನೀಡುವುದಕ್ಕಿಂತ ಎರಡನೆಯ ಪತ್ನಿಯನ್ನು ಹೊಂದುವುದು ಉತ್ತಮವಲ್ಲವೇ? ತನ್ನ ಪತಿ ಎರಡನೆಯ ವಿವಾಹವಾದಾಗ ಮೊದಲ ಪತ್ನಿಗೆ ಪತಿಯ ಕೃತ್ಯ ಇಷ್ಟವಿಲ್ಲದಿದ್ದರೆ, ಆತನಿಂದ ವಿಚ್ಛೇದನ ಪಡೆಯುವ ಹಕ್ಕಿರುತ್ತದೆ.
2. ಮೊದಲ ಪತ್ನಿ ತೀವ್ರವಾದ ರೋಗದಿಂದ ಬಳಲುತ್ತಿದ್ದು, ಮನೆಯ ಕಾಯಕ ಕಲಾಪಗಳನ್ನು ಮಾಡಲು ಆಕೆಗೆ ಅಸಾಧ್ಯವಾಗಿದ್ದರೆ, ಕುಟುಂಬದ ಪಾಲನೆ ಪೋಷಣೆಗಾಗಿ ಪತಿ ಎರಡನೆಯ ವಿವಾಹವನ್ನು ಮಾಡಿಕೊಳ್ಳಬಹುದು.

3. ಒಂದು ಸಮಾಜದಲ್ಲಿ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಹೆಚ್ಚಿದಲ್ಲಿ, ಇಂತಹ ಸಂದರ್ಭದಲ್ಲಿ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಬಹುಪತ್ನಿತ್ವ ಉತ್ತಮ ಮಾರ್ಗವಾಗಿದೆ. ವಿಶೇಷವಾಗಿ ಯುದ್ಧದ ನಂತರ ಈ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಮೇಲಿನ ಕುರ್‌ಆನ್ ಸೂಕ್ತವು ಉಹುದ್ ಯುದ್ಧದ ನಂತರ ಅವತೀರ್ಣಗೊಂಡಿತ್ತು. ಉಹದ್ ಯುದ್ಧದಲ್ಲಿ ಅನೇಕ ಮುಸ್ಲಿಮ್ ಯೋಧರು ಹತರಾಗಿದ್ದರು. ಅವರ ಕುಟುಂಬದ ರಕ್ಷಣೆ, ಪಾಲನೆ, ಪೋಷಣೆ ಒಂದು ದೊಡ್ಡ ಸಮಸ್ಯೆಯಾಗಿದ್ದಿತು. ವಿವಾಹವು ಈ ವಿಧವೆಯರನ್ನು ಸಂರಕ್ಷಿಸುವ ಒಂದು ಮಾರ್ಗೋಪಾಯವಾಗಿತ್ತು.

4. ಪ್ರಥಮ ಮತ್ತು ಎರಡನೆಯ ಜಾಗತಿಕ ಯುದ್ಧಗಳಲ್ಲಿ ಪಾಲುಗೊಂಡ ದೇಶಗಳಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಹೆಚ್ಚಾಗಿತ್ತು. ವಿಧವೆ ಸ್ತ್ರೀಯರ ಸಮಸ್ಯೆಯನ್ನು ಪರಿಹರಿಸಲು ಮತ್ತು ಅನಾಥ ಮಕ್ಕಳ ಪಾಲನೆ ಪೋಷಣೆಗಾಗಿ ಬಹು ವಿವಾಹ ಒಂದು ಮಾರ್ಗೋಪಾಯ. ಸ್ತ್ರೀಯರನ್ನು ಬೀದಿಪಾಲು ಮಾಡುವುದಕ್ಕಿಂತ ಬಹು ವಿವಾಹ ಉತ್ತಮ ಕ್ರಮವಾಗಿತ್ತು.

5. ಇಸ್ಲಾಮ್ ವಿವಾಹೇತರ ಲೈಂಗಿಕ ಸಂಬಂಧಗಳನ್ನು ನಿಷೇಧಿಸಿದೆ. ಉಪಪತ್ನಿಯ ಕಲ್ಪನೆ ಇಸ್ಲಾಮಿನಲ್ಲಿಲ್ಲ. ಇಸ್ಲಾಮ್ ಪುರುಷರಿಗೆ ಘನತೆಯನ್ನು ನೀಡಿದೆ. ಉಪ ಪತ್ನಿಯರನ್ನು ಹೊಂದುವುದಕ್ಕಿಂತ, ಬಹು ವಿವಾಹವನ್ನು ಮಾಡಿಕೊಳ್ಳುವುದು ಪುರುಷರ ಘನತೆಯನ್ನು ವರ್ಧಿಸುತ್ತದೆ. ಇಸ್ಲಾಮ್ ವಿವಾಹದೊಂದಿಗೆ ಪುರುಷರಿಗೆ ಹೊಣೆಗಾರಿಕೆಯನ್ನು ನೀಡಿದೆ. ಅವರು ಕೇವಲ ಲೈಂಗಿಕ ಸುಖವನ್ನು ಪಡೆದು ಹೆಣ್ಣನ್ನು ತ್ಯಜಿಸುವಂತಿಲ್ಲ.

6. ಓರ್ವ ಪುರುಷನಿಗೆ ಈಗಾಗಲೇ ಓರ್ವ ಪತ್ನಿಯಿರುವಳೆಂಬ ಕಾರಣದ ಮೇರೆಗೆ ಸ್ತ್ರೀ, ಆತನನ್ನು ವಿವಾಹವಾಗಲು ನಿರಾಕರಿಸಬಹುದು. ಆದರೆ ಸ್ತ್ರೀ, ಸ್ವ ಇಚ್ಛೆಯಿಂದ ವಿವಾಹವಾಗಲು ಸಮ್ಮತಿಸಿದರೆ ಆಕ್ಷೇಪಣೆ ಮಾಡಲು ಯಾರಿಗೂ ಅಧಿಕಾರವಿರುವುದಿಲ್ಲ.

"ಯಾರು ಕೇವಲ ಓರ್ವ ಪತ್ನಿಯ ಕಡೆಗೆ ಮಾತ್ರ ಗಮನವಿರಿಸಿ ಮತ್ತೋರ್ವ ಪತ್ನಿಯನ್ನು ನಿರ್ಲಕ್ಷಿಸುತ್ತಾನೋ, ನಿರ್ಣಾಯಕ ದಿನದಂದು ಆತನ ದೇಹದ ಒಂದು ಭಾಗವು ಜೋತಾಡುತ್ತಿರುತ್ತದೆ" ಎಂದು ಪ್ರವಾದಿ ನುಡಿದಿರುವರಾಗಿ ವರದಿಯಾಗಿದೆ."

ಇಸ್ಲಾಮ್ ಏಕ ಪತ್ನಿತ್ವವನ್ನು ನಿಯಮವಾಗಿ ಹಾಗೂ ಬಹುಪತ್ನಿತ್ವವನ್ನು ವಿಶೇಷ ಸಂದರ್ಭದಲ್ಲಿ ಪಾಲಿಸಲು ಅನುಮತಿಯ ರೂಪದಲ್ಲಿ ಪರಿಗಣಿಸುತ್ತದೆ. ಇಸ್ಲಾಮಿ ಕರ್ಮಶಾಸ್ತ್ರಜ್ಞ ಇಮಾಮ್ ಅಬೂ ಹನೀಫಾ ಪ್ರವಾದಿ ಈ ರೀತಿ ನುಡಿದಿರುವರಾಗಿ ವರದಿ ಮಾಡಿದ್ದಾರೆ.

"ಏಕಪತ್ನಿಯನ್ನು ಹೊಂದಿರುವ ವ್ಯಕ್ತಿಯು ಸಂತೋಷ ಮತ್ತು ನೆಮ್ಮದಿಯ ಬಾಳನ್ನು ನಡೆಸುತ್ತಾನೆ. ಬಹು ಪತ್ನಿಯರನ್ನು ಹೊಂದಿರುವ ವ್ಯಕ್ತಿಯು ರೋಗರುಜಿನಗಳಿಗೆ

ಮತ್ತು ಸಂಕಷ್ಟಗಳಿಗೆ ಗುರಿಯಾಗುತ್ತಾನೆ".

ಜಗತ್ತಿನಾದ್ಯಂತ ಮುಸ್ಲಿಮರು ಸಾಮಾನ್ಯವಾಗಿ ಏಕಪತ್ನಿತ್ವವನ್ನೇ ಅನುಸರಿಸುತ್ತಾರೆ.

ಹೀಗೆ ಇಸ್ಲಾಮ್ ಧರ್ಮದಲ್ಲಿ ಬಹುಪತ್ನಿತ್ವವು ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮವಾಗಿರದೇ, ವಿಶೇಷ ಸಂದರ್ಭಗಳಲ್ಲಿ ನೀಡಲಾಗಿರುವ ಒಂದು ಅನುಮತಿಯಷ್ಟೇ. ಅದೂ ಷರತ್ತು ಬದ್ಧ ಅನುಮತಿ! ಬಹುಪತ್ನಿತ್ವ ಆಚರಣೆ ಸತ್ಯ ವಿಶ್ವಾಸದ ಭಾಗವಲ್ಲ ಮತ್ತು ಬೇಡಿಕೆಯೂ ಅಲ್ಲ. ಕೆಲ ಜನರು ಮುಸ್ಲಿಮರಿಗೆ ಒಂದಕ್ಕಿಂತ ಹೆಚ್ಚಿನ ಪತ್ನಿಯನ್ನು ಹೊಂದುವುದು ಕಡ್ಡಾಯವಾಗಿದೆ ಎಂಬ ತಪ್ಪು ಕಲ್ಪನೆ ಹೊಂದಿದ್ದಾರೆ.

ಬಹುಪತ್ನಿಯರನ್ನು ಹೊಂದಲು ಅನುಮತಿ ನೀಡುವ ಕುರ್‌ಆನಿನ ಈ ಸೂಕ್ತವು ಉಹದ್ ಯುದ್ಧದ ನಂತರ ಅವತೀರ್ಣಗೊಂಡಿತ್ತು. ಉಹದ್ ಯುದ್ಧದಲ್ಲಿ ಅನೇಕ ಮುಸ್ಲಿಮ್ ಸೈನಿಕರು ಹತರಾಗಿ, ಅವರ ಪತ್ನಿಯರ ಮತ್ತು ಮಕ್ಕಳ ಪಾಲನೆ, ಪೋಷಣೆಗಾಗಿ ಏರ್ಪಾಟು ಮಾಡುವ ಅನಿವಾರ್ಯತೆ ಇದ್ದಿತು. ವಿವಾಹವು ಈ ಮಹಿಳೆಯರಿಗೆ ಮತ್ತು ಅನಾಥ ಮಕ್ಕಳಿಗೆ ರಕ್ಷಣೆ ನೀಡುವ ಒಂದು ಕ್ರಮವಾಗಿತ್ತು.

ಈ ಹಿನ್ನೆಲೆಯಲ್ಲಿ ಬಹುಪತ್ನಿತ್ವ ಪದ್ಧತಿಯು ಇಸ್ಲಾಮಿನ ಆಗಮನದ ನಂತರ ಆಚರಣೆಗೆ ಬಂದಿರುವುದಿಲ್ಲವೆಂದು, ಪುರಾತನ ಕಾಲದಿಂದಲೇ ಎಲ್ಲಾ ಸಮಾಜಗಳಲ್ಲಿಯೂ ಇದು ಅನುಸರಿಸಲ್ಪಡುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ. ಇಸ್ಲಾಮಿನಲ್ಲಿ ಬಹುಪತ್ನಿತ್ವವು ಕಡ್ಡಾಯ ನಿಯಮವಾಗಿರದೇ, ವಿಶೇಷ ಸಂದರ್ಭಗಳಲ್ಲಿ ನೀಡಲಾದ ಷರತ್ತು ಬದ್ಧ ಅನುಮತಿ ಮಾತ್ರವಾಗಿದೆ. ಇಸ್ಲಾಮ್ ಬಹುಪತ್ನಿತ್ವವನ್ನು ನಿಷೇಧಿಸಲಿಲ್ಲ. ಏಕೆಂದರೆ ಅದನ್ನು ನಿಷೇಧಿಸಿರುತ್ತಿದ್ದರೂ ಜನರು ಅದನ್ನು ಕಾನೂನು ಬಾಹಿರವಾಗಿ ಆಚರಿಸುವ ಪ್ರಮೇಯವಿರುತ್ತಿತ್ತು. ಇಸ್ಲಾಮ್ ಒಂದು ಪ್ರಾಯೋಗಿಕ ಧರ್ಮವಾಗಿದೆ. ಜನರ ನೈಸರ್ಗಿಕ ಬೇಡಿಕೆಗಳನ್ನು, ಜನರ ಇತಿಮಿತಿಗಳನ್ನು ಗಮನದಲ್ಲಿಟ್ಟು, ಅದು ಬಹುಪತ್ನಿತ್ವಕ್ಕೆ ಷರತ್ತು ಬದ್ಧ ಅನುಮತಿಯನ್ನು ನೀಡಿದೆ. ಇದನ್ನು ಮಾನವ ಕುಲದ ಒಳಿತಿಗಾಗಿಯೇ ನೀಡಲಾಗಿದೆ. ಸೃಷ್ಟಿಕರ್ತನಿಗಿಂತ ಹೆಚ್ಚು ಬಲ್ಲವರುಂಟೇ?

☆

# ಇಸ್ಲಾಮಿನಲ್ಲಿ ವಿಧವೆ ಮತ್ತು ವಿಚ್ಛೇದಿತ ಮಹಿಳೆಯರ ಪುನರ್ ವಿವಾಹ

ಇಸ್ಲಾಮ್ ಅನೇಕ ಕಾರಣಗಳಿಗಾಗಿ ಬಹುಪತ್ನಿತ್ವಕ್ಕೆ ಅನುಮತಿ ನೀಡಿದೆ. ಪ್ರಮುಖವಾಗಿ ವಿಧವೆಯರ ಮತ್ತು ವಿಚ್ಛೇದಿತ ಮಹಿಳೆಯರ ಪುನರ್ ವಿವಾಹಕ್ಕಾಗಿ ಇಸ್ಲಾಮ್ ಧರ್ಮವು ಬಹುಪತ್ನಿತ್ವವನ್ನು ಅನುಮತಿಸಿದೆ. ಈ ಕಾರಣಗಳು ಕೇವಲ ಊಹೆಗಳಲ್ಲ. ನಿತ್ಯ ಜೀವನದಲ್ಲಿ ನಾವು ವಿಧವೆಯರು, ವಿಚ್ಛೇದಿತ ಮಹಿಳೆಯರು ಪಡುವ ಬವಣೆಯನ್ನು ಕಾಣಬಹುದು. ಈ ಕಾರಣಗಳನ್ನು ಈಗ ಪರಿಶೀಲಿಸೋಣ.

ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾದ ಪ್ರಕಾರ, "ಸಾಮಾನ್ಯವಾಗಿ ನಿರ್ದಿಷ್ಟ ವಯಸ್ಸಿಗೆ ಮಹಿಳೆಯರಿಗಿಂತ ಪುರುಷರು ಸಾಯುವ ಸಂಖ್ಯೆ ಹೆಚ್ಚಿರುತ್ತದೆ".

ವಿವಿಧ ಕಾರಣಗಳಿಂದಾಗಿ, ಉದಾಹರಣೆಗೆ ಯುದ್ಧಗಳು, ಅಪಘಾತಗಳು, ನೈಸರ್ಗಿಕ ವಿಕೋಪಗಳು, ಮೊದಲಾದ ಕಾರಣಗಳಿಂದಾಗಿ ದಿನದಿಂದ ದಿನಕ್ಕೆ ವಿಧವೆಯರ ಮತ್ತು ನಿರಾಶ್ರಿತ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ.

ಪ್ರಥಮ ಜಾಗತಿಕ ಯುದ್ಧದಲ್ಲಿ (1914–18) ಸುಮಾರು 8 ಮಿಲಿಯ ಸೈನಿಕರು ಹತರಾಗಿದ್ದರು. ಎರಡನೆಯ ಜಾಗತಿಕ ಯುದ್ಧದಲ್ಲಿ (1939–45) ಸುಮಾರು 60 ಮಿಲಿಯ ಜನರು ಕೊಲ್ಲಲ್ಪಟ್ಟಿದ್ದರು ಅಥವಾ ಅಂಗವಿಕಲರಾಗಿದ್ದರು. ಇವರಲ್ಲಿ ಹೆಚ್ಚಿನವರು ಪುರುಷರಾಗಿದ್ದರು.

ಇರಾನ್ – ಇರಾಕ್ ಯುದ್ಧದಲ್ಲಿ (1979–1988) ಇರಾನಿನ 82000 ಮಹಿಳೆಯರು ಮತ್ತು ಇರಾಕ್‌ನ 1,00,000 ಮಹಿಳೆಯರು ವಿಧವೆಯಾಗಿದ್ದರು.

ಅಪಘಾತಗಳಲ್ಲಿಯೂ ಸಾವುಗಳು ಸಂಭವಿಸುತ್ತಿರುತ್ತವೆ. ಅಪಘಾತಗಳು

ಸಂಭವಿಸದ ಯಾವುದೇ ದೇಶವಿಲ್ಲ. ಸರ್ಕಾರದ ವರದಿಯ ಪ್ರಕಾರ 2009ರಲ್ಲಿ 3,60,000 ಜನರು ಸಾವನ್ನಪ್ಪಿದ್ದು, ಇದರಲ್ಲಿ 77% ಪುರುಷರಾಗಿದ್ದರು ಮತ್ತು 23% ಮಹಿಳೆಯರಾಗಿದ್ದರು.

ಪುರುಷರಿಗೆ ಸೆರೆಮನೆ ಶಿಕ್ಷೆಯ ಕಾರಣದಿಂದಲೂ ಅನೇಕ ಸ್ತ್ರೀಯರು ನಿರ್ಗತಿಕರಾಗುತ್ತಾರೆ ಅಮೇರಿಕಾದಲ್ಲಿ 2009ರಲ್ಲಿ 7,22,580 ಜನರಿಗೆ ಸೆರೆಮನೆ ಶಿಕ್ಷೆ ನೀಡಲಾಗಿತ್ತು. ಇವರಲ್ಲಿ 97% ಪುರುಷರಾಗಿದ್ದರು.

ಕೆಲ ಕೈದಿಗಳಿಗೆ ದೀರ್ಘಾವಧಿ ಸೆರೆಮನೆ ವಾಸದ ಶಿಕ್ಷೆಯನ್ನು ನೀಡಲಾಗುತ್ತದೆ. ಇನ್ನು ಕೆಲವರಿಗೆ ಮರಣ ದಂಡನೆಯನ್ನು ನೀಡಲಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ನಿರಾಶ್ರಿತರಾಗುವ ಮಹಿಳೆಯರಿಗೆ ಸೂಕ್ತ ರಕ್ಷಣೆಯ ವ್ಯವಸ್ಥೆ ಮಾಡುವುದು ಸಮಾಜದ ಕರ್ತವ್ಯವಾಗಿರುತ್ತದೆ.

ಮೇಲೆ ಉಲ್ಲೇಖಿಸಿರುವ ಸಂದರ್ಭಗಳಲ್ಲಿ ಇಸ್ಲಾಮ್ ವಿವಾಹವನ್ನು ಅನೂರ್ಜಿತಗೊಳಿಸುತ್ತದೆ. ಸೆರೆಮನೆ ವಾಸವು 3 ವರ್ಷಕ್ಕಿಂತ ಹೆಚ್ಚಿನದಾದರೆ ವಿವಾಹವು ಅನೂರ್ಜಿತಗೊಳ್ಳುತ್ತದೆ. ಈ ಕಾರಣಗಳಿಂದ ಪ್ರಭಾವಿತರಾದ ಮಹಿಳೆಯರಿಗೆ ಕಾನೂನು ಬದ್ಧವಾಗಿ ಹೊಸ ಸಂಗಾತಿಯನ್ನು ಏರ್ಪಾಟು ಮಾಡಲಾಗುತ್ತದೆ. ಈ ರೀತಿ ಬಹುಪತ್ನಿತ್ವ ಪದ್ಧತಿಯು ಇಂತಹ ಸ್ತ್ರೀಯರ ರಕ್ಷಣೆಗೆ ಸಹಾಯಕವಾಗುತ್ತದೆ.

ಯಾವುದೇ ಸಮಾಜ ಬಹುಪತ್ನಿತ್ವವನ್ನು ನಿಷೇಧಿಸಿದರೆ, ಇಂತಹ ಮಹಿಳೆಯರ ಪಾಡು ಏನಾಗುತ್ತದೆ? ಅವರ ರಕ್ಷಣೆಯನ್ನು ಯಾರು ಮಾಡಬೇಕು? ಅವರ, ಅವರ ಮಕ್ಕಳ ಪಾಲನೆ ಪೋಷಣೆ ಯಾರು ಮಾಡುವರು? ಈ ಮಹಿಳೆಯರ ನೈಸರ್ಗಿಕ ಬೇಡಿಕೆಗಳ ಪೂರೈಕೆ ಹೇಗೆ ಸಾಧ್ಯವಾಗುತ್ತದೆ? ಪ್ರತಿಯೋರ್ವ ಮಹಿಳೆ ತನ್ನ ರಕ್ಷಣೆಗಾಗಿ, ತನ್ನ ಪ್ರಾಕೃತಿಕ ಕಾಮಾಸಕ್ತಿಯ ಪೂರೈಕೆಗಾಗಿ ಪತಿಯನ್ನು ಅಪೇಕ್ಷಿಸುತ್ತಾಳೆ. ಪತಿಯು ಇಲ್ಲದಿದ್ದರೆ, ಆಕೆಯು ಅನೈತಿಕ ಮಾರ್ಗವನ್ನು ಕಂಡುಕೊಳ್ಳಲು ನಿರ್ಬಂಧಿತಳಾಗುತ್ತಾಳೆ ಅಥವಾ ಮನೋರೋಗಿಯಾಗುತ್ತಾಳೆ. ಈ ರೀತಿ ಸಮಾಜ ಅನೇಕ ಸಮಸ್ಯೆಗಳಿಗೆ ಗುರಿಯಾಗುತ್ತದೆ.

ಮಹಿಳೆಯರ ನೈಸರ್ಗಿಕ ಬೇಡಿಕೆಗಳು ಪೂರೈಕೆಯಾಗಲೇ ಬೇಕು. ತನ್ನನ್ನು ಪ್ರೀತಿಸುವವರು, ತನ್ನ ಬಗ್ಗೆ ಕಾಳಜಿ ಹೊಂದಿದವರು ಇರಬೇಕೆಂದು ಪ್ರತಿಯೋರ್ವ ಮಹಿಳೆಯೂ ಬಯಸುತ್ತಾಳೆ. ಅವಳ ಈ ಬಯಕೆಯನ್ನು ಈಡೇರಿಸಲೇ ಬೇಕು. ಇಂತಹ ಪರಿಸ್ಥಿತಿಗಳಲ್ಲಿ ಮಹಿಳೆ ತನ್ನ ಪ್ರಕೃತಿಯನ್ನು ಬದಲಾಯಿಸಿಕೊಳ್ಳುವುದಿಲ್ಲ ಅಥವಾ ಆಕೆ ದೇವತೆಯಂತೆ ವರ್ತಿಸುವುದೂ ಇಲ್ಲ. ಇತರರಂತೆ ಬದುಕನ್ನು ಅಸ್ವಾದಿಸುವ ಹಕ್ಕು ತಮಗೂ ಇದೆ ಎಂದು ಮಹಿಳೆಯರು ಪ್ರತಿಪಾದಿಸುತ್ತಾರೆ.

ಕಾನೂನುಬದ್ಧ ರೀತಿಯಲ್ಲಿ ಇದನ್ನು ಪಡೆಯಲು ಸಾಧ್ಯವಾಗದಿದ್ದರೆ, ಮಹಿಳೆ ಅನೈತಿಕ ಮಾರ್ಗಗಳನ್ನು ಅನುಸರಿಸಲು ನಿರ್ಬಂಧಿತಳಾಗುತ್ತಾಳೆ. ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ ಪುರುಷರ ಆಸರೆ ಇಲ್ಲದೇ ಜೀವನ ಸಾಗಿಸಬಲ್ಲರು.

ಇಂತಹ ಪರಿಸ್ಥಿತಿಗಳಲ್ಲಿ ಮಹಿಳೆ ಮನೋರೋಗಕ್ಕೆ ತುತ್ತಾಗಬಹುದು ಅಥವಾ ಅನೈತಿಕ ಮಾರ್ಗಗಳನ್ನು ಅನುಸರಿಸಿ ಸಮಾಜಕ್ಕೆ ಮಾರಕವಾಗಿ ಪರಿಣಮಿಸಬಹುದು.

ಪುರಾತನ ಕಾಲದಲ್ಲಿ ಪತಿ ನಿಧನಹೊಂದಿದಾಗ, ಮಹಿಳೆಯನ್ನು ಒಂದು ಸೊತ್ತಿನಂತೆ, ಪತಿಯ ಸಹೋದರನಿಗೆ ಅಥವಾ ಆಕೆಯ ಮಲ ಮಕ್ಕಳಿಗೆ ನೀಡಲಾಗುತ್ತಿತ್ತು. ಅವರು ಆಕೆಯೊಂದಿಗೆ ಕ್ರೂರ ರೀತಿಯಲ್ಲಿ ವರ್ತಿಸುತ್ತಿದ್ದರು. ಭಾರತೀಯ ಸಮಾಜದಲ್ಲಿ 'ಸತಿ ಸಹಗಮನ' ಪದ್ಧತಿ ಆಚರಣೆಯಲ್ಲಿತ್ತು. ವಿಧವೆ, ವಿಚ್ಛೇದಿತ ಮಹಿಳೆ ಜೀವಿಸಬೇಕಿದ್ದರೆ, ಆಕೆ ಏಕಾಂತ ಜೀವನವನ್ನು ಯಾವುದೇ ಆಡಂಬರವಿಲ್ಲದೇ ನಡೆಸಬೇಕಿತ್ತು.

ಇಸ್ಲಾಮ್ ವಿಧವೆಗೆ ಶೋಕಾಚರಣೆಯ ಅವಧಿ ನಾಲ್ಕು ತಿಂಗಳು ಹತ್ತು ದಿನವೆಂದು ನಿಗದಿಪಡಿಸಿದೆ. ಇದಕ್ಕೆ "ಇದ್ದತ್" ವೆನ್ನುತ್ತಾರೆ. ಇದ್ದತ್ ಅವಧಿಯ ನಂತರ ಮಹಿಳೆ ಸಾಮಾನ್ಯ ಜೀವನವನ್ನು ನಡೆಸಬಹುದು ಮತ್ತು ಪುನರ್ ವಿವಾಹವನ್ನು ಮಾಡಿಕೊಳ್ಳಬಹುದು.

> "........... ನಿಮ್ಮಲ್ಲಿ ಒಂಟಿಯಾಗಿರುವವರ ಮತ್ತು ನಿಮ್ಮ ದಾಸ
> – ದಾಸಿಯರಲ್ಲಿ ಸಜ್ಜನರಾಗಿರುವವರ ವಿವಾಹ ಮಾಡಿ ಬಿಡಿ"
> (ಪವಿತ್ರ ಕುರ್‌ಆನ್ 24:32)

☆

# ವಿವಾಹದಲ್ಲಿ ಮಹಿಳೆಯ ಸಮ್ಮತಿ

ಇಸ್ಲಾಮ್ ಧರ್ಮದಲ್ಲಿ ವಿವಾಹ ಸಿಂಧುವಾಗಬೇಕಿದ್ದರೆ, ಮಹಿಳೆಯ ಸಮ್ಮತಿ ಪಡೆಯುವುದು ಕಡ್ಡಾಯವಾಗಿದೆ. ಮಹಿಳೆಯ ಸಮ್ಮತಿ ಪಡೆಯದೇ ವಿವಾಹ ಏರ್ಪಟ್ಟರೆ, ಈ ವಿವಾಹವು ಸಿಂಧುವಲ್ಲ. ಅದೇ ರೀತಿ ಮಹಿಳೆಯನ್ನು ಒತ್ತಾಯಿಸಿ, ವಿವಾಹ ಮಾಡಿದರೆ, ಇಂತಹ ವಿವಾಹಗಳೂ ಸಿಂಧುವಲ್ಲ.

"ಅವಿವಾಹಿತ ಕನ್ಯೆಯ ಅನುಮತಿ ತೆಗೆದುಕೊಳ್ಳುವವರೆಗೆ ಆಕೆಯ ವಿವಾಹವನ್ನು ಮಾಡಬಾರದು" ಎಂಬುದು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ನಿಲುವು ಆಗಿತ್ತು.

ಒಮ್ಮೆ ಓರ್ವ ಯುವತಿ ಪ್ರವಾದಿ ಬಳಿಗೆ ಬಂದು ತನ್ನ ತಂದೆ ತನ್ನ ಇಚ್ಛೆಗೆ ವಿರುದ್ಧವಾಗಿ ವಿವಾಹ ಮಾಡಿರುವುದಾಗಿ ದೂರು ನೀಡಿದಳು. ಇದನ್ನು ಆಲಿಸಿದ ಪ್ರವಾದಿ, ಆಕೆಗೆ ಇಚ್ಛೆ ಇದ್ದರೆ ವಿವಾಹ ಬಂಧನದಲ್ಲಿ ಆಕೆ ಮುಂದುವರಿಯಬಹುದು, ಇಲ್ಲದಿದ್ದಲ್ಲಿ ವಿವಾಹ ಸಂಬಂಧವನ್ನು ಮುರಿಯಬಹುದೆಂದು ತಿಳಿಸಿದರು.

ಅಬ್ದುಲ್ಲಾ ಬಿನ್ ಅಬ್ಬಾಸ್ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಒಂದು ಘಟನೆಯನ್ನು ವರದಿ ಮಾಡಿದ್ದಾರೆ. ಕರಿಯ ಗುಲಾಮರಾಗಿದ್ದ ಮುಗೀತ್‌ರ ವಿವಾಹ ಬುರೈರ: ಹೆಸರಿನ ಮಹಿಳೆಯೊಂದಿಗೆ ಆಗಿತ್ತು. ಮುಗೀತ್ ತಮ್ಮ ಪತ್ನಿಯನ್ನು ಬಹಳ ಪ್ರೀತಿಸುತ್ತಿದ್ದರು. ಆದರೆ ಬುರೈರಾಃರಿಗೆ ಮುಗೀತ್ ಸ್ವಲ್ಪವೂ ಇಷ್ಟವಿರಲಿಲ್ಲ. ಒಮ್ಮೆ ದಾರಿಯಲ್ಲಿ ಬುರೈರಾಃ ನಡೆಯುತ್ತಿದ್ದರು ಮತ್ತು ಅವರ ಹಿಂದೆ ಮುಗೀತ್ ಅಳುತ್ತಾ ಆಕೆಯನ್ನು ಹಿಂಬಾಲಿಸುತ್ತಿದ್ದರು. ಪ್ರವಾದಿ ನುಡಿದರು

"ಓ ಅಬ್ಬಾಸ್! ಬುರೈರಾ:ರ ಮೇಲೆ ಮುಗೀತ್‌ರ ಪ್ರೀತಿಯನ್ನು, ಬುರೈರಾಃರಿಗೆ ಮುಗೀತ್‌ರ ಮೇಲೆ ದ್ವೇಷವನ್ನು ನೋಡಿ ನಿಮಗೆ ಆಶ್ಚರ್ಯವಾಗುವುದಿಲ್ಲವೇ?"

ಪ್ರವಾದಿ ಬುರೈರಾಃರಿಗೆ ತಮ್ಮ ಪತಿಯೊಂದಿಗೆ ವೈವಾಹಿಕ ಸಂಬಂಧ ಮುಂದುವರೆಸುವಂತೆ ತಿಳಿಸಿದರು. ಇದಕ್ಕೆ ಬುರೈರಾಃ "ಇದು ಅಲ್ಲಾಹನ ಆಜ್ಞೆಯೇ?" ಎಂದು ಪ್ರಶ್ನಿಸಿದರು. ಅದಕ್ಕೆ ಪ್ರವಾದಿ, "ಇಲ್ಲ, ಇದು ನನ್ನ ಸಲಹೆ ಮಾತ್ರ" ಎಂದರು. ಆಗ ಬುರೈರಾ:, "ನನಗೆ ಈ ಸಲಹೆ ಸ್ವೀಕಾರಾರ್ಹವಲ್ಲ" ಎಂದರು.

ಉಮರ್ ಆಡಳಿತಕಾಲದಲ್ಲಿ ಓರ್ವ ವಿಧವೆ ಉಮ್ಮೆ ಅಬಾನ್‌ರ ಮರು ವಿವಾಹದ ಪ್ರಸ್ತಾಪ ಬಂತು. ಆಕೆಯನ್ನು ವಿವಾಹವಾಗಲು ಅಲಿ, ಝುಬೈರ್, ತಲ್ಹಾ ಮತ್ತು ಸ್ವತಃ ಉಮರ್ ಮುಂದೆ ಬಂದರು. ಈ ನಾಲ್ವರೂ ವಿವಾಹಿತರಾಗಿದ್ದರು. ಆದರೆ ಈ ನಾಲ್ವರಲ್ಲಿ ಉಮ್ಮೆ ಅಬಾನ್, ತಲ್ಹಾರನ್ನು ವರಿಸಿದರು. ಖಲೀಫರಾಗಿದ್ದ ಉಮರ್‌ರ ಪ್ರಸ್ತಾಪವನ್ನು ತಿರಸ್ಕರಿಸಿದರು. ಉಮ್ಮೆ ಅಬಾನ್‌ರ ನಿರ್ಧಾರಕ್ಕೆ ಯಾರೂ ಚಕಾರವೆತ್ತಲಿಲ್ಲ.

ಇದು ಇಸ್ಲಾಮಿ ಸಾಮ್ರಾಜ್ಯದ ರಾಜಧಾನಿ ಮದೀನಾದಲ್ಲಿ ನಡೆದ ಘಟನೆ. ಉಮ್ಮೆ ಅಬಾನ್ ವರಿಸಲು ನಿರಾಕರಿಸಿದ ಪುರುಷರಲ್ಲಿ ಇಸ್ಲಾಮಿ ಸಾಮ್ರಾಜ್ಯದ ಖಲೀಫರಾಗಿದ್ದ ಉಮರ್ ಸಹ ಓರ್ವರು. ಆದರೆ ಈ ಘಟನೆಗೆ ಯಾರೂ ಆಶ್ಚರ್ಯ ವ್ಯಕ್ತಪಡಿಸಲಿಲ್ಲ. ಏಕೆಂದರೆ ವಿವಾಹದ ವಿಷಯದಲ್ಲಿ ಇಸ್ಲಾಮ್ ಮಹಿಳೆಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ. ಇದು ಆಕೆಯ ಹಕ್ಕಾಗಿದ್ದು, ಆಕೆಯ ಹಕ್ಕನ್ನು ಯಾರೂ ಹಿಂಪಡೆಯುವಂತಿಲ್ಲ. ಇಸ್ಲಾಮಿ ರಾಷ್ಟ್ರದ ಆಡಳಿತಗಾರನೂ, ಈ ಹಕ್ಕನ್ನು ನಿರಾಕರಿಸುವಂತಿಲ್ಲ.

ಇಸ್ಲಾಮ್ ನಾಲ್ಕು ಪತ್ನಿಯರನ್ನು ಹೊಂದಲು ನೀಡಿರುವ ಅನುಮತಿಯ ಅರ್ಥ, ನಾಲ್ಕು ಮಹಿಳೆಯರನ್ನು ಒತ್ತಾಯ ಪೂರ್ವಕವಾಗಿ ವಿವಾಹವಾಗಿ, ಮನೆಯಲ್ಲಿ ಕೂಡಿ ಹಾಕುವುದಲ್ಲ. ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸಮ್ಮತಿ ಇಲ್ಲದೇ ಆಕೆಯ ವಿವಾಹ ಮಾಡುವಂತಿಲ್ಲ. ಮಹಿಳೆಯ ಸಮ್ಮತಿಯೊಂದಿಗೆ ಮಾತ್ರ ಆಕೆಯನ್ನು ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಪತ್ನಿಯನ್ನಾಗಿಸಬಹುದು. ಹೀಗೆ ಮಹಿಳೆಯೇ ವಿವಾಹಕ್ಕೆ ಸಮ್ಮತಿಸಿದಾಗ, ಇಂತಹ ವಿವಾಹಗಳಿಗೆ ವಿರೋಧ ವ್ಯಕ್ತಪಡಿಸುವ ಕಾರಣವಿರುವುದಿಲ್ಲ.

ಇಸ್ಲಾಮ್ ಮಹಿಳೆಗೆ ಆಯ್ಕೆಯ ಸ್ವಾತಂತ್ರ್ಯ ನೀಡುತ್ತದೆ. ಆದರೆ ನವಕಾಲೀನ ಮಹಿಳಾ ಹಕ್ಕುಗಳ ಪ್ರತಿಪಾದಕರು ಮಹಿಳೆಯ ಆಯ್ಕೆಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸ ಬಯಸುತ್ತಾರೆ.

# 23

# ಪ್ರವಾದಿ ಮುಹಮ್ಮದ್‌ರ ಬಹುವಿವಾಹಗಳು

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಹೆಸರು ಪ್ರಸ್ತಾಪವಾದಾಗಲೆಲ್ಲಾ, ಕೆಲ ಜನರ ಕಣ್ಣಿನ ಮುಂದೆ ಅನೇಕ ಪತ್ನಿಯರನ್ನು ಹೊಂದಿರುವ ವ್ಯಕ್ತಿಯ ಚಿತ್ರ ಬರುತ್ತದೆ. ಮುಹಮ್ಮದ್‌ರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು, ಇದೊಂದು ತೊಡಕಾಗಿದೆ. ಅನಾವಶ್ಯಕವಾಗಿ ಕೆಲ ಜನರು ಮುಹಮ್ಮದ್‌ರ ಬಗ್ಗೆ ತಪ್ಪು ಅಭಿಪ್ರಾಯ ಪಡುತ್ತಾರೆ. ಇದು ಸಮಂಜಸವಲ್ಲ.

ಪ್ರವಾದಿ ಮುಹಮ್ಮದ್‌ರ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಕೆಲ ವಿಮರ್ಶಕರು ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ. ಈ ಅಧ್ಯಾಯದಲ್ಲಿ ಮುಹಮ್ಮದ್‌ರ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ನೀಡಲಾಗಿದೆ.

ಇಸ್ಲಾಮ್ ಧರ್ಮದಲ್ಲಿ ವಿವಾಹಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಒಂದು ಸ್ವಸ್ಥ ಸಮಾಜಕ್ಕೆ ಇದು ಅತ್ಯಾವಶ್ಯಕವಾಗಿದೆ.

ಮುಹಮ್ಮದ್ ತಮ್ಮ ಅತ್ಯುತ್ತಮ ಚಾರಿತ್ರ್ಯಕ್ಕೆ, ನಡವಳಿಕೆಗೆ, ಸತ್ಯತೆಗೆ, ಪ್ರಾಮಾಣಿಕತೆಗೆ ಪ್ರವಾದಿತ್ವದ ಮೊದಲೇ ಪ್ರಖ್ಯಾತರಾಗಿದ್ದರು. ಜನರು ಅವರಿಗೆ ಅಮೀನ್ (ಪ್ರಾಮಾಣಿಕ) ಮತ್ತು ಸಾದಿಕ್ (ಸತ್ಯ ಸಂಧ) ಎಂಬ ಬಿರುದನ್ನು ನೀಡಿದ್ದರು.

ಪ್ರಾಮಾಣಿಕ, ಮತ್ತು ನ್ಯಾಯವಂತ ವರ್ತಕ ಎಂದು ಪ್ರಖ್ಯಾತರಾಗಿದ್ದು. ಅನಾಥರ, ಬಡಬಗ್ಗರ, ದೀನದಲಿತರ, ವಿಧವೆಯರ ರಕ್ಷಕರಾಗಿದ್ದರು. ಸ್ನೇಹಮಯ ನಡವಳಿಕೆಯಿಂದಾಗಿ, ಎಲ್ಲಾ ಜನರ ಪ್ರೀತಿ, ವಿಶ್ವಾಸವನ್ನು ಗಳಿಸಿದ್ದರು.

ಮುಹಮ್ಮದ್ ತಮ್ಮ 25ನೇ ವಯಸ್ಸಿನಲ್ಲಿ ಖದೀಜಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ವಿವಾಹವಾದರು. ಖದೀಜಾ ಮುಹಮ್ಮದ್‌ರಿಗಿಂತ 15 ವರ್ಷ

ಹಿರಿಯರಾಗಿದ್ದರು ಮತ್ತು ಅವರೋರ್ವ ವಿಧವೆಯಾಗಿದ್ದರು. ಖದೀಜಾ ಕುಲೀನ ಮನೆತನಕ್ಕೆ ಸೇರಿದವರಾಗಿದ್ದು, ಸುಶೀಲೆಯಾಗಿದ್ದರು. ಅವರ ಉತ್ತಮ ಗುಣ ಮತ್ತು ನಡವಳಿಕೆಯಿಂದಾಗಿ ಹೆಸರು ವಾಸಿಯಾಗಿದ್ದರು. ವಿವಾಹ ಪ್ರಸ್ತಾಪವನ್ನು ಖದೀಜಾ, ಮುಹಮ್ಮದ್‌ರಿಗೆ ಕಳುಹಿಸಿದ್ದರು. ಅವರ ಉತ್ತಮ ಚಾರಿತ್ರ್ಯದ ಕಾರಣದಿಂದಲೇ, ಮುಹಮ್ಮದ್ ಅವರ ವಿವಾಹ ಪ್ರಸ್ತಾಪವನ್ನು ಸ್ವೀಕರಿಸಿದ್ದರು. ಮುಹಮ್ಮದ್ ಬಯಸಿದ್ದರೆ ಕಿರಿಯ ಪ್ರಾಯದ ಹೆಣ್ಣನ್ನು ವಿವಾಹವಾಗಬಹುದಿತ್ತು. ಆದರೆ ಮುಹಮ್ಮದ್ ತಮಗಿಂತ 15 ವರ್ಷ ಹಿರಿಯ ವಯಸ್ಸಿನ ಓರ್ವ ವಿಧವೆಯನ್ನು ತಮ್ಮ ಬಾಳಸಂಗಾತಿಯನ್ನಾಗಿ ಆರಿಸುತ್ತಾರೆ.

ಮುಹಮ್ಮದ್ ಖದೀಜಾರೊಂದಿಗೆ 25 ವರ್ಷ ವೈವಾಹಿಕ ಜೀವನವನ್ನು ನಡೆಸಿದರು. ಒಂದು ಮಗುವನ್ನು ಹೊರತುಪಡಿಸಿ, ಮುಹಮ್ಮದ್‌ರ ಎಲ್ಲಾ ಮಕ್ಕಳು ಖದೀಜಾರಿಂದಲೇ ಹುಟ್ಟಿದ್ದರು. ಖದೀಜಾ ರೊಂದಿಗಿನ ವೈವಾಹಿಕ ಜೀವನ ಬಹಳ ಸುಖಮಯ ಮತ್ತು ಸಂತೃಪ್ತಿಯ ಜೀವನವಾಗಿತ್ತು. ಖದೀಜಾ ಜೀವಂತವಿರುವವರೆಗೆ, ಮುಹಮ್ಮದ್ ಮರು ವಿವಾಹವಾಗಿರಲಿಲ್ಲ.

ಖದೀಜಾ ನಿಧನ ಹೊಂದಿದಾಗ ಪ್ರವಾದಿ ಬಹಳ ದುಃಖಿತರಾದರು. ಅವರು ದುಃಖವನ್ನು ನೋಡಿ ಅವರ ಮಿತ್ರರೋರ್ವರು ಅವರಿಗೆ ಮರು ವಿವಾಹವಾಗುವಂತೆ ಸಲಹೆ ನೀಡಿದ್ದರು. ಇದನ್ನು ಕೇಳಿ ಮುಹಮ್ಮದ್, "ಖದೀಜಾರ ನಂತರ ವಿವಾಹವನ್ನು ಯಾರು ಮಾಡಬಯಸುತ್ತಾರೆ?" ಎಂದು ಪ್ರಶ್ನಿಸಿದರು.

## ಖದೀಜಾರ ನಿಧನ

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಮತ್ತು ಅವರ ಕುಟುಂಬದವರ ಮೂರು ವರ್ಷದವರೆಗಿನ ಮಕ್ಕಾದ ಅಬೂ ತಾಲಿಬ್ ಕಣಿವೆಯಲ್ಲಿ ಬಹಿಷ್ಕಾರ ಖದೀಜಾರ ಆರೋಗ್ಯದ ಮೇಲೆ ಬಹಳ ಪರಿಣಾಮವನ್ನು ಬೀರಿತು. ಅವರ ಆರೋಗ್ಯವು ಕೆಟ್ಟಿತು. ಕ್ರಿ.ಶ. 619 ರಲ್ಲಿ ಖದೀಜಾ ನಿಧನ ಹೊಂದಿದರು. ಖದೀಜಾರ ನಿಧನದಿಂದ ಮುಹಮ್ಮದ್ ಬಹಳ ದುಃಖಿತರಾದರು.

ಮುಹಮ್ಮದ್ ರವರ ಮೇಲೆ ಕುರೈಶರ ಕಿರುಕುಳ ಮುಂದುವರೆದಿತ್ತು. ಮಕ್ಕಳು ಚಿಕ್ಕ ಪ್ರಾಯದವರಾಗಿದ್ದು, ಅವರ ಪೋಷಣೆಯನ್ನು ನೋಡಿಕೊಳ್ಳುವವರಾರೂ ಇರಲಿಲ್ಲ. ಮುಹಮ್ಮದ್ ಇದರಿಂದಾಗಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗಿತ್ತು. ಮುಹಮ್ಮದ್‌ರ ಕಷ್ಟಗಳನ್ನು ನೋಡಿ ಅವರ ಆಪ್ತರಿಷ್ಟರು, ಅವರಿಗೆ ಮಕ್ಕಳನ್ನು ನೋಡಿಕೊಳ್ಳಲು ಓರ್ವ ವಿಧವೆಯನ್ನು ಮತ್ತು ಅವರ ನೆಮ್ಮದಿ ಮತ್ತು ಸುಖ ಸಂತೋಷಕ್ಕಾಗಿ ಓರ್ವ ಕುಮಾರಿಯನ್ನು ವಿವಾಹಮಾಡಿಕೊಳ್ಳಬೇಕೆಂದು ಸಲಹೆ

ನೀಡಿದರು. ಅದರಂತೆ ಮುಹಮ್ಮದ್, ಸೌದಃ ಮತ್ತು ಆಯಿಷಾರನ್ನು ಒಂದೇ ವರ್ಷದಲ್ಲಿ ವಿವಾಹವಾದರು.

ಈ ವಿವಾಹಗಳಲ್ಲಿ ಪ್ರವಾದಿರ ಮಿತ್ರರು ಅವರಿಗೆ ನೆರವಾದರು. ಪ್ರವಾದಿರ ಮಕ್ಕಳ ಪಾಲನೆ ಪೋಷಣೆಗಾಗಿ ಓರ್ವ ಪೋಷಕರ ಮತ್ತು ಅವರ ವೈಯಕ್ತಿಕ ಜೀವನಕ್ಕಾಗಿ ಓರ್ವ ಬಾಳಸಂಗಾತಿಯ ಅಗತ್ಯತೆ ಇತ್ತು. ಇದರಲ್ಲಿ ಯಾವುದೇ ವಿಶೇಷತೆ ಇರಲಿಲ್ಲ.

## ಸೌದಃ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಎರಡನೆಯ ಪತ್ನಿ ಸೌದಃ ವಿಧವೆಯಾಗಿದ್ದರು ಮತ್ತು 40 ವರ್ಷ ಪ್ರಾಯವನ್ನು ಮೀರಿದವರಾಗಿದ್ದರು. ಅವರು ಮತ್ತು ಅವರ ಮೊದಲ ಪತಿ ಆರಂಭಿಕ ಕಾಲದಲ್ಲಿಯೇ ಇಸ್ಲಾಮ್ ಸ್ವೀಕರಿಸಿದ್ದರು. ಪ್ರವಾದಿರ ಸಲಹೆ ಮೇರೆಗೆ ಇಥಿಯೋಪಿಯಾಕ್ಕೆ ವಲಸೆ ಹೋಗಿದ್ದರು. ಅಲ್ಲಿಂದ ಹಿಂತಿರುಗಿದ ನಂತರ ಅವರ ಪತಿ ನಿಧನ ಹೊಂದಿದ್ದರು. ಸೌದ:ರಿಗೆ ಆಸರೆ ನೀಡುವ ಇರಾದೆಯಿಂದ ಪ್ರವಾದಿ ಅವರನ್ನು ವಿವಾಹವಾದರು. ಸೌದ:ರಿಗೆ ಮೊದಲ ಪತಿಯಿಂದ ಒಂದು ಮಗುವಿತ್ತು. ಪ್ರವಾದಿರಿಂದ ಅವರಿಗೆ ಯಾವ ಮಕ್ಕಳೂ ಆಗಲಿಲ್ಲ.

## ಆಯಿಷಾ

ಆಯಿಷಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಅತ್ಯಂತ ಆಪ್ತ ಸ್ನೇಹಿತ ಅಬೂಬಕರ್ ಸಿದ್ದೀಕ್‌ರ ಪುತ್ರಿಯಾಗಿದ್ದರು. ಅಬೂಬಕರ್ ಮುಹಮ್ಮದ್‌ರನ್ನು ಅತ್ಯಂತ ಕ್ಲಿಷ್ಟ ಸಮಯದಲ್ಲಿ ಸಹಾಯ ಮಾಡಿದ್ದರು. ಅಬೂಬಕರ್ ಸಿದ್ದೀಕ್‌ರೊಂದಿಗೆ ಸಂಬಂಧವನ್ನು ಸುದೃಢಗೊಳಿಸಲಿಕ್ಕಾಗಿ ಮುಹಮ್ಮದ್ ಆಯಿಷಾರನ್ನು ವಿವಾಹವಾದರು. ಆಯಿಷಾ ಬಹಳ ಬುದ್ಧಿವಂತೆಯಾಗಿದ್ದರು. ಅವರ ಜ್ಞಾಪನಾ ಶಕ್ತಿ ಅಮೋಘವಾಗಿತ್ತು. ಆಯಿಷಾರ ಮನೆತನವು ಕುಲೀನತೆಗೆ ಮತ್ತು ಬುದ್ಧಿವಂತಿಕೆಗೆ ಪ್ರಖ್ಯಾತವಾಗಿತ್ತು. ಆಯಿಷಾರ ವಿವಾಹದ ಸಮಯದಲ್ಲಿ ವಯಸ್ಸು ಚರ್ಚೆಯ ವಿಷಯವಾಗಿದೆ. ಇತ್ತೀಚೆಗಿನ ಅಧ್ಯಯನಗಳು ವಿವಾಹದ ಸಮಯದಲ್ಲಿ ಆಯಿಷಾರ ವಯಸ್ಸು ಹನ್ನೊಂದು ಅಲ್ಲ, ಹದಿನೈದು ಎಂದು ತಿಳಿಸುತ್ತವೆ.

ಪ್ರವಾದಿ ಮುಹಮ್ಮದ್‌ರ ಆಯಿಷಾ ರೊಂದಿಗಿನ ಸಂಬಂಧ ಇತರ

ಪತ್ನಿಯರಿಗಿಂತ ಭಿನ್ನವಾಗಿತ್ತು. ದಾಂಪತ್ಯ ಸಂಬಂಧಕ್ಕಿಂತ ಹೆಚ್ಚಾಗಿ ಅದು ಬೌದ್ಧಿಕ ಸಂಬಂಧವಾಗಿತ್ತು. ಆಯಿಷಾ ಪ್ರವಾದಿರೊಂದಿಗೆ ವಾಗ್ವಾದ ಮಾಡುತ್ತಿದ್ದರು ಮತ್ತು ಹೆಚ್ಚಾಗಿ ಮಾತನಾಡುತ್ತಿದ್ದರು. ಪತ್ನಿಗಿಂತ ಹೆಚ್ಚಾಗಿ ಪ್ರವಾದಿರ ವಿದ್ಯಾರ್ಥಿನಿಯಾಗಿದ್ದರು. ಅವರು ಪ್ರವಾದಿರೊಂದಿಗಿ ಇರುತ್ತಿದ್ದ ಸಂದರ್ಭದಲ್ಲಿಯೇ ಕುರ್‌ಆನಿನ ಹೆಚ್ಚಿನ ಸೂಕ್ತಗಳು ಅವತೀರ್ಣಗೊಂಡಿವೆ. ಇದಕ್ಕಾಗಿ ಆಯಿಷಾ ಹೆಮ್ಮೆ ಪಡುತ್ತಿದ್ದರು. ಮತ್ತು ಇದನ್ನು ಅಲ್ಲಾಹನ ವತಿಯಿಂದ ಅನುಗ್ರಹವೆನ್ನುತ್ತಿದ್ದರು. ಪ್ರವಾದಿರ ನಿಕಟ ಸಂಪರ್ಕದಲ್ಲಿ ಅವರು ಇರುತ್ತಿದ್ದರಿಂದ ಅನೇಕ ವಿಷಯಗಳ ಬಗ್ಗೆ, ವಿಶೇಷವಾಗಿ ಅತ್ಯಂತ ವೈಯಕ್ತಿಕ ವಿಷಯಗಳ ಬಗ್ಗೆ ಅವರು ತಿಳಿದುಕೊಂಡಿದ್ದರು. ಇದನ್ನು ಸಮುದಾಯಕ್ಕೆ ತಲುಪಿಸುವ ಕೆಲಸವನ್ನು ಅವರು ಮಾಡಬಲ್ಲರು ಎಂಬುದನ್ನು ಪ್ರವಾದಿ ಅರಿತಿದ್ದರು. ಇಸ್ಲಾಮಿನ ಬಗ್ಗೆ ಅರ್ಧ ಭಾಗದಷ್ಟು ಜ್ಞಾನವನ್ನು ಆಯಿಷಾರಿಂದ ಪಡೆಯುವಂತೆ ಪ್ರವಾದಿ ಸಮುದಾಯಕ್ಕೆ ಸಲಹೆ ನೀಡಿದ್ದರು. ಪ್ರವಾದಿರ ದೂರದೃಷ್ಟಿತ್ವವು ನಿಜವಾಗಿ ಪರಿಣಮಿಸಿತು.ಪ್ರವಾದಿರ ನಿಧನದ ನಂತರ 45 ವರ್ಷ ಗಳವರೆಗೆ ಅವರು ಜೀವಂತವಿದ್ದರು. ಈ ಅವಧಿಯಲ್ಲಿ ಅವರು 2210 ಪ್ರವಾದಿರ ವಚನಗಳನ್ನು ವರದಿ ಮಾಡಿದ್ದಾರೆ. ಪ್ರವಾದಿರ ಅನುಯಾಯಿಗಳು ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಆಯಿಷಾರ ಬಳಿ ಬರುತ್ತಿದ್ದರು.

ಮುಹಮ್ಮದ್ ಸೌದ: ಮತ್ತು ಆಯಿಷಾ ರೊಂದಿಗೆ 5–6 ವರ್ಷಗಳವರೆಗೆ ಬಾಳುವೆ ಮಾಡಿದರು. ಅವರು 56 ವರ್ಷ ಪ್ರಾಯದವರಾಗುವವರೆಗೆ ಮರು ವಿವಾಹ ಮಾಡಿಕೊಳ್ಳಲಿಲ್ಲ. 56 ವರ್ಷ ಪ್ರಾಯದಿಂದ 60 ವರ್ಷದ ಪ್ರಾಯದ ನಡುವೆ 9 ವಿವಾಹಗಳನ್ನು ಮಾಡಿಕೊಂಡರು. ಅವರ ಜೀವನದ ಕೊನೆಯ 3 ವರ್ಷಗಳಲ್ಲಿ ಪ್ರವಾದಿ ವಿವಾಹ ಮಾಡಿಕೊಳ್ಳಲಿಲ್ಲ.

## ಹಫ್ಸಾ

ಪ್ರವಾದಿ (ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ನಾಲ್ಕನೆಯ ಪತ್ನಿ ಹಫ್ಸಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ), ಅವರ ಆಪ್ತ ಸ್ನೇಹಿತ ಉಮರ್‌ರ ಪುತ್ರಿಯಾಗಿದ್ದರು. ಬದ್ರ್ ಯುದ್ಧದಲ್ಲಿ ಅವರ ಪತಿ ಹುತಾತ್ಮರಾಗಿದ್ದರು. ಉಮರ್ ಹಫ್ಸಾರನ್ನು ಬಹಳ ಪ್ರೀತಿಸುತ್ತಿದ್ದರು. ಹಫ್ಸಾ ವಿಧವೆಯಾದಾಗ, ಅವರನ್ನು ವಿವಾಹ ಮಾಡಿಕೊಳ್ಳುವಂತೆ ಅವರು ಅಬೂಬಕರ್ ಸಿದ್ದೀಕ್, ಉಸ್ಮಾನ್‌ರನ್ನು ಕೋರಿಕೊಂಡರು. ಆದರೆ ಹಫ್ಸಾ ಮುಂಗೋಪಿಯಾಗಿದ್ದ ಕಾರಣ ಇವರೀರ್ವರೂ ನಿರಾಕರಿಸಿದರು. ಉಮರ್ ಇದರಿಂದಾಗಿ ಬಹಳ ದುಃಖಿತರಾಗಿರುವುದನ್ನು ಕಂಡು ಪ್ರವಾದಿ ಮುಹಮ್ಮದ್ ಹಫ್ಸಾರನ್ನು ವಿವಾಹವಾಗಲು ಮುಂದಾದರು.

ಹಫ್ಸಾ ಬಹಳ ಮುಂಗೋಪಿಯಾಗಿದ್ದರು. ಈ ವಿಷಯವನ್ನು ಉಮರ್ ದಾಖಲಿಸಿದ್ದಾರೆ. ಉಮರ್‌ರ ಮಾತುಗಳಲ್ಲಿಯೇ ಹೇಳುವುದಾದರೆ,

"ಒಮ್ಮೆ ಯಾವುದೋ ವಿಷಯಕ್ಕೆ ನನ್ನ ಪತ್ನಿ ನನ್ನೊಂದಿಗೆ ವಾಗ್ವಾದ ಮಾಡಿದಳು. ನನಗೆ ಅದನ್ನು ಸಹಿಸಲಾಗದೇ, 'ನನಗೆ ಸಲಹೆ ನೀಡಲು ನೀನು ಯಾರು?' ಎಂದು ಪ್ರಶ್ನಿಸಿದೆ. ನನ್ನ ಪತ್ನಿ ಉತ್ತರಿಸಿದಳು.

"ನೀವು ಕ್ಷುಲ್ಲಕ ವಿಷಯದ ಬಗ್ಗೆಯೂ ನನಗೆ ಮಾತಾಡಲು ಬಿಡುವುದಿಲ್ಲ. ಆದರೆ ನಿಮ್ಮ ಮಗಳು ಹಫ್ಸಾ, ಪ್ರವಾದಿರೊಂದಿಗೆ ವಾಗ್ವಾದ ಮಾಡುತ್ತಾಳೆ. ಇದನ್ನು ಕೇಳಿ ನಾನು ನೇರವಾಗಿ ಹಫ್ಸಾಳ ಮನೆ ತಲುಪಿ, ಅವಳನ್ನು ಪ್ರಶ್ನಿಸಿದೆ".

"ನೀನು ಪ್ರವಾದಿ ರೊಂದಿಗೆ ಕೋಪದಿಂದ ಮಾತಾಡುವುದು ನಿಜವೇ? ಹಫ್ಸಾ "ಹೌದು ನಾನು ಪ್ರವಾದಿ ರೊಂದಿಗೆ ಕೋಪದಿಂದ ಮಾತಾಡುತ್ತೇನೆ" ಎಂದು ಉತ್ತರಿಸಿದರು. ನಾನು ಹೇಳಿದೆ. "ಈ ರೀತಿ ಮಾಡದಂತೆ ನಾನು ನಿನ್ನನ್ನು ಎಚ್ಚರಿಸುತ್ತೇನೆ ಅನ್ಯಥಾ ಅಲ್ಲಾಹ್ ನಿನ್ನನ್ನು ಶಿಕ್ಷಿಸುವನು".

# ಝೈನಬ್

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಐದನೆಯ ಪತ್ನಿ ಝೈನಬ್, ಪ್ರಖ್ಯಾತ ಹವಾಝಿನ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರು ವಿಧವೆಯಾಗಿದ್ದರು. ಪ್ರವಾದಿ ಅವರನ್ನು ವಿವಾಹವಾದಾಗ ಅವರಿಗೆ 60 ವರ್ಷ ಪ್ರಾಯವಾಗಿತ್ತು. ಅವರು ಬಡವರು, ನಿರ್ಗತಿಕರಿಗೆ ಬಹಳ ಅನುಕಂಪ ತೋರಿಸುತ್ತಿದ್ದರು. ಅವರನ್ನು "ದುರ್ಬಲರ ತಾಯಿ" ಎಂದು ಕರೆಯಲಾಗುತ್ತಿತ್ತು. ಪ್ರವಾದಿರೊಂದಿಗೆ ವಿವಾಹದ ಮೂರು ತಿಂಗಳ ನಂತರ ಅವರು ನಿಧನ ಹೊಂದಿದರು.

# ಉಮ್ಮೆ ಸಲ್ಮಾಃ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಆರನೇಯ ಪತ್ನಿ ಸಲ್ಮಾಃ ಅವರೂ ವಿಧವೆಯಾಗಿದ್ದರು. ಅವರು ಬನು ಫಿರಾಸ್ ಗೋತ್ರದ ಕುಲೀನ ಕುಟುಂಬಕ್ಕೆ ಸೇರಿದವರಾಗಿದ್ದರು. ಇಸ್ಲಾಮ್ ಅನ್ನು ಸ್ವೀಕರಿಸಿದ ಆರಂಭಿಕ ಕಾಲದ ಮುಸ್ಲಿಮರಾಗಿದ್ದರು. ಮದೀನಾ ಹಿಜ್ರತ್ ಸಂದರ್ಭದಲ್ಲಿ ಕುರೈಶರು ಅವರಿಗೆ ಅವರ ಮಗುವಿನೊಂದಿಗೆ ಮದೀನಾ ತೆರಳಲು ಬಿಡದ ಕಾರಣ, ಅವರಿಗೆ ಮದೀನಾ ಹೋಗಲು ಸಾಧ್ಯವಾಗಿರಲಿಲ್ಲ. ನಂತರ ಹೇಗೋ ತಪ್ಪಿಸಿಕೊಂಡು ಮದೀನಾ ಸೇರಿದರು. ಆದರೆ ಸ್ವಲ್ಪ ಕಾಲದಲ್ಲಿಯೇ ಅವರ ಪತಿ ಹುತಾತ್ಮರಾದರು. ಆಗ ಅವರಿಗೆ ನಾಲ್ವರು ಮಕ್ಕಳಿದ್ದರು ಮತ್ತು ಅವರು ಗರ್ಭವತಿಯಾಗಿದ್ದರು. ಪತಿಯ ನಿಧನದಿಂದ ಮತ್ತು

ನಾಲ್ವರು ಮಕ್ಕಳಿದ್ದ ಕಾರಣದಿಂದ ಅಸಹಾಯಕರಾಗಿದ್ದರು. ಪ್ರವಾದಿ ಈ ಕಾರಣದಿಂದ ಅವರನ್ನು ವಿವಾಹವಾದರು.

ಉಮ್ಮೆ ಸಲ್ಮಾಃ ಪ್ರವಾದಿರ ಪ್ರಸ್ತಾವನೆಯನ್ನು ಸ್ವೀಕರಿಸಲು ಆರಂಭದಲ್ಲಿ ಹಿಂಜರಿದರು. ಅವರ ಮೃತ ಪತಿಯಿಂದ ಅವರಿಗೆ 4 ಮಕ್ಕಳಿದ್ದರು. ಪ್ರವಾದಿ ಅವರ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಪ್ರವಾದಿರ ಮಾನವೀಯತೆಯಿಂದ ಪ್ರಭಾವಿತರಾಗಿ ಉಮ್ಮೆ ಸಲ್ಮಾಃ ಪ್ರವಾದಿ ರನ್ನು ವಿವಾಹವಾದರು.

56 ವರ್ಷ ಪ್ರಾಯದ ಪ್ರವಾದಿರಿಗೆ, ಅನುಕಂಪದ ಹೊರತು ನಾಲ್ಕು ಮಕ್ಕಳ ವಿಧವೆಯನ್ನು ವಿವಾಹವಾಗುವ ಕಾರಣವಾದರೂ ಇದ್ದೀತೆ? ಇದಲ್ಲದೇ, ಸಲ್ಮಾಃ ಮಕ್ಕಾದ ಅತ್ಯಂತ ಪ್ರಬಲ ಗೋತ್ರ ಬನೂ ಮಕ್‌ಝೂಮ್‌ಗೆ ಸೇರಿದವರಾಗಿದ್ದು, ಈ ಗೋತ್ರವು ಆಗ ಇಸ್ಲಾಮಿನ ಕಡು ವೈರಿಯಾಗಿತ್ತು. ಅವರನ್ನು ವಿವಾಹವಾಗುವುದರಿಂದ ಬನೂ ಮಕ್‌ಝೂಮ್ ಗೋತ್ರ ಇಸ್ಲಾಮ್‌ಗೆ ಹತ್ತಿರವಾಗುವ ಸಾಧ್ಯತೆ ಇತ್ತು. ಉಮ್ಮೆ ಬಹಳ ದೈವಭಕ್ತೆಯಾಗಿದ್ದರು. ಪ್ರತಿ ತಿಂಗಳು ಮೂರು ದಿನಗಳ ಉಪವಾಸ ವ್ರತವನ್ನು ಆಚರಿಸುತ್ತಿದ್ದರು. ಕೆಲವೊಮ್ಮೆ ಇಡಿಯ ರಾತ್ರಿಯನ್ನು ಆರಾಧನೆಯಲ್ಲಿ ಕಳೆಯುತ್ತಿದ್ದರು. ಪ್ರವಾದಿರ ಮಾತುಗಳನ್ನು ಬಹಳ ಗೌರವದಿಂದ ಆಲಿಸುತ್ತಿದ್ದರು.

## ಝೈನಬ್

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಏಳನೆಯ ಪತ್ನಿ ಝೈನಬ್ ಮದೀನಾ ಹಿಜ್ರತ್‌ನ ಸಮಯದಲ್ಲಿ ವಿಚ್ಛೇದಿತೆಯಾಗಿದ್ದರು. ಝೈನಬ್ ಪ್ರವಾದಿರ ಸಹೋದರ ಸಂಬಂಧಿಯಾಗಿದ್ದರು. ಪ್ರವಾದಿರ ಚಿಕ್ಕಪ್ಪ ಅಬೂ ತಾಲಿಬ್‌ರ ಮೊಮ್ಮಗಳಾಗಿದ್ದರು. ಪ್ರವಾದಿ ಅವರನ್ನು ತಮ್ಮ ಸಾಕುಮಗ ಝೈದ್ ಬಿನ್ ಹಾರಿಸ್‌ರೊಂದಿಗೆ ವಿವಾಹ ಮಾಡಿಸಿದರು. ಝೈನಬ್ ಕುರೈಶರ ಕುಲೀನ ಗೋತ್ರಕ್ಕೆ ಸೇರಿದವರಾಗಿದ್ದರು. ಝೈದ್ ಬಿನ್ ಹಾರಿಸ್ ಸ್ವತಂತ್ರ ಗೊಂಡ ಗುಲಾಮರಾಗಿದ್ದರು. ಈ ಕಾರಣದಿಂದ ಝೈನಬ್‌ರಿಗೆ ಝೈದ್ ಬಿನ್ ಹಾರಿಸ್‌ರೊಂದಿಗಿನ ವಿವಾಹ ಇಷ್ಟವಿರಲಿಲ್ಲ. ಅವರು ತಮ್ಮ ಪತಿಯೊಂದಿಗೆ ಅಸಡ್ಡೆಯಿಂದ ವರ್ತಿಸುತ್ತಿದ್ದರು. ಝೈನಬ್ ವರ್ತನೆಯ ಬಗ್ಗೆ ಝೈದ್ ಬಿನ್ ಹಾರಿಸ್ ಅನೇಕ ಸಲ ಪ್ರವಾದಿರಿಗೆ ದೂರಿದರು. ಪ್ರವಾದಿ ಝೈದ್‌ರಿಗೆ ತಾಳ್ಮೆ ವಹಿಸಲು ಸೂಚಿಸಿದರು. ಒಂದು ದಿನ ಕೋಪದ ಭರದಲ್ಲಿ ಝೈದ್ ಬಿನ್ ಹಾರಿಸ್ ಅವರಿಗೆ ತಲಾಕ್ ನೀಡಿದರು.

ಝೈದ್ ಬಿನ್ ಹಾರಿಸ, ಝೈನಬ್‌ರಿಗೆ ತಲಾಕ್ ನೀಡಿದ ನಂತರ ಪ್ರವಾದಿರಿಗೆ, ಝೈನಬ್‌ರನ್ನು ವಿವಾಹವಾಗುವಂತೆ ಒತ್ತಡ ಬಂತು. ಆದರೆ ಪ್ರವಾದಿ ಈ ಪ್ರಸ್ತಾಪಕ್ಕೆ

ಹಿಂಜರಿದರು. ಏಕೆಂದರೆ ಝೈನಬ್ ಅವರ ಸಾಕು ಮಗ ಝೈದ್‌ರ ಪತ್ನಿಯಾಗಿದ್ದರು. ಆಗಿನ ಕಾಲದಲ್ಲಿ ಸಾಕು ಮಗನನ್ನು ಸ್ವಂತ ಮಗನಂತೇ ಪರಿಗಣಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಕುರ್‌ಆನಿನ ಈ ಸೂಕ್ತವು ಅವತೀರ್ಣಗೊಂಡಿತು.

> "ಜನರೇ, ಮುಹಮ್ಮದ್ ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ. ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ. ಅಲ್ಲಾಹ್ ಸಕಲ ವಸ್ತುಗಳ ಪರಿಜ್ಞಾನವುಳ್ಳವನು"
> (ಪವಿತ್ರ ಕುರ್‌ಆನ್ 33:40)

ಝೈನಬ್‌ರೊಂದಿಗೆ ಪ್ರವಾದಿರ ವಿವಾಹವು, ಸಾಕು ಮಗನು, ಸ್ವಂತ ಮಗನಂತೆ ಎಂಬ ಆಗಿನ ಅರಬ್ ನಂಬಿಕೆಯನ್ನು ತೊಡೆದು ಹಾಕಲು ಆಗಿತ್ತು.

> "ತರುವಾಯ ಝೈದ್ ಅವಳಿಂದ ತನ್ನ ಅಪೇಕ್ಷೆಯನ್ನು ಪೂರ್ತಿಗೊಳಿಸಿಕೊಂಡ ಬಳಿಕ ನಾವು ಅವಳ ವಿವಾಹವನ್ನು ನಿಮ್ಮೊಂದಿಗೆ ಮಾಡಿದೆವು. ಇದು ದತ್ತು ಪುತ್ರರು ತಮ್ಮ ಪತ್ನಿಯರೊಂದಿಗೆ ತಮ್ಮ ಅಪೇಕ್ಷೆ ಪೂರ್ತಿಗೊಳಿಸಿಕೊಂಡ ಬಳಿಕ ವಿಚ್ಛೇಧಿತೆಯರ ವಿಷಯದಲ್ಲಿ ಸತ್ಯ ವಿಶ್ವಾಸಿಗಳಿಗೆ ಯಾವುದೇ ಅಡಚಣೆ ಇಲ್ಲದಂತಾಗಲಿಕ್ಕಾಗಿ ಆಗಿದೆ".
> (ಪವಿತ್ರ ಕುರ್‌ಆನ್ 33:37)

ಝೈನಬ್ ಅಲ್ಲಾಹನಲ್ಲಿ ಪ್ರಾರ್ಥಿಸಿದರು:

"ಅಲ್ಲಾಹ್! ನಾನು ಪ್ರವಾದಿರಿಗೆ ಅರ್ಹಳಾಗಿದ್ದರೆ, ನನ್ನ ವಿವಾಹವನ್ನು ಅವರೊಂದಿಗೆ ನೆರವೇರಿಸು' ಈ ಸಂದರ್ಭದಲ್ಲಿ ಮೇಲಿನ ಕುರ್‌ಆನಿನ ಸೂಕ್ತವು ಅವತೀರ್ಣ ವಾಯಿತೆಂದು ವರದಿ ಮಾಡಲಾಗಿದೆ. ಕುರ್‌ಆನಿನ ಈ ಸೂಕ್ತದ ಅವತೀರ್ಣದ ನಂತರ ಪ್ರವಾದಿ ಝೈನಬ್‌ರಿಗೆ "ಅಲ್ಲಾಹ್, ಅವರನ್ನು ತಮಗೆ ವಿವಾಹದಲ್ಲಿ ನೀಡಿರುವನು" ಎಂದು ಸಂದೇಶವನ್ನು ಕಳುಹಿಸಿದರು. ಝೈನಬ್ ಈ ವಾರ್ತೆಯನ್ನು ಕೇಳಿದ ಕೂಡಲೇ ತಮ್ಮೆಲ್ಲಾ ಆಭರಣಗಳನ್ನು ಸುದ್ದಿ ಮುಟ್ಟಿಸಿದ ಗುಲಾಮ ಮಹಿಳೆ ಸಲಾಮರಿಗೆ ನೀಡಿ, ಎರಡು ತಿಂಗಳು ಉಪವಾಸವಿರುವ ಪ್ರತಿಜ್ಞೆ ಮಾಡಿದರು.

ಪ್ರವಾದಿ ಝೈನಬ್‌ರೊಂದಿಗೆ ವಿವಾಹದ ನಂತರ ದೊಡ್ಡ ಔತಣ ಕೂಟವನ್ನು ಏರ್ಪಡಿಸಿದರು. 300 ಸಹಾಬಿಗಳನ್ನು, ಅವರ ಕುಟುಂಬದವರನ್ನು ಔತಣಕ್ಕೆ ಆಹ್ವಾನಿಸಿದರು. ಈ ಸಮಯದಲ್ಲಿಯೇ ಪರ್ದಾ (ಹಿಜಾಬ್) ಕುರಿತು ಕುರ್‌ಆನಿನ ಸೂಕ್ತಗಳು ಅವತೀರ್ಣಗೊಂಡವು. ಔತಣದ ಸಮಯದಲ್ಲಿ ಜನರು ಅನಾವಶ್ಯಕವಾಗಿ ದೀರ್ಘಕಾಲದವರೆಗೆ ಪ್ರವಾದಿರ ಮನೆಯಲ್ಲಿ ಇದ್ದರು. ಕೇವಲ ಒಂದೇ ಒಂದು ಕೊಠಡಿ ಇದ್ದ ಕಾರಣ, ಪ್ರವಾದಿರಿಗೆ ಬಹಳ ಮುಜುಗರವನ್ನು ಎದುರಿಸಬೇಕಾಯಿತು.

ಈ ಸಂಬಂಧ ಕುರ್‌ಆನಿನ ಈ ಸೂಕ್ತವು ಅವತೀರ್ಣವಾಯಿತು.

> "ಸತ್ಯ ವಿಶ್ವಾಸಿಗಳೇ, ಪ್ರವಾದಿಯ ಮನೆಗಳೊಳಗೆ ಅನುಮತಿಯಿಲ್ಲದೇ ಪ್ರವೇಶಿಸಬೇಡಿರಿ. ಊಟದ ಸಮಯವನ್ನು ಕಾದುಕೊಂಡಿರಲೂ ಬೇಡಿರಿ. ನಿಮ್ಮನ್ನು ಊಟಕ್ಕೆ ಕರೆದರೆ ಖಂಡಿತ ಹೋಗಿರಿ. ಆದರೆ ಊಟ ಮುಗಿಸಿದೊಡನೆ ಮರಳಿರಿ. ಮಾತಾಡುತ್ತಾ ಕುಳಿತಿರಬೇಡಿ. ನಿಮ್ಮ ಈ ವರ್ತನೆಗಳು ಪ್ರವಾದಿಗೆ ತೊಂದರೆ ಕೊಡುತ್ತಿವೆ. ಆದರೆ ಅವರು ಸಂಕೋಚದಿಂದ ಏನೂ ಹೇಳುವುದಿಲ್ಲ ಮತ್ತು ಅಲ್ಲಾಹ್ ಸತ್ಯಸಂಗತಿಯನ್ನು ಹೇಳಲು ನಾಚುವುದಿಲ್ಲ. ಪ್ರವಾದಿಯವರ ಪತ್ನಿಯರಿಂದ ನಿಮಗೇನಾದರೂ ವಸ್ತುವನ್ನು ಕೇಳಬೇಕಿದ್ದರೆ, ತೆರೆಯ ಹಿಂದಿನಿಂದ ಕೇಳಿ ಪಡೆದುಕೊಳ್ಳಿರಿ. ಇದು ನಿಮ್ಮ ಹಾಗೂ ಅವರ ಹೃದಯಗಳ ಶುದ್ಧಿಗೆ ಹೆಚ್ಚು ಸೂಕ್ತವಾದ ಕ್ರಮವಾಗಿದೆ". (ಪವಿತ್ರ ಕುರ್‌ಆನ್ 33: 53)

ಪ್ರವಾದಿ ಝೈನಬ್‌ರ ಸೌಂದರ್ಯಕ್ಕೆ ಮಾರುಹೋಗಿ ಝೈದ್‌ರಿಂದ ತಲಾಕ್ ಕೊಡಿಸುವ ನಾಟಕವಾಡಿದರು ಎಂದು ಕೆಲ ಪಾಶ್ಚಾತ್ಯ ವಿಮರ್ಶಕರು ಟೀಕಿಸುತ್ತಾರೆ. ಆದರೆ ಈ ಟೀಕೆಗೆ ಯಾವುದೇ ಹುರುಳಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಝೈನಬ್‌ರನ್ನು ಪ್ರವಾದಿ ಬಾಲ್ಯದಿಂದಲೂ ನೋಡಿದ್ದರು. ಝೈನಬ್ ಪ್ರವಾದಿರ ಸೋದರ ಸಂಬಂಧಿಯಾಗಿದ್ದರು. ಝೈನಬ್‌ರ ಸೌಂದರ್ಯಕ್ಕೆ ಮಾರು ಹೋಗಿದ್ದರೆ, ಮೊಟ್ಟ ಮೊದಲು ನೇರವಾಗಿ ಝೈನಬ್‌ರೊಂದಿಗೇ ಅವರು ವಿವಾಹವಾಗಬಹುದಿತ್ತು. ಝೈದ್‌ರೊಂದಿಗೆ ವಿವಾಹ ಮಾಡಿಸಿ, ನಂತರ ತಲಾಕ್ ಕೊಡಿಸುವ ಅಗತ್ಯವಾದರೂ ಎಲ್ಲಿತ್ತು?

## ಜುವೈರಿಯಾ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಎಂಟನೆಯ ಪತ್ನಿ ಜುವೈರಿಯಾ ಪ್ರಮುಖ ಮತ್ತು ಶಕ್ತಿಶಾಲಿ ಗೋತ್ರ ಬನು ಮುಸ್ತಲಿಕ್‌ನ ಮುಖಂಡ ಹಾರಿಸ್‌ರ ಪುತ್ರಿಯಾಗಿದ್ದರು. ಅದೇ ಗೋತ್ರದ ಪ್ರಮುಖ ವ್ಯಕ್ತಿಯೊಂದಿಗೆ ಅವರ ವಿವಾಹವಾಗಿತ್ತು. ಜುವೈರಿಯಾರ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ತಂದೆ ಮತ್ತು ಪತಿ ಇಬ್ಬರೂ ಇಸ್ಲಾಮಿನ ಕಡು ವೈರಿಗಳಾಗಿದ್ದರು. ಮುಸ್ಲಿಮರೊಂದಿಗಿನ ಯುದ್ಧದಲ್ಲಿ ಜುವೈರಿಯಾ ಮುಸ್ಲಿಮರಿಗೆ ಸೆರೆ ಸಿಕ್ಕರು. ಅವರ ತಂದೆ ಪ್ರವಾದಿರ ಬಳಿ ಹೋಗಿ "ನಾನು ಬನು ಮುಸ್ತಲಿಕ್ ಗೋತ್ರದ ಮುಖಂಡನಾಗಿದ್ದೇನೆ. ನನ್ನ

ಮಗಳು ನಿಮ್ಮ ಕೈದಿಯಾಗಿದ್ದು, ಅವಳು ದಾಸಿಯಾಗಿ ಇರುವುದು ನನ್ನ ಅಂತಸ್ತಿಗೆ ಕುಂದು ಬರುತ್ತದೆ" ಎಂದರು. ಇದಕ್ಕೆ ಪ್ರವಾದಿ, "ಈ ನಿರ್ಧಾರವನ್ನು ಜುವೈರಿಯಾರಿಗೇ ಬಿಡುವುದು ಉತ್ತಮವಲ್ಲವೇ?" ಎಂದು ನುಡಿದರು. ಹಾರಿಸ್ ಪ್ರವಾದಿರ ಮಾತಿಗೆ ಕೂಡಲೇ ಒಪ್ಪಿಗೆ ಸೂಚಿಸಿದರು. ನಂತರ ಮಗಳ ಬಳಿ ಹೋಗಿ, ನಡೆದ ವೃತ್ತಾಂತ ತಿಳಿಸಿ, "ನನಗೆ ಅಪಮಾನ ಮಾಡುವಂತಹ ಯಾವುದೇ ಕ್ರಮವನ್ನು ಕೈಗೊಳ್ಳಬೇಡ"ವೆಂದು ತಿಳಿಸಿದರು. ಜುವೈರಿಯಾ, "ನಾನು ಮುಹಮ್ಮದ್‌ರ ಸೇವೆಯಲ್ಲಿಯೇ ಇರಬೇಕೆಂದಿರುವೆ. ಮುಹಮ್ಮದ್ ನನ್ನನ್ನು ವಿವಾಹವಾಗುವುದೇ ಅತ್ಯುತ್ತಮ ಕ್ರಮ" ಎಂದರು. ಅದರಂತೆ ಪ್ರವಾದಿ ಜುವೈರಿಯಾರನ್ನು ವಿವಾಹವಾದರು.

ವಿವಾಹದ ನಂತರ ಎಲ್ಲಾ ಖೈದಿಗಳನ್ನು ಬಿಡುಗಡೆಗೊಳಿಸಲಾಯಿತು. ಪ್ರವಾದಿರ ಈ ಧೋರಣೆಯಿಂದಾಗಿ ಬನು ಮುಸ್ತಲಿಕ್ ಗೋತ್ರದ ಜನರು ಇಸ್ಲಾಮಿನ ಬಗ್ಗೆ ಮೃದು ನಿಲುವು ತಳೆಯುವಂತಾಯಿತು. ಉಭಯ ಪಕ್ಷಗಳ ನಡುವೆ ಶಾಂತಿ ನೆಲೆಸಿತು ಮತ್ತು ಸಂಬಂಧಗಳು ಉತ್ತಮಗೊಂಡವು.

## ಉಮ್ಮೆ ಹಬೀಬ

ಉಮ್ಮೆ ಹಬೀಬ: (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಒಂಭತ್ತನೆಯ ಪತ್ನಿಯಾಗಿದ್ದರು. ಅವರು ಇಸ್ಲಾಮಿನ ಕಡು ವೈರಿಗಳಾದ ಅಬೂ ಸುಫಿಯಾನ್ ಮತ್ತು ಹಿಂದರ ಪುತ್ರಿಯಾಗಿದ್ದರು. ಅವರು ಮತ್ತು ಅವರ ಪತಿ, ಅಬೂ ಸುಫಿಯಾನ್ ಮತ್ತು ಹಿಂದರನ್ನು ಲೆಕ್ಕಿಸದೇ, ಇಸ್ಲಾಮ್ ಸ್ವೀಕರಿಸಿದ್ದರು. ಪ್ರವಾದಿ ಅವರಿಗೆ ಇಥಿಯೋಪಿಯಾ ವಲಸೆ ಹೋಗಲು ಸಲಹೆ ನೀಡಿದ್ದರು. ಇಥಿಯೋಪಿಯಾದಲ್ಲಿ ಉಮ್ಮೆ ಹಬೀಬರ ಪತಿ ಕ್ರೈಸ್ತ ಧರ್ಮ ಸ್ವೀಕರಿಸಿದರು. ನಂತರ ಅವರ ಪತಿ ಕುಡಿತದ ಚಟಕ್ಕೆ ಬಲಿಯಾಗಿ ನಿಧನ ಹೊಂದಿದರು. ಅವರು ಮಕ್ಕಾ ಹಿಂತೆರಳಿದಾಗ, ಅವರ ಪಾಡನ್ನು ನೋಡಲಾರದೇ, ಮುಹಮ್ಮದ್ ಅವರನ್ನು ವಿವಾಹವಾಗಲು ನಿಶ್ಚಯಿಸುತ್ತಾರೆ. ಮುಹಮ್ಮದ್‌ರ ಈ ಕ್ರಮದಿಂದಾಗಿ ಅವರ ಕುಟುಂಬದ ಸದಸ್ಯರ ಇಸ್ಲಾಮ್ ದ್ವೇಷದ ತೀವ್ರತೆ ಕೊಂಚ ಕಡಿಮೆಯಾಯಿತು. ಕುರೈಶರ ಪ್ರಮುಖ ಗೋತ್ರ ಬನು ಅಬ್ದ್ ಅಲ್ ಶಮ್ಸ್ ಇಸ್ಲಾಮಿಗೆ ಸನಿಹವಾಯಿತು.

## ಸಫಿಯ್ಯಾ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಹತ್ತನೆಯ ಪತ್ನಿ ಸಫಿಯ್ಯ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರಾಗಿದ್ದರು. ಅವರ ತಂದೆ ಮತ್ತು ತಾಯಿ ಎರಡು ಹೆಸರಾಂತ ಯಹೂದಿ ಕುಟುಂಬಗಳಿಗೆ ಸೇರಿದವರಾಗಿದ್ದರು. ಖೈಬರ್

ಯುದ್ಧದಲ್ಲಿ ಸಫಿಯ್ಯರನ್ನು ಕೈದಿಯನ್ನಾಗಿಸಲಾಗಿತ್ತು. ಖ್ಯಾತ ಯಹೂದಿ ಕವಿ ಬಿನ್ ಮಿಶ್‌ಕಮ್‌ರೊಂದಿಗೆ ಸಫಿಯ್ಯಾರ ವಿವಾಹವಾಗಿತ್ತು. ಆದರೆ ಇವರೀರ್ವರಲ್ಲಿ ಹೊಂದಾಣಿಕೆಯಾಗದ ಕಾರಣ ಬಿನ್ ಮಿಶ್‌ಕಮ್, ಸಫಿಯ್ಯಾರಿಗೆ ವಿಚ್ಛೇದನ ನೀಡಿದರು. ನಂತರ ಅವರು ಪ್ರಖ್ಯಾತ ಯಹೂದಿ ಯೋಧ ಕನಾನ್ಹರನ್ನು ವಿವಾಹವಾದರು. ಆದರೆ ಖೈಬರ್ ಯುದ್ಧದಲ್ಲಿ ಅವರ ಪತಿ, ತಂದೆ ಮತ್ತು ಕುಟುಂಬದ ಇತರ ಪುರುಷ ಸದಸ್ಯರು ಹತರಾದರು. ಸಫಿಯ್ಯಾರನ್ನು ಸೆರೆ ಹಿಡಿಯಲಾಯಿತು. ನಂತರ ಅವರು ಸಹಾಬಿಯೋರ್ವರ ದಾಸಿಯಾದರು. ಸಫಿಯ್ಯಾ ಬುಡಕಟ್ಟು ನಾಯಕನ ಪುತ್ರಿಯಾಗಿದ್ದರಿಂದ ಅವರನ್ನು ದಾಸಿಯನ್ನಾಗಿರಿಸಿದುದಕ್ಕೆ ಇತರ ಸಹಾಬಿಗಳು ಆಕ್ಷೇಪಿಸಿದರು. ಅವರನ್ನು ಪ್ರವಾದಿರ ಸುಪರ್ದಿಗೆ ವಹಿಸಬೇಕೆಂದು ಅವರು ಸಲಹೆ ನೀಡಿದರು. ಸಫಿಯ್ಯಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ) ಸಹ ಮುಸ್ಲಿಮಳಾಗುವ ಮತ್ತು ಮುಸ್ಲಿಮರ ನಾಯಕನನ್ನು ವರಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಈ ರೀತಿ ತಮ್ಮ ಜನರಲ್ಲಿ ಅವರ ಸ್ಥಾನಮಾನ ಪುನರ್ ಸ್ಥಾಪಿತವಾಗುವುದೆಂದು ಅವರು ನುಡಿದರು.

ಸಫಿಯ್ಯಾ(ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರ ಕಣ್ಣಿನ ಬಳಿ ಹಸಿರು ಗುರುತು ಕಂಡು ಪ್ರವಾದಿ, ಅದೇನೆಂದು ಪ್ರಶ್ನಿಸಿದರು. ಸಫಿಯ್ಯಾ, "ಒಂದು ದಿನ ಕನಸಿನಲ್ಲಿ ಮದೀನಾದಿಂದ ಚಂದ್ರನು ಮೇಲೇರಿ ನನ್ನ ಮಡಿಲು ಸೇರಿದ ಹಾಗೆ ಕಂಡೆನು. ನನ್ನ ಪತಿ ಕನಾನ್ಹರಿಗೆ ಈ ವಿಷಯವನ್ನು ತಿಳಿಸಿದಾಗ, ಅವರು "ನೀನು ಮದೀನಾದ ರಾಜನನ್ನು ಮದುವೆಯಾಗ ಬಯಸುವೆಯಾ?" ಎಂದು ನುಡಿದು ಕಪಾಳಕ್ಕೆ ಹೊಡೆದರು. ಹೀಗೆ ನನ್ನ ಮುಖದಲ್ಲಿ ಈ ಗುರುತು ಮೂಡಿತು ಎಂದರು."

ಸಫಿಯ್ಯಾ, ಪ್ರವಾದಿರ ಗಾಂಭೀರ್ಯ, ಅವರ ಸತ್ಯತೆ, ಕರುಣೆಯಿಂದ ಕೂಡಿದ ವರ್ತನೆಯಿಂದ ಬಹಳ ಪ್ರಭಾವಿತರಾಗಿದ್ದರು. ಇಸ್ಲಾಮ್ ಧರ್ಮದ ಮಾನವೀಯತೆಗೆ ಅವರು ಮಾರುಹೋಗಿ ಇಸ್ಲಾಮ್ ಸ್ವೀಕರಿಸಿ ಅದರ ವಿಧೇಯ ಅನುಯಾಯಿಯಾದರು. ಇಸ್ಲಾಮಿನ ಎಲ್ಲಾ ಧಾರ್ಮಿಕ ವಿಧಿಗಳನ್ನು ಚಾಚೂ  ತಪ್ಪದೇ ನಿರ್ವಹಿಸುತ್ತಿದ್ದರು. ಇಸ್ಲಾಮ್ ಸ್ವೀಕರಿಸಿದುದಕ್ಕಾಗಿ ಅವರು ಹೆಮ್ಮೆಪಡುತ್ತಿದ್ದರು.

ಪ್ರವಾದಿರ ಜೀವಿತಾವಧಿಯಲ್ಲಿ ಉಮರ್ ಒಮ್ಮೆ ಸಫಿಯ್ಯಾರಿಗೆ, "ಯಹೂದಿಯರೊಂದಿಗೆ ಇನ್ನೂ ಸಂಬಂಧವನ್ನಿಟ್ಟುಕೊಂಡಿರುವಿರಾ" ಎಂದು ಪ್ರಶ್ನಿಸಿದ್ದರು. ಇದಕ್ಕೆ ಸಫಿಯ್ಯಾ, "ನಾನು ಯಹೂದಿಯರಂತೆ ಶನಿವಾರದ ದಿನಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ. ಮುಸ್ಲಿಮರಂತೆ, ಶುಕ್ರವಾರದ ದಿನಕ್ಕೆ ಪ್ರಾಮುಖ್ಯತೆ ನೀಡುತ್ತೇನೆ. ಆದರೆ ನನ್ನ ಯಹೂದಿ ಸಂಬಂಧಿಕರ ಬಗ್ಗೆ ಈಗಲೂ ನನಗೆ ಪ್ರೀತಿ, ವಾತ್ಸಲ್ಯವಿದೆ. ಇಸ್ಲಾಮ್ ಇದಕ್ಕೆ ವಿರೋಧಿಸುವುದಿಲ್ಲ" ಎಂದು ಉತ್ತರಿಸಿದರು. ಸಫಿಯ್ಯಾರ ಉತ್ತರವನ್ನು ಕೇಳಿ ಉಮರ್ ನಿರುತ್ತರರಾದರು. ಸಫಿಯ್ಯಾರಿಗೆ ಸಂತಾನವಿರಲಿಲ್ಲ. ಅರವತ್ತನೆಯ ಪ್ರಾಯದಲ್ಲಿ ಅವರು ನಿಧನ ಹೊಂದಿದರು.

# ಮಾರಿಯಾಃ

ಮಾರಿಯಾ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರನ್ನು ದಾಸಿಯಾಗಿ ಪ್ರವಾದಿರಿಗೆ ಅಲೆಗ್ಸಾಂಡರಿಯದ ಆರ್ಕ್‌ಬಿಷಪ್ ನೀಡಿದ್ದರು. ತದನಂತರ ಪ್ರವಾದಿ ಅವರನ್ನು ವಿವಾಹವಾದರು. ಖದೀಜಾ ನಂತರ ಮಾರಿಯಾರಿಂದ ಪ್ರವಾದಿರಿಗೆ ಸಂತಾನ ಪ್ರಾಪ್ತವಾಗಿತ್ತು. ಮಾರಿಯ ಪುತ್ರ ಇಬ್ರಾಹಿಮ್‌ರಿಗೆ ಜನ್ಮ ನೀಡಿದ್ದರು. ಆದರೆ ಮಗು ಇಬ್ರಾಹೀಮ್ ಎರಡು ವರ್ಷದ ಪ್ರಾಯದಲ್ಲಿ ನಿಧನ ಹೊಂದಿತು. ಮಾರಿಯಾ ಈ ದುಃಖವನ್ನು ತಾಳಲಾರದೇ ಕೆಲ ವರ್ಷಗಳ ಬಳಿಕ ನಿಧನ ಹೊಂದಿದರು.

# ಮೈಮುನಃ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಅಂತಿಮ ವಿವಾಹವು ಮೈಮುನಃ (ಅಲ್ಲಾಹನು ಅವರಿಂದ ಸಂಪ್ರೀತನಾಗಲಿ)ರೊಂದಿಗೆ ನೆರವೇರಿತು. ಈ ಮೊದಲು ಮೈಮುನಃ ಎರಡು ಸಲ ವಿವಾಹವಾಗಿದ್ದರು. ಅವರಿಗೆ ಬಹಳ ಸಾಗಿತ್ತು. ಅವರು ಹಲಾಲಿಯ್ಯಿನ್ ಗೋತ್ರಕ್ಕೆ ಸೆ ೇರಿದವರಾಗಿದ್ದರು. ಪ್ರವಾದಿರ ಚಿಕ್ಕಪ್ಪ ಅಬ್ಬಾಸ್ ಅವರನ್ನು ವಿವಾಹವಾಗುವಂತೆ ಪ್ರವಾದಿರಿಗೆ ಸಲಹೆ ನೀಡಿದ್ದರು. ಇದರಂತೆ ಪ್ರವಾದಿ ಮೈಮುನಃರನ್ನು ವಿವಾಹವಾದರು. ಈ ವಿವಾಹದ ನಂತರ ಅಬ್ಬಾಸ್ ಊಹಿಸಿದಂತೆ ಹಲಾಲಿಯ್ಯಿನ್ ಗೋತ್ರವು ಇಡಿಯಾಗಿ ಇಸ್ಲಾಮಿನ ತೆಕ್ಕೆಯಲ್ಲಿ ಬಂದಿತು.

ಪ್ರವಾದಿ ವಿವಾಹವಾದ ಹೆಚ್ಚಿನ ಮಹಿಳೆಯುರು 40–50 ವರ್ಷ ಪ್ರಾಯದವರಾಗಿದ್ದರು. ಅವರು ಯೌವ್ವನದ ಗಡಿಯನ್ನು ದಾಟಿದವರಾಗಿದ್ದರು. ಅವರಲ್ಲಿ ಹೆಚ್ಚಿನವರು ಸೌಂದರ್ಯಕ್ಕೆ ಪ್ರಖ್ಯಾತರಾದವರೂ ಆಗಿರಲಿಲ್ಲ. ಅವರು ವಿಧವೆಯರು ಅಥವಾ ವಿಚ್ಛೇದಿತರಾಗಿದ್ದರು. ಎಲ್ಲಾರೂ ಅಸಹಾಯಕ ಸ್ಥಿತಿಯಲ್ಲಿದ್ದರು ಅಥವಾ ನಿರಾಶ್ರಿತರಾಗಿದ್ದರು. ಪ್ರವಾದಿ ಅವರನ್ನು ವಿವಾಹವಾಗಿ ಅವರಿಗೆ ಆಸರೆ ನೀಡಿದರು. ಇದಲ್ಲದೆ ಪ್ರವಾದಿರ ಕೆಲ ವಿವಾಹಗಳು ರಾಜಕೀಯ ಕಾರಣಗಳಿಗಾಗಿ ಮತ್ತು ಧಾರ್ಮಿಕ ಕಾರಣಗಳಿಗಾಗಿಯೂ ನಡೆದಿತ್ತು.

ಪ್ರವಾದಿರ ವಿವಾಹಗಳ ವಿವರಗಳನ್ನು ಮೇಲೆ ನೀಡಲಾಗಿದೆ. ಪ್ರವಾದಿರ ವಿವಾಹಗಳು ಕಾಮಾಸಕ್ತಿಯ ಕಾರಣದಿಂದವಾಗಿರಲಿಲ್ಲ ವೆಂಬುದು ಸ್ಪಷ್ಟವಾಗುತ್ತದೆ. ಪ್ರವಾದಿ ವಿಷಯಾಸಕ್ತಿಯ ಕಾರಣದಿಂದಾಗಿ ವಿವಾಹಗಳನ್ನು ಮಾಡಿಕೊಂಡಿದ್ದರು ಎಂದು ಆಪಾದನೆ ಮಾಡುವವರು ಈ ಪ್ರಶ್ನೆಗಳಿಗೆ ತೃಪ್ತಿದಾಯಕ ಉತ್ತರಗಳನ್ನು ನೀಡಬೇಕಾಗುತ್ತದೆ.

- ಪ್ರವಾದಿ ಪ್ರಥಮ ಬಾರಿ ವಿವಾಹವಾದಾಗ ತಮಗಿಂತ 15 ವರ್ಷ ಹಿರಿಯ ವಯಸ್ಸಿನ ಮಹಿಳೆಯನ್ನು ಏಕೆ ವಿವಾಹವಾದರು?

- ಖದೀಜಾರೊಂದಿಗೆ 25 ವರ್ಷಗಳ ವೈವಾಹಿಕ ಜೀವನದಲ್ಲಿ ಅವರು ಮರು ವಿವಾಹವನ್ನು ಏಕೆ ಮಾಡಿಕೊಳ್ಳಲಿಲ್ಲ?
- ಸೌಂದರ್ಯವಿರದಿದ್ದರೂ ಮುಹಮ್ಮದ್ ವಿಧವೆಯರನ್ನೂ, ವಿಚ್ಛೇದಿತರನ್ನು ಏಕೆ ವಿವಾಹವಾದರು?
- ತಮ್ಮ ಜೀವನದ 5 ವರ್ಷಗಳಲ್ಲಿ ಅತ್ಯಧಿಕ ಬಿಡುವಿಲ್ಲದ ಕಾರ್ಯಗಳ ನಡುವೆ ಅವರಿಗೆ ವಿವಾಹವಾಗುವ ಅಗತ್ಯವೇನಿತ್ತು?
- ಮುಹಮ್ಮದ್ ವಿಷಯಾಸಕ್ತರಾಗಿದ್ದರೆ, ಜೀವನದ ಅತ್ಯಂತ ಬಿಡುವಿಲ್ಲದ ಅವಧಿಯಲ್ಲಿ ಹೆಚ್ಚಿನ ವಿವಾಹಗಳನ್ನು ಮಾಡಿಕೊಂಡು ಅವರಿಗೆ ವಿಷಯಾಸಕ್ತ ಜೀವನವನ್ನು ಸಾಗಿಸಲು ಸಾಧ್ಯವಿತ್ತೇ?
- ಮುಹಮ್ಮದ್‌ರ ಸಂಪೂರ್ಣ ಜೀವನವನ್ನು ಪರಿಶೀಲಿಸಿದರೆ, ಅವರು ಕಾಮಾಸಕ್ತರಾಗಿದ್ದರು ಎಂಬ ಅಪವಾದವನ್ನು ಅವರ ಮೇಲೆ ಹೇರಲು ಸಾಧ್ಯವಿದೆಯೇ?

'ಮುಹಮ್ಮದ್: ಎ ಪ್ರಾಫೆಟ್ ಆಫ್ ಅವರ್ ಟೈಮ್' ಎಂಬ ಗ್ರಂಥವನ್ನು ರಚಿಸಿರುವ ಲೇಖಕ ಕರೆನ್ ಆರ್ಮ ಸ್ಟ್ರಾಂಗ್ ಮುಹಮ್ಮದ್‌ರ ವಿವಾಹಗಳಿಗೆ ಸಂಬಂಧಿಸಿದಂತೆ ಈರೀತಿ ಹೇಳುತ್ತಾರೆ.

"ಬಹುಪತ್ನಿತ್ವದ ಬಗ್ಗೆ ಕುರ್‌ಆನಿನ ಆದೇಶಗಳು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಆದೇಶಗಳಾಗಿವೆ. ಇವು ಪುರುಷರ ಕಾಮಾಸಕ್ತಿಯನ್ನು ಪೂರೈಸಲು ಆಗಿರದೇ ವಿಧವೆಯರಿಗೆ, ನಿರ್ಗತಿಕರಿಗೆ ಇತರ ಅಸಹಾಯಕ ಮಹಿಳೆಯರ ಮೇಲೆ ಆಗುತ್ತಿದ್ದ ಅನ್ಯಾಯವನ್ನು ಸರಿಪಡಿಸುವ ಕಾರಣಕ್ಕಾಗಿ ಆಗಿತ್ತು. ಕೆಲ ಸಮಯ ಸಾಧಕರು ಈ ಮಹಿಳೆಯರಿಗೆ ದಕ್ಕ ಬೇಕಾಗಿದ್ದ ಸಂಪತ್ತನ್ನು ಲಪಟಾಯಿಸಿ, ಅವರಿಗೆ ಏನೂ ದಕ್ಕದಂತೆ ಮಾಡುತ್ತಿದ್ದರು.... ಬಹುಪತ್ನಿತ್ವ ಪದ್ಧತಿಯಿಂದಾಗಿ ನಿರ್ಗತಿಕ ಮಹಿಳೆಯರು ವಿವಾಹವಾಗಿ ಗೌರವಸ್ತ ಜೀವನವನ್ನು ನಡೆಸುವಂತಾಯಿತು. ಪುರುಷರು ಹೊಂದುತ್ತಿದ್ದ ಹಲವಾರು ಅನೈತಿಕ ಸಂಬಂಧಗಳ ಮೇಲೆ ನಿರ್ಬಂಧ ಹೇರಲಾಯಿತು. ಪಾಶ್ಚಾತ್ಯ ಸಮಾಜದಲ್ಲಿ ಮಹಿಳೆಯರು 19ನೇ ಶತಮಾನದಲ್ಲಿ ಪಡೆಯಲು ಸಾಧ್ಯವಾದಂತಹ ಸಾಮಾಜಿಕ ಸ್ಥಾನಮಾನವನ್ನು ಕುರ್‌ಆನ್ ಬಹುಪತ್ನಿತ್ವ ಪದ್ಧತಿಯ ಮೂಲಕ ನೀಡ ಬಯಸಿತು..."

☆

# ಮುಹಮ್ಮದ್‌ರ

# ಬಹು ವಿವಾಹಗಳಿಗೆ ಕಾರಣಗಳು

ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪ್ರಾಯ 50 ವರ್ಷಗಳಾದ ನಂತರ, ಅವರು ಹೆಚ್ಚಿನ ವಿವಾಹಗಳನ್ನು ವಾಗಿರುವುದು ಕಂಡು ಬರುತ್ತದೆ. ಯಾವನಾದರೂ ವ್ಯಕ್ತಿಯು 50 ವರ್ಷ ವಯಸ್ಸಿನ ನಂತರ ವಿಷಯಾಸಕ್ತವಾಗುತ್ತಾನೆಂದರೆ ಅದನ್ನು ನಂಬಲು ಸಾಧ್ಯವೇ ?

ಮದೀನಾದಲ್ಲಿ ಪ್ರವಾದಿ, ವೈಯಕ್ತಿಕ, ಜನಾಂಗೀಯ, ರಾಜಕೀಯ ಮೊದಲಾದವು ಒಳಗೊಂಡಂತೆ, ಅನೇಕ ಕಾರಣಗಳಿಗಾಗಿ ಬಹು ವಿವಾಹಗಳನ್ನು ಮಾಡಿಕೊಂಡರು. ಪ್ರವಾದಿ ಬಹು ವಿವಾಹಗಳನ್ನು ಮಾಡಿಕೊಳ್ಳಲು ಆರಂಭಿಸಿದಾಗ, ಅವರ ವಯಸ್ಸು ಐವತ್ತು ದಾಟಿತ್ತು. ಪ್ರವಾದಿ ವಿವಾಹ ಮಾಡಿಕೊಂಡ ಮಹಿಳೆಯರ ವಯಸ್ಸು, ಈರ್ವರನ್ನು ಹೊರತುಪಡಿಸಿ ಮೂವತ್ತಾರು ವರ್ಷ ದಾಟಿತ್ತು.

ಇದು ಇಸ್ಲಾಮಿನ ಅತ್ಯಂತ ಸೂಕ್ಷ್ಮ ಕಾಲಘಟ್ಟವಾಗಿತ್ತು. ಮದೀನ ಎಲ್ಲಾ ಕಡೆಗಳಿಂದಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟಿತ್ತು. ಮದೀನಾದ ಒಳಗಡೆ ಕಪಟ ವಿಶ್ವಾಸಿಗಳು ಮತ್ತು ಯಹೂದಿಗಳು ಇಸ್ಲಾಮಿ ಆಂದೋಲನವನ್ನು ಮುಗಿಸಲು ತಂತ್ರಗಳನ್ನು ಹೆಣೆಯುತ್ತಿದ್ದರು. ಮದೀನಾದ ಸುತ್ತಮುತ್ತಲಿನ ಗೋತ್ರಗಳು ಮದೀನಾದ ಸುರಕ್ಷತೆಗೆ ಸದಾ ಆತಂಕವನ್ನು ಒಡ್ಡುತ್ತಿದ್ದವು. ಇತ್ತ ಕುರೈಶರು ನಿರಂತರ ಮದೀನಾದ ಮೇಲೆ ಆಕ್ರಮಣಗಳನ್ನು ನಡೆಸುತ್ತಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವನಾದರೂ ನಾಯಕನು ವಿಷಯ ಲಂಪಟತೆಯ ಜೀವನವನ್ನು ನಡೆಸಲು ಸಾಧ್ಯವೇ ?

ಪ್ರವಾದಿರ ಮೇಲಿನ ಆರೋಪಗಳು, ಪೂರ್ವಗ್ರಹ ಪೀಡಿತ ಜನರ

ಆರೋಪಗಳಾಗಿವೆ. ಈ ಜನರು ವಿವಿಧ ಕಾರಣಗಳಿಗಾಗಿ ಪ್ರವಾದಿರ ಬಗ್ಗೆ ಕೆಟ್ಟ ಭಾವನೆಗಳನ್ನು ಇರಿಸಿಕೊಂಡಿದ್ದು, ಅವರ ಹೃದಯಗಳಲ್ಲಿಯೇ ಕೆಡಕನ್ನು ಇರಿಸಿಕೊಂಡು, ಪ್ರವಾದಿರ ಪ್ರತಿಯೊಂದು ಕಾರ್ಯದಲ್ಲಿಯೂ ಹುಳುಕನ್ನು ಹುಡುಕಲು ಹೊರಟಿದ್ದಾರೆ.

ಮುಹಮ್ಮದ್ ಅತ್ಯಂತ ಸರಳ ಜೀವನವನ್ನು ನಡೆಸಿದರು. ಕೆಲ ಮಣ್ಣಿನ ಮಡಕೆಗಳು, ಚಾಪೆ ಖರ್ಜೂರದ ಎಲೆಗಳನ್ನು ತುಂಬಿ ತಯಾರಿಸಿರುವ ತಲೆದಿಂಬು, ಗೋಣಿಚೀಲದ ಹಾಸಿಗೆ, ಇವೇ ಅವರ ಸಂಪತ್ತಾಗಿತ್ತು. ಹಗಲಿನಲ್ಲಿ ಬಿಡುವಿಲ್ಲದ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಏಕಕಾಲದಲ್ಲಿ ಅವರು ಅರೇಬಿಯಾದ ಸಾಮ್ರಾಟರು, ಮುಖ್ಯ ನ್ಯಾಯಾಧೀಶರು, ಸೇನಾ ದಂಡನಾಯಕರೂ, ಧಾರ್ಮಿಕ ಮುಖಂಡರೂ ಆಗಿದ್ದರು. ರಾತ್ರಿಯಲ್ಲಿ ಹೆಚ್ಚಿನ ವೇಳೆಯನ್ನು ಆರಾಧನೆಯಲ್ಲಿ ಕಳೆಯುತ್ತಿದ್ದರು. ಓರ್ವ ವಿಷಯಾಸಕ್ತ ವ್ಯಕ್ತಿಯು ಈ ರೀತಿಯ ಜೀವನವನ್ನು ನಡೆಸಲು ಸಾಧ್ಯವೇ?

ಕುರ್‌ಆನ್ ಹೇಳುತ್ತದೆ:

> "ಸಂದೇಶವಾಹಕರೇ, ನೀವು ಕೆಲವೊಮ್ಮೆ ರಾತ್ರಿಯ ಸುಮಾರು ಮೂರನೆಯ ಎರಡು ಭಾಗ, ಇನ್ನು ಕೆಲವೊಮ್ಮೆ ಅರ್ಧ ಭಾಗ ಮತ್ತು ಕೆಲವೊಮ್ಮೆ ಮೂರನೆಯ ಒಂದು ಭಾಗವನ್ನು ಆರಾಧನೆಯಲ್ಲಿ ಕಳೆಯುತ್ತೀರಿ ಎಂದು ನಿಮ್ಮ ಪ್ರಭು ತಿಳಿದಿರುತ್ತಾನೆ. (ಪವಿತ್ರ ಕುರ್‌ಆನ್ 73:20)

ಪ್ರವಾದಿರ ಕೊನೆಯ ವರ್ಷಗಳಲ್ಲಿ ಎಲ್ಲಾ ದಿಕ್ಕುಗಳಿಂದ ಮದೀನಾಕ್ಕೆ ಸಂಪತ್ತಿನ ಹೊಳೆ ಹರಿದುಬರುತ್ತಿತ್ತು. ಪ್ರವಾದಿರ ಹೆಚ್ಚಿನ ಪತ್ನಿಯರು ಕುಲೀನ ಮನೆತನಕ್ಕೆ ಸೇರಿದವರು, ಸುಖ, ಸಂಪತ್ತಿನಲ್ಲಿ ಜೀವನ ಸಾಗಿಸಿದವರಾಗಿದ್ದರು. ಆದರೆ ಪ್ರವಾದಿರೊಡನೆ ವಿವಾಹದ ನಂತರ ಅವರಿಗೆ ಸುಖಲೋಪತೆಯ ಸಾಧನಗಳಿರಲಿ, ಜೀವನಾವಶ್ಯಕ ವಸ್ತುಗಳು ಸಹ ಲಭ್ಯವಿರಲಿಲ್ಲ. ಪ್ರವಾದಿರ ಕುಟುಂಬ ಅನೇಕಾರು ದಿನಗಳನ್ನು ಹಸಿವೆಯಲ್ಲಿಯೇ ಕಳೆಯುತ್ತಿತ್ತು.

ಮದೀನಾಕ್ಕೆ ನಾಲ್ಕು ದಿಕ್ಕುಗಳಿಂದ ಸಂಪತ್ತು ಹರಿದು ಬರುತ್ತಿದ್ದರೂ ಪ್ರವಾದಿರ ಕುಟುಂಬದಲ್ಲಿ ಯಾವುದೇ ಸುಧಾರಣೆ ಕಂಡು ಬಂದಿರಲಿಲ್ಲ. ಕಡು ಬಡತನದಲ್ಲಿಯೇ ಅವರು ಜೀವನವನ್ನು ಸಾಗಿಸುತ್ತಿದ್ದರು. ಪ್ರವಾದಿರ ಪತ್ನಿಯರು, ಅವರ ಜೀವನಾವಶ್ಯಕ ಅಗತ್ಯತೆಗಳನ್ನು ಪೂರೈಸಲಿಕ್ಕಾಗಿ ಪ್ರವಾದಿರನ್ನು ಒತ್ತಾಯ ಮಾಡತೊಡಗಿದರು.

ಈ ಸಂಬಂಧ ಕುರ್‌ಆನ್ ತಿಳಿಸಿತು.

> "ಪೈಗಂಬರರೇ, ನಿಮ್ಮ ಪತ್ನಿಯರೊಡನೆ ಹೇಳಿರಿ "ನೀವು ಈ ಲೋಕ ಮತ್ತು ಇದರ ವೈಭವಗಳನ್ನು ಇಚ್ಛೀಸುತ್ತೀರಾದರೆ ಬನ್ನಿರಿ. ನಾನು ನಿಮಗೇನಾದರೂ ಕೊಡಿಸಿ ನಿಮ್ಮನ್ನು ಉತ್ತಮ

> ರೀತಿಯಲ್ಲಿ ಬೀಳ್ಕೊಡುತ್ತೇನೆ ಮತ್ತು ನೀವು ಅಲ್ಲಾಹ್, ಅವನ ಸಂದೇಶವಾಹಕರು ಮತ್ತು ಪರಲೋಕದ ಬೀಡನ್ನು ಇಚ್ಛಿಸುತ್ತೀರಾದರೆ, ನಿಮ್ಮಲ್ಲಿ ಸಜ್ಜನರಾಗಿರುವವರಿಗೆ ಅಲ್ಲಾಹ್ ದೊಡ್ಡ ಸತ್ಫಲ ಸಿದ್ಧಗೊಳಿಸಿಟ್ಟಿರುತ್ತಾನೆ".
> (ಪವಿತ್ರ ಕುರ್‌ಆನ್ 33:28–29)

ಪ್ರವಾದಿರ ಪತ್ನಿಯರಿಗೆ ಎರಡು ವಿಷಯಗಳಲ್ಲಿ ಒಂದನ್ನು ಆರಿಸುವ ಸ್ವಾತಂತ್ರ್ಯವನ್ನು ನೀಡಲಾಯಿತು. ಒಂದು ಅವರು ಲೌಕಿಕ ಜೀವನ ಸಾಧನಗಳನ್ನು ಬಯಸಿದರೆ ಅವರಿಗೆ ಸಾಕಷ್ಟು ಸಂಪತ್ತು ನೀಡಿ, ಬಿಡುಗಡೆಗೊಳಿಸಲಾಗುವುದೆಂದು ತಿಳಿಸಲಾಯಿತು. ಇಲ್ಲದಿದ್ದರೆ ಪ್ರವಾದಿರೊಂದಿಗೆ ಬಡತನದ ಜೀವನವನ್ನು ಅವರು ಮುಂದುವರೆಸಬಹುದಾಗಿತ್ತು! ಪ್ರವಾದಿರ ಪತ್ನಿಯರು ಸಂತೋಷದಿಂದ ಪ್ರವಾದಿರೊಂದಿಗೆ ಬಡತನದಲ್ಲಿಯೇ ಜೀವನವನ್ನು ಸಾಗಿಸುವ ಆಯ್ಕೆಯನ್ನು ಮಾಡುತ್ತಾರೆ.

ಓರ್ವ ಕಾಮಾಸಕ್ತಿ ವ್ಯಕ್ತಿಯಲ್ಲಿ ಇಂತಹ ಆದರ್ಶ ಗುಣಗಳು ಇರಲು ಸಾಧ್ಯವೇ? ಪ್ರವಾದಿರ ನಡವಳಿಕೆಯ ಮೇಲೆ ಅವರ ವ್ಯಕ್ತಿತ್ವದ ಮೇಲೆ ಟೀಕೆ ಮಾಡುವವರು, ಮೊದಲು ಪ್ರವಾದಿರ ಜೀವನದ ಮೇಲೆ ನೋಟವನ್ನು ಹರಿಸಬೇಕು. ಪ್ರವಾದಿರವರು ಕೈಗೊಂಡ ಕ್ರಮಗಳನ್ನು ಇತಿಹಾಸದ ಹಿನ್ನೆಲೆಯಲ್ಲಿ ಸತ್ಯಾಸತ್ಯತೆಯ ಬೆಳಕಿನಲ್ಲಿ ವಿಶ್ಲೇಷಿಸಬೇಕು.

ಉಹದ್ ಯುದ್ಧದಲ್ಲಿ ಅನೇಕ ಮುಸ್ಲಿಮ್ ಸೈನಿಕರು ಹತರಾಗಿ, ಅವರ ಪತ್ನಿಯರ ಮತ್ತು ಮಕ್ಕಳ ಪಾಲನೆ ಪೋಷಣೆಯನ್ನು ನೋಡಿಕೊಳ್ಳಬೇಕಾಗಿತ್ತು. ಈ ಮಹಿಳೆಯರ ರಕ್ಷಣೆಗೆ ವಿವಾಹ ಒಂದು ಉತ್ತಮ ಮಾರ್ಗವಾಗಿತ್ತು.

ಪ್ರವಾದಿ ಮತ್ತು ಅವರ ಅನುಯಾಯಿಗಳು ಈ ಮಹಿಳೆಯರನ್ನು ಹಾಗೆಯೇ ಮನೆಗಳಲ್ಲಿ ಇಟ್ಟುಕೊಳ್ಳಲು ಬರುತ್ತಿರಲಿಲ್ಲ. ಆದುದರಿಂದ ಪ್ರವಾದಿ ಈ ಅಸಹಾಯಕ ಮತ್ತು ನಿರಾಶ್ರಿತ ಮಹಿಳೆಯರನ್ನು, ವಿವಾಹ ಮಾಡಿಕೊಳ್ಳುವ ಮೂಲಕ ಅವರಿಗೆ ಆಸರೆಯನ್ನು ಒದಗಿಸಿದರು.

ಯುದ್ಧದಲ್ಲಿ ಅನೇಕ ಮಹಿಳೆಯರು ಸೆರೆಸಿಕ್ಕಿದ್ದರು. ಅವರನ್ನು ಹತ್ಯೆ ಮಾಡಲಿಲ್ಲ. ಅವರು ಗೌರವಾನ್ವಿತ ಮತ್ತು ನೆಮ್ಮದಿಯ ಜೀವನ ನಡೆಸುವಂತೆ ನೋಡಿಕೊಳ್ಳಲಾಯಿತು. ಈ ಮಹಿಳೆಯರನ್ನು ಬೀದಿಪಾಲು ಮಾಡಿದ್ದರೆ ಇಡೀ ಸಮಾಜ ಅಸ್ತವ್ಯಸ್ತಗೊಂಡು ಅನೈತಿಕತೆಗೆ ಎಡೆಯಾಗುತ್ತಿತ್ತು.

ಈ ರೀತಿ ಸಮಾಜವನ್ನು ನೈತಿಕ ಅರಾಜಕತೆಯಿಂದ ರಕ್ಷಿಸಲಾಯಿತು. ಪ್ರವಾದಿ ಮತ್ತು ಅವರ ಅನುಯಾಯಿಗಳು ಈ ಮಹಿಳೆಯರನ್ನು ವಿವಾಹವಿಲ್ಲದೇ ಮನೆಗಳೊಳಗೆ ಇರಿಸಿಕೊಳ್ಳಲಿಲ್ಲ. ವಿಧವೆಯರ ಮತ್ತು ನಿರ್ಗತಿಕ ಮಹಿಳೆಯರ ಸಮಸ್ಯೆಗೆ ಇದಕ್ಕಿಂತ

ಉತ್ತಮ ಪರಿಹಾರವನ್ನು ಯಾರಾದರೂ ಸೂಚಿಸಬಲ್ಲರೇ? ಆದುದರಿಂದಲೇ, ಪವಿತ್ರ ಕುರ್‌ಆನ್ ಈ ರೀತಿಯ ವಿವಾಹಗಳ ಉದ್ದೇಶವನ್ನು ಈ ಮಾತುಗಳಲ್ಲಿ ವರ್ಣಿಸಿದೆ.

"ನಿಮ್ಮ ಮೇಲೆ ಯಾವುದೇ ಅಪವಾದ ಬಾರದಿರಲೆಂಬ ಕಾರಣದಿಂದ."

ಪ್ರವಾದಿ ಬಹು ವಿವಾಹಗಳನ್ನು ಮಾಡಿಕೊಳ್ಳಲು ಮತ್ತೊಂದು ಉದ್ದೇಶ, ಮಾನವ ಕುಲದ ಮಾರ್ಗದರ್ಶನಕ್ಕಾಗಿ ಅವರ ವಚನಗಳನ್ನು, ಅವರ ಸುನ್ನತ್ ರಕ್ಷಿಸುವುದಾಗಿತ್ತು. ಇಡಿಯ ಲೋಕಕ್ಕೆ ಮಾರ್ಗದರ್ಶಕನಾಗಿ ಅಲ್ಲಾಹ್ ಅವರನ್ನು ರವಾನಿಸಿದ್ದನು. ಆದುದರಿಂದ ಅವರ ಪ್ರತಿಯೊಂದು ಕಾರ್ಯ, ಪ್ರತಿಯೊಂದು ವಚನ ಅಲ್ಲಾಹನ ಮಾರ್ಗದರ್ಶನಕ್ಕೆ ಒಳಪಟ್ಟಿತ್ತು.

ಜಗತ್ತಿನಲ್ಲಿ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದಾರೆ. ಪುರುಷರು ನೇರವಾಗಿ ಪ್ರವಾದಿರಿಂದ ಇಸ್ಲಾಮಿನ ಬೋಧನೆಗಳನ್ನು ಆಲಿಸುತ್ತಿದ್ದರು ಮತ್ತು ಪ್ರವಾದಿರಿಂದ ತರಬೇತಿಯನ್ನು ಪಡೆಯುತ್ತಿದ್ದರು.

ಮಹಿಳೆಯರಿಗೂ ಇಸ್ಲಾಮಿ ಶಿಕ್ಷಣವನ್ನು ನೀಡಿ ಅವರನ್ನು ತರಬೇತಿಗೊಳಿಸುವುದು ಅತ್ಯಗತ್ಯವಾಗಿತ್ತು. ಈ ಕಾರ್ಯವನ್ನು ಪ್ರವಾದಿ ತಮ್ಮ ಪತ್ನಿಯರ ಮೂಲಕ ಕೈಗೊಂಡರು. ಪ್ರವಾದಿರ ಪತ್ನಿಯರು, ಪ್ರವಾದಿರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಈ ರೀತಿ ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳನ್ನು ಅವರು ಇತರ ಮಹಿಳೆಯರಿಗೆ ತಿಳಿಸಲು ಸಾಧ್ಯವಾಯಿತು.

ಪ್ರವಾದಿರ ಪತ್ನಿಯರು ಅತ್ಯಂತ ವಿಧೇಯ ರೀತಿಯಲ್ಲಿ ಇಸ್ಲಾಮಿನ ಬಗ್ಗೆ ಜ್ಞಾನವನ್ನು ಮತ್ತು ಪ್ರವಾದಿ ಚರ್ಯೆಯನ್ನು, ಅವರು ಕಂಡಂತೆ ಮತ್ತು ಆಚರಿಸಿದಂತೆ ಸಮುದಾಯಕ್ಕೆ ತಲುಪಿಸಿದರು.

ಪ್ರವಾದಿರ ಬಹು ವಿವಾಹಗಳಿಗೆ ಈ ಕೆಳಗಿನ ಅಂಶಗಳು ಕಾರಣವಾಗಿದ್ದವು.

- ಅಂತರ ಗೋತ್ರ ವಿವಾಹಗಳನ್ನು ಉತ್ತೇಜಿಸಲು.
- ವಿಧವೆಯರ ಪುನರ್ ವಿವಾಹವನ್ನು ಉತ್ತೇಜಿಸಲು
- ವಿಚ್ಛೇದಿತ ಮಹಿಳೆಯರ ವಿವಾಹವನ್ನು ಪ್ರೋತ್ಸಾಹಿಸಲು.

ಪ್ರವಾದಿರ ವಿವಾಹಗಳ ಮೇಲೆ ಮೇಲ್ನೋಟ ಹರಿಸಿದರೂ ಅವುಗಳ ರಾಜಕೀಯ ಮಹತ್ವದ ಅರಿವು ನಮಗಾಗುತ್ತದೆ. ಪ್ರವಾದಿರ ವಿವಿಧ ಗೋತ್ರಗಳ ವೈವಾಹಿಕ ಸಂಬಂಧದಿಂದಾಗಿ, ಅನೇಕ ಗೋತ್ರಗಳು ಅವರಿಗೆ ಸನಿಹವಾದವು. ಭೌಗೋಳಿಕವಾಗಿ, ಈ ಗೋತ್ರಗಳು ಅರೇಬಿಯಾ ಪ್ರದೇಶದ ಸುತ್ತಮುತ್ತಲು ಹರಡಿದ್ದವು. ಈ ವಿವಿಧ ಗೋತ್ರಗಳ ಸಂಬಂಧದಿಂದಾಗಿ ಪ್ರವಾದಿರ ಶಕ್ತಿ ಬಲಪಟ್ಟಿತು. ವಿವಾಹಗಳಿಂದಾಗಿ ಗೋತ್ರಗಳ ವಿರೋಧ ಅವುಗಳಿಂದ ಆಕ್ರಮಣದ ಭಯದ ತೀವ್ರತೆ ಕಡಿಮೆಯಾಯಿತು. ಅರೇಬಿಯಾದ ಪ್ರದೇಶದಾದ್ಯಂತ ಶಾಂತಿ ಸ್ಥಾಪಿಸಲು ಸಹಕಾರಿಯಾಯಿತು.

ಪ್ರವಾದಿರ ಕೆಲ ವಿವಾಹಗಳು ಹಳೆಯ ಸಂಪ್ರದಾಯಗಳನ್ನು ತೊಡೆದು ಹಾಕಲೂ ಆಗಿದ್ದವು. ಉದಾಹರಣೆಗೆ ಝೈನಬ್‌ರೊಂದಿಗಿನ ವಿವಾಹ ಮುಹಮ್ಮದ್ ಝೈದ್ ಬಿನ್ ಹಾರಿಸ್‌ರನ್ನು ದತ್ತು ಪುತ್ರನಾಗಿ ಸ್ವೀಕರಿಸಿದ್ದರು. ಅರಬ್ ಸಂಪ್ರದಾಯದ ಪ್ರಕಾರ ದತ್ತು ಪುತ್ರನು ಸ್ವಂತ ಪುತ್ರನಂತೆ ಎಲ್ಲಾ ಹಕ್ಕುಗಳನ್ನು ಹೊಂದುತ್ತಿದ್ದನು. ಅರಬರು ವಂಶಾವಳಿಯನ್ನು ಸಹ ಬದಲಾಯಿಸುತ್ತಿದ್ದರು. ಝೈದ್ ಬಿನ್ ಹಾರಿಸ್‌ರನ್ನು ಝೈದ್ ಬಿನ್ ಮುಹಮ್ಮದ್ ಎಂದು ಕರೆಯಲಾಗುತ್ತಿತ್ತು. ದತ್ತು ಪುತ್ರನ ವಿಚ್ಛೇದಿತ ಪತ್ನಿಯನ್ನು ದತ್ತು ಪುತ್ರನಾಗಿ ಸ್ವೀಕರಿಸಿದವರು ವಿವಾಹ ಮಾಡಿಕೊಳ್ಳುವಂತಿರಲಿಲ್ಲ. ಈ ಸಂಪ್ರದಾಯವನ್ನು ತೊಡೆದುಹಾಕಿ ದತ್ತು ಪುತ್ರನು ಸ್ವಂತ ಪುತ್ರನಂತೆ ಆಗುವುದಿಲ್ಲವೆಂದು ತೋರಿಸಲು ಝೈದ್ ಬಿನ್ ಹಾರಿಸ್‌ರ ವಿಚ್ಛೇದಿತ ಪತ್ನಿ, ಝೈನಬ್‌ರನ್ನು ವಿವಾಹವಾಗುವಂತೆ ಕುರ್‌ಆನಿನ ಸೂಕ್ತ ಅವತೀರ್ಣವಾಯಿತು.

ಝೈನಬ್ ಮುಹಮ್ಮದ್‌ರ ಸಹೋದರ ಸಂಬಂಧಿಯಾಗಿದ್ದರು. ಝೈದ್ ಬಿನ್ ಹಾರಿಸ್‌ರೊಂದಿಗೆ ವಿವಾಹದ ಮೊದಲು ಮುಹಮ್ಮದ್‌ರಿಗೆ ಅವರೊಂದಿಗೆ ವಿವಾಹವಾಗುವಂತೆ ಪ್ರಸ್ತಾವನೆ ಬಂದಿತ್ತು. ಆಗ ಮುಹಮ್ಮದ್ ಈ ಪ್ರಸ್ತಾವನೆಯನ್ನು ನಿರಾಕರಿಸಿದ್ದರು. ಈಗ ಅಲ್ಲಾಹನ ಆದೇಶದಂತೆ, ಝೈದ್ ಅವರನ್ನು ವಿಚ್ಛೇದಿಸಿದ ನಂತರ ಮುಹಮ್ಮದ್ ಅವರನ್ನು ವಿವಾಹವಾದರು.

ಪ್ರವಾದಿರ ಬಹು ವಿವಾಹಗಳಿಗೆ ಇವು ಐತಿಹಾಸಿಕ ಕಾರಣಗಳಾಗಿವೆ. ಯಾವುದೇ ಪೂರ್ವಗ್ರಹವಿಲ್ಲದೇ, ಮುಹಮ್ಮದ್‌ರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ, ಮುಹಮ್ಮದ್ ಅತ್ಯುನ್ನತ ನೈತಿಕ ಮೌಲ್ಯಗಳನ್ನು ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ವಿಮರ್ಶಕರು ಮಾಡುವ ಟೀಕೆಗಳಲ್ಲಿ ಮೇಲಿನ ಕಾರಣದಿಂದಾಗಿ ಯಾವುದೇ ಹುರುಳಿಲ್ಲವೆಂಬುದೂ ನಿಚ್ಚಳವಾಗುತ್ತದೆ.

ಪ್ರೊಫೆಸರ್ ಫಿಲಿಪ್ ಕೆ.ಹಿಟ್ಟಿ ಕ್ರೈಸ್ತ ಧರ್ಮಕ್ಕೆ ಸೇರಿದವರಾಗಿದ್ದರು. ಅವರು ತಮ್ಮ ಗ್ರಂಥ 'ಹಿಸ್ಟರಿ ಆಫ್ ಅರಬ್ಸ್' ನಲ್ಲಿ ಬರೆದಿದ್ದಾರೆ

**"**ಇಸ್ಲಾಮೀ ಸಾಮ್ರಾಜ್ಯದ ಉತ್ತುಂಗತೆಯಲ್ಲಿಯೂ ಮುಹಮ್ಮದ್ ಇಸ್ಲಾಮಿನ ಆರಂಭಿಕ ಕಾಲದಂತೆ ಸರಳ ಜೀವನವನ್ನು ನಡೆಸಿದರು. ಅವರು ತಮ್ಮ ಬಟ್ಟೆಗಳನ್ನು ಸ್ವತಃ ಹೊಲಿದುಕೊಳ್ಳುತ್ತಿದ್ದರು. ಸದಾ ಜನರೊಂದಿಗೆ ಸ್ಪಂದಿಸುತ್ತಿದ್ದರು. ಇಂತಹ ವ್ಯಕ್ತಿಗೆ ಕಾಮಾಸಕ್ತಿಗಾಗಿ ಸಮಯವೆಲ್ಲಿ ಲಭ್ಯವಿರುತ್ತದೆ?**"**

ಈ ವ್ಯಕ್ತಿಗೆ **"**ಕಾಮಾಸಕ್ತಿಯಲ್ಲಿ, ಸುಖಲೋಪತೆಯಲ್ಲಿ ತೊಡಗಿದ ವ್ಯಕ್ತಿ**"** ಎಂದು ಆರೋಪಿಸುವುದು ಶುದ್ಧ ಅನ್ಯಾಯವಾಗಿದೆ.

ಪ್ರವಾದಿರ ಪತ್ನಿಯರು ಉತ್ತಮ ಚಾರಿತ್ರ್ಯ ನಡವಳಿಕೆಯುಳ್ಳವ ರಾಗಿದ್ದರು. ಅವರು ಕುಲೀನ ಮನೆತನಕ್ಕೆ ಸೇರಿದವರಾಗಿದ್ದು ಧರ್ಮನಿಷ್ಠೆಯಾಗಿದ್ದರು. ಪ್ರವಾದಿರ ನಿಧನದ ನಂತರವೂ, ಅವರು ಬಡತನದ ಜೀವನವನ್ನೇ ಮುಂದುವರೆಸಿದ್ದರು.

ಅವರಿಂದ ಯಾವುದೇ ತಪ್ಪು ಕಾರ್ಯ ಸಂಭವಿಸಿರಲಿಲ್ಲ, ಆದಾಗ್ಯೂ, ಪ್ರವಾದಿ ಮುಹಮ್ಮದ್‌ರ ವಿರೋಧಿಗಳು, ಪ್ರವಾದಿರ ಪತ್ನಿಯರ ಮೇಲೆ ಅಪವಾದಗಳನ್ನು ಹೊರಿಸಲು ಯತ್ನಿಸಿದ್ದಾರೆ. ಇದು ಪ್ರವಾದಿರ ಪತ್ನಿಯರನ್ನು ತಮ್ಮ ತಾಯಂದಿರು ಎಂದು ಪರಿಗಣಿಸುವ ಸಮುದಾಯದ ಭಾವನೆಗಳನ್ನು ಘಾಸಿಗೊಳಿಸುವ ಕ್ರಮವೋ? ಅಥವಾ ವಾಕ್ ಸ್ವಾತಂತ್ರ್ಯವೋ?

ಪ್ರವಾದಿರ ನಿಧನದ 2 ಶತಮಾನಗಳ ನಂತರ ಅವರು ವಿಷಯಾಸಕ್ತಿಯಲ್ಲಿ ತೊಡಗಿದ್ದರು ಎಂದು ಬಿಂಬಿಸುವ ಹದೀಸ್‌ಗಳನ್ನು (ಪ್ರವಾದಿ ವಚನಗಳನ್ನು) ಸೃಷ್ಟಿಸಲಾಗಿತ್ತು. ಮುಹಮ್ಮದ್ ತಮ್ಮ ಪತ್ನಿಯರಲ್ಲದೇ, ಇತರ ಮಹಿಳೆಯರೊಂದಿಗೂ ಲೈಂಗಿಕ ಸಂಪರ್ಕವನ್ನು ಹೊಂದಿದ್ದರು ಎಂಬ ಮಾತು ಸ್ವೀಕಾರಾರ್ಹವಲ್ಲ. ಈ ಅಪವಾದವು ಮುಹಮ್ಮದ್‌ರ ಗುಣ ನಡತೆ, ಅವರ ಬೋಧನೆಗೆ ಅನುಗುಣವಾಗಿಲ್ಲ. ಕೆಲ ಮುಸ್ಲಿಮ್ ರಾಜರು, ವಿಷಯಾಸಕ್ತರಾಗಿದ್ದು ತಮ್ಮ ಅನೈತಿಕ ಕ್ರಿಯೆಗಳನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಸುಳ್ಳು ಪ್ರವಾದಿ ವಚನಗಳನ್ನು ಹುಟ್ಟು ಹಾಕಿದ್ದರು ಎಂಬುದು ಕಂಡು ಬರುತ್ತದೆ.

ದುರದೃಷ್ಟವಶಾತ್ ಪ್ರವಾದಿ ಮುಹಮ್ಮದ್‌ರ ವಿರೋಧಿಗಳು ಮತ್ತು ಶತ್ರುಗಳು, ಕೆಲ ಮುಸ್ಲಿಮ್ ಸಂಪ್ರದಾಯಸ್ಥರು ಪ್ರವಾದಿರ ಪೌರುಷತ್ವವನ್ನು ಎತ್ತಿ ತೋರಿಸುವ ಸ್ವರಚಿತ ವರದಿಗಳನ್ನು ಉಪಯೋಗಿಸಿದ್ದರು. ವಾಸ್ತವಿಕವಾಗಿ ಈ ಸಂಪ್ರದಾಯಸ್ಥರು ತಮ್ಮ ಪೋಷಕರ ಲೈಂಗಿಕ ಕೃತ್ಯಗಳಿಗೆ ಧಾರ್ಮಿಕ ರಕ್ಷಣೆ ಬಯಸಿದ್ದರು. ಈ ವರದಿಗಳು ಪ್ರವಾದಿರ ನಡವಳಿಕೆಗೆ, ಪ್ರವಾದಿ ಮತ್ತು ಅವರ ಪತ್ನಿಯರ ನಡುವಿನ ಸಂಬಂಧಕ್ಕೆ ತದ್ವಿರುದ್ಧವಾಗಿವೆ.

ಇಂತಹ ಸುಳ್ಳು ವರದಿಗಳ ಬಗ್ಗೆ ಮುಸ್ಲಿಮರು ಉಗ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಸೌದಿ ಅರೇಬಿಯಾದ ಪ್ರಖ್ಯಾತ ಇಸ್ಲಾಮೀ ವಿದ್ವಾಂಸ ಇಮಾಮ್ ರಷಾದ್ ಖಲೀಫ ತಮ್ಮ ಗ್ರಂಥ 'ಕುರ್‌ಆನ್, ಹದೀಸ್ ಮತ್ತು ಇಸ್ಲಾಮ್‌ನಲ್ಲಿ, ಈ ಕಪಟ ವರದಿಗಳು ಮತ್ತು ಕಪಟ ಸುನ್ನತ್ ಪ್ರವಾದಿರೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ ಮತ್ತು ಈ ಕಪಟ ವರದಿಗಳ ಮತ್ತು ಕಪಟ ಸುನ್ನತ್‌ನ ಅನುಸರಣೆ ಅಲ್ಲಾಹನ ಮತ್ತು ಅಲ್ಲಾಹನ ಪ್ರವಾದಿಯ ಸ್ಪಷ್ಟ ಆಜ್ಞೋಲ್ಲಂಘನೆಯಾಗಿದೆ ಎಂದಿರುವರು. ಇಮಾಮ್ ರಷಾದ್ ಖಲೀಫ, ತಮ್ಮ ಮಾತಿನ ಸಮರ್ಥನೆಗಾಗಿ ಕುರ್‌ಆನಿನ ಸೂಕ್ತ 6:112 ಮತ್ತು 25:31 ಉಲ್ಲೇಖಿಸಿ, ಈ ಕಪಟ ಮತ್ತು ಸ್ವರಚಿತ ವರದಿಗಳು ಮತ್ತು ಸುನ್ನತ್, ವಾಸ್ತವಿಕವಾಗಿ ಶೈತಾನಿನ ಸೃಷ್ಟಿಯಾಗಿದೆ ಎಂದು ನುಡಿದಿದ್ದಾರೆ.

ಪವಿತ್ರ ಕುರ್‌ಆನ್, ಪ್ರಚಲಿತ ಸಮಸ್ಯೆಗಳ ಬಗ್ಗೆ ಅಷ್ಟೇ ಅಲ್ಲ ಬುನಾದಿ ಮತ್ತು ಶಾಶ್ವತ ಮಹತ್ವವುಳ್ಳ ವಿಷಯಗಳ ಬಗ್ಗೆಯೂ ಸ್ಪಂದಿಸುತ್ತದೆ ಎಂಬುದನ್ನು ನಾವು ಗಮನದಲ್ಲಿಡಬೇಕು. ಕುರ್‌ಆನಿನ ಸೂಕ್ತಗಳ ಅವತೀರ್ಣದ ಸಂದರ್ಭದ ಹಿನ್ನೆಲೆಯಲ್ಲಿ ಕುರ್‌ಆನಿನ ಸೂಕ್ತಗಳ ವಿಶ್ಲೇಷಣೆಯನ್ನು ಮಾಡಬೇಕು. ಮುಹಮ್ಮದ್‌ರ ಬಹು

ವಿವಾಹಗಳನ್ನು ಆಗಿನ ಪರಿಸ್ಥಿತಿಯ, ಆಗಿನ ಸಂದರ್ಭದ ಬೇಡಿಕೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಬ್ರಿಟಿಷ್ ಜೀವನಚರಿತ್ರೆಕಾರ ಆರ್.ವಿ.ಸಿ.ಬೋಡ್ಲಿ, ತಮ್ಮ ಗ್ರಂಥ "ದ ಲೈಫ್ ಆಫ್ ಮುಹಮ್ಮದ್" ನಲ್ಲಿ ಹೀಗೆ ಬರೆದಿದ್ದಾರೆ.

"ಮುಹಮ್ಮದ್ ವೈವಾಹಿಕ ಜೀವನವನ್ನು ಸಂದರ್ಭದ ಹಿನ್ನೆಲೆಯಿಲ್ಲದೇ ಮತ್ತು ಕ್ರೈಸ್ತರು ನಿಗದಿಪಡಿಸಿರುವ ದೃಷ್ಟಿಕೋನದಿಂದ ನೋಡಬಾರದು. ಅರಬರು ಜೀವಿಸುತ್ತಿದ್ದ ಕಾಲ ಮತ್ತು ಪರಿಸ್ಥಿತಿಯಲ್ಲಿ ಮಾನದಂಡವು ಅರಬರೇ ನಿಗದಿಪಡಿಸಿದುದಾಗಿತ್ತು".

ಮುಂದುವರೆದು, ಗ್ರಂಥಕರ್ತರು, "ಯೂರೋಪ್ ಮತ್ತು ಅಮೇರಿಕಾದ ನೈತಿಕ ಮಾನದಂಡವನ್ನೇ ಏಕೆ ಏಷಿಯಾ ಮತ್ತು ಆಫ್ರಿಕಾದ ನೈತಿಕ ಮಾನದಂಡಕ್ಕಿಂತ ಶ್ರೇಷ್ಠವೆಂದು ಪರಿಗಣಿಸಬೇಕು?' ಎಂದು ಪ್ರಶ್ನಿಸುತ್ತಾರೆ.

"ಪಾಶ್ಚಾತ್ಯರು ತಮ್ಮ ಜೀವನ ಶೈಲಿ ನೈತಿಕವಾಗಿ ಉನ್ನತಮಟ್ಟದ್ದಾಗಿದೆ ಎಂದು ಸಾಬೀತು ಪಡಿಸುವ ತನಕ ಇತರ ಸಮುದಾಯಗಳ ಸಂಪ್ರದಾಯ, ಆಚರಣೆಗಳ ಬಗ್ಗೆ ಟೀಕೆ ಮಾಡಬಾರದು" ಎಂದು ವಿಮರ್ಶಿಸಿದ್ದಾರೆ.

ಅಂತರ್ ಗೋತ್ರ ವಿವಾಹಗಳನ್ನು ಸಿಂಧುಗೊಳಿಸಲು ಬಹುಪತ್ನಿತ್ವ ಪದ್ಧತಿಯಿಂದ ಸಾಧ್ಯವಾಯಿತು. ಇಸ್ಲಾಮಿನಲ್ಲಿ ಯಾರೂ ಹುಟ್ಟಿನ ಆಧಾರದ ಮೇಲೆ ಮೇಲು, ಕೀಳು ಆಗುವುದಿಲ್ಲ. ಯಾರು, ಯಾವುದೇ ಗೋತ್ರದಲ್ಲಿ ಜನಿಸಿರಲಿ ಅಥವಾ ಧರ್ಮದವರಾಗಿರಲಿ ಅವರು ಇಸ್ಲಾಮಿನ ವ್ಯಾಪ್ತಿಯೊಳಗೆ ಬಂದರೆ, ಅವರ ಹಿಂದಿನ ಆಚರಣೆಗಳು, ನಂಬಿಕೆಗಳು, ಸ್ಥಾನಮಾನ, ಅವರನ್ನು ವಿವಾಹವಾಗಲು ಅಡ್ಡವಾಗಲಾರವು.

ಅರೇಬಿಯದಲ್ಲೂ ವಿಧವೆಯರ, ವಿಚ್ಛೇದಿತ ಮಹಿಳೆಯರ ವಿವಾಹವನ್ನು ಪ್ರೋತ್ಸಾಹಿಸಲಾಗುತ್ತಿರಲಿಲ್ಲ. ಪ್ರವಾದಿ ಸ್ವತಃ ವಿಧವೆಯರನ್ನು, ವಿಚ್ಛೇದಿತೆಯರನ್ನು ವಿವಾಹವಾಗುವ ಮೂಲಕ ಸಮಾಜಕ್ಕೆ ದಾರಿ ತೋರಿದರು.

ಈ ರೀತಿ ಪ್ರವಾದಿ ಬಹು ವಿವಾಹಗಳನ್ನು ಯಾವ ಸಂದರ್ಭದಲ್ಲಿ ಮತ್ತು ಯಾವ ಕಾರಣಗಳಿಗಾಗಿ ಮಾಡಿಕೊಂಡಿದ್ದರು ಎಂಬುದನ್ನು ಯಾವುದೇ ಪೂರ್ವಗ್ರಹವಿಲ್ಲದೇ ವಿಶ್ಲೇಷಿಸಬೇಕು.

ಪ್ರವಾದಿರ ಆಗಮನದ ಮೊದಲು ಅರೇಬಿಯಾದಲ್ಲಿ ಮಹಿಳೆಯರೊಂದಿಗೆ ಅತಿ ಹೀನಾಯವಾಗಿ ನಡೆದುಕೊಳ್ಳಲಾಗಿತ್ತು. ಅವರನ್ನು ಭೋಗದ ವಸ್ತುವಾಗಿ ಪರಿಗಣಿಸಲಾಗುತ್ತಿತ್ತು. ಆಸ್ತಿಯಲ್ಲಿ ಪಾಲಾಗಲಿ, ವಿವಾಹದ ಸಮಯದಲ್ಲಿ ಅವರ ಅಭಿಪ್ರಾಯ ಪಡೆಯುವುದಾಗಲಿ, ಮತ್ತು ವ್ಯಾಪಾರ ವಹಿವಾಟು ನಡೆಸಲು ಅವಕಾಶವನ್ನು ಅವರಿಗೆ ನೀಡಲಾಗುತ್ತಿರಲಿಲ್ಲ. ಪ್ರವಾದಿ ಕುರ್‌ಆನಿನ ಆದೇಶಕ್ಕೆ ಅನುಗುಣವಾಗಿ ಮಹಿಳೆಯರ ವಿಮೋಚನೆಗಾಗಿ ಅನೇಕ ಕ್ರಮಗಳನ್ನು ಕೈಗೊಂಡರು.

ಈ ಮೊದಲು ಅರೇಬಿಯಾದಲ್ಲಿ ಗೋತ್ರಗಳು ಸಮಾಜದ ಬುನಾದಿಯಾಗಿದ್ದವು.

ಆದರೆ ಪ್ರವಾದಿ ಕುಟುಂಬವನ್ನು ಸಮಾಜದ ಬುನಾದಿಯಾಗಿ ಮಾಡಿದರು. ಗುಲಾಮ ಮಹಿಳೆಯರನ್ನು ಪುರುಷರ ನಿಧನದ ನಂತರ ಅವರ ಮಕ್ಕಳಿಗೆ ಹಸ್ತಾಂತರಿಸಲಾಗುತ್ತಿತ್ತು. ಪ್ರವಾದಿ ಈ ಪದ್ಧತಿಯನ್ನು ನಿಷೇಧಿಸಿ ಗುಲಾಮ ಸ್ತ್ರೀಯರಿಗೆ ತಾಯಿಯ ಸ್ಥಾನವನ್ನು ನೀಡಿದರು. ಮಹಿಳೆಯರಿಗೆ ವಾರೀಸು ಹಕ್ಕನ್ನು ನೀಡಲಾಯಿತು. ಮಹಿಳೆಯರೊಂದಿಗೆ ಯಾವ ಯಾವ ಸಂಬಂಧಿಕರು ವಿವಾಹ ಮಾಡಿಕೊಳ್ಳಬಹುದು, ಯಾವ ಸಂಬಂಧಿಕರಿಗೆ ವಿವಾಹ ನಿಷಿದ್ಧವಾಗಿದೆ ಎಂಬುದರ ಬಗ್ಗೆ ನಿಯಮಗಳನ್ನು ರೂಪಿಸಲಾಯಿತು. ಇದೇ ರೀತಿ ಸ್ತ್ರೀ, ಪುರುಷರ ನಡುವೆ ಮುಕ್ತ ಮಿಲನಕ್ಕೂ ಕಡಿವಾಣ ಹಾಕಲಾಯಿತು. ಸ್ತ್ರೀ, ಪುರುಷರ ಏಕಾಂತತೆಯನ್ನು ಕಾಪಾಡುವ ಬಗ್ಗೆಯೂ ಆದೇಶಗಳನ್ನು ನೀಡಲಾಯಿತು.

ಮಹಿಳೆಗೆ ಸಂಬಂಧಗಳ ಪ್ರಧಾನ ಪಾತ್ರವಹಿಸಲಾಯಿತು, ಸಂಬಂಧಗಳು.

1. ಯಾರು ಜನ್ಮ ನೀಡಿದವರು?

2. ಯಾರೊಂದಿಗೆ ವಿವಾಹ ನೆರವೇರಿಸಲ್ಪಟ್ಟಿತು?

3. ಶಿಶು ಅವಸ್ಥೆಯಲ್ಲಿ ಯಾರು ಪಾಲನೆ, ಪೋಷಣೆ ಮಾಡಿದರು? ಎಂಬ ಅಂಶಗಳ ಮೇಲೆ ನಿರ್ಧಾರಿತವಾಗುತ್ತಿದ್ದವು.

ಇಸ್ಲಾಮ್ ಬಹುಪತ್ನಿತ್ವವನ್ನು ಪ್ರೋತ್ಸಾಹಿಸುತ್ತದೆ ಎಂಬ ಸಾಮಾನ್ಯ ಆರೋಪಕ್ಕೆ ತದ್ವಿರುದ್ಧವಾಗಿ, ಇಸ್ಲಾಮ್ ಬಹುಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ಮಿತಿಗೊಳಿಸಿತು. ಆಗಿನ ಕಾಲದ ಸಂಪ್ರದಾಯವನ್ನು ಪರಿಗಣಿಸಿದರೆ, ಇದು ಪ್ರಗತಿಪರ ಕ್ರಮವಾಗಿತ್ತು.

ಪ್ರವಾದಿ ಸ್ತ್ರೀಯರ ಸ್ಥಾನಮಾನಕ್ಕೆ ಪ್ರಾಧನ್ಯತೆ ನೀಡಿದರು. ತಂದೆಗಿಂತ ತಾಯಿ ಸೇವೆಗೆ ಹೆಚ್ಚು ಅರ್ಹಳು ಎಂದು ಪ್ರವಾದಿ ಸಾರಿದರು. ತಾಯಿಯ ಪಾದದಡಿ ಸ್ವರ್ಗವಿದೆ ಎಂದು ಪ್ರವಾದಿ ಘೋಷಿಸಿದರು. ಆಗಿನ ಕಾಲದಲ್ಲಿ ಹೆಣ್ಣು ಶಿಶುವಿನ ಜನನವನ್ನು ಅಪಮಾನಕರವೆಂದು ಭಾವಿಸಲಾಗುತ್ತಿತ್ತು. ಹೆಣ್ಣು ಶಿಶುವನ್ನು ಜೀವಂತ ಹೂಳಲಾಗುತ್ತಿತ್ತು. ಯಾರು ಹೆಣ್ಣು ಮಕ್ಕಳನ್ನು ಉತ್ತಮ ರೀತಿಯಲ್ಲಿ ಪಾಲನೆ, ಪೋಷಣೆ ಮಾಡಿ ವಿವಾಹ ಮಾಡಿಕೊಡುತ್ತಾರೋ ಅವರಿಗೆ ಸ್ವರ್ಗವನ್ನು ನೀಡಲಾಗುವುದೆಂದು ಕುರ್‌ಆನ್ ಸಾರಿತು. ವಿಧವೆಯರ, ವಿಚ್ಛೇದಿತ, ನಿರ್ಗತಿಕ ಮಹಿಳೆಯರ ವಿವಾಹಗಳನ್ನು ಉತ್ತೇಜಿಸಲಾಯಿತು. ವಿವಾಹಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಯಿತು. ವಿವಾಹ ಸಂಬಂಧವನ್ನು ದುರ್ಬಲಗೊಳಿಸುವ, ಅದನ್ನು ಹಾಳುಗೆಡಹುವ ಕ್ರಮಗಳನ್ನು ಕಟುವಾಗಿ ಟೀಕಿಸಲಾಯಿತು. ಇಸ್ಲಾಮ್ ಪತಿ, ಪತ್ನಿಯರ ನಡುವೆ ಘರ್ಷಣೆ ಭಿನ್ನಾಭಿಪ್ರಾಯಗಳನ್ನು ಪರಿಗಣಿಸಿ, ಪತಿ, ಪತ್ನಿಯರ ವೈವಾಹಿಕ ಸಂಬಂಧದಿಂದ ಬೇರ್ಪಡುವಿಕೆಯ ಸಾಧ್ಯತೆಯನ್ನು ತಳ್ಳಿ ಹಾಕಲಿಲ್ಲ. ಎಲ್ಲಾ ಪ್ರಯತ್ನಗಳ ಹೊರತಾಗಿಯೂ ವೈವಾಹಿಕ ಸಂಬಂಧವನ್ನು ಮುಂದುವರೆಸಲು ಅಸಾಧ್ಯವೆಂಬ ಪರಿಸ್ಥಿತಿ ಉಂಟಾದಲ್ಲಿ, ವಿವಾಹವನ್ನು ಅಸಿಂಧುಗೊಳಿಸಲು ಅನುಮತಿಯನ್ನು ಇಸ್ಲಾಮ್ ನೀಡಿದೆ.

☆

# ಪುತ್ರನ ನಿಧನ

ಹತ್ತನೆಯ ಹಿಜರಿ ಶಕೆವೇಳೆಯಲ್ಲಿ ಇಸ್ಲಾಮ್ ಅರೇಬಿಯಾ ಪ್ರದೇಶದಾದ್ಯಂತ ವ್ಯಾಪಿಸಿತ್ತು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪತ್ನಿ ಮಾರಿಯಃ ಸುಂದರ ಗಂಡು ಮಗುವಿಗೆ ಜನ್ಮ ನೀಡುತ್ತಾರೆ. ಪ್ರವಾದಿ ಮಗುವಿಗೆ ಇಬ್ರಾಹೀಮ್ ಎಂದು ಹೆಸರಿಸುತ್ತಾರೆ. ಸುಂದರ ಶಿಶುವಿನ ಜನನದಿಂದ ಪ್ರವಾದಿ ಬಹಳ ಸಂತುಷ್ಟರಾಗಿದ್ದರು. ಒಂದು ಭೋಜನ ಕೂಟವನ್ನೂ ಅವರು ಏರ್ಪಡಿಸಿದ್ದರು. ಮಗುವಿನೊಂದಿಗೆ ಪ್ರವಾದಿ ಆಟವಾಡುತ್ತಿದ್ದರು.

ಮಗು ಒಂದೂವರೆ ವರ್ಷ ಪ್ರಾಯವಾದಾಗ ರೋಗಗ್ರಸ್ಥವಾಯಿತು. ಮಗು ಮರಣ ಶಯ್ಯೆಯಲ್ಲಿರುವುದನ್ನು ನೋಡಿ ಪ್ರವಾದಿ ಬಹಳ ದುಃಖಿತರಾದರು. ಕೆಲದಿನಗಳ ಬಳಿಕ ಮಗು ನಿಧನ ಹೊಂದಿತು. ಪ್ರವಾದಿರ ಕಣ್ಣುಗಳಿಂದ ಅಶ್ರುಧಾರಾಕಾರವಾಗಿ ಹರಿಯಿತು. ದುಃಖದಿಂದ ಗದ್ಗದಿತವಾದರು. ಪ್ರವಾದಿ ತಮ್ಮ ಮಗುವನ್ನು ಎತ್ತಿ ಎದೆಗೆ ಅವಚಿಕೊಂಡರು. ಕಣ್ಣೀರು ಒಂದೇ ಸಮನೆ ಹರಿಯುತ್ತಿತ್ತು. ಹೊಸ ದುರಂತದಿಂದ ಪ್ರವಾದಿರ ಹೃದಯ ನುಚ್ಚು ನೂರಾಗಿತ್ತು. ಅವರ ಮುಖಾರವಿಂದ, ಅವರ ದುಃಖವನ್ನು ಪ್ರಕಟಿಸುತ್ತಿತ್ತು. ಅಬ್ದುರ್ರೆಹ್ಮಾನ್‌ರಿಗೆ ಪ್ರವಾದಿರ ದುಃಖ ಕಂಡು ಆಚ್ಚರ್ಯವಾಯಿತು.

"ಪ್ರವಾದಿವರ್ಯರೇ, ನೀವೂ ಅಳುವುದೇ?" ಎಂದು ಅವರು ಪ್ರಶ್ನಿಸಿದರು. ಪ್ರವಾದಿ, "ಆಪ್ತರೇಷ್ಟರ ನಿಧನದಿಂದ ದುಃಖವಾಗುವುದು ಸಹಜ. ಆದರೆ ದುಃಖದ ಕಾರಣದಿಂದಾಗಿ ಅತಿರೇಕದ ಕಾರ್ಯಗಳನ್ನು ಮಾಡಬಾರದು" ಎಂದು ಉತ್ತರಿಸಿದರು. ಪ್ರವಾದಿ ಮುಂದುವರೆದು ನುಡಿದರು: "ನನ್ನ ಕಣ್ಣೀರು ಮೃದುತ್ವದ ದ್ಯೋತಕವಾಗಿದೆ".

"ಯಾರು ಕರುಣೆಯನ್ನು ತೋರುವುದಿಲ್ಲವೋ, ಅಲ್ಲಾಹ್ ಅವರ ಮೇಲೆ ಕರುಣೆ ತೋರುವುದಿಲ್ಲ".

ಜೀವನದ ಸಂಕಷ್ಟಗಳ ಸಮಯದಲ್ಲಿ ಜನರು ಪರಸ್ಪರರಿಗೆ ತೋರುವ ಅನುಕಂಪ, ಕರುಣೆ, ಪ್ರೀತಿಯ ನುಡಿಗಳು ಇದರಿಂದ ಅವರು ಅಲ್ಲಾಹನಿಗೆ ನಿಕಟರಾಗುತ್ತಾರೆ. ಅವುಗಳ ಮೂಲಕ ಅಲ್ಲಾಹ್ ಸತ್ಯ ವಿಶ್ವಾಸಿಯ ಹೃದಯದ ಸಮೀಪಕ್ಕೆ ಬರುತ್ತಾನೆ. ಸತ್ಯ ವಿಶ್ವಾಸಿಯು ಇತರರಿಗೆ ನೀಡಿದ ಕೊಡುಗೆಯನ್ನು ಅವರಿಗೆ ನೀಡುತ್ತಾನೆ.

ಪ್ರವಾದಿ ವೈಯಕ್ತಿಕವಾಗಿ ನೋವನ್ನು ಅನುಭವಿಸುತ್ತಿದ್ದರು. ಅವರು ತಮ್ಮ ದುಃಖವನ್ನು ಪ್ರಕಟಿಸಲು ಹಿಂಜರಿಯಲಿಲ್ಲ.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ನುಡಿದರು:

"ಓ ಇಬ್ರಾಹಿಮ್, ಹೃದಯಕ್ಕೆ ಬಹಳ ನೋವು ಉಂಟಾಗಿದೆ. ಆದರೆ ಅಲ್ಲಾಹನು ಸಂತುಷ್ಟಗೊಳ್ಳುವ ಮಾತುಗಳನ್ನೇ ನುಡಿಯಬೇಕು".

ಅಲ್ಲಾಹ್, ಮುಹಮ್ಮದ್‌ರನ್ನು ಅವರ ಕಾರ್ಯಭಾರದಲ್ಲಿ ಮತ್ತೊಮ್ಮೆ ತೀವ್ರ ಪರೀಕ್ಷೆಗೆ ಒಡ್ಡಿದ್ದನು. ಅವರ ಅನೇಕ ಪ್ರೀತಿ ಪಾತ್ರರನ್ನು ಅವರು ಕಳೆದುಕೊಂಡಿದ್ದರು– ಅವರ ಅನುಯಾಯಿಗಳು, ಅವರ ಪತ್ನಿ ಖದೀಜಾ, ಮೂವರು ಪುತ್ರಿಯರು ಮತ್ತು ಮೂವರು ಪುತ್ರರು. ಜೀವನದಲ್ಲಿ ಅವರು ದುಃಖವನ್ನು ಕಂಡಿದ್ದರು. ಅವರು ಹೃದಯದಲ್ಲಿ ಮೃದುತ್ವವನ್ನು ಹೊಂದಿದ್ದರೂ, ತಮ್ಮ ಧ್ಯೇಯದಲ್ಲಿ ಅಚಲರಾಗಿದ್ದರು.

# ಸೂರ್ಯಗ್ರಹಣ

ಪುತ್ರ ಇಬ್‌ರಾಹೀಮ್‌ರನ್ನು ದಫನ್ ಮಾಡಿ ಹಿಂತಿರುಗಿದ ಕೆಲ ಗಂಟೆಗಳಲ್ಲಿ ಸೂರ್ಯಗ್ರಹಣವಾಯಿತು. ಜನರು ಸೂರ್ಯಗ್ರಹಣಕ್ಕೂ, ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಪುತ್ರನ ನಿಧನಕ್ಕೂ ಸಂಬಂಧ ಕಲ್ಪಿಸಿ, ಪ್ರವಾದಿರ ಪುತ್ರನ ನಿಧನವಾಗಿರುವ ಕಾರಣ ಸೂರ್ಯಗ್ರಹಣವಾಗಿದೆ ಎಂದು ಹೇಳಲಾರಂಭಿಸಿದರು ಮತ್ತು ಇದೊಂದು ಪವಾಡ ಎಂದು ಬಗೆದರು. ಈ ಮಾತುಗಳು ಪ್ರವಾದಿರಿಗೆ ತಿಳಿದ ಕೂಡಲೇ ಅವರು ಮಸೀದಿಗೆ ಆಗಮಿಸಿ ಪ್ರವಚನ ನೀಡಿದರು.

"ಜನರೇ ಸೂರ್ಯ, ಚಂದ್ರರು ಅಲ್ಲಾಹನ ಚಿಹ್ನೆಗಳಾಗಿದ್ದು, ಯಾರದೇ ನಿಧನದಿಂದ ಸೂರ್ಯಗ್ರಹಣ ಉಂಟಾಗುವುದಿಲ್ಲ"

ಈ ರೀತಿ ಪ್ರವಾದಿ ಜನರನ್ನು ಅಪನಂಬಿಕೆಗಳಿಂದ ರಕ್ಷಿಸಿದರು.

ದುಃಖ, ಸಂಕಷ್ಟಗಳ ಎದರು ಪ್ರವಾದಿ ಮತ್ತು ಅವರ ಅನುಯಾಯಿಗಳಿಗೆ ಇದು ತಾಳ್ಮೆ, ಸಹಿಷ್ಣುತೆಯ ಪಾಠವಾಗಿತ್ತು. ಜನರು, ತಮ್ಮ ಪ್ರೀತಿಗೆ ಪಾತ್ರರಾದವರು ತಮ್ಮಿಂದ ಅಗಲುವುದನ್ನು ಕಲಿಯಬೇಕಾಗಿತ್ತು. ಪ್ರವಾದಿ ಹರಿಸಿದ ಕಣ್ಣೀರು, ತಮ್ಮ ಪುತ್ರ ಆಕಸ್ಮಿಕವಾಗಿ ಅಗಲಿದ ಕಾರಣಕ್ಕಾಗಿಯಾಗಿತ್ತು. ಯಾವನೇ ವ್ಯಕ್ತಿಯ ನಿಧನದಿಂದ ಪವಾಡಗಳು ಉಂಟಾಗುವುದಿಲ್ಲ.

# 24

# ವಿದಾಯ ಹಜ್ಜ್

ಹತ್ತನೆಯ ಹಿಜರಿ ಶಕೆ ರಮಝಾನ್ ತಿಂಗಳಿನಲ್ಲಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ), ಫಾತಿಮಾರನ್ನು ಉದ್ದೇಶಿಸಿ ಹೇಳಿದರು :

"ಮಗಳೇ, ಪ್ರತಿವರ್ಷ ದೇವಚರ ಜಿಬ್ರೀಲ್, ರಮಝಾನ್ ತಿಂಗಳಿನಲ್ಲಿ ನನಗೆ ಒಂದು ಬಾರಿ ಕುರ್‌ಆನ್ ಕೇಳಿಸುತ್ತಾರೆ. ಆದರೆ ಈ ವರ್ಷ ಜಿಬ್ರೀಲ್, ನನಗೆ ಎರಡು ಸಲ ಕುರ್‌ಆನ್ ಕೇಳಿಸಿದ್ದಾರೆ. ಬಹುಶಃ ನನ್ನ ಅಂತಿಮ ಕಾಲ ಸನ್ನಿಹಿತವಾಗಿದೆ".

ಪ್ರವಾದಿ ಹಜ್ಜ್ ನಿರ್ವಹಿಸಲು ನಿಶ್ಚಯಿಸುತ್ತಾರೆ. ಅವರು ಇಲ್ಲಿಯವರೆಗೂ ಹಜ್ಜ ನಿರ್ವಹಿಸಿರಲಿಲ್ಲ. ಈಗ ಹಜ್ಜ್ ನಿರ್ವಹಿಸಲು ಕಾಲ ಸನ್ನಿಹಿತವಾಗಿತ್ತು.

ಹಿ.ಶ. 10ರ ದುಲ್‌ಕಅದ್ ತಿಂಗಳ 25ನೆಯ ದಿನ ಮುಹಮ್ಮದ್ ಹಜ್ಜ್‌ಗಾಗಿ ಹೊರಟಿದ್ದಾರೆ. ಜನರು ಅತ್ಯಧಿಕ ಸಂಖ್ಯೆಯಲ್ಲಿ ಸೇರುವಂತೆ ಎಲ್ಲಾ ಕಡೆಯೂ ಇದರ ಸುದ್ದಿ ಮುಟ್ಟಿಸಲಾಗಿದೆ. ಪ್ರವಾದಿ 30000 ಯಾತ್ರಿಕರೊಂದಿಗೆ ಹಜ್ಜ್ ನಿರ್ವಹಿಸಲು ಹೊರಟರು. ದಾರಿಯಲ್ಲಿ ಅನೇಕ ಗೋತ್ರಗಳ ಜನರು ಅವರ ಜೊತೆ ಸೇರತೊಡಗಿದರು. ದಾರಿಯಲ್ಲಿ ಹಜ್ಜ್ ನಿರ್ವಹಣೆಯ ಬಗ್ಗೆ ಕುರ್‌ಆನಿನ ಆಯತ್‌ಗಳು ಅವತೀರ್ಣ ಗೊಂಡವು. ಅಜ್ಞಾನ ಕಾಲದ ರೀತಿ, ರಿವಾಜುಗಳು ಅನೂರ್ಜಿತಗೊಂಡವು. ಅಲ್ಲಾಹನ ಭವನ ಕಅಬಾ ಈಗ ಕೇವಲ ಏಕೈಕ ದೇವನಾದ ಅಲ್ಲಾಹನ ಆರಾಧನೆಗಾಗಿದೆಯೆಂದೂ, ಬಹುದೇವ ಆರಾಧಕರು ಈಗ ಇದರ ಸಮೀಪ ಬರುವಂತಿಲ್ಲವೆಂದು ತಿಳಿಸಲಾಯಿತು.

ಸಂದೇಶವು ಸ್ಪಷ್ಟವಾಗಿತ್ತು. ಪವಿತ್ರ ಕಅಬ ಈಗ ಕೇವಲ ಏಕೈಕ ಅಲ್ಲಾಹನ ಆರಾಧನೆಗಾಗಿ ಸೀಮಿತವಾಗಿತ್ತು. ಇನ್ನು ಮುಂದೆ ಮುಸ್ಲಿಮರಷ್ಟೇ ಅದರೊಳಗೇ ಪ್ರವೇಶಿಸಬಹುದಿತ್ತು.

ಕುರ್‌ಆನಿನ ಈ ಸೂಕ್ತಗಳು ಅವತೀರ್ಣಗೊಂಡವು:

> "ಅಲ್ಲಾಹ್ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿರಿಸುವವರೂ, ನಮಾಝನ್ನು ಸಂಸ್ಥಾಪಿಸುವವರೂ, ಝಕಾತ್ ಕೊಡುವವರೂ, ಅಲ್ಲಾಹನ ಹೊರತು ಇನ್ನಾರನ್ನು ಭಯಪಡದವರೂ ಮಾತ್ರ ಅಲ್ಲಾಹನ ಮಸ್ಜಿದ್‌ಗಳನ್ನು ನೆಲೆಗೊಳಿಸುವವ (ಮೇಲ್ವಿಚಾರಕ ಮತ್ತು ಸೇವಕ)ರಾಗಬಲ್ಲರು.
> (ಪವಿತ್ರ ಕುರ್‌ಆನ್ 9:18)

ಕುರ್‌ಆನಿನ ಈ ಆದೇಶ ಪವಿತ್ರ ಕಅಬಕ್ಕೆ ಮಾತ್ರ ಅನ್ವಯಿಸುತ್ತಿತ್ತು. ಜಗತ್ತಿನ ಇತರ ಎಲ್ಲಾ ಮಸೀದಿಗಳಿಗೆ ಮುಸ್ಲಿಮೇತರರು ಪ್ರವೇಶಿಸಬಹುದಿತ್ತು. ಕುರ್‌ಆನಿನ ಸೂಕ್ತಗಳ ಮುಖ್ಯ ತಾತ್ಪರ್ಯ ಏಕೈಕ ಆರಾಧ್ಯನಾದ ಅಲ್ಲಾಹನ ಆರಾಧನೆಯ ಸಂಸ್ಥಾಪನೆಯಾಗಿತ್ತು. (ತೌಹೀದ್)

ಮಕ್ಕಾ ಪ್ರವೇಶಿಸಿದ ನಂತರ ಪ್ರವಾದಿ ಹಜ್ಜ್‌ನ ವಿವಿಧ ವಿಧಿಗಳನ್ನು ನಿರ್ವಹಿಸಿದರು. ತಮ್ಮ ಅನುಯಾಯಿಗಳಿಗೆ, ಅವರು ಅವರ ಪೂರ್ವಜ ಇಬ್ರಾಹಿಮ್ (ಅವರ ಮೇಲೆ ಶಾಂತಿ ಇರಲಿ)ರ ಪರಿಶುದ್ಧ ಏಕೈಕ ದೇವನ ಆರಾಧನೆಯನ್ನು ಪುನರ್ ಸಂಸ್ಥಾಪಿಸುತ್ತಿರುವುದಾಗಿ ತಿಳಿಸಿದರು. ಈ ಹಜ್‌ಯಾತ್ರೆಯು, ಪ್ರವಾದಿರ ಪರಿಪೂರ್ಣ ಜೀವನದಂತೆ ಅಲ್ಲಾಹನೆಡೆಗೆ ಮರುಳುವಿಕೆಯಾಗಿತ್ತು. ಇಬ್ರಾಹೀಮ್ ಏಕೈಕ ದೇವನಾದ ಅಲ್ಲಾಹನ ಆರಾಧನೆಗಾಗಿ ಕಅಬ ಭವನವನ್ನು ನಿರ್ಮಿಸಿದ್ದರು. ಪ್ರವಾದಿ ಕೈಗೊಂಡ ಹಜ್ ಯಾತ್ರೆ ಇಬ್ರಾಹೀಮ್‌ರ ಹೆಜ್ಜೆ ಗುರುತುಗಳಲ್ಲಿ ಅಲ್ಲಾಹನೆಡೆಗೆ ಮರಳುವಿಕೆಯಾಗಿತ್ತು.

ಅನುಯಾಯಿಗಳು ಪ್ರವಾದಿ ಪ್ರತಿಯೊಂದು ಕಾರ್ಯವನ್ನು ಗಮನವಿಟ್ಟು ವೀಕ್ಷಿಸಿದರು. ಪ್ರವಾದಿ ಅನುಯಾಯಿಗಳಿಗೆ ತಮ್ಮ ಅನುಕರಣೆ ಮಾಡುವಂತೆ ಆದೇಶಿಸಿದ್ದರು.

ಹಿ.ಶ. 10 ದುಲ್ ಹಿಜ್ಜದ 9ನೆಯ ದಿನ ಅರಫಾ ಮೈದಾನದಲ್ಲಿ ಪ್ರವಾದಿ ತಮ್ಮ ಒಂಟೆ ಕಸ್ವಾದ ಮೇಲೆ ಕುಳಿತು ನೆರೆದಿರುವ 1,44,000 ಯಾತ್ರಿಕರ ಕಡೆಗೆ ನೋಡುತ್ತಿದ್ದಾರೆ. ಒಂಟೆಯ ಮೇಲೆ ಕುಳಿತು ಪ್ರವಾದಿ ನೆರೆದಿದ್ದ ಯಾತ್ರಿಕರನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ. ಪ್ರವಾದಿ ಭಾಷಣವನ್ನು ಸಣ್ಣ ಸಣ್ಣ ವಾಕ್ಯಗಳಲ್ಲಿ ಮಾಡಿದರು. ಪ್ರತಿ ವಾಕ್ಯದ ನಡುವೆ ಸ್ವಲ್ಪ ಸಮಯದ ವಿರಾಮವಿರುತ್ತಿತ್ತು. ಅವರು ಉಚ್ಚರಿಸಿದ ಪ್ರತಿ ಪದಗಳನ್ನು, ಅವರ ಸುತ್ತ ನೆರೆದಿದ್ದ ಜನರು ಏರು ಧ್ವನಿಯಲ್ಲಿ ನೆರೆದಿದ್ದ ಎಲ್ಲಾ ಜನರಿಗೆ ಕೇಳಿಸುವಂತೆ ಪುನರುಚ್ಚಿಸುತ್ತಿದ್ದರು.

# ವಿದಾಯ ಭಾಷಣ

ಜನರೇ! ನನ್ನ ಮಾತುಗಳನ್ನು ಗಮನವಿಟ್ಟು ಆಲಿಸಿರಿ. ಈ ವರ್ಷದ ಬಳಿಕ ನಾವು ಇಲ್ಲಿ ಭೇಟಿಯಾಗುತ್ತೇವೋ ಇಲ್ಲವೋ ಎಂಬುದು ನನಗೆ ತಿಳಿಯದು. ಮುಂದಿನ ವರ್ಷದ ಹಜ್ಜ್ ನಿರ್ವಹಿಸಲು ನಾನು ಇರುತ್ತೇನೋ ಇಲ್ಲವೋ ಎಂಬುದೂ ನನಗೆ ತಿಳಿಯದು.

ಜನರೇ! ಖಂಡಿತವಾಗಿಯೂ ಅಲ್ಲಾಹನು ಹೀಗೆ ಹೇಳಿರುವನು: "ಮನುಷ್ಯರೇ! ನಿಮ್ಮನ್ನು ನಾನು ಒಂದು ಗಂಡು ಮತ್ತು ಒಂದು ಹೆಣ್ಣಿನಿಂದ ಸೃಷ್ಟಿಸಿರುವೆನು. ನಾನು ನಿಮ್ಮನ್ನು ವಿವಿಧ ಕುಲ-ಗೋತ್ರಗಳಾಗಿ ಮಾಡಿರುವುದು ನೀವು ಪರಸ್ಪರ ಪರಿಚಯ ಪಡಲಿಕ್ಕಾಗಿದೆ. ಖಂಡಿತವಾಗಿಯೂ ಅಲ್ಲಾಹನ ಬಳಿ ನಿಮ್ಮ ಪೈಕಿ ಅತ್ಯಧಿಕ ಭಯಭಕ್ತಿಯುಳ್ಳವನೇ ಅತ್ಯಂತ ಗೌರವಾರ್ಹ ನಾಗಿರುವನು".

ಅರಬನಿಗೆ ಅರಬೇತರನ ಮೇಲೆ ಯಾವುದೇ ಶ್ರೇಷ್ಠತೆ ಇಲ್ಲ. ಅರಬೇತರನಿಗೆ ಅರಬನ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ. ಕರಿಯನಿಗೆ ಬಿಳಿಯನ ಮೇಲೆ ಯಾವುದೇ ಮೇಲ್ಮೆ ಇಲ್ಲ. ಬಿಳಿಯನಿಗೆ ಕರಿಯನ ಮೇಲೆ ಯಾವುದೇ ಮೇಲ್ಮೆ ಇಲ್ಲ. ಧರ್ಮ ನಿಷ್ಠೆ ಮತ್ತು ದೇವಭಕ್ತಿಯ ಹೊರತು, ಮನುಷ್ಯರೆಲ್ಲರೂ ಆದಮರ ಮಕ್ಕಳು. ಆದಮರು ಮಣ್ಣಿನಿಂದ ಸೃಷ್ಟಿಸಲ್ಪಟ್ಟಿದ್ದರು. ರಕ್ತ ಅಥವಾ ಸಂಪತ್ತಿನ ಆಧಾರದಲ್ಲಿರುವ ಎಲ್ಲಾ ಶ್ರೇಷ್ಠತೆಗಳನ್ನು ನಾನು ನನ್ನ ಪಾದದಡಿ ಹಾಕಿ ತುಳಿದಿರುವೆನು.

ತಿಳಿಯಿರಿ! ಅಜ್ಞಾನ ಕಾಲದ ಎಲ್ಲ ಸಂಪ್ರದಾಯಗಳು ನನ್ನ ಪಾದದಡಿಯಲ್ಲಿವೆ. ಅಜ್ಞಾನ ಕಾಲದ ಎಲ್ಲ ಕೊಲೆಯ ಪ್ರತೀಕಾರಗಳನ್ನು ಅನೂರ್ಜಿತಗೊಳಿಸಲಾಗಿದೆ. ಅಜ್ಞಾನ ಕಾಲದ ಎಲ್ಲ ಬಡ್ಡಿಗಳನ್ನು ಮನ್ನಾ ಮಾಡಲಾಗಿದೆ.

ಜನರೇ! ನಿಮ್ಮ ಈ ದಿನ ನಿಮ್ಮ ಈ ತಿಂಗಳು ಮತ್ತು ನಿಮ್ಮ ಈ ನಗರವು ಪವಿತ್ರವೂ, ನಿಷಿದ್ಧವೂ ಆಗಿರುವಂತೆ, ಖಂಡಿತವಾಗಿಯೂ, ನಿಮ್ಮ ರಕ್ತ, ನಿಮ್ಮ ಸೊತ್ತು ಮತ್ತು ನಿಮ್ಮ ಮಾನವು, ನೀವು ನಿಮ್ಮ ಪ್ರಭುವಿನ ಮುಂದೆ ಹಾಜರಾಗುವ ತನಕ ಪವಿತ್ರವೂ, ನಿಷಿದ್ಧವೂ ಆಗಿದೆ. ಖಂಡಿತವಾಗಿಯೂ ನೀವು ಸದ್ಯವೇ ನಿಮ್ಮ ಪ್ರಭುವನ್ನು ಭೇಟಿಯಾಗಲಿರುವಿರಿ. ನಿಮ್ಮ ಕರ್ಮಗಳ ಬಗ್ಗೆ ಅಲ್ಲಿ ವಿಚಾರಣೆಗೆ ಒಳಗಾಗಲಿರುವಿರಿ.

ಜನರೇ! ನಿಮಗೆ ನಿಮ್ಮ ಪತ್ನಿಯರ ಮೇಲೆ ಕೆಲವು ಹಕ್ಕುಗಳಿವೆ, ಮತ್ತು ನಿಮ್ಮ ಪತ್ನಿಯರಿಗೆ ನಿಮ್ಮ ಮೇಲೂ ಕೆಲವು ಹಕ್ಕುಗಳಿವೆ.

ನಿಮ್ಮ ಗುಲಾಮರ ವಿಷಯ! ನೀವು ಉಣ್ಣುವುದನ್ನೇ ಅವರಿಗೂ ಉಣಿಸಿರಿ. ನೀವು ಉಡುವುದನ್ನೇ ಅವರಿಗೂ ಉಡಿಸಿರಿ. ನೀವು ನನ್ನ ಕಾಲಾನಂತರ ಪಥ ಭ್ರಷ್ಟರಾಗಿ ಹೋಗದಂತೆ ಹಾಗೂ ಒಬ್ಬರು ಇನ್ನೊಬ್ಬರ ಕತ್ತು ಕೊಯ್ಯುವವರಾಗಿ ಹೋಗದಂತೆ ಜಾಗರೂಕತೆ ವಹಿಸಿರಿ.

ಜನರೇ! ಇಥಿಯೋಪಿಯಾದ ಒಬ್ಬ ಕರಿಯ ಗುಲಾಮನನ್ನು ನಿಮ್ಮ ನಾಯಕನಾಗಿ ಮಾಡಿದರೆ, ಆತನು ನಿಮ್ಮ ಮಧ್ಯೆ ಅಲ್ಲಾಹನ ಗ್ರಂಥಕ್ಕೆ ಅನುಗುಣವಾಗಿ ಆಜ್ಞಾಪಿಸುವ ತನಕ ಅವನನ್ನು ಆಲಿಸಿರಿ ಮತ್ತು ಅನುಸರಿಸಿರಿ. ಜನರೇ, ನನ್ನ ನಂತರ ಯಾವ ಪ್ರವಾದಿಯೂ ನಿಯುಕ್ತವಾಗಲಿಕ್ಕಿಲ್ಲ. ನಿಮ್ಮ ನಂತರ ಯಾವ ಸಮುದಾಯವೂ ರಚಿಸಲ್ಪಡಲಿಕ್ಕಿಲ್ಲ. ನಾನು ನಿಮ್ಮ ಬಳಿ ನಿಮ್ಮನ್ನೆಂದೂ ದಾರಿಗೆಡಿಸದಂತಹ ವಸ್ತುವನ್ನು ಬಿಟ್ಟಗಲುತ್ತೇನೆ. ಅಲ್ಲಾಹನ ಗ್ರಂಥ ಮತ್ತು ಆತನ ಪ್ರವಾದಿಯ ಸುನ್ನತ್! ಅವುಗಳನ್ನು ಬಿಗಿ ಹಿಡಿದರೆ ನೀವೆಂದೂ ದಾರಿ ತಪ್ಪಲಾರಿರಿ.

ಮುಂದುವರೆದು "ಅರಬನಿಗೆ ಅರಬೇತರನ ಮೇಲೆ ದೈವಭಕ್ತಿ ಹೊರತುಪಡಿಸಿ ಯಾವುದೇ ಶ್ರೇಷ್ಠತೆ ಇಲ್ಲ"ವೆಂದರು. ಪತ್ನಿಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ತಿಳಿಸಿದರು. "ಮಹಿಳೆಯರ ಕುರಿತು ಅಲ್ಲಾನಿಗೆ ಭಯಪಡಿರಿ. ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ".

ನಂತರ ಅಲ್ಲಿ ಹಾಜರಿದ್ದ ಎಲ್ಲಾ ಸತ್ಯವಿಶ್ವಾಸಿಗಳಿಗೆ ಮತ್ತು ಭವಿಷ್ಯದಲ್ಲಿ ಅವರ ಸಂದೇಶವನ್ನು ಅನುಸರಿಸಲಿದ್ದ ಜನರಿಗೆ ಈ ಸಂದೇಶವನ್ನು ನೀಡಿದರು.

"ನಾನು ನಿಮ್ಮ ಬಳಿ ನಿಮ್ಮನ್ನೆಂದೂ ದಾರಿಗೆಡಿಸದಂತಹ ವಸ್ತು ಬಿಟ್ಟು ಅಗಲುತ್ತಿದ್ದೇನೆ. ಅಲ್ಲಾಹನ ಗ್ರಂಥ ಮತ್ತು ಆತನ ಪ್ರವಾದಿಯ ಸುನ್ನತ್! ಅವುಗಳನ್ನು ಬಿಗಿ ಹಿಡಿದರೆ ನೀವೆಂದೂ ದಾರಿ ತಪ್ಪಲಾರಿರಿ".

"ಕೇಳಿರಿ ! ಇಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ಇದನ್ನು ತಲುಪಿಸಬೇಕು" ಅನಂತರ ಪ್ರವಾದಿ ಸಭಿಕರನ್ನು ಉದ್ದೇಶಿಸಿ ಹೀಗೆ ಪ್ರಶ್ನಿಸುತ್ತಾರೆ "ನನ್ನ ಬಗ್ಗೆ ನಿಮ್ಮನ್ನು ವಿಚಾರಿಸಿದಾಗ ನೀವು ಏನೆಂದು ಹೇಳುವಿರಿ?"

ನೆರೆದಿದ್ದ ಜನರು ಒಕ್ಕೊರಲಿನಿಂದ ಕೂಗಿ ಹೇಳಿದರು: "ತಾವು ಸಂದೇಶ ತಲುಪಿಸಿರುವಿರೆಂದು ನಾವು ಸಾಕ್ಷ್ಯ ವಹಿಸುತ್ತೇವೆ. ಸಮುದಾಯಕ್ಕೆ ಉಪದೇಶಿಸುವ ಕರ್ತವ್ಯವನ್ನು ಪೂರ್ತಿಗೊಳಿಸಿರುವಿರೆಂದೂ, ನಿಮ್ಮ ಪ್ರವಾದಿತ್ವ ರಾಯಭಾರವನ್ನು ಸಂಪೂರ್ಣ ನಿರ್ವಹಿಸಿರುವಿರೆಂದೂ ನಮ್ಮ ಬಗ್ಗೆ ಕಾಳಜಿ ವಹಿಸಿರುವಿರೆಂದೂ ನಾವು ಸಾಕ್ಷ್ಯ ವಹಿಸುತ್ತೇವೆ".

ಆಗ ಪ್ರವಾದಿ ತಮ್ಮ ತೋರ್ಬೆರಳನ್ನು ಆಕಾಶ ದತ್ತ ತೋರುತ್ತಾ ಹೇಳಿದರು:

“ಓ ಅಲ್ಲಾಹ್ ! ನೀನು ಸಾಕ್ಷಿಯಾಗಿರು” ಇದನ್ನು ಪ್ರವಾದಿ ಮೂರು ಸಲ ನುಡಿದರು. ಇಸ್ಲಾಮಿನ ಸಂದೇಶವನ್ನು ಹಾಜರಿರುವರು, ಹಾಜರಿಲ್ಲದವರಿಗೆ ತಲುಪಿಸಲು ಆದೇಶಿಸಿದರು.

ಪ್ರವಾದಿ ಮುಹಮ್ಮದ್ ಸಮುದಾಯಕ್ಕೆ ಮಾದರಿಯಾಗಿದ್ದರು. ನೆರೆದಿದ್ದ ಜನಸಾಗರದ ಮುಂದೆ ಪ್ರವಾದಿ ಅಲ್ಲಾಹನ ಸಂದೇಶದ ಪ್ರಮುಖ ಅಂಶವನ್ನು ಇಟ್ಟರು. ಅದು ಮಾನವ ಕುಲದ ಸಮಾನತೆಯಾಗಿತ್ತು. ವರ್ಗದ, ವರ್ಣದ, ಭಾಷೆಯ, ಜನಾಂಗದ, ಭೇದ, ಭಾವವಿಲ್ಲದೇ, ಎಲ್ಲಾ ಜನರೂ ಅಲ್ಲಾಹನ ದೃಷ್ಟಿಯಲ್ಲಿ ಸಮಾನರು ಎಂದು ಇಸ್ಲಾಮ್ ಸಾರುತ್ತದೆ. ಜನರು ತಾವು ಮಾಡುವ ಕಾರ್ಯಗಳಿಂದ ಉನ್ನತರಾಗುತ್ತಾರೆ. ಅವರು ಅರಬರಾಗಿರಲಿ ಅಥವಾ ಅರಬೇತರರಾಗಿರಲಿ, ಕರಿಯರಾಗಿರಲಿ ಅಥವಾ ಬಿಳಿಯರಾಗಿರಲಿ, ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ, ಪುರುಷರಾಗಿರಲಿ ಅಥವಾ ಮಹಿಳೆಯರಾಗಿರಲಿ, ಜನರು ತಮ್ಮ ಅಧ್ಯಾತ್ಮಿಕತೆಯಿಂದ, ಆತ್ಮ ನಿಯಂತ್ರಣದಿಂದ, ಸತ್ಯ ವಿಶ್ವಾಸದಿಂದ, ಘನತೆಯಿಂದ ಸನ್ನಡತೆಯಿಂದ ಉನ್ನತರಾಗುತ್ತಾರೆ. ನೆರೆದಿದ್ದ ಸಹಸ್ರಾರು ಜನಸ್ತೋಮದ ಎದುರು, ವಿವಿಧ ಪ್ರದೇಶಗಳಿಂದ ಬಂದಿದ್ದ ಯಾತ್ರಾತ್ರಿಗಳ ಎದುರು, ಗುಲಾಮರು, ಬುಡಕಟ್ಟುಗಳ ಮುಖಂಡರುಗಳ ಎದುರು, ಸ್ತ್ರೀ ಪುರುಷರ ಎದುರು ಪ್ರವಾದಿ ಅಲ್ಲಾಹನ ಮಾರ್ಗದರ್ಶನದ ಬೆಳಕಿನಲ್ಲಿ ತಮ್ಮ ಪ್ರವಾದಿತ್ವದ ಹೊಣೆಗಾರಿಕೆಯನ್ನು ನಿರ್ವಹಿಸಿರುವ ಬಗ್ಗೆ ಸಾಕ್ಷ್ಯ ಪಡೆದರು. ನೆರೆದಿದ್ದ ಜನಸ್ತೋಮ ಒಕ್ಕೊರಲಿನಿಂದ ಪ್ರವಾದಿ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಿರುವರೆಂದು ಸಾಕ್ಷ್ಯ ನುಡಿದರು.

ಇದರ ಸ್ವಲ್ಪ ಕಾಲದ ನಂತರ ಅವರ ಪ್ರವಾದಿತ್ವದ ಕಾರ್ಯಭಾರವು ಮುಕ್ತಾಯಕ್ಕೆ ಬಂದಿದೆ ಎಂದು ತಿಳಿಸುವ ಕುರ್‌ಆನಿನ ಸೂಕ್ತವು ಅವತೀರ್ಣಗೊಂಡಿತು.

> “ಇಂದು ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪರಿಪೂರ್ಣಗೊಳಿಸಿದ್ದೇನೆ. ನನ್ನ ಕೊಡುಗೆಯನ್ನು ನಿಮ್ಮ ಮೇಲೆ ಪರಿಪೂರ್ಣಗೊಳಿಸಿದ್ದೇನೆ ಮತ್ತು ಇಸ್ಲಾಮನ್ನು ನಿಮ್ಮ ಧರ್ಮವೆಂಬ ನೆಲೆಯಲ್ಲಿ ಅಂಗೀಕರಿಸಿದ್ದೇನೆ”.
> (ಪವಿತ್ರ ಕುರ್‌ಆನ್ 5:3)

ಅಂತಿಮ ಪ್ರವಾದಿಯ ಪ್ರವಾದಿತ್ವ ಕೊನೆಗೊಳ್ಳಲಿತ್ತು. ಪ್ರವಾದಿ ಮುಹಮ್ಮದ್ ತಮ್ಮ ಒಡೆಯನ, ಸೃಷ್ಟಿಕರ್ತನ ಬಳಿಗೆ ಮರಳಲಿದ್ದರು.

# "ಹೃದಯಗಳನ್ನು ಪರಿವರ್ತಿಸುವವನೇ...."

ಇಸ್ಲಾಮಿನ ಸಂದೇಶವನ್ನು ಸ್ವೀಕರಿಸದ ಕೆಲವರು, ಶಾಂತಿಯ, ಸತ್ಯದ ಅನ್ವೇಷಣೆಯಲ್ಲಿ ತೊಡಗಿದ್ದರು. ಇನ್ನು ಕೆಲವರಿಗೆ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಸಂದೇಶದ ಸತ್ಯತೆ ಇನ್ನೂ ಮನವರಿಕೆಯಾಗಿರಲಿಲ್ಲ. ಅವರ ಹೃದಯಗಳಲ್ಲಿ ಇನ್ನೂ ಗೊಂದಲವಿತ್ತು. ಇಂತಹ ಜನರಿಗೆ ಪ್ರವಾದಿ ಅಲ್ಲಾಹನ ಚಿಹ್ನೆಗಳನ್ನು ಗಮನಿಸಲು, ಮತ್ತು ಅವರಿಗೆ ಮಾರ್ಗದರ್ಶನ ನೀಡುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಲು ಸಲಹೆ ನೀಡಿದರು.

ಸತ್ಯ ವಿಶ್ವಾಸವನ್ನು ಸ್ವೀಕರಿಸಿದವರಿಗೆ ಪ್ರವಾದಿ ನಿರಂತರ ಅಲ್ಲಾಹನ ಸ್ಮರಣೆಯ ಮುಖಾಂತರ ಅಧ್ಯಾತ್ಮಿಕ ಶಕ್ತಿಯನ್ನು ಪಡೆಯಲು ಸೂಚಿಸಿದರು.

> "ಓ ನಮ್ಮ ಪ್ರಭೂ, ನೀನು ನಮ್ಮನ್ನು ನೇರ ಮಾರ್ಗದಲ್ಲಿ ಹಾಕಿರುತ್ತ ಪುನಃ ನಮ್ಮ ಮನಸ್ಸುಗಳನ್ನು ದೋಷಗಳಲ್ಲಿ ಸಿಲುಕಿಸಿ ಬಿಡಬೇಡ. ಈನು ನಿನ್ನ ಅನುಗ್ರಹಾಗಾರದಿಂದ ಕೃಪೆಯನ್ನು ನೀಡು. ನೀನೇ ನೈಜ ಮಹಾದಾನಿಯಾಗಿರುತ್ತೀ".
> (ಪವಿತ್ರ ಕುರ್‌ಆನ್ 3:7:8)

ಪ್ರವಾದಿ ಮುಹಮ್ಮದ್ ಅಲ್ಲಾಹನಲ್ಲಿ ಈ ರೀತಿ ಪ್ರಾರ್ಥಿಸುತ್ತಿದ್ದರು.

> "ಓ ಹೃದಯಗಳನ್ನು ಪರಿವರ್ತಿಸುವವನೇ! ನಿನ್ನ ಧರ್ಮದಲ್ಲಿ ನನ್ನನ್ನು ಸ್ಥಿರವಾಗಿರಿಸು !"

# 25

## ಅಂತಿಮ ಯಾತ್ರೆ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಹಜ್ಜ್ ನಿರ್ವಹಿಸಿ, ತಮ್ಮ ಅನುಯಾಯಿಗಳೊಂದಿಗೆ ಮದೀನಾ ಹಿಂದಿರುಗುತ್ತಾರೆ. ಮದೀನಾದಲ್ಲಿ ಎಂದಿನಂತೆ ಜೀವನ ಸಾಗುತ್ತದೆ. ಮುಸ್ಲಿಮರು ಇಸ್ಲಾಮಿನ ತತ್ವಗಳನ್ನು ಕುರ್‌ಆನಿನ ಬೋಧನೆಗಳನ್ನು ಕಲಿಯುತ್ತಿರುತ್ತಾರೆ. ಕುರ್‌ಆನಿನ ಆದೇಶಕ್ಕೆ ಅನುಗುಣವಾಗಿ 'ಝಕಾತ್' ಅನ್ನು ಸಂಗ್ರಹಿಸಲಾಗುತ್ತಿತ್ತು ಮತ್ತು ಬಡ ಜನರಲ್ಲಿ ಅದರ ವಿತರಣೆಯಾಗುತ್ತಿತ್ತು ಝಕಾತ್ ಅನ್ನು ನಿರ್ದಿಷ್ಟ ಸಂಪತ್ತು ಹೊಂದಿರುವವರು ನೀಡಬೇಕಿದ್ದು, ಅದು ಸಿರಿವಂತರ ಸಂಪತ್ತಿನಲ್ಲಿ ಬಡವರ ಹಕ್ಕಾಗಿತ್ತು.

## ಉಲ್ಬಣಗೊಂಡ ರೋಗ

ಈ ರೀತಿ ಇಸ್ಲಾಮಿನ ಐದು ಆಧಾರ ಸ್ತಂಭಗಳೂ ಹಜ್ಜ್ ಒಳಗೊಂಡಂತೆ ಪರಿಪೂರ್ಣವಾಗಿ ಅಳವಡಿಸಲ್ಪಟ್ಟಿದ್ದವು. ಹಿ.ಶ. 11ರ ಸಫರ್ ತಿಂಗಳ ಆರಂಭದಲ್ಲೇ ಪ್ರವಾದಿರವರ ಪಾವನ ಆತ್ಮವು ಪರಲೋಕ ಯಾತ್ರೆಯ ಸಿದ್ಧತೆಗಳಲ್ಲಿ ತೊಡಗಿತ್ತು. ಒಂದು ದಿನ ಅವರು ಉಹದ್‌ಗೆ ತೆರಳುತ್ತಾರೆ. ಅಲ್ಲಿ ಮುಸ್ಲಿಮ್ ಮತ್ತು ಕುರೈಶರ ನಡುವೆ ಎರಡನೆಯ ಯುದ್ಧವು ಜರುಗಿತ್ತು. ಪ್ರವಾದಿ ಯುದ್ಧದಲ್ಲಿ ಹುತಾತ್ಮರಾದವರಿಗಾಗಿ ಪ್ರಾರ್ಥಿಸುತ್ತಾರೆ. ಹಿಂತಿರುಗಿ ಮಸ್ಜಿದುನ್ನಬವಿಗೆ ಬಂದು ಸಹಾಬಿಗಳಿಗೆ ಉದ್ದೇಶಿಸಿ ಪ್ರವಚನ ನೀಡುತ್ತಾರೆ.

"ಜನರೇ! ನಾನು ನಿಮಗಿಂತ ಮೊದಲು ಇಹಲೋಕಕ್ಕೆ ವಿದಾಯ ಹೇಳಲಿರುವೆನು. ನೀವು ನನ್ನ ನಂತರ ಬಹುದೇವ ವಿಶ್ವಾಸಿಗಳಾಗಿ ಬಿಡುವಿರೆಂದು ನನಗೆ ಭಯವಿಲ್ಲ. ನೀವು ಲೌಕಿಕ ಮೋಹಕ್ಕೆ ಸಿಲುಕಿ ಬಿಡುವಿರೆಂದು ಮಾತ್ರ ನಾನು ಭಯಪಡುತ್ತೇನೆ".

ಪ್ರವಾದಿರ ಈ ಮಾತುಗಳು ಅವರು ಸಧ್ಯದಲ್ಲಿಯೇ ಇಹಲೋಕವನ್ನು ತ್ಯಜಿಸಲಿರುವರೆಂಬುದರ ಸ್ಪಷ್ಟ ಸೂಚನೆಯಾಗಿತ್ತು. ಪ್ರವಾದಿ ತಮ್ಮ ಸಮುದಾಯದ ಬಗ್ಗೆ ಕಾಳಜಿ ಹೊಂದಿದ್ದರು. ಅವರು ಧರ್ಮದಿಂದ ದೂರ ಸರಿಯುವ ಭಯವಿರಲಿಲ್ಲ. ಆದರೆ ಅವರು ಲೌಕಿಕ ವ್ಯಾಮೋಹಕ್ಕೆ ಸಿಲುಕುವ ಭಯ ಪ್ರವಾದಿರಿಗೆ ಇತ್ತು.

ಪ್ರವಾದಿರ ಭಯ ವಾಸ್ತವಿಕವಾಗಿ ಭವಿಷ್ಯ ವಾಣಿಯಾಗಿತ್ತು. ಮುಸ್ಲಿಮರು ಅಲ್ಲಾಹನ ಆರಾಧನೆಯನ್ನು ಮುಂದುವರೆಸಲಿದ್ದರು. ಆದರೆ ಸಂಪತ್ತು, ಅಧಿಕಾರ ಭಿನ್ನಾಭಿಪ್ರಾಯಗಳು ಅವರಲ್ಲಿ ಒಡಕನ್ನುಂಟು ಮಾಡಲಿದ್ದವು.

ಆ ದಿನವೇ ಮಧ್ಯರಾತ್ರಿಯ ವೇಳೆ 'ಜನ್ನತುಲ್ ಬಕೀಅ್' ಹೋಗಿ ಗೋರಿಯಲ್ಲಿರುವವರಾಗಿ ಪ್ರಾರ್ಥಿಸುತ್ತಾರೆ.

"ನಾವೂ ಸಧ್ಯವೇ ನಿಮ್ಮನ್ನು ಬಂದು ಸೇರಲಿರುವೆವು" ಎಂದು ಹೇಳುತ್ತಾರೆ. 'ಜನ್ನತುಲ್ ಬಕೀಅ್'ನಿಂದ ಮರಳುವಾಗಲೇ ಪ್ರವಾದಿರಿಗೆ ತಲೆನೋವು ಆರಂಭವಾಗಿತ್ತು. ನಂತರ ಅದು ಇನ್ನಷ್ಟು ಉಲ್ಬಣಿಸಿತು.

ಪ್ರವಾದಿರ ಈ ತೀವ್ರ ತಲೆನೋವು ಅವರನ್ನು ಎರಡು ವಾರಗಳವರೆಗೆ ಬಾಧಿಸಿತು. ಈ ಅವಧಿಯಲ್ಲಿ ಪ್ರವಾದಿ ಹಾಸಿಗೆಯಲ್ಲಿಯೇ ಇರಲು ನಿರ್ಬಂಧಿತರಾಗಿದ್ದರು. ಮೊದಮೊದಲು, ಪ್ರವಾದಿ ತೀವ್ರ ತಲೆನೋವಿನ ಮತ್ತು ಜ್ವರದ ಹೊರತಾಗಿಯೂ ನಮಾಝಿನ ನೇತೃತ್ವವನ್ನು ವಹಿಸುತ್ತಿದ್ದರು. ಆದರೆ ದಿನ ಕಳೆದಂತೆ, ರೋಗ ಉಲ್ಭಣಿಸಿದಾಗ, ಪ್ರವಾದಿ ಹಾಸಿಗೆಯ ಮೇಲೆಯೇ ಇರಬೇಕಾಗಿ ಬಂತು.

ಈಗ ಪ್ರವಾದಿ ತಮ್ಮ ಉಳಿದ ಪತ್ನಿಯರ ಅನುಮತಿ ಪಡೆದು ಆಯಿಷಾರ ಕೋಣೆಯಲ್ಲಿಯೇ ವಾಸಿಸುತ್ತಿದ್ದಾರೆ. ತೀವ್ರ ಅನಾರೋಗ್ಯದ ಹೊರತಾಗಿಯೂ ಪ್ರವಾದಿ ಒಂದು ದಿನ ಸ್ನಾನ ಮಾಡುತ್ತಾರೆ. ಇದರಿಂದ ಸ್ವಲ್ಪ ಲವಲವಿಕೆ ಉಂಟಾದಾಗ ಆಸರೆಯೊಂದಿಗೆ ಮಸೀದಿಗೆ ಬಂದು ಪ್ರವಚನ ನೀಡುತ್ತಾರೆ.

"ನಿಮಗಿಂತ ಮುಂಚೆ ಗತಿಸಿ ಹೋದ ಜನರು ತಮ್ಮ ಪ್ರವಾದಿಗಳ ಮತ್ತು ಮಹಾ ಪುರುಷರ ಗೋರಿಗಳನ್ನು ಸಾಷ್ಟಾಂಗದ ಸ್ಥಳವಾಗಿ ಮಾರ್ಪಡಿಸಿದರು. ಅವರ ಮೇಲೆ ಅಲ್ಲಾಹನ ಶಾಪವೆರಗಿತು. ನಾನು ನಿಮ್ಮನ್ನು ಅದರಿಂದ ತಡೆಯುತ್ತೇನೆ".

ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿದ್ದರು. ಇದೇ ಸಮಯದಲ್ಲಿ ಅವರು ಓರ್ವ ಮನುಷ್ಯರೂ ಆಗಿದ್ದರು. ಅನುಯಾಯಿಗಳು ತಮ್ಮನ್ನು ಎಷ್ಟು ಪ್ರೀತಿಸುತ್ತಾರೆ ಎಂಬುದನ್ನು ಅವರು ಅರಿತಿದ್ದರು. ಹಿಂದೆ ಗತಿಸಿರುವ ಸಮುದಾಯಗಳು ಎಸಗಿದ್ದ ತಪ್ಪುಗಳನ್ನು, ಮುಸ್ಲಿಮ್ ಸಮುದಾಯವು ಪುನರಾವರ್ತಿಸಬಾರದೆಂದು ಅವರು ಬಯಸಿದ್ದರು. ಹಿಂದಿನ ಸಮುದಾಯಗಳು ಅವರ ಪ್ರವಾದಿಗಳನ್ನು ಆರಾಧಿಸುವ ಮಟ್ಟಕ್ಕೆ ಅವರನ್ನು ವೈಭವೀಕರಿಸಿದ್ದರು.

ಮನುಷ್ಯರು, ಪ್ರವಾದಿಗಳೇ ಆಗಿರಲಿ, ಅವರನ್ನು ಆರಾಧಿಸಬಾರದು ಎಂದು ಇಸ್ಲಾಮ್ ಆದೇಶಿಸಿರುವ ಕಾರಣದಿಂದಲೇ, ಇಸ್ಲಾಮಿನಲ್ಲಿ ಪ್ರವಾದಿಗಳ ಚಿತ್ರಗಳು,

ಪ್ರವಾದಿಗಳ ಮೂರ್ತಿಗಳು ಕಾಣಸಿಗುವುದಿಲ್ಲ. ಪ್ರವಾದಿಗಳ ಅನುಸರಣೆ ಮಾಡಬೇಕೇ ಹೊರತು ಅವರನ್ನು ಆರಾಧಿಸಬಾರದು. ಪ್ರವಾದಿಗಳು ಜನರ ಮಾರ್ಗದರ್ಶಕರು, ಕೇವಲ ಸೃಷ್ಟಿಕರ್ತನಾದ ಅಲ್ಲಾಹನು ಮಾತ್ರ ಆರಾಧನೆಗೆ ಅರ್ಹನು.

ಇದರ ನಂತರ ಪ್ರವಾದಿ ಜನರಿಗೆ, ತಾವು ಅವರಿಗೇನಾದರೂ ಬಾಕಿಕೊಡುವುದಿದೆಯೇ? ಎಂದು ವಿಚಾರಿಸಿದರು. ಯಾರಿಗಾದರೂ ನೋವು ಮಾಡಿದ್ದರೆ ಅದರ ಪ್ರತೀಕಾರವನ್ನು ಇಲ್ಲಿಯೇ ಪಡೆದುಕೊಳ್ಳಲು ತಿಳಿಸಿದರು. ಓರ್ವ ವ್ಯಕ್ತಿ ಎದ್ದು ನಿಂತು ಪ್ರವಾದಿ ಅವನಿಗೆ ಮೂರು ದಿರ್ಹಮ್ ನೀಡಲಿಕ್ಕಿದೆ ಎಂದು ಜ್ಞಾಪಿಸಿದನು. ಪ್ರವಾದಿ ಕೂಡಲೇ ಆತನಿಗೆ ಮೂರು ದಿರ್ಹಮ್ ನೀಡುವಂತೆ ಆಜ್ಞಾಪಿಸಿದರು.

ಯಾರಾದರೂ ಸಾಲ ಬಾಕಿ ಇದ್ದು, ನಿಧನ ಹೊಂದಿದ್ದರೆ, ಅಂತಹ ಜನರ ಜನಾಝ ನಮಾಝಿನ ನೇತೃತ್ವವನ್ನು ಪ್ರವಾದಿ ವಹಿಸಲು ನಿರಾಕರಿಸುತ್ತಿದ್ದರು. ಸಾಲ ಮರುಪಾವತಿಯಾದ ನಂತರವಷ್ಟೇ ಪ್ರವಾದಿ ಜನಾಝ ನಮಾಝ್ ನಿರ್ವಹಿಸುತ್ತಿದ್ದರು.

“ಅಲ್ಲಾಹನು ತನ್ನ ದಾಸನಿಗೆ ಎರಡು ಆಯ್ಕೆಗಳನ್ನ ನೀಡಿರುವನು. ಇಹಲೋಕ ಮತ್ತು ಅದರ ಸರ್ವಸ್ವ ಅಥವಾ ಅಲ್ಲಾಹನ ಬಳಿ ಇರುವಂತಹದು. ದಾಸನು ಅಲ್ಲಾಹನ ಬಳಿ ಇರುವುದನ್ನೇ ಆರಿಸಿರುವನು” ಎಂದರು. ಈ ಕೊನೆಯ ವಾಕ್ಯವನ್ನು ಕೇಳಿ ಪ್ರವಾದಿರ ಅತ್ಯಂತ ಆಪ್ತರಾಗಿದ್ದ ಅಬೂಬಕರ್ ಸಿದ್ದೀಕ್ ಬಿಕ್ಕಿ ಬಿಕ್ಕಿ ಅಳತೊಡಗಿದರು. ಇದು ಅವರ ಆಪ್ತ ಸಂಗಾತಿಯ ವಿದಾಯದ ಸ್ಪಷ್ಟ ಘೋಷಣೆಯಾಗಿತ್ತು. ಪ್ರವಾದಿ ಅವರನ್ನು ಸಮಾಧಾನಪಡಿಸುತ್ತಾ ನುಡಿದರು.

“ನನಗೆ ಅತ್ಯಂತ ಆಪ್ತರಾಗಿದ್ದ ಸಂಗಾತಿಯೆಂದರೆ ಅಬೂಬಕರ್ ಸಿದ್ದೀಕ್. ಅವರು ನನಗಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದಿದ್ದಾರೆ. ಅಲ್ಲಾಹನ ನಂತರ ನನಗೆ ಅತ್ಯಂತ ಆಪ್ತರಾಗಿದ್ದವರು ಅಬೂಬಕರ್”.

## ವಿದಾಯ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಕಾಯಿಲೆಯು ಉಲ್ಬಣಿಸಿದೆ. ಪ್ರವಾದಿ ಆಯಿಷಾ ಮನೆಗೆ ಮರಳುತ್ತಾರೆ. ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿದಂತೆ, ಕಅಬದ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರವಾದಿ ಹಲವು ಸಲಹೆ, ಸೂಚನೆಗಳನ್ನು ನೀಡುತ್ತಾರೆ. ನಂತರ ಮಸೀದಿಗೆ ಹೋಗಲು ಬಯಸುತ್ತಾರೆ. ಆದರೆ ನೋವು ಬಹಳವಿದ್ದುದರಿಂದ ಅವರಿಗೆ ಏಳಲಾಗಲಿಲ್ಲ. ಅವರು ಮೂರ್ಛೆ ಬೀಳುತ್ತಾರೆ. ಎಚ್ಚರ ಗೊಂಡ ನಂತರ ಜನರು ನಮಾಝ್ ನಿರ್ವಹಿಸಿದ್ದಾರೆಯೇ? ಎಂದು ಪ್ರಶ್ನಿಸುತ್ತಾರೆ. ಆಯಿಷಾ ಜನರು ಅವರಿಗಾಗಿ ಕಾಯುತ್ತಿರುವವರು ಎಂದು ಉತ್ತರಿಸುತ್ತಾರೆ. ಪ್ರವಾದಿ ಪುನಃ ಎದ್ದೇಳಲು ಪ್ರಯತ್ನಿಸುತ್ತಾರೆ. ಆದರೆ ಪುನಃ ಮೂರ್ಛೆ ಬೀಳುತ್ತಾರೆ. ಎರಡನೆಯ

ಬಾರಿ ಎಚ್ಚರಗೊಂಡ ನಂತರ ಪುನಃ ಅದೇ ಪ್ರಶ್ನೆಯನ್ನು ಕೇಳುತ್ತಾರೆ. ಆಯಿಷಾ ಜನರು ಅವರನ್ನು ಕಾಯುತ್ತಿರುವುದಾಗಿ ಉತ್ತರಿಸುತ್ತಾರೆ. ಪ್ರವಾದಿ ಜನರು ನಮಾಝ್ ನಿರ್ವಹಿಸುವಂತೆ ತಿಳಿಸಿ. ಅಬೂಬಕರ್ ಸಿದ್ದೀಕ್‌ರಿಗೆ ಜಮಾಅತ್‌ನ ನೇತೃತ್ವ ವಹಿಸುವಂತೆ ಸೂಚಿಸುತ್ತಾರೆ.

ಮುಂದಿನ ದಿನಗಳಲ್ಲೂ ಪ್ರವಾದಿ ಅಬೂಬಕರ್ ಸಿದ್ದೀಕ್ ರವರಿಗೇ ಜಮಾಅತ್‌ನ ನೇತೃತ್ವ ವಹಿಸಲು ಸೂಚಿಸುತ್ತಾರೆ. ಆಯಿಷಾ ತಮ್ಮ ತಂದೆ ಬಹಳ ಮೃದು ಸ್ವಭಾವದವರೆಂದೂ, ಕುರ್‌ಆನ್ ಪಠಿಸುವಾಗ ಅಳುತ್ತಾರೆಂದೂ, ಈ ಕಾರಣದಿಂದ ಜಮಾಅತ್‌ನ ನೇತೃತ್ವವನ್ನು ಅವರಿಗೆ ವಹಿಸಬಾರದೆಂದು ಪ್ರವಾದಿರಿಗೆ ವಿನಂತಿಸಿದರು. ಆದರೆ ಪ್ರವಾದಿ ಅವರ ಕೋರಿಕೆಯನ್ನು ತಳ್ಳಿ ಹಾಕಿ ಅಬೂಬಕರ್ ಸಿದ್ದೀಕ್‌ರವರೇ ನೇತೃತ್ವ ವಹಿಸಬೇಕೆಂದು ಸೂಚಿಸಿದರು.

ಎರಡು ದಿನಗಳ ನಂತರ ಪ್ರವಾದಿ ಸ್ವಲ್ಪ ಚೇತರಿಸಿಕೊಂಡಾಗ, ಪ್ರವಾದಿ ಝುಹರ್ ನಮಾಝಿಗೆ ಮಸೀದಿಯಲ್ಲಿ ಹಾಜರಾದರು. ನಮಾಝಿನ ನಡುವೆಯೇ, ಅಬೂಬಕರ್ ಸಿದ್ದೀಕ್ ಪ್ರವಾದಿ ಬರುತ್ತಿರುವ ಶಬ್ದವನ್ನು ಕೇಳಿ ಹಿಂದಕ್ಕೆ ಸರಿದು ಪ್ರವಾದಿರಿಗೆ ನಮಾಝಿನ ನೇತೃತ್ವ ವಹಿಸಲು ಸ್ಥಳವಕಾಶ ಮಾಡಿಕೊಡಲು ಯತ್ನಿಸಿದರು. ಆದರೆ ಪ್ರವಾದಿ ಸಂಜ್ಞೆಯಿಂದ ಹಾಗೆ ಮಾಡದಂತೆ ಸೂಚಿಸಿ, ಅಬೂಬಕರ್ ಸಿದ್ದೀಕ್‌ರ ಪಕ್ಕದಲ್ಲಿ ಕುಳಿತರು. ಅಲ್ಲಿಂದಲೇ ಪ್ರವಾದಿ ಉಳಿದ ನಮಾಝನ್ನು ಮುಂದುವರೆಸಿದರು.

ಇದು ಪ್ರವಾದಿರ ಮಸೀದಿಯಲ್ಲಿ ಕೊನೆಯ ಬರುವಿಕೆಯಾಗಿತ್ತು. ನಂತರ ಅಂದಿನ ದಿನ ಪ್ರವಾದಿ ತಮ್ಮ ಎಲ್ಲಾ ವಸ್ತುಗಳನ್ನು ಹಂಚಿದರು. ಪ್ರವಾದಿರ ದರ್ಶನಕ್ಕಾಗಿ ಪ್ರತಿಯೊಬ್ಬರೂ ಹಾತೊರೆಯುತ್ತಿದ್ದಾರೆ. ಮಂಗಳವಾರ ದಿನ ಪ್ರವಾದಿ ಅಲಿ ಮತ್ತು ಫಝುಲ್ ಬಿನ್ ಅಬ್ಬಾಸ್‌ರ ಹೆಗಲ ಮೇಲೆ ಕೈಯಿಟ್ಟು ಮಸೀದಿಗೆ ಬರುತ್ತಾರೆ. ಹೆಜ್ಜೆಯನ್ನು ಎತ್ತಿ ಇಡಲೂ ಶಕ್ತಿ ಇಲ್ಲದಿದ್ದುದರಿಂದ ಕಾಲುಗಳನ್ನು ಎಳೆಯುತ್ತಾ ತಲುಪುತ್ತಾರೆ. ಪ್ರವಾದಿ ಮಿಂಬರ್‌ನ ಕೆಳಗಿನ ಮೆಟ್ಟಲಲ್ಲಿ ಕುಳಿತುಕೊಂಡು ತಮ್ಮ ಅಂತಿಮ ಪ್ರವಚನ ನೀಡುತ್ತಾರೆ :

**"**........ ಈಗ ನಾನು ಅಲ್ಲಾಹನನ್ನು ಭೇಟಿಯಾಗಲಿರುವೆನು. ನೀವೂ ಅವನನ್ನು ಭೇಟಿಯಾಗಲಿರುವಿರಿ.... ನಾನು ಮೊದಲು ಹೋಗುತ್ತೇನೆ. ನೀವೂ ಬಂದು ನನ್ನ ಜತೆ ಸೇರಲಿರುವಿರಿ. ನಾವೆಲ್ಲರೂ ಕೌಸರ್ ಬಳಿ ಭೇಟಿಯಾಗೋಣ**"**.

ಆದಿತ್ಯ ವಾರದಂದು ಪ್ರವಾದಿ ತಮ್ಮ ಎಲ್ಲಾ ಗುಲಾಮರನ್ನು ಬಿಡುಗಡೆ ಗೊಳಿಸಿದರು. ಮನೆಯಲ್ಲಿ ಅಕಸ್ಮಾತ್ ಉಳಿದು ಹೋಗಿದ್ದ 6–7 ದಿರ್ಹಮ್ ದಾನ ಮಾಡುತ್ತಾರೆ. ತಮ್ಮ ಎಲ್ಲಾ ಆಯುಧಗಳನ್ನು ಮುಸ್ಲಿಮರಿಗೆ ವಕ್ಫ್ ಮಾಡುತ್ತಾರೆ.

ಮಾರನೆಯ ದಿನ ರಬೀವುಲ್ ಅವ್ವಲ್ 12ನೇ ದಿನ ಸೋಮವಾರ ಪ್ರವಾದಿ ಸ್ವಲ್ಪ ಲವಲವಿಕೆಯಿಂದ ಇದ್ದರು. ಪ್ರವಾದಿ ಫಜರ್ ನಮಾಝಿನ ಸಮಯದಲ್ಲಿ ಆಯಿಷಾರ ಕೊಠಡಿಯಿಂದ ಪರದೆಯನ್ನು ಎತ್ತಿ ಮಸೀದಿಯಲ್ಲಿ ಇಣುಕಿ ನೋಡಿ ಮುಗುಳ್ನಗುತ್ತಾರೆ. ಅವರನ್ನು ಕಂಡು ಮುಸ್ಲಿಮರು ಸಂತುಷ್ಟರಾಗಿ, ಪ್ರವಾದಿ ಮುಹಮ್ಮದ್

(ಅವರ ಮೇಲೆ ಶಾಂತಿ ಇರಲಿ) ನಮಾಝಿಗೆ ಬರುವರೆಂದು ಭಾವಿಸುತ್ತಾರೆ. ಆದರೆ ಪ್ರವಾದಿ ಪರದೆಯನ್ನು ಕೆಳ ಬಿಡುತ್ತಾರೆ. ಪುನಃ ಅವರು ಕಾಣಿಸಿಕೊಳ್ಳುವುದಿಲ್ಲ. ಈ ಮಾತುಗಳು ಆಗಾಗ ಅವರಿಂದ ಕೇಳಿ ಬರುತ್ತಿದ್ದವು.

"ಯಹೂದಿ ಮತ್ತು ನಸಾರಾರ ಮೇಲೆ ಅಲ್ಲಾಹನ ಶಾಪವಿರಲಿ ಅವರು ತಮ್ಮ ಪ್ರವಾದಿಗಳ ಸಮಾಧಿಗಳನ್ನು ಆರಾಧನಾಲಯಗಳಾಗಿ ಮಾಡಿಕೊಂಡರು".

"ನಿಮ್ಮ ದಾಸ ದಾಸಿಯರ ಕುರಿತು ಅಲ್ಲಾಹನನ್ನು ಭಯಪಡಿರಿ. ಅವರಿಗೆ ಬಟ್ಟೆ ತೊಡಿಸಿರಿ. ಹೊಟ್ಟೆ ತುಂಬ ಉಣಿಸಿರಿ. ಅವರೊಂದಿಗೆ ನಯವಾಗಿ ಮಾತಾಡಿರಿ".

ಪ್ರವಾದಿ ಮುಖ ಒದ್ದೆ ಮಾಡಿಕೊಳ್ಳುವುದರ ಜತೆಗೆ ಒಮ್ಮೆ ಒಂದು ಕಾಲನ್ನು ಚಾಚಿಟ್ಟು ಇನ್ನೊಂದನ್ನು ಮಡಚಿಕೊಳ್ಳುತ್ತಾರೆ. ಒಮ್ಮೆ ಮುಖದ ಮೇಲೆ ಚದ್ದರವನ್ನೆಳೆದುಕೊಂಡರೆ, ಇನ್ನೊಮ್ಮೆ ಅದನ್ನು ಸರಿಸುತ್ತಾರೆ. ಸ್ವಲ್ಪ ಸಮಯದ ನಂತರ ಪ್ರವಾದಿರ ಪುತ್ರಿ ಫಾತಿಮಾ ಅವರನ್ನು ಕಾಣಲು ಬರುತ್ತಾರೆ. ಪ್ರವಾದಿರ ಕಷ್ಟವನ್ನು ನೋಡಲಾರದೇ ಫಾತಿಮಾ, "ಅಯ್ಯೋ ನನ್ನ ತಂದೆಯವರ ಸಂಕಷ್ಟವೇ!" ಎನ್ನುತ್ತಾರೆ.

ಪ್ರವಾದಿ, "ಮಗಳೇ! ಈ ದಿನದ ನಂತರ ಇನ್ನೊಂದೂ ನಿನ್ನ ತಂದೆಗೆ ಕಷ್ಟವಾಗಲಾರದು" ಎನ್ನುತ್ತಾರೆ. ಪ್ರವಾದಿ, ಫಾತಿಮಾರ ಕಿವಿಯಲ್ಲಿ "ಶೀಘ್ರದಲ್ಲಿಯೇ ನೀನು ನನ್ನನ್ನು ಬಂದು ಸೇರಲಿರುವೆ" ಎಂದು ಉಸುರಿದರು. ಇದನ್ನು ಕೇಳಿ, ಕಣ್ಣೀರಿನಲ್ಲಿಯೂ ಫಾತಿಮಾ ಮುಗುಳ್ನಕ್ಕರು.

ಪ್ರವಾದಿರ ತಲೆ ಆಯಿಷಾರ ಮಡಿಲಲ್ಲಿದೆ. ಮಧ್ಯಾಹ್ನದ ನಂತರ ಪ್ರವಾದಿರ ಎದೆಯಲ್ಲಿ ಗುಡುಗುಡು ಶಬ್ದವಾಗತೊಡಗುತ್ತದೆ. ಆಗ ಪ್ರವಾದಿ ಅತ್ಯಂತ ಕ್ಷೀಣ ಧ್ವನಿಯಲ್ಲಿ. "ಸ್ವರ್ಗದಲ್ಲಿ ಅತ್ಯುತ್ತಮ ಸಂಗದಲ್ಲಿ" ಎನ್ನುತ್ತಾರೆ. ನಂತರ ಕುರ್‌ಆನಿನ ಈ ಸೂಕ್ತವನ್ನು ಪಠಿಸುತ್ತಾರೆ.

> "ಅಲ್ಲಾಹ್ ಮತ್ತು ಸಂದೇಶವಾಹಕರನ್ನು ಅನುಸರಿಸುವವರು
> ಅಲ್ಲಾಹನಿಂದ ಸಕಲ ಸೌಭಾಗ್ಯಗಳನ್ನು ಹೊಂದಿದ ಪ್ರವಾದಿಗಳ,
> ಸಿದ್ದೀಕರ (ಸತ್ಯ ಸಂಧರ) ಶುಹದಾ (ಹುತಾತ್ಮರ) ಮತ್ತು
> ಸಾಲಿಹೀನ್ (ಸಜ್ಜನ)ರ ಸಹವಾಸದಲ್ಲಿರುವರು. ಅದೆಂತಹ
> ಉತ್ತಮ ಸಂಗಾತಿಗಳವರು!" (ಪವಿತ್ರ ಕುರ್‌ಆನ್ 4:69)

"ನಮಾಝ್...... ನಮಾಝ್........ ಮತ್ತು ನಿಮ್ಮ ದಾಸ, ದಾಸಿಯರು" ಎನ್ನುತ್ತಾರೆ. ತರುವಾಯ ಬೆರಳಿನಿಂದ ಆಕಾಶದತ್ತ ಸೂಚಿಸುತ್ತಾ ಮೂರು ಸಲ ಈ ರೀತಿ ಹೇಳುತ್ತಾರೆ. "ಇನ್ನು ಅತ್ಯುನ್ನತ ರಫೀಕ್ (ಸಂಗಾತಿ) ಸಾಕು".

ಅವರ ಪಾವನ ಆತ್ಮ ಪವಿತ್ರ ದೇಹವನ್ನು ಬಿಟ್ಟು ಅಗಲುತ್ತದೆ. ಪ್ರವಾದಿ ಕ್ರಿ.ಶ. 632, ಜೂನ್ 8 ರಂದು (11, ಹಿಜರಿ ಶಕೆ ರಬೀವುಲ್ ಅವ್ವಲ್ 12ನೇ ತಾರೀಕು ಸೋಮವಾರ ದಿನ) ಇಹಲೋಕವನ್ನು ತ್ಯಜಿಸುತ್ತಾರೆ. ತಮ್ಮ ಸೃಷ್ಟಿಕರ್ತ,

ಒಡೆಯ, ಮಾರ್ಗದರ್ಶಕ, ಗೆಳೆಯನ ಬಳಿಗೆ ತೆರಳುತ್ತಾರೆ. ಪ್ರವಾದಿತ್ವದ ಹೊಣೆಗಾರಿಕೆಯನ್ನು ಪರಿಪೂರ್ಣವಾಗಿ ನಿಭಾಯಿಸಿದ ಬಳಿಕ , ಅಲ್ಲಾಹ್ ಅವರನ್ನು ತನ್ನ ಬಳಿಗೆ ಕರೆಸಿಕೊಂಡಿದ್ದನು. ಆ ದಿನದಿಂದ, ಇಂದಿನವರೆಗೂ, ಮುಸ್ಲಿಮ್ ಸಮುದಾಯ ಜಗತ್ತಿನ ಎಲ್ಲೆಡೆ ಅಲ್ಲಾಹನ ಪ್ರವಾದಿಯ ಮೇಲೆ ಸ್ವಸ್ತಿ ವಚನವನ್ನು (ಸಲಾಮ್) ಕುರ್‌ಆನಿನ ಈ ಆದೇಶದ ಮೇರೆಗೆ ಕಳುಹಿಸುತ್ತಿದ್ದಾರೆ.

> "ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ಮಲಕ್‌ಗಳು (ದೇವಚರರು) ಪ್ರವಾದಿಯವರಿಗೆ 'ಸಲಾತ್' (ಸ್ವಸ್ತಿ ವಚನ) ಹೇಳುತ್ತಾರೆ. ಸತ್ಯ ವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಲಿರಿ". (ಪವಿತ್ರ ಕುರ್‌ಆನ್ 33:56)

## ದುಃಖದ ಮಹಾಪೂರ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ನಿಧನದ ವಾರ್ತೆ ಕಾಳ್ಗಿಚ್ಚಿನಂತೆ ಎಲ್ಲೆಡೆ ಹರಡಿತು. ಎಲ್ಲಾರೂ ಶೋಕತಪ್ತರಾಗಿ ಮಸ್ಜಿದ್ ನಬವಿಗೆ ಧಾವಿಸಿದರು. ಪ್ರವಾದಿ ಶೋಕದ ಸಂದರ್ಭದಲ್ಲಿ ಸಂಯಮವನ್ನು ಪಾಲಿಸಲು ಆದೇಶಿದ್ದರಿಂದ ಎಲ್ಲರೂ ಅತಿಕಷ್ಟದಿಂದ ದುಃಖವನ್ನು ನಿಯಂತ್ರಿಸುತ್ತಿದ್ದರು.

ಉಮರ್‌ರಿಗೆ ಪ್ರವಾದಿರ ನಿಧನದ ವಾರ್ತೆ ತಲುಪಿದಾಗ ಅವರಿಗೆ ನಂಬಲಾಗಲಿಲ್ಲ. ಅವರು ನೇರವಾಗಿ ಆಯಿಷಾರ ಕೊಠಡಿಗೆ ಧಾವಿಸಿದರು. ದುಃಖದ ಭರದಲ್ಲಿ ಖಡ್ಗವನ್ನು ಕೈಯಲ್ಲಿ ಹಿಡಿದು,

"ಪ್ರವಾದಿ ನಿಧನ ಹೊಂದಿಲ್ಲ. ಯಾರಾದರೂ ಪ್ರವಾದಿ ನಿಧನ ಹೊಂದಿದ್ದಾರೆ ಎಂದು ನುಡಿದರೆ ನಾನು ಅವನ ತಲೆಯನ್ನು ಕಡಿದು ಹಾಕುತ್ತೇನೆ" ಎಂದು ಉದ್ಗರಿಸಿದರು. ಉಮರ್ ಪ್ರವಾದಿರನ್ನು ಬಹಳ ಪ್ರೀತಿಸುತ್ತಿದ್ದರು. ಪ್ರವಾದಿರ ನಿಧನದಿಂದ ಈಗ ಅವರ ಜೀವನ ಬರಿದಾಗಿತ್ತು. ಪ್ರವಾದಿ ಶಾಶ್ವತವಾಗಿ ಜನರನ್ನು ಅಗಲಿದ್ದರು. ಇದನ್ನು ಊಹಿಸಲಿಕ್ಕೂ ಉಮರ್‌ರಿಗೆ ಸಾಧ್ಯವಿರಲಿಲ್ಲ. ಪ್ರವಾದಿ ಅವರ ಆಪ್ತ ಸ್ನೇಹಿತರಾಗಿದ್ದರು. ಅವರ ಮಾರ್ಗದರ್ಶಕರಾಗಿದ್ದರು.

ಪ್ರವಾದಿರಿಗೆ ಅವರ ಅನುಯಾಯಿಗಳ ಬಗ್ಗೆ ಇದ್ದ ಪ್ರೀತಿ, ಕಾಳಜಿಯನ್ನು ಕುರ್‌ಆನ್ ಹೀಗೆ ವರ್ಣಿಸಿತ್ತು.

> "ನೋಡಿರಿ, ನಿಮ್ಮ ಬಳಿಗೆ ಓರ್ವ ಸಂದೇಶವಾಹಕರು ಬಂದಿರುತ್ತಾರೆ. ಅವರು ನಿಮ್ಮವರಿಂದಲೇ ಆಗಿರುತ್ತಾರೆ. ನೀವು ನಷ್ಟ ಹೊಂದುವುದು ಅವರಿಗೆ ಅಸಹನೀಯವಾಗಿದೆ. ಅವರು

> ನಿಮ್ಮ ಯಶಸ್ಸಿಗೆ ಹಂಬಲಿಸುವವರಾಗಿದ್ದಾರೆ. ಅವರು ಸತ್ಯ ವಿಶ್ವಾಸಿಗಳಿಗೆ ವತ್ಸಲರೂ, ಕರುಣಾಳುವೂ ಆಗಿರುತ್ತಾರೆ"
> (ಪವಿತ್ರ ಕುರ್‌ಆನ್ 9:128)

ಅಷ್ಟರಲ್ಲಿ ಅಬೂಬಕರ್ ಸಿದ್ದೀಕ್ ಅಲ್ಲಿ ಆಗಮಿಸಿದರು. ಪ್ರವಾದಿರ ಮುಖದ ಮೇಲೆ ಹರಡಿದ್ದ ಬಟ್ಟೆಯನ್ನು ಸರಿಸಿದರು. ನಂತರ ಮಸೀದಿಗೆ ಬಂದು, ಅಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ "ಯಾರು ಪ್ರವಾದಿ ಮುಹಮ್ಮದ್‌ರನ್ನು ಆರಾಧಿಸುತ್ತಿದ್ದರೋ, ಅವರು, ಮುಹಮ್ಮದ್ ನಿಧನ ಹೊಂದಿರುವುದನ್ನು ಅರಿಯಲಿ. ಆದರೆ ಯಾರು ಅಲ್ಲಾಹನನ್ನು ಆರಾಧಿಸುತ್ತಿದ್ದರೋ, ಅವರು ಅಲ್ಲಾಹ್ ಜೀವಂತವಿರುವನೆಂದೂ ಆತನು ಎಂದೂ ನಿಧನ ಹೊಂದುವುದಿಲ್ಲವೆಂದೂ ತಿಳಿದುಕೊಳ್ಳಲಿ" ಎಂದು ನುಡಿದು ಕುರ್‌ಆನಿನ ಈ ಸೂಕ್ತಗಳನ್ನು ಪಠಿಸಿದರು.

> "ಮುಹಮ್ಮದ್ ಓರ್ವ ಸಂದೇಶ ವಾಹಕರೇ ವಿನಃ ಇನ್ನೇನು ಆಗಿರುವುದಿಲ್ಲ. ಅವರಿಗಿಂತ ಮುಂಚೆ ಇತರ ಸಂದೇಶ ವಾಹಕರೂ ಗತಿಸಿದ್ದಾರೆ. ಹಾಗಿರುವಾಗ ಅವರು ಮರಣ ಹೊಂದಿದರೆ ಅಥವಾ ವಧಿಸಲ್ಪಟ್ಟರೆ ನೀವು ಮರಳಿ ಹೋಗುವಿರಾ?" ನೆನಪಿಡಿರಿ! ಹಿಂದಕ್ಕೆ ಮರಳುವವನು ಅಲ್ಲಾನಿಗೇನೂ ನಷ್ಟವುಂಟು ಮಾಡಲಾರ. ಅಲ್ಲಾಹನ ಕೃತಜ್ಞ ದಾಸರಾಗಿರುವವರಿಗೆ ಅವನು ಅದರ ಪ್ರತಿಫಲ ನೀಡುವನು".
> (ಪವಿತ್ರ ಕುರ್‌ಆನ್ 3:144)

ಉಮರ್ ಕುರ್‌ಆನಿನ ಈ ಆಯತಗಳನ್ನು ಕೇಳಿದಾಗ ಅವರು ಕುಸಿದು ಬಿದ್ದರು. ಈ ಸೂಕ್ತಗಳು ಬಹು ಹಿಂದೆಯೇ ಅವತೀರ್ಣವಾಗಿದ್ದರೂ ಆಗಷ್ಟೇ ಅವತೀರ್ಣಗೊಂಡಂತಿತ್ತು. ನೆರೆದಿದ್ದ ಜನರಿಗೆ ಪ್ರವಾದಿ ನಿಧನ ಹೊಂದಿರುವರೆಂದೂ ಅವರನ್ನು ಶಾಶ್ವತವಾಗಿ ಅಗಲಿರುವರೆಂದೂ, ಇನ್ನೊಂದೂ ಪ್ರವಾದಿರನ್ನು ನೋಡಲು ಅವರನ್ನು ಮಾತಾಡಿಸಲು, ಅವರ ಬೋಧನೆಗಳನ್ನು ಆಲಿಸಲು ಸಾಧ್ಯವಿಲ್ಲವೆಂಬ ಸತ್ಯ ಮನವರಿಕೆಯಾಯಿತು. ಅವರ ಹೃದಯದ ಲೋಕ ಪ್ರವಾದಿರಿಲ್ಲದೇ ಬರಿದಾಗಿತ್ತು.

26

# ಪ್ರವಾದಿ ಮುಹಮ್ಮದ್
# ಅತ್ಯುತ್ತಮ ಮಾದರಿ

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಇಡಿಯ ಮಾನವಕುಲಕ್ಕೆ ಅನುಸರಿಸಲು ಅತ್ಯುತ್ತಮ ಮಾದರಿಯಾಗಿರುವರು ಎಂದು ಕುರ್‌ಆನ್ ಘೋಷಿಸುತ್ತದೆ.

> "ನಿಶ್ಚಯವಾಗಿಯೂ ಅಲ್ಲಾಹನ ಸಂದೇಶ ವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ".
> (ಪವಿತ್ರ ಕುರ್‌ಆನ್ 33:21)

ಮುಹಮ್ಮದ್ ಮಾದರಿ ಶಿಕ್ಷಕರಾಗಿದ್ದಾರೆ. ಅವರ ಬೋಧನೆಗಳನ್ನು ಅವರ ವಚನಗಳನ್ನು, ಅವರ ಕಾರ್ಯಗಳನ್ನು ಅನುಸರಿಸಬೇಕಿದೆ ಮತ್ತು ಇವುಗಳ ಬಗ್ಗೆ ಚಿಂತನೆ ನಡೆಸಬೇಕಿದೆ.

ಪ್ರವಾದಿತ್ವದ 23 ವರ್ಷಗಳಲ್ಲೂ ಮುಹಮ್ಮದ್ ಆಧ್ಯಾತ್ಮಿಕ ಸ್ವಾತಂತ್ರ್ಯ ಮತ್ತು ಮುಕ್ತಿಗಾಗಿ ಶ್ರಮಿಸಿದ್ದರು. ಹಂತ ಹಂತವಾಗಿ ಅಲ್ಲಾಹನು ಕುರ್‌ಆನಿನ ಮೂಲಕ ಅವರ ಮಾರ್ಗದರ್ಶನವನ್ನು ಮಾಡಿದನು. ಮುಹಮ್ಮದ್ ಈ ಬೋಧನೆಯನ್ನು ಅನುಸರಿಸಿದರು. ಅಲ್ಲಾಹನ ಚಿಹ್ನೆ, ಸಂಜ್ಞೆಗಳ ಬಗ್ಗೆ ನಿರಂತರ ಚಿಂತನೆ ನಡೆಸಿದರು.

ರಾತ್ರಿಯ ವೇಳೆ ಜಗತ್ತು ನಿದ್ರಿಸುತ್ತಿದ್ದಾಗ ಮುಹಮ್ಮದ್ ಎದ್ದು, ಅಲ್ಲಾಹನ ಆರಾಧನೆಯಲ್ಲಿ ನಿರತರಾಗಿರುತ್ತಿದ್ದರು. ಕಷ್ಟಗಳ ಸುರಿಮಳೆಯಲ್ಲಿ ತಾಳ್ಮೆಯನ್ನು ವಹಿಸಿದರು.

ಪ್ರಕೃತಿಯ ಪ್ರತಿಯೊಂದು ವಸ್ತುವಿನಲ್ಲಿ ಅಲ್ಲಾಹನ ಚಿಹ್ನೆಯನ್ನು ಅವರು ಕಂಡರು.

ಮುಹಮ್ಮದ್ ಎಲ್ಲಾರೊಂದಿಗೂ ಕರುಣೆಯನ್ನು ತೋರಿದರು. ಮಕ್ಕಳಿರಲಿ, ಅನಾಥರಿರಲಿ, ಬಡವರಿರಲಿ, ನಿರ್ಗತಿಕರಿರಲಿ, ಪ್ರಯಾಣಿಕರಿರಲಿ, ಗುಲಾಮರಿರಲಿ, ಭಿಕ್ಷುಕರಿರಲಿ, ಸ್ತ್ರೀಯರಿರಲಿ, ಪುರುಷರಿರಲಿ, ಅವರಿಗೆ ನೆರವಿನ ಹಸ್ತವನ್ನು ಚಾಚಿದರು.

ಪ್ರವಾದಿ ಎಲ್ಲಾ ಜನರ ಸಮಸ್ಯೆಗಳಿಗೂ ಸ್ಪಂದಿಸುತ್ತಿದ್ದರು. ಸಮಾಜದ ಕೆಳ ದರ್ಜೆಯ ವ್ಯಕ್ತಿಯೂ ಸಹಾಯಕ್ಕಾಗಿ ಪ್ರವಾದಿರ ಬಳಿಗೆ ಬರುತ್ತಿದ್ದರೆ, ಪ್ರವಾದಿ ಯಾವುದೇ ಸಂಕೋಚವಿಲ್ಲದೇ, ನೆರವಿನ ಹಸ್ತ ಚಾಚುತ್ತಿದ್ದರು. ಓರ್ವ ಗುಲಾಮನು ತನ್ನ ಸಮಸ್ಯೆಯ ಪರಿಹಾರಕ್ಕಾಗಿ, ಪ್ರವಾದಿರ ಉಪಸ್ಥಿತಿಯನ್ನು ಒಂದು ಸ್ಥಳದಲ್ಲಿ ಬಯಸಿದರೆ, ಪ್ರವಾದಿ ಆ ಸ್ಥಳಕ್ಕೆ ತೆರಳಲು ತಯಾರಾಗುತ್ತಿದ್ದರು. ಪ್ರವಾದಿ ಯಾರಿಗಾದರೂ ಹಸ್ತಲಾಘವಕ್ಕಾಗಿ ಕೈಚಾಚಿದರೆ, ಎಂದೂ ಅವರು ಮೊದಲು ಕೈಯನ್ನು ಹಿಂತೆಗೆದುಕೊಳ್ಳುತ್ತಿರಲಿಲ್ಲ. ಓರ್ವ ವ್ಯಕ್ತಿಯೊಂದಿಗೆ ನಯವಾಗಿ, ಪ್ರೀತಿಯಿಂದ ಮಾತಾಡಿಸಿದಲ್ಲಿ, ವರ್ತಿಸಿದಲ್ಲಿ, ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳ ಅರಿವು ಪ್ರವಾದಿರಿಗೆ ಇತ್ತು. ಮುಹಮ್ಮದ್ ಎಂದೂ ಯಾರನ್ನೂ ಕಡೆಗಣಿಸಿರಲಿಲ್ಲ. ಅವರ ವ್ಯಕ್ತಿತ್ವ ಎಲ್ಲಾ ಜನರಿಗೂ ಒಂದು ಆಶ್ರಯುವಾಗಿತ್ತು. ಅವರು ಸಂದೇಶವಾಹಕರಾಗಿದ್ದರು.

ಪ್ರವಾದಿ ಜನರನ್ನು ಪ್ರೀತಿಸುತ್ತಿದ್ದರು. ಅವರ ತಪ್ಪುಗಳನ್ನು ಮನ್ನಿಸುತ್ತಿದ್ದರು. ಜನರು ಎಷ್ಟೇ ಘೋರ ತಪ್ಪು ಮಾಡಿರಲಿ, ಅದನ್ನು ಉದಾರತೆಯಿಂದ ಕ್ಷಮಿಸುತ್ತಿದ್ದರು.

ಜನರ ತಪ್ಪುಗಳನ್ನು ಇತರರ ಮುಂದೆ ಅವರು ಬಹಿರಂಗಪಡಿಸುತ್ತಿರಲಿಲ್ಲ. ಆರಾಧನೆಯನ್ನು ಒಂದು ಹೊರೆಯನ್ನಾಗಿಸಬಾರದೆಂದು ಅವರು ಬೋಧಿಸಿದರು. ಜನರು ವಿವಿಧ ಕಾರಣಗಳಿಗಾಗಿ ಆರಾಧನೆಯಲ್ಲಿ ಸ್ವಲ್ಪ ಸಡಿಲತೆ, ವಿನಾಯತಿಯನ್ನು ಕೋರಿದಾಗ, ಪ್ರವಾದಿ ಸಕರಾತ್ಮಕನಾಗಿ ಸ್ಪಂದಿಸುತ್ತಿದ್ದರು. ತಮ್ಮ ಸಾಮರ್ಥ್ಯಗಳನ್ನು ಅರಿಯಲು, ಅಂದಾಜಿಸಲು, ತಮ್ಮ ಲೋಪ, ದೋಷವನ್ನು ಕಂಡುಕೊಳ್ಳಲು, ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸುವಂತೆ ಸೂಚಿಸುತ್ತಿದ್ದರು.ಯಾವುದೇ ತಪ್ಪಿನ ಕೀಳರಿಮೆವಿಲ್ಲದೇ ಹೊಣೆಗಾರಿಕೆ ಅರಿಯಲು, ನೈತಿಕ ಮೌಲ್ಯಗಳನ್ನು ಪಾಲಿಸುವಂತೆ ಜನರಿಗೆ ಬೋಧಿಸಿದರು. ಸಮಾಜದಲ್ಲಿ ಶಾಂತಿಯ ಸ್ಥಾಪನೆಗಾಗಿ ನ್ಯಾಯದ ಪರಿಪಾಲನೆ ಷರತ್ತಾಗಿದ್ದು, ಜನರು ಇತರರ ಘನತೆ, ಗೌರವವನ್ನು ಗೌರವಿಸದಿದ್ದರೆ, ಸಮಾನತೆಯ ಫಲವನ್ನು ಕಾಣಲು ಸಾಧ್ಯವಿಲ್ಲವೆಂದರು. ಮುಸ್ಲಿಮ್ ಸಮುದಾಯವು ಸ್ವತಂತ್ರ ಜನರ ಸಮುದಾಯವಾಗಿರಬೇಕೆಂದರು. ಪ್ರತಿಯೊಂದು ಕಾರ್ಯದಲ್ಲಿ ವಿವೇಚನೆಯನ್ನು ಮಾಡಲು ಉಪದೇಶಿಸಿದರು.

ಜನರಿಗೆ ನ್ಯಾಯವನ್ನು ಪಾಲಿಸಲು ಆದೇಶಿಸಿದರು. ಇತರರ ಘನತೆಯನ್ನು ಕಾಪಾಡಲು, ಗೌರವಿಸಲು ತಿಳಿಸಿದರು. ಗುಲಾಮರನ್ನು ಸ್ವತಂತ್ರಗೊಳಿಸಿದರು. ಸಮಾಜದ ಬಡವರಿಗೆ, ಗುಲಾಮರಿಗೆ ಕೆಳ ವರ್ಗದ ಜನರಿಗೆ ತಮ್ಮ ಹಕ್ಕನ್ನು ಪ್ರತಿಪಾದಿಸಲು, ಕೀಳರಿಮೆಯನ್ನು ತೊರೆಯಲು ಬುದ್ಧಿವಾದ ನೀಡಿದರು. ಅವರ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿಮೋಚನೆಗಾಗಿ ಕರೆ ನೀಡಿದರು.

ಪ್ರವಾದಿತ್ವದ ಅಂತಿಮ ಹಂತದಲ್ಲಿ, ವಿದಾಯ ಹಜ್ಜ್‌ನ ಸಂದರ್ಭದಲ್ಲಿ ಎಲ್ಲಾ ವರ್ಗಗಳ, ವರ್ಣಗಳ, ವಿವಿಧ ಭಾಷೆಗಳನ್ನು ಮಾತಾಡುವ, ವಿವಿಧ ಸಂಸ್ಕೃತಿ, ಸಂಪ್ರದಾಯಗಳ ಸ್ತ್ರೀ, ಪುರುಷರು ಅರಫಾ ಮೈದಾನದಲ್ಲಿ ಜಮಾಯಿಸಿದ್ದರು. ಮುಹಮ್ಮದ್‌ರ ಅಂತಿಮ ಬೋಧನೆಗಳನ್ನು ಆಲಿಸಿದ್ದರು. ಮುಹಮ್ಮದ್ ಜನರಿಗೆ ಮೇಲು, ಕೀಳಿನ ಬೇಧವನ್ನು ತೊಡೆಯಲು ಆದೇಶಿಸಿದರು. ಜನಾಂಗೀಯ ಭಾವನೆಗಳನ್ನು ಕಿತ್ತು ಹಾಕಲು ತಿಳಿಸಿದರು. ವರ್ಗ, ವರ್ಣ ಸಂಪತ್ತಿನ, ಆಧಾರದಲ್ಲಿ ಯಾರೂ ಉಚ್ಚ ನೀಚರಲ್ಲವೆಂದೂ, ಶ್ರೇಷ್ಠತೆಗೆ, ದೈವಭಕ್ತಿ, ಸನ್ನಡತೆಯೇ ಮಾನದಂಡವೆಂದು ಸಾರಿದರು.

ಪ್ರವಾದಿ ಮುಹಮ್ಮದ್ ಮತ್ತೊಂದು ಸಂದರ್ಭದಲ್ಲಿ ನುಡಿದಿದ್ದರು.

"ಜನರೊಂದಿಗೆ ಸದ್ವರ್ತನೆ ತೋರುವವನೇ ನಿಮ್ಮಲ್ಲಿಯ ಅತ್ಯುತ್ತಮನು".

ತಮ್ಮ ವಿದಾಯ ಭಾಷಣದಲ್ಲಿ ಎಲ್ಲಾ ಜನರನ್ನು ಅಭಿಸಂಬೋಧಿಸುತ್ತಾ, ಪ್ರವಾದಿ ಅನ್ಯಾಯದ ಎಲ್ಲಾ ಕ್ರಮಗಳನ್ನು, ಕಾರ್ಯಗಳನ್ನು ತೊರೆಯುವಂತೆ ಜನರಿಗೆ ಕರೆ ನೀಡಿದ್ದರು. ಅಲ್ಲಾಹನ ಸನ್ನಿಧಿಯಲ್ಲಿ ಸಾಮಾಜಿಕ ಅನ್ಯಾಯಕ್ಕೆ, ಜನಾಂಗೀಯತೆಗೆ, ಮೇಲು, ಕೀಳೆಂಬ ತಾರತಮ್ಯಕ್ಕೆ ಆಸ್ಪದವಿರುವುದಿಲ್ಲ. ಕರಿಯ ಗುಲಾಮರಾಗಿದ್ದ ಬಿಲಾಲ್ 'ಅಝಾನ್' ಕರೆಯನ್ನು ನೀಡುತ್ತಿದ್ದರು. ಉಸಾಮ ಬಿನ್ ಝೈದ್ ಗುಲಾಮರ ಪುತ್ರರು, ಇಸ್ಲಾಮಿ ಸೇನೆಯ ದಂಡ ನಾಯಕರಾಗಿದ್ದರು. ಸತ್ಯವಿಶ್ವಾಸವು ಕರಿಯರು, ಬಿಳಿಯರು, ಗುಲಾಮರು, ಕುಲೀನರನ್ನು ಒಗ್ಗೂಡಿಸಿತ್ತು.

ಮುಹಮ್ಮದ್ ಮಹಿಳೆಯರಿಗೆ ಅವರ ಹಕ್ಕುಗಳನ್ನು, ಅವರ ನೈಜ ಸ್ಥಾನಮಾನವನ್ನು ನೀಡಿದರು. ಮಹಿಳೆಯರೊಂದಿಗೆ ಸದ್ವರ್ತನೆ ತೋರುವಂತೆ ಜನರಿಗೆ ಆದೇಶಿಸಿದರು. ಮಹಿಳೆಯರಿಗೆ ವಿವಾಹದ ವಿಷಯದಲ್ಲಿ ಅವರ ಅಭಿಪ್ರಾಯದಂತೆ ನಡೆಯಲು, ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಯಿತು. ತನ್ನ ಪತಿಯನ್ನು ಇಷ್ಟಪಡದ ಮಹಿಳೆಗೆ ವಿಚ್ಛೇದನದ ಹಕ್ಕನ್ನು ನೀಡಲಾಯಿತು.

"ನಿಮ್ಮೊಡನೆ ತನ್ನ ಪತಿಯ ವಿಷಯದಲ್ಲಿ ವಾದಿಸುತ್ತಿರುವ

ಹಾಗೂ ಅಲ್ಲಾಹನೊಡನೆ ಮೊರೆಯಿಡುತ್ತಿರುವ ಸ್ತ್ರೀಯ ಮಾತನ್ನು ಅಲ್ಲಾಹ್ ಆಲಿಸಿದನು. ಅಲ್ಲಾಹ್ ನಿಮ್ಮಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದಾನೆ. ಅವನು ಎಲ್ಲಾವನ್ನು ಕೇಳುವವನು ಮತ್ತು ನೋಡುವವನಾಗಿದ್ದಾನೆ".
(ಪವಿತ್ರ ಕುರ್‌ಆನ್, 58:1)

ಒಮ್ಮೆ ಓರ್ವ ಮಹಿಳೆ ಪ್ರವಾದಿರ ಬಳಿ ಬಂದು ತಾನು ಈಗ ತನ್ನ ಪತಿಯನ್ನು ಇಷ್ಟಪಡದ ಕಾರಣ, ತನಗೆ ವಿಚ್ಛೇದನ ಕೊಡಿಸಬೇಕೆಂದು ಪ್ರವಾದಿರಿಗೆ ಕೋರಿದಳು. ಪ್ರವಾದಿ ವಿಷಯವನ್ನು ಪರಿಶೀಲಿಸಿ ಆಕೆಗೆ ವಿಚ್ಛೇದನ ಕೊಡಿಸಿದರು.

ಇದೇ ರೀತಿ ಅನೇಕ ಮಹಿಳೆಯರು ವಿಚ್ಛೇದನದ ಬೇಡಿಕೆಯನ್ನು ಮುಹಮ್ಮದ್‌ರ ಮುಂದಿಟ್ಟರು. ಜಮೀಲ ಬಿಂತ್ ಉಬೈ, ಹಬೀಬ: ಬಿಂತ್ ಸಾಹಿಲ್ ಮೊದಲಾದವರು. ಒಂದು ದಿನ ಸಾಬಿತ್‌ರ ಪತ್ನಿ ಪ್ರವಾದಿರ ಬಳಿ ಬಂದು, ಧರ್ಮದ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಮ್ಮ ಪತಿಯ ಬಗ್ಗೆ ಯಾವುದೇ ಆಕ್ಷೇಪಣೆವಿಲ್ಲವೆಂದೂ, ಆದರೆ ತಮಗೆ ಪತಿ ಇಷ್ಟವಿಲ್ಲದ ಕಾರಣ, ಅವರಿಗೆ ಪತ್ನಿಯ ಬಾಧ್ಯತೆ ಪೂರೈಸದೇ ವಂಚನೆ ಮಾಡದಂತಿರಲು ವಿಚ್ಛೇಧನ ಬಯಸುತ್ತಿರುವುದಾಗಿ ತಿಳಿಸಿದರು.

ಪ್ರವಾದಿ, ಅವರ ಪತಿ ಅವರಿಗೆ ಮೆಹ್ರ್ ರೂಪದಲ್ಲಿ ನೀಡಿದ್ದ ತೋಟವನ್ನು ಹಿಂತಿರುಗಿಸಲು ಅವರು ಸಿದ್ಧರಿರುವರೋ? ಎಂದು ವಿಚಾರಿಸಿದರು. ಸಾಬಿತ್‌ರ ಪತ್ನಿ ಇದಕ್ಕೆ ಒಪ್ಪಿಗೆ ಸೂಚಿಸಿದಾಗ, ಪ್ರವಾದಿ ಸಾಬಿತ್‌ರಿಗೆ ವಿಚ್ಛೇಧನ ಪ್ರಸ್ತಾವನೆ ಒಪ್ಪಿಕೊಳ್ಳಲು ಸೂಚಿಸಿದರು.

ಮತ್ತೊಂದು ಸಂದರ್ಭದಲ್ಲಿ ಓರ್ವ ಯುವತಿ ಪ್ರವಾದಿರ ಬಳಿ ಬಂದು, ಆಕೆಯ ತಂದೆ ಆಕೆಯ ಒಪ್ಪಿಗೆ ಇಲ್ಲದೇ ವಿವಾಹ ನೆರವೇರಿಸಿರುವುದಾಗಿ ದೂರಿದಳು. ಪ್ರವಾದಿ, "ನಿನಗೆ ಈ ವಿವಾಹ ಇಷ್ಟವಿಲ್ಲದಿದ್ದರೆ ನಿನಗೆ ವಿಚ್ಛೇದನ ಕೊಡಿಸುತ್ತೇನೆ" ಎಂದರು. ಯುವತಿಯು, "ಹಾಗೇನಿಲ್ಲ. ತಂದೆಯ ನಿರ್ಧಾರ ನನಗೆ ಒಪ್ಪಿಗೆಯಿದೆ. ಆದರೆ ಪುತ್ರಿಯ ಒಪ್ಪಿಗೆಯಿಲ್ಲದೇ ವಿವಾಹವನ್ನು ನಿಶ್ಚಯಿಸುವ ಪದ್ಧತಿಯ ಬಗ್ಗೆ ನನ್ನ ವಿರೋಧ ವ್ಯಕ್ತಪಡಿಸಲಿಕ್ಕಾಗಿ ನಾನು ತಮ್ಮ ಬಳಿದೂರು ನೀಡಲು ಬಂದೆ' ಎಂದಳು.

ಮಹಿಳೆಯರು ಕೈದಿಗಳಂತೆ ಬಂಧಿತರಾಗಿರಬಾರದೆಂದೂ, ಇದೇ ಸಮಯದಲ್ಲಿ ಮಹಿಳೆಯರು ತಮ್ಮ ಸೌಂದರ್ಯವನ್ನು ತಮ್ಮ ಪತಿಯ ಮುಂದೆ ಮಾತ್ರ ಪ್ರದರ್ಶಿಸಬೇಕೆಂದೂ, ಇತರ ಪುರುಷರ ಮುಂದೆ ಅಲ್ಲವೆಂದೂ ಪ್ರವಾದಿ ಆದೇಶಿಸಿರುವರು. ಸಾಮಾಜಿಕ, ರಾಜಕೀಯ, ಆರ್ಥಿಕ ಚಟುವಟಿಕೆಗಳಲ್ಲಿ, ರಣರಂಗದಲ್ಲಿ

ಸ್ತ್ರೀಯರ ಪಾಲುಗೊಳ್ಳುವಿಕೆಯನ್ನು ಪ್ರವಾದಿ ಅನುಮತಿಸಿದ್ದರು. ತಮ್ಮ ಹಕ್ಕನ್ನು ಪ್ರತಿಪಾದಿಸಬೇಕೆಂದು ಮಹಿಳೆಯರಿಗೆ ಅವರು ಉಪದೇಶಿಸುತ್ತಿದ್ದರು.

ಪ್ರವಾದಿ ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದರು. ಮಕ್ಕಳನ್ನು ಮುದ್ದಿಸುತ್ತಿದ್ದರು, ಅವರನ್ನು ಹೆಗಲ ಮೇಲೆ ಕುಳ್ಳಿರಿಸುತ್ತಿದ್ದರು ಮತ್ತು ಅವರೊಂದಿಗೆ ಆಟವಾಡುತ್ತಿದ್ದರು. ನಮಾಝಿನ ನಡುವೆ ಮಕ್ಕಳು ರೋಧಿಸುವ ಶಬ್ದ ಬಂದರೆ, ಅವರ ರೋದನಕ್ಕೆ ಉತ್ತರವೆಂಬಂತೆ. ಪ್ರವಾದಿ ಕೂಡಲೇ ನಮಾಝುನ್ನು ಮೊಟಕುಗೊಳಿಸುತ್ತಿದ್ದರು.

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ಈ ರೀತಿ ನುಡಿದಿದ್ದರು.

**"**ಕೆಲವೊಮ್ಮೆ ನಾನು ನಮಾಝುನ್ನು ದೀರ್ಘಗೊಳಿಸ ಬಯಸುತ್ತೇನೆ. ಆದರೆ ನಮಾಝಿನ ನಡುವೆ ಮಗುವಿನ ರೋದನದ ಶಬ್ದ ಕೇಳಿಸಿದ ಕೂಡಲೇ ನಾನು ಮಗುವಿನ ತಾಯಿಗೆ ಕಷ್ಟವಾಗಬಾರದೆಂಬ ಕಾರಣದಿಂದ ನಮಾಝುನ್ನು ಮೊಟಕುಗೊಳಿಸುತ್ತೇನೆ**"**.

ಮಕ್ಕಳ ಮುಗ್ದತೆಯ ಕಾರಣದಿಂದಾಗಿ ಪ್ರವಾದಿ ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದರು. ಮಕ್ಕಳಿಂದ ಪ್ರವಾದಿ ಜನರನ್ನು ಮತ್ತು ತಮ್ಮ ಸುತ್ತಮುತ್ತಲಿನ ಜಗತ್ತನ್ನು ವಿಸ್ಮಯದಿಂದ ನೋಡುವುದನ್ನು ಕಲಿತರು. ಮಕ್ಕಳು ಸೌಂದರ್ಯವನ್ನು ಇಷ್ಟಪಡುವುದನ್ನು ಕಂಡು, ಪ್ರವಾದಿ ಸಹಾ ಸೌಂದರ್ಯದ ಬಗ್ಗೆ ಅಭಿರುಚಿ ಬೆಳೆಸಿಕೊಂಡರು. ನಿಸರ್ಗವನ್ನು ದೃಷ್ಟಿಸುತ್ತಾ ಪ್ರವಾದಿ ಕೆಲವೊಮ್ಮೆ ಕಣ್ಣೀರು ಹರಿಸುತ್ತಿದ್ದರು. ಯಾರಾದರೂ ಕುರ್‌ಆನ್ ಅನ್ನು ಸುಶ್ರಾವ್ಯವಾಗಿ ಪಠಿಸುತ್ತಿದ್ದರೆ, ಪ್ರವಾದಿ ಅದರಿಂದ ಪ್ರಭಾವಿತರಾಗುತ್ತಿದ್ದರು.

## ಬೆಳಕಿನೆಡೆಗೆ ಸಾಗಿಸುವ ಬೆಳಕು

ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ಲೋಕಕ್ಕೆ ಸತ್ಯವಿಶ್ವಾಸದ, ನೈತಿಕ ಮೌಲ್ಯಗಳ, ಭರವಸೆಯ ಸಂದೇಶದೊಂದಿಗೆ ಬಂದಿದ್ದರು. ಇದರ ಮೂಲಕ ಅಲ್ಲಾಹನು ತನ್ನ ಅಸ್ತಿತ್ವದ, ತನ್ನ ಬೇಡಿಕೆಗಳ ಬಗ್ಗೆ, ನಿರ್ಣಾಯಕ ದಿನದ ಬಗ್ಗೆ, ಆತನ ಬಳಿ ಪುನಃ ಮರಳುವ ಬಗ್ಗೆ ಜನರನ್ನು ಜ್ಞಾಪಿಸಿದ್ದನು. ಮುಹಮ್ಮದ್ ಈ ಸಂದೇಶದೊಂದಿಗೆ ಆಗಮಿಸಿದ್ದರು. ತಮ್ಮ ಜೀವನ ಪರ್ಯಂತ ಪ್ರವಾದಿ ಮಹಿಳೆಯರೊಂದಿಗೆ, ಪುರುಷರೊಂದಿಗೆ, ಮಕ್ಕಳೊಂದಿಗೆ, ಗುಲಾಮರೊಂದಿಗೆ, ಸ್ಥಿತಿವಂತರೊಂದಿಗೆ, ಬಡವರೊಂದಿಗೆ ಅವರ ಸಮಸ್ಯೆಗಳ ಬಗ್ಗೆ ಆಲಿಸಿದರು, ಅವರಿಗೆ ನೆರವಿನ ಹಸ್ತವನ್ನು ಚಾಚಿದರು ಮತ್ತು ಅವರಲ್ಲಿ ಧೈರ್ಯವನ್ನು ತುಂಬಿದರು. ಕರುಣೆ ಅನುಕಂಪ ಮತ್ತು ವಿನಯವನ್ನು ಎಲ್ಲರ ಮೇಲೆಯೂ ತೋರ್ಪಡಿಸಿದರು.

ಪ್ರವಾದಿ ಮುಹಮ್ಮದ್‌ರ ಜೀವನದ ಪ್ರತಿಯೊಂದು ಘಟನೆ ಅಥವಾ ಕಾರ್ಯ

ಜನರ ಸುಧಾರಣೆಗೆ, ಪರಿವರ್ತನೆಗೆ ಕಾರಣವಾಯಿತು. ಯಾವುದೇ ಧರ್ಮದ ಅನುಯಾಯಿಗಳಿರಲಿ, ಮುಹಮ್ಮದ್‌ರ ಜೀವನದ ಅಧ್ಯಯನದಿಂದ ಮಾರ್ಗದರ್ಶನವನ್ನು ಪಡೆಯಬಹುದು ಮತ್ತು ಸತ್ಯಮಾರ್ಗವನ್ನು ಇಹಪರಗಳೆಡರಲ್ಲಿ ಯಶಸ್ಸನ್ನು ಕಂಡುಕೊಳ್ಳಬಹುದು.

ಆರಾಧನೆಯ ಮೂಲಕ, ಧ್ಯಾನದ ಮೂಲಕ ಮುಹಮ್ಮದ್ ತಮ್ಮಲ್ಲಿ ಪರಿವರ್ತನೆ ತಂದುಕೊಂಡರು. ತನ್ಮೂಲಕ ಸಂಪೂರ್ಣ ಜಗತ್ತಿನಲ್ಲಿ ಪರಿವರ್ತನೆ ತಂದರು. ಅಲ್ಲಾಹನ ಮಾರ್ಗದರ್ಶನದ ಸಹಾಯದಿಂದ ತಮ್ಮ ಎಲ್ಲಾ ಸಾಮರ್ಥ್ಯಗಳನ್ನು ಜನರಿಗಾಗಿ ಮುಡುಪಾಗಿಟ್ಟರು. ಒಳಿಗಿನ ಸಂಸ್ಥಾಪನೆಗಾಗಿ, ಕೆಡುಕಿನ ನಿರ್ಮೂಲನೆಗಾಗಿ ಜಿಹಾದ್ ನಡೆಸಲು ತಿಳಿಸಿದರು. ಪ್ರವಾದಿರ ಜೀವನ ಅವರ ಬೋಧನೆಯ ಪ್ರತಿಬಿಂಬವಾಗಿತ್ತು.

ಜೀವನದ ಪ್ರತಿಯೊಂದು ಹಂತದಲ್ಲಿಯೂ, ಘಟ್ಟಗಳಲ್ಲಿಯೂ ಪ್ರವಾದಿ ಏಕೈಕ ಆರಾಧ್ಯನಾದ ಅಲ್ಲಾಹನ ಆರಾಧನೆಯನ್ನೇ ಕೈಗೊಂಡರು. ಪ್ರವಾದಿರ ಸರಳತೆಯ, ನಿರಾಡಂಬರದ ಕಾರಣದಿಂದಾಗಿ ಜನರು ಅವರನ್ನು ಬಹಳ ಪ್ರೀತಿಸುತ್ತಿದ್ದರು. ಅಲ್ಲಾಹನಲ್ಲಿ ಸಂಪೂರ್ಣ ವಿಶ್ವಾಸದ ಕಾರಣ ಅವರು ಜನರಿಂದ ನಿರಪೇಕ್ಷರಾಗಿದ್ದರು.

ಪ್ರವಾದಿ ಮುಹಮ್ಮದ್ ತಮ್ಮ ಜೀವನ ಪರ್ಯಂತ ಪ್ರೀತಿಯ ಅನುಭವದ ಮತ್ತು ಜನರಿಗೆ ವರ್ಗ, ವರ್ಣ, ಜನಾಂಗದ ಆಧಾರದ ಮೇಲೆ ತಾರತಮ್ಯ ತೋರದೇ, ನೈತಿಕ ಮೌಲ್ಯಗಳನ್ನು ಪಾಲಿಸುವ ಬೋಧನೆಯಲ್ಲಿ ವಿಶ್ವ ಸಂದೇಶವನ್ನು ತಂದಿದ್ದರು. ಇದು ನೈಜ ಸ್ವಾತಂತ್ರ್ಯವಾಗಿತ್ತು. ನ್ಯಾಯವನ್ನು ಬಯಸುವ, ಜನಾಂಗೀಯ, ರಾಷ್ಟ್ರೀಯ ಭಾವನೆಗಳಿಂದ ಪ್ರಭಾವಿತನಾಗದೆ ಇರುವ ವ್ಯಕ್ತಿಯ ಸ್ವಾತಂತ್ರ್ಯ. ಅವರ ನೈತಿಕ ಮೌಲ್ಯಗಳಿಗೆ ಪ್ರಕಾಶ ಬೀರಿದ ಅವರ ಪ್ರೀತಿ ಅವರಿಗೆ ಒಳಿತನ್ನು ನೀಡಿತು. ಅವರ ಪ್ರೀತಿಗೆ ಮಾರ್ಗದರ್ಶನ ನೀಡಿದ ಅವರ ನೈತಿಕ ಮೌಲ್ಯಗಳು ಅವರನ್ನು ಸ್ವತಂತ್ರಗೊಳಿಸಿದವು. ಜನರ ನಡುವೆ ಅವರು ಶ್ರೇಷ್ಠರಾಗಿದ್ದರು. ಇದೇ ಸಮಯದಲ್ಲಿ ಸರ್ವ ಜನರಿಂದಲೂ ಅವರು ನಿರಪೇಕ್ಷರಾಗಿದ್ದರು. ಪ್ರವಾದಿಯವರ ಅನುಯಾಯಿಗಳು ಈ ಗುಣಗಳನ್ನು ಪ್ರವಾದಿರಲ್ಲಿ ಕಂಡುಕೊಂಡಿದ್ದರು.

ಪ್ರವಾದಿ ಅಲ್ಲಾಹನ ಪ್ರೀತಿಗೆ ಪಾತ್ರರಾಗಿದ್ದರು. ಜನರಿಗೆ ಅವರು ಮಾದರಿಯಾಗಿದ್ದರು. ಆರಾಧನೆಯ ಮೂಲಕ, ಪ್ರೀತಿಯ ಮೂಲಕ, ಬೇಡಿದವರಿಗೆ ನೀಡುವ ಮೂಲಕ, ಅಪೇಕ್ಷಿತರಿಗೆ ಸಹಾಯ ಮಾಡುವ ಮೂಲಕ, ಜನರಲ್ಲಿ ಪರಿವರ್ತನೆ ತಂದರು. ಪ್ರವಾದಿ ಮುಹಮ್ಮದ್, "ಲೋಕವನ್ನು ಬೆಳಕಿನತ್ತ ಸಾಗಿಸುವ ಬೆಳಕಾಗಿದ್ದರು".

ಮುಹಮ್ಮದ್‌ರ ಜೀವನದಿಂದ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಲ್ಲಿ ಸಫಲರಾಗುತ್ತಾರೆ. ಒಮ್ಮೆ ಅವರ ಅನುಯಾಯಿಗೆ ನೈಜ ಪ್ರೀತಿಯ ಹಿಂದಿರುವ ರಹಸ್ಯವನ್ನು ತಿಳಿಸಿದರು. "ಜನರ ಬಳಿ ಇರುವ ವಸ್ತುಗಳ ಬಗ್ಗೆ ನೀನು ಅಸೂಯೆ ಪಡಬೇಡ. ಜನರು ಆಗ ನಿನ್ನನ್ನು ಪ್ರೀತಿಸಲಾರಂಭಿಸುವರು".

ಅಲ್ಲಾಹನು ಈ ರೀತಿ ಹೇಳಿದ್ದಾನೆ "ನನ್ನ ದಾಸನು ಆರಾಧನೆಗಳ ಮೂಲಕ ನನ್ನ ಸನಿಹಕ್ಕೆ ಬರುತ್ತಾನೆ. ಎಲ್ಲಿಯವರೆಗೆಂದರೆ ನಾನು ಅವನನ್ನು ಪ್ರೀತಿಸಲಾರಂಭಿಸುತ್ತೇನೆ. ಆಗ ನನ್ನ ಕಿವಿಗಳಿಂದ ಆತನು ಕೇಳುತ್ತಾನೆ, ನನ್ನ ಕಣ್ಣುಗಳಿಂದ ಆತನು ನೋಡುತ್ತಾನೆ, ನನ್ನ ಕೈಗಳಿಂದ ಆತನು ಹಿಡಿಯುತ್ತಾನೆ ಮತ್ತು ನನ್ನ ಕಾಲುಗಳಿಂದ ಆತನು ನಡೆಯುತ್ತಾನೆ"

ಅಲ್ಲಾಹನ ಪ್ರೀತಿಯಿಂದಾಗಿ ಮನುಷ್ಯ ತನ್ನ ಸ್ವಾರ್ಥವನ್ನು ಮೀರಿ ಅಲ್ಲಾಹನಿಗೆ ಸಮೀಪವಾಗುತ್ತಾನೆ.

ಮುಹಮ್ಮದ್‌ರ ಜೀವನದಲ್ಲಿ ಅನೇಕ ಘಟ್ಟಗಳಿದ್ದವು. ಸಂದೇಶ ಪ್ರಚಾರ, ದೇಶಭ್ರಷ್ಟತೆ, ಮರಳಿ ಮರಳುವಿಕೆ ಮತ್ತು ಅಂತಿಮವಾಗಿ ಸೃಷ್ಟಿಕರ್ತನತ್ತ ಮರುಪ್ರಯಾಣ. ಪ್ರತಿಯೊಂದು ಘಟ್ಟದಲ್ಲೂ ಅಲ್ಲಾಹ್ ಪ್ರವಾದಿರ ಬೆಂಬಲಕ್ಕಿದ್ದನು. ಇದೇ ರೀತಿ ಇತರ ಮನುಷ್ಯರಿಗೂ ಸಹಾಯ ನೀಡುವ ವಾಗ್ದಾನವನ್ನು ಅಲ್ಲಾಹನು ನೀಡಿದ್ದಾನೆ.

ಮುಹಮ್ಮದ್ ಈ ಲೋಕವನ್ನು ತ್ಯಜಿಸಿರಬಹುದು. ಆದರೆ ಏಕೈಕವಾದ ಅಲ್ಲಾಹನನ್ನು ಆರಾಧಿಸುವ ಶಾಶ್ವತ ಸಂದೇಶವನ್ನು ನೀಡಿದ್ದಾರೆ. ಕೇವಲ ಏಕೈಕವಾದ ಅಲ್ಲಾಹನನ್ನು ಆರಾಧಿಸುವುದರ ಅರ್ಥ ಇತರ ಎಲ್ಲಾ ಮಿಥ್ಯ ಆರಾಧ್ಯರಿಂದ ವಿಮೋಚನೆಯಾಗಿದೆ. ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿರುವರು ಎಂಬ ಮಾತಿನಲ್ಲಿ ವಿಶ್ವಾಸವಿಡುವುದರ ಅರ್ಥ ಅವರ ಅನುಪಸ್ಥಿತಿಯಲ್ಲಿ ಅವರನ್ನು ಪ್ರೀತಿಸುವುದಾಗಿದೆ ಅಲ್ಲಾಹನನ್ನು ಪ್ರೀತಿಸುವುದಾಗಿದೆ ಮತ್ತು ಸಂಪೂರ್ಣ ಮಾನವ ಜನಾಂಗವನ್ನೇ ಪ್ರೀತಿಸುವುದಾಗಿದೆ.

☆

# ಪ್ರವಾದಿರ ಬಗ್ಗೆ ಮಹಾನ್ ವ್ಯಕ್ತಿಗಳ ಅನಿಸಿಕೆಗಳು

ಡಾ॥ ಮೈಕಲ್ ಹಾರ್ಟ್ 'ದ ಹನ್ರೆಡ್' 'The 100' ಶೀರ್ಷಿಕೆಯುಳ್ಳ ಗ್ರಂಥವನ್ನು ರಚಿಸಿದ್ದಾರೆ. ಈ ಪುಸ್ತಕದಲ್ಲಿ ಜಗತ್ತಿನ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರಿರುವ ನೂರು ವ್ಯಕ್ತಿಗಳನ್ನು ಪಟ್ಟಿ ಮಾಡಿದ್ದಾರೆ. ಮೈಕಲ್ ಹಾರ್ಟ್ ಕ್ರೈಸ್ತ ಧರ್ಮಕ್ಕೆ ಸೇರಿದವರು. ಆಧುನಿಕ ಶಿಕ್ಷಣವನ್ನು ಪಡೆದಿದ್ದರು. ಆದರೂ ಈ ನೂರು ಜನರ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಅವರು ಯೇಸು ಕ್ರಿಸ್ತರಿಗೋ, ಅಥವಾ ನ್ಯೂಟನ್ನ್‌ರಿಗೋ ನೀಡಲಿಲ್ಲ.

"ಓರ್ವ ವ್ಯಕ್ತಿಯ ಸಾಧನೆಗಳು ಜಗತ್ತಿನ ಎಲ್ಲಾ ವ್ಯಕ್ತಿಗಳ ಸಾಧನೆಗಳನ್ನು ಮೀರಿಸಿವೆ. ಈ ವ್ಯಕ್ತಿ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ) ರಾಗಿರುವರು. ಪ್ರವಾದಿ ಮುಹಮ್ಮದ್‌ರಂತೆ ಜಗತ್ತಿನ ಮೇಲೆ ಅತ್ಯಧಿಕ ಪ್ರಭಾವ ಬೀರಿದ ವ್ಯಕ್ತಿ ಯಾರೂ ಇಲ್ಲ" ಎಂದು ಅವರು ನಂಬಿದ್ದರು. ಈ ನೂರು ವ್ಯಕ್ತಿಗಳ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಅವರು ಪ್ರವಾದಿ ಮುಹಮ್ಮದ್‌ರಿಗೆ ನೀಡಿದ್ದಾರೆ. ತಮ್ಮ ಗ್ರಂಥದಲ್ಲಿ ಅವರು ಈ ರೀತಿ ಬರೆದಿದ್ದಾರೆ.

"ಮುಹಮ್ಮದ್ ಧಾರ್ಮಿಕ ಮತ್ತು ಸೆಕ್ಯೂಲರ್ ಮಟ್ಟಗಳಲ್ಲಿ ಇತಿಹಾಸದಲ್ಲಿ ಅತ್ಯಂತ ಯಶಸ್ಸು ಪಡೆದಿರುವ ವ್ಯಕ್ತಿ... ಬಹುಶಃ ಯೇಸು ಕ್ರಿಸ್ತ ಮತ್ತು ಸೇಂಟ್ ಪಾಲ್ ಇಬ್ಬರೂ ಜತೆಗೂಡಿ ಕ್ರೈಸ್ತ ಧರ್ಮದ ಮೇಲೆ ಪ್ರಭಾವ ಬೀರಿರುವುದಕ್ಕಿಂತ ಹೆಚ್ಚಾಗಿ ಮುಹಮ್ಮದ್ ಇಸ್ಲಾಮ್ ಧರ್ಮದ ಮೇಲೆ ಪ್ರಭಾವ ಬೀರಿದ್ದಾರೆ... ಸೆಕ್ಯೂಲರ್ ಮತ್ತು ಧಾರ್ಮಿಕ ಮಟ್ಟದಲ್ಲಿ ಮುಹಮ್ಮದ್ ಬೀರಿರುವ ಪ್ರಭಾವಕ್ಕೆ ಯಾವುದೇ

ಸಾಟಿ ಇಲ್ಲದಾಗಿದ್ದು, ಈ ಕಾರಣದಿಂದ ಮಾನವ ಇತಿಹಾಸದಲ್ಲಿ ಅತ್ಯಂತ ಹೆಚ್ಚು ಪ್ರಭಾವ ಬೀರಿರುವ ಸ್ಥಾನಕ್ಕೆ ಮುಹಮ್ಮದ್ ಅರ್ಹರಾಗುತ್ತಾರೆ".

ಜಾರ್ಜ್ ಬರ್ನಾಡ್ ಷಾ "ದ ಜಿನೈನ್ ಇಸ್ಲಾಮ್" ಪುಸ್ತಕದಲ್ಲಿ ಈ ರೀತಿ ಬರೆದಿದ್ದಾರೆ.

"ಮುಹಮ್ಮದರ ಧರ್ಮವನ್ನು ಅದರ ಚೈತನ್ಯದ ಕಾರಣದಿಂದಾಗಿ ನಾನು ಬಹಳ ಮನ್ನಣೆ ನೀಡುತ್ತೇನೆ. ಪ್ರತಿಯೊಂದು ಕಾಲದಲ್ಲಿ ಬದಲಾವಣೆಗಳನ್ನು ಅರಗಿಸಿಕೊಂಡು ತನ್ನತ್ತ ಆಕರ್ಷಿಸುವ ಶಕ್ತಿ ಕೇವಲ ಇಸ್ಲಾಮಿಗೆ ಮಾತ್ರವಿದೆ ಎಂಬುದು ನನ್ನ ಅನಿಸಿಕೆಯಾಗಿದೆ. ನಾನು ಮುಹಮ್ಮದ್‌ರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಇವರೋರ್ವ ಅದ್ಭುತ ವ್ಯಕ್ತಿಯಾಗಿದ್ದು, ನನ್ನ ಪ್ರಕಾರ ಇವರನ್ನು ಕ್ರೈಸ್ತ ವಿರೋಧಿ ಎನ್ನುವುದಕ್ಕಿಂತ ಮಾನವತೆಯ ರಕ್ಷಕ ಎಂದು ಕರೆಯಬೇಕು".

"ಮುಂದಿನ ನೂರು ವರ್ಷಗಳಲ್ಲಿ ಕೇವಲ ಇಂಗ್ಲೆಂಡ್ ಮಾತ್ರವಲ್ಲ, ಸಂಪೂರ್ಣ ಯುರೋಪನ್ನು ಆಳುವ ಶಕ್ತಿ ಯಾವುದಾದರೂ ಧರ್ಮಕ್ಕಿರುವುದಾದರೆ ಅದು ಇಸ್ಲಾಮ್ ಮಾತ್ರ".

ಫ್ರಾನ್ಸ್‌ನ ಪ್ರಖ್ಯಾತ ಕವಿ ಮತ್ತು ಇತಿಹಾಸಕಾರ ಲಾ ಮಾರ್ಟಿನ್ "ಹಿಸ್ಟೋರ್‌ಡಿಲಾ ಟರ್‌ಕ್ಯೂ" ನಲ್ಲಿ ಈ ರೀತಿ ಬರೆದಿದ್ದಾರೆ.

"ಮುಹಮ್ಮದ್ ತತ್ವಜ್ಞಾನಿ, ಭಾಷಣಕಾರ, ಪ್ರವಾದಿ, ಶಾಸಕ, ಯೋಧ, ವಿಚಾರಗಳನ್ನು ಜಯಿಸಿದವ, ವಿವೇಕತೆಯುಳ್ಳ ವಿಚಾರಗಳನ್ನು ಮರಳಿಸಿದವ, ಭೂಮಿಯ ಮೇಲೆ 20 ಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸಂಸ್ಥಾಪಕರಾಗಿದ್ದರು. ಮಾನವ ಶ್ರೇಷ್ಠತೆಯನ್ನು ಯಾವುದೇ ಮಾನದಂಡದಿಂದ ಅಳೆದರೂ, ಮುಹಮ್ಮದ್‌ರಿಗಿಂತ ಯಾರಾದರೂ ಶ್ರೇಷ್ಠರಿದ್ದಾರೆಯೇ? ಎಂದು ನಾವು ಪ್ರಶ್ನಿಸಬಹುದು".

ಮಹಾತ್ಮ ಗಾಂಧೀಜಿ "ಯಂಗ್ ಇಂಡಿಯಾ" 16 ಸೆಪ್ಟೆಂಬರ್ 1924ರಲ್ಲಿ ಈ ರೀತಿ ಬರೆದಿದ್ದಾರೆ.

"ನಾನು ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಜನರ ಹೃದಯಗಳನ್ನು ಗೆದ್ದಿರುವ ವ್ಯಕ್ತಿಯ ಜೀವನದ ಬಗ್ಗೆ ಅರಿಯ ಬಯಸಿದ್ದೆ. ಅಂದಿನ ಪ್ರವಾದಿ ವಿರೋಧಿ ಆಂದೋಲನದಲ್ಲಿ ಅವರಿಗೆ ಯಶಸ್ಸು ನೀಡಿದ್ದು ಖಡ್ಗವಲ್ಲ. ಒಡಂಬಡಿಕೆಗಳಿಗೆ ಅವರು ನೀಡಿದ ಮಾನ್ಯತೆ, ಮುಹಮ್ಮದ್ ಅವರ ಸಂಗಾತಿಗಳಿಗೆ ತೋರಿದ ಪ್ರೀತಿ, ಅವರ ಕೆಚ್ಚೆದೆ, ಧೈರ್ಯ, ಸೃಷ್ಟಿಕರ್ತನಲ್ಲಿ ಮತ್ತು ಅವರ ಗುರಿಯಲ್ಲಿ ಸಂಪೂರ್ಣ ವಿಶ್ವಾಸ" ಈ ಅಂಶಗಳು ಅವರಿಗೆ ಎದುರಾಗಿದ್ದ ಎಲ್ಲಾ ಅಡೆತಡೆಗಳನ್ನು ಎದುರಿಸಲು ಸಹಕಾರಿಯಾದವು.

ಅನ್ನಿ ಬೆಸೆಂಟ್, ತಮ್ಮ ಪುಸ್ತಕ “ದ ಲೈಫ್ ಅಂಡ್ ಟೀಚಿಂಗ್ಸ್ ಆಫ್ ಮುಹಮ್ಮದ್”ನಲ್ಲಿ ಈ ರೀತಿ ಬರೆದಿದ್ದಾರೆ.

“ಮುಹಮ್ಮದ್ (ಅವರ ಮೇಲೆ ಶಾಂತಿ ಇರಲಿ)ರ ಜೀವನ ಚರಿತ್ರೆಯನ್ನು ಓದಿದ ಯಾರಿಗಾದರೂ ಅವರ ಬಗ್ಗೆ ಗೌರವದ ಭಾವನೆ ಮೂಡದಿರದು. ನಾನು ಪ್ರತಿಸಲ ಅವರ ಜೀವನ ಚರಿತ್ರೆಯನ್ನು ಓದಿದಾಗಲೆಲ್ಲಾ ಅವರ ಬಗ್ಗೆ ಗೌರವ ಭಾವನೆ ಹೆಚ್ಚಾಗುತ್ತದೆ”.

ದಿವಾನ್ ಚಾಂದ್ ಶರ್ಮಾ ಪುಸ್ತಕ “ಪ್ರಾಫೆಟ್ಸ್ ಆಫ್ ದ ಈಸ್ಟ್”ನಲ್ಲಿ “ಮುಹಮ್ಮದ್ ಪ್ರೀತಿಯ ಚಿಲುಮೆಯಾಗಿದ್ದರು. ಅವರ ಸುತ್ತಮುತ್ತಲಿದ್ದವರು ಅವರಿಂದ ಪ್ರಭಾವಿತರಾಗದೇ ಇರಲಿಲ್ಲ”. ಎಂದಿರುವರು.

ನೆಪೋಲಿಯನ್ ಬೋನಪಾರ್ಟೆ ಈ ರೀತಿ ಹೇಳುತ್ತಾರೆ.

“ಮೋಸೆಸ್ ತಮ್ಮ ದೇಶದವರಿಗೆ ಸೃಷ್ಟಿಕರ್ತನ ಬಗ್ಗೆ ವಿವರಣೆ ನೀಡಿದ್ದರು. ಯೇಸು ಕ್ರಿಸ್ತರು ರೋಮ್ ಜಗತ್ತಿಗೆ ಮತ್ತು ಮುಹಮ್ಮದ್ ಅರೇಬಿಯಾ ಪ್ರದೇಶಕ್ಕೆ. ಯೇಸು ಕ್ರೈಸ್ತರ, ಆರನೆಯ ಶತಮಾನದ ನಂತರ ಮುಹಮ್ಮದ್, ಇಬ್ರಾಹಿಮ್, ಇಸ್ಮಾಈಲ್ ಮುಸಾರ ಮತ್ತು ಯೇಸುಕ್ರಿಸ್ತರ ಸೃಷ್ಟಿಕರ್ತನನ್ನು ಜನರಿಗೆ ಪರಿಚಯಿಸಿದರು. ಮುಹಮ್ಮದ್ ಏಕೈಕವಾದ ಅಲ್ಲಾಹನ ಹೊರತು ಮತ್ತಾವ ದೇವನಿಲ್ಲವೆಂದೂ, ಆತನಿಗೆ ತಂದೆ, ಮಗ, ಯಾರೂ ಇಲ್ಲವೆಂದೂ, ಮೂರು ದೈವಗಳ ವಾದ (ಟ್ರಿನಿಟಿ) ದಲ್ಲಿ ಬಹುದೇವ ಆರಾಧನೆ ಅಡಗಿದೆ ಎಂದು ಘೋಷಿಸಿದರು.... ಎಲ್ಲಾ ದೇಶಗಳ ಬುದ್ಧಿವಂತ ಮತ್ತು ವಿದ್ಯಾವಂತ ಜನರನ್ನು ಒಗ್ಗೂಡಿಸಿ, ಕುರ್‌ಆನಿನ ಆಧಾರದ ಮೇಲೆ ಒಂದು ಸಮಾನ ರಾಷ್ಟ್ರವನ್ನು ಸ್ಥಾಪಿಸುವ ದಿನ ದೂರವಿಲ್ಲವೆಂದು ನಾನು ಬಗೆಯುತ್ತೇನೆ. ಕುರ್‌ಆನಿನ ತತ್ವಗಳೇ ಸತ್ಯವಾಗಿದ್ದು ಕೇವಲ ಈ ತತ್ವಗಳೇ ಮನುಷ್ಯನಿಗೆ ನೆಮ್ಮದಿ, ಸಂತೋಷವನ್ನು ನೀಡಬಲ್ಲವು”.

# ಗ್ರಂಥಸೂಚಿ


| | | |
|---|---|---|
| 1. | ಸೀರತ್ | ಇಬ್ನ್ ಇಸ್ಹಾಕ್ |
| 2. | ಸೀರತ್ | ಇಬ್ನ್ ಕಸೀರ್ |
| 3. | ಸೀರತುನ್ನಬಿ | ಮೌಲಾನಾ ಶಿಬ್ಲಿ ನೌಮಾನಿ |
| 4. | ಸೀರತುನ್ನಬಿ | ಸೈಯದ್ ಸುಲೈಮಾನ್ ನದ್ವಿ |
| 5. | ಮುಹಮ್ಮದ್ ಎನ್‌ಸೈಕ್ಲೋಪೀಡಿಯಾ ಆಫ್ ಸೀರತ್ | ಅಫ್ಜಲುರ್ರೆಹ್ಮಾನ್ |
| 6. | ದ ಎಮರ್ಜೆನ್ಸ್ ಆಫ್ ಇಸ್ಲಾಮ್ | ಡಾ॥ ಮುಹಮ್ಮದ್ ಹಮೀದುಲ್ಲಾ |
| 7. | ಮೊಹ್ಸಿನ್–ಯೆ–ಇನ್ಸಾನಿಯತ್ | ನಈಮ್ ಸಿದ್ದೀಕಿ |
| 8. | ದ ಲೈಫ್ ಆಫ್ ಮುಹಮ್ಮದ್ | ಹೈಕಲ್ |
| 9. | ದ ಸೀಲ್ಡ್ ನೆಕ್ಟರ್ | ಸಫಿವುರ್ರೆಹ್ಮಾನ್ ಅಲ್ ಮುಬಾರಕ್ ಪುರಿ |
| 10. | ಮುಹಮ್ಮದ್ | ಮಾರ್ಟೈನ್ ಲಿಂಗ್ಸ್ |
| 11. | ಪ್ರಾಫೆಟ್ ಮುಹಮ್ಮದ್ | ಫತೆಲ್ಲಾ ಗುಲೆನ್ |
| 12. | ದ ಪರ್‌ಫೆಕ್ಟ್ ಗೈಡ್ ಫಾರ್ ಮ್ಯಾನ್‌ಕೈಂಡ್ | ಮುಹಮ್ಮದ್ ರಾಬೆ ಹಸನಿ ನದ್ವಿ |
| 13. | ಸೋಷಿಯಲ್ ಸರ್ವಿಸ್ | ಇನ್ ಇಸ್ಲಾಮ್ ಸೈಯದ್ ಜಲಾಲುದ್ದೀನ್ ಉಮ್ರಿ |
| 14. | ದ ಮೆಸ್ಸೆಂಜರ್ | ತಾರಿಕ್ ರಂದಾನ್ |

| | | |
|---|---|---|
| 15. | ಮುಹಮ್ಮದ್ ಅಂಡ್ ದ ಕುರ್‌ಆನ್ | ರಫೀಕ್ ಝುಕಾರಿಯಾ |
| 16. | ಮುಹಮ್ಮದ್ ಲಿಗಸಿ | ಇಬ್ರಾಹೀಮ್ ಎಚ್.ಮಲಬಾರಿ ಕೆನಡಾ |
| 17. | ಮುಹಮ್ಮದ್ ಲೈಫ್ ಅಂಡ್ ಟೀಚಿಂಗ್ಸ್ | ಎಂ.ಆರ್.ಮೋಮಿನ್ |
| 18. | ದ ಪ್ರಾಫೆಟಿಕ್ ಮಿಷನ್ | ಪ್ರೊ. ರಫತ್ |
| 19. | ಪ್ರಾಫೆಟ್ ಮುಹಮ್ಮದ್ 'ಎ ರೋಲ್ ಮಾಡೆಲ್' | ಮುಹಮ್ಮದ್ ಯಾಸಿನ್ ಮಝ್ಹರ್ ಸಿದ್ದೀಕಿ |
| 20. | ಟೀಚಿಂಗ್ಸ್ ಆಫ್ ಪ್ರಾಫೆಟ್ | ಡಾ॥ ಮುಹಮ್ಮದ್ ಸವೂದ್ ಆಲಮ್ ಕಾಸಿಮಿ |
| 21. | ಪಾಂಡರಿಂಗ್ಸ್ ಓವರ್ ದ ಕುರ್‌ಆನ್ | ಅಮೀನ್ ಅಹ್ಸನ್ ಇಸ್ಲಾಹಿ |
| 22. | ತಫ್ಹೀಮುಲ್ ಕುರ್‌ಆನ್ | ಸೈಯದ್ ಅಬುಲ್ ಅಲಾ ಮೌದೂದಿ |
| 23. | ದ ಹೋಲಿ ಕುರ್‌ಆನ್ | ಅಬ್ದುಲ್ಲಾ ಯೂಸುಫ್ ಅಲಿ |
| 24. | ದ ಕುರ್‌ಆನ್ | ಡಾ॥ ನಝೀರ್ ಅಹ್ಮದ್ |

☆ ☆ ☆

This document was created with the Win2PDF "Print to PDF" printer available at

https://www.win2pdf.com

This version of Win2PDF 10 is for evaluation and non-commercial use only.
Visit https://www.win2pdf.com/trial/ for a 30 day trial license.

This page will not be added after purchasing Win2PDF.

https://www.win2pdf.com/purchase/